ಕಂಡದ್ದು ಕಾಡಿದ್ದು

ಸಮಾಜವಾದಿ ಸಂಕಥನಗಳು-೩



ಡಿ.ಎಸ್. ನಾಗಭೂಷಣ

ಡಿ.ಎಸ್. ನಾಗಭೂಷಣ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲ್ಲೂಕಿನ ತಿಮ್ಮಸಂದ್ರ ಎಂಬ ಹಳ್ಳಿಯಲ್ಲಿ ಶಾಲಾ ಮಾಸ್ತರರ ಮಗನಾಗಿ ೧೯೫೨ರಲ್ಲಿ ಜನಿಸಿದ ಡಿ.ಎಸ್. ನಾಗಭೂಷಣ, ಶಾಲಾ ಶಿಕ್ಷಣ ಪಡೆದ್ದು ಅದೇ ಜಿಲ್ಲೆ ನೆಲಮಂಗಲ ತಾಲ್ಲೂಕಿನ ತ್ಯಾಮಗೊಂಡ್ಲು ಎಂಬ ಸಣ್ಣ ಊರಿನಲ್ಲಿ. ನಂತರ ಬೆಂಗಳೂರು ವಿಶ್ವವಿದ್ಯಾಲಯದಿಂದ ಗಣಿತಶಾಸ್ತ್ರದಲ್ಲಿ ಆನರ್ಸ್ ಮತ್ತು ಸ್ನಾತಕೋತ್ತರ ಪದವಿ ಪಡೆದ ಅವರು, ಉದ್ಯೋಗ ಮಾಡಿದ್ದು ಆಕಾಶವಾಣಿಯಲ್ಲಿ. ನವದೆಹಲಿಯ ವಾರ್ತಾ ವಿಭಾಗವೂ ಸೇರಿದಂತೆ ವಿವಿಧ ಆಕಾಶವಾಣಿ ಕೇಂದ್ರಗಳಲ್ಲಿ ವಿವಿಧ ಹುದ್ದೆಗಳಲ್ಲಿ ಮುವ್ವತ್ತು ವರ್ಷಗಳ ಕಾಲ ಸೇವೆ ಸಲ್ಲಿಸಿ ಸ್ವಯಂನಿವೃತ್ತಿ ಪಡೆದಿರುವ ಅವರು ಈಗ ತಮ್ಮ ಪತ್ನಿ ಶ್ರೀಮತಿ ಸವಿತಾ ನಾಗಭೂಷಣ ಅವರೊಂದಿಗೆ ಶಿವಮೊಗ್ಗದಲ್ಲಿ ನೆಲೆಸಿದ್ದಾರೆ.

ಸಾಹಿತ್ಯ ವಿಮರ್ಶೆ ಮತ್ತು ಸಮಾಜವಾದಿ ಚಿಂತನೆ ಡಿ.ಎಸ್. ನಾಗಭೂಷಣ ಅವರ ಆಸಕ್ತಿಯ ಕ್ಷೇತ್ರಗಳು. 'ಗಮನ', 'ಅನೇಕ', 'ಈ ಭೂಮಿಯಿಂದ ಆ ಆಕಾಶದವರೆಗೆ' ಮುಂತಾದ ಸಾಹಿತ್ಯ ವಿಮರ್ಶಾ ಕೃತಿಗಳನ್ನು ಪ್ರಕಟಿಸಿರುವುದಲ್ಲದೆ, 'ಮರಳಿ ಬರಲಿದೆ ಸಮಾಜವಾದ!' 'ಲೋಹಿಯಾ ಸಮಾಜವಾದ ದರ್ಶನ', 'ಒಂದು ಅಪೂರ್ಣ ಕ್ರಾಂತಿಯ ಕಥೆ', 'ಇದು ಭಾರತ! ಇದು ಭಾರತ', 'ವಸಿಷ್ಠರು ಮತ್ತು ವಾಲ್ಮೀಕಿಯರು', 'ಇಲ್ಲಿ ಯಾವುದೂ ಅಮುಖ್ಯವಲ್ಲ' ಮುಂತಾದ ಸಮಾಜವಾದಿ ಚಿಂತನೆಯ ಕೃತಿಗಳನ್ನೂ ಪ್ರಕಟಿಸಿದ್ದಾರೆ. ಇದಲ್ಲದೆ ತಮ್ಮ ಗೆಳೆಯರೊಂದಿಗೆ 'ಸಾಹಿತ್ಯ ಸಂವಾದ' ಎಂಬ ದ್ವೈಮಾಸಿಕವನ್ನೂ ಸಂಪಾದಿಸುತ್ತಿದ್ದ ಇವರು ಈಗ 'ನವ ಮಾನವ ಮಾಸಿಕ' ಎಂಬ ಸಮಾಜವಾದಿ ಚಿಂತನೆಯ ಪತ್ರಿಕೆಯೊಂದನ್ನು ಸಂಪಾದಿಸಿ ಪ್ರಕಟಿಸುತ್ತಿದ್ದಾರೆ.

ಡಿ.ಎಸ್. ನಾಗಭೂಷಣ ಅವರಿಗೆ ಅವರ 'ಕುವೆಂಪು ಸಾಹಿತ್ಯ ದರ್ಶನ' ಕೃತಿಗಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿ ೨೦೦೭ರ ಪುಸ್ತಕ ಬಹುಮಾನ ನೀಡಿದೆ.

ಕಂಡದ್ದು, ಕಾಡಿದ್ದು

ಸಮಾಜವಾದಿ ಸಂಕಥನಗಳು – ೫

ಡಿ. ಎಸ್. ನಾಗಭೂಷಣ

ಗೀತಾಂಜಲಿ ಪುಸ್ತಕ ಪ್ರಕಾಶನ
ಕಂದಾಯ ಭವನ, ನೂರಡಿ ರಸ್ತೆ, ರಾಜೇಂದ್ರನಗರ,
ಶಿವಮೊಗ್ಗ – ೫೭೭ ೨೦೧

" KANDADDU KAADIDDU"
A collection of contemporary writings (Sosialist perspectives)
By **D.S. Nagabhushana.**
HIG-5, 'Nudi', Kallahally Extension,
Vinobanagara, Shivamogga-577204
Ph: 08182-24857. Email : dsnagabhushana@gmail.com

Published by :
Geethanjali Book Publishers,
Revenue Building, 100 Ft. Road,
Rajendranagar, Shivamogga - 577201.
email : gbtmohan@gmail.com. Mob : 9449886390

ISBN : 978-9381-87-627-5

Pages : 312

Rs:. 220/-
Paper Used : 70GSM N.S.Maplitho
Size : Demy 1/8

ಮೊದಲನೆಯ ಮುದ್ರಣ : ೨೦೧೨
ಬೆಲೆ : ರೂ. ೨೨೦/-
ರಕ್ಷಾಪುಟ ವಿನ್ಯಾಸ : ಕೆ. ಮಕಾಳೆ

ಪ್ರಕಾಶಕರು :
ಗೀತಾಂಜಲಿ ಪುಸ್ತಕ ಪ್ರಕಾಶನ
ಕಂದಾಯ ಭವನ, ನೂರಡಿ ರಸ್ತೆ,
ರಾಜೇಂದ್ರನಗರ, ಶಿವಮೊಗ್ಗ - ೫೭೭ ೨೦೧
ದೂ : ೯೪೪೯೮ ೮೬೩೯೦, ೯೯೧೬೧ ೯೭೨೯೧

ಅರ್ಪಣೆ

ನಮ್ಮ ಕಾಲದ ಅನನ್ಯ ಹೋರಾಟಗಾರ್ತಿ

ಮೇಧಾ ಪಾಟ್ಕರ್

ಇವರಿಗೆ

ಪ್ರಕಾಶಕರ ಮಾತು

ಕನ್ನಡದ ಹಿರಿಯ ಮತ್ತು ವಿಶಿಷ್ಠ ಸಾಹಿತ್ಯ ವಿಮರ್ಶಕ ಮತ್ತು ಸಮಾಜವಾದಿ ಚಿಂತಕ ಡಿ.ಎಸ್. ನಾಗಭೂಷಣ ಅವರ 'ಕಂಡದ್ದು ಕಾಡಿದ್ದು': ಸಮಾಜವಾದಿ ಸಂಕಥನಗಳ ಐದನೇ ಸಂಪುಟವನ್ನು ಪ್ರಕಟಿಸಲು ನಾವು ಹರ್ಷಿಸುತ್ತೇವೆ.

ಇದೇ ಸಂದರ್ಭದಲ್ಲಿ ನಮ್ಮ ಪ್ರಕಾಶನ ಇವರು ಸಂಪಾದಿಸಿರುವ 'ಕುವೆಂಪು: ಒಂದು ಪುನರನ್ವೇಷಣೆ' ಮತ್ತು ಇವರು ರಚಿಸಿರುವ 'ಕುವೆಂಪು ಸಾಹಿತ್ಯ ದರ್ಶನ' ಹಾಗೂ 'ಲೋಹಿಯಾ ಕೈಪಿಡಿ', 'ಲೋಹಿಯಾ ವಾಣಿ', 'ಜೆಪಿ ಕೈಪಿಡಿ'ಗಳ ಪರಿಷ್ಕೃತ ಮುದ್ರಣಗಳನ್ನೂ ಹೊರತರುತ್ತಿದೆಯಾದರೂ ಇವರ 'ಕಂಡದ್ದು ಕಾಡಿದ್ದು' ಕೃತಿಯನ್ನು ಮೊದಲ ಮುದ್ರಣವಾಗಿ ಹೊರ ತರುತ್ತಿರುವುದು ನಮಗೆ ಹೆಚ್ಚಿನ ಸಂತೋಷವನ್ನುಂಟು ಮಾಡಿದೆ. ಏಕೆಂದರೆ ಈ ಕೃತಿ, ಇದರ ಬೆನ್ನುಡಿಯಲ್ಲಿ ಕನ್ನಡದ ಇನ್ನೋರ್ವ ವಿಶಿಷ್ಟ ಚಿಂತಕ ಎನ್.ಎಸ್. ಶಂಕರ್ ಅವರು ಗುರುತಿಸಿರುವಂತೆ ಇಲ್ಲಿನ ಲೇಖನಗಳು ಸಮಕಾಲೀನ ಸಾಹಿತ್ಯ, ಸಂಸ್ಕೃತಿ, ಸಮಾಜ ಮತ್ತು ರಾಜಕಾರಣ ಕುರಿತಂತೆ ಅಪರೂಪದ ದಿಟ್ಟ ಮತ್ತು ವಿಶಿಷ್ಠ ಬಹುಮುಖಿ ಚಿಂತನೆಗಳನ್ನು ಒಳಗೊಂಡು ಮೌಲಿಕ ಚರ್ಚೆಗಳನ್ನು ಹುಟ್ಟುಹಾಕುವಷ್ಟು ಶಕ್ತಿಶಾಲಿಯಾಗಿವೆ.

ನಾಗಭೂಷಣ ಅವರ ಇತರ ಕೃತಿಗಳಂತೆಯೇ ಈ ಕೃತಿಯಲ್ಲೂ ಅವರು ನಮ್ಮ ಸುತ್ತಲಿನ ಎಲ್ಲ ವಿದ್ಯಮಾನಗಳನ್ನು ವಿವಿಧ ವಿಭಾಗಗಳನ್ನಾಗಿ ವಿಂಗಡಿಸಿ, ಪ್ರತ್ಯೇಕಿಸಿ ನೋಡದೆ; ಅವೆಲ್ಲವೂ ಒಂದೇ ಕ್ರಿಯಾಶೀಲ ಮನಸ್ಸಿನ ಬೇರೆ ಬೇರೆ ಅಭಿವ್ಯಕ್ತಿ ರೂಪಗಳು ಎಂದು ಗ್ರಹಿಸುತ್ತಾರೆ. ಹಾಗೇ, ಅ ಪ್ರಕ್ರಿಯೆಯಲ್ಲಿ ಅವುಗಳ ಕೇಂದ್ರವನ್ನು ಗುರುತಿಸಿ ವಿಶ್ಲೇಷಿಸುವ ಮೂಲಕ ನಮ್ಮ ಸಮಾಜ ಚಲಿಸುತ್ತಿರುವ ದಿಕ್ಕು-ದೆಸೆಗಳನ್ನು ಕುರಿತಂತೆ ಹೊಸ ಒಳನೋಟಗಳನ್ನು ಪಡೆಯುವ ಮತ್ತು ಸೃಜನಶೀಲ ವ್ಯಾಖ್ಯಾನಗಳನ್ನು ಮಾಡುವ ಅವರದ್ದೇ ಎನ್ನಬಹುದಾದಷ್ಟು ಅನನ್ಯವಾದ ಸಮಾಜವಾದಿ ಕಳಕಳಿ ಮತ್ತು ಚಿಂತನಶೀಲತೆಗಳನ್ನು ಪ್ರಕಟಿಸುತ್ತಾರೆ..

ತಮ್ಮ ಈ ಕೃತಿಯನ್ನು ನಮ್ಮ ಪ್ರಕಾಶನದ ಮೇಲೆ ವಿಶ್ವಾಸವಿಟ್ಟು ಪ್ರಕಟಣೆಗಾಗಿ ನಮಗೆ ನೀಡಿದ ಡಿ.ಎಸ್. ನಾಗಭೂಷಣ ಅವರಿಗೆ ನಾವು ಆಭಾರಿಯಾಗಿದ್ದೇವೆ. ಹಾಗೇ, ಈ ಕೃತಿಯ ವಿನ್ಯಾಸ ಮಾಡಿದ, ಅರ್ಥಪೂರ್ಣ ರಕ್ಷಾಪುಟ ಒದಗಿಸಿದ ಮತ್ತು ಈ ಕೃತಿಯನ್ನು ಅಂದವಾಗಿ ಮುದ್ರಿಸಿಕೊಟ್ಟ ಆದಿತ್ಯ ಪ್ರಿಂಟರ್ಸ್ ಇವರಿಗೂ ನಮ್ಮ ಪ್ರಕಾಶನದ ಧನ್ಯವಾದಗಳು ಸಲ್ಲುತ್ತವೆ. ನಾಗಭೂಷಣ ಅವರ ಈವರೆಗಿನ ಕೃತಿಗಳನ್ನು ಕೊಂಡು ಓದಿದಂತೆಯೇ ಕನ್ನಡ ಓದುಗರು ಈ ಕೃತಿಯನ್ನೂ ಕೊಂಡು ಓದುವರು ಎಂದು ಆಶಿಸುತ್ತೇವೆ.

ಜಿ.ಬಿ.ಟಿ. ಮೋಹನ್

ಲೇಖಕನ ಮಾತು

ನನ್ನ 'ಇಲ್ಲಿ ಯಾವುದೂ ಅಮುಖ್ಯವಲ್ಲ' ಲೇಖನಗಳ ಸಂಗ್ರಹದ ನಂತರ ಕಳೆದ ಒಂದು- ಒಂದೂವರೆ ವರ್ಷಗಳಲ್ಲಿ ನನ್ನಿಂದ ಬರೆಯಲ್ಪಟ್ಟ ಮತ್ತು ಬರೆಸಲ್ಪಟ್ಟ ಲೇಖನಗಳ (ಮತ್ತು ಒಂದೆರಡು ಅನುವಾದಗಳ) ಸಂಗ್ರಹವಿದು. ಇದರಲ್ಲಿ ಎಲ್ಲ ತರಹದ–ಸಾಹಿತ್ಯಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ರಾಜಕೀಯ– ಬರಹಗಳೂ ಸೇರಿವೆ. ಇದನ್ನು ನಾನು ಮತ್ತೆ ಸಮಾಜವಾದಿ ಸಂಕಥನಗಳು ಎಂದೇ ಕರೆದಿದ್ದೇನೆ. ಇದಕ್ಕೆ ಕಾರಣ, ನನ್ನ ಈ ಹಿಂದಿನ ಸಮಾಜವಾದಿ ಸಂಕಥನಗಳ ಸಂಪುಟಗಳಲ್ಲಿ ವಿವರಿಸಿರುವಂತೆ, ನನಗೆ ಸಮಾಜವಾದವೆನ್ನುವುದು ಕೇವಲ ಒಂದು ರಾಜಕೀಯ ಚಿಂತನೆಯಾಗಿರದೆ; ಬದುಕನ್ನು ಗ್ರಹಿಸುವ, ಅರ್ಥೈಸುವ ಮತ್ತು ನೋಟದ ಒಂದು ಸಮಗ್ರತೆಯೆಡೆಗೆ ತುಡಿಯುವ ಚಿಂತನಾ ಕ್ರಮವಾಗಿರುವುದು. ನನಗೆ ಈ ಸಮಾಜವಾದ ಯಾರೋ ರೂಪಿಸಿಕೊಟ್ಟ ಸಿದ್ಧ ವಸ್ತುವಲ್ಲ; ಚಿಂತನಾ ಮಾದರಿಯಲ್ಲ. ಬದಲಿಗೆ ನಾನು ದಿನನಿತ್ಯದ ಬದುಕಿನ ಅನುಭವಗಳ ಆಧಾರದ ಮೇಲೆ ನಿರಂತರ ಪುನರಾವಿಷ್ಕರಿಸಿಕೊಳ್ಳುತ್ತಿರುವ ನೋಟ ಕ್ರಮ. ಇದನ್ನು ನನ್ನ ಈ ಹಿಂದಿನ ಹಲವು ಲೇಖನಗಳಲ್ಲಿ ಓದುಗರು ಗುರುತಿಸಿರಬಹುದು ಎಂದು ಭಾವಿಸಿದ್ದೇನೆ.

ಹಾಗಾಗಿ, ಹಿಂದಿನ ಸಂಗ್ರಹಗಳಲ್ಲಿದ್ದಂತೆ ಈ ಸಂಗ್ರಹದಲ್ಲಿನ ಸಾಹಿತ್ಯ ವಿಮರ್ಶೆಯ ಲೇಖನಗಳೂ ಸಮಾಜವಾದಿ ಸಂಕಥನಗಳೆನಿಸಿವೆ. ಆದರೆ ಇಂತಹ ಲೇಖನಗಳು ನನ್ನ ಸಂಗ್ರಹಗಳಲ್ಲಿ ಕ್ರಮೇಣ ಕಡಿಮೆಯಾಗುತ್ತಿರುವುದು ನಿಜ. ಇದಕ್ಕೆ ಕಾರಣ, ಸಾಹಿತ್ಯ ಕುರಿತಂತೆ ನನ್ನ ಆಸಕ್ತಿ ಕಡಿಮೆಯಾಗಿದೆ ಎಂದಲ್ಲ. ನನಗೆ ಮೊದಲಿಂದಲೂ, ಸಾಮಾನ್ಯವಾಗಿ ಯಾರಾದರೂ ಕೇಳದ ಅಥವಾ ಆಹ್ವಾನಿಸದ ಹೊರತು ಸ್ವ- ಇಚ್ಛೆಯಿಂದ ಸಾಹಿತ್ಯಕ್ಕೆ ಸಂಬಂಧಪಟ್ಟ ಲೇಖನಗಳನ್ನು ಬರೆಯುವ ರೂಢಿಯಿಲ್ಲ. ಏಕೆಂದರೆ ನಾನು ಮೂಲತಃ ಸಾಹಿತ್ಯದ ವಿದ್ಯಾರ್ಥಿಯೂ ಅಲ್ಲ, ಸಾಹಿತ್ಯೋಪಜೀವಿಯೂ ಅಲ್ಲ. ಜೊತೆಗೆ ಸಾಹಿತ್ಯ ಕುರಿತ ನನ್ನ ಪರಿಕಲ್ಪನೆ ಮತ್ತು ನಿಲುವುಗಳಿಂದಾಗಿ ಮತ್ತು ಇತ್ತೀಚಿನ ದಿನಗಳಲ್ಲಿ ಕನ್ನಡದಲ್ಲಿ ಸಾಹಿತ್ಯಿಕ ಚರ್ಚೆಗಳು ತಲುಪಿರುವ ನೆಲೆಗಳಿಂದಾಗಿ ನನ್ನಿಂದ ಲೇಖನ ಆಹ್ವಾನಿಸುವ ಸಂದರ್ಭಗಳು ತೀರಾ ಕಡಿಮೆಯಾಗಿವೆ. ಇದು ಒಂದು ರೀತಿಯಲ್ಲಿ ನನಗೆ ನೆಮ್ಮದಿಯನ್ನೇ ತಂದಿದೆ ಎಂದು ಹೇಳಬೇಕು. ಏಕೆಂದರೆ, ಇದರಿಂದಾಗಿ ನನ್ನ ಶತ್ರುಗಳ ಸಂಖ್ಯೆ ಅನಗತ್ಯವಾಗಿ ಹೆಚ್ಚುವ ಸಂದರ್ಭಗಳು ಕಡಿಮೆಯಾಗಿವೆ!

ಅದಿರಲಿ, ಈ ಸಂಗ್ರಹದ ಎಲ್ಲ ಲೇಖನಗಳೂ ಈ ಮೊದಲೇ ಹೇಳಿದಂತೆ ಇತ್ತೀಚಿನ ವರ್ಷಗಳಲ್ಲಿ ಸಾರ್ವಜನಿಕ ಬದುಕಿನಲ್ಲಿ ನಡೆದಿರುವ ರಾಜಕೀಯ–ಸಾಮಾಜಿಕ– ಸಾಂಸ್ಕೃತಿಕ ಬೆಳವಣಿಗೆಗಳನ್ನು ಕುರಿತ ನನ್ನ ಅಭಿಪ್ರಾಯ, ಪ್ರತಿಕ್ರಿಯೆ ಮತ್ತು ವ್ಯಾಖ್ಯಾನಗಳೇ ಆಗಿವೆ. ವಿಶೇಷವಾಗಿ ರಾಜ್ಯ ರಾಜಕಾರಣ ತಲುಪುತ್ತಿರುವ ರಸಾತಳ- ಪಾತಾಳಗಳ ಬಗ್ಗೆ

ವ್ಯಾಕುಲಗೊಂಡು ಬರೆದ ಲೇಖನಗಳೇ ಹೆಚ್ಚು. ಇವು ಗಣನೀಯ ಸಂಖ್ಯೆಯಲ್ಲಿ ಪತ್ರ ರೂಪದಲ್ಲೂ ಇವೆ. ಪತ್ರಿಕೆಗಳಿಗೆ ಬರೆದ, ಹಾಗೆ ಬರೆದು ಪ್ರಕಟವಾದ ಮತ್ತು ಪ್ರಕಟವಾಗದ ಪತ್ರಗಳೂ ಇಲ್ಲಿ ಸೇರಿವೆ! ಇವು ಕೆಲವರಿಗೆ ಅನಗತ್ಯವಾಗಿ ಮತ್ತು ಪ್ರದರ್ಶನಕಾರಿಯಾಗಿಯೂ ಕಾಣಬಹುದೆಂಬುದೂ ನನಗೆ ಗೊತ್ತು. ಆದರೆ ರಾಜ್ಯ ರಾಜಕೀಯಕ್ಕೆ ಮತ್ತು ನಮ್ಮ ಸುತ್ತಲಿನ ಸಾಮಾಜಿಕ- ಸಾಂಸ್ಕೃತಿಕ ಆಗು-ಹೋಗುಗಳಿಗೆ ಸಾಮಾನ್ಯ ಪ್ರಜೆಯೊಬ್ಬ ಪ್ರತಿಕ್ರಿಯಿಸಿದ ರೀತಿ-ನೀತಿಗಳ ದಾಖಲೆಗಳಾಗಿ ಇವಕ್ಕೆ ಮಹತ್ವವಿದೆ ಎಂದು ನಂಬಿ ಇವನ್ನು ಇಲ್ಲಿ ಸೇರಿಸಿರುವೆ. ಹಾಗೇ, ಈ ಪತ್ರಗಳ ಹಿಂದೆ ಬರೀ ಸದ್ಯತನ ಮಾತ್ರವಿಲ್ಲ ಎಂಬುದನ್ನೂ ಓದುಗರು ಗಮನಿಸುವರೆಂದು ಭಾವಿಸುವೆ. ಇವುಗಳಲ್ಲಿ ಕೆಲವು ಸಾರ್ವಜನಿಕ ಪರಿಣಾಮಕ್ಕಾಗಿ ನನ್ನ ಸಮಾನ ಮನಸ್ಕ ಗೆಳೆಯರ ಸಹಿಗಳೊಂದಿಗೆ ಪತ್ರಿಕೆಗಳಲ್ಲಿ ಪ್ರಕಟವಾಗಿರುವವಾದರೂ, ಅವುಗಳೆಲ್ಲದರ ಮೂಲ ಲೇಖಕ ನಾನೇ ಆದುದರಿಂದ ಅವು ಇಲ್ಲಿ ನನ್ನ ಪತ್ರಗಳೇ ಆಗಿ ಪ್ರಕಟಗೊಂಡಿವೆ.

ಇನ್ನು ಇತ್ತೀಚಿನ ದಿನಗಳ ಒಂದು ಮಹತ್ವದ ರಾಷ್ಟ್ರೀಯ ವಿದ್ಯಮಾನವಾದ ಅಣ್ಣಾ ಹಜಾರೆ ಆಂದೋಲನವನ್ನು ಕುರಿತಂತೆ ನಾಲ್ಕಾರು ಲೇಖನಗಳೂ, ಅವುಗಳೊಂದಿಗೆ ಕೆಲ ಪತ್ರ ಮತ್ತು ಪ್ರತಿಕ್ರಿಯೆಗಳೂ ಇವೆ. ನಾನು ನನ್ನ ಹರೆಯದ ದಿನಗಳಲ್ಲಿ ನನ್ನದೇ ರೀತಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದ ಜೆಪಿ ಆಂದೋಲನದ ನಂತರ ನಾನು ರಾಷ್ಟ್ರದಲ್ಲಿ ಕಾಣುತ್ತಿರುವ ಒಂದು ದೊಡ್ಡ ಜನಾಂದೋಲನವಿದು. ಹೌದು, ಇದನ್ನು ಅದರ ಎಲ್ಲ ನೆಲೆಗಳಲ್ಲಿ ಜೆಪಿ ಆಂದೋಲನಕ್ಕೆ ಹೋಲಿಸಲಾಗದು. ಆದರೆ ವ್ಯವಸ್ಥೆ ಎಂಬುದು ದಿನೇ ದಿನೇ ಹೆಚ್ಚೆಚ್ಚು ದುಷ್ಟ ಮತ್ತು ಭ್ರಷ್ಟವಾಗುತ್ತಿರುವ ಸಂದರ್ಭದಲ್ಲಿ ಅದರ ವಿರುದ್ಧ ಸಂಘಟಿತ ದನಿಯೇ ರೂಪಿತವಾಗಲಾರದಂತಹ ಇಂದಿನ (ಮಧ್ಯಮ ವರ್ಗಗಳ ಸುಭಿಕ್ಷ ದಿನಗಳ) ಪರಿಸ್ಥಿತಿಯಲ್ಲಿ, ಅಣ್ಣಾ ಮತ್ತು ಅವರ ಗೆಳೆಯರು ರಾಷ್ಟ್ರ ಮಟ್ಟದಲ್ಲಿ ಜನ ಜಾಗೃತಿ ಮತ್ತು ಹೋರಾಟದ ಕಾರ್ಯಕ್ರಮವನ್ನು ಸಂಘಟಿಸಿದ್ದಾರೆ. ಅದನ್ನು ವಿಮರ್ಶಾತ್ಮಕ ಸಹಾನುಭೂತಿಯಿಂದ ನೋಡಬೇಕು ಎಂಬುದು ನನ್ನ ನಿಲುವು. ಆದರೆ ನನ್ನ ಕೆಲವು ಎಡಪಂಥೀಯ ಮತ್ತು ಪ್ರಗತಿಪರ ಎಂದು ಗುರುತಿಸಲ್ಪಡುವ ಗೆಳೆಯರು ಈ ಆಂದೋಲನದ ವಿರುದ್ಧ ಇಲ್ಲಸಲ್ಲದ ಆರೋಪ ಮತ್ತು ಅನುಮಾನಗಳನ್ನು ಸಾರ್ವಜನಿಕವಾಗಿ ದಾಖಲಿಸಲಾರಂಭಿಸಿದಾಗ ನಾನು ನನ್ನ ಕರ್ತವ್ಯವೆಂಬಂತೆ ಅವುಗಳ ಬಗ್ಗೆ ನನ್ನ ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸಿ ಬರೆದ ಲೇಖನಗಳಿವು. ಓದುಗರು ಗಮನಿಸಬಹುದಾದಂತೆ, ಅಣ್ಣಾ ಆಂದೋಲನ ಬೆಳೆದಂತೆ ಮತ್ತು ಅದು ವಿವಿಧ ರೂಪಗಳನ್ನು ತಾಳತೊಡಗಿದಂತೆ ನನ್ನ ವಿಮರ್ಶಾತ್ಮಕ ಸಹಾನುಭೂತಿಯ ನೆಲೆಗಳೂ ಬದಲಾಗಿವೆ. ಆದರೆ ಅದಕ್ಕೆ ನನ್ನ ಸ್ಥೂಲ ಬೆಂಬಲ ಮಾತ್ರ ಹಾಗೇ ಉಳಿದಿದೆ!

ಕೊನೆಯದಾಗಿ ಈ ಪುಸ್ತಕದ ಅನುಬಂಧದ ಬಗ್ಗೆ ಒಂದೆರಡು ಮಾತು. ಈ ಸಂಗ್ರಹದ ಮಿಕ್ಕೆಲ್ಲ ಲೇಖನಗಳೂ ಸಮಕಾಲೀನ ವಿದ್ಯಮಾನಗಳಿಗೆ ಸಂಬಂಧಿಸಿದ್ದರೆ, ಈ ಭಾಗದಲ್ಲಿರುವ ಐದು ಬರಹಗಳು ೨೫- ೩೦ ವರ್ಷಗಳ ಹಿಂದೆ ಬರೆದವು. ರಾಜ್ಯ ಕಂಡ ಎರಡು ಮಹತ್ವದ

ಸಾಮಾಜಿಕ ಚಳುವಳಿಗಳಾದ ದಲಿತ ಮತ್ತು ರೈತ ಚಳುವಳಿಗಳು ತಮ್ಮ ಉತ್ತುಂಗ ಸ್ಥಿತಿಯಲ್ಲಿದ್ದಾಗ, ಅವುಗಳನ್ನು ಒಂದು ಸಾಮಾನ್ಯ ವೇದಿಕೆಗೆ ತಂದು ಪರ್ಯಾಯ ರಾಜಕೀಯ ಶಕ್ತಿಯೊಂದನ್ನು ರೂಪಿಸುವ ಪ್ರಯತ್ನ ನನ್ನ ಕೆಲವು ಸಮಾಜವಾದಿ ಗೆಳೆಯರಿಂದ ನಡೆದಾಗ, ಅವುಗಳೊಡನೆ ಮೊದಲಿಂದಲೂ ಒಡನಾಟವಿಟ್ಟುಕೊಂಡಿದ್ದ ನಾನು ಈ ಪ್ರಯತ್ನಕ್ಕೆ ಪೂರಕವಾಗಿ ಬರೆದ ಲೇಖನಗಳಿವು. ಇವು ನನ್ನ ಈವರೆಗಿನ ಯಾವ ಸಂಗ್ರಹದಲ್ಲೂ ಪ್ರಕಟವಾಗದೆ ಅಜ್ಞಾತವಾಸದಲ್ಲಿದ್ದು, ಅವನ್ನು ಹುಡುಕಲು ಪ್ರೇರಣೆಯಾಗಿದ್ದು, ರೈತ ನಾಯಕ ಕಡಿದಾಳು ಶಾಮಣ್ಣನವರಿಗೆ ಸಂಬಂಧಿಸಿದಂತೆ ಅಹಿರ್ನಿಶಿ ಪ್ರಕಾಶನದ ಕೆ. ಅಕ್ಷತಾ 'ಆ ದಶಕ' ಎಂಬ ಪುಸ್ತಕ ಪ್ರಕಟಿಸುವ ಸಂದರ್ಭದಲ್ಲಿ ನಾನು ಮರೆತೇ ಹೋಗಿದ್ದ ಶಾಮಣ್ಣನವರೊಂದಿಗೆ ನಾನು ನಡೆಸಿದ್ದ ಒಂದು ಸಂದರ್ಶನ ಮತ್ತು ನಾನು ಅವರಿಗೆ ಬರೆದ ಒಂದು ಪತ್ರ ಪ್ರಕಾಶಕ್ಕೆ ಬಂದಾಗ. ನಾನು ಶಾಮಣ್ಣನವರಿಗೆ ಬರೆದ ಪತ್ರವನ್ನು ಅವರು ಜತನದಿಂದ ಕಾಪಾಡಿದ್ದರು ಮತ್ತು ನಾನು ಆಗ 'ಸುದ್ದಿ ಸಂಗಾತಿ' ಪತ್ರಿಕೆಗಾಗಿ ಅವರೊಂದಿಗೆ ನಡೆಸಿದ್ದ ಆ ಸಂದರ್ಶನವನ್ನು ಆ ಪುಸ್ತಕದಲ್ಲಿ ಸೇರಿಸಲೇಬೇಕೆಂಬ ಅವರ ಹಠದಿಂದಾಗಿ ಅಕ್ಷತಾ ದೊಡ್ಡ ಸಾಹಸವನ್ನೇ ಮಾಡಿ ಅದನ್ನು ಎಲ್ಲಿಂದಲೋ ಹುಡುಕಿ ತೆಗೆದಿದ್ದರು! ಇವರಿಬ್ಬರಿಗೂ ಈ ಸಂದರ್ಭದಲ್ಲಿ ನನ್ನ ಕೃತಜ್ಞತೆಗಳನ್ನು ಹೇಳಬೇಕು. ಇದರಿಂದಾಗಿ ಆ ದಿನಗಳ ನೆನಪು ನನ್ನನ್ನು ಎಷ್ಟು ದಟ್ಟವಾಗಿ ಆವರಿಸಿತೆಂದರೆ, ಆ ದಿನಗಳ ನೆನಪಿನ ಗಣಿಯಂತಿರುವ ಮತ್ತು ನಾನೂ ಅನೌಪಚಾರಿಕ ಸಂಪಾದಕನಾಗಿ ಭಾಗಿಯಾಗಿದ್ದ 'ಪಂಚಮ'ದ (ದಲಿತ ಸಂಘರ್ಷ ಸಮಿತಿಯ ಮುಖವಾಣಿ ಎನಿಸಿದ್ದ ಮಾಸಿಕ) ದಲಿತ+ರೈತ ಸಂಚಿಕೆಯನ್ನು ಹುಡುಕಿ ತೆಗೆಯಲು ಪ್ರೇರೇಪಿಸಿತು. ಅದನ್ನು ನೋಡಿ–ಅದರಲ್ಲಿನ ನನ್ನ ಮತ್ತು ಇತರರ ಲೇಖನಗಳು ಆ ನಮ್ಮ ವಯಸ್ಸಿಗೆ ತಕ್ಕಂತೆ ಸ್ವಲ್ಪ ಹಸಿಬಿಸಿಯೆನಿಸಿದರೂ– ನಾನು ಎಷ್ಟು ಭಾವಾವಿಷ್ಟನಾದನೆಂದರೆ, ಈ ಜಾಗತೀಕರಣವೆಂಬ ದೆವ್ವ ನಮ್ಮ ವೈಯುಕ್ತಿಕ ಚರಿತ್ರೆ ಮತ್ತು ಚಾರಿತ್ರ್ಯವನ್ನೇ ಹೇಗೆ ಮರೆವೆಗೆ ತಳ್ಳಿ, ಅವು ಸ್ವತಃ ನಮಗೇ ಅನುಮಾನಾಸ್ಪದವೆನ್ನಿಸುವಂತೆ ಮಾಡಬಲ್ಲುದೆಂಬುದು ಇದ್ದಕ್ಕಿದ್ದಂತೆ ನನ್ನ ಗಮನಕ್ಕೆ ಬಂದಂತಾಗಿ ನಾನು ಭಯಭೀತನೇ ಆದೆ!

ಎಂತಹ ಕಾಲವದು! ನಮ್ಮಲ್ಲಿ ಎಂತಹ ಶಕ್ತಿಯಿತ್ತು! ಆದರೆ ಈ ೨೦–೨೫ ವರ್ಷಗಳಲ್ಲಿ ಏನೆಲ್ಲ ಆಗಿ ಹೋಯಿತು! ಎಂತಹ ಜನರೆಲ್ಲ ಏನೆಲ್ಲ ಆಗಿಹೋದರು! ಆದರೆ ಇಂದು ಕೆಲವು ವಿಶ್ವವಿದ್ಯಾಲಯಗಳ ಪಂಡಿತರು ತಾವು ಈ ಬಗ್ಗೆ ತಮ್ಮ ಗ್ರಂಥಾಲಯಗಳಲ್ಲಿ ಸಿಕ್ಕಿದಷ್ಟನ್ನು ಓದಿಕೊಂಡು, ಅದರ ಆಧಾರದ ಮೇಲೇ ವಿಷಯ ಪರಿಣಿತಿಯ ಹುಸಿ ಹಮ್ಮಿನಲ್ಲಿ ಆ ಕಾಲ, ಆ ಚಳುವಳಿಗಳು, ಅದರ ನಾಯಕರು ಮತ್ತು ಕಾರ್ಯಕರ್ತರುಗಳ ಬಗ್ಗೆ ಮಾಡುತ್ತಿರುವ ವ್ಯಾಖ್ಯಾನಗಳು ಮತ್ತು ನೀಡುತ್ತಿರುವ ತೀರ್ಪುಗಳ ಹಿಂದಿನ ಧಾರ್ಷ್ಟ್ಯವನ್ನು ಕಂಡು ನಾನು ಗಾಬರಿಯಾಗಿದ್ದಾಗ ಈ 'ಪಂಚಮ'ದ ವಿಶೇಷಾಂಕ ನಾನು ನನ್ನ ನಿಜ ಗುರುತನ್ನು ಮತ್ತೆ ಕಂಡುಕೊಳ್ಳುವಲ್ಲಿ ನೆರವಾಯಿತೆಂದೇ ಹೇಳಬೇಕು. ಅದರಿಂದ ನನ್ನ ಎರಡು ಬರಹಗಳನ್ನಷ್ಟೇ ಆಯ್ದು ಇಲ್ಲಿ ನೀಡಿದ್ದೇನೆ. ಇನ್ನೊಂದು, ಎಪ್ಪತ್ತರ ದಶಕದ ಕೊನೆಯಲ್ಲಿ ಸಮಾಜವಾದಿ

ಚಳುವಳಿಯ ಪುನರುಜ್ಜೀವನಗೊಳಿಸುವ ಕಾರ್ಯಕ್ರಮದ ಭಾಗವಾಗಿ ನಾನು ಸಂಪಾದಿಸುತ್ತಿದ್ದ 'ಮಾನವ' ಪತ್ರಿಕೆಯಿಂದ ಆಯ್ದ ಒಂದು ಬರಹ. ಅದು ನಾನು ಆಕಸ್ಮಿಕವಾಗಿ ಭೇಟಿಯಾದ ಪರಿವರ್ತಿತ ನಕ್ಸಲೀಯ ಹುಡುಗನೊಬ್ಬನ ಸಂದರ್ಶನ.

ಈ ಎಲ್ಲ ಹಿನ್ನೆಲೆಯಲ್ಲಿ, ನಮ್ಮ ಆ ದಿನಗಳ ಬದ್ಧತೆ, ನಿರ್ಭೀತಿ, ಪರಿಶ್ರಮ, ನಿರಂತರ ವಿಚಾರಶೀಲತೆ, ಸಂಘಟನೆ, ಅದರ ರೋಮಾಂಚನ, ಅದರ ಆನಂದಗಳನ್ನು ತಮ್ಮ ಅರ್ಥಪೂರ್ಣ ವಿಷಾದ, ಛಲ ಮತ್ತು ನಿರಂತರ ಹೋರಾಟಗಳ ಮೂಲಕ ಈ ದಿನಗಳಲ್ಲಿ ಆಗಾಗ್ಗೆ ನೆನಪಿಗೆ ತರುವ ಶ್ರೀಮತಿ ಮೇಧಾ ಪಾಟ್ಕರ್‌ಗೆ ಈ ಪುಸ್ತಕವನ್ನು ಅರ್ಪಿಸುತ್ತಿರುವೆ. ಎಷ್ಟಾದರೂ ಈ ಮೇಧಾ ನಮ್ಮ ಸಮಾಜವಾದಿ ಕುಟುಂಬಕ್ಕೆ ಸೇರಿದವರು. ಅವರು ಈ ಹಿಂದೆ ನನ್ನ ಮನೆಗೆ ಬಂದಿದ್ದಾಗ ನನ್ನ ಗುರು ಕಿಷನ್ ಪಟ್ನಾಯಕರ ಶಿಷ್ಯ ಎಂದು ಹೆಮ್ಮೆಯಿಂದ ಹೇಳಿಕೊಂಡು ನಾನು ಮತ್ತು ನನ್ನ ಪತ್ನಿಯೊಂದಿಗೆ ಕೌಟುಂಬಿಕ ಆಪ್ತತೆಯೊಂದಿಗೆ ಬೆರೆತವರು!

ಇನ್ನು ಈ ಪುಸ್ತಕವನ್ನು ಸದ್ಯಕ್ಕೆ ಹೊರತರುವ ಆಲೋಚನೆಯೇ ಇಲ್ಲದಿದ್ದಾಗ ಗೀತಾಂಜಲಿ ಪುಸ್ತಕ ಪ್ರಕಾಶನದ ಕಿರಿಯ ಗೆಳೆಯ ಜಿ.ಬಿ.ಟಿ. ಮೋಹನ್ ಪ್ರೀತಿಪೂರ್ವಕ ಒತ್ತಾಯದಿಂದ ಇದನ್ನು ಪ್ರಕಟಿಸಲು ಮುಂದಾಗಿದ್ದಾರೆ. ಈ ಸಂದರ್ಭದಲ್ಲಿ ಇವರಿಗೆ, ಇಲ್ಲಿನ ಕೆಲವು ಬರಹಗಳನ್ನು ಈ ಮುಂಚೆ ಪ್ರಕಟಿಸಿದ ಮತ್ತು ಪ್ರಕಟಿಸದ ಎಲ್ಲ ಪತ್ರಿಕೆಗಳ ಸಂಪಾದಕರುಗಳಿಗೆ, ಈ ಪುಸ್ತಕದ ಒಳ ಮತ್ತು ರಕ್ಷಾಪುಟದ ವಿನ್ಯಾಸ ಮಾಡಿದ್ದಲ್ಲದೆ, ಇದಕ್ಕೊಂದು ಬೆನ್ನುಡಿ ಬರೆದಿರುವ ಗೆಳೆಯ ಎನ್.ಎಸ್. ಶಂಕರ್‌ಗೆ ನನ್ನ ಕೃತಜ್ಞತೆಗಳನ್ನು ಹೇಳಬೇಕು. ಹಾಗೇ, ಕುಟುಂಬದ ಎಲ್ಲ ಜವಾಬ್ದಾರಿಗಳನ್ನು ಅನಿವಾರ್ಯವಾಗಿ ತಾನೇ ಹೊತ್ತು ನಿರ್ವಹಿಸಬೇಕಾಗಿರುವುದರ ಗಡಿಬಿಡಿಗಳ ನಡುವೆಯೂ ಈ ಪುಸ್ತಕದ ತಯ್ಯಾರಿಯನ್ನು ಗಮನಿಸುತ್ತಾ, ನನಗೆ ಅರವತ್ತು ತುಂಬುತ್ತಿರುವುದನ್ನು ನೆನಪಿಸಿ ಈ ಸಂದರ್ಭದಲ್ಲಿ ಈ ಪುಸ್ತಕ ಸುಂದರ ಮತ್ತು ಸಮೃದ್ಧವಾಗಿ ಹೊರಬರಲಿ ಎಂದು ಹಾರೈಸಿರುವ ನನ್ನ ಪತ್ನಿ ಸವಿತಾಳನ್ನು ಹಾಗೂ ನನ್ನ ಈವರೆಗಿನ ಬರಹ– ಪುಸ್ತಕಗಳನ್ನು ಆಸಕ್ತಿಯಿಂದ ಕೊಂಡು ಓದಿ, ನನ್ನ ಆತ್ಮ ವಿಶ್ವಾಸವನ್ನು ಹೆಚ್ಚಿಸುತ್ತಿರುವ ಎಲ್ಲ ಸಹೃದಯ ಓದುಗರನ್ನೂ ಇಲ್ಲಿ ನೆನೆಯಬಯಸುವೆ.

೧೫.೩.೨೦೧೨ **ಡಿ.ಎಸ್.ನಾಗಭೂಷಣ**

ಶಿವಮೊಗ್ಗ

ಪರಿವಿಡಿ

ಅನುಬಂಧ

೧. ‘ಭಾಷೆಯೇ ದೈವ’ ನಿಜ!
ಹಾಗಾಗಿಯೇ ಭಾಷೆ ದೆವ್ವವೂ ಹೌದು!!

ಮುಗಿಯಲಾರದ ಚರ್ಚೆಗೊಂದು ಮುಗಿತಾಯದ ಯತ್ನ

ಇವು ಚಂದ್ರಶೇಖರ ಐಜೂರು ಮತ್ತು ಮಂಜುನಾಥ್ ಲತಾ ಅವರು ‘ದೇಶ ಕಾಲ’ ಪತ್ರಿಕೆ ಹಾಗೂ ಅದರ ವಿಶೇಷಾಂಕದ ಬಗ್ಗೆ ‘ಲಂಕೇಶ್’ನಲ್ಲಿ ಆರಂಭಿಸಿ ನಡೆಸಿದ ಚರ್ಚೆಯ ಉದ್ದೇಶಿತ ಪುಸ್ತಕ ರೂಪಕ್ಕೆ ಬರೆದ ಪ್ರಸ್ತಾವನೆಯ ಮಾತುಗಳು. ಆದರೆ, ತರಾತುರಿಯಲ್ಲಿ ಮತ್ತು ಒತ್ತಾಯಪೂರ್ವಕವಾಗಿ ಹಾಗೂ ನನಗೆ ಓದು- ಬರಹ ಕಷ್ಟವಾಗಿದ್ದ ಅವಧಿಯಲ್ಲಿ ನನ್ನಿಂದ ಈ ಪ್ರಸ್ತಾವನೆಯನ್ನು ಬರೆಸಿದ ಇವರು, ಪುಸ್ತಕವನ್ನು ಮಾತ್ರ ಅದೂ ಇದೂ ಕಾರಣ ಹೇಳುತ್ತಾ, ತಿಂಗಳುಗಳು ಕಳೆದರೂ ಪ್ರಕಟಿಸದೇ ಹೋದರು! ಕುತೂಹಲಗೊಂಡ ನಾನು ಈ ಬಗ್ಗೆ ನನ್ನ ಇತರ ಗೆಳೆಯರನ್ನು ವಿಚಾರಿಸಿದಾಗ, ನನ್ನ ಪ್ರಿಯ ಗೆಳೆಯರೇ ಆದ ಬಂಜಗೆರೆ ಜಯಪ್ರಕಾಶರಿಂದಲೂ ಇವರು ಇನ್ನೊಂದು ಪ್ರಸ್ತಾವನೆಯನ್ನು ಬರೆಸಿದ್ದಾರೆ ಮತ್ತು ನಾನು ಈಗಾಗಲೇ ಪ್ರಸ್ತಾವನೆಯೊಂದನ್ನು ಬರೆದಿರುವುದನ್ನು ಅವರಿಗೆ ತಿಳಿಸದೆ ಇದನ್ನು ಮಾಡಿದ್ದಾರೆ ಎಂಬ ಸಂಗತಿ ತಿಳಿದು ಬಂತು. ಇದರಿಂದಾಗಿ, ನನ್ನನ್ನು ಕುರಿತ ಅವರ ನಿರೀಕ್ಷೆಗಳು ಹುಸಿಯಾಗಿ ನನ್ನ ಪ್ರಸ್ತಾವನೆಯ ಮಾತುಗಳಿಂದ ಅವರಿಗೆ ಮುಜುಗರವುಂಟಾಗಿದೆ ಎಂಬುದು ನನಗೆ ಸ್ಪಷ್ಟವಾಯಿತು. ಹಾಗೇ, ಅವರ ಈ ನಿರ್ಧಾರದಿಂದ ಅವರನ್ನು ಕುರಿತ ನನ್ನ ನಿರೀಕ್ಷೆಗಳೂ ಹುಸಿಯಾದವು ಎಂಬುದನ್ನು ಇಲ್ಲಿ ಬೇರೆ ಹೇಳಬೇಕಿಲ್ಲ. ಹಾಗಾಗಿ, ನಾನು ಐಜೂರರಿಗೆ ಅವರ ಉದ್ದೇಶಿತ ಪುಸ್ತಕದಲ್ಲಿ ನನ್ನ ಪ್ರಸ್ತಾವನೆಯನ್ನು ಪ್ರಕಟಿಸುವ ಅಗತ್ಯವಿಲ್ಲ ಮಾತ್ರವಿಲ್ಲ, ಅದನ್ನು ಯಾವುದೇ ಕಾರಣದಿಂದ ಇನ್ನೊಂದು ಪ್ರಸ್ತಾವನೆಯೊಂದಿಗೆ ಪ್ರಕಟಿಸಕೂಡದೆಂದು

(ಇಬ್ಬರಿಗೂ ಮುಜುಗರ ವಾಗದಿರಲೆಂದು) ಹೇಳಿದ ಮೇಲೂ, ಯಾವ ದ್ವಂದ್ವಕ್ಕೆ ಸಿಕ್ಕಿಯೋ ಏನೋ; ಅಥವಾ ಮತ್ತಾವ ಕಾರಣದಿಂದಲೋ, ಅವರು ಪುಸ್ತಕವನ್ನು ಇನ್ನೂ ಪ್ರಕಟಿಸಿಲ್ಲ. ಹಾಗಾಗಿ, ಅವರು ಆದಷ್ಟು ಬೇಗ ಬಂಜಗೆರೆಯವರ ಪ್ರಸ್ತಾವನೆಯೊಂದಿಗೇ ಪುಸ್ತಕ ಪ್ರಕಟಿಸಲು ಅನುವಾಗುವಂತೆ ಮತ್ತು ಅನಗತ್ಯ ವಿಳಂಬದಿಂದಾಗಿ ಈ ಚರ್ಚೆ ಸಾಂದರ್ಭಿಕ ಪ್ರಸ್ತುತತೆಯನ್ನು ಕಳೆದುಕೊಳ್ಳಬಾರದೆಂಬ ದೃಷ್ಟಿಯಿಂದ ನನ್ನ ಆ ಪ್ರಸ್ತಾವನೆಯ ಮಾತುಗಳನ್ನು ಇಲ್ಲಿ ಪ್ರಕಟಿಸುತ್ತಿರುವೆ. 'ಲಂಕೇಶ' ಪತ್ರಿಕೆಯಲ್ಲಿ ಬಂದ ಚರ್ಚೆಯನ್ನು ವಿವರವಾಗಿ ಗಮನಿಸಿದ ಮತ್ತು ಗಮನಿಸದೇ ಹೋದವರೂ ಕೂಡಾ ಈ ಪ್ರಸ್ತಾವನೆಯನ್ನು ಸ್ಥೂಲವಾಗಿಯಾದರೂ ಗ್ರಹಿಸಬಹುದಾದಂತೆ ಇದನ್ನು ಆದಷ್ಟೂ ಕಡೆ ಹಿನ್ನೆಲೆ ನೀಡಿ, ವಿವರಗಳೊಂದಿಗೆ ಬರೆಯಲಾಗಿದೆ

* * *

'ದೇಶಕಾಲ'ವೆಂಬ ಕನ್ನಡ ತ್ರೈಮಾಸಿಕವೊಂದು ಐದು ವರ್ಷಗಳನ್ನು ಪೂರೈಸಿದ ನೆನಪಿಗಾಗಿ ವಿಶೇಷಾಂಕವೊಂದನ್ನು ಹೊರತಂದ ಸಂದರ್ಭದಲ್ಲಿ ನನ್ನ ಕಿರಿಯ ಗೆಳೆಯರಾದ ಮಂಜುನಾಥ ಲತಾ ಹಾಗೂ ಚಂದ್ರಶೇಖರ ಐಜೂರು ಅವರು *'ದೇಶ'ವಿದೇನಹಾ! 'ಕಾಲ'ವಿದೇನಹಾ?* ಎಂಬ ಲೇಖನ ಬರೆದು, ಅದು ಸಾರ್ವಜನಿಕವಾಗಿ ಪ್ರಕಟವಾಗುವ ಮುನ್ನವೇ, ಅದರ ಪ್ರತಿಯೊಂದನ್ನು ಈ-ಮೇಲ್ ಮೂಲಕ ನನಗೆ ಕಳಿಸಿದ್ದರು. ಅದನ್ನು ಕಷ್ಟಪಟ್ಟು ಓದಿದ ನನಗೆ, ಅದಕ್ಕೆ ಯಾವುದೇ ರೀತಿಯಲ್ಲಿ ಪ್ರತಿಕ್ರಿಯಿಸುವ ಮನಸ್ಸಾಗಲಿಲ್ಲ. ಈ ಗೆಳೆಯರು ತಪ್ಪು ಕಾರಣಗಳೆನ್ನೆತ್ತಿಕೊಂಡು- ಜಗತ್ತಿನ ಇಂದಿನ ಎಲ್ಲ ಅನಾಹುತಗಳಿಗೂ, ಕೆಟ್ಟ ಬೆಳವಣಿಗೆಗಳಿಗೂ ಈ ಪತ್ರಿಕೆಯೂ ಜವಾಬ್ದಾರವೆಂಬಂತೆ- ಸಂಚಿಕೆಯನ್ನು ತುಂಬಾ ರೂಕ್ಷವಾಗಿ ಟೀಕಿಸಿದ್ದಾರೆನಿಸಿತು. ಕೆಲ ದಿನಗಳ ನಂತರ ಐಜೂರ್ ದೂರವಾಣಿ ಕರೆ ಮಾಡಿ ನನ್ನ ಪ್ರತಿಕ್ರಿಯೆ ಕೇಳಿದಾಗ ನಾನು ಇದನ್ನೇ ಹೇಳಿದೆ. ಜೊತೆಗೆ ಕೆಲವು ಕಿವಿ ಮಾತುಗಳನ್ನೂ:

ಮುಖ್ಯವಾಗಿ, ಜಾತಿಯೊಂದನ್ನೇ ಮನಸ್ಸಿನಲ್ಲಿಟ್ಟುಕೊಂಡು ಟೀಕಿಸುವಾಗ, ಅದು ನಮಗೇ ಗೊತ್ತಿಲ್ಲದ ಹಾಗೆ- ಆದರೆ 'ಸುಮ್ಮನೆ' ನೋಡುವವರಿಗೆ ಅಥವಾ ಓದುವವರಿಗೆ ಎದ್ದು ಕಾಣುವಂತೆ- ಅದು ಎರಡೂ ಕಡೆ ಕತ್ತರಿಸಿಕೊಂಡು ಹೋಗುತ್ತಾ ನಮ್ಮನ್ನೇ- ನಮ್ಮ ಸಣ್ಣತನಗಳನ್ನೇ- ಬಯಲು ಮಾಡಬಲ್ಲುದಾಗಿದೆ. ಹಾಗಾಗಿ ಜಾತಿ ಹಿಡಿದು ಮಾತಾಡುವಾಗ ನಾವು ಜಾತ್ಯತೀತರಾಗಿದ್ದರೆ ಮಾತ್ರ ನಮ್ಮ ಮಾತುಗಳು ವಿಶ್ವಾಸಾರ್ಹವೆನಿಸಿಕೊಳ್ಳುತ್ತವೆ ಎಂದು ಹೇಳಿದೆ. ಹಾಗೇ, ಇಂದು ಮೇಲ್ಜಾತಿವಾದ ಎಂಬುದಷ್ಟೇ ಜಾತಿವಾದವೆನ್ನಿಸಿಕೊಳ್ಳದೆ, ಇಂದಿನ ಸಂದರ್ಭದಲ್ಲಿ ಕೆಳಜಾತಿವಾದವೂ ಅಪಾಯಕಾರಿ ಜಾತಿವಾದವೆನ್ನಿಸಿಕೊಳ್ಳಬಹುದಾಗಿದೆ ಎಂದೂ ಸೂಚಿಸಿದೆ. ಇವರೆಡರ ನಡುವಣ ಸ್ಪರ್ಧೆಯೇ ಇಂದು ಬೇರೆ ಬೇರೆ ವೇಷ ತೊಟ್ಟು ಕನ್ನಡದಲ್ಲಿ ಹೇಗೆ ಸಂಸ್ಕೃತಿ ಚಿಂತನೆಯ ಹೆಸರಿನಲ್ಲಿ ವಾಗ್ವಾದಗಳನ್ನು ಸೃಷ್ಟಿಸಿ ನಮ್ಮೆಲ್ಲರನ್ನೂ

ದಾರಿ ತಪ್ಪಿಸುತ್ತಿದೆ ಎಂದು ಅದಕ್ಕೆ ಒಂದೆರಡು ಉದಾಹರಣೆಗಳನ್ನೂ ನೀಡಿದೆ. ಅಷ್ಟೇ ಅಲ್ಲ, ನಿಮ್ಮ ಲೇಖನವೂ ಜಾತಿಯೊಂದನ್ನೇ ಮುಂದಿಟ್ಟುಕೊಂಡು; ಆದರೆ ಅದಕ್ಕೆ ಸಾಮಾಜಿಕ-ರಾಜಕೀಯ ನ್ಯಾಯದ ಮುಸುಕು ಹಾಕಿ, ಆ ಮೂಲಕ ಸಂಸ್ಕೃತಿ ಚಿಂತನೆ ಮಾಡುವ ಸುತ್ತು ಬಳಸಾದ ಹತಾಶ ಪ್ರಯತ್ನದಂತೆ ನನಗೆ ಕಾಣುತ್ತಿದ್ದು, ಇದು ಇನ್ನೊಂದು ಹುಸಿ ವಾಗ್ವಾದದ ಸೃಷ್ಟಿಗೆ ಕಾರಣವಾಗಬಹುದಾದ್ದರಿಂದ ನಾನು ಪ್ರತಿಕ್ರಿಯಿಸಲಾರೆ ಎಂದು ಮಾತು ಮುಗಿಸಲು ಯತ್ನಿಸಿದೆ.

ಆದರೆ ಐಜೂರರು, ಮಾತು ಮುಂದುವರೆಸಲೋ ಏನೋ, ಶ್ರೀನಿವಾಸ ವೈದ್ಯರ 'ಹಳ್ಳ ಬಂತು ಹಳ್ಳ'ಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದುದಕ್ಕೆ ಜಾತಿ ರಾಜಕಾರಣವೇ ಕಾರಣವಲ್ಲವೇ ಎಂದು ಕೇಳಿದಾಗ ನನಗೆ ರೇಗಿ ಹೋಯಿತು. ರೇಗುತ್ತಲೇ 'ನೀವು ಅದನ್ನು ಓದಿದ್ದೇರೇನ್ರಿ?' ಎಂದು ಕೇಳಿದಾಗ ಅವರಿಂದ ಬಂದ 'ಇಲ್ಲ' ಎಂಬ ಉತ್ತರ ನನ್ನನ್ನು ನಿಜವಾಗಿ ಅಪ್ಪಳಿಸಿತೆಂದೇ ಹೇಳಬೇಕು! ಎಲಾ ಈತನ ಧೈರ್ಯವೇ ಎಂದು ಒಂದು ಕ್ಷಣ ಅವಾಕ್ಕಾದೆನಾದರೂ, ಮರುಕ್ಷಣವೇ ಆ ಉತ್ತರದ ಹಿಂದಿದ್ದ ಮುಗ್ಧ 'ಸತ್ಯ ನಿಷ್ಠೆ'ಯ ಮುಂದೆ ನನ್ನ ಕೋಪವೆಲ್ಲ ಕರಗಿ ಹೋಯಿತು. ಮನಸ್ಸು ಸ್ವಲ್ಪ ನಿಸೂರಾದಂತಾಗಿ, 'ಮೊದಲು ನೀವು ಆ ಕಾದಂಬರಿಯನ್ನು ಓದಿ. ಆನಂತರ ನಿಮ್ಮ ನೋಟ ಮತ್ತು ಭಾಷೆ ಕೊಂಚವಾದರೂ ಬದಲಾಗಬಹುದು' ಎಂದು ಮಾತು ಮುಗಿಸಿದೆ.

ಈ ನಿರ್ದಿಷ್ಟ ಸಂದರ್ಭವನ್ನು ಏಕೆ ಹೇಳುತ್ತಿದ್ದೇನೆಂದರೆ, ಅದು ಐಜೂರು ಮತ್ತು ಅವರ ಮಿತ್ರರ ವಾದಗಳಲ್ಲಿ ಜನಪರತೆ ಎಂಬ ಕಲ್ಪನೆಯ ಅತಿ ಸರಳೀಕರಣ ಮತ್ತು ಅದರಿಂದ ಹುಟ್ಟಿದ ಹುಚ್ಚು ಆವೇಶ, ಭಂಡ ತರ್ಕಗಳು ಇರುವುವಾದರೂ, ಅಪ್ರಮಾಣಿಕತೆ ಇರಲಾರದು ಎಂದು ನನಗೆ ಹೊಳೆದ ಸಂದರ್ಭವದಾದ್ದರಿಂದ. ಇವರ ಲೇಖನ ಮುಂದೆ 'ಲಂಕೇಶ್' ಪತ್ರಿಕೆಯಲ್ಲಿ ಆರಂಭಿಸಿದ ಪತ್ರ ಸಮರ ರೂಪದ ಚರ್ಚೆಯ ಯಾವ ಹಂತದಲ್ಲೂ, ಅನೇಕರ ಒತ್ತಾಯದ ಹೊರತಾಗಿಯೂ ನಾನು ಭಾಗವಹಿಸಲಿಲ್ಲ. ಕಾರಣ, ದಿಕ್ಕಾಪಾಲಾಗಿ ಹರಿದು ಹೋಗುತ್ತಿದ್ದ ಅದರ ರಭಸಕ್ಕೆ ನಾನು ಬೆದರಿದ್ದೆ. ಆದರೆ ಇಂದು ನಾನು, ಈ ಚರ್ಚೆ ಪುಸ್ತಕ ರೂಪದಲ್ಲಿ ಬರುತ್ತಿರುವಾಗ ಅದಕ್ಕೊಂದು ಪ್ರಸ್ತಾವನೆ ಬರೆಯಲು ಮುಂದಾಗಿರುವುದಕ್ಕೆ ಇದೂ ಒಂದು ಕಾರಣ. ಅಂದರೆ; ಇವರೊಂದಿಗೆ ಎಷ್ಟೇ ಕಷ್ಟವಾದರೂ ಮಾತು ಮುಂದುವರೆಸಬಹುದು ಮತ್ತು ಮುಂದುವರಿಸಬೇಕು ಎಂಬುದು. ಇನ್ನೊಂದು, ಐಜೂರರು ನನ್ನ ಕಟು ಟೀಕೆಯ ಮಾತುಗಳ ಹೊರತಾಗಿಯೂ, ಅವನ್ನೆಲ್ಲ ವಿಧೇಯ ವಿದ್ಯಾರ್ಥಿಯಂತೆ ಕೇಳಿಸಿಕೊಂಡು, ನನ್ನ ಕಣ್ಣಿನ ಶಸ್ತ್ರಚಿಕಿತ್ಸೆಯಿಂದಾಗಿ ಅನಿರ್ದಿಷ್ಟ ಅವಧಿಯವರೆಗೆ ವಿಳಂಬವಾಗಲಿದೆ ಎಂದು ಹೇಳಿದರೂ, ಈ ಪ್ರಸ್ತಾವನೆ ಬರೆಯಲು ನನ್ನನ್ನು ಪ್ರೀತಿಪೂರ್ವಕವಾಗಿ ಒತ್ತಾಯಿಸಿರುವುದು. ಜೊತೆಗೆ ನಾನು ಮಂಜುನಾಥ್ ಲತಾ- ಐಜೂರು ಹಾಗೂ ಅವರ ಓರಿಗೆಯ ಕಿರಿಯ ಗೆಳೆಯರಿಗೆ ಅವರ ಕೆಲವು ಅನಗತ್ಯ 'ಆಟಾಟೋಪ'ಗಳನ್ನು ನೋಡಿದಾಗ ಹೇಳಲೇಬೇಕೆಂದಿದ್ದ; ಆದರೆ ಸೂಕ್ತ ಸಂದರ್ಭ ಬಾರದೆ ಹೇಳಲಾಗದಿದ್ದ

ಹಲವು ಮಾತುಗಳನ್ನೂ, ಸಂಗತಿಗಳನ್ನು ಹೇಳಲು ಈ ಸಂದರ್ಭ ಒಂದು ಸೂಕ್ತ ಪರಿಪ್ರೇಕ್ಷವನ್ನೂ ಒದಗಿಸಿರುವುದು ಮತ್ತೊಂದು ಕಾರಣವೆಂದೂ ಹೇಳಬಹುದು. ಹೀಗಾಗಿ ನನ್ನ ಈ ಬರಹ ನನ್ನ ಹಿರಿಯರಿಗೆ ಮತ್ತು ಓರಿಗೆಯವರಿಗೆ ಅತಿ ದೀರ್ಘವೆನಿಸಿದರೆ ಕ್ಷಮೆ ಇರಲಿ. ಹೇಗೂ ಐಜೂರರು ಎಷ್ಟಾದರೂ ಬರೆಯಿರಿ, ಏನಾದರೂ ಬರೆಯಿರಿ, ಅಂತೂ ಈ ಸಂದರ್ಭದಲ್ಲಿ ನೀವು ಬರೆಯಿರಿ ಎಂದು ಅಭಯ ನೀಡಿದ್ದಾರೆ!

– ೨–

ನನ್ನ ಈ ಮೇಲಿನ ಮಾತುಗಳನ್ನು ಓದಿ, ನಾನು ಈ ಚರ್ಚೆಯಲ್ಲಿ ಭಾಗವಹಿಸದಿರಲು 'ದೇಶಕಾಲ'ದ ಚರಿತ್ರೆಯ ಬಗೆಗೆ ಈತನಿಗೆ ನಿಜವಾಗಿ ಯಾವೊಂದು ನಿಲುವಾಗಲೀ, ಅಭಿಪ್ರಾಯವಾಗಲೀ ಇಲ್ಲದಿರುವುದೂ ಒಂದು ಕಾರಣವಿರಬಹುದು ಎಂದು ಯಾರಾದರೂ ಯೋಚಿಸಿದ್ದರೆ ಅದು ತಪ್ಪು. ಮಂಜುನಾಥ್ ಲತಾ ಹಾಗೂ ಐಜೂರರ ಲೇಖನ ಬರುವ ಮುನ್ನವೇ ನಾನು ಈ ಪತ್ರಿಕೆಯ ವಿಶೇಷಾಂಕದ ಬಿಡುಗಡೆಯು 'ಪ್ರಜಾವಾಣಿ'ಯೂ ಸೇರಿದಂತೆ ನಮ್ಮ ಎಲ್ಲ ಮಾಧ್ಯಮಗಳಲ್ಲಿ ಪಡೆದ 'ಅಭೂತಪೂರ್ವ' ಪ್ರಚಾರ ಕಂಡು, ಅದನ್ನು ಪ್ರಶ್ನಿಸಿ, ಟೀಕಿಸಿ 'ಪ್ರಜಾವಾಣಿ'ಗೆ ಪುಟ್ಟ ಪತ್ರವೊಂದನ್ನು ಬರೆದಿದ್ದೆ. ಆದರೆ ಆ ಪತ್ರಿಕೆ ತನ್ನ ನಿಲುವನ್ನು ಪ್ರಶ್ನಿಸಿದ, ಟೀಕಿಸಿದ ಏನನ್ನೂ ಪ್ರಕಟಿಸದ ತನ್ನ ಎಂದಿನ ನೀತಿಗನುಗುಣವಾಗಿ ಪ್ರಕಟಿಸಲಿಲ್ಲ. (ಈ ಪತ್ರ ಇತ್ತೀಚಿನ ನನ್ನ 'ಇಲ್ಲಿ ಯಾರೂ ಅಮುಖ್ಯರಲ್ಲ' ಪುಸ್ತಕದಲ್ಲಿ ಪ್ರಕಟವಾಗಿದೆ.)

ಹಾಗೆ ನೋಡಿದರೆ ನಾನು 'ದೇಶಕಾಲ' ಪತ್ರಿಕೆ ಆರಂಭವಾದಾಗಿನಿಂದಲೂ ಅದರ ಚಂದಾದಾರನಾಗಿದ್ದವನು. ಅಷ್ಟೇ ಅಲ್ಲ, ಕೆ.ವಿ. ಅಕ್ಷರ ಅವರ ಕೋರಿಕೆಯ ಮೇರೆಗೆ ಒಂದು ಸಂಚಿಕೆಯ 'ಸಮಯ ಪರೀಕ್ಷೆ' ವಿಭಾಗಕ್ಕಾಗಿ 'ಟೆಲಿವಿಷನ್' ಬಗ್ಗೆ ಒಂದು ಪುಟ್ಟ ಲೇಖನವನ್ನೂ ಬರೆದವನು. ಹಾಗೇ, ಈ ಪತ್ರಿಕೆಯ ಪುಸ್ತಕ ವಿಮರ್ಶೆ ವಿಭಾಗದ ಹೊಣೆ ಹೊತ್ತಿದ್ದ ಜಿ. ರಾಜಶೇಖರರು ಪತ್ರಿಕೆಗಾಗಿ ಪುಸ್ತಕ ವಿಮರ್ಶೆ ಮಾಡಲು ಕೋರಿದಾಗ, ಇವರು ಆಯ್ದು ಕೊಟ್ಟ ಪುಸ್ತಕಗಳನ್ನಷ್ಟೇ ವಿಮರ್ಶೆ ಮಾಡಬೇಕಾಗಿದ್ದುದರಿಂದ ಅದು ಒಪ್ಪಿಗೆಯಾಗದೆ ನಿರಾಕರಿಸಿದವನು. ಆದರೆ ಅದರ ಆರನೇ ಸಂಪುಟಕ್ಕೆ ಹಾಗೂ ವಿಶೇಷಾಂಕಕ್ಕೆ ಸಕಾಲದಲ್ಲಿ ಚಂದಾ ಕಳಿಸಲು ಮರೆತು ಚಂದಾದಾರತ್ವವನ್ನು ಕಳೆದುಕೊಂಡವನು! (ಹಾಗೆಂದು ನೆನಪು.) ಮಿತ್ರರನೇಕರು ವಿಶೇಷ ಸಂಚಿಕೆಯಲ್ಲಿನ 'ವಿಶೇಷ'ಗಳ ಬಗ್ಗೆ ಮಾತನಾಡಲು ತೊಡಗಿದಾಗ, ನನಗೇಕೆ ಆರನೇ ಸಂಪುಟದ ಮೊದಲ ಸಂಚಿಕೆಯಾಗಲೀ, ವಿಶೇಷ ಸಂಚಿಕೆಯಾಗಲೀ ಬಂದಿಲ್ಲ ಎಂದು ಯೋಚಿಸಿದಾಗಲೇ ನನ್ನಿಂದಾಗಿದ್ದ ಪ್ರಮಾದ ಗೊತ್ತಾದದ್ದು! ಕನ್ನಡ ಸಾಹಿತ್ಯ ಪತ್ರಿಕೆಗಳ ಇತಿಹಾಸದಲ್ಲೇ ಬಹುಶಃ ಇಷ್ಟು ಕಟ್ಟುನಿಟ್ಟಾದ ಸದಸ್ಯತ್ವ ಕಾರ್ಯಕ್ರಮ ಎಂದೂ ನಡೆದಿರಲಾರದು! ಬಹುಶಃ ಇದು ಈ ಪತ್ರಿಕೆಯ ದೊಡ್ಡಸ್ಥಿಕೆಗಳಲ್ಲಿ ಒಂದಾಗಿರಬಹುದು! ನಾನೂ ನನ್ನ ಕೆಲವು ಗೆಳೆಯರೊಂದಿಗೆ ಹತ್ತು–ಹದಿನೈದು ವರ್ಷಗಳ ಕಾಲ ' (ಸಾಹಿತ್ಯ) ಸಂವಾದ' ಎಂಬ ಒಂದು ಸಾಹಿತ್ಯ ಪತ್ರಿಕೆ ನಡೆಸಿದವನಾಗಿ, ಕನ್ನಡ ಸಾಹಿತ್ಯ ಪತ್ರಿಕೆಯೊಂದು ಇಂತಹ ದೊಡ್ಡಸ್ಥಿಕೆ ಸಂಪಾದಿಸಿರುವುದು ನನಗೆ ಹೆಮ್ಮೆಯ ಸಂಗತಿಯೇ ಎನಿಸಿ ಸುಮ್ಮನಾದೆ.

ಆದರೆ ಆರನೇ ಸಂಪುಟದ ಮೊದಲ ಸಂಚಿಕೆಯ ಬಗೆಗೆ ನನಗೆ ಕೂತೂಹಲವಿರಲಿಲ್ಲವಾದರೂ, ವಿಶೇಷ ಸಂಚಿಕೆ ಕುರಿತು, ಅದರ ಬಗ್ಗೆ ಈ ಹಿಂದಿನ ಸಂಚಿಕೆಯಲ್ಲಿ ನೀಡಿದ್ದ ಮಾಹಿತಿಯಿಂದಾಗಿ ಕುತೂಹಲವಿತ್ತು. ಆರನೇ ಸಂಪುಟದ ಬಗ್ಗೆ ಕುತೂಹಲವಿಲ್ಲದಿರಲು ಕಾರಣ, ಅದರ ಐದು ವರ್ಷಗಳ ಯಾವೊಂದು ಸಂಚಿಕೆಯೂ ನನ್ನಲ್ಲಿ ಅಂತಹ ವಿಶೇಷ ಕುತೂಹಲವನ್ನೇನೂ ಹುಟ್ಟಿಸದ್ದಿದುದು. ಒಳ್ಳೆಯ ಕಾಗದ, ಕನ್ನಡ ಸಾಹಿತ್ಯ ಪತ್ರಿಕೆಗಳಿಗೆ ನವೀನವೆನ್ನಿಸುವ ರಕ್ಷಾಪುಟ, ಪುಟ ವಿನ್ಯಾಸ, ರೇಖಾ ಚಿತ್ರಗಳು ಮತ್ತು ಅತ್ಯುತ್ತಮ ಮುದ್ರಣಗಳೊಂದಿಗೆ ಸಾಮಾನ್ಯ ಸಾಮಗ್ರಿಯನ್ನು ಅಸಾಮಾನ್ಯವೆಂಬಂತೆ ಪ್ರಸ್ತುತಗೊಳಿಸುವ ಹೊಸ ಕಾಲದ ವಾಣಿಜ್ಯ ಲೋಕದ ಪ್ಯಾಕೇಜ್ ತಂತ್ರ ಹಾಗೂ ಎಲ್ಲಕ್ಕಿಂತ ಹೆಚ್ಚಾಗಿ ಅದರ ಕರಾರುವಕ್ಕಾದ ಕ್ಲುಪ್ತತೆ ಮಾತ್ರ ಈ ಪತ್ರಿಕೆಯ ಹೆಚ್ಚುಗಾರಿಕೆಯಾಗಿ ನನಗೆ ಕಂಡಿತ್ತು.

ನಾವು ತರುತ್ತಿದ್ದ ' (ಸಾಹಿತ್ಯ) ಸಂವಾದ', ನ್ಯೂಸ್ ಪ್ರಿಂಟ್ ಕಾಗದದಲ್ಲಿ; ಮಲ್ಲಾಡಿಹಳ್ಳಿ, ಹೊಳಲ್ಕೆರೆ, ಹಾಸನ ಇತ್ಯಾದಿ ಸಣ್ಣಪುಟ್ಟ ಊರುಗಳ ಸಾಮಾನ್ಯ ಮುದ್ರಣಾಲಯಗಳಲ್ಲಿ ಅತಿ ಸಾಮಾನ್ಯ ರೀತಿಯಲ್ಲಿ ಮುದ್ರಣಗೊಳ್ಳುತ್ತಿದ್ದರೂ, ಅದರ ಸಂಚಿಕೆಗಳು ಈ ಪತ್ರಿಕೆಯ ಸಂಚಿಕೆಗಳಿಗಿಂತ ಹೆಚ್ಚು ಮೌಲಿಕವಾಗಿದ್ದುವೆಂದೇ ಈಗ ಕಾಲದೂರದಲ್ಲಿ ನಿಂತು ನೆನೆದಾಗಲೂ ನನಗೆ ಅನ್ನಿಸುತ್ತಿದೆ. ಹಾಗಾಗಿಯೇ ಅದರ ಚಂದಾದಾರರ ಸಂಖ್ಯೆ ಒಂದು ಕಾಲದಲ್ಲಿ ಒಂದು ಸಾವಿರದ ಹತ್ತಿರ ಹತ್ತಿರ ಮುಟ್ಟಿ, ನನಗೆ ತಿಳಿದಂತೆ ಸಣ್ಣ ಪತ್ರಿಕೆಗಳ ಇತಿಹಾಸದಲ್ಲಿ ಒಂದು ದಾಖಲೆಯನ್ನೇ ಸ್ಥಾಪಿಸಿತ್ತು. ಆದರೆ ಇಂದು ಆ ಪತ್ರಿಕೆಯ ಸಾಮಾನ್ಯ ಸಂಚಿಕೆಗಳ ಬಗೆಗಿರಲಿ, ಅದು ಹೊರತಂದ ಅಂದಿನ ಬಹು ಮುಖ್ಯ ಲೇಖಕರ ಬಹು ಮುಖ್ಯ ಲೇಖನಗಳನ್ನೊಳಗೊಂಡ 'ಆಲನಹಳ್ಳಿ ಕೃಷ್ಣ', 'ಮಾಸ್ತಿ', 'ಸತ್ಯಜಿತ್ ರೇ', 'ಎ.ಕೆ. ರಾಮಾನುಜನ್', 'ಮಹಿಳಾ ಸಾಹಿತ್ಯ ಸ್ಪಂದನ' ಮುಂತಾದ ವಿಶೇಷಾಂಕಗಳ ಬಗೆಗೂ ಯಾರೂ ಸಾಂದರ್ಭಿಕವಾಗಿ ಕೂಡಾ ಪ್ರಸ್ತಾಪ ಮಾಡುತ್ತಿಲ್ಲ! ಏಕೆಂದರೆ ಅದು ಯಾವುದೇ (ಸಾಹಿತ್ಯ ಅಥವಾ ಸಾಹಿತ್ಯೇತರ)ಸ್ಥಾಪಿತ ಹಿತಾಸಕ್ತಿಗಳ ದಾಕ್ಷಿಣ್ಯಕ್ಕೆ ಅಥವಾ ಮರ್ಜಿಗೆ ಸಿಗದಂತೆ ಎಚ್ಚರಿಕೆ ವಹಿಸಿ ತನ್ನ ಪಾಡಿಗೆ ತನ್ನ ದಾರಿ ಸವೆಸಿತು. ಆ ದಾರಿ ಬಿಟ್ಟೊಡನೆ ಅದು ಸ್ಥಗಿತಗೊಂಡಿತು ಎಂಬುದು ಬೇರೆ ವಿಚಾರ.

ಆದರೆ ಇಂದು 'ದೇಶಕಾಲ'ವನ್ನು ಕೆಲವರು ಅಡಿಗರ 'ಸಾಕ್ಷಿ'ಗೆ ಹೋಲಿಸಿಕೊಂಡು, ಸಾಹಿತ್ಯೇತರ 'ಕಲ್ಮಶ'ಗಳಿಂದ ಮಲಿನಗೊಂಡಿರುವ ಇಂದಿನ ಕನ್ನಡ ಸಾಹಿತ್ಯ ಜಗತ್ತಿನಲ್ಲಿ 'ಶ್ರೇಷ್ಠ ಸಾಹಿತ್ಯ'ದ ದಿನಗಳು ಮರಳಿ ಬರಲು ಬೇಕಾದ ಬಾಗಿಲನ್ನು ತೆರೆಯಲಾಗಿದೆ ಎಂದು ಸಂಭ್ರಮಪಡುತ್ತಿದ್ದರೆ; ಇನ್ನು ಕೆಲವರು ಇದನ್ನು ಈಗ ಇದ್ದಕ್ಕಿದ್ದಂತೆ ಕೆಲವರಿಂದ ಆರಂಭವಾಗಿರುವ 'ಅಡಿಗ ಪುನರುತ್ಥಾನ' ಕಾರ್ಯಕ್ರಮದ ಭಾಗವಾಗಿ ನೋಡುತ್ತಾ, 'ಶ್ರೇಷ್ಠ ಸಾಹಿತ್ಯ' ಕಲ್ಪನೆಯ ಪುನರಾಗಮನವಾಗುತ್ತಿದೆ ಎಂದು ಆತಂಕ ವ್ಯಕ್ತಪಡಿಸುತ್ತಿದ್ದಾರೆ! ಇದು ನಮ್ಮ ಇಂದಿನ ಸಾಹಿತ್ಯ ಜಗತ್ತು ಕೇವಲ ತತ್ಕಾಲೀನ ಸಾಹಿತ್ಯ ರಾಜಕಾರಣದ ಹುದಲಿನಲ್ಲಿ

ಸಿಕ್ಕಿಕೊಂಡು ತನ್ನ ಇತ್ತೀಚಿನ ಪರಂಪರೆಯ ಬಗೆಗೇ ಹೇಗೆ ಕಿವಿಗೆ ಬಿದ್ದ ಬರೀ ಅರ್ಧ ಸತ್ಯದ ಮಾತುಗಳ ಆಧಾರದ ಮೇಲೇ ಚರ್ಚೆಗಳನ್ನು ಕಟ್ಟಿಕೊಂಡು ದೊಡ್ಡ ದೊಡ್ಡ ತೀರ್ಮಾನಗಳಿಗೆ ಬರುವಂತಹ ದುಃಸ್ಥಿತಿಗೆ ಈಡಾಗಿದೆ ಎಂಬುದನ್ನು ಸೂಚಿಸುತ್ತದೆ. ಏಕೆಂದರೆ, ಇವರಿಬ್ಬರಿಗೂ, 'ಸಾಕ್ಷಿ' ಏನಾಗಿತ್ತು ಹಾಗೂ ಇದನ್ನು 'ದೇಶಕಾಲ'ದೊಂದಿಗೆ ಏಕೆ ಹೋಲಿಸಲಾಗದು ಮತ್ತು 'ಜಾಗೃತ ಸಾಹಿತ್ಯ ಸಮ್ಮೇಳನ'ದ ಸಂದರ್ಭ ಎಂತಹುದು ಹಾಗೂ ಅಲ್ಲಿ 'ಶ್ರೇಷ್ಠ ಸಾಹಿತ್ಯ'ದ ಕಲ್ಪನೆ ಮತ್ತು ಚರ್ಚೆ ಏಕೆ ಮತ್ತು ಹೇಗೆ ಮೂಡಿಬಂತು ಎಂಬುದರ ಪರಿವೆಯೇ ಇದ್ದಂತಿಲ್ಲ.

'ಸಾಕ್ಷಿ' ಒಳ್ಳೆಯದಕ್ಕೋ ಕೆಟ್ಟದಕ್ಕೋ (ಇದು ಸರಳ ತೀರ್ಮಾನಗಳಿಗೆ ಸಿಗದ ಬೇರೆಯೇ ಚರ್ಚೆ) ಕನ್ನಡ ಸಾಹಿತ್ಯ ಕಂಡ ಒಂದು ದೊಡ್ಡ ಪಲ್ಲಟದ ದಿಕ್ಕು– ದೆಸೆ ಹಾಗೂ ತಲ್ಲಣಗಳನ್ನು ದಾಖಲಿಸುವ ತುರ್ತಿನಲ್ಲಿ ಹುಟ್ಟಿದ ಪತ್ರಿಕೆ. ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅದಕ್ಕೊಂದು ಸ್ಥಾನವಿದೆ. ಆದರೆ 'ದೇಶಕಾಲ'ದ ಹಿಂದೆ, 'ಸಮಯ ಪರೀಕ್ಷೆ'ಯಂತಹ ಅದರ ಕೆಲವು ಬೌದ್ಧಿಕ ವಯ್ಯಾರಗಳನ್ನು ಗಮನಿಸಿದಾಗ ಅದರದೇ ಆದ ಕೆಲವು ಸಾಹಿತ್ಯಿಕ– ಸಾಂಸ್ಕೃತಿಕ ಆತಂಕಗಳು ಗೋಚರವಾಗುವುವಾದರೂ, ಅಂತಹ ಯಾವುದೇ ಚಾರಿತ್ರಿಕ ತುರ್ತೂ ಇದ್ದಂತಿಲ್ಲ. ಅದು ಸಮಕಾಲೀನ ಸಾಹಿತ್ಯ ಸಂದರ್ಭದಲ್ಲಿ ತನ್ನ ಸ್ಥಾನವನ್ನಿರಲಿ, ಅಸ್ತಿತ್ವವನ್ನೇ ಇನ್ನೂ ಸ್ಥಾಪಿಸಿಕೊಂಡಂತಿಲ್ಲ. ಹೀಗಿರುವಾಗ ಈ ಪತ್ರಿಕೆಯ ಸುತ್ತ ಇಷ್ಟು ದೊಡ್ಡದಾಗಿ, ದೊಡ್ಡ ದನಿಯಲ್ಲಿ ನಡೆದಿರುವ ಚರ್ಚೆ ಕನ್ನಡ ಸಾಹಿತ್ಯ ಜಗತ್ತಿನ ಚರ್ಚೆಗಳನ್ನು ಇಂದು ಈ ಜಗತ್ತಿನ ಹೊರಗಿನ ಶಕ್ತಿಗಳೇ ನಿಯಂತ್ರಿಸುತ್ತಿರುವ ದುರಂತವನ್ನು ಸೂಚಿಸುತ್ತದೆ ಎಂದು ಭಾವಿಸಿರುವೆ.

ಈ ಕಾರಣದಿಂದಾಗಿಯೇ, ಗೋಪಾಲಕೃಷ್ಣ ಅಡಿಗರು ಪ್ರತಿಪಾದಿಸಿದ್ದ 'ಶ್ರೇಷ್ಠ ಸಾಹಿತ್ಯ'ದ (ಇದು, ಅದರ ಉದ್ದೇಶಿತ ಅರ್ಥದ ಸಮರ್ಪಕ ವರ್ಣನೆಯಲ್ಲವಾದರೂ!) ಕಲ್ಪನೆಯ 'ಐತಿಹಾಸಿಕತೆ'ಯ ಬಗ್ಗೆ ಇಲ್ಲಿ ಒಂದಿಷ್ಟು ವಿಸ್ತಾರವಾಗಿಯೇ ಬರೆಯಬೇಕಾಗಿದೆ. ಇದು ಮೊದಲ ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಶಿವರಾಮ ಕಾರಂತರು ಕೇಳಿದ 'ಮಸಾಲೆ ದೋಸೆ' ಪ್ರಶ್ನೆಯಂತೆಯೇ ಉದ್ದೇಶಪೂರ್ವಕ ಅಪವ್ಯಾಖ್ಯಾನಕ್ಕೊಳಗಾಗಿದೆ. ಆ ಮೂಲಕ ಅನೇಕ ಗೊಂದಲಗಳನ್ನೂ, ಅನಗತ್ಯ ಆತಂಕಗಳನ್ನು ಸೃಷ್ಟಿಸುತ್ತಾ, ಸಾಹಿತ್ಯಿಕ– ಸಾಂಸ್ಕೃತಿಕ ಚರ್ಚೆಗಳನ್ನು ಮಂಜುನಾಥ್ ಲತಾ– ಐಜೂರರ ಬರಹದಂತೆ ಸಲ್ಲದ ವಲಯಗಳಿಗೆ, ಹೋಲಿಕೆಗಳಿಗೆ, ಉದಾಹರಣೆಗಳಿಗೆ, ಭಾಷೆಗೆ ಎಳೆದೊಯ್ಯುವ ಪ್ರಯತ್ನಗಳಿಗೆ ದಾರಿ ಮಾಡಿಕೊಟ್ಟಿದೆ.

ಸಾಹಿತ್ಯ, ಅದೆಷ್ಟೇ ಸಾಮಾಜಿಕ– ರಾಜಕೀಯ ಸತ್ವವನ್ನು ಗಳಿಸಿಕೊಂಡರೂ, ಅದು ತನ್ನ ಮೂಲ ಲಕ್ಷಣಗಳನ್ನು ಕಳೆದುಕೊಳ್ಳದೆ ಸಾಹಿತ್ಯವಾಗಿ ಉಳಿಯಬೇಕು. ಅಂದರೆ ಅದು ಮನುಷ್ಯನನ್ನು ಒಳಗಿಂದ ಅಲ್ಲಾಡಿಸಬೇಕು. ಹೊರಗಿಂದ ಅಲ್ಲ. ಅದು ಹೊರಗಿಂದ ಅಲ್ಲಾಡಿಸ

ಹೊರಟಷ್ಟೂ ಅದು ತನ್ನ ಸತ್ವವನ್ನು ಕಳೆದುಕೊಂಡು ಸಾಹಿತ್ಯವಾಗಿ ತನ್ನ ವಿಶ್ವಾಸಾರ್ಹತೆಯನ್ನೂ ಕಳೆದುಕೊಳ್ಳುತ್ತದೆ. ಇದು ನಮ್ಮ ಸಾಹಿತ್ಯ ಪರಂಪರೆಗೇ ಮಾಡುವ ಅನ್ಯಾಯ. ಅತ್ತ ನವ್ಯದ ಅತಿ ವಿಶಿಷ್ಟ ಸಾಹಿತ್ಯ ಮೀಮಾಂಸೆಯ ಮಡಿವಂತಿಕೆಯ ಕಾಟದಿಂದಾಗಿಯೂ, ಇತ್ತ ಅದರ ಸಾಂಸ್ಕೃತಿಕ ರಾಜಕಾರಣ ವಿರುದ್ಧ ಸೆಟೆದೆದ್ದ 'ಅಖಿಲ ಕರ್ನಾಟಕ ಲೇಖಕರ ಮತ್ತು ಕಲಾವಿದರ ಒಕ್ಕೂಟ'ವು ಸಾಹಿತ್ಯ ಗುಣದ ವಿಷಯದಲ್ಲಿ ರಾಜಿ ಮಾಡಿಕೊಳ್ಳಲು ನಿರಾಕರಿಸಿದ ನಿಲುವಿನಿಂದಾಗಿಯೂ, ಎಲ್ಲೂ ಸಲ್ಲದ ಕೆಲವು ಸಾಹಿತಿ ವೇಷಧಾರಿಗಳು ಬಂಡಾಯ ಸಾಹಿತ್ಯ 'ಸಂಘಟನೆ'ಯ ಹೆಸರಿನಲ್ಲಿ ನಡೆಸಲಾರಂಭಿಸಿದ ರಾಜಕೀಯ ಪುಢಾರಿತನದ ಮುಖವಾಣಿಯಾಗ ಹೊರಟ ಆಧುನಿಕ ಕನ್ನಡ ಸಾಹಿತ್ಯ, ತನ್ನ ಈ ದುರ್ಬಲ ಘಟ್ಟದಲ್ಲಿ ಎದುರಿಸಿದ್ದು ಇಂತಹ ಅಪಾಯವನ್ನೇ. ಈ ಸಂದರ್ಭದಲ್ಲೇ ಜನ ಮತ್ತು ಜೀವಗಳ ಮೇಲೆ ಗುತ್ತೇದಾರಿಕೆಯನ್ನು ಸಾರಿಕೊಂಡ ಕನ್ನಡ ಸಾಹಿತ್ಯದ ನವ (ಮಾಂಸಾಹಾರಿ!)ಪುರೋಹಿತರು, ಸಾಹಿತ್ಯದ ಜನಪರ, ಜೀವಪರ, ಜನವಿರೋಧಿ, ಜೀವವಿರೋಧಿ ಇತ್ಯಾದಿ ಸುಲಭ ವರ್ಗೀಕರಣವನ್ನು ಆರಂಭಿಸಿದ್ದು.

ಇದರಿಂದ ಆತಂಕಿತಗೊಂಡ ಸಹಜ ಸಾಹಿತಿಯಾದ ಲಂಕೇಶ್– ಇವರು ಬಂಡಾಯವನ್ನು 'ಡಂಬಾಯ' ಎಂದು ವ್ಯಂಗ್ಯವಾಡುತ್ತಿದ್ದರು ಎಂಬುದನ್ನೂ ಇಲ್ಲಿ ನೆನಪಿಸಿಕೊಳ್ಳಬೇಕು– ಈ ಪ್ರವೃತ್ತಿಯ ವಿರುದ್ಧ ಜಾಗೃತಿ ಮೂಡಿಸಲು ಹಮ್ಮಿಕೊಂಡಿದ್ದೇ 'ಜಾಗೃತ ಸಾಹಿತ್ಯ ಸಮ್ಮೇಳನ'. ಅವರು ಇದನ್ನು ಆಯೋಜಿಸಿದ್ದು, ತಮ್ಮ ಮೊದಲ ಅವತಾರದಲ್ಲಿ ಬಂಡಾಯ ಸಾಹಿತ್ಯ ಸಂಘಟನೆಯ ಸಂಸ್ಥಾಪಕರಾಗಿ ಅದಕ್ಕೆ ಖಡ್ಗ ದೀಕ್ಷೆ ನೀಡಿದ ಡಿ.ಆರ್ ನಾಗರಾಜರ ಸಂಚಾಲಕತ್ವದಲ್ಲಿ ಎಂಬುದನ್ನೂ ನಾವು ಗಮನಿಸಬೇಕು. ನಾಗರಾಜರು ತಮ್ಮ ಈ ಎರಡನೇ ಅವತಾರದಲ್ಲಿ ತಮ್ಮ ಮೊದಲ ಅವತಾರದಲ್ಲಿ ಮಾಡಿದ್ದ ಸಾಹಿತ್ಯ 'ಪಾಪ'ವನ್ನು ತೊಳೆದುಕೊಳ್ಳಲು ಯತ್ನಿಸಿದರೂ, ಅವರು ಇಂದೂ ಕಾವ್ಯವನ್ನು ಖಡ್ಗ ಮಾಡುವ ಕಾವ್ಯ ಕಮ್ಮಾರಿಕೆಯಲ್ಲಿ ನಿರತರಾಗಿರುವ ಕೆಲವರ ಕಣ್ಮಣಿಯೂ ಆಗಿರುವುದಕ್ಕೆ, ಅವರ ಜಾತಿಮೂಲವಷ್ಟೇ ಕಾರಣವಾಗಿದ್ದರೆ ಆಶ್ಚರ್ಯವಿಲ್ಲ!

ಅದೇನೇ ಇರಲಿ, ಆ ಹೊತ್ತಿಗೆ ಅಡಿಗರು ತಮ್ಮ ಆವರೆಗಿನ ಪ್ರತಿಪಾದನೆಗಳಿಗೇ ಉಲ್ಟಾ ಹೊಡೆದಂತೆ (ಮರ್ಮಸ್ಥಾನಕ್ಕೇ ಬಿದ್ದ 'ಒಕ್ಕೂಟ'ದವರ ಹೊಡೆತ ತಾಳಲಾರದೆ?) ಧರ್ಮಸ್ಥಳದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರಿಂದ (ಇದು ಆಗ ಕಸಾಪದ ಅಧ್ಯಕ್ಷರಾಗಿದ್ದ ಹಂಪನಾ ಮಾಡಿದ ಕ್ರಾಂತಿ!) ಆರಂಭವಾದಂತೆ ಸಾಕಷ್ಟು ಕಾಲ ತಮ್ಮ ವಿವಾದಾತ್ಮಕ ಸಾಂಸ್ಕೃತಿಕ ನಂಬಿಕೆಗಳು ಮತ್ತು ರಾಜಕೀಯ ನಿಲುವುಗಳಿಂದಾಗಿ ಸರ್ವ ದಿಕ್ಕುಗಳಿಂದಲೂ ಟೀಕೆ– ದೂಷಣೆಗಳನ್ನೇ ಎದುರಿಸಿ ಹಣ್ಣಾಗಿದ್ದರೂ, ಅವರು ಈ ಸಮ್ಮೇಳನದಲ್ಲಿ ಸಾಹಿತ್ಯದ ಸ್ವಾಯತ್ತತೆ ಕುರಿತಂತೆ, ಅದನ್ನು ತಮ್ಮ 'ಜೀವನ್ಮರಣದ ಪ್ರಶ್ನೆ' ಎಂಬಂತೆ ಪರಿಗಣಿಸುವುದಾಗಿ ಹೇಳುತ್ತಾ ಆಡಿದ ಕೆಲವು ದಿಟ್ಟ ಮಾತುಗಳು ಆಧುನಿಕ ಕನ್ನಡ ಸಾಹಿತ್ಯದ ಚರಿತ್ರೆಯಲ್ಲಿ ದಾಖಲರ್ಹವಾದವು. ಅವು, ಕನ್ನಡ ಸಾಹಿತ್ಯದ ಮೇಲೆ

ಪಂಪ, ಅಲ್ಲಮ, ಹರಿಹರ, ಕುಮಾರವ್ಯಾಸ, ಬೇಂದ್ರೆ, ಕುವೆಂಪು ಅವರಿಗಿಂತ, ಹಾವನೂರು ಆಯೋಗದ ಪ್ರಭಾವವೇ ಹೆಚ್ಚಾಗಿ ಅದು ತನ್ನ ಮೂಲ ಅಸ್ಮಿತೆಯ ಬಿಕ್ಕಟ್ಟನ್ನು ಎದುರಿಸಿದ್ದಾಗ ಆಡಿದ ಮಾತುಗಳು; ಅದೂ, ತನ್ನನ್ನು ಒಬ್ಬ ಬ್ರಾಹ್ಮಣ ಎಂದು ಸಾಂಸ್ಕೃತಿಕವಾಗಿಯಾದರೂ ಗುರುತಿಸಿಕೊಳ್ಳುತ್ತಿದ್ದ ಲೇಖಕನೊಬ್ಬ ಅಂದಿನ ಕೂಗುಮಾರಿ ಸಾಹಿತ್ಯ ವಾತಾವರಣದ ಮಧ್ಯೆ ಎಂಬ ಕಾರಣಕ್ಕೂ; ಅವುಗಳ ದಿಟ್ಟತನ ಐತಿಹಾಸಿಕವಾಗಿ ಗಮನಾರ್ಹವೆನಿಸುತ್ತದೆ.

ಆದರೆ ಕೆ.ವಿ.ಸುಬ್ಬಣ್ಣನವರು ತಾವು ಆಗಾಗ್ಗೆ ಪ್ರದರ್ಶಿಸುವ ತಮ್ಮ ಬೌದ್ಧಿಕ 'ವಿಭಿನ್ನತೆ'ಯನ್ನು ಸಾರುವ ಐಲುತನದ ಭಾಗವಾಗಿ (ಇಂತಹ ಐಲುತನದಿಂದಾಗಿಯೇ ಅವರು, ಕನ್ನಡ ರಂಗಭೂಮಿ ಇತಿಹಾಸದಲ್ಲೇ ಒಂದು ಅಪೂರ್ವ ಪ್ರಯೋಗವೆನಿಸಬಹುದಾಗಿದ್ದ 'ಸದಾರಮೆ'ಯಂತಹ ಸಹಜ ಕಂಪನಿ ನಾಟಕವನ್ನು ಬಿ.ವಿ.ಕಾರಂತರಂತಹವರ ಕೈಗೆ ಕೊಟ್ಟೂ, ಅದು ಮಕಾಡೆ ಮಲಗುವಂತೆ ಮಾಡಿದ್ದು ನನಗೆ ನೆನಪಿದೆ.) ಅಂದಿನ ಕಾಲಕ್ಕೆ ತಕ್ಕ 'ರಾಜಕೀಯ ಸರಿತನ'ದ ಭಾಷಣ ಮಾಡುವ ಪ್ರಯತ್ನ ಮಾಡಿ, 'ಶ್ರೇಷ್ಠ ಸಾಹಿತ್ಯ' ಕಲ್ಪನೆ ಕುರಿತ ಚರ್ಚೆಯನ್ನೇ ದಾರಿ ತಪ್ಪಿಸಿದರು. ಬಹುಶಃ ತಾವು ನೀನಾಸಂ ಮೂಲಕ ತಮ್ಮದೇ ರೀತಿಯಲ್ಲಿ ತೊಡಗಿದ್ದ ಸಾಹಿತ್ಯ- ಸಂಸ್ಕೃತಿ ಶ್ರೇಷ್ಠತೆಯ ಆಂದೋಲನದ ಬಗೆಗಿನ 'ಅಪರಾಧ ಭಾವ'ದಿಂದ ಹೊರಬರುವ ಸುಲಭ ಹೊರ ದಾರಿಯಾಗಿ ಅವರು ಈ ಸರಳ 'ಸಮಾಜಮುಖಿ' ನಿಲುವನ್ನು ತಾಳಿರಬಹುದು. ಸುಬ್ಬಣ್ಣ ಆಗಾಗ್ಗೆ ತಮ್ಮನ್ನು ತಾವು ಸಮಾಜವಾದಿ ಎಂದು ಗುರುತಿಸಿಕೊಳ್ಳುತ್ತಿದ್ದವರು ತಾನೇ! ಅವರು ಈ ಭಾಷಣದಲ್ಲಿ 'ಶ್ರೇಷ್ಠ ಸಾಹಿತ್ಯ'ದ ಕಲ್ಪನೆ ಹುಟ್ಟಿಸುವ ಅಮಲಿನ ಬಗ್ಗೆ ಆಡಿದ ಕೆಲವು ಎಚ್ಚರಿಕೆಯ ಮಾತುಗಳು ಗಮನಾರ್ಹವಾದುವಾದರೂ, ಒಟ್ಟಾರೆ ಅದರ ಗಮನ ಬೌದ್ಧಿಕವಾಗಿಯೂ ರೋಚಕವೆನಿಸುವ ಸುಲಭ ಜನಪರತೆಯ ಕಡೆಗೇ ಇತ್ತು ಎಂಬುದನ್ನು ನಾವು ಗಮನಿಸಬೇಕು. 'ಶ್ರೇಷ್ಠತೆ ಸಾಹಿತ್ಯದ ಕಸುಬಿನಲ್ಲಿ ಸಹಜವಾಗಿ ಮೂಡಿಬರುವುದು ಅಪೇಕ್ಷಣೀಯ. ಆದರೆ ಶ್ರೇಷ್ಠತೆ ಸಾಧಿಸಬೇಕು ಎನ್ನುವುದು ವ್ಯಸನವಾಗುವುದು ಅವಶ್ಯಕವೋ?' ಎಂಬ ಅವರ ಗೊಂದಲಕಾರಿಯಾದ ಪ್ರಶ್ನೆ ಯಾರನ್ನು ಉದ್ದೇಶಿದ್ದು ಮತ್ತು ಏಕೆ ಎಂದು ಅರ್ಥವಾಗುವುದಿಲ್ಲ!

ಇದರಿಂದಾಗಿ, ಯಾರೂ ಲಂಕೇಶ್ ಮತ್ತು ಡಿ.ಆರ್. ನಾಗರಾಜರ ಉದ್ದೇಶಗಳ ಬಗ್ಗೆಯಾಗಲೀ ಅಡಿಗರ ಮಾತುಗಳ ಬಗ್ಗೆಯಾಗಲೀ ಚರ್ಚಿಸದೆ, ಸುಬ್ಬಣ್ಣನವರ ಭಾಷಣದ ಶೀರ್ಷಿಕೆಯಿಂದಲೇ ಮತ್ತೇರಿಸಿಕೊಂಡು ಈಗಲೂ ಜನಪರ ಸಾಹಿತ್ಯದ ಜೈಕಾರ ಕೂಗುತ್ತಲೇ ಇದ್ದಾರೆ. ಈ ಮತ್ತಿನಲ್ಲಿ; ಅಡಿಗರ ವಿರುದ್ಧ ಕಟುಮಾತುಗಳನ್ನಾಡಿ ದೂರವಾದ ಮೇಲೆ, ಅವರ ಮತ್ತು ಅವರ ಶಿಷ್ಯರ ವಿರುದ್ಧ ತಾವೇ ಟಂಕಿಸಿದ 'ಬ್ರೇಮಿನ್' ಗುಣವಾಚಕವನ್ನು ರೋಚಕ ಪರಿಣಾಮದೊಂದಿಗೆ ಚಲಾಯಿಸುತ್ತಾ ದೊಡ್ಡ 'ಪ್ರಚಾರಾಂದೋಲನ'ವನ್ನೇ ನಡೆಸಿದ್ದ ಲಂಕೇಶ್‌ಗೆ, ಈ ಸಮ್ಮೇಳನಕ್ಕೆ ಅಡಿಗರನ್ನೇ ಕರೆಸುವ ಅನಿವಾರ್ಯತೆ ಏಕುಂಟಾಯಿತು ಎಂಬ ಬಗ್ಗೆಯೂ ಯಾರೂ ಯೋಚಿಸಿದಂತಿಲ್ಲ. ಹಾಗೇ ಅಡಿಗರು ಈ ಭಾಷಣ ಮಾಡುವ ಹೊತ್ತಿಗೆ ಎಷ್ಟು ದಾರಿ ಸವೆಸಿ, ಏನಾಗಿದ್ದರು ಎಂಬುದರ ಬಗ್ಗೆಯೂ ಯಾರೂ ಅಷ್ಟಾಗಿ

ತಲೆ ಕಡೆಸಿಕೊಂಡಂತಿಲ್ಲ. ಈ ಸಂಬಂಧ ನನ್ನ ಒಂದು ಅನುಭವವನ್ನು ಇಲ್ಲಿ ದಾಖಲಿಸಿದರೆ ತಪ್ಪಾಗಲಾರದು.

ಅಡಿಗರ ಕಾವ್ಯವನ್ನು (ಅದು ನನಗೆ ಅಷ್ಟೇನೂ ಪರಿಚಯವಿಲ್ಲದ ವೈದಿಕ ಸಂಪ್ರದಾಯದ ಕಲ್ಪನೆಗಳು ಮತ್ತು ಪರಿಭಾಷೆಯ ನುಡಿಗಟ್ಟುಗಳಿಂದಾಗಿ ಸರಿಯಾಗಿ ಸಂವಹನವಾಗುತ್ತಿಲ್ಲ ಎಂಬ ಕಾರಣಕ್ಕೆ) ಅಷ್ಟಾಗಿ ಇಷ್ಟಪಡದಿದ್ದ ನಾನು ಅವರನ್ನು ಅವರ ಕೊನೆಯ ದಿನಗಳಲ್ಲೊಮ್ಮೆ (ಆಲನಹಳ್ಳಿ ಕೃಷ್ಣನ ಸಾವಿನ ಸಂದರ್ಭದಲ್ಲಿ ಆಕಾಶವಾಣಿಗಾಗಿ ನಾನು ರೂಪಿಸಿದ ಕಾರ್ಯಕ್ರಮವೊಂದಕ್ಕಾಗಿ ಅವರಿಂದ ಕೆಲವು ನೆನಪಿನ ಮಾತುಗಳನ್ನು ಧ್ವನಿಮುದ್ರಿಸಿಕೊಳ್ಳಲು) ಅವರ ಮನೆಯಲ್ಲೊಮ್ಮೆ ಭೇಟಿಯಾಗಿದ್ದೆ. ಆ ಸಂದರ್ಭದಲ್ಲಿ ಹೀಗೇ ಸಣ್ಣದಾಗಿ ಸಾಹಿತ್ಯ ಚರ್ಚೆ ಆರಂಭವಾಗಿ, ನಾನು ಮಾತುಗಳ ಮಧ್ಯೆ 'ನಿಮ್ಮ ಇತ್ತೀಚಿನ ಕವನಗಳು ನನಗೆ ತುಂಬಾ ಇಷ್ಟವಾಗುತ್ತವೆ' ಎಂದೆ. ನಾನು ಅವರ 'ಚಿಂತಾಮಣಿಯಲ್ಲಿ ಕಂಡ ಮುಖ'ದ ಕೆಲವು ಪದ್ಯಗಳನ್ನು ಉಲ್ಲೇಖಿಸಿದೆ. ತಕ್ಷಣ ಅವರ ಮುಖದಲ್ಲಿ ಕಿರುನಗೆ ಮೂಟಿದೆದ್ದು, 'ಯಾಕೇಂದ್ರೆ ಅವುಗಳಲ್ಲಿ ನವ್ಯದ ವಾಸನೆ ಕಡಿಮೆಯಾಗಿದೆ ಕಣಯ್ಯ!' ಎಂದು ನನ್ನನ್ನು ದಂಗು ಬಡಿಸಿದರು. (ಇದನ್ನು ನಾನು 'ಸಾಹಿತ್ಯ ಸಂವಾದ'ಕ್ಕಾಗಿ ಮಾಡಿದ ಅವರ 'ಸುವರ್ಣ ಪುತ್ಥಳಿ' ಕವನ ಸಂಕಲನದ ವಿಮರ್ಶೆಯಲ್ಲೂ ಉಲ್ಲೇಖಿಸಿದ್ದೇನೆ)[೨] ನನ್ನ ಪ್ರಕಾರ ಆ ಹೊತ್ತಿಗೆ ಅಡಿಗರಿಗೇ ನವ್ಯದ ಮತ್ತು ಅದರ ಹೆಸರಿನಲ್ಲಿ ನಡೆದ ಚಳುವಳಿಯ ಮಿತಿಗಳು, ಅನಾಹುತಗಳು ಗೊತ್ತಾಗಿದ್ದವು.

ಅಡಿಗರೊಂದಿಗೆ ಅಂದು ಮಾತಾಡಿದ ನನಗೆ ಅನ್ನಿಸಿದ ಇನ್ನೊಂದು ಅಂಶವೆಂದರೆ, ಅವರು ಜನಸಂಘ ಮತ್ತು ಆನಂತರ ಭಾಜಪದ ಅಭ್ಯರ್ಥಿಯಾಗಿ ಚುನಾವಣೆಗಳಲ್ಲಿ ಭಾಗವಹಿಸಿದ್ದರ ಹಿಂದೆ ಹೆಚ್ಚು ಕಾಂಗ್ರೆಸ್ ವಿರೋಧಿ ಧೋರಣೆ ಇರಬಹುದೇ ಹೊರತು (ಅವರು ಆರಂಭದಲ್ಲಿ ಲೋಹಿಯಾ ಅಭಿಮಾನಿಯಾಗಿದ್ದರು ಎಂಬುದನ್ನು ಗಮನಿಸಬೇಕು.), ಹಿಂದುತ್ವವಲ್ಲ ಎಂಬುದು.[೩] ಅವರ ಕಾಂಗ್ರೆಸ್ ವಿರೋಧಿ ಧೋರಣೆ ಕಾಲಕ್ರಮದಲ್ಲಿ ವಿಮರ್ಶಾತ್ಮಕವಾಗದೆ ಕುರುಡಾಗಿ, ಅವರನ್ನು ಹಿಂದುತ್ವದ ಕಡೆಗೆ ತಳ್ಳಿರಬಹುದು. ಈ ಮಧ್ಯೆ ಅವರು ಬರೆದ 'ಮತ್ತೆ ಮೊಳಗಲಿ ಪಾಂಚಜನ್ಯ', 'ನಾನು ಹಿಂದೂ, ನಾನು ಬ್ರಾಹ್ಮಣ'ದಂತಹ ಅಗ್ಗದ ಪದ್ಯಗಳು, ಅವರು ಆಂತರ್ಯದಲ್ಲಿ ಎದುರಿಸುತ್ತಿದ್ದ ಈ ರಾಜಕೀಯ ಆಯ್ಕೆಯ ಬಿಕ್ಕಟ್ಟಿನಿಂದ (ನವ್ಯ ಕಾವ್ಯ ಕುರಿತ ನನ್ನ ಸೀಮಿತ ತಿಳುವಳಿಕೆ ಪ್ರಕಾರ, ಅವರ ಶಿಖರ ಕಾಲದ ಮುಖ್ಯ ರಚನೆಗಳು ಎಂದು ಹೇಳಲಾಗುವ ಸರಿ ಸುಮಾರು ಎಲ್ಲ ಕವನಗಳಲ್ಲೂ ಇದು ಕಾಣುವಂತಿದ್ದು, ಇದೇ ಅವುಗಳ ಶಿಲ್ಪ ಸೌಂದರ್ಯಕ್ಕೂ, ಅನುಮಾನಾಸ್ಪದ ತಾತ್ವಿಕತೆಗೂ ಕಾರಣವಾಗಿರುವಂತಿದೆ.) ಪಾರಾಗಲು ಆರಿಸಿಕೊಂಡ ಸುಲಭ ಮಾರ್ಗದ ಫಲಗಳಾಗಿ ಮಾತ್ರ ನನಗೆ ಕಾಣುತ್ತವೆ.[೩] ಆ ಮಟ್ಟಿಗೆ ಅಡಿಗರು ರಾಜಕೀಯ ವ್ಯಕ್ತಿತ್ವವಾಗಿ ದುರ್ಬಲರೆಂದೇ ಹೇಳಬೇಕು. ವ್ಯಕ್ತಿತ್ವದ ಈ ಬಿರುಕು ನವ್ಯದ ಹೆಗ್ಗುರುತಾಗಿದ್ದು, ಇದು ಲಂಕೇಶರನ್ನೂ ಸೇರಿದಂತೆ ಈ ಚಳುವಳಿಯ ಸಂಪರ್ಕಕ್ಕೆ ಬಂದ ಯಾರನ್ನೂ ಕಾಡದೇ ಬಿಟ್ಟಿಲ್ಲ ಎಂಬುದನ್ನು ನಾವು

ಗಮನಿಸಬೇಕು. ಲಂಕೇಶರ ಸಾಹಿತ್ಯದಲ್ಲಿ ಮಾತ್ರವಲ್ಲ, ಪತ್ರಿಕೋದ್ಯಮದ ಬದುಕಿನಲ್ಲೂ ಇಂತಹ ಹಲವಾರು ಬಿರುಕು– ದೌರ್ಬಲ್ಯಗಳನ್ನು (ಆದರೆ ಇವು ಮಂಜುನಾಥ್ ಲತಾ–ಐಜೂರರಿಗೆ ಮಾತ್ರ ತಮ್ಮ ಬರಹದ ಧಾಟಿಯನ್ನು ಸಮರ್ಥಿಸಿಕೊಳ್ಳಲು ಆಧಾರವಾಗಿರುವುದು, ಇವೊತ್ತಿನ ಸಾಹಿತ್ಯ– ಸಾಂಸ್ಕೃತಿಕ ಚರ್ಚೆಗಳು ಹಿಡಿದಿರುವ ಅಡ್ಡದಾರಿಯನ್ನು ಸೂಚಿಸುತ್ತದಷ್ಟೆ!) ನಾವು ಗಮನಿಸಬಹುದು.[೪] ಇದು ಲಂಕೇಶರಿಗೇನೂ ಗೊತ್ತಿರಲಿಲ್ಲವೆಂದಲ್ಲ. ಹಾಗೇ ಅಡಿಗರ ದೌರ್ಬಲ್ಯಗಳೂ, ಶಕ್ತಿಗಳೂ.

ಇದನ್ನೆಲ್ಲ ಇಲ್ಲಿ ಏಕೆ ಹೇಳಬೇಕಾಯಿತೆಂದರೆ, 'ಶ್ರೇಷ್ಠ ಸಾಹಿತ್ಯ' ಎಂಬುದು ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಅಂದು ಅಗತ್ಯವಾಗಿದ್ದ ಕಲ್ಪನೆಯಾಗಿತ್ತು ಮತ್ತು ಅದು ಕನ್ನಡ ಸಾಹಿತ್ಯದ ಏಳುಬೀಳುಗಳ ಮಧ್ಯೆ ನಮ್ಮ ಕಾಲದ ಇಬ್ಬರು ಗಂಭೀರ ಸಾಹಿತ್ಯ ಕುಶಲ ಕರ್ಮಿಗಳ ಸಾಕ್ಷ್ಯದಲ್ಲಿ ಕಮ್ಮಟಗೊಂಡು ಮೂಡಿದುದಾಗಿತ್ತು ಎಂಬುದನ್ನು ಸೂಚಿಸಲು. ಆದರೆ ಇಂದು ಅದನ್ನು ಹಾಗೆಯೇ– ಸಂದರ್ಭದಿಂದ ಕಿತ್ತು– ಎತ್ತಿಕೊಂಡು ಚರ್ಚಿಸ ಹೊರಟರೆ ದಾರಿ ತಪ್ಪುತ್ತೇವೆ. 'ದೇಶಕಾಲ'ದ ಬಗ್ಗೆ ನಡೆದಿರುವ ಈ ಚರ್ಚೆಯ ಎರಡೂ ಬದಿಗಳ ಹಿಂದಿರುವ ಮುಖ್ಯ ತೊಂದರೆ ಇದೇ ಎನ್ನಿಸುತ್ತದೆ. ಏಕೆಂದರೆ, ಎರಡೂ ಕಡೆಯವರು ಅದನ್ನು ನೇರವಾಗಿ, ಸ್ಪಷ್ಟವಾಗಿ ಹೇಳಿಕೊಳ್ಳದಿದ್ದರೂ, 'ದೇಶಕಾಲ'ವು 'ಶ್ರೇಷ್ಠ ಸಾಹಿತ್ಯ'ದ ರಾಜಕಾರಣ ಮಾಡುತ್ತಾ ತನ್ನ 'ಪ್ರತಿಷ್ಠೆ'ಯನ್ನು ಮೆರೆದಿದೆ ಎಂಬ ಆಕ್ರೋಶ ಮಂಜುನಾಥ್– ಐಜೂರು ಮತ್ತು ಅವರ ಬೆಂಬಲಿಗ ಗೆಳೆಯರ ಬರಹದ ಹಿಂದೆ ಕಂಡರೆ; ಕೆ. ಫಣಿರಾಜ್– ಜಿ. ರಾಜಶೇಖರ್‌ರ ಪ್ರತಿಕ್ರಿಯೆ ಅದೇ 'ಶ್ರೇಷ್ಠ ಸಾಹಿತ್ಯ'ದ ಕಲ್ಪನೆಯನ್ನು, ಅದರ ತರ್ಕ ಮತ್ತು ಪರಿಭಾಷೆಯನ್ನು ನಂಬಿ, ಸಾಹಿತ್ಯ ಕುರಿತ ಎಲ್ಲ ಮಾತುಗಳೂ ವಿಮರ್ಶೆಯ ಭಾಷೆಯಲ್ಲಿರಬೇಕು ಎಂದು ನಿರೀಕ್ಷಿಸುತ್ತದೆ. ರಾಜಶೇಖರರ ಖಡಕ್ ವಾದವಂತೂ, 'ನವ್ಯದ ಗುಡಿಯ ಜೀರ್ಣೋದ್ಧಾರ'ಕ್ಕಾಗಿ ಚಂದಾ ಎತ್ತಲು 'ಎಚ್ಚರಿಕೆ!'ಯ ಕರಪತ್ರ ಬರೆದ ಹಾಗೆ ಪದೇ ಪದೇ ಅಡಿಗರ ಕಾವ್ಯ ಮತ್ತು ಮಾತುಗಳನ್ನು ಉಲ್ಲೇಖಿಸುತ್ತಾ ತನ್ನ ವಾದವನ್ನು ವಿಸ್ತರಿಸಿಕೊಳ್ಳುತ್ತಾ ಹೋಗುತ್ತದೆ. ಹಾಗಾಗಿಯೇ ಈ ಚರ್ಚೆಯಲ್ಲಿ ಎರಡೂ ಕಡೆ ಪದೇ ಪದೇ ಅಡಿಗ– ಲಂಕೇಶ– ಸುಬ್ಬಣ್ಣರ ಕಾಲದ 'ಶ್ರೇಷ್ಠ ಸಾಹಿತ್ಯ' ಕಲ್ಪನೆ ಕುರಿತ 'ಮೌಲಿಕ' ಚರ್ಚೆಗಳ ಉಲ್ಲೇಖಗಳು ಬರುತ್ತದೆ.

ಇದು ನನ್ನ ಪ್ರಕಾರ ಅಸಂಗತ ಪ್ರಲಾಪ. ಏಕೆಂದರೆ ಇಂದು ಸಂದರ್ಭ ಬದಲಾಗಿದೆ. 'ಶ್ರೇಷ್ಠ ಸಾಹಿತ್ಯ'ದ ಚರ್ಚೆಯನ್ನು ಮುನ್ನೆಲೆಗೆ ತಂದ ಬಂಡಾಯ ಮೊಂಡಾಗಿ, ವೈವಿಧ್ಯಮಯ ಹಿನ್ನೆಲೆಗಳುಳ್ಳ ಹೊಸ ತಲೆಮಾರಿನ ಅನೇಕ ಲೇಖಕ– ಲೇಖಕಿಯರು ಯಾರ ಮತ್ತು ಯಾವ ಮರ್ಜಿಗೂ ಸಿಗದೆ ವೈವಿಧ್ಯಮಯ ಬಣ್ಣ ಬೆಡಗುಗಳೊಂದಿಗೆ ತಮ್ಮಷ್ಟಕ್ಕೆ ತಾವು ಬರೆಯುತ್ತಾ, ವಿಮರ್ಶೆಯ ಹೊಸ ಪರಿಭಾಷೆಯನ್ನೇ ಒತ್ತಾಯಿಸುವಷ್ಟು ಸಾಹಿತ್ಯ ಸಂದರ್ಭ ಚಲನಶೀಲವಾಗಿದೆ.[೫] ನನಗಂತೂ ಇದು ತೇಜಸ್ವಿ ತಮ್ಮ 'ಅಬಚೂರಿನ ಪೋಸ್ಟಾಫೀಸು' ಕಥಾ ಸಂಗ್ರಹಕ್ಕೆ 'ಹೊಸ ದಿಗಂತದೆಡೆಗೆ' ಶೀರ್ಷಿಕೆಯಲ್ಲಿ ಬರೆದಿದ್ದ ಮುನ್ನುಡಿಯ ಮಾತುಗಳ ವಿಸ್ತರಣೆಯಾಗಿ 'ಮಾಯಾಲೋಕ– ೧'ರ ಲೇಖಕರ ಮಾತುಗಳಲ್ಲಿ ಸೂಚಿಸಿದ 'ಹೊಸ

ಕಾಲದ ಹೊಸ ನುಡಿಗಟ್ಟುಗಳ, ಉಕ್ತಿಭಂಗಿಗಳ ಹಾಗೂ ಅಭಿವ್ಯಕ್ತಿ ವಿಧಾನಗಳ' ಅನ್ವೇಷಣೆಯ ತಹತಹದಂತೆಯೇ ಕಾಣುತ್ತದೆ. ಏಕೆಂದರೆ ನನಗೆ ತಿಳಿದಂತೆ ಕಳೆದ ಇಪ್ಪತ್ತೈದು– ಮುವ್ವತ್ತು ವರ್ಷಗಳಲ್ಲಿ ಕನ್ನಡ ಸಾಹಿತ್ಯವನ್ನು ಜಾತಿ– ಮತ– ವರ್ಗ ಹಾಗೂ ಸಾಹಿತ್ಯ– ಸಾಹಿತ್ಯೇತರ ಹಿನ್ನೆಲೆಗಳ ಬೇಧವಿಲ್ಲದೆ; ಹಾಗಾಗಿ 'ಸಾಹಿತ್ಯ ಮೀಮಾಂಸೆ'ಯ ಬೌದ್ಧಿಕ ಕಾಟವಿಲ್ಲದೆ ಯಾರಾದರೂ ಏಕಾಕಿಯಾಗಿ ಪ್ರಭಾವಿಸಿ ನಿರ್ದೇಶಿಸಿದ್ದರೆ, ಅವರು ತೇಜಸ್ವಿಯವರೇ. ತಮ್ಮ ವಿಫುಲವಾದ 'ಅ– ಶ್ರೇಷ್ಠ' ಮತ್ತು 'ಅ– ಮೌಲಿಕ' ಸಾಹಿತ್ಯದ ಮೂಲಕ. ಹಾಗಾಗಿಯೇ ಕೆಲ ಅಡಿಗ ಪುನರುತ್ಥಾನವಾದಿ 'ಸಾಹಿತ್ಯ ನಿಷ್ಠುರ' ವಿಮರ್ಶಕರು ಅವರನ್ನು ಅನಂತಮೂರ್ತಿ– ಲಂಕೇಶರಿಗೆ ಹೋಲಿಸಿ, ಅವರು ('ಶ್ರೇಷ್ಠ')ಸಾಹಿತಿಯೇ ಅಲ್ಲ ಎಂದು ತಮಗೆ (ವಿಶ್ವಾಸವಿದ್ದವರ ಬಳಿ ಕಿವಿಯಲ್ಲಿ)ಹೇಳುವುದುಂಟು. ಇರಲಿ, ಈ ವಿಷಯಕ್ಕೆ ಮತ್ತೆ ಬರೋಣ.

– ೩–

ಮೊದಲಾಗಿ 'ದೇಶಕಾಲ', ನಿರ್ದಿಷ್ಟವಾಗಿ ಅದರ ವಿಶೇಷಾಂಕ; ನಾನು ಈಗಾಗಲೇ ಸೂಚಿಸಿದ ಹಾಗೆ, 'ಶ್ರೇಷ್ಠ ಸಾಹಿತ್ಯ'ದ ಕಲ್ಪನೆಯನ್ನು ನಂಬಿ ರೂಪುಗೊಂಡಿಲ್ಲ. ನಂಬಿಯೇ ರೂಪುಗೊಂಡಿರುವುದು ಎಂದು ಯಾರಾದರೂ ಸಂಪಾದಕರ ಮೇಲೆ 'ಮಂಪರು ಪರೀಕ್ಷೆ' ನಡೆಸಿ ಕಂಡು ಹಿಡಿದಿದ್ದರೂ, ಅದರ ಕುರುಹುಗಳು ಸಂಚಿಕೆಯಲ್ಲಿ ಕಾಣುವುದಿಲ್ಲ. ಇದರ ಬಗ್ಗೆ ನಾನು ಹೆಚ್ಚು ಮಾತಾಡಲು ಹೋಗುವುದಿಲ್ಲ. ಏಕೆಂದರೆ, ಈ ಪತ್ರಿಕೆಯ ಬಗ್ಗೆ ತಮ್ಮ ಪ್ರತಿಕ್ರಿಯೆಗಳುದ್ದಕ್ಕೂ ಕಾಣುವ ಹಾಗೆ ವಿಪರೀತ ಅಭಿಮಾನವಿಟ್ಟವರಂತೆ ತೋರುವ ರಾಜಶೇಖರರು, 'ಎಲ್ಲಿ, ನಿಮ್ಮ ಈ ಮಾತಿಗೆ ಪಠ್ಯದ ಸಾಕ್ಷ್ಯ ನೀಡಿ' ಎಂದು ಕೇಳಿಯಾರು! ಆದುದರಿಂದ ಅವನ್ನೆಲ್ಲ ಬಿಟ್ಟು, ಸಂಪಾದಕರು ಆರಿಸಿರುವ ೨೧ನೇ ಶತಮಾನದ ೨೧ ಲೇಖಕರ ಮತ್ತು ೨೧ ಕೃತಿಗಳ ಪಟ್ಟಿಯ ಹಿಂದಿನ ಯೋಜನೆಯ ರೀತಿ– ನೀತಿಗಳನ್ನಷ್ಟೇ ನೋಡೋಣ. ಈ ಪಟ್ಟಿಯ ಹೆಸರುಗಳ, ಕೃತಿಗಳ ಆಯ್ಕೆಯ ಹಿಂದಿರುವ ನ್ಯಾಯಾನ್ಯಾಯಗಳ ವಿಷಯ ಬೇಡ (ಮತ್ತೆ ಅದಕ್ಕೆ ರಾಜಶೇಖರ್ ಸಾಕ್ಷ್ಯ ಕೇಳಿಯಾರು!); ಅದರ ಕಲ್ಪನೆಯ ಹಿಂದಿನ ಧಾರ್ಷ್ಟ್ಯವನ್ನು ನೋಡಿದರೇ ಈ ಸಂಚಿಕೆಯ ಆಯೋಜಕರ ಅಡ್ಡಕಸುಬಿತನ ಕಾಣುತ್ತದೆ. ೨೧ನೇ ಶತಮಾನದ ಹತ್ತನೇ ಒಂದು ಭಾಗವೂ ಮುಗಿದಿಲ್ಲದಿರುವಾಗ ಮತ್ತು ಒಬ್ಬ ಮನುಷ್ಯನ ಬರಹದ ಬದುಕೇ ಸರಾಸರಿ ೪೦– ೫೦ ವರ್ಷ ಇರುವಾಗ, ಇವರು ಮುಂದಿನ ನೂರು ವರ್ಷಗಳ ಸಾಹಿತ್ಯದ ಬಗ್ಗೆ, ಕೃತಿಗಳ ಬಗ್ಗೆ ಮಾತನಾಡಬಲ್ಲ (ಆ ಮಾತು ಎಂತಹುದೇ ಆಗಿರಲಿ) ಧೈರ್ಯ ಮಾಡುತ್ತಾರೆಂದರೆ ಇವರನ್ನು ತಲೆ ಕೆಟ್ಟವರೆಂದು ನಿರ್ಲಕ್ಷಿಸಬೇಕೋ ಅಥವಾ ಇದರ ಹಿಂದಿನ ಅಪ್ರಬುದ್ಧ 'ಸಾಹಿತ್ಯ ರಾಜಕಾರಣ'ವನ್ನು ಕಂಡು ಹೇಸಬೇಕೋ ತಿಳಿಯದಾಗುತ್ತದೆ!

ಜೊತೆಗೆ ಈ ೨೧ ಜನ ಲೇಖಕ/ಲೇಖಕಿಯರ ಬಗ್ಗೆ ಇವರೇ ಅಥವಾ ಇವರ ಸಂಪಾದಕೀಯ ಬಳಗದ ಯಾರಾದರೂ ಬರೆಯದೆ, ಈ ಆಯ್ಕೆಗೆ ಸಂಬಂಧವೇ ಇಲ್ಲದ ಮತ್ತು ಯಾವ ಉದ್ದೇಶಕ್ಕಾಗಿ ತಾವು ಬರೆಯುತ್ತಿದ್ದೇವೆ ಎಂಬುದು ಗೊತ್ತಿಲ್ಲದೇ ಇರುವವರಿಂದ

ಬರೆಸುವ ಹುನ್ನಾರ ಬೇರೆ! ಬರಿ ಹುನ್ನಾರವೇನು, ಕೆಟ್ಟ ರಾಜಕಾರಣವಿದು. ನನ್ನ ಪತ್ನಿಗೂ ಹೀಗೆ ಯಾಕೆಂದು ಗೊತ್ತಿಲ್ಲದೆ ಒಬ್ಬ ಕವಿ/ಕವಯತ್ರಿಯ ಬಗ್ಗೆ ಬರೆಯುವ ಆಹ್ವಾನ ಬಂದಿದ್ದುದರಿಂದ; ಆದರೆ ಆಕೆಗೆ ಆ ಆಹ್ವಾನದ ಈ ಪರಿಯಲ್ಲೇ ಇದ್ದ 'ರಾಜಕಾರಣ'ದ ವಾಸನೆ ಬಡಿದೋ ಏನೋ ನಿರಾಕರಿಸಿದ್ದರಿಂದ ಇದು ನನಗೆ ಗೊತ್ತಾಯಿತಷ್ಟೆ. ಈ ಸಂಬಂಧ ನನಗೆ ತಿಳಿದುಬಂದ ಇನ್ನೊಂದು ಸಂಗತಿಯೆಂದರೆ, ನನ್ನ ಪತ್ನಿಯಂತೆಯೇ ಹಲವು ಲೇಖಕರು ಬರೆಯಲು ನಿರಾಕರಿಸಿದ್ದರಿಂದಾಗಿ, ತಮ್ಮ ಈ ಆಯ್ದ ೨೧ ಜನ ಲೇಖಕರಲ್ಲಿ ಹಲವರ ಬಗ್ಗೆ ಈ ಪತ್ರಿಕೆಯ ಸಂಪಾದಕ ಬಳಗ ಯಾರನ್ನು ಸಾಹಿತ್ಯದ ಗಂಧ– ಗಾಳಿ ಇಲ್ಲದವರು ಎಂದು ಪರಿಗಣಿಸಿ ನಿರ್ಲಕ್ಷಿಸಿತ್ತೋ, ಕೊನೆಗೆ ಅಂತಹವರನ್ನೇ ಕಾಡಿ ಬೇಡಿ, ಪುಸಲಾಯಿಸಿ ಬರೆಯಿಸಿದ್ದಾರೆ! ಇನ್ನು ಈ ಇಡೀ ಯೋಜನೆಯ ಮಟ್ಟ ಎಲ್ಲಿಗೆ ಇಳಿದಿರಬಹುದು ಯೋಚಿಸಿ!

ಬಹುಶಃ ಇದನ್ನು ತಿಳಿದೇ– ತಮ್ಮ ಈ ಗುಪ್ತ ರಾಜಕೀಯ ಸಾಹಸ ಹಾಸ್ಯಾಸ್ಪದ ರೀತಿಯಲ್ಲಿ ವಿಫಲಗೊಂಡಿದ್ದರಿಂದಾದ ಮುಜುಗರವನ್ನು ಮರೆಮಾಚಿಕೊಳ್ಳಲೆಂದೇ– ಸಂಪಾದಕ ಮಂಡಳಿಯವರು, ಕೆಲವರು ಪತ್ತೇದಾರಿ ನಡೆಸಿ ಹೇಳುತ್ತಿರುವಂತೆ, ತಮ್ಮ ಈ 'ಉತ್ಪನ್ನ'ದ ಬಿಡುಗಡೆಗಾಗಿ ಮಾಧ್ಯಮಗಳ ಮೇಲೆ ಕಾರ್ಪೋರೇಟ್ ಸಂಸ್ಥೆಗಳು ಅನುಸರಿಸುವ ಅತ್ಯಾಧುನಿಕ ಮಾದರಿಯ 'ಸಂಪನ್ಮೂಲ'ಗಳನ್ನೇ ಬಳಸಿ ಭರ್ಜರಿ ಪ್ರಚಾರ ಪಡೆದಿರಬಹುದು! ಆದರೆ ಇದೇ ಅವರಿಗೆ ಮುಳುವಾಗಿ, ನಮ್ಮಂತಹವರ ಕೆಟ್ಟ ಕಣ್ಣು (ಮತ್ತು ಮಂಜುನಾಥ್ ಲತಾ– ಐಜೂರರಂತಹ ಹಲವರ 'ದುಷ್ಟ' ಕಣ್ಣೂ?) ಅವರ ಮೇಲೆ ಬೀಳುವಂತೆಯೂ ಆಗಿಬಿಟ್ಟಿತಲ್ಲಾ? ಅದೇನೇ ಇರಲಿ, 'ದೇಶಕಾಲ'ದ ಈ ಪ್ರಯತ್ನ ಬಂಡಾಯದ ಕೆಲವರು ಮಾಡಿದ ಪ್ರಯತ್ನದಂತೆಯೇ ಸಾಹಿತ್ಯಕ್ಕೆ ಹಾನಿ ಮಾಡುವ ಪ್ರಯತ್ನವೇ ಆಗಿದೆ. ವಾಸ್ತವ ಹೀಗಿರುವಾಗ ಈ ಪತ್ರಿಕೆಯ ಮೇಲೆ 'ಶ್ರೇಷ್ಠ ಸಾಹಿತ್ಯ'ದ ರಾಜಕಾರಣ ಮಾಡುತ್ತಿದ್ದಾರೆ ಎಂದು ಆರೋಪ ಮಾಡಿದರೆ ಅದಕ್ಕಿಂತ ಹಾಸ್ಯಾಸ್ಪದ ಸಂಗತಿ ಇನ್ನೊಂದಿರಲಾರದು!

ಇನ್ನು ಪತ್ರಿಕೆಯಲ್ಲಿ/ವಿಶೇಷಾಂಕದಲ್ಲಿ ಬ್ರಾಹ್ಮಣ ಲೇಖಕರ ಸಂಖ್ಯೆ ಹೆಚ್ಚಾಗಿದೆ (ಅರುಣ್ ಜೋಳದಕೂಡ್ಲಿಗಿಯವರ ಭಾಷೆಯಲ್ಲಿ, 'ಬ್ರಾಹ್ಮಣರ ಲಾಬಿ') ಎನ್ನುವ ಆಧಾರದ ಮೇಲೆ 'ಶ್ರೇಷ್ಠತೆಯ ವ್ಯಸನ'ದ ಆರೋಪ ಮಾಡಿದರೆ, ಅದು ಲಂಕೇಶ್ ನಂಬಿದ್ದ 'ಶ್ರೇಷ್ಠ ಸಾಹಿತ್ಯ'ದ ಕಲ್ಪನೆಗೇ ಮಾಡುವ ಅವಮಾನ. ಹಾಗಾಗಿ, ಇದರ ಮೇಲೆ ಹೆಚ್ಚೆಂದರೆ ಸುಪ್ತ (ಮೇಲ್)ಜಾತೀಯತೆಯ ಆರೋಪ ಮಾಡಿ ತೃಪ್ತಿ ಪಟ್ಟುಕೊಳ್ಳಬಹುದು. ಆದರೆ ಇಂದು 'ಸಾಮಾಜಿಕ ನ್ಯಾಯ'ದ ರಾಜಕಾರಣ ಸಾಹಿತ್ಯ ಕ್ಷೇತ್ರಕ್ಕೂ ಹಬ್ಬಿ ಅಕಾಡೆಮಿ ಅಧ್ಯಕ್ಷತೆ, ಸದಸ್ಯತ್ವ, ಬಹುಮಾನ– ಪ್ರಶಸ್ತಿ ಇತ್ಯಾದಿ ಬಹುತೇಕ ಅಧಿಕೃತ ಮಾನ್ಯತೆಗಳು ಸಾಹಿತ್ಯ ನ್ಯಾಯವೊಂದನ್ನು ಬಿಟ್ಟು 'ಸಾಮಾಜಿಕ ನ್ಯಾಯ'ದ ವಿವಿಧ ಶಾಖೆಗಳಿಗೆ ಸಂಬಂಧಿಸಿದ 'ನ್ಯಾಯ'ಗಳ ಹೆಸರಲ್ಲಿ ಬಹುಪಾಲು ಅಯೋಗ್ಯರ ಪಾಲಾಗುತ್ತಾ, ಸಾರ್ವಜನಿಕರಲ್ಲಿ ಸಾಹಿತ್ಯದ ಗುಣಾತ್ಮಕತೆ ಕುರಿತಂತೆ ಗಂಭೀರ ಸಂದೇಹಗಳು ಸೃಷ್ಟಿಯಾಗುತ್ತಿರುವ ದಿನಗಳನ್ನು ನಾವು ನೋಡುತ್ತಿದ್ದೇವೆ. ಹಾಗಾಗಿ ಇದು ಇಂದಿನ ಈ ಸಂದರ್ಭಕ್ಕೆ ಪತ್ರಿಕೆ ತೋರಿಸುತ್ತಿರುವ ತನ್ನದೇ ರೀತಿಯ ಪ್ರತಿಕ್ರಿಯೆ

ಯಾಕಾಗಿರಬಾರದು? (ಅಥವಾ ಪತ್ರಿಕೆಯ ಆರಂಭದ ಹಿಂದಿನ ಸ್ಫೂರ್ತಿಯೇ ಇದಾಗಿರಬಹುದು, ಯಾರಿಗೆ ಗೊತ್ತು?) ತೇಜಸ್ವಿ ಪ್ರಕಾರ ಇಂದು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಮೀಸಲು ಏನಾದರೂ ಅಗತ್ಯವಿದ್ದರೆ ಅದು ಬ್ರಾಹ್ಮಣರಿಗೆ ಅಗತ್ಯವಾಗಿದೆ.[೬] ಅದನ್ನು 'ದೇಶಕಾಲ' ಅರ್ಥ ಮಾಡಿಕೊಂಡು ಜಾರಿಗೆ ತಂದಿರಲೂಬಹುದು!

– ೪ –

ಇರಲಿ. ಈ ಚರ್ಚೆಯಲ್ಲಿ ನನಗೆ ಮೊದಲಿಗೇ ಎದ್ದು ಕಾಣುವ ದುಃಖ, ವಿಷಾದದ ಸಂಗತಿ ಎಂದರೆ, ಮಂಜುನಾಥ್ ಲತಾ– ಐಜೂರರ ಲೇಖನವನ್ನು, ಅದರಲ್ಲಿನ ಪ್ರತಿ ವಾತನ್ನೂ ಫಣಿರಾಜ್– ರಾಜಶೇಖರರು ವಿಮರ್ಶೆಯೆಂದು (ಅದು ಸೂಕ್ತ ಪರಿಭಾಷೆಯಲ್ಲಿಲ್ಲವೆಂದು ದೂರುತ್ತಲೇ!) ಬಗೆದು, ಸಹಜವಾಗಿಯೇ ಅದಕ್ಕೆ ಉತ್ತರಿಸಲಾಗದ ಹತಾಶೆ– ಕ್ರೋಧಗಳಿಗೆ ತಮ್ಮನ್ನು ತಾವು ತೆತ್ತುಕೊಂಡಿರುವುದು. ಆದರೆ ನನಗೆ ಅದು ಮೊದಲ ನೋಟಕ್ಕೇ ದಿಕ್ಕು ದೆಸೆಯಿಲ್ಲದ ಸಾರ್ವಜನಿಕ ದೂರು– ಬೈದಾಟಗಳು ತುಂಬಿದ ದೊಡ್ಡ ರಂಪದಂತೆ ಕಂಡಿದೆ. ಹಾಗಾಗಿಯೇ ನಾನು ಅದಕ್ಕೆ ಪ್ರತಿಕ್ರಿಯಿಸಬೇಕಾಗಿಲ್ಲ; ಪ್ರತಿಕ್ರಿಯಿಸಬೇಕಾದವರು ಬೇರೆ ಇದ್ದಾರೆ ಎಂದು ಸುಮ್ಮನಾದೆ. ನನ್ನ ಆಶ್ಚರ್ಯಕ್ಕೆ, ಇದಕ್ಕೆ ಯಾರು ಪ್ರತಿಕ್ರಿಯಿಸಬೇಕಿತ್ತೋ (ಪ್ರತಿಕ್ರಿಯಿಸಬೇಕೆನಿಸಿದರೆ) ಅವರು ಪ್ರತಿಕ್ರಿಯಿಸದೆ, ಈ ಇಬ್ಬರು ಪ್ರತಿಕ್ರಿಯಿಸಿದ್ದಾರೆ! ಅದೂ ಕತ್ತಿವರಸೆಯ ಆವೇಶದೊಂದಿಗೆ... ಇದರಿಂದಾಗಿ, ಇವರು ಈ ರಂಪವಾದರೂ ಏಕೆ ಹುಟ್ಟಿಕೊಂಡಿದೆ ಎಂದು ಯೋಚಿಸುವ, ಅದರ ಹಿಂದಿನ ಪ್ರವೃತ್ತಿಗಳನ್ನೂ, ಕಾರಣಗಳನ್ನು ಗುರುತಿಸಿ ಅವಕ್ಕೆ ನೇರವಾಗಿ ಪ್ರತಿಕ್ರಿಯಿಸುವ ಮೂಲಕ ಚರ್ಚೆಯನ್ನು ಆರಂಭದ ಹಂತದಲ್ಲೇ ಮುಕ್ತಾಯಗೊಳಿಸುವ ಸಹನೆ– ವ್ಯವಧಾನಗಳನ್ನು ಸಂಘಟಿಸಿಕೊಳ್ಳಲಾಗದೆ, ಸುಖಾಸುಮ್ಮನೆ ತಮ್ಮ ದೌರ್ಬಲ್ಯಗಳನ್ನು ಬಯಲು ಮಾಡಿಕೊಳ್ಳಲು ಅವಕಾಶ ಕಲ್ಪಿಸಿಕೊಂಡಿದ್ದಾರೆ. ಈ ತಪ್ಪು ಹೆಜ್ಜೆಯಿಂದಾಗಿ ಇವರ ವಾದಗಳೂ ಒಂದೇ ಸಮನೆ ತಪ್ಪು ಹೆಜ್ಜೆಗಳನ್ನಿಡುತ್ತಾ ಹೋಗಿವೆ. ಕೆಲವೆಡೆ ಅನುಮಾನಾಸ್ಪದವೆನ್ನಿಸುವಂತೆ ಕೂಡಾ. ಇದು ನನ್ನಲ್ಲಿ ಸಾಕಷ್ಟು ಕಸಿವಿಸಿಯನ್ನೂ ಕೆಲವು ಆತಂಕಗಳನ್ನೂ ಹುಟ್ಟು ಹಾಕಿದೆ.

ಏಕೆಂದರೆ, ಇವರಿಬ್ಬರು ಇವೊತ್ತಿನ ಕನ್ನಡ ಸಾಹಿತ್ಯ ಸಂದರ್ಭವನ್ನು ಇಂದು ತಮ್ಮದೇ ವಿಶಿಷ್ಟ ಜವಾಬ್ದಾರಿ ಮತ್ತು ಒಳನೋಟಗಳೊಂದಿಗೆ ವ್ಯಾಖ್ಯಾನಿಸುತ್ತಿರುವ ಎರಡು ಪ್ರಮುಖ ವೈಚಾರಿಕ ಧಾರೆಗಳಲ್ಲಿ ಒಂದರ ಬಹು ಮುಖ್ಯ ವಕ್ತಾರರೆಂದು ನಾನು ಭಾವಿಸಿದ್ದೇನೆ. ಇವರು ಸದರಿ ಚರ್ಚೆಯೇ ಒಂದು ನೆಪವಾಗಿ, ಈ ಧಾರೆಯ ಇವೊತ್ತಿನ ನಂಬಿಕೆಗಳನ್ನು, ನಿಲುವುಗಳನ್ನು ತಮ್ಮದೇ ಕಾರಣಗಳಿಂದಾಗಿ ಸಾಕಷ್ಟು ಕಟುವಾಗಿ ಮತ್ತು ನಿರ್ದಾಕ್ಷಿಣ್ಯವಾಗಿ ಮಂಡಿಸಿದ್ದಾರೆ. ಇದರಿಂದ ಕೆರಳಿದ, ಕುತೂಹಲಗೊಂಡ ಇತರ ಅನೇಕರು ಅನಿವಾರ್ಯವೆಂಬಂತೆ ಮಧ್ಯ ಪ್ರವೇಶಿಸಿ, ಚರ್ಚೆಯನ್ನು 'ದೇಶಕಾಲ'ವನ್ನು ಮೀರಿದ ಸಮಕಾಲೀನ ಸಾಹಿತ್ಯ ರಾಜಕಾರಣದ ಕೆಲವು ಪ್ರಶ್ನೆಗಳಿಗೆ ವಿಸ್ತರಿಸಿ ಒಳ್ಳೆಯದನ್ನೇ ಮಾಡಿದ್ದಾರೆ. ಇದರಿಂದಾಗಿ ನನಗೂ, ಮಂಜುನಾಥ್ ಲತಾ ಐಜೂರರ ರಂಪ ನೆಪ ಮಾತ್ರವಾಗಿ, ಇವೊತ್ತಿನ

ಸಾಹಿತ್ಯಿಕ– ಸಾಂಸ್ಕೃತಿಕ ಸಂದರ್ಭದ ಈ ವಿಸ್ತಾರದಲ್ಲಿ ನನ್ನನ್ನು ನಾನೇ ಕಂಡುಕೊಳ್ಳಲು, ಸ್ಪಷ್ಟಪಡಿಸಿಕೊಳ್ಳಲು ಅವಕಾಶವಾಗಿದೆ. ಹೀಗಾಗಿ ನಾನು ಇಲ್ಲಿ ಇವರ ಇಲ್ಲಿನ ಅಭಿಪ್ರಾಯ– ನಿಲುವುಗಳನ್ನು ಮತ್ತು ವಾದ ವೈಖರಿಗಳನ್ನು ಸಂದರ್ಭೋಚಿತ ನಿಷ್ಠುರತೆಯಿಂದ ಮತ್ತು ಸವಿವರವಾಗಿ ಪರಿಶೀಲಿಸುವ ಹುಮ್ಮಸ್ಸು ಮೂಡಿದೆ. ಈ ನನ್ನ ಗೆಳೆಯರು ಇದನ್ನು ಸಹಿಸಬಲ್ಲರೆಂಬ ನಂಬಿಕೆ ನನಗಿದೆ.

ಮೊದಲಾಗಿ ಈ ಚರ್ಚೆಯ ಸಂದರ್ಭದಲ್ಲಿ ನನ್ನನ್ನು ಕಾಡಿದ ಮುಖ್ಯ ಪ್ರಶ್ನೆಯೆಂದರೆ, 'ದೇಶಕಾಲ'ದ ಮುಖ್ಯ ಪಾತ್ರಧಾರಿಗಳೇ ಸುಮ್ಮನಿರುವಾಗ, ಫಣಿರಾಜ್– ರಾಜಶೇಖರರೇಕೆ ಅದರ ಪರವಾಗಿ ಉತ್ತರ ಕೊಡಲು ಹೊರಟರು? ಅದೂ, ಅದರ ಜೊತೆ ನೀನಾಸಂ, ಅಕ್ಷರ ಪ್ರಕಾಶನ, ಟಿ.ಪಿ.ಅಶೋಕ, ಅಕ್ಷರ, ಅನಂತಮೂರ್ತಿ ಇತ್ಯಾದಿಗಳನ್ನೆಲ್ಲ ಸೇರಿಸಿಕೊಂಡು! ಮೊದಲೇ ಈ ಪತ್ರಿಕೆ ಒಂದು ಖಾಸಗಿ ಲಿಮಿಟೆಡ್ ಕಂಪನಿ ಎಂಬ 'ಆರೋಪ'ಕ್ಕೆ ಈಡಾಗಿರುವಾಗ, ಈ 'ಆರೋಪ' ಸರಿಯಾಗಿಯೇ ಇದೆ ಎನ್ನುವಂತೆ ರಾಜಶೇಖರ್ ಪದೆ ಪದೇ, ಇದು ಶುದ್ಧ ಖಾಸಗಿ ಪ್ರಯತ್ನವಾಗಿರುವುದರಿಂದ ಸಾರ್ವಜನಿಕ ಉತ್ತರದಾಯಿತ್ವದ ಪ್ರಶ್ನೆಯೇ ಏಳುವುದಿಲ್ಲ ಎಂದು ಪತ್ರಿಕೆಯ ಉತ್ತರದಾಯಿತ್ವದವನ್ನು ತಾವೇ ಹೊತ್ತವರಂತೆ ಘೋಷಿಸುತ್ತಾರೇಕೆ? ಇನ್ನು ಅಂತಹ ಪ್ರಶ್ನೆ ಕೇಳಬಹುದಾದವರನ್ನು 'ಪೋಲಾಂಡ ನಾಯಕರು', 'ತಲೆ ತಿರುಕರು' ಇತ್ಯಾದಿ ಅರ್ಥವಾಗದ ಮತ್ತು ಅರ್ಥವಾಗುವ ಹಲವು ಗುಣವಾಚಕ– ಬಿರುದುಗಳಿಂದ ಅಲಂಕರಿಸುವಷ್ಟು ಪತ್ರಿಕೆ ಕುರಿತ ತೀವ್ರ ಮಮಕಾರವೇಕೆ? ಎಲ್ಲಕ್ಕಿಂತ ಮಿಗಿಲಾಗಿ, ಇವರಿಬ್ಬರೂ– ಒಬ್ಬರು ವಾಗ್ವಾದ ಪರಂಪರೆಯನ್ನು ಎತ್ತಿಹಿಡಿಯುವ ನೆಪದಲ್ಲಿ, ಇನ್ನೊಬ್ಬರು ಪತ್ರಿಕೆಯಲ್ಲಿ ಬರೆದ ಜವಾಬ್ದಾರಿಯ ಹೆಸರಿನಲ್ಲಿ– 'ದೇಶಕಾಲ'ದ ವಿರೋಧಿಗಳಿಗೆ ಅಪ್ಪಟ ಸಾಹಿತ್ಯಿಕ– ಸಾಂಸ್ಕೃತಿಕ ರಾಜಕಾರಣದಂತೆ ಕಾಣುವ ಅದರ ಆಯ್ಕೆ ಮತ್ತು ಅಭಿರುಚಿಗಳನ್ನು ನಿರ್ಧರಿಸುವ ಸಂಪಾದಕೀಯ ನೀತಿಯನ್ನು ಈ ಕಂಪನಿಯ ಪಿ.ಆರ್.ಓ.ಗಳಂತೆ ಸಮರ್ಥಿಸುವ ಪ್ರಯತ್ನ ಮಾಡುವರೇಕೆ? ಇದನ್ನು ರಾಜಶೇಖರರು ಪದೇ ಪದೇ ಪತ್ರಿಕೆ ವಿಮರ್ಶಾತೀತವಲ್ಲವೆಂದು ಹೇಳಹೇಳುತ್ತಲೇ, ಆದರೆ ಯಾರು ಏನು ಹೇಳಿದರೂ ಕೇಳಿಸಿಕೊಳ್ಳದವರಂತೆ, ಪ್ರಶ್ನಾತೀತಗೊಳಿಸಿ; ಮತ್ತು ಫಣಿರಾಜರು ಮೂಲ ಲೇಖನದ ವಾಗ್ವಾದ ಭಂಜನಾ ಪ್ರವೃತ್ತಿಯನ್ನು ಎಳೆ ಎಳೆಯಾಗಿ ವಿವರಿಸುವ ಪ್ರಯತ್ನದಲ್ಲಿ ಇಲ್ಲಿ ಚರ್ಚೆಯೇ ಸಾಧ್ಯವಿಲ್ಲವೆಂದು ಹೇಳುತ್ತಾ ಅದನ್ನು ಚರ್ಚಾತೀತಗೊಳಿಸಿ, ಗಾಬರಿ ಹುಟ್ಟಿಸುತ್ತಾರೆ.

ಫಣಿರಾಜರು ತಮ್ಮ ವಾದವನ್ನು ಸಮರ್ಥಿಸಿಕೊಳ್ಳಲು ಆಧುನಿಕ ಕನ್ನಡ ಸಾಹಿತ್ಯ ವಾಗ್ವಾದ ಪರಂಪರೆಯ ಚರಿತ್ರೆಯನ್ನೇ ಬಿಚ್ಚಿಡುತ್ತಾ, ಅದರಲ್ಲಿ ತಮ್ಮ ಸಕ್ರಿಯ ಭಾಗವಹಿಸುವಿಕೆಯ ಸ್ವರೂಪವನ್ನು 'ವಾಕ್ಯ ವಾಕ್ಯಗಳ ವಾಚ್ಯಾರ್ಥ ಮತ್ತು ಧ್ವನ್ಯಾರ್ಥಗಳನ್ನು ಬಗೆ ಬಗೆದು...' ಇತ್ಯಾದಿಯಾಗಿ ಯಾವುದೋ ಭರ್ಜರಿ ಮಾಂಸಾಹಾರಿ ಭೋಜನದ ವರ್ಣನೆಯಂತೆ ರುಚಿಕಟ್ಟಾಗಿ ವಿವರಿಸುತ್ತಾ, ಆದರೆ ಅದಕ್ಕೆ ಇಲ್ಲಿ ಅವಕಾಶವೇ ನೀಡಿಲ್ಲವೆಂದು

ಗೋಳಾಡುತ್ತಾ, ಮಂಜುನಾಥ್ ಲತಾ– ಐಜೂರ ಲೇಖನದ ಪ್ರಸ್ತುತತೆಯನ್ನೇ ತಳ್ಳಿಹಾಕಿದ್ದಾರೆ. ಆದರೆ ಅವರ ವಾಗ್ವಾದ ಪ್ರಿಯತೆ ಅವರನ್ನು ಮತ್ತೆ ಮತ್ತೆ ಕಾಡುತ್ತಾ, ಒಂದಲ್ಲ ಒಂದು ನೆಪ ಹುಡುಕಿಕೊಂಡು ಅವರು ಚರ್ಚೆಯಲ್ಲಿ ರಾಜಶೇಖರರ ಜೊತೆ ತಾವೂ ಪ್ರಮುಖ ಪಾತ್ರ ವಹಿಸಲು ನಿರಂತರವಾಗಿ ಹೆಣಗಿದ್ದಾರೆ! ಹಾಗಾದರೆ ಫಣಿರಾಜ್ ದೂಷಿಸುವ ಹಾಗೆ, ಮಂಜುನಾಥ್ ಲತಾ– ಐಜೂರರು ವಾಗ್ವಾದ ಭಂಜಕರೋ ಅಥವಾ ಜನಕರೋ? ಫಣಿರಾಜರೇ ಹೇಳಬೇಕು!

ಅದೆಲ್ಲ ಒತ್ತಟ್ಟಿಗಿರಲಿ, ವಾಗ್ವಾದ ಪ್ರಿಯ ಫಣಿರಾಜರಿಗೆ ನನ್ನ ಒಂದೇ ಪ್ರಶ್ನೆ: ನೀವು ಅನೇಕ ವಾಗ್ವಾದಗಳನ್ನು ಸುಪ್ರಸಿದ್ಧವೆಂದೂ, ಅಮೂಲ್ಯವೆಂದೂ ಹೆಸರಿಸಿದ್ದೀರಿ. ಆದರೆ ಇವು ಸುಪ್ರಸಿದ್ಧ, ಅಮೂಲ್ಯ ಯಾಕೆ? ಇವು ನಿಮ್ಮಂತಹವರ ವಾಗ್ವಾದಗಳ ತಾಂತ್ರಿಕ ಪರಿಣಿತಿಯನ್ನು ಚುರುಕುಗೊಳಿಸಿವೆಯೆಂದೋ ಅಥವಾ ಇವು ನಿಮ್ಮ ಸಾಹಿತ್ಯ ಗ್ರಹಿಕೆಯ ಸೂಕ್ಷ್ಮಗಳ ಮೇಲೆ ಏನಾದರೂ ನಿರ್ಣಾಯಕ ಪರಿಣಾಮ ಬೀರಿವೆಯೆಂದೋ? ನೀವು ಒಟ್ಟಿಗೇ ಮಾಸ್ತಿ, ಕುವೆಂಪು, ಲಂಕೇಶ್, ತೇಜಸ್ವಿ, ಸುಬ್ಬಣ್ಣ, ಅಡಿಗ, ಅನಂತಮೂರ್ತಿಯವರನ್ನೊಳಗೊಂಡ ವಾಗ್ವಾದಗಳನ್ನು ನಿಮ್ಮ ವಾಗ್ವಾದ ಪರಂಪರೆಯ ಬುಟ್ಟಿಯಲ್ಲಿಟ್ಟು, ಈ ಬುಟ್ಟಿ ನೋಡಿ ಎಷ್ಟು ಭದ್ರವಿದೆ, ಚೆಂದವಿದೆ ಎಂದು ಮಾತ್ರ ಕೂಗಿ ಕೂಗಿ ಹೇಳುತ್ತಿರುವಂತಿದೆ. ಮಾಸ್ತಿಗೆ ಕುವೆಂಪು ನೀಡಿದ ಉತ್ತರ, 'ಸಾಕ್ಷಿ'ಗೆ ಲಂಕೇಶ್ ಬರೆದ ಅಪ್ರಕಟಿತ ಪತ್ರ ಮತ್ತು ಅದನ್ನು ಕುರಿತ ಲಂಕೇಶರ ಟಿಪ್ಪಣಿ, ಅನಂತಮೂರ್ತಿಯವರನ್ನು ಮಾದರಿಯಾಗಿಟ್ಟುಕೊಂಡು ನವ್ಯದ ಬಗ್ಗೆ ತೇಜಸ್ವಿ ಬರೆದ ಟೀಕೆ ಮತ್ತು ಸುಬ್ಬಣ್ಣನವರ 'ಕುವೆಂಪುಗೊಂದು ಪುಟ್ಟ ಕನ್ನಡಿ' ಪುಸ್ತಕದ ಬಗ್ಗೆ ಲಂಕೇಶ್ ಮಾಡಿದ ವಿಮರ್ಶೆ ಇವುಗಳು 'ಆಹಾ ಎಂತಹ ವಾಗ್ವಾದಗಳು! ವಾಗ್ವಾದಗಳೆಂದರೆ ಹೀಗಿರಬೇಕು!!' ಎಂದು ಲೊಟ್ಟೆ ಹೊಡೆಯುತ್ತಾ ಚಪ್ಪರಿಸುವದಕ್ಕಷ್ಟೇ ಇವೆಯೋ ಅಥವಾ ಅವುಗಳಿಂದ ಏನನ್ನಾದರೂ ಕಲಿತು/ ಪಡೆದು ಬೆಳೆದಿದ್ದೇವೆಯೋ? ವಾಗ್ವಾದವೆಂದರೆ, ನೀವು ಬಹು ಅಮೂಲ್ಯವೆಂಬಂತೆ ವರ್ಣಿಸಿರುವ 'ಬಹಳ ಪರಿಶ್ರಮದಿಂದ ವಿಮರ್ಶೆಯ ಪರಿಕಲ್ಪನೆಗಳನ್ನು ರೂಢಿಸುವ ಜೀವಮಾನದ ಕಸುಬಿ'ಗೆ ಒದಗಿ ಬರುವ ಜಡ ಪಂಡಿತ ಪಥ್ಯವಲ್ಲ ಎಂದು ನಾನು ಭಾವಿಸಿದ್ದೇನೆ.

ಮಂಜುನಾಥ್ ಮತ್ತು ಐಜೂರರ ಲೇಖನದ ಹಿಂದೆ ಈ ಪ್ರಶ್ನೆ, ಈ ಅನುಮಾನ ಇದ್ದಂತಿದೆ. ಆದರೆ ಕೂಸನ್ನು ಬಿಟ್ಟು ಮಾಸನ್ನು ಮೂಸಿನೋಡಿದಂತೆ, ಫಣಿರಾಜ್ ಮತ್ತು ರಾಜಶೇಖರರು ಪ್ರಸ್ತುತ ಬರಹದಲ್ಲಿನ ಅದರ ಅಸಾಧ್ಯ ವ್ಯಂಗ್ಯ– ಕಟಕಿಗಳಿಂದ ವಿಚಲಿತರಾದಂತೆ ಈ ಪ್ರಶ್ನೆ/ಅನುಮಾನಗಳನ್ನು ಗುರುತಿಸಲು ವಿಫಲರಾಗಿದ್ದಾರೆ. ಹಾಗಾಗಿ ಈ ಬರಹದಲ್ಲಿ ಅವರು ಬರೀ ದುರುದ್ದೇಶವನ್ನೇ ಕಂಡು ರೋಸಿ ಹೋದವರಂತೆ ವ್ಯಗ್ರರಾಗಿ, ತಾವೂ ಅದೇ ತೆರನ ವ್ಯಂಗ್ಯ ಕಟಕಿಗಳಿಗೆ ಶರಣಾಗಿದ್ದಾರೆ. ಆ ಮೂಲಕ ಚರ್ಚೆ ತಮ್ಮ ಹಿಡಿತವನ್ನು ಮೀರಿ ಬೆಳೆಯಲು ತಾವೇ ಆಹ್ವಾನ ನೀಡಿಕೊಂಡಿದ್ದಾರೆ. ಈ ಆಹ್ವಾನವನ್ನು ಅಗತ್ಯ ವೀರಾವೇಶದಿಂದಲೇ ರಾಜಶೇಖರರು ಎದುರಿಸಿದ್ದಾರೆ, ನಿಜ. ಆದರೆ, ವಸಂತ

ಇನ್ನೇನಾದೀತು!) ಟಿ.ಪಿ.ಅಶೋಕ್[2] ತೇಜಸ್ವಿ ಬಗ್ಗೆ ಪ್ರತ್ಯೇಕ ಪುಸ್ತಕವನ್ನೇ ಬರೆದಿಲ್ಲವೇ, ಅವರ ಸಾಹಿತ್ಯದ ಬಗ್ಗೆ ನೀನಾಸಂ ಅನೇಕ ಅಧ್ಯಯನ ಶಿಬಿರಗಳನ್ನು ನಡೆಸಿಲ್ಲವೇ ಎಂದು ಕೇಳುತ್ತಾರೆ! ಇನ್ನು ಬನ್ನಾಡಿಯವರು ಇದೇ ಟಿ.ಪಿ.ಅಶೋಕರ ತಥಾಕಥಿತ 'ವಿಮರ್ಶಾ ರಾಜಕಾರಣ'ದ ಪ್ರಸ್ತಾಪ ಮಾಡಿದರೆ, ಫಣಿರಾಜರು ಅನಾಮತ್ತಾಗಿ ಅವರ ರಕ್ಷಣೆಗೆ ಧಾವಿಸಿ, ಅವರು ಇದೀಗ ತಾನೇ ಎಚ್.ಎಸ್.ಶಿವಪ್ರಕಾಶ್ ಅವರ 'ಸಮಗಾರ ಭೀಮವ್ವ' ಪದ್ಯವನ್ನು 'ಸಂಯುಕ್ತ ಕರ್ನಾಟಕ'ದಲ್ಲಿ ಕನ್ನಡದ ಶ್ರೇಷ್ಠ ಪದ್ಯವೆಂದು ಗುರುತಿಸಿದ್ದಾರಲ್ಲಾ ಎಂದು ಉತ್ತರಿಸುತ್ತಾರೆ! (ಈ ಇಡೀ ಸಂದರ್ಭ, ನಾವು ಶಾಲಾ ಕಾರ್ಯಕ್ರಮಗಳಲ್ಲಿ ನೋಡಿ ನಲಿಯುತ್ತಿದ್ದ, ಏನೋ ಕೇಳಿದರೆ ಏನೋ ಉತ್ತರಿಸುವ 'ಕಿವುಡು ಬ್ರಾಹ್ಮಣರ ಪ್ರಹಸನ' ನೆನಪಿಗೆ ಬರುತ್ತದೆ!) ಆದರೆ ಈ ವಿಶೇಷಾಂಕದಲ್ಲಿ ಎಚ್.ಎಸ್.ಶಿವಪ್ರಕಾಶರ ಪದ್ಯವೇಕಿಲ್ಲ (ಎಂಬ ಮತ್ತೊಂದು ಅಸಂಗತ) ಪ್ರಶ್ನೆಗೆ ಉತ್ತರ ಕೊಡುವಾಗ, ಶಿವಪ್ರಕಾಶ್ ತಮ್ಮದೇ ಕಾರಣಗಳಿಗಾಗಿ 'ದೇಶಕಾಲ'ಕ್ಕೆ ಬರೆಯಬೇಕೆಂಬ ಕೋರಿಕೆಯನ್ನು ನಿರಾಕರಿಸಬಹುದು ಎಂಬ ಅನುಮಾನ ಯಾರಿಗೂ ಬಾರದಂತೆ ಇವರು ವಹಿಸಿರುವ ಎಚ್ಚರಿಕೆ ಮಾತ್ರ ಗಮನಾರ್ಹವಾಗಿದೆ!

ಇದೇ ರೀತಿಯಲ್ಲಿ ವಾದ ಮುಂದುವರೆಸುತ್ತಾ, ಜಯಂತ ಕಾಯ್ಕಿಣಿಯವರು ಲೇಖಕರನ್ನು ಪರಿಚಯಿಸುವ ರೀತಿಯ ಬಗ್ಗೆ ಟೀಕೆ ಮಾಡಿದವರನ್ನು, ಅವರಿಗೆ ಅದರಲ್ಲೇ ಇರುವ ಜಯಂತರ 'ಕೋಮಲ ಗಾಂಧಾರ'ವೆಂಬ ಒಳ್ಳೆಯ ಕಥೆ ಕಾಣುವುದಿಲ್ಲವೇಕೆ ಎಂದು ರಾಜಶೇಖರ್ ಪ್ರಶ್ನಿಸುತ್ತಾರೆ. ನಿಜ ರಾಜಶೇಖರ್, ಜಯಂತರ ಈ ಕಥೆ ಚೆನ್ನಾಗಿದೆ; ತುಂಬಾನೇ ಚೆನ್ನಾಗಿದೆ. ಆದರೆ ಅದು ಅವರು ಲೇಖಕರನ್ನು ಪರಿಚಯಿಸುವ ಹುಸಿ ರೀತಿ ನೀತಿಗಳನ್ನು ರದ್ದು ಮಾಡಿಬಿಡುವುದೇ? ಒಂದು ಗಂಭೀರ ಸಾಹಿತ್ಯ ಸಂಚಿಕೆಯಲ್ಲಿ ಲೇಖಕರ ಪರಿಚಯವನ್ನೂ ವಿಮರ್ಶೆಯ ಜವಾಬ್ದಾರಿಯಿಂದಲೇ ಮಾಡಬೇಕಾಗುತ್ತದೆ; ಸಿನೆಮಾ ಹಾಡಿನ ಹುಸಿ ಶೈಲಿ ಅವರ ಸಾಹಿತ್ಯಿಕ ಪ್ರಾಮಾಣಿಕತೆಯನ್ನೇ ಅನುಮಾನಾಸ್ಪದಗೊಳಿಸಬಲ್ಲುದಾಗಿದೆ. ಹೀಗೆ ರಾಜಶೇಖರ್ (ಜೊತೆಗೆ ಫಣಿರಾಜ್) ತಾವು ಇಲ್ಲವೆಂದು ಹೇಳುವ 'ಭಾವುಕ ಕೂಟ' 'ಭಾವುಕ ನೆಂಟಸ್ತಿಕೆ' ಇತ್ಯಾದಿಗಳು ಇದ್ದರೂ ಇರಬಹುದೇನೋ ಎಂಬ ಅನುಮಾನವನ್ನು ಓದುಗರಲ್ಲಿ ಹುಟ್ಟಿಸುವ ರೀತಿಯಲ್ಲಿ ವಾದ ಮಾಡುವುದನ್ನು ಕಂಡು ಪರಮಾಶ್ಚರ್ಯವಾಗುತ್ತದೆ.

ಈ ಮೊದಲೇ ಹೇಳಿದಂತೆ, ಚರ್ಚೆ ಎಂದರೆ ಕೋರ್ಟು ಕಛೇರಿಗಳ ನಡಾವಳಿ ಎಂಬಂತೆ, ಅದರಲ್ಲಿ ಅನ್ನಿಸಿಕೆ– ಅಭಿಪ್ರಾಯಗಳಿಗೆ ಅವಕಾಶವೇ ಇಲ್ಲವೆಂದು ಸಾರುತ್ತಾ, ರಾಜಶೇಖರ್ ಎಲ್ಲದಕ್ಕೂ ಪಕ್ಕದ ಸಾಕ್ಷ್ಯ ಕೇಳುತ್ತಾರೆ. ಆದರೆ ತಾವು ಮಾತ್ರ 'ದೇಶಕಾಲ'ದ ವಿಶೇಷಾಂಕವನ್ನು, ಅದರ ಚಿಲ್ಲರೆ ಮಾರಾಟಗಾರರಂತೆ ಅದರ ಪರಿವಿಡಿಯನ್ನು ಪಟಪಟನೆ ಹೇಳಿ, 'ಇಷ್ಟು ತಿಳಿದರೆ ಸಾಕು, ಯಾರಿಗಾದರೂ ಇದು ಯಾವುದೇ ದೀಪಾವಳಿ ವಿಶೇಷಾಂಕಕ್ಕೆ ಹೋಲಿಸಿದರೂ ವಿಶಿಷ್ಟವಾಗಿ ನಿಲ್ಲುತ್ತದೆ ಎಂದು ಗೊತ್ತಾಗಲು!' ಎಂಬಂತೆ ಒಂದೇ ವಾಕ್ಯದಲ್ಲಿ ತೀರ್ಪು ಘೋಷಿಸಿಬಿಡುತ್ತಾರೆ! (ತಾವೇ ಹೇರುವ ಚರ್ಚೆಯ ನಿರ್ಬಂಧಗಳು ಇಲ್ಲಿ ಅವರ

ಅರಿವಿಗೆ ಬಂದಿದೆ ಎಂದು ಭಾವಿಸೋಣ!) ಇನ್ನು ಬನ್ನಾಡಿಯವರು ನೀನಾಸಂ ಆವರಣದಲ್ಲಿ ತಮಗೆ ಉಸಿರುಗಟ್ಟಿದಂತಾಗುತ್ತದೆ ಎಂದರೆ, ರಾಜಶೇಖರರು ಅದಕ್ಕೂ ಪಠ್ಯದ ಸಾಕ್ಷ್ಯ ಕೇಳಲು ಹವಣಿಸುತ್ತಾರೆಂದರೆ ಏನು ಹೇಳುವುದು? ರಾಜಶೇಖರರಿಗೆ ಚರ್ಚೆಯಲ್ಲಿ ರೂಪಕ ಭಾಷೆಯೂ ನಿಷಿದ್ಧವೇ? ಇರಲಿ, ಇನ್ನು ಮುಂದೆ ಬನ್ನಾಡಿಯವರಿಗೆ ಎಂದಾದರೂ ಆತ್ಮಹತ್ಯೆ ಮಾಡಿಕೊಳ್ಳಬೇಕೆಂದೆನಿಸಿ, ಅದಕ್ಕಾಗಿ ಉಸಿರುಗಟ್ಟಿ ಸಾಯುವ ಮಾರ್ಗವನ್ನೇ ಆಯ್ದುಕೊಂಡು ನೀನಾಸಂಗೆ ಹೋದರೆ, ರಾಜಶೇಖರರಿಗೆ ಸಾಕ್ಷ್ಯ ಒದಗಿಸುವ ದೃಷ್ಟಿಯಿಂದಲಾದರೂ ಜೊತೆಯಲ್ಲಿ ವೈದ್ಯರೊಬ್ಬರನ್ನು ಕರೆದುಕೊಂಡು ಹೋಗುವುದು ಒಳ್ಳೆಯದು!

– ೫ –

ಕೊನೆಗೆ ರಾಜಶೇಖರ್ ಸಾಹಿತ್ಯ ನೆಲೆಯ ಚರ್ಚೆಯಿಂದ ಸುಸ್ತಾದವರಂತೆ ಸಾಮಾಜಿಕ ನೆಲೆಗೆ ಹೊರಳುತ್ತಾರೆ. ಬಸವಣ್ಣನ ಉದಾಹರಣೆ ಕೊಟ್ಟು, 'ಬ್ರಾಹ್ಮಣ' ಮತ್ತು 'ಬ್ರಾಹ್ಮಣ್ಯ'ದ ನಡುವೆ ವ್ಯತ್ಯಾಸವೇ ಇಲ್ಲವೇ ಎಂದು (ಎಚ್ಚೆಸ್ವಿಯುವರ ವಾದದ ಬೆಂಬಲದೊಂದಿಗೆ) ಆಶ್ಚರ್ಯಪಡುತ್ತಾ, ಬ್ರಾಹ್ಮಣನಿಗೆ ಬದಲಾಗುವ ಸಾಧ್ಯತೆಗಳನ್ನೇ ಅಲ್ಲಗಳೆಯಲಾಗುತ್ತಿದೆಯೇ ಎಂದು ಕೇಳಿದಾಗ ಮಾತ್ರ ನಿಜವಾಗಿಯೂ ಬೇಸರವೆನಿಸುತ್ತದೆ. ಆದರೆ, ಬ್ರಾಹ್ಮಣರನ್ನು ಹೀಗೇ ಕಾಡಿದ ಲೋಹಿಯಾವಾದಿಗಳು ನೇಪಥ್ಯಕ್ಕೆ ಸರಿದ ಮೇಲೆ ಬನ್ನಾಡಿಯಂಥವರು ಆ ಕೆಲಸವನ್ನು ಕೈಗೆತ್ತಿಕೊಂಡಂತಿದೆ ಎಂದು ಅವರು ಹೇಳಿದಾಗ, ಈ ಬೇಸರ ಮರುಕವಾಗಿ ಮಾರ್ಪಡುತ್ತದೆ. ಅದೇನೇ ಇರಲಿ, ಅಂತೂ ಈ ಮೂಲಕ ರಾಜಶೇಖರ್ ನೇಪಥ್ಯಕ್ಕೆ ಸರಿದಿರುವುದು ಲೋಹಿಯಾವಾದಿಗಳೇ ಹೊರತು ಲೋಹಿಯಾವಾದವಲ್ಲ ಎಂಬುದನ್ನು ಗುರುತಿಸಿದ್ದಾರೆ. ಅದಕ್ಕಾಗಿ ಲೋಹಿಯಾವಾದಿಗಳೆನಿಸಿಕೊಂಡವರೆಲ್ಲರ ಪರವಾಗಿ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಜೊತೆಗೆ, ಇದಕ್ಕೆಲ್ಲ ಕಾರಣ; ಲೋಹಿಯಾ ಎತ್ತಿದ್ದ ಜಾತಿ ಪದ್ಧತಿಯ ಹಿಂದಿನ ರಾಜಕಾರಣದ ಸಂಕೀರ್ಣ ಪ್ರಶ್ನೆ ಕನ್ನಡ ಸಾಹಿತ್ಯ– ಸಂಸ್ಕೃತಿ ಸಂದರ್ಭದಲ್ಲಿ ಇನ್ನೂ ಸಂಪೂರ್ಣ ಪರಿಹಾರವಾಗದಿರುವುದೇ ಆಗಿದೆ ಎಂದು ರಾಜಶೇಖರ್‌ಗೆ ತಿಳಿಸಬಯಸುತ್ತೇನೆ.

ಈ ಪರಿಸ್ಥಿತಿಗೆ 'ಸಾಮಾಜಿಕ ನ್ಯಾಯ'ವನ್ನು ಕೇವಲ ಕೆಳಜಾತಿವಾದವಾಗಿ ಮಾರ್ಪಡಿಸಿದ ಹಿಂದುಳಿದ ಜಾತಿಗಳ ಕಳ್ಳ ಪ್ರಗತಿಪರರು ಎಷ್ಟು ಕಾರಣರೋ (ಬರಗೂರು ರಾಮಚಂದ್ರಪ್ಪನವರ ಇಲ್ಲಿನ ಪ್ರತಿಕ್ರಿಯೆಯ ಪ್ರಕಾರ, 'ಕರ್ನಾಟಕದ ಮಟ್ಟಿಗೆ ಮೇಲ್ಜಾತಿ ಮತ್ತು ಮಧ್ಯಮ ಪ್ರಬಲ ಜಾತಿಗಳ ನಾಯಕತ್ವದ ಮನಸ್ಸು ಮಲಿನಗೊಂಡಿದೆ.' ಆಹಾ! ಎಂತಹ ಒಕ್ಕಣ್ಣಿನ ಸತ್ಯ!) ಅಷ್ಟೇ ಕಾರಣರು, ಎಚ್ಚೆಸ್ವಿಯವರು ವಿವರಿಸುವಂತಹ ನವೋದಯ ಸಾಹಿತಿಗಳು 'ಜಾತಿ ಮೀರಿದ' ಮಾದರಿಯನ್ನು ಎತ್ತಿ ಹಿಡಿಯುತ್ತಾ ಜನಿವಾರಗಳನ್ನು ಸಂದರ್ಭಾನುಸಾರ ಬಿಚ್ಚಿ ಹಾಕಿಕೊಳ್ಳುವ (ಹಾಗೂ ತಮ್ಮ ಮಕ್ಕಳು ಮತ್ತು ಮೊಮ್ಮಕ್ಕಳಿಗೂ ತಾವೇ ಮುಂದೆ ನಿಂತು ಹಾಕಿಸುವ) ಆತ್ಮದ್ರೋಹಿ ಬ್ರಾಹ್ಮಣ ಬಂಡಾಯಗಾರರೂ ಕಾರಣ. ಅನಂತಮೂರ್ತಿಯವರಂತಹ ಅನಂತಮೂರ್ತಿಯವರೇ ಈಗ ನಮ್ಮ ಜಾತಿ ವಿರೋಧಿ

ಆಂದೋಲನ (ಅಂತಹುದೇನಾದರೂ ಈಗ ಇದ್ದರೆ!) ಜಾತಿಗಳು ಸೃಷ್ಟಿಸಿದ ಸಾಂಸ್ಕೃತಿಕ ನೆಲೆಗಳ ವೈವಿಧ್ಯಗಳ ನಾಶಕ್ಕೆ ಕಾರಣವಾಗಬಾರದು ಎಂದು ಕರೆ ಕೊಡಬಲ್ಲಂತಹ ತಲೆಕೆಳಗಾದ ಸೌಂದರ್ಯ ಕಲ್ಪನೆಯನ್ನು (ಜಾತಿಯಿಂದ ಈ 'ಸಾಂಸ್ಕೃತಿಕ' ವೈವಿಧ್ಯವೋ ಅಥವಾ ಈ 'ಸಾಂಸ್ಕೃತಿಕ' ವೈವಿಧ್ಯದಿಂದ ಜಾತಿಯೋ?) ಕಟ್ಟಿಕೊಡಬಲ್ಲರೆಂದರೆ, ಬ್ರಾಹ್ಮಣ್ಯವೆಂಬುದು ಯಾವ ಯಾವಾಗ ಯಾವ್ಯಾವ ರೂಪಗಳನ್ನು ತಾಳಬಲ್ಲುದೆಂಬುದನ್ನು ರಾಜಶೇಖರ್ ಯೋಚಿಸಬಲ್ಲರೆ?[೮]

ಇಷ್ಟೆಲ್ಲ ಪ್ರಶ್ನೆ- ಗೊಂದಲಗಳು ಇನ್ನೂ ಉಳಿದಿರುವಾಗ, ಅಡಿಗ- ಸುಬ್ಬಣ್ಣ- ಅನಂತಮೂರ್ತಿ ಒಂದು ದೀರ್ಘಾವಧಿಯವರೆಗೆ ಪರಸ್ಪರ ಬೆನ್ನು ಕೆರೆದುಕೊಂಡಿದ್ದನ್ನು ಕಂಡವರಲ್ಲಿ (ಸುಬ್ಬಣ್ಣ ಅವರು ಅನಂತಮೂರ್ತಿಯವರ ಮೊದಲ ಮೂರು ಕಾದಂಬರಿಗಳನ್ನು 'ತ್ರಿವಳಿ'ಯಾಗಿ ನೋಡಿ ಬರೆದಿರುವ ದೀರ್ಘ ಲೇಖನವನ್ನು ಗಮನಿಸಿರುವವರಿಗೆ ವಿಮರ್ಶೆಯಲ್ಲಿ ಕಲ್ಪನೆಗೂ ಎಷ್ಟು ಅಗಾಧ ಅವಕಾಶವಿದೆ ಎಂದು ಆಶ್ಚರ್ಯವಾಗುತ್ತದೆ!) ಕೆಲ 'ಜಾತಿ ಜನಗಣತಿವಾದಿ'ಗಳಿಗೆ ಅದರಲ್ಲಿ ದೂರದಲ್ಲಾದರೂ 'ಜಾತಿ' ಗೋಚರವಾದರೆ ಆಶ್ಚರ್ಯವೇನು? ಈಗಲೂ ಅಕ್ಷರ ಪ್ರಕಾಶನದ ಪ್ರಕಟಣೆಗಳ ಪಟ್ಟಿ ನೋಡಿದರೆ, ಅದರಲ್ಲಿ ಒಂದು ಜಾತಿಯ ಲೇಖಕರೇ ಪ್ರಧಾನವಾಗಿ ಗೋಚರವಾಗುತ್ತಾರೆ ಏಕೆ ಎಂದು ಯಾರಾದರೂ (ಆತ ಜಾತಿವಾದಿಯೇ ಆಗಿರಲಿ) ಕೇಳಿದರೆ, ಅದಕ್ಕೆ ಗುಣಮಟ್ಟದ ಲೇಖಕರು ಆ ಒಂದು ಜಾತಿಯಲ್ಲೇ ಹೆಚ್ಚಿದ್ದಾರೆ ಎಂದು ಯಾರಾದರೂ ಉತ್ತರ ಕೊಡಬಲ್ಲರೇ? ಅಥವಾ ರಾಜಶೇಖರ್‌ರಂತಹವರು ಅದೊಂದು ಸರ್ಕಾರಿ ಅನುದಾನಕ್ಕೆ ಕೈಯೊಡ್ಡದ ಖಾಸಗಿ ಪ್ರಕಾಶನ; ಅದಕ್ಕೆ ಈ ಪ್ರಶ್ನೆ ಹಾಕಬಾರದು ಎಂದು ಉತ್ತರ ಹೇಳುವುದರ ಜೊತೆಗೆ, ಅದರಿಂದ ನನ್ನ ಒಂದು ಪುಸ್ತಕವೂ ಪ್ರಕಟವಾಗಿರುವುದರಿಂದ ಅವರ ಪರವಾಗಿ ಉತ್ತರ ಕೊಡುವುದು ನನ್ನ ಜವಾಬ್ದಾರಿ ಎಂದೂ ಸೇರಿಸುವರೋ? 'ವಿಜಯ ಕರ್ನಾಟಕ'ದ ಪ್ರತಾಪ ಸಿಂಹ ತನ್ನ ಪಂಥಕ್ಕೆ ವಿರುದ್ಧವಾದವರ ಮೇಲೆಲ್ಲ ಕೆಸರೆರಚುತ್ತಿದ್ದಾಗ ಸುಮ್ಮನಿದ್ದ ಫಣಿರಾಜರಂತಹವರು, ಅದೊಮ್ಮೆ ಅನಂತಮೂರ್ತಿಯವರ ಮೇಲೆ ಬಿದ್ದಾಗ ಮಾತ್ರ ಹೌಹಾರಿ ಸಹಿ ಸಂಗ್ರಹಕ್ಕೆ ಮುಂದಾಗುತ್ತಾರೆಂದರೆ (ಈ ಸಂಬಂಧ ನನ್ನ ಸಹಿಗಾಗಿ ಫಣಿರಾಜ್ ಅಂತರ್ಜಾಲದ ಮೂಲಕ ನನ್ನೊಂದಿಗೆ ನಡೆಸಿದ 'ವಾಗ್ವಾದ' ಇಂತಹ ಇನ್ನೊಂದು ಚರ್ಚೆಗೆ ಕಾರಣವಾಗಬಹುದಷ್ಟು ದೊಡ್ಡದಾಗಿದೆ!) ಅದನ್ನು ಏನೆಂದು ಅರ್ಥೈಸುವುದು? ಇದಕ್ಕೆ ಬಹುಶಃ ಇವರು ತಮ್ಮ ವಾದಗಳನ್ನು ವಿಷದೀಕರಿಸಲು ಆಗಾಗ್ಗೆ ಉಲ್ಲೇಖಿಸುವ ಚೋಮ್‌ಸ್ಕಿಯಾಗಲೀ, ಫ್ಯುಕೋ ಆಗಲೀ ವಾಲ್ಟರ್ ಬೆಂಜಮಿನ್ ಆಗಲೀ ಉತ್ತರಿಸಲಾರರು!

– ೬ –

ಉತ್ತರ, ಕಾಣಬಲ್ಲವರಿಗೆ; ಫಣಿರಾಜರು ತಮ್ಮ 'ವಾಗ್ವಾದ ಚರಿತ್ರೆ'ಯಲ್ಲಿ ಕನ್ನಡದ ಮುಖ್ಯ ವಾಗ್ವಾದಗಳಲ್ಲೊಂದು ಎಂದು ಹೆಸರಿಸುವ ತೇಜಸ್ವಿಯವರ 'ಒಕ್ಕೂಟ'ದ ಭಾಷಣವೆಂದೇ ಪ್ರಸಿದ್ಧವಾದ 'ಕರ್ನಾಟಕ ಸಂಸ್ಕೃತಿ ವಿಶ್ಲೇಷಣೆ'ಯಲ್ಲಿದೆ ಎಂದರೆ ಈ ಗೆಳೆಯರು

ಒಪ್ಪಲಾರರು. ಅದು ಪೂರ್ಣ ಬ್ರಾಹ್ಮಣ ವಿರೋಧಿ ಎಂದಲ್ಲದಿದ್ದರೂ, ಜಾತಿ ಕೇಂದ್ರಿತ ವಿಶ್ಲೇಷಣೆ ಎಂದು ಅವರು ಹೇಳಿಯಾರು. 'ಹೇಳಿಯಾರು' ಎಂಬ ಪದಪ್ರಯೋಗ ಏಕೆ ಮಾಡಿರುವೆನೆಂದರೆ, ತೇಜಸ್ವಿಯವರ ಬಹು ಮುಖ್ಯ ಲೇಖನವೆಂದು ನಾನು ಪರಿಗಣಿಸಿರುವ ಇದರ ಬಗ್ಗೆ ನನಗೆ ತಿಳಿದ ಮಟ್ಟಿಗೆ ಈವರೆಗೆ ಯಾರೂ (ತೇಜಸ್ವಿ ಬಗ್ಗೆ ವಿಫುಲವಾಗಿ, ವಿಸ್ತಾರವಾಗಿ ಬರೆದಿರುವರೆಂದು ಹೇಳಲಾಗುವವರೂ ಸೇರಿದಂತೆ) ಏನೂ ಹೇಳಿಲ್ಲ! ಈ ದೃಷ್ಟಿಯಿಂದ ಫಣಿರಾಜರು ಈ ತೇಜಸ್ವಿ ಲೇಖನವನ್ನು ವಾಗ್ವಾದವೆಂದು ಭವ್ಯವಾಗಿ ಕರೆದಿರುವುದೇ ಒಂದು ತಮಾಷೆ. ಏಕೆಂದರೆ, ಅದು ಪ್ರಕಟವಾದ ೩೮ ವರ್ಷಗಳ ನಂತರವೂ ನಮ್ಮ ವಿಶ್ವವಿದ್ಯಾಲಯಗಳೊಳಗಿನ ಮತ್ತು ಹೊರಗಿನ 'ಅಧಿಕೃತ' ಸಂಸ್ಕೃತಿ ಚಿಂತಕರ ನಡುವೆ ಅದು ಚರ್ಚೆಗೆ ಬರುವುದಿರಲಿ, ಪ್ರಸ್ತಾಪಕ್ಕೂ ಬಂದಿಲ್ಲ![೯] ಅದು ಸ್ಥಾಪಿತ ಕನ್ನಡ ಸಾಹಿತ್ಯ- ಸಂಸ್ಕೃತಿ ಸಂಕಥನದ ಆಧಾರಗಳನ್ನೇ, ಅದನ್ನು ಏಕಪಕ್ಷೀಯವಾಗಿ ಪೋಷಿಸಿಕೊಂಡು ಬರುತ್ತಿರುವ ವಿಶ್ವವಿದ್ಯಾಲಯಗಳೊಳಗಿನ ಮತ್ತು ಹೊರಗಿನ ಸ್ಥಾಪಿತ ಹಿತಾಸಕ್ತಿಗಳ ಬುಡಗಳನ್ನೇ ಅಲ್ಲಾಡಿಸಬಲ್ಲ ರೀತಿಯಲ್ಲಿ ಕನ್ನಡ ಸಾಹಿತ್ಯ- ಸಂಸ್ಕೃತಿ ಚರಿತ್ರೆಯನ್ನು ಸ್ಫೋಟಕವೆನ್ನಿಸುವ ನೆಲೆಗಳಲ್ಲಿ ಪುನರ್‌ನಿರೂಪಿಸುವ ಒಂದು ದೊಡ್ಡ ತಾತ್ವಿಕ ಪ್ರಯತ್ನ ಮಾಡುತ್ತದೆ ಎಂಬುದೇ ಅದಕ್ಕೆ ಕಾರಣ ಎಂದು ನಾನು ಭಾವಿಸಿದ್ದೇನೆ.

ತೇಜಸ್ವಿ ಇಲ್ಲಿ ಜಾತಿಯನ್ನು ಕೇವಲ ಸಾಮಾಜಿಕ ಶ್ರೇಣೀಕರಣದ ನೆಲೆಯಲ್ಲಿ ನೋಡದೆ, ಅದು ಹೇಗೆ ಬದುಕಿನ ಗ್ರಹಿಕೆ ಮತ್ತು ಅಭಿವ್ಯಕ್ತಿ ಸಾಮರ್ಥ್ಯ ಹಾಗೂ ಕ್ರಮಗಳೂ ಸೇರಿದಂತೆ ಸರ್ವ ಸೂಕ್ಷ್ಮಗಳನ್ನೂ ನಿಯಂತ್ರಿಸುವ ಒಂದು ರಾಜಕೀಯ ತಂತ್ರವಾಗಿ; ಆದರೆ ಪ್ರಾಚೀನ ತತ್ವ ಪರಂಪರೆಯ ಮಾರುವೇಷದಲ್ಲಿ ಕ್ರಿಯಾಶೀಲವಾಗಿದೆ ಎಂಬುದನ್ನು ವಿವರಿಸುವ ಪ್ರಯತ್ನ ಮಾಡುತ್ತಾರೆ. ಇದರ ಭಾಗವಾಗಿ, ನವ್ಯ ಸಾಹಿತ್ಯದ ಒಂದು ಮಾದರಿ ಚಿಂತನೆಯನ್ನಿಟ್ಟುಕೊಂಡು (ಯು.ಆರ್.ಅನಂತಮೂರ್ತಿಯವರ 'ಭಾರತೀಯ ಸಂಸ್ಕೃತಿ ಮತ್ತು ಕನ್ನಡ ಲೇಖಕ') ಸಮಕಾಲೀನ ಸಂದರ್ಭದಲ್ಲಿನ ಅದರ ಆಟ- ಪಾಠಗಳನ್ನು ಅನನ್ಯ ಒಳನೋಟಗಳೊಂದಿಗೆ ವ್ಯಾಖ್ಯಾನಿಸುತ್ತಾರೆ. ಆ ಮೂಲಕ ಅವರು ಇಂದಿನ ಆಧುನಿಕ ಸಂದರ್ಭದಲ್ಲಿ ಜಾತಿಯನ್ನು ಅದರೆಲ್ಲ ವೇಷಭೂಷಣಗಳೊಂದಿಗೆ ಮಾತ್ರವಲ್ಲ, ನಮ್ಮ ಬದುಕಿನ ಸರ್ವಾಂಗಗಳಲ್ಲೂ ಆಳಕ್ಕಿಳಿದಿರುವ ಅದರ ಬೇರುಗಳೊಡನೆ ಕಿತ್ತೊಗೆಯಬೇಕಾದ ಅಗತ್ಯವನ್ನು ಒತ್ತಿ ಹೇಳುತ್ತಾರೆ. ಇದರ ಹೊರತಗಾಗಿ ಸಾಹಿತ್ಯ- ಸಂಸ್ಕೃತಿ- ಧರ್ಮಗಳೂ ಸೇರಿದಂತೆ ನಮ್ಮ ಬದುಕಿನ ಒಟ್ಟು ರಾಜಕೀಯವೇ ಇಂದಿನ ವಿಕ್ಷಿಪ್ತತೆಗಳಿಂದ ಸುತರಾಂ ಹೊರಬರಲಾರದು ಎಂಬುದನ್ನು ಒಂದು ಹೊಸ ತತ್ವದರ್ಶನದ ರೂಪದಲ್ಲಿ ಮಂಡಿಸುತ್ತಾರೆ.[೧೦]

ಮೇಲ್ನೋಟಕ್ಕೆ ಇದು, ಭಾರತೀಯ ಸಂಸ್ಕೃತಿಯ ಹೆಸರಿನಲ್ಲಿ ವೈದಿಕ ಸಂಸ್ಕೃತಿ ಹೇರುತ್ತಿರುವ ಏಕರೂಪಿ ಆಯ್ಕೆ ಮತ್ತು ಅಭಿರುಚಿಗಳ ಜಾಲದ ಬಗೆಗಿನ ತನ್ನ ತೀಕ್ಷ್ಣ ನೋಟ ಮತ್ತು ಮಾತುಗಳಿಂದಾಗಿ; ಬ್ರಾಹ್ಮಣರಾಗಿ ನೋಡಿದರೆ ಬ್ರಾಹ್ಮಣ ವಿರೋಧಿಯಾಗಿಯೂ, ಶೂದ್ರರಾಗಿ ನೋಡಿದರೆ ಶೂದ್ರ ಪರವಾಗಿಯೂ ಕಾಣುತ್ತದೆ. ಆದರೆ

ಈ ಎರಡೂ ನೋಟಗಳನ್ನು ಧಿಕ್ಕರಿಸಿ ನೋಡಬಲ್ಲವರಿಗೆ, ಅದು ಜಾತಿ ವಿರೋಧಿಯಾಗಿ ತನ್ನ ಸಂಸ್ಕೃತಿ ವಿಶ್ಲೇಷಣೆಯನ್ನು ಮಂಡಿಸುತ್ತಾ ಭಾರತದ ಬದುಕಿನ ಜೀವಸತ್ವವಾದ ಬಹು ಸಂಸ್ಕೃತಿಯ ಸಮಾಜಕ್ಕಾಗಿ ಹಂಬಲಿಸುತ್ತಿರುವುದು ಗೊತ್ತಾಗುತ್ತದೆ. ಆದರೆ ನಮ್ಮ ಸಮಾಜ ತೇಜಸ್ವಿ ಹೇಳುವ ಅರ್ಥದಲ್ಲಿನ ಜಾತಿ ವಿರೋಧಿ ನಿಲುವನ್ನು ತಳೆಯಲಾಗದೆ, ಸದಾ ವೇಷ ಮತ್ತು ಭಾಷೆಗಳನ್ನು ಬದಲಾಯಿಸುತ್ತಾ ತನ್ನ ಬೌದ್ಧಿಕ ನಾಯಕತ್ವವನ್ನು ಭದ್ರ ಮಾಡಿಕೊಳ್ಳುತ್ತಾ ಹೋಗುತ್ತಿರುವ ಬ್ರಾಹ್ಮಣ ಪುರೋಹಿತಶಾಹಿಯ ರಾಜಕಾರಣ ಹಾಗೂ ಆದಷ್ಟೂ ತನ್ನ ಜಾತಿಗಷ್ಟೇ ಲೌಕಿಕ ಲಾಭಗಳನ್ನು ಗೆಬರಿಕೊಳ್ಳಲು ಹವಣಿಸುವುದರಾಚೆಗೆ ಬೆಳೆಯಲು ನಿರಾಕರಿಸುತ್ತಿರುವ 'ಸಾಮಾಜಿಕ ನ್ಯಾಯ'ದ ವಿಷವ್ಯೂಹಕ್ಕೆ ಸಿಕ್ಕ ಶೂದ್ರ ರಾಜಕಾರಣಗಳಿಂದಾಗಿ; ಎಂದೂ ಮುಗಿಯಲಾರದ ಜಾತಿ ಸಂಘರ್ಷದ ಮನೋಸ್ಥಿತಿಯಲ್ಲೇ ತೊಳಲಾಡುವಂತಹ ಪರಿಸ್ಥಿತಿಗೆ ಈಡಾಗಿದೆ. ಇದರಿಂದಾಗಿ ಈ ಚಿಂತನೆ ಬ್ರಾಹ್ಮಣ ವಿರೋಧಿ ಮತ್ತು ಶೂದ್ರಪರವೆಂಬ ಎರಡು ಜಾತಿವಾದಿ ನೋಟಗಳಿಗಷ್ಟೇ ಸಿಗುತ್ತಾ ಕಳೆದು ಹೋಗಿದೆ. 'ದೇಶಕಾಲ' ಕುರಿತ ಸದರಿ ಚರ್ಚೆಯಲ್ಲೂ ನಾನು ಕಾಣುವುದು ಈ ಪರಿಸ್ಥಿತಿಯನ್ನೇ. ಹಾಗಾಗಿ ಅದು ಇನ್ನೊಂದು ಎಂದೂ ಮುಗಿಯಲಾರದ ಚರ್ಚೆಯಾಗಿಯೇ ಉಳಿಯುವ ಅಪಾಯವನ್ನು ಎದುರಿಸುತ್ತಿರುವುದು.

ನಿಜ, ಡಿ.ಆರ್. ನಾಗರಾಜರು ರೂಪಿಸದ್ದೆಂದು ಹೇಳಲಾಗುವ ಸಂಸ್ಕೃತಿ ಚಿಂತನೆಯ ಹಿಂದೆ ಇದರ (ಋಣ ನೆನೆಯದ) ಗಾಢ ಪ್ರಭಾವವನ್ನು ಕಾಣಬಹುದು. ಆದರೆ ಅವರ ಈ ಸಂಸ್ಕೃತಿ ಚಿಂತನೆ ತನಗೊಲ್ಲದ/ಸಲ್ಲದ ಮಹತ್ವಾಕಾಂಕ್ಷೆಯೊಂದಿಗೆ ಸೀಮೋಲ್ಲಂಘನೆ ಮಾಡಿ ವಿಶ್ವಾತ್ಮಕ ನೆಲೆಗಳಿಗೆ ಮತ್ತು ಪರಿಭಾಷೆಗೆ ವಿಸ್ತರಿಸಿಕೊಂಡಿದ್ದರಿಂದ, ಅದರೊಳಗಿನ ತೇಜಸ್ವಿ ಚಿಂತನೆಯ ಬೇರುಗಳು ನೆಲ ಕಳಚಿಕೊಂಡಂತಾಗಿವೆ. ಹಾಗಾಗಿ, ಅದು ಯಾವ ನೆಲೆಗಳಲ್ಲಿ ತನ್ನ ನಿಜವಾದ ಪ್ರಸ್ತುತತೆಯನ್ನೂ, ವಿಸ್ತರಣೆಯನ್ನೂ, ಪರಿಣಾಮಶೀಲತೆಯನ್ನೂ ಕಂಡುಕೊಳ್ಳಬೇಕಿತ್ತೋ ಅಲ್ಲಿ ಕಂಡುಕೊಳ್ಳಲಾಗದಾಗಿದೆ. ಆದರೆ ಇಂದು ಆ ಸಾಧ್ಯತೆಗೆ ಅವಕಾಶಗಳು ತೆರೆದುಕೊಂಡಂತಿದೆ. ಏಕೆಂದರೆ, ಈಗ ಪ್ರಧಾನವಾಗಿ ತೇಜಸ್ವಿ ಕಟ್ಟಿದ ಪರಂಪರೆ ಎಂದೇ ಗುರುತಿಸಬಹುದಾದ ರೀತಿಯಲ್ಲಿ, (ಅನಂತಮೂರ್ತಿಯವರು ತೇಜಸ್ವಿಯವರನ್ನು 'ಮಾರ್ಗ ಪ್ರವರ್ತಕ ಲೇಖಕ' ಎಂದು ಗುರುತಿಸಿರುವುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು) ಹೊಸ ತಲೆಮಾರಿನ ಹಲವು ಲೇಖಕರು ಸಾಹಿತ್ಯ ನಿರ್ಮಾಣಕ್ಕೆ 'ಸಾಮಾನ್ಯ ಸಾಮಾಜಿಕ ಪರಿಜ್ಞಾನ'ವಷ್ಟೇ ಸಾಕೆಂಬಂತೆ (ಸಾಹಿತ್ಯ ಸಂಪ್ರದಾಯಗಳ ಭಾರದಿಂದ)'ಮುಕ್ತ'ವಾಗಿ ಬರೆಯುತ್ತಿದ್ದಾರೆ. ತೇಜಸ್ವಿ ಚಿಂತನೆ, ಹೊಸ ತಲೆಮಾರಿನ ಈ ಲೇಖಕರು ಜಾಗತೀಕರಣದ ಬಹುಮುಖಿ ಪರಿಣಾಮಗಳಿಂದಾಗಿ ಸದ್ಯದ ಸಾಹಿತ್ಯಿಕ– ಸಾಂಸ್ಕೃತಿಕ ಸಂದರ್ಭದಲ್ಲಿ ಎದುರಿಸುತ್ತಿರುವ ಹಲವು ತಾತ್ವಿಕ ಪ್ರಶ್ನೆಗಳಿಗೆ ಮುಖಾಮುಖಿಯಾಗುತ್ತಾ, ಇಂದು ನಮ್ಮನ್ನು ಮತ್ತೆ ಚರ್ಚೆಗಾಗಿ ಆಹ್ವಾನಿಸುತ್ತಿರುವಂತಿದೆ. ಈ ತಲೆಮಾರಿಗೇ ಸೇರಿದ ಮಂಜುನಾಥ್ ಲತಾ– ಐಜೂರರ ಲೇಖನದ ಹಿಂದಿನ ಗೊಂದಲಗಳೂ, ಅಸಂಬದ್ಧ ಆಕ್ರೋಶಗಳೂ,

ಗೋಜಲಾದ ಪ್ರಶ್ನೆಗಳೂ; ಹಾಗಿದ್ದೂ ಅದು ಹುಟ್ಟು ಹಾಕಿರುವ ಸದರಿ ಕುತೂಹಲಕರ ಚರ್ಚೆ ಇದಕ್ಕೆ ಸಾಕ್ಷಿಯಂತಿದೆ.

ಈ ಹಿನ್ನಲೆಯಲ್ಲಿ, ಯಾರಿಗಾದರೂ ಏಳುವ ದೊಡ್ಡ ಪ್ರಶ್ನೆಯೆಂದರೆ, ತೇಜಸ್ವಿಯವರ ಚಿಂತನೆಯನ್ನು ಸಾಮಾನ್ಯ ಸಾಮಾಜಿಕರು ಹೋಗಲಿ, ನಮ್ಮ ಲೇಖಕ– ಬುದ್ಧಿಜೀವಿಗಳಾದರೂ ಏಕೆ ಈವರಗೆ ಗಂಭೀರ ಪರಿಶೀಲನೆಗೆ ಒಳಪಡಿಸಿಲ್ಲ? ಅವರ ಸಾಹಿತ್ಯವನ್ನು ಅದರ ಒಟ್ಟು ತಾತ್ವಿಕತೆಯ ಅನ್ವೇಷಣೆಯಾ ಪ್ರಯತ್ನವಾಗಿ ನೋಡದೆ, ಅದನ್ನು ಸಾಹಿತ್ಯ ಪ್ರಕಾರವಾರು ವಿಂಗಡಿಸಿ ವಿಶ್ಲೇಷಿಸಿ; ಅಂತಹ ವಿಶ್ಲೇಷಣೆಗಳಿಂದ ಪಡೆದ ಸಾಮಾಜಿಕ ಮತ್ತು ಸಾಹಿತ್ಯಿಕ ರೋಮಾಂಚನಗಳಲ್ಲಿ ಮುಳುಗಿ ಹೋಗಿರುವಂತೆ ತೋರುವ ನಮ್ಮ ಪ್ರಧಾನ ಧಾರೆಯ ವಿಮರ್ಶೆ ಸಹಜವಾಗಿಯೇ, ಆ ತಾತ್ವಿಕತೆಯ ಬೇರುಗಳನ್ನು ತಡಕಲು ಹೋಗದೆ ತನ್ನ ರಾಜಕೀಯ ಆಸಕ್ತಿಗಳು ಭಂಗಗೊಳ್ಳದಂತೆ ನೋಡಿಕೊಂಡಿದೆ. ಕೆಲವರು ತಾವು ಮತ್ತೇನನ್ನೋ ಬರೆಯುವದರ ಭಾಗವಾಗಿಯಷ್ಟೇ, ನಾನು (ಬಹುಶಃ ನಾನೊಬ್ಬನೇ?) ಈ ಬಗ್ಗೆ ಬರೆದ ನಾಲ್ಕೈದು ಲೇಖನಗಳ[(1)] ಗಲಾಟೆ ತಾಳಲಾಗದೆಂಬಂತೆ, ಅಲ್ಲೊಂದು ಇಲ್ಲೊಂದು ಪ್ರತಿಕ್ರಿಯೆ ನೀಡುತ್ತಾ ಆನುಷಂಗಿಕವಾದ ಕೆಲವು ತಕರಾರುಗಳನ್ನು ಎತ್ತಿರುವುದನ್ನು ಗಮನಿಸಿದ್ದೇನೆ. (ಹಾಗೆ ನೋಡಿದರೆ ಮುಖ್ಯವಾಗಿ ಪ್ರತಿಕ್ರಿಯೆ ಬರಬೇಕಾಗಿದ್ದದ್ದು ಅನಂತಮೂರ್ತಿಯವರಿಂದ; ಆದರೆ ಬರಲಿಲ್ಲ!)

ನಿಜ, ತೇಜಸ್ವಿ ಅವರ ವಾದದಲ್ಲಿ ಕೆಲವು ತೊಂದರೆಗಳಿವೆ, ಅತಿಗಳಿವೆ. ಮುಖ್ಯವಾಗಿ ನಾನು ಗಮನಿಸಿದ್ದು, ಬಹು ನೆಲೆಗಳ ಜಾತಿವ್ಯವಸ್ಥೆಯನ್ನು ಬರಿ ಬ್ರಾಹ್ಮಣ– ಶೂದ್ರ ನೆಲೆಯಲ್ಲಿ ವ್ಯಾಖ್ಯಾನಿಸಿ ತೀರ್ಮಾನಗಳಿಗೆ ಬರುವುದು; ವೈದಿಕ ಪರಂಪರೆಯನ್ನು ಏಕಶಿಲಾಖಂಡ ರೂಪದಲ್ಲಿ ನೋಡಿ ಅರ್ಥೈಸುವ ಪ್ರಯತ್ನ ಮಾಡುವುದು; ಆಳದಲ್ಲಿ ಜೈನಕ್ಕಿಂತ ಹೆಚ್ಚಾಗಿ ಬೌದ್ಧ ಪರಂಪರೆ ಕನ್ನಡ ಸಮಾಜದ ತಾತ್ವಿಕ ಪ್ರತಿರೋಧ ಶಕ್ತಿಯನ್ನು ರೂಪಿಸಿದೆ ಎಂಬುದನ್ನು ಗುರುತಿಸದೇ ಹೋಗಿರುವುದು, ಇತ್ಯಾದಿ. ಆದರೆ ಇವು ತೇಜಸ್ವಿ ಈ ದರ್ಶನವನ್ನು ಮಂಡಿಸಿದ ಕಾಲದಲ್ಲಿ ನಡೆದಿದ್ದ ಚರ್ಚೆಗಳು ಹೇರಿದ್ದ ಮಿತಿಗಳು ಹಾಗೂ ಒತ್ತಾಯಗಳು ಎಂದು ನಾನು ಭಾವಿಸುತ್ತೇನೆ

ಇದನ್ನು ದರ್ಶನವೆಂದು ಕರೆಯುವುದು ದೊಡ್ಡ ಮಾತು ಎಂದು ಯಾರಾದರೂ ಭಾವಿಸಿದರೆ; ಬೇಡ. ಚಿಂತನೆ ಎಂದೇ ಕರೆಯೋಣ. ಆದರೆ ಇಷ್ಟು ದೊಡ್ಡ ಚಿಂತನೆಯನ್ನು ಬೆಳೆಸುವುದು ಹೋಗಲಿ, ಕನಿಷ್ಟ ಒಂದು 'ವಿವಾದ' ಎಂದಾದರೂ ನಮ್ಮ ಲೇಖಕ– ಬುದ್ಧಿಜೀವಿಗಳು ಚರ್ಚೆಗೆ ಎತ್ತಿಕೊಳ್ಳಲಿಲ್ಲ ಎಂದರೆ ಅದಕ್ಕೇನು ಕಾರಣ? ತೇಜಸ್ವಿಯವರ ಮಾತುಗಳಲ್ಲಿಯೇ ಹೇಳುವುದಾದರೆ, ನಮ್ಮ ಜನ ಜಾತಿ ಸುದ್ದಿ ಎತ್ತಿದರೆ ವಿದ್ಯುತಂತಿ ಮುಟ್ಟಿದ ಹಾಗೆ ಆಡುತ್ತಾರೆ. ಇದು ಸಾಮಾನ್ಯ ಜನಕ್ಕಿಂತ ಹೆಚ್ಚಾಗಿ ನಮ್ಮ ಬುದ್ಧಿಜೀವಿಗಳಿಗೆ ಅನ್ವಯಿಸುವ ಮಾತು. ಏಕೆಂದರೆ ಸಾಮಾನ್ಯ ಜನಕ್ಕೆ ಜಾತಿ ಒಂದು (ಕುರುಡು)ನಂಬಿಕೆ ಮಾತ್ರವಾಗಿದ್ದರೆ, ನಮ್ಮ ಬಹಳಷ್ಟು ಬುದ್ಧಿಜೀವಿಗಳಿಗೆ ಅದು ಅವರ ಅಸ್ತಿತ್ವದ ನಿಜ ಆಧಾರ! ತೇಜಸ್ವಿ ಹೇಳಿದ

ಅರ್ಥದಲ್ಲಿ ಜಾತಿ ಬಿಡಿ ಎಂದರೆ, ಅವರು ತಮ್ಮ ಲೌಕಿಕ ಬದುಕಿನ ಹಲವು– ಹೆಂಡತಿ, ನೆಂಟರಿಷ್ಟರು– ನೆಲೆಗಳಲ್ಲಿ (ಅನಗತ್ಯ)ತೊಂದರೆ, ಕಷ್ಟ ಕೋಟಲೆ ಹಾಗೂ ಗೋಜಲುಗಳಿಗೆ ಸಿಕ್ಕಿಹಾಕಿಕೊಳ್ಳುವುದಲ್ಲದೆ, ತಮ್ಮ ಬುದ್ಧಿಜೀವತ್ವಕ್ಕೆ ಮತ್ತು ಅದರಿಂದ ಲಭ್ಯವಾಗಿರುವ ಸ್ಥಾನಮಾನ– ಕೀರ್ತಿ– ಸವಲತ್ತುಗಳಿಗೆ ಆಧಾರಗಳಾದ ಅವರ ಓದಿನ ಆಯ್ಕೆ, ಗಳಿಸಿದ ಪಾಂಡಿತ್ಯ, ರೂಢಿಸಿಕೊಂಡ ಚಿಂತನಾ ಕ್ರಮ, ಕಟ್ಟಿಕೊಂಡ ಮಾದರಿಗಳು, ಅವು ರೂಪಿಸಿದ ನಂಬಿಕೆಗಳು, ಎತ್ತಿಹಿಡಿದ ವಿಚಾರಗಳು, ಕರೆ ನೀಡಿದ ಬಂಡಾಯಗಳು, ಊದಿದ ಕ್ರಾಂತಿ ಕಹಳೆಗಳು ಹಾಗೂ ಎಲ್ಲಕ್ಕಿಂತ ಹೆಚ್ಚಾಗಿ ಮರುಳು ಮಾಡುವ ಅವುಗಳ ಪರಿಭಾಷೆ ಎಲ್ಲವನ್ನೂ ತ್ಯಜಿಸಬೇಕಾಗುತ್ತದೆ. ಇಡಿಯಾಗಿ ತಮ್ಮನ್ನು ತಾವು ಹೊಸದಾಗಿ ಕಟ್ಟಿಕೊಳ್ಳಬೇಕಾಗುತ್ತದೆ.

ಈ ಪ್ರಳಯ, ಸ್ವಯಂನಾಶ (ಇದಕ್ಕೆ ರಚನಾತ್ಮಕ ಪರ್ಯಾಯ– ಬೌದ್ಧ– ಶಬ್ದವೆಂದರೆ 'ಆತ್ಮ'ನಾಶ) ಯಾರಿಗೆ ಬೇಕು? ಆದರೆ ಇವರು ಅಲ್ಲಮಪ್ರಭುವಿನ 'ತನ್ನ ತಾನರಿತರೆ ಅದೇ ಪ್ರಳಯ!' ಎಂಬ ಮಾತನ್ನು ಮಾತ್ರ ಅವಕಾಶ ಸಿಕ್ಕೆಡೆಗಳಲ್ಲೆಲ್ಲ ರೋಮಾಂಚಿತರಾಗಿ ಹೇಳುತ್ತಾ, ವ್ಯಾಖ್ಯಾನಿಸುತ್ತಾ ಆನಂದಿಸುವುದನ್ನು ಮಾತ್ರ ನಿಲ್ಲಿಸುವುದಿಲ್ಲ! ಇದೇ, ಇದೇ, ನಮ್ಮ ಬೌದ್ಧಿಕ ಜಗತ್ತಿನ ಈ ಆತ್ಮದ್ರೋಹಿ ವರ್ತನೆಯೇ, ಇಂದಿನ ಕನ್ನಡ ಸಮಾಜವನ್ನು ಈ 'ದೇಶಕಾಲ' ಕುರಿತ ಈ ಚರ್ಚೆಯಲ್ಲಿಯೂ ಕಾಣುವಂತಹ ಪರಸ್ಪರ ಅರಿವ, ಅನುಸಂಧಾನಿಸುವ, ಸಮೀಪಿಸುವ ಯಾವುದೇ ಸಾಧ್ಯತೆಯೂ ಗೋಚರವಾಗದ ರೀತಿಯಲ್ಲಿ ಒಡೆದಿಟ್ಟಿರುವುದು.

– ೭ –

ಫಣಿರಾಜ್ ತಾವು ತೇಜಸ್ವಿ ವಾದದ ಪರ ಇರುವುದಾಗಿ ಹೇಳಿಕೊಂಡಿದ್ದಾರೆ.[೨] ಅಷ್ಟೇ ಅಲ್ಲ, ತೇಜಸ್ವಿಯವರ ಈ ಚಿಂತನೆಯನ್ನು ಅಮೂಲ್ಯ ಪಥ್ಯವೆಂದೂ ವರ್ಣಿಸಿದ್ದಾರೆ, ಆದರೆ ಇಂತಹ ಹೇಳಿಕೆಗಳಿಂದ, ವರ್ಣನೆಗಳಿಂದ ಏನು ಪ್ರಯೋಜನ? ಸಾಕಷ್ಟು ಬರೆದಿರುವ, ಮಾತನಾಡಿರುವ, ಹೋರಾಟ– ಕಾರ್ಯಕ್ರಮಗಳನ್ನು ರೂಪಿಸಿರುವ ಅವರು ತೇಜಸ್ವಿಯವರ ಈ ಚಿಂತನೆಯ ಬಗ್ಗೆ ಎಲ್ಲಿ, ಯಾವ ಸಂದರ್ಭದಲ್ಲಿ ಯಾವ ರೂಪದಲ್ಲಿ ಚರ್ಚೆ ಎತ್ತಿದ್ದಾರೆ? ಚರ್ಚೆ ಎತ್ತುವುದಿರಲಿ, ಉಲ್ಲೇಖವನ್ನಾದರೂ ಮಾಡಿದ್ದಾರೆ? ಮಾಡಿರುವುದೇ ಅದರೆ, ಸದರಿ ಚರ್ಚೆಯಲ್ಲಿಯೂ ಅಂತಹ ಯಾವ ತಾತ್ವಿಕ ಸೂಚನೆಗಳೂ ಕಾಣುವುದಿಲ್ಲವಲ್ಲ? ತೇಜಸ್ವಿ ಚಿಂತನೆ ಪರವಾದ ಇಲ್ಲಿನ ಅವರ ಇಂತಹ ಬಾಯಿಮಾತಿನ ಸಗಟು ಸಹಾನುಭೂತಿ, ಅವರ 'ಕೋಮು ಸೌಹಾರ್ದ' ಕಾರ್ಯಕ್ರಮದಂತಹ ಒಂದು ಕಾರ್ಯಕ್ರಮದ ರೂಪದಲ್ಲಾದರೂ ಕಾಣಿಸಿಕೊಳ್ಳುವಂತಾಗಿದ್ದರೆ, ಅವರ ಸಹಾನುಭೂತಿಗೆ ಒಂದು ಅರ್ಥವಿರುತ್ತಿತ್ತು.

ಅಂತಹ ಕಾರ್ಯಕ್ರಮ ರೂಪುಗೊಳ್ಳಲು ಮೊದಲು ಅಂತಹ ಚಿಂತನೆಯನ್ನು ಕುರಿತ ಮಂಥನ ನಡೆಯಬೇಕಲ್ಲ? ಹಾಗಾಗಿ ಫಣಿರಾಜ್ ತಮ್ಮ ವಾಗ್ವಾದಪ್ರಿಯತೆಗೆ ಒಂದು ಕ್ರಿಯಾಶೀಲ ರೂಪು ಕೊಟ್ಟು ಅದನ್ನು ಅರ್ಥಪೂರ್ಣಗೊಳಿಸಲು ಮೊದಲು ಮಾಡಬೇಕಾದುದು, ತಾವು ಪರವಾಗಿರುವುದಾಗಿ ಹೇಳಿಕೊಂಡಿರುವ ಈ ಚಿಂತನೆಯ

ಕುರಿತು ತಮ್ಮ ಸಹಮನಸ್ಕ ಮಿತ್ರರೊಂದಿಗೆ ಚರ್ಚೆ ಆರಂಭಿಸುವುದು. ಅದಕ್ಕೇ 'ದೇಶಕಾಲ'ವೇ ಮೊದಲ ವೇದಿಕೆಯಾಗುವುದಾದರೆ ಇನ್ನೂ ಒಳ್ಳೆಯದೇ! ಹಾಗೇ ಮಂಜುನಾಥ್ ಲತಾ-ಚಂದ್ರಶೇಖರ ಐಜೂರ್ ಹಾಗೂ ಅವರ ಮಿತ್ರರು ಈ ಚರ್ಚೆಯನ್ನು ಮುಂದುವರೆಸಿ, ಆ ಚಿಂತನೆ ಎಲ್ಲ ಸಾಮಾಜಿಕ ಶ್ರೇಣಿಗಳ ಜನರ ಅನುಭವಗಳ ಮೂಸೆಯಲ್ಲಿ ಎರಕಗೊಂಡು; ಅದೊಂದು ವ್ಯಾಪಕ ರಾಜಕೀಯ ಕಾರ್ಯಕ್ರಮವಾಗಿ ರೂಪುಗೊಳ್ಳುವಂತೆ ನೋಡಿಕೊಳ್ಳಲು ಸಾಧ್ಯವೇ? ಇದರ ಭಾಗವಾಗಿ, ಈ ಚರ್ಚೆಗೆ ಧುಮುಕಿದ ಎಲ್ಲರೂ ಈ ಧುಮುಕಿನ ಉತ್ಸಾಹದೊಂದಿಗೇ ತಮ್ಮ ಕೊಡುಗೆ ಸಲ್ಲಿಸುವಂತೆ ಪ್ರೇರೇಪಿಸಲು ಸಾಧ್ಯವಾದರೆ, ಈ ಚರ್ಚೆ ಒಂದು ಸಾರ್ಥಕ ಅಂತ್ಯ ಕಂಡೀತು. ಇಲ್ಲವಾದರೆ, ಮಂಜುನಾಥ್- ಐಜೂರರ (ಉದ್ದನೆಯ)ಬಾಲ ತರ್ಕವನ್ನೇ ಬಳಸಿ ಹೇಳುವುದಾದರೆ, 'ಉತ್ತರ ಕರ್ನಾಟಕದ ಸಾವಿರಾರು ಜನ ನೆರೆ ಸಂತ್ರಸ್ತರು ಕೇಳುವವರಿಲ್ಲದೆ ಬೀದಿ ಪಾಲಾಗಿರುವಾಗ' ಚರ್ಚೆಗಾಗಿ ಚರ್ಚೆ ನಡೆಸಿದ ಸಾಮಾಜಿಕ ಅಪರಾಧದಲ್ಲಿ ನಾವೆಲ್ಲರೂ ಪಾಲುದಾರರಾಗಬೇಕಾಗುತ್ತದೆ!

ಬಹುಶಃ ಇದನ್ನೇ (ಈ ಚಿಂತನೆಯನ್ನೇ ಆಧರಿಸಿದ್ದಲ್ಲವಾದರೂ) ಕೆ.ಪಿ. ಸುರೇಶ್ 'ದೇಶಕಾಲ'ಕ್ಕೆ 'ವಿಷನ್'ನ ಕೊರತೆ ಇದೆ ಎಂದು ಹೇಳಲು ಹೋಗಿದ್ದು ಎಂದು ಕಾಣುತ್ತದೆ. ಮೊದಲಾಗಿ ನಮ್ಮ ಬದುಕಿಗೆ ಒಂದು 'ವಿಷನ್'ನ ಇರುವುದಾದರೆ, ನಾವು ಮಾಡುವ ಎಲ್ಲ ಕೆಲಸಗಳಿಗೂ ಒಂದು 'ವಿಷನ್' ಇದ್ದೀತು. ಆದರೆ ರಾಜಶೇಖರ್ ಎಲ್ಲ ಆದರ್ಶಗಳೂ, ಸಿದ್ಧಾಂತಗಳೂ ಅವುಗಳ ವಿರೋಧಾಭಾಸಗಳಿಂದಾಗಿಯೋ, ಮತ್ತಾವುದೋ ಕಾರಣದಿಂದಲೋ ಮಣ್ಣು ಪಾಲಾಗಿರುವಾಗ ಯಾವ ಸಿದ್ಧಾಂತ, ಯಾವ 'ವಿಷನ್' ಎಂದು ಕೇಳುತ್ತಾ ವ್ಯಂಗ್ಯವಾಡುತ್ತಾರೆ. ಅವರೂ ಜಾಗತೀಕರಣದ ತಾತ್ವಿಕರಂತೆ ಇತಿಹಾಸವೇ ಅಂತ್ಯವಾದಂತೆ ಮಾತಾಡುತ್ತಿರುವುದು ಆಶ್ಚರ್ಯಕರ! ರಾಜಶೇಖರ್ ಎಲ್ಲಿದ್ದವರು ಎಲ್ಲಿಗೆ ಬಂದು ಮುಟ್ಟಿದ್ದಾರೆ ಎಂದೂ ಆಶ್ಚರ್ಯವಾಗುತ್ತದೆ! ಅವರು ಆಗ ಅಲ್ಲಿದ್ದುದಕ್ಕೇ ಈಗ ಇಲ್ಲಿಗೆ ಬಂದು ಮುಟ್ಟಿರುವುದೋ? ನಾನಂತೂ, ಇಪ್ಪತ್ತು- ಇಪ್ಪತ್ತೈದು ವರ್ಷಗಳ ಹಿಂದೆ ಇದೇ ರಾಜಶೇಖರರು ಶಿವರಾಮ ಕಾರಂತರನ್ನು ಸಂದರ್ಶಿಸಿದ್ದಾಗ ಕಾರಂತರು ಪ್ರತಿ ಪ್ರಶ್ನೆಗೂ ಎಲ್ಲವನ್ನೂ ಮೊದಲೇ ನಿಶ್ಚಯಿಸಿಕೊಂಡವರ ಹಾಗೆ ಇವರ ಮೇಲೆ ಹರಿಹಾಯ್ದಿದ್ದದನ್ನು ಓದಿ ಹೇಗೆ ಬೆಪ್ಪಾಗಿದ್ದೆನೋ, ಈಗ ರಾಜಶೇಖರರು ಈ ಚರ್ಚೆಯಲ್ಲಿ ಪ್ರಶ್ನೆ ಕೇಳಿದವರ ಮೇಲೆಲ್ಲಾ ಯಥಾವತ್ ಹಾಗೇ ಹರಿಹಾಯ್ದಿರುವುದನ್ನು ಓದಿ ಬೆಪ್ಪಾಗಿದ್ದೇನೆ. ಕಾಲಚಕ್ರ ಎಷ್ಟು ಬೇಗ ತಿರುಗಿ ಇಲ್ಲಿಗೆ ಬಂದು ನಿಂತಿದೆ ಎಂದು ಆಶ್ಚರ್ಯವಾಗುತ್ತದೆ!

ಅದೇನೇ ಇರಲಿ, ಎಷ್ಟೇ ಸಾವಿರ ಸಿದ್ಧಾಂತಗಳು ಸಾಯಲಿ, ತನ್ನ ಅಸಂಗತ ರಚನೆಗಳಲ್ಲಿ ಎದುರಾಗಿ ನಮ್ಮನ್ನು ಹೆದರಿಸುವ ಬದುಕನ್ನು ಸಂಗತ ಮಾಡಿಕೊಂಡು, ಸ್ವಲ್ಪವಾದರೂ ನೆಮ್ಮದಿಯಿಂದ ಬದುಕಲು ಒಂದು ಸಿದ್ಧಾಂತ- ಅದು ತೇಜಸ್ವಿ ಹೇಳುವಂತೆ 'ಕಾಮನ್ ಸೆನ್ಸ್' ರೂಪದಲ್ಲೇ ಇರಲಿ- ಬೇಕೇ ಬೇಕು. ಆದರೆ ಅದು ಸದಾ ಕೆಡವುತ್ತಾ, ಆದರೆ ಅದೇ ಸಮಯದಲ್ಲಿ ಕಟ್ಟಿಕೊಳ್ಳುತ್ತಾ ಇರುವ ಚಲನಶೀಲ ಸಿದ್ಧಾಂತವಾಗಿರಬೇಕಾ

ಗುತ್ತದಷ್ಟೆ. ಇದು ಗೊತ್ತಿದ್ದರೆ, ಸಿದ್ಧಾಂತಗಳ ಸಾವು ಅಥವಾ ನಾಶ ಎಂಬ ಮಾತೇ ಅಸಂಗತ ಎಂಬುದು ಸ್ಪಷ್ಟವಾದೀತು! ಇದೆಲ್ಲ ರಾಜಶೇಖರ್‌ಗೆ ಗೊತ್ತಿಲ್ಲವೆಂದು ಹೇಳುತ್ತಿಲ್ಲ. ಅವರಿಗೆ ಹೇಳುವ ನೆಪದಲ್ಲಿ ಮಂಜುನಾಥ್ ಲತಾ– ಐಜೂರರಿಗೂ ಹೇಳುತ್ತಿರುವೆನಷ್ಟೆ. ಏಕೆಂದರೆ ಇವರಿಬ್ಬರೂ ಸದರಿ ಚರ್ಚೆಯನ್ನು ಮುಗಿಸುತ್ತಾ (ಅದರೆಲ್ಲ ಅರ್ಥಗಳಲ್ಲಿ?) ಇಡೀ ಚರ್ಚೆಯಿಂದ ಏನೂ ಪಡೆಯದವರಂತೆ ಅಥವಾ ಏನನ್ನೂ ಕಳೆದುಕೊಳ್ಳದವರಂತೆ, ಒಟ್ಟಿನಲ್ಲಿ ಅದರಲ್ಲಿ ಕಲಿಯಲು ಏನೂ ಇರಲಿಲ್ಲವೆಂಬಂತೆ; ಛಲ ಬಿಡದ ತ್ರಿವಿಕ್ರಮನ ರೀತಿ ಅದೇ ಹಳೆಯ ಆರೋಪಗಳ, ವ್ಯಂಗ್ಯ– ಟೀಕೆಗಳ ಬೇತಾಳವನ್ನು ಇನ್ನಷ್ಟು ಉಬ್ಬಿದ ಆತ್ಮವಿಶ್ವಾಸದೊಂದಿಗೆ ಹೆಗಲಿಗೇರಿಸಿಕೊಂಡು ನಡೆದಿರುವುದನ್ನು ಕಂಡು ನಿಜವಾಗಿ ಸುಸ್ತಾಗಿರುವೆ.

ಹಾಗಾಗಿ, ನಾನು ಈವರೆಗೆ ಬರೆದಿರುವ ಈ ಪುರಾಣವೆಲ್ಲ ಶಿವರಾತ್ರಿಯ ಒಂದು ಹರಿಕಥೆಗೆ ಸಮವಾಗಿಬಿಡಬಹುದೇ ಎಂಬ ಅನುಮಾನದಿಂದಲೇ ಈ ಬರಹವನ್ನು ಮುಗಿಸುತ್ತಿರುವೆ! ಆದರೆ ಮುಗಿಸುವ ಹೊತ್ತಿನಲ್ಲಿ ಏಕೋ, ಫಣಿರಾಜರು ಆರಂಭದಲ್ಲೇ ತಮ್ಮ ವಾದಕ್ಕೆ ಬೆಂಬಲವಾಗಿ 'ಭಾಷೆಯೇ ದೈವ' ಎಂಬುದು ಲಂಕೇಶರ 'ನಿಷ್ಠುರ ತಿಳುವಳಿಕೆ'ಯಾಗಿತ್ತು ಎಂಬ ಪಾಠ ಹೇಳಿದ್ದು ನೆನಪಿಗೆ ಬರುತ್ತಿದೆ. ಇದು ಲಂಕೇಶರ ಮೂಲ ತಿಳುವಳಿಕೆಯೋ, ಅಲ್ಲವೋ ನನಗೆ ತಿಳಿಯದು. ಆದರೆ ನನಗೆ ಒಂದು ತಿಳಿದಿದೆ: ದೆವ್ವವಿದ್ದೆಡೆ ಮಾತ್ರ ದೈವವಿರಬಲ್ಲುದು. ಅವರೆಡೂ ಅವಳಿ ಸೃಷ್ಟಿಗಳು! ಹಾಗಾಗಿ 'ಭಾಷೆಯೇ ದೈವ' ಎಂಬ ಮಾತಿನ ಹಿಂದೆಯೇ 'ಭಾಷೆಯೇ ದೆವ್ವ' ಎಂಬ ಮಾತಿರುತ್ತದೆ ಎಂಬ 'ನಿಷ್ಠುರ ತಿಳುವಳಿಕೆ'ಯೂ ನಮಗಿದ್ದರೆ ಒಳ್ಳೆಯದು ಎಂಬ ಎಚ್ಚರಿಕೆಯ ಮಾತನ್ನೂ ಇಲ್ಲಿ ಸೇರಿಸಬಯಸುವೆ.

೧ ಈ 'ಅಖಿಲ ಕರ್ನಾಟಕ ಬರಹಗಾರರ ಮತ್ತು ಕಲಾವಿದರ ಒಕ್ಕೂಟವು' ೧೯೭೩ರಲ್ಲಿ ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರ ನೇತೃತ್ವದಲ್ಲಿ ಮೈಸೂರಿನಲ್ಲಿ ಸಮಾವೇಶ ನಡೆಸಿ, ನವ್ಯ ಸಾಹಿತ್ಯದ ಹಿಂದೆ ತಾನು ಗುರುತಿಸಿದ ಅಘೋಷಿತ ಸಾಂಸ್ಕೃತಿಕ ರಾಜಕೀಯ ಪ್ರಣಾಳಿಕೆಯ ವಿರುದ್ಧ ಸಮರ ಸಾರಿತು. ಇದರ ಅಧ್ಯಕ್ಷರು, ಜಿ.ಎಸ್.ಶಿವರುದ್ರಪ್ಪ. ಈ ಸಮಾವೇಶವನ್ನು ಉದ್ಘಾಟನೆ ಮಾಡಿದವರು ಕುವೆಂಪು. ಈ ಉದ್ಘಾಟನಾ ಭಾಷಣವೇ 'ಸಂಸ್ಕೃತಿ ಕ್ರಾಂತಿಗೆ ಕಹಳೆ ನಾಂದಿ' ಎಂದು ಮುಂದೆ ಪ್ರಸಿದ್ಧವಾದದ್ದು. ಈ ಸಮಾವೇಶದ ಇನ್ನೊಂದು ಮುಖ್ಯ ಭಾಷಣವೆಂದರೆ, ಕನ್ನಡ ಸಾಹಿತ್ಯ– ಸಂಸ್ಕೃತಿಗಳನ್ನು ಕುರಿತ ಚರ್ಚೆಯ ನೆಲೆಗಳನ್ನೇ ಸಂಪೂರ್ಣ ಬದಲಿಸಿದ ತೇಜಸ್ವಿಯವರ 'ಕರ್ನಾಟಕ ಸಂಸ್ಕೃತಿ ವಿಶ್ಲೇಷಣೆ'.

ಈ ಸಮಾವೇಶದಲ್ಲಿ ಭಾಗವಹಿಸಿದ್ದ ಪ್ರಮುಖರೆಂದರೆ, ಪಿ.ಲಂಕೇಶ್, ದೇವನೂರ ಮಹಾದೇವ, ಎಂ.ಡಿ. ನಂಜುಂಡಸ್ವಾಮಿ, ಚಂದ್ರಶೇಖರ ಪಾಟೀಲ, ಸಿದ್ಧಲಿಂಗ ಪಟ್ಟಣಶೆಟ್ಟಿ, ಕೆ.ಎಂ.ಶಂಕರಪ್ಪ, ಕೆ.ರಾಮದಾಸ್, ರಾಜಶೇಖರ ಕೋಟಿ, ಪ.ಮಲ್ಲೇಶ್, ಆಲನಹಳ್ಳಿ ಕೃಷ್ಣ, ಬೆಸಗರಹಳ್ಳಿ ರಾಮಣ್ಣ, ಕಾಳೇಗೌಡ ನಾಗವಾರ, ಕಲ್ಲೆ ಶಿವೋತ್ತಮ ರಾವ್, ವಿಶುಕುಮಾರ್ ಮುಂತಾದವರು. ಈ ಒಕ್ಕೂಟ ಆದರ ಪದಾಧಿಕಾರಿಗಳ

ನಡುವೆ ತಾಳಮೇಳವಿಲ್ಲದ ಕಾರಣ (ತೇಜಸ್ವಿ ಪ್ರಕಾರ) ಸಂಘಟನೆಯಾಗಿ ಬಹುಬೇಗ ಕಳೆದುಹೋಯಿತಾದರೂ, ಅದು ಉಂಟು ಮಾಡಿದ ಪ್ರಭಾವ ಕನ್ನಡ ಸಾಹಿತ್ಯದ ದಿಕ್ಕು ದೆಸೆಗಳನ್ನೇ ಬದಲಿಸಿ, ನವ್ಯ ಚಳುವಳಿಗೆ ಅಂತ್ಯ ಹಾಡಿತು. ಈ ಸಮಾವೇಶದ ಪ್ರಮುಖ ಭಾಷಣಗಳು 'ಸಂಕ್ರಮಣ-೬೦'ರಲ್ಲಿ ಪ್ರಕಟವಾಗಿವೆ.

೨ ಇದು ನನ್ನ 'ಗಮನ' (೧೯೯೦) ವಿಮರ್ಶಾ ಸಂಕಲನದ 'ನಾಲ್ಕು ಕವನ ಸಂಕಲನಗಳು' ಶೀರ್ಷಿಕೆಯ ಲೇಖನದ ಭಾಗವಾಗಿ ಪ್ರಕಟವಾಗಿದೆ.

೩ ಈ ಸಂದರ್ಭದಲ್ಲಿ ನನ್ನಲ್ಲಿ ಮೂಡಿದ ಇನ್ನೊಂದು ಅನ್ನಿಸಿಕೆಯೆಂದರೆ, ಅಡಿಗರಂತಹ ತೀವ್ರ ಸಂವೇದನಾಶೀಲ ಪ್ರತಿಭಾವಂತ ಕವಿ 'ಹಿಂದುತ್ವ'ದಂತಹ ಬರಡು ಸಿದ್ಧಾಂತಕ್ಕೆ ಮರುಳಾಗಿರಲಾರರು. ಮರುಳಾಗಿದ್ದಲ್ಲಿ, 'ಚಿಂತಾಮಣಿಯಲ್ಲಿ ಕಂಡ ಮುಖ', 'ಯಜಮಾನ' 'ಬಂಡಾಯ', 'ಪ್ರೀತಿ', 'ಮೈಗೆ ಹಿತವಾದರೆ', 'ಸಂತೋಷವಾಗುತ್ತದೆ', 'ಶಾಂತವೇರಿಯ ಅಶಾಂತ ಸಂತ'ದಂತಹ ಕವನಗಳನ್ನು ಬರೆಯಲಾರರು.

೪ ಇದರ ಬಗ್ಗೆ ನಾನು ನನ್ನ 'ಅನೇಕ' (೨೦೦೫) ವಿಮರ್ಶಾ ಸಂಕಲನದ 'ಐದು ಪ್ರತಿಕ್ರಿಯೆಗಳು' ಶೀರ್ಷಿಕೆಯ ಲೇಖನದಲ್ಲಿ ವಿವರವಾಗಿಯೇ ಬರೆದಿದ್ದೇನೆ.

೫ ಈ ಬಗ್ಗೆ ನಾನು ನನ್ನ ಇತ್ತೀಚಿನ 'ಇಲ್ಲಿ ಯಾರೂ ಅಮುಖ್ಯರಲ್ಲ' (೨೦೧೦) ಸಮಾಜವಾದಿ ಸಂಕಥನಗಳು- ೪ ಸಂಗ್ರಹದಲ್ಲಿನ 'ಸಮಕಾಲೀನ ಸಾಹಿತ್ಯ ಮತ್ತು ಸೃಜನಶೀಲತೆ' ಕುರಿತ ಲೇಖನದಲ್ಲಿ ವಿವರವಾಗಿ ಬರೆದಿದ್ದೇನೆ.

೬ ಇದೇ ಸಂದರ್ಭದಲ್ಲಿ ಉಲ್ಲೇಖಿಸಲೇಬೇಕಾದ ತೇಜಸ್ವಿಯವರ ಇನ್ನೊಂದು ಮಾತೆಂದರೆ, 'ನಾನು ಹಲವಾರು ಯುವ ಬರಹಗಾರರ, ದಲಿತ, ಬಂಡಾಯ ಸಾಹಿತ್ಯ ಕಮ್ಮಟಗಳಲ್ಲಿ ಕುಳಿತು ಕೇಳಿದ್ದೇನೆ. ಅಲ್ಲೆಲ್ಲ ತಮ್ಮ ಬರವಣಿಗೆಯ ರಾಜಕೀಯ ಮತ್ತು ಸಾಮಾಜಿಕ ಆಯಾಮಗಳ ಬಗ್ಗೆ ಮಾತಾಡುತ್ತಾರೆಯೇ ಹೊರತು, ಸಾಹಿತ್ಯ ಒಂದು ಲಲಿತ ಕಲೆ, ತಮ್ಮ ಕಲಾಭಿವ್ಯಕ್ತಿ ಭಾಷೆಯಲ್ಲಿ ಅಭಿವ್ಯಕಿಯಾಗಿ ರೂಪುಗೊಳ್ಳುವಾಗ ಪಡೆಯುವ ಆಕಾರಗಳೇನು? ಹಿಂದಿನ ಸಾಹಿತ್ಯಕ್ಕೂ ತಮಗೂ ಸಾಮ್ಯಗಳೇನು? ವ್ಯತ್ಯಾಸಗಳೇನು? ಇತ್ಯಾದಿಗಳ ಬಗ್ಗೆ ಅವರು ಹೆಚ್ಚು ಚಿಂತಿಸಿದಂತೆ ಕಾಣಲಿಲ್ಲ.... ಸಾಹಿತ್ಯದಲ್ಲಿ ಎಂದೂ ಮೀಸಲಾತಿ ಪ್ರಶ್ನೆಯೇ ಬರುವುದಿಲ್ಲ. ನಮ್ಮ ಜಾತಿ ಆಧಾರದ ಮೇಲೆ ವಿಶೇಷ ಸೌಲಭ್ಯ ಯಾಚಿಸುವುದಕ್ಕಿಂತ ವಿಶ್ವದ ಶ್ರೇಷ್ಠ ಬರಹಗಾರರೊಡನೆ ಹೋಲಿಸಿ ಎರಡನೇ ಅಥವಾ ಮೂರನೇ ದರ್ಜೆ ಬರಹಗಾರನಾದರೂ ಒಳ್ಳೆತೆಂಬುದು ನನ್ನ ನಿಲುವು'

೭ ಆಧುನಿಕ ಕನ್ನಡ ಸಾಹಿತ್ಯದಲ್ಲಿನ ವಾರಸುದಾರಿಕೆಗಳ ಬಗ್ಗೆ ವಿಶೇಷ ಆಸಕ್ತಿ ಮತ್ತು ಪರಿಶ್ರಮಗಳನ್ನು ತೋರಿರುವ ಈ ವಿಮರ್ಶಕರ ಪ್ರಕಾರ, ಕನ್ನಡ ಸಾಹಿತ್ಯವೆಂದಾಕ್ಷಣ ಈಗ ಇಬ್ಬರು ಶ್ರೀನಿವಾಸರು ನೆನಪಿಗೆ ಬರುತ್ತಾರೆ; ಒಬ್ಬರು ಶ್ರೀನಿವಾಸ ವೈದ್ಯರಾದರೆ, ಇನ್ನೊಬ್ಬರು ಕೆ.ಎಚ್.ಶ್ರೀನಿವಾಸರು!

೮ ಅಂತರ್ಜಾತಿ ವಿವಾಹಿತರ ಸಮಾವೇಶವೊಂದರ ಸಂದರ್ಭದಲ್ಲಿ 'ಅಂತರ್ಜಾತಿ ವಿವಾಹ'ಗಳ ಬಗ್ಗೆ ಕೆ.ವಿ.ಸುಬ್ಬಣ್ಣನವರನ್ನು ಅಭಿಪ್ರಾಯ ಕೇಳಿದರೆ- ತಮ್ಮ ಆದರ್ಶ ಸಾಂಸ್ಕೃತಿಕ ನಾಯಕ ಶಿವರಾಮ ಕಾರಂತರು ಜಾತಿ ಬಿಟ್ಟು ಮದುವೆಯಾದ ಮುಕ್ಕಾಲು ಶತಮಾನದ ನಂತರವೂ- 'ಸರಿ ಸರಿ, ಆದರೆ

ಸಹೃದಯತೆ ಮತ್ತು ಸಮಾನ ಮನಸ್ಕತೆ ಗಮನದಲ್ಲಿರಬೇಕು' ಎಂದು ವಿಶೇಷ ಎಚ್ಚರಿಕೆ ಕೊಡುವರೆಂದರೆ ಏನು ಹೇಳುವುದು? ಜಾತಿ ವಿವಾಹಗಳಲ್ಲಿ ಈ ಸಹೃದಯತೆ ಮತ್ತು ಸಹಮನಸ್ಕತೆಗಳು ಸಹಜವೆಂದು ಇದರ ಅರ್ಥವಾದರೆ, ಸುಬ್ಬಣ್ಣ ಏನು ಹೇಳುತ್ತಿದ್ದಾರೆಂದು ಆಶ್ಚರ್ಯವಾಗುವುದಿಲ್ಲವೆ? ಏಕೆ ಹೀಗೆ?

೯ ಈ ಲೇಖನ ಮತ್ತು ಅದಕ್ಕೆ ಪೂರಕವೆನ್ನಿಸುವ ಅವರ ಇನ್ನಷ್ಟು ಲೇಖನಗಳನ್ನೊಳಗೊಂಡ ಸಂಗ್ರಹ, 'ವಿಮರ್ಶೆಯ ವಿಮರ್ಶೆ' ಪ್ರಕಟವಾಗಿ ಎರಡು ವರ್ಷವಾಗುತ್ತಾ ಬಂದರೂ, ತಮ್ಮ 'ಗೆಣೆಕಾರ/ಕಾರ್ತಿ'ಯರ ಪುಸ್ತಕ ಬಂದೊಡನೆ ಪತ್ರಿಕೆಗಳಿಗೆ ವಿಮರ್ಶೆ ಬರೆಯಲು ಹಾತೊರೆದು ಬೀಳುವ ಈ ವಲಯದ ಯಾವೊಬ್ಬ ವಿಮರ್ಶಕನೂ/ಳೂ ಈ ಪುಸ್ತಕದ ಬಗ್ಗೆ ಒಂದು ವಿಮರ್ಶೆ ಬರೆಯುವುದಿರಲಿ, ಎಲ್ಲೂ ಮಾತಾಡಲೂ ಹೋಗಿಲ್ಲ! ಅಷ್ಟೇ ಅಲ್ಲ, ಕನ್ನಡದ ಪ್ರಮುಖ ಪತ್ರಿಕೆ– 'ಪುರವಣಿ'ಗಳಾವುವೂ ಇದರ ವಿಮರ್ಶೆ ಇರಲಿ, ಪರಿಚಯವನ್ನೂ ಮಾಡಿಸುವ ಗೋಜಿಗೆ ಹೋಗಿಲ್ಲ. ಇದೆಲ್ಲ ಏನನ್ನು ಸೂಚಿಸುತ್ತದೆ?

೧೦ ಇದನ್ನೇ ಅವರು ನಂತರ ತಮ್ಮ 'ಜಾತಿ ಪದ್ಧತಿ ಮತ್ತು ಕಲಾಭಿವ್ಯಕ್ತಿ' ಎಂಬ ಲೇಖನದಲ್ಲಿ ಹೇಳಿದ್ದು ಹೀಗೆ: 'ಈ ನ್ಯೂನತೆಗಳನ್ನು ಕೇವಲ ಸಾಹಿತ್ಯದ ಮಟ್ಟಿಗೆ, ಸಂಸ್ಕೃತಿಯ ಮಟ್ಟಿಗೆ ರಿಪೇರಿ ಮಾಡಲು ಸಾಧ್ಯವೇ ಇಲ್ಲ. ಏಕೆಂದರೆ ಈ ನ್ಯೂನತೆ ಸಾಹಿತ್ಯದ ಸಾಲುಗಳ ನಡುವೆ ಪೂರ್ಣ ವಿರಾಮ, ಅರ್ಧ ವಿರಾಮ, ಕಾಮಾಗಳಿಂದಲೋ, ಸಮಾಸಗಳಿಂದಲೋ, ತತ್ಸಮ ತದ್ಭವಗಳಿಂದಲೋ ಉದ್ಭವಿಸಿರುವ ವ್ಯಾಕರಣ ದೋಷಗಳಲ್ಲ. ಅದರ ಬೇರುಗಳು ಸಾಹಿತ್ಯ ಸಾಂಸ್ಕೃತಿಕ ಕ್ಷೇತ್ರವನ್ನೂ ಮೀರಿ ಸಾಮಾಜಿಕ ಸಥರದಲ್ಲಿ ದಟ್ಟವಾಗಿ ವ್ಯಾಪಿಸಿರುವುದರಿಂದಲೇ, ಜಾತಿ ಪದ್ಧತಿಯನ್ನು ಅಲ್ಲಿ ನಿರ್ನಾಮ ಮಾಡಿದರೆ ಮಾತ್ರ ಮಿಕ್ಕ ಕ್ಷೇತ್ರಗಳಲ್ಲಿ ಮುಸುಗಿರುವ ಹೊಗೆ ತಿಳಿಯಾಗುತ್ತದೆ ('ವಿಮರ್ಶೆಯ ವಿಮರ್ಶೆ')

೧೧ 'ಗಮನ' (೧೯೯೦)ದ 'ನವ್ಯೋತ್ತರ ವಿಮರ್ಶೆ: ಒಂದು ತಾತ್ವಿಕ ನೋಟ', 'ಬೇರು ಬಿಳಲು' (೨೦೦೬)ವಿನ 'ಆಧುನಿಕ ಕನ್ನಡದ ತಾತ್ವಿಕ ಸಂವಾದಗಳು', 'ಈ ಭೂಮಿಯಿಂದ ಆ ಆಕಾಶದವರೆಗೆ' (೨೦೦೭)ವಿನ 'ತೇಜಸ್ವಿಯವರ ಸಾಹಿತ್ಯ ಮೀಮಾಂಸೆ' ಹಾಗೂ 'ಇಲ್ಲಿ ಯಾವುದೂ ಅಮುಖ್ಯವಲ್ಲ' (೨೦೧೦)ದ 'ತೇಜಸ್ವಿಯವರ ಪರ್ಯಾಪ್ತ ಸಂಸ್ಕೃತಿ ಚಿಂತನೆ' ಹಾಗೂ 'ತೇಜಸ್ವಿಯವರ ಬೌದ್ಧ ಮಾರ್ಗ ಪ್ರವರ್ತಕತೆ' ಲೇಖನಗಳನ್ನು ಗಮನಿಸಬಹುದು.

೧೨ ಇದೇ ಸಂಬಂಧವಾಗಿ, ತಾವು ಕೋಮುವಾದದ ವಿಷಯವಾಗಿ ಕೋಮುವಾದ ಕುರಿತ 'ವಾಗ್ವಾದ'ದಲ್ಲಿ ತೇಜಸ್ವಿ ಜೊತೆಗಿರಲಾರೆನೆಂದೂ; ಅನಂತಮೂರ್ತಿ ಮತ್ತು ಸುಬ್ಬಣ್ಣನವರ ಪರವಾಗಿ ಇರಬಯಸುವುದಾಗಿಯೂ ಹೇಳಿದ್ದಾರೆ. ಆದರೆ, ಎನ್.ಡಿ.ಎ. ಸರ್ಕಾರ ಚುನಾವಣೆ ಮೂಲಕ ಪದಚ್ಯುತವಾಗವವರೆಗೆ ಕೋಮುವಾದ ಕುರಿತ ಅನಂತಮೂರ್ತಿಯವರ ನಿಲುವು ಹೇಗಿತ್ತು (ಗುಜರಾತ್‌ನಲ್ಲಿ ಮುಸ್ಲಿಮರ ನರಮೇಧ ನಡೆಯುತ್ತಿದ್ದ ಸಂದರ್ಭದಲ್ಲಿ, ಆ ಬಗ್ಗೆ ಪತ್ರಕರ್ತರ ಪ್ರಶ್ನೆಯೊಂದಕ್ಕೆ ಅನಂತಮೂರ್ತಿಯವರು ನೀಡಿದ ಎಚ್ಚರ ತುಂಬಿದ 'ಸೂಕ್ಷ್ಮ ಸಮತೋಲನ'ದ ಉತ್ತರ ಹೀಗಿತ್ತು: 'ಈ ದೇಶಕ್ಕೆ ಮೋದಿ ಮತ್ತು ಲಾಲೂ ಅವರ ರಾಜಕಾರಣ ಒಳ್ಳೆಯದಲ್ಲ!') ಮತ್ತು ಆನಂತರ ಯಾವ ತೀವ್ರತೆ ಪಡೆಯಿತು ಎಂಬುದನ್ನು ಫಣಿರಾಜ್ ಸ್ವಲ್ಪ ವಿವರವಾಗಿ ಗಮನಿಸಿದರೆ ಒಳ್ಳೆಯದು. ಇನ್ನು ಸುಬ್ಬಣ್ಣನವರ ಸುಪ್ರಸಿದ್ಧ 'ಗುಜರಾತ್ ಸ್ವಗತ' ಓದಿ, ಅದರ ಧಾಟಿ ನೋಡಿ ನನಗಂತೂ, ಗುಜರಾತಿನ ಮುಸಲ್ಮಾನರ ಬಗೆಗಿಂತ ಸುಬ್ಬಣ್ಣನವರ ಬಗೆಗೇ 'ಅಯ್ಯೋ ಪಾಪ! ಎನಿಸಿತ್ತು!

('ಸಂವಾದ'– ಆಗಸ್ಟ್, ೨೦೧೧ರ ಸಂಚಿಕೆಯಲ್ಲಿ ಪ್ರಕಟ)

◇◇◇

೨. ೨೦೦೧– ೧೧ರ ಕನ್ನಡ ಸಾಹಿತ್ಯ ವಿಮರ್ಶೆ: ಒಂದು ತಾತ್ವಿಕ ನೋಟ

ವಿಷಯ ಕುರಿತು ನನ್ನ ಮಾತುಗಳನ್ನು ಆರಂಭಿಸುವ ಮುನ್ನ ನನ್ನ ಎರಡು ಸಂದಿಗ್ಧಗಳನ್ನು ನಿಮ್ಮ ಮುಂದಿಡುವುದು ಉಚಿತ ಅಂತ ನಾನು ಭಾವಿಸಿದ್ದೇನೆ. ಒಂದು: ಹತ್ತು ವರ್ಷಗಳ ಅವಧಿಯ ಸಾಹಿತ್ಯ ವಿಮರ್ಶೆ ಬಗ್ಗೆ ಮಾತಾಡೋದಿಕ್ಕೆ ಸಾಹಿತ್ಯ ಅಕಾಡೆಮಿಯವರಿಗೆ ಮತ್ತು ಕರ್ನಾಟಕ್ಕ ಸಂಘದವರಿಗೆ ನನ್ನನ್ನು ಬಿಟ್ಟು ಬೇರೊಬ್ಬ ಸಮರ್ಥರುಸಿಗಲಿಲ್ಲವೇ ಎಂಬುದು. ಯಾಕೆಂದರೆ ನಾನು ಸಾಹಿತ್ಯದ ಶಾಸ್ತ್ರೀಯ ವಿದ್ಯಾರ್ಥಿಯಲ್ಲ. ಸಾಮಾನ್ಯ ಸಾಹಿತ್ಯ ಓದು ಮತ್ತು ಸಾಮಾನ್ಯ ಪರಿಜ್ಞಾನದ ಆಧಾರದ ಮೇಲಷ್ಟೇ ನಾನು ಕೆಲವು ವರ್ಷಗಳಿಂದ ಸಾಹಿತ್ಯ ವಿಮರ್ಶೆ ಅನ್ನೋದನ್ನ ಮಾಡಿ ಕೊಂಡು ಬರ್ತಾ ಇರೊದು. ಭಾರತೀಯ ಕಾವ್ಯ ಮೀಮಾಂಸೆಯನ್ನಾಗಲೀ, ಪಾಶ್ಚಾತ್ಯ ಕಾವ್ಯ ಮೀಮಾಂಸೆಯನ್ನಾಗಲೀ ನಾನು ಶಿಸ್ತುಬದ್ಧವಾಗಿ ಓದಿಕೊಂಡವನಲ್ಲ. ಭರತ, ಭರ್ತೃಹರಿ, ಭಾಮಹ, ಆನಂದವರ್ಧನ, ಶ್ರೀವಿಜಯ, ನಾಗವರ್ಮಗಳಾಗಲೀ, ಬ್ರಾಡ್ಲೆ, ರಿಚರ್ಡ್ಸ್, ಎಲಿಯಟ್, ಲೀವೀಸ್, ರೇಮಂಡ್ ವಿಲಿಯಮ್ಸ್, ಫ್ಯಾನನ್ ಇತ್ಯಾದಿ ಹೆಸರು ಮತ್ತು ಅವರ ವಿಚಾರಗಳಗಲೀ ನಮ್ಮ ಅಕಡೆಮಿಕ್ ಲೋಕದ ಸಾಹಿತ್ಯ ವಿಮರ್ಶಕ ಗೆಳೆಯರ ಬರಹ ಮತ್ತು ಚರ್ಚೆಗಳ ಮೂಲಕ ನನಗೆ ಪರಿಚಯವಾದವಷ್ಟೆ. ಆದರೆ ಆಧುನಿಕೋತ್ತರ ವಿಮರ್ಶೆ ಅಥವಾ ಚಿಂತನೆ ಅಂತ ಏನು ಇತ್ತೀಚಿನ ವರ್ಷಗಳಲ್ಲಿ ಬರ್ತಾ ಇದೆ, ಅದು ಸಾಹಿತ್ಯದ ಪರಿಧಿಯನ್ನೂ ಮೀರಿ ನಮ್ಮ ಸಾರ್ವತ್ರಿಕ ಬದುಕಿನ ಬೇರೆ ಬೇರೆ ಆಯಾಮಗಳಿಗೂ ವಿಸ್ತರಿಸುವ ಸಾಧ್ಯತೆಗಳು ಕಂಡು ಬರ್ತಾ ಇರೋದರಿಂದ, ಆ ಮೀಮಾಂಸೆಯ ಮುಖ್ಯ ಚಿಂತಕರನ್ನು ಒಂದಿಷ್ಟು ಓದಿಕೊಳ್ಳುವ ಪ್ರಯತ್ನ ಮಾಡಿದ್ದೇನೆ. ಉದಾಹರಣೆಗೆ, ಡೆರಿಡಾ, ಎಡ್ವರ್ಡ್ ಸೈದ್, ಫುಕೋ, ಗೂಗಿ ಇತ್ಯಾದಿ. ಆದರೆ ಇದರಿಂದ ನನ್ನ ಅಕಡೆಮಿಕ್ ವಲಯದ ಚಿಂತಕ ಗೆಳೆಯರು ರೋಮಾಂಚಿತ ರಾದಂತೆ ನಾನು ರೋಮಾಂಚಿತನಾಗಿಲ್ಲ ಎಂದೂ ಇಲ್ಲಿ ಹೇಳಿಬಿಡಬ ಯಸುವೆ, ಇದು ನಾನು ಸಾಹಿತ್ಯವನ್ನು ನೋಡುವ ಬಗೆಗಳ ದಿಕ್ಸೂಚಿಯೂ ಆಗಬಹುದು ಎನ್ನುವ ಕಾರಣಕ್ಕೆ.

ಇರಲಿ. ನನಗೆ ೨೦೦೧ರಿಂದ ೨೦೧೧ರವರೆಗೆ ಪ್ರಕಟವಾದ ಸಾಹಿತ್ಯ ವಿಮರ್ಶೆಯ ಪುಸ್ತಕಗಳ ಬಗ್ಗೆ ಮಾತನಾಡಲು ಹೇಳಿದ್ದಾರೆ. ಈ ಅವಧಿಗೆ ಏನು ಆಧಾರವೋ ನನಗೆ ತಿಳಿಯದು, ಇದು ಈ ಶತಮಾನದ ಮೊದಲ ಹತ್ತು ವರ್ಷಗಳು ಅನ್ನುವುದರ ಹೊರತಾಗಿ. ಬರುವ ಒಂದು ಶತಮಾನದಲ್ಲಿ ಬರಬಹುದಾದ ಸಾಹಿತ್ಯ ವಿಮರ್ಶೆಯ ಪರಿಯೇನೂ ಈ ಅವಧಿಯಲ್ಲಿ ಸೂಚಿತವಾಗಲಾರದು. ಏಕೆಂದರೆ, ಸಾಹಿತ್ಯದ ಚಲನಶೀಲತೆ ದಶಕ ಅಥವಾ ಶತಮಾನದ ಲೆಕ್ಕದಲ್ಲಿ ನಿರ್ಧಾರವಾಗುವುದಿಲ್ಲ. ಹಾಗಾಗಿ, ೨೦೦೧– ೧೧ರ

ಅವಧಿಯೆನ್ನುವುದು ಕೇವಲ ಅಂಕಗಣಿತೀಯ ಅವಧಿಯೇ ಹೊರತು, ಯಾವ ರೀತಿಯಲ್ಲೂ ಗುಣಾತ್ಮಕ ಅವಧಿ ಎನ್ನಿಸಿಕೊಳ್ಳಲಾರದು. ಏಕೆಂದರೆ ಈ ಅವಧಿಯಲ್ಲಿ ಸಾಹಿತ್ಯ ವಿಮರ್ಶೆಗೆ ಸಂಬಂಧಪಟ್ಟಂತೆ ಯಾವುದೇ ನಿರ್ಣಯಾತ್ಮಕ ತಿರುವು ಅಥವಾ ಪ್ರಸ್ಥಾನ ಅನ್ನಿಸಿಕೊಳ್ಳಬಹುದಾದದ್ದು ಹುಟ್ಟದೇ ಇರುವಾಗ ನಾನೇನು ಮಾತಾಡಬಹುದು ಅಂತ ಯೋಚನೆ ಮಾಡಿದಾಗ, ಹೆಚ್ಚೆಂದರೆ ಈ ಅವಧಿಯಲ್ಲಿ ಬಂದ ಕೃತಿಗಳ ಸಮೀಕ್ಷೆ ಮಾಡಬಹುದಷ್ಟೆ ಅನ್ನಿಸಿತು. ಆದರೆ ಇದು ಅಷ್ಟೇನೂ ಪ್ರಯೋಜನಕಾರಿಯಾದ ಕೆಲಸವಲ್ಲ; ಅಂತಹುದರಲ್ಲಿ ನನ್ನ ಆಸಕ್ತಿಯೂ ಇಲ್ಲ. ಹಾಗಾಗಿ ಈ ಅವಧಿಯಲ್ಲಿ ಒಟ್ಟಾರೆ ಕನ್ನಡ ಸಾಹಿತ್ಯ ವಿಮರ್ಶೆ ಎಂಬ ವಿದ್ಯಮಾನದಲ್ಲಿ– ಇದನ್ನು ನಾನು ರಾಜೇಂದ್ರ ಚೆನ್ನಿವರು ಕರೆದಿರುವಂತೆ ಸಂಸ್ಥೆ ಎಂದು ಕರೆಯಲಾರೆ– ಏನೇನು ಹೊಸ ಬೆಳವಣಿಗೆಗಳಾಗಿವೆ; ಅಂದರೆ ಈ ಅವಧಿಗೆ ಮುನ್ನ ಸಾಹಿತ್ಯ ವಿಮರ್ಶೆ ಮುಟ್ಟಿದ್ದ ನಿರ್ಣಾಯಕ ಘಟ್ಟ ಅಥವಾ ತೊಡಗಿಕೊಂಡಿದ್ದ ಹೊಸ ಪ್ರಸ್ಥಾನವನ್ನು, ನಿರ್ದಿಷ್ಟವಾಗಿ ಹೇಳುವುದಾದರೆ, ಗೆಳೆಯ ಡಿ.ಆರ್. ನಾಗರಾಜ ಅವರು ಕಟ್ಟಲು ಪ್ರಯತ್ನಿಸಿದ್ದ ಕನ್ನಡ ಸಾಹಿತ್ಯ ವಿಮರ್ಶೆಯ ಹೊಸ ಪ್ರಸ್ಥಾನವನ್ನು ಈ ಅವಧಿಯಲ್ಲಿ ಹೇಗೆ ನಿರ್ವಹಿಸಲಾಗಿದೆ ಅಥವಾ ಪ್ರಶ್ನಿಸಲಾಗಿದೆ, ವಿಸ್ತರಿಸಲಾಗಿದೆ ಎಂಬುದರ ಪರಿಶೀಲನೆ ಮಾಡುವುದು ಹೆಚ್ಚು ಫಲದಾಯಕ ಮತ್ತು ಸಾರ್ಥಕ ಎಂದು ನಾನು ಭಾವಿಸಿದ್ದೇನೆ.

ಈ ಕುರಿತ ನನ್ನ ಮಾತುಗಳನ್ನು ಔಪಚಾರಿಕವಾಗಿ ಆರಂಭಿಸುವುದಾದರೆ, ಸದರಿ ಅವಧಿಯಲ್ಲಿ ಕನ್ನಡದಲ್ಲಿ ಸಾಕಷ್ಟು ಸಾಹಿತ್ಯ ವಿಮರ್ಶೆಯ ಪುಸ್ತಕಗಳು ಬಂದಿವೆ. ಈ ರಾಶಿಯನ್ನು ನೋಡಿ ಗಾಬರಿಯಾಗಿಯೇ ನಾನು ಇಂದು ಮಾತನಾಡಬೇಕಾದ ವಿಷಯದ ದೃಷ್ಟಿಕೇಂದ್ರವನ್ನು ಮೇಲಿನಂತೆ ನಿರ್ಣಯಿಸಿಕೊಂಡೆ ಎಂದೂ ಹೇಳಬಹುದು. ಅಷ್ಟು ವೈವಿಧ್ಯಮಯ ವಿಷಯಗಳ ಮತ್ತು ಶಿಸ್ತು ಹಿನ್ನೆಲೆಗಳ ಪುಸ್ತಕಗಳು ಈ ಅವಧಿಯಲ್ಲಿ ಬಂದಿವೆ. ಒಂದು ಮಾತಂತೂ ನಿಜ: ಮುವ್ವತ್ತು ವರ್ಷಗಳ ಹಿಂದೆ ನಾನು ಸಾಹಿತ್ಯ ವಿಮರ್ಶೆಯ ಕ್ಷೇತ್ರವನ್ನು ಪ್ರವೇಶಿಸಿದಾಗ ಯಾವುದನ್ನು ತೇಜಸ್ವಿ ಒಂದೆಡೆ, ಸಾಹಿತ್ಯದ ವಿದ್ಯಾರ್ಥಿಗಳಲ್ಲದವವರು ಪ್ರವೇಶಿಸಲಾಗದಂತಹ ಪಾರಿಭಾಷಿಕ ಶಬ್ದಜಾಲದ ಅತಿ ಸಂಸ್ಕೃತಿಯ ಮೆಣಸಿನ ಹೊಗೆಯ ವಾತಾವರಣ ಎಂದು ವರ್ಣಿಸುತ್ತಾರೋ, ಅಂತಹ ವಾತಾವರಣ ಈಗಿಲ್ಲ. ಅಥವಾ ವಿಮರ್ಶೆ ಎಂಬುದು ತೇಜಸ್ವಿಯವರೇ ಇನ್ನೊಂದೆಡೆ ಹೇಳಿರುವಂತೆ, ಸಾಹಿತ್ಯವನ್ನಷ್ಟೇ ಓದಿಕೊಂಡ ಕೆಲವು ಕೂಚಂಭಟ್ಟರ ಅದೇ ಮಣ ಮಣ ಮಂತ್ರಘೋಷಗಳ ಮೂಲಕ ಕುಟುಕು ಜೀವ ಉಳಿಸಿಕೊಂಡಿರುವ ಔಪಚಾರಿಕ ಚಟುವಟಿಕೆಗಳ ಕ್ಷೇತ್ರವಾಗಿಯೂ ಉಳಿದಿಲ್ಲ. ಬೇರೆ ಬೇರೆ ಶಿಸ್ತುಗಳ, ಆಸಕ್ತಿಗಳ ಜನ ಇಂದು ಸಾಹಿತ್ಯ ಮತ್ತು ಆ ಮೂಲಕ ಸಾಹಿತ್ಯ ವಿಮರ್ಶೆಯ ಕ್ಷೇತ್ರವನ್ನು ಪ್ರವೇಶಿಸಿರುವುದನ್ನು ಇಲ್ಲಿ ಕಾಣಬಹುದು. ಇದರಿಂದಾಗಿ ನನ್ನಂತಹವರಿಗೂ ಒಂದಿಷ್ಟು ಆತ್ಮವಿಶ್ವಾಸ ಬಂದು, ಅಕೆಡೆಮಿಕ್ ವಲಯದ

ಮಡಿ- ಮೈಲಿಗೆಗಳೇನೇ ಇರಲಿ, ನಾವು ಹೇಳುವ ಮಾತಿಗೂ ತನ್ನದೇ ಆದ ಒಂದು ಮೌಲ್ಯ, ಸಾರ್ಥಕತೆ ಇದೆ ಎನ್ನುವ ನಂಬಿಕೆ ಮೂಡಿದೆ.

ಇನ್ನು ವಿಷಯಕ್ಕೆ ನೇರವಾಗಿ ಬರುವುದಾದರೆ, ಕಳೆದ ೧೦ ವರ್ಷಗಳ ಕೃತಿಗಳನ್ನು ಒಟ್ಟಾರೆಯಾಗಿ ನೋಡಿದಾಗ ಕನ್ನಡ ಸಾಹಿತ್ಯ ವಿಮರ್ಶೆ ಎನ್ನುವುದು ಅದರ ಆಧುನಿಕ ಅರ್ಥದಲ್ಲಿ ಏನು ಆರಂಭವಾಯಿತು, ಆ ೬೦ ವರ್ಷಗಳ ಸಾಹಿತ್ಯ ವಿಮರ್ಶೆಯ ಒಂದು ಮರುನೋಟ ಈ ಅವಧಿಯಲ್ಲಿ ಆರಂಭವಾದಂತೆ ಕಾಣುತ್ತದೆ. ಈಗ ಈ ೧೦ ವರ್ಷಗಳಲ್ಲಿ ಜಿ.ಎಸ್.ಎಸ್., ಕಣವಿ, ಅನಂತಮೂರ್ತಿ, ಸಿ.ಎನ್. ರಾಮಚಂದ್ರನ್ ಇಂತಹ ಹಿರಿಯರಿಂದ ಹಿಡಿದು ಇಲ್ಲಿ ಕೂತಿರುವ ನಮ್ಮ ನಟರಾಜ ಬೂದಾಳ್ ಮತ್ತು ಸಬಿತಾ ಬನ್ನಾಡಿ ಸೇರಿಕೊಂಡಂತೆ ಬಹಳ ಜನ ಕಿರಿಯರವರೆಗೆ ನೂರಾರು ಪುಸ್ತಕಗಳು ಪ್ರಕಟವಾಗಿವೆ. ತೇಜಸ್ವಿ, ಜಿ.ಎಚ್. ನಾಯಕ್, ಗಿರಡ್ಡಿ ಗೋವಿಂದರಾಜು, ಎಚ್.ಎಸ್. ರಾಘವೇಂದ್ರ ರಾವ್, ಟಿ.ಪಿ. ಅಶೋಕ, ವೈದೇಹಿ, ಸಾರಾ ಅಬೂಬಕರ್, ಸುಮಿತ್ರಾ ಬಾಯಿ, ಆಶಾದೇವಿ, ಶೈಲಜಾ ಹಿರೇಮಠ, ಎಲ್.ಸಿ. ಸುಮಿತ್ರಾ, ತಾರಿಣಿ ಶುಭದಾಯಿನಿ, ಶಾಂತಾ ಇಮ್ರಾಪುರ, ಮಲ್ಲಿಕಾ ಘಂಟಿ, ರಾಜೇಂದ್ರ ಚೆನ್ನಿ, ರಹಮತ್ ತರೀಕೆರೆ, ಕೇಶವ ಶರ್ಮ, ಎಸ್.ಜಿ.ಸಿದ್ದರಾಮಯ್ಯ, ಕೆ.ವಿ.ತಿರುಮಲೇಶ್, ರಾಜಾರಾಂ ಹೆಗಡೆ, ಡಿ.ಎಸ್. ನಾಗಭೂಷಣ, ಟಿ.ಪಿ.ಅಶೋಕ, ಮೊಗಳ್ಳಿ ಗಣೇಶ್, ಕೆ. ಸತ್ಯನಾರಾಯಣ, ಎಸ್.ಆರ್. ವಿಜಯಶಂಕರ, ನರಹಳ್ಳಿ ಬಾಲಸುಬ್ರಮಣ್ಯ, ಮೊನ್ನೆ ಮೊನ್ನೆ ತಾನೇ 'ಮಧ್ಯಮ ಮಾರ್ಗ' ಎನ್ನುವ ಕೃತಿಯನ್ನು ಪ್ರಕಟಿಸಿದಂತಹ ಮನು ಚಕ್ರವರ್ತಿ, ಇನ್ನು 'ಪೃಥ್ವಿಯಲ್ಲೊದಗಿದ ಘಟವು...' ಎಂಬ ಒಂದು ರೀತಿಯಲ್ಲಿ ಸ್ಫೋಟಕವೆನಿಸುವ ಕೃತಿ ರಚಿಸಿರುವ ಮನು ದೇವದೇವನ್, ಕವಿತಾ ರೈ, ಸವಿತಾ ನಾಗಭೂಷಣ ಹೀಗೆ ಅನೇಕ ರೀತಿಯ ವೈವಿಧ್ಯಮಯ ಹಿನ್ನೆಲೆಗಳ ಲೇಖಕ- ಲೇಖಕಿಯರ ಸಾಹಿತ್ಯ ವಿಮರ್ಶೆ- ವಿಚಾರಗಳ ಪುಸ್ತಕಗಳು ಬಂದಿವೆ. ಬೇರೆ ಬೇರೆ ತಲೆಮಾರುಗಳ ನೋಟಕ್ರಮಗಳನ್ನೊಳಗೊಂಡ ಪುಸ್ತಕಗಳು ಬಂದಿವೆ.

ಒಂದು ರೀತಿಯಲ್ಲಿ ಕಳೆದ ೧೦ ವರ್ಷಗಳ ಸಾಹಿತ್ಯ ವಿಮರ್ಶೆ ಕಳೆದ ೬೦ ವರ್ಷಗಳ ಸಾಹಿತ್ಯ ವಿಮರ್ಶೆಯ ಒಂದು ವೈವಿಧ್ಯಮಯ ಮತ್ತು ಗುಣಾತ್ಮಕ ವಿಸ್ತರಣೆ ಅನ್ನೋ ತರಹ ಕಾಣುತ್ತದೆ. ಈ ಸಾಹಿತ್ಯ ವಿಮರ್ಶೆ ಪುಸ್ತಕಗಳನ್ನು ಸುಮ್ಮನೆ ಕುತೂಹಲಕ್ಕಾಗಿ ಯಾವ ವಿಷಯಗಳ ಬಗ್ಗೆ ಸಂಬಂಧಪಟ್ಟಂತೆ ಈ ವಿಮರ್ಶೆ ಬಂದಿದೆ ಅಂತಾ ನೋಡಿದಾಗ, ಒಂದು ಕುತೂಹಲಕಾರಿ ಅಂಶವನ್ನು ನಾನು ಗಮನಿಸಿದೆ. ಅಂಕಿ- ಅಂಶದ ನೋಟ ಅಂತಾನೇ ಹೇಳಬಹುದು. ಈ ಸಾಹಿತ್ಯ ವಿಮರ್ಶೆ ತನ್ನ ಗಮನವನ್ನು ಬಹಳ ಕೇಂದ್ರೀಕರಿಸಿರುವುದು ಯಾತಕ್ಕೋ, ತನ್ನ ಹಿಂದಿನ ಸಾಹಿತ್ಯದ ಬಗ್ಗೆ. ವಿಶೇಷವಾಗಿ- ಸ್ವಲ್ಪ ಸುಮಾರಾದ ಅಂಕಿ- ಅಂಶಗಳ ಲೆಕ್ಕದಲ್ಲೇ ಹೇಳೋದಾದರೆ- ಶೇ.೪೦ರಷ್ಟು ಬರೀ ಪ್ರಾಚೀನ ಕನ್ನಡ ಸಾಹಿತ್ಯದ ಬಗ್ಗೇನೆ ಬಂದಿದೆ. ಇತ್ತೀಚಿನ ಹೊಸಬರೂ ಕೂಡ ಇದರ ಬಗ್ಗೆ ಬರೀತಾ ಇದ್ದಾರೆ. ಪಂಪ, ರನ್ನ, ಕುಮಾರವ್ಯಾಸ, ರಾಘವಾಂಕ, ಹರಿಹರ, ವಚನಕಾರರು, ದಾಸ ಸಾಹಿತ್ಯ, ಜನಪದಕ್ಕೆ

ಬಂದರೆ ತತ್ವಪದಗಳ ಸಾಹಿತ್ಯ, ನಮ್ಮ ಶಿಶುನಾಳ ಶರೀಫರು, ಇವರ ಬಗ್ಗೆ ಬಹಳ ಗಣನೀಯವಾದ ವಿಮರ್ಶೆ ಬಂದಿದೆ. ಅದನ್ನು ಬಿಟ್ಟರೆ ಮತ್ತೆ ಇನ್ನೂ ಇತ್ತೀಚಿನ ಹಳಬರು ಅಂದರೆ, ಕುವೆಂಪು, ಮಾಸ್ತಿ, ಬೇಂದ್ರೆ, ಕಾರಂತ, ಪುತಿನ; ಸ್ವಲ್ಪ ಮಟ್ಟಿಗೆ ಅಡಿಗ, ಕಣವಿ, ಎಕ್ಕುಂಡಿ, ಜಿ.ಎಸ್.ಶಿವರುದ್ರಪ್ಪ ಇವರ ಬಗ್ಗೆ ಬಂದಿದೆ. ಆಶ್ಚರ್ಯ ಅಂದರೆ, ಅತ್ಯಂತ ಕಡಿಮೆ ವಿಮರ್ಶೆ ಬಂದಿರುವುದು ಸಮಕಾಲೀನ ಸಾಹಿತ್ಯ ಕುರಿತಂತೆ. ಶೇ.೫ರಿಂದ ಹೆಚ್ಚೆಂದರೆ ೧೦ರಷ್ಟು ಅಂತಾ ಹೇಳಬಹುದು. ಈ ವಿಮರ್ಶೆ ಕೂಡಾ ಅತಿ ಹೆಚ್ಚು ಬಂದಿರುವುದು ಮುನ್ನುಡಿ, ಬೆನ್ನುಡಿ ಹಿನ್ನುಡಿಗಳ ಮೂಲಕ.

ಸಮಕಾಲೀನ ಸಾಹಿತ್ಯ ಕುರಿತಂತೆ ಬಹಳ ಕಡಿಮೆ ವಿಮರ್ಶೆ ಬಂದಿದೆ, ಯಾಕೆ ಅನ್ನುವುದು ಬಹಳ ಕುತೂಹಲಕಾರಿ ಪ್ರಶ್ನೆ. ಇದಕ್ಕೆ ಬಹಳ ಸುಲಭ ಉತ್ತರ ಅಂದರೆ, ಗಂಭೀರ ವಿಮರ್ಶೆಯನ್ನು ಆಹ್ವಾನಿಸುವಂತಹ ಸಾಹಿತ್ಯ ಕೃತಿಗಳು ಬಂದಿಲ್ಲವೇನೋ ಅನ್ನುವುದು. ಇತ್ತೀಚೆಗೆ ಹಲವು ಆಯ್ದ ಲೇಖಕರ ಬಗೆಗಿನ ವಾಚಿಕೆಗಳು ಬರತೊಡಗಿವೆ. ಪ್ರಕಾಶಕರ ಮತ್ತು ಅವರ ಹಿಂದೆ ಇರುವ ಹಿತಾಸಕ್ತಿಗಳಿಗನುಗುಣವಾಗಿ ಅಥವಾ ಅವರ ಮರ್ಜಿ ಮತ್ತು ಆಯ್ಕೆಗಳಿಗನುಸಾರವಾಗಿ ಈ ವಾಚಿಕೆಗಳು ಬರುತ್ತಾ ಇವೆ. ಜೊತೆಗೆ ಪುಸ್ತಕ ಮಾರಾಟ ವ್ಯವಹಾರದ ಹಲವು ದುರ್ಮಾರ್ಗಗಳು ಈಗ ತೆರೆದುಕೊಂಡಿರುವುದರಿಂದ ವಿವಿಧ ಪ್ರಶಸ್ತಿ ವಿಜೇತರ ಕುರಿತಂತೆ, ವಿಮರ್ಶೆಯೆಂದು ಕರೆಯಲಾಗದ ಪರಿಚಯ ಪುಸ್ತಕಗಳ ಸರಣಿಯ ಹಾವಳಿ ಕೂಡಾ ಶುರುವಾಗಿದೆ.

Mega Narratives ಅಂದರೆ ವಿರಾಟ್ ಕಥನಗಳ ಕಾಲ ಮುಗಿದು ಹೋಯಿತು ಅಂತ ಆಧುನಿಕೋತ್ತರವಾದಿ ವಿಮರ್ಶಕರು ಘೋಷಿಸ್ತಾ ಇದ್ದರೂ ಕೂಡಾ ಈ ಹಿಂದಿನ ಇಂತಹ ವಿರಾಟ್ ಕಥನಗಳ ಸಾಹಿತ್ಯದ ಬಗೆಗೇನೇ ನಮ್ಮ ಸಾಹಿತ್ಯ ವಿಮರ್ಶೆ ಈಗಲೂ ತನ್ನನ್ನು ತೊಡಗಿಸಿಕೊಂಡಿರೋದೇಕೆ ಅನ್ನೋದು ಕೂಡ ಒಂದು ದೊಡ್ಡ ಪ್ರಶ್ನೆ. ವಿರಾಟ್ ಕಥನಗಳ ಕಾಲ ಮುಗಿದು ಹೋಯಿತು ಎನ್ನುವುದೂ ಕನ್ನಡ ಸಾಹಿತ್ಯದ ಅಕಡೆಮಿಕ್ ಲೋಕ ಇತ್ತೀಚೆಗೆ ಆಮದು ಮಾಡಿಕೊಂಡು ಒಪ್ಪಿಸುತ್ತಿರುವ ಇನ್ನೊಂದು ಗಿಳಿ ಪಾಠವೇ ಆಗಿರಬಹುದೇ ಎಂಬ ಅನುಮಾನವನ್ನು ಹುಟ್ಟಿಸುತ್ತಿರುವ ಪ್ರಶ್ನೆ. ಏಕೆಂದರೆ, ಇತ್ತೀಚಿನ ವರ್ಷಗಳಲ್ಲಿ ಬಂದ 'ಹಳ್ಳ ಬಂತು ಹಳ್ಳ' ಕಾದಂಬರಿಯನ್ನು ಕನ್ನಡ ವಿಮರ್ಶಾಲೋಕ ಹೇಗೆ ವರ್ಗೀಕರಿಸಿ ಸ್ವೀಕರಿಸಿದೆ? ಕನ್ನಡ ಸಾಹಿತ್ಯ ಸಂವೇದನೆ ಇನ್ನೂ ಪೂರ್ಣ ಕುಲಗೆಟ್ಟಿಲ್ಲ ಎಂಬುದರ ದ್ಯೋತಕವೆಂಬಂತೆ ಅದಕ್ಕೆ ದೊರೆತ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯ ಹೊರತಾಗಿ ಕನ್ನಡ ಸಾಹಿತ್ಯ ವಿಮರ್ಶಾ ಲೋಕ ಈ ಕೃತಿಗೆ ಹೇಗೆ ಪ್ರತಿಸ್ಪಂದಿಸಿದೆ ಎಂಬ ಪ್ರಶ್ನೆಗಳು ಈ ಸಂದರ್ಭದಲ್ಲಿ ಉತ್ತರವನ್ನು ಬೇಡುತ್ತವೆ. ಪರೋಕ್ಷವಾಗಿಯಾದರೂ, ಈ ಬಗ್ಗೆ– ಸಮಕಾಲೀನ ಕೃತಿಗಳನ್ನು ಕುರಿತ ವಿಮರ್ಶಾ ಔದಾಸೀನ್ಯತೆ– ಸಿರಾಜ್ ಅಹಮದ್‌ರವರು ಒಂದು ಸಂದರ್ಶನದಲ್ಲಿ ಚೆನ್ನಿಯವರನ್ನು ಕೇಳಿದ್ದಾರೆ. ಚೆನ್ನಿಯವರು ಹೌದು ನಾವು ಇತ್ತೀಚಿನ ಸಾಹಿತಿಗಳ ಬಗ್ಗೆ ಬಹಳ ಕಡಿಮೆ ಬರೀತಾ ಇದ್ದೇವೆ ಅನ್ನೋದನ್ನ ಒಪ್ಪಿಕೊಂಡು, 'ಈ

ಬಗ್ಗೆ ಪ್ರಶ್ನೋತ್ತರ ಮಾಡಿ ಕಾಲಹರಣ ಮಾಡೋದು ಬೇಡ. ನಾನು ಈ ತಕ್ಷಣದಿಂದಲೇ ಇತ್ತೀಚಿನ ಸಾಹಿತ್ಯ ಕೃತಿಗಳ ಬಗ್ಗೆ ಬರೆಯೋದಕ್ಕೆ ಶುರು ಮಾಡಬೇಕಿದೆ' ಅಂತ ಬಹಳ ನಾಟಕೀಯವಾಗಿ ಸಂದರ್ಶನ ಮುಗಿಸಿದ್ದಾರೆ. ಆ ಸಂದರ್ಶನ ಆಗಲೇ ಪ್ರಕಟವಾಗಿ ೩ ವರ್ಷ ಆಯಿತು. ಆದರೆ ಅವರು ಇವರೆಗೆ ಅಂತಹುದೇನೂ ಬರೆದಂತೆ ಕಾಣುವುದಿಲ್ಲ. ರಾಘವೇಂದ್ರ ಪಾಟೀಲರ ಸಮಗ್ರ ಕಥಾ ಸಂಕಲನಕ್ಕೆ ಮತ್ತು ಸಬಿತಾ ಬನ್ನಾಡಿಯವರ ವಿಮರ್ಶಾ ಸಂಕಲನಕ್ಕೆ ಬರೆದಿರುವ ಔಪಚಾರಿಕ ಮುನ್ನುಡಿಯ ಮಾತುಗಳನ್ನು ಬಿಟ್ಟರೆ!

ಹೀಗಾಗಿ ಕನ್ನಡ ಸಾಹಿತ್ಯ ವಿಮರ್ಶೆಯ ಮುಖ್ಯ ಸಂವಾದ ಯಾಕೋ ತನ್ನ ಚರಿತ್ರೆಯೊಂದಿಗೆ ನಡೀತಾ ಇದೆ ಅನ್ನಿಸ್ತಾ ಇದೆ. ತಪ್ಪಲ್ಲ ಇದು. ತನ್ನನ್ನು ತಾನು ಹಿನ್ನೋಡಿಕೊಳ್ಳುವ ಅಥವಾ ತಾನು ನಡೆದು ಬಂದ ದಾರಿಯ ಬಗ್ಗೆ ಮರು ಚಿಂತನೆ ಮಾಡುವುದು ಎಲ್ಲಾ ಸಾಂಸ್ಕೃತಿಕ ಚಿಂತನಾ ಮಾದರಿಗಳ ಮುಖ್ಯ ಲಕ್ಷಣ. ಇದು ಒಂದು ರೀತಿಯಲ್ಲಿ, ಇತ್ತೀಚಿನ ವರ್ಷಗಳಲ್ಲಿ ನಮ್ಮ ಅರಿವಿಗೆ ಬಂದಂತಹ ಅಥವಾ ತುಂಬಾ ಕಟುವಾಗಿ ಹೇಳುವುದಾದರೆ ಆಮದು ಮಾಡಿಕೊಂಡಂತಹ ಅನೇಕ ವಿಮರ್ಶಾ ಚಿಂತನೆಗಳ ಬೆಳಕಿನಲ್ಲಿ ನಾವು ಪಡೆದಂತಹ ಒಳನೋಟಗಳನ್ನು ಬಳಸಿಕೊಂಡು ನಮ್ಮ ಪ್ರಾಚೀನ ಸಾಹಿತ್ಯವನ್ನು ಮತ್ತೆ ನೋಡುವ ಪ್ರಯತ್ನವನ್ನೇನಾದರೂ ನಾವು ಮಾಡುತ್ತಿರುವ ಪ್ರಯತ್ನವಾ ಅಂತಲೂ ಅನ್ನಿಸುತ್ತದೆ. ಯಾಕೆಂದರೆ ಒಂದು ನಿರ್ದಿಷ್ಟ ಉದಾಹರಣೆ ಕೊಡೋದಾದರೆ, ಇವತ್ತು ಪ್ರಾಚೀನ ಕನ್ನಡ ಸಾಹಿತ್ಯ ಕುರಿತಂತೆ ಅತಿ ಹೆಚ್ಚು ವಿಮರ್ಶೆ ಬಂದಿರುವುದು ಜನ್ನನ ಬಗ್ಗೆ ಎನ್ನುವುದು ಇಲ್ಲಿ ಕುತೂಹಲಕಾರಿ ಅಂಶ ಅನ್ನಿಸಬಹುದು ನಿಮಗೆ. ಬಹುಶಃ ಜಾಗತೀಕರಣದ ಸಂದರ್ಭದಲ್ಲಿ ಹಿಂಸೆ ಮತ್ತು ಕಾಮದ ಪ್ರಶ್ನೆ ಬೇರೆ ರೂಪಗಳಲ್ಲಿ ಮುಖ್ಯ ಭೂಮಿಕೆಗೆ ಬಂದಿರುವುದರಿಂದ, ಜನ್ನನ ಬಗ್ಗೆ ವಿಶೇಷ ಕುತೂಹಲ ಉಂಟಾಗಿರಬಹುದು ನಮ್ಮಲ್ಲಿ. ಅಥವಾ ದಾಂಪತ್ಯ ಜೀವನದ ಬಗ್ಗೆ ಕೂಡ ನಮ್ಮಲ್ಲಿ ಹೊಸ ಪ್ರಶ್ನೆಗಳು ಎದ್ದಿರಬಹುದು. ಆದ್ದರಿಂದ ಈ ಅವಧಿಯಲ್ಲಿ ಜನ್ನನ ಬಗ್ಗೆ ನಮ್ಮ ಹಿರಿಯರಿಂದ ಹಿಡಿದು ಕಿರಿಯರವರೆಗೂ, ಬಹಳ ಜನ ಜನ್ನನ ಬಗ್ಗೆ ಬರೆದಿದ್ದಾರೆ. ಜನ್ನನ ದಾಂಪತ್ಯ ಕಲ್ಪನೆಯ ಸಂಕೀರ್ಣತೆ ಕುರಿತಂತೆ, ಹಿಂಸೆ– ಅಹಿಂಸೆಯ ಪರಿಕಲ್ಪನೆ ಕುರಿತಂತೆ ಬಹಳ ಜನ ಬರೆದಿದ್ದಾರೆ. ಈ ಹಿನ್ನೆಲೆಯಲ್ಲಿ ನನಗೆ ಇವತ್ತಿನ ಸಾಹಿತ್ಯ ವಿಮರ್ಶೆ– ಹಾಗೆ ನೋಡಿದರೆ, ಕಳೆದ ೧೦– ೨೦ ವರ್ಷಗಳ ಸಾಹಿತ್ಯ ವಿಮರ್ಶೆಯ– ಹಿಂದಿರುವ ಮುಖ್ಯ ಚೈತನ್ಯ ಅಥವಾ ಕಾಳಜಿ ಏನು ಅಂದರೆ, ಇದು ತನ್ನ ಚರಿತ್ರೆಯನ್ನು, ತನ್ನ ವಿಮರ್ಶಾ ಚರಿತ್ರೆಯನ್ನು ಮುರಿದು ಕಟ್ಟುವ ಕೆಲಸದಲ್ಲಿ ತೊಡಗಿರುವುದು ಅನ್ನಿಸ್ತಿದೆ. ಆ ಮೂಲಕ ಸಾಹಿತ್ಯ ಚರಿತ್ರೆಯನ್ನೇ ಅದು ಮುರಿದು ಕಟ್ಟುವ ಕೆಲಸದಲ್ಲಿ ತೊಡಗಿದೆ ಅಂತಲೂ ನಗನ್ನಿಸುತ್ತದೆ.

ಇದು ಒಂದು ರೀತಿಯ ಆತ್ಮ ನಿರೀಕ್ಷಣೆಯ ಕಾಲ ಕೂಡ. ಯಾಕೆಂದರೆ ಇತ್ತೀಚಿನ ವರ್ಷಗಳಲ್ಲಿ ಸಾಹಿತ್ಯ ವಿಮರ್ಶೆಯ ಹೆಸರಿನಲ್ಲಿ ಅನೇಕ ಜಗಳಗಳು, ವಿವಾದಗಳು, ಸಂವಾದಗಳು ನಡೆದು ಹೋಗಿವೆ. ಆ ಸಂವಾದ ಮಾಸ್ತಿ, ಕುವೆಂಪು ಕಾಲದಲ್ಲೇ ಆರಂಭವಾಗಿತ್ತು, 'ಶೂದ್ರ ತಪಸ್ವಿ' ನಾಟಕದ ನೆಪದಲ್ಲಿ. ಅದರ ಬಗ್ಗೆ ಈವರೆಗೆ ಯಾರಿಗಾದರೂ

ಆಯಾಸವಾಗುವಷ್ಟು ಚರ್ಚೆ ನಡೆದು ನಡೆದೂ ಕೊನೆಗೆ ಮೊನ್ನೆ ನಾನು ತೇಜಸ್ವಿಯವರ 'ವಿಮರ್ಶೆಯ ವಿಮರ್ಶೆ' ಪುಸ್ತಕ ಓದುತ್ತಿದ್ದಾಗ, ಅದರಲ್ಲಿನ 'ಮಾತಿನ ಮಾರಾಮಾರಿ' ಎನ್ನುವ ಒಂದು ಲೇಖನ ನೋಡಿ ಇನ್ನಾದರೂ ಈ ಚರ್ಚೆ ಒಂದು ಹದಕ್ಕೆ ಬಂದೀತೇನೋ ಎಂಬ ಆಸೆ ಹುಟ್ಟಿತು! ಇದರಲ್ಲಿ ತೇಜಸ್ವಿ ಹೇಳ್ತಾರೆ, ಇದು ಇಬ್ಬರ ವೈಯಕ್ತಿಕ ಅಭಿಪ್ರಾಯಗಳ ಅಥವಾ ಸಾಹಿತ್ಯ ಚಿಂತನೆ ಕುರಿತಂತಹ ಜಗಳ ಅಲ್ಲ. ಎರಡು ಸಂಸ್ಕೃತಿಗಳ ನಡುವೆ ನಡೆದಂತ ಜಗಳ ಅದು. ಮಾಸ್ತಿ ಕೇವಲ ಒಬ್ಬ ಲೇಖಕ ಅಲ್ಲ; ಕುವೆಂಪು ಅವರಿಗೆ ಅವರು ಒಬ್ಬ ಸಂಸ್ಕೃತಿಯ ಮಾದರಿ. ಹಾಗೇ ಮಾಸ್ತಿಯವರಿಗೆ ಕುವೆಂಪು ಕೂಡ ಒಂದು ಸಂಸ್ಕೃತಿಯ ಮಾದರಿ ಆಗಿರುವುದರಿಂದ ಇದು ಎರಡು ಸಂಸ್ಕೃತಿ ಮಾದರಿಗಳ ನಡುವಣ ಸಂವಾದ. ಸಾಹಿತ್ಯವನ್ನು ಕುರಿತ ನೋಟದ ಈ ದೊಡ್ಡ ಪಲ್ಲಟ ಕಳೆದ ೨೫– ೩೦ ವರ್ಷಗಳ ಹಿಂದೇನೇ ಆರಂಭವಾಯಿತಾದರೂ, ಕನ್ನಡ ಸಾಹಿತ್ಯ ಮೀಮಾಂಸೆಯನ್ನು ಇತ್ತೀಚಿನವರೆಗೆ ಇಂಗ್ಲಿಷ್ ಸಾಹಿತ್ಯದ ಮೇಷ್ಟ್ರುಗಳು ಮತ್ತು ಕೀಳರಿಮೆಯಿಂದ ಕೇವಲ ಅವರ ಬಾಲಂಗೋಚಿಗಳಾಗಿದ್ದ ಕನ್ನಡ ಮೇಷ್ಟ್ರುಗಳೇ ನಿಯಂತ್ರಿಸುತ್ತಿದ್ದುದರಿಂದ ಇದು ಕನ್ನಡ ಸಾಹಿತ್ಯ ವಿಮರ್ಶೆಯ ಪ್ರಧಾನ ಧಾರೆಯ ಲಕ್ಷಣವಾಗಲೇ ಇಲ್ಲ.

ಮೊದಲೇ ತಿಳಿಸಿದಂತೆ ನಾನು ಸಾಹಿತ್ಯದ ವಿದ್ಯಾರ್ಥಿ ಅಲ್ಲ. ಆದ್ದರಿಂದ ನನ್ನ ಮಾತುಗಳಲ್ಲಿ ಸಣ್ಣ ಪುಟ್ಟ ತಾಂತ್ರಿಕ ಅಥವಾ ಪಾರಿಭಾಷಿಕ ತಪ್ಪುಗಳಿದ್ದರೆ ಕ್ಷಮಿಸಬೇಕು. ಏಕೆಂದರೆ ಕನ್ನಡ ಸಾಹಿತ್ಯ ವಿಮರ್ಶೆಯನ್ನು ಪ್ರಭಾವಿಸಿದ ನಾಲ್ಕಾರು ಮುಖ್ಯ ಪ್ರಸ್ಥಾನಗಳನ್ನು ನಾನಿಲ್ಲಿ ಗುರುತಿಸುವುದಕ್ಕೆ ಇಷ್ಟಪಡುತ್ತೇನೆ. ಒಂದು, ಕವಿರಾಜ ಮಾರ್ಗ– ನಾಗವರ್ಮರಿಂದ ಅಧಿಕೃತ ಮಾನ್ಯತೆ ಪಡೆದು ಮತ್ತು ಕನ್ನಡ ಸಾಹಿತ್ಯ ತನ್ನದೆಂದೇ ಈವರೆಗೂ ಭಾವಿಸಿ; ಆದರೆ ಈಗ ಕೆಲವು ಅನುಮಾನಗಳನ್ನು ವ್ಯಕ್ತಪಡಿಸುತ್ತಿರುವ ಭಾರತೀಯ ಕಾವ್ಯ ಮೀಮಾಂಸೆ ಎಂಬ ಸಂಸ್ಕೃತ ಕಾವ್ಯ ಮೀಮಾಂಸೆಯ ಪ್ರಸ್ಥಾನ ಇರಬಹುದು. ನಂತರ ಇದೆಲ್ಲ ಸವೆದು ಹೋದ ದಾರಿಯೆಂಬರ್ಥದಲ್ಲಿ, ಇಂಗ್ಲೀಷ್ ಸಾಹಿತ್ಯದ ಪ್ರಭಾವದಿಂದಾಗಿ ಅದರ ಪ್ರಭಾವಳಿಯ ಅಡಿಯಲ್ಲಿ ಬಿ.ಎಂ.ಶ್ರೀ ಮೂಲಕ ನವೋದಯದ ಭಾಗವಾಗಿ ಆರಂಭವಾದಂತಹ ಒಂದು ರೀತಿಯ ತೌಲನಿಕ ('ಇವಳ ತೊಡುಗೆ ಅವಳಿಗುಡಿಸಿ...') ಕಾವ್ಯ ಮೀಮಾಂಸೆಯ ಘಟ್ಟ ಇರಬಹುದು. ಇದನ್ನು ತಮ್ಮದೊಂದು ಪದ್ಯದಲ್ಲಿ 'ಪಶ್ಚಿಮದ ರಸಪೂರ್ಣ ಗಾಳಿ' ಎಂದು ಸ್ವಾಗತಿಸಿದ್ದ ಕುವೆಂಪು ಅವರೇ ನಂತರ ಅದಕ್ಕೆ ತಿದ್ದುಪಡಿಯಾಗಿ 'ಇದೆಂಥಾ ನ್ಯಾಯ?' ಎನ್ನುವ ಪ್ರಬಂಧದ ಮೂಲಕ ಆರಂಭಿಸಿದ್ದಂತಹ; ಆದರೆ ಅವರ ಹೊರತಾಗಿ ಇನ್ನಾರೂ ಅಷ್ಟಾಗಿ ಅನುಸರಿಸದಿದ್ದರೂ ತನ್ನ ಆಂತರಿಕ ಬಲದಿಂದಲೇ ಈಗಲೂ ಚರ್ಚಿತವಾಗುತ್ತಿರುವ ದಾರ್ಶನಿಕ ಕಾವ್ಯ ಮಿಮಾಂಸೆಯ ಪ್ರಸ್ಥಾನ ಇರಬಹುದು. ನಂತರ ಬೇಂದ್ರೆಯವರು ತಮ್ಮ 'ಸಾಹಿತ್ಯದ ವಿರಾಟ್ ದರ್ಶನ' ಕೃತಿಯ ಮೂಲಕ ತಮ್ಮ ಕಾವ್ಯಕ್ಕೇ ಒಂದು ಮಾರ್ಗದರ್ಶಿಯಂತೆ ಪ್ರಸ್ತುತಪಡಿಸಿದ ಅನುಭಾವಿಕ ಎನ್ನಬಹುದಾದ ಸಾಹಿತ್ಯ ಚಿಂತನೆಯ ಪ್ರಸ್ಥಾನ ಇರಬಹುದು. ಇದನ್ನೆಲ್ಲ 'ಹಳೆಯ ಪುರಾಣ' ಎಂಬಂತೆ ಜರಿದು, ಯುದ್ಧೋತ್ತರ ಪಶ್ಚಿಮದ ಜಗತ್ತು ಸೃಷ್ಟಿಸಿದ

ಹಲವು ತತ್ವಗಳಿಂದ ಸ್ಫೂರ್ತಿ ಪಡೆದು, 'ಅಥೆಂಟಿಕ್ ಅನುಭವ'ವೆಂಬ ವ್ಯಕ್ತಿ ಕೇಂದ್ರಿತವಾದ ತೀವ್ರ ಗ್ರಹಿಕೆಯ ನೆಲೆಯಲ್ಲಿ ಕೃತಿ ನಿಷ್ಠವಾಗಿ ಸಾಹಿತ್ಯ ಚಿಂತನೆ ಮಾಡುವ ಅಸ್ತಿತ್ವವಾದಿ ಕಾವ್ಯ ಮೀಮಾಂಸೆ ಎಂದು ಕರೆಯಬಹುದಾದ ನವ್ಯ ಪ್ರಸ್ಥಾನ ಬಂತು. ನಂತರದಲ್ಲೇ ಇದಕ್ಕೆ ಪ್ರತಿಕ್ರಿಯೆಯಾಗಿ, ಒಂದು ಪ್ರಸ್ಥಾನದ ಸ್ವರೂಪ ಪಡೆಯದಿದ್ದರೂ, ನವ್ಯ ಕಾವ್ಯ ಪ್ರಸ್ಥಾನಕ್ಕೆ ಒಂದು ಆಘಾತವನ್ನು ಉಂಟು ಮಾಡಿದಂತಹ ತೇಜಸ್ವಿಯವರು ಒಕ್ಕೂಟದ ಭಾಷಣದ ಮೂಲಕ (ಮತ್ತು ನಂತರದಲ್ಲೆ ಬಂದ ಅವರ 'ಅಬಚೂರಿನ ಪೋಸ್ಟಾಫೀಸು' ಕಥಾ ಸಂಕಲನಕ್ಕೆ ಬರೆದ 'ಹೊಸ ದಿಗಂತದೆಡೆಗೆ' ಎಂಬ ಮುನ್ನುಡಿಯ ಮಾತುಗಳ ಮೂಲಕ) ನಾಯಕ ಕೇಂದ್ರಿತವಲ್ಲದ ಮತ್ತು ಕೃತಿಕಾರ ಸಾಕ್ಷಿಭೂತ ಪ್ರಜ್ಞೆಯಾಗಿ ಮಾತ್ರ ಕ್ರಿಯಾಶೀಲವಾಗಿರುವ ಸಾಹಿತ್ಯವನ್ನು ಪ್ರತಿಪಾದಿಸುವ ಸಾಮಾಜಿಕ ಅನುಭವ ಕೇಂದ್ರಿತ ಕಾವ್ಯ ಪ್ರಸ್ಥಾನವೊಂದು ಮಂಡಿತವಾಯಿತು. ನಂತರ ಘೋಷಿತವಾದ ಬಂಡಾಯ ಮತ್ತು ದಲಿತ ಪ್ರಣಾಳಿಕೆಗಳಲ್ಲಿ ಸಾಮಾಜಿಕ ಆಕ್ರೋಶವೇ ಪ್ರಧಾನವಾಗಿ ಸಾಹಿತ್ಯ ಚಿಂತನೆ ಅದರ ಬಾಲಂಗೋಚಿಯಾಗಿ ಮಾತ್ರ ಮೂಡಿದುದರಿಂದ ಅವು ಸಾಹಿತ್ಯ ಮೀಮಾಂಸೆಗಳಾಗಿ ಕ್ರಿಯಾಶೀಲವಾಗದೆ, ಸಂಘಟಿತ ಗುಂಪುಗಳ ಸುಲಭ ಸಾಂಸ್ಕೃತಿಕ ರಾಜಕಾರಣದ ಪ್ರಣಾಳಿಕೆಗಳಾಗಿ (ಪ್ರಗತಿಶೀಲ ಸಾಹಿತ್ಯ ಪ್ರಣಾಳಿಕೆಯಂತೆ) ಮಾತ್ರ ಉಳಿದುದರಿಂದ ಅವು ಸಾಹಿತ್ಯಿಕವಾಗಿ ಸಾಧಿಸಿದ್ದು ಕಡಿಮೆಯೆಂದೇ ಹೇಳಬೇಕು.

ವಾಚ್ಯದಲ್ಲಿ ಕಲಾತ್ಮಕವಾಗದೆ ಧ್ವನಿಯಲ್ಲಿ ಮಾತ್ರ ಕಲಾತ್ಮಕವಾಗೋದು ಅನುಭವದ ಟಂಕವಿಲ್ಲದ ಅಮೂರ್ತ ಬರಹಗಳಲ್ಲಿ ಮಾತ್ರ ಎಂದು ವಾದಿಸುವ ಮೂಲಕ ಆಧುನಿಕ ಸಾಹಿತ್ಯಕ್ಕೆ ಸಂಬಂಧಪಟ್ಟಂತಾದರೂ ಧ್ವನಿ ಪ್ರಸ್ಥಾನದ ಪರಿಪ್ರೇಕ್ಷ್ಯಕ್ಕೇ ಒಂದು ಪಲ್ಲಟವನ್ನು ನೀಡಿದಂತಹ ಒಕ್ಕೂಟ ಸಂದರ್ಭದ ಕಾವ್ಯ ಪ್ರಸ್ಥಾನ ತೇಜಸ್ವಿಯರಿಂದ ಮಂಡಿತವಾದರೂ, ಅದರ ಮೂಲವನ್ನು ನಾವು ಕುವೆಂಪು ಅವರ ಎರಡು ಮಹಾ ಕಾದಂಬರಿಗಳ ಬರಹ ವಿನ್ಯಾಸದಲ್ಲೇ ಕಾಣಬಹುದಿತ್ತು. ಆದರೆ ಪಾರಂಪರಿಕ, ಬೆರಕೆ ಮತ್ತು ಸಂಪೂರ್ಣ ಆಮದಾದ ಸಾಹಿತ್ಯ ಚಿಂತನೆಗಳ ಕಾರಣದಿಂದಾಗಿ ಇದನ್ನು ಕನ್ನಡ ವಿಮರ್ಶೆ ಕಾಣದೇ ಹೋಯಿತು. ಈ ಸಂದರ್ಭದಲ್ಲಿ ತೇಜಸ್ವಿ ತಮ್ಮ ಒಕ್ಕೂಟದ ಭಾಷಣದ ಮುಂದುವರಿಕೆಯಾಗಿ ಬರೆದ 'ಪರಂಪರೆ ಮತ್ತು ಕುವೆಂಪು' ಎನ್ನುವ ಪ್ರಬಂಧದಲ್ಲಿ ('ಶ್ರೀಕುವೆಂಪು': ಸಂ.ಜಿ.ಎಸ್. ಶಿವರುದ್ರಪ್ಪ: ಪ್ರಸಾರಾಂಗ: ಬೆಂಗಳೂರು. ವಿಶ್ವವಿದ್ಯಾಲಯ) ಕನ್ನಡ ಸಾಹಿತ್ಯ, ಸಂಸ್ಕೃತಿಯ ಚರಿತ್ರೆ ಅಂದರೆ ಮತ್ತೇನೂ ಅಲ್ಲ, ಭಾರತೀಯ ಎಂಬ ಹೆಸರಿನಲ್ಲಿ ಕ್ರಿಯಾಶೀಲವಾಗಿದ್ದ ಸಂಸ್ಕೃತ ಕಾವ್ಯ ಮೀಮಾಂಸೆಯ ವಿರುದ್ಧ ನಡೆದ ಬಂಡಾಯಗಳ ಚರಿತ್ರೆ; ಇಡೀ ಶೂದ್ರ ಸಮುದಾಯದ ಮೂಕ ಅನುಭವಗಳು ಪ್ರಜಾಗಮ್ಯವಾಗುತ್ತಾ ಅಭಿವ್ಯಕ್ತಿಯನ್ನು ಸಾಧಿಸಿಕೊಳ್ಳುತ್ತಾ ಬಂದುದರ ಚರಿತ್ರೆ' ಅಂತಾ ಕನ್ನಡ ಸಾಹಿತ್ಯ ಚರಿತ್ರೆಯನ್ನು ನಿರೂಪಿಸುತ್ತಾರೆ. ಇದು ನಮ್ಮ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯ ಸಾಮಾಜಿಕ ಸನ್ನಿವೇಶದ ಹಿನ್ನೆಲೆಯಲ್ಲಿ ಹೆಚ್ಚು ಚರ್ಚೆಗೆ ಒಳಗಾಗಲಿಲ್ಲ ಎನ್ನುವುದು ಸಹಜವೇ.

ಆದರೆ ಇಂದು ಈ ಸನ್ನಿವೇಶ ಸಾಕಷ್ಟು ಬದಲಾಗಿದೆ. ತೇಜಸ್ವಿಯವರ ಈ ಆಲೋಚನೆಗಳ ಜೊತೆಗೆ ಪೂರಕವೆನ್ನಿಸುವ ಇನ್ನಷ್ಟು ವಿಚಾರಗಳು ಮತ್ತು ವಿಷದೀಕರಣಗಳೊಂದಿಗೆ ಅವರ 'ವಿಮರ್ಶೆಯ ವಿಮರ್ಶೆ' (ಪುಸ್ತಕ ಪ್ರಕಾಶನ: ೨೦೦೯) ಎಂಬ ಪುಸ್ತಕ ಎರಡು ವರ್ಷಗಳ ಹಿಂದೆ ಬಂದಿದೆ. ಆದರೆ ಕನ್ನಡ ಸಾಹಿತ್ಯ ವಿಮರ್ಶಾ ಸಾಮ್ರಾಜ್ಯದ ಅಧಿಪತಿಗಳೆನಿಸಿಕೊಂಡ ಯಾರೂ ಈವರೆಗೆ ಈ ಪುಸ್ತಕದ ಪ್ರಸ್ತಾಪವನ್ನೂ ಮಾಡದೆ ಮಗುಮ್ಮಾಗಿದ್ದಾರೆ! ಬಹುಶಃ ಅಕಡೆಮಿಕ್ ಲೋಕದ ಹೊರಗಿನ ನನ್ನೊಬ್ಬನ ಹೊರತಾಗಿ ಯಾರೊಬ್ಬರೂ ಈ ಪುಸ್ತಕದ ಬಗ್ಗೆ ಬರೆದಿಲ್ಲ, ಚರ್ಚಿಸಿಲ್ಲ ಏಕೆ ಅನ್ನೋದು ಕೂಡ ಕಳೆದ ಹತ್ತು ವರ್ಷಗಳಲ್ಲಿ ಕನ್ನಡ ಸಾಹಿತ್ಯ ಕ್ರಮಿಸಿರುವ ವಿಮರ್ಶಾ ಹಾದಿಯ ಬಗ್ಗೆ ಕೇಳಬೇಕಾದ ಬಹು ಮುಖ್ಯ ಪ್ರಶ್ನೆ ಎಂದು ನಾನು ಭಾವಿಸಿದ್ದೇನೆ. ಇದಕ್ಕೆ ತೇಜಸ್ವಿ ಅಕಡೆಮಿಕ್ ಲೋಕಕ್ಕೆ ಸೇರಿದವರಲ್ಲ; ಹಾಗಾಗಿ ಅವರು ಈ ವಿಷಯಗಳಲ್ಲಿ ಗಂಭೀರ ಪರಿಗಣನೆಗೆ ಅರ್ಹವಾಗುವಷ್ಟು 'ಸೂಕ್ಷ್ಮ'ವಾಗಿರಲಾರರು ಎಂಬ ಮಡಿ– ಮೈಲಿಗೆ ಕಾರಣವೇ? ಅಥವಾ ಕುವೆಂಪು ಬಗ್ಗೆ ಸೂಕ್ಷ್ಮವಾಗಿ ನಡೆಯುತ್ತಿತ್ತೆಂದು ತೇಜಸ್ವಿ ಹೇಳುತ್ತಿದ್ದ– ಕುವೆಂಪು ಅವರನ್ನು ಕವಿ ಎಂದಷ್ಟೇ ಪರಿಗಣಿಸಿ ಅವರ ಕಾದಂಬರಿಗಳು ಮತ್ತು ವಿಚಾರ ವಿಮರ್ಶೆಗಳನ್ನು ನಿರ್ಲಕ್ಷಿಸುವ– ರಾಜಕಾರಣದಂತೆಯೇ, ತೇಜಸ್ವಿಯವರ ಸೃಜನಶೀಲ ಬರಹಗಳನ್ನಷ್ಟೇ ಗಮನಿಸಿ, ಅವರ ಸಾಹಿತ್ಯ ಮೀಮಾಂಸೆಯ ವಿಚಾರಗಳನ್ನು ನಿರ್ಲಕ್ಷಿಸುವ ರಾಜಕಾರಣವೇ ಇದು?

ಇವೆಲ್ಲ ಸೇರಿ ಒಂದಾಗಿ ರೂಪುಗೊಂಡಿರುವ ರಾಜಕಾರಣದ ಹೊಳಹು ನಮಗೆ ಸಿಗುವುದು ಇದೇ ಮುಂದೆ ಡಿ.ಆರ್. ನಾಗರಾಜ ಅವರು ಮಂಡಿಸಿದರೆಂದು ಹೇಳಲಾಗುವ 'ಸಂಸ್ಕೃತಿ ವಿಮರ್ಶೆ' ಎಂದು ಕರೆಯಲಾಗುವ ಸಾಹಿತ್ಯ ಪ್ರಸ್ಥಾನದಲ್ಲಿ ಪಡೆದ ಅಕಡೆಮಿಕ್ ರೂಪವನ್ನು (ಅಂದರೆ ಪಂಡಿತ ಆಕರಗಳ ಆಧಾರಗಳಿಂದಾಗಿ ವ್ಯಾಪಕ ವಿದ್ವತ್‌ಪ್ರಭೆ ಪಡೆದು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸಾಹಿತ್ಯ ಚಿಂತನೆಯ ಪರಿಭಾಷೆಗೆ ಪರಿವರ್ತಿತವಾಗುವ ಮೂಲಕ ಅದರ ಸ್ಥಳೀಯ ಪರಿಣಾಮಗಳು ಹಿನ್ನೆಲೆಗೆ ಸರಿದು ಹೋಗಿ, ಆತ್ಯಂತಿಕವಾಗಿ ವಿಶ್ವಾತ್ಮಕ ನೆಲೆಯಲ್ಲಿ ತನ್ನ ಬೌದ್ಧಿಕ ಸಾರ್ಥಕತೆಯನ್ನು ಕಂಡುಕೊಳ್ಳುವ ಪ್ರವೃತ್ತಿ) ಗಮನಿಸಿದಾಗ. ಇದಕ್ಕೆ ಸಿಕ್ಕ ಮಾನ್ಯತೆ ಮತ್ತು ಆ ಬಗ್ಗೆ ನಡೆದ ಮತ್ತು ನಡೆಯುತ್ತಿರುವ ಚರ್ಚೆಗಳು ಕಳೆದ ಹತ್ತಿಪ್ಪತ್ತು ವರ್ಷಗಳ ನಮ್ಮ ವಿಮರ್ಶೆಯ ದಿಕ್ಕನ್ನೇ ಬದಲಿಸಿವೆ ಎಂದೇ ಹೇಳಬೇಕು. ಈ ಅರ್ಥದಲ್ಲಿ ಈಗ ಗಂಭೀರ ಸಾಹಿತ್ಯ ವಿಮರ್ಶೆಯ ಕ್ಷೇತ್ರದಲ್ಲಿ ಚಾಲ್ತಿಯಲ್ಲಿರುವುದು ಮೂಲತಃ ತೇಜಸ್ವಿ ಸಾಹಿತ್ಯ ಮೀಮಾಂಸೆ ಎಂದು ಹೇಳಿದರೆ ನಾಗರಾಜರ ಅಭಿಮಾನಿ ಬಳಗ ಸಿಟ್ಟಾದೀತೇನೋ! ಅದೇನೇ ಇರಲಿ, ಇತ್ತೀಚಿನ ವಿಮರ್ಶಕರಲ್ಲೊಬ್ಬರಾದ ಜಿ.ಬಿ. ಹರೀಶರು ನಾಗರಾಜರ ಬಗ್ಗೆ ಬರೆಯುತ್ತಾ ('ಬೆಳಕಿನಾಟ': ಸಂಚಯ ಪ್ರಕಾಶನ :೨೦೦೫) ಇವರು ಪಿತ್ರಾರ್ಜಿತವನ್ನೆಲ್ಲ ಸ್ವಯಾರ್ಜಿತ ಮಾಡಿಕೊಳ್ಳುವ ಕಲೆಯನ್ನು ಕರಗತ ಮಾಡಿಕೊಂಡವರು ಎನ್ನುವಾಗ, ಅವರ ಈ ಸೂಚನೆಯನ್ನು ನಾನು, ನಾಗರಾಜರ ಸಂಸ್ಕೃತಿ ವಿಮರ್ಶೆಯ

ಪ್ರಸ್ಥಾನ ತೇಜಸ್ವಿಯವರ ಸಾಹಿತ್ಯ ಚಿಂತನೆಯ sterilized (acdemised ಎನ್ನುವ ಅರ್ಥದಲ್ಲಿ) ವಿಸ್ತರಣೆ ಎಂದು ಅರ್ಥೈಸಲು– ಇದು ಸ್ವತಃ ಹರೀಶರ ಉದ್ದೇಶವಲ್ಲದಿದ್ದರೂ– ನನಗೆ ಮನಸ್ಸಾಗುತ್ತದೆ! ಈ ಸಂಬಂಧವಾದ ಕೆಲವು ಪೂರಕ ಆಲೋಚನೆಗಳನ್ನು ಸಂದರ್ಭಾನುಸಾರ ಮುಂದೆ ಮಂಡಿಸುವೆ.

ಮೊದಲಾಗಿ ಸಂಸ್ಕೃತಿ ವಿಮರ್ಶೆ ನಿಜವಾಗಿ ಪ್ರಾರಂಭವಾಗಿದ್ದು ಯಾರಿಂದ, ಯಾವಾಗ ಅಂತಾ ಪ್ರಶ್ನೆ ಕೇಳಿಕೊಂಡಾಗ ಕನ್ನಡದಲ್ಲಿ ವಿಮರ್ಶೆ ಅನ್ನೋದು ಹುಟ್ಟಿ ಬೆಳೆದಿದ್ದೇ ಸಂಸ್ಕೃತಿಯ ಪರಿಪ್ರೇಕ್ಷ್ಯದಲ್ಲಿ, ಮೂಲತಃ ಸಂಸ್ಕೃತಿ ವಿಮರ್ಶೆಯಾಗಿಯೇ ಎಂಬುದು ನಮ್ಮ ಅರಿವಿಗೆ ಬಂದೀತು. ಅದು ಡಿವಿಜಿ ಇರಬಹುದು, ಕುವೆಂಪು ಕಾಲ ಇರಬಹುದು ಅಥವಾ ಅಥವಾ ಅಡಿಗರ ವಿಮರ್ಶೆನೇ ಇರಬಹುದು ಅಥವಾ ಬಂಡಾಯದವರ ವಿಮರ್ಶೆ ಇರಬಹುದು– ಅಲ್ಲೇನಾದರೂ ವಿಮರ್ಶೆ ಅನ್ನೋದು ನಿಜವಾಗಿ ಬೆಳೆದಿದ್ದರೆ– ನಮ್ಮ ಎಲ್ಲ ವಿಮರ್ಶಾ ಮಾದರಿಗಳೂ ಸಂಸ್ಕೃತಿಯನ್ನು ಪ್ರಧಾನ ಅಥವಾ ಹಿನ್ನೆಲೆಯ ಭಿತ್ತಿಯಾಗಿಟ್ಟುಕೊಂಡೇ ಮೂಡಿರೋದು. ಆದರೆ ಈ ಸಂಸ್ಕೃತಿಯ ಪರಿಕಲ್ಪನೆ ಹಿಂದೆ ಇದ್ದ ರಾಜಕಾರಣ ಇತ್ತಲ್ಲ, ಅಂದರೆ ಯಾವ ಸಂಸ್ಕೃತಿ, ಯಾರ ಸಂಸ್ಕೃತಿ, ಆ ಸಂಸ್ಕೃತಿ ಹಿಂದಿನ ತತ್ವಜ್ಞಾನ ಏನಿದೆ, ಇದರ ಬಗ್ಗೆ ತೇಜಸ್ವಿ ಕೇಳಿದಂಥ ಪ್ರಶ್ನೆಗಳನ್ನು ಡಿ.ಆರ್. ನಾಗರಾಜ್ ತಮ್ಮ ವ್ಯಾಪಕ ಓದು ಮತ್ತು ವಿಶ್ಲೇಷಣೆಗಳ ಮೂಲಕ ಪಡೆದ ಒಳನೋಟಗಳಿಂದ ವಿಶ್ವಾತ್ಮಕ ಮಟ್ಟದ ಪರಿಭಾಷೆಯಲ್ಲಿ ವಿಸ್ತರಿಸಿದರು. ತೇಜಸ್ವಿ ಕನ್ನಡ ಸಂಸ್ಕೃತಿ ಮತ್ತು ಸಾಹಿತ್ಯದ ಮಟ್ಟದಲ್ಲಿ ಸಾರಾ ಸಗಟಾದ ವೈದಿಕ ವಿರೋಧಿ ನೆಲೆಯಲ್ಲಿ ವಿವೇಚಿಸಿದ ಪ್ರಶ್ನೆಗಳನ್ನೇ ಡಿ.ಆರ್. ಅಖಿಲ ಭಾರತ ಸಂಸ್ಕೃತಿ ಪರಿಕಲ್ಪನೆಯ ನೆಲೆಯಲ್ಲಿ, ವಿಚಾರವಾದಿಯಾಗಿದ್ದ ತೇಜಸ್ವಿ ಅದರ ಸಂಕೀರ್ಣತೆಗಳನ್ನು ಗಮನಿಸದೆ ಹುಸಿಯೆಂದು ನಿರಾಕರಿಸಿದಂತೆ ನಿರಾಕರಿಸದೆ, ಅದನ್ನು ಅದರ ಬಹುಮುಖಿ ರೂಪದಲ್ಲಿ ಹೊಸ ಅನುಸಂಧಾನದ ನೆಲೆಯಲ್ಲಿ ಮುಖಾಮುಖಿಯಾಗಿಸಿಕೊಂಡರು. ಸಹಜವಾಗಿಯೇ ಅವರ ಅಧ್ಯಯನಗಳಿಗೆ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವಲಯಗಳಿಂದ ಸಹಾನುಭೂತಿ, ಬೆಂಬಲ ಮತ್ತು ಮಾನ್ಯತೆ ದೊರಕಿದವು.

ಆದರಿಂದ ಒಂದು ಅಪಾಯನೂ ಇರುತ್ತದೆ. ನಾನು ಈ ಮುಂಚೆ ಪ್ರಸ್ತಾಪಿಸಿದ sterilizationನ ಅಪಾಯ. ನಿಮಗೆ ಗೊತ್ತಿರಬೇಕು, ಸ್ಥಳೀಯ ಮಹತ್ವ ಸಾಲದು ಎಂದು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಪ್ರಭಾವಳಿಯನ್ನು ಹುಡುಕಿಕೊಂಡು ಹೋದ ನಮ್ಮ ನಡುವಿನ ಒಂದೆರಡು ತಲೆಮಾರುಗಳ ಲೇಖಕರು ಏನಾಗಿ ಹೋದರು ಅಂತ. ಇವತ್ತು ಕೂಡ ನಮ್ಮ ಸಾಹಿತ್ಯ ವಿಮರ್ಶೆ ಪ್ರಾಚೀನ ಸಾಹಿತ್ಯವನ್ನು ಬಿಟ್ಟರೆ ಹೆಚ್ಚು ಅನುಸಂಧಾನ ಮಾಡುತ್ತಿರುವುದು ನಮ್ಮ ನವೋದಯ ಸಾಹಿತ್ಯದ ಜೊತೆಗೇ; ಅದು ಕುವೆಂಪು, ಬೇಂದ್ರ, ಮಾಸ್ತಿ, ಕಾರಂತರ ಬಗ್ಗೆ, ಪುತಿನ ಬಗ್ಗೆನೇ! ಯಾಕಿದು? ಯಾಕೆ ಅಂದರೆ ಅವರು ಇಂದಿಗೂ– ಕನ್ನಡ ಸಾಹಿತ್ಯ ಲೋಕಕ್ಕೆ ಏನೆಲ್ಲ ಹೊಸ ಹೊಸ ಸಾಹಿತ್ಯ ಸಿದ್ಧಾಂತಗಳನ್ನು ತಂದು

ಇಡಿಕಿರಿಯುತ್ತಿರುವ ಸಂದರ್ಭದಲ್ಲೂ– ಎಲ್ಲರಿಗಿಂತ ಹೆಚ್ಚು ಶಕ್ತ ಬರಹಗಾರರಾಗಿ ಕಾಣ್ತಿದಾರೆ. ಯಾಕೆ ಕಾಣ್ತಿದ್ದಾರೆ ಅಂದರೆ, ಅವರು ವ್ಯಕ್ತಿಗಳಾಗಿ ಭೌಗೋಳಿಕವಾಗಿ ಹೆಚ್ಚು ಊದಿಕೊಳ್ಳೋಕೆ ಹೋಗಲಿಲ್ಲ. ತಾವು ಇದ್ದ ಕಡೇನೇ ತಮ್ಮ ಸಾಹಿತ್ಯ ಹುಟ್ಟಿದ ನೆರೆಹೊರೆಯಿಂದಲೇ ಪ್ರತಿಸ್ಪಂದನ ಪಡೆದುಕೊಂಡು ಸಹಜವಾಗಿ ಬೆಳೆದು ಆಳವಾಗಿ ಬೇರು ಬಿಟ್ಟರು. ಆಕಾಶದಗಲ ಹರಡಿಕೊಂಡರು. ಕನ್ನಡ ಲೇಖಕರಷ್ಟೇ ಆಗಿದ್ದುಕೊಂಡೂ ವಿಶ್ವ ಲೇಖಕರೂ ಆದರು. ಹಾಗಾಗಿ ಅವರು ಇತ್ತೀಚಿನ ಕೆಲವರಂತೆ ವಿಶ್ವ ಲೇಖಕರಾಗಲು ಹೋಗಿ ಕನ್ನಡಕ್ಕೂ ಎರವಾಗುವ ಅಪಾಯಕ್ಕೆ ಸಿಗಲಿಲ್ಲ!

ಅದೇನೆ ಇರಲಿ. ಡಿ.ಆರ್. ನಾಗರಾಜ್ ಈ ಅಪಾಯವನ್ನು ತಮ್ಮ ಸಾಹಿತ್ಯ ಚಿಂತನೆಯನ್ನು ಸಂಪೂರ್ಣವಾಗಿ, ಅಂದರೆ ಬೇರುಮಟ್ಟದ ಸಂಸ್ಕೃತಿ ಚಿಂತನೆಯನ್ನಾಗಿ ಪರಿವರ್ತಿಸುವ ಒಂದು ದೊಡ್ಡ ಪ್ರಯೋಗವನ್ನು ಮಾಡುವ ಮೂಲಕ, ಅದನ್ನು ದೇಸಿ ಚಿಂತನೆಯ ಮಾದರಿಯಾಗಿ ಕಟ್ಟಲು ಯತ್ನಿಸಿ ಸಾಕಷ್ಟು ಪ್ರಮಾಣದಲ್ಲಿ ನಿವಾರಿಸಿಕೊಂಡರೆಂದೇ ಹೇಳಬೇಕು. 'ವಿಸ್ಮೃತಿ' ಎಂಬ ಒಂದು ಕಲ್ಪನೆಯನ್ನು– ಅದು ಜಾಗತಿಕ ಸಂಸ್ಕೃತಿ ಚಿಂತನೆಯಲ್ಲಿ ಹೊಸ ಕಲ್ಪನೆಯಲ್ಲವಾದರೂ– ಪರಿಚಯ ಮಾಡಿದರು. ನಾವು ನಮ್ಮ ಭೂತಕಾಲವನ್ನು ಅಂದರೆ ನಮ್ಮ ಚರಿತ್ರೆಯನ್ನು ವಸಾಹತುಶಾಹಿ ಆಡಳಿತ ಕಾರಣದಿಂದಾಗಿ– ವಸಾಹತುಶಾಹಿ ಆಡಳಿತ ಅಂದರೆ ಕೇವಲ ನಾಗರಿಕ ಆಡಳಿತ ಅಲ್ಲ, ಅದು ಸಾಂಸ್ಕೃತಿಕ ಆಳ್ವಿಕೆ; ಅದರ ರಾಜಕಾರಣ, ಇವೆಲ್ಲದರಿಂದಾಗಿ– ಅದು ಹುಟ್ಟಿಸಿದ ಕೀಳರಿಮೆಯಿಂದಾಗಿ ಅಥವಾ ಅದು ತಂದಂತಹ ಪಶ್ಚಿಮದ ಆಧುನಿಕತೆಯ ಆಕರ್ಷಣೆಯ ಕಾರಣದಿಂದಾಗಿ ವಾರೆಗಣ್ಣಿನಿಂದಲೇ ನೋಡುವ ಒತ್ತಡಕ್ಕೆ ಒಳಗಾದೆವು. ಆಧುನಿಕತೆಯ ಆಕರ್ಷಣೆ ಏನಿದೆ; ಯಾವುದು ವಿಚಾರಕ್ಕೆ ದಕ್ಕುವುದೋ, ಯಾವುದು ತರ್ಕಕ್ಕೆ ದಕ್ಕುವುದೋ, ಯಾವುದು ವಿಜ್ಞಾನಕ್ಕೆ– ಅಂದರೆ ಭೌತಿಕ ಅಳತೆಗಳಿಗೆ– ದಕ್ಕುವುದೋ ಅದು ಮಾತ್ರ ಪ್ರಗತಿಶೀಲವಾದದ್ದು, ನಮ್ಮನ್ನು ಮುಂದಕ್ಕೆ ಕರೆದುಕೊಂಡು ಹೋಗುತ್ತದೆ, ಮಾನವ ವಿಕಾಸಕ್ಕೆ ಕಾರಣವಾಗುತ್ತದೆ ಅನ್ನುವ ಒಂದು ಏನು ನಂಬಿಕೆಯಾಗಿ ಮೂಡಿತ್ತಲ್ಲ, ಆ ನಂಬಿಕೆಯ ಕಾರಣದಿಂದ ನಾವು ನಮ್ಮ ಪರಂಪರೆಯ ಬಗ್ಗೆ ವಿಮರ್ಶಾತ್ಮಕ ನೋಟವನ್ನೇ ಕಳೆದುಕೊಂಡು ಸಾರಾಸಗಟಾದ ಅವಜ್ಞೆಯನ್ನು ಬೆಳೆಸಿಕೊಂಡೆವು. ಇದರಿಂದಾಗಿ ನಾವು ನಮ್ಮದೇ ಆದ ಜ್ಞಾನ ಪರಂಪರೆಯ ಸಾತತ್ಯಕ್ಕೆ, ಚರಿತ್ರೆಗೆ ಎರವಾದೆವು. ಈಗ ಆಧುನಿಕ ನಾಗರೀಕತೆ ಒಂದು ಸ್ಥಗಿತತೆಗೆ ಈಡಾಗಿ ನಮ್ಮ ಅಸ್ತಿತ್ವದ ಅಧ್ಯಾತ್ಮಿಕತೆಯನ್ನೇ ಅನುಮಾನಕ್ಕೀಡು ಮಾಡಿರುವಾಗ ನಮ್ಮ ನಿಜವಾದ ಅಸ್ಮಿತೆಯನ್ನು ಪುನರನ್ವೇಷಿಸುವ ಅಗತ್ಯ ಉಂಟಾಗಿದೆ ಎಂಬ ಅರಿವು ಸ್ಫೋಟಿಸಿದ ಕಾಲವದು.

ಡಿ.ಆರ್. ನಾಗರಾಜ್‌ರ ಚಿಂತನೆ ಈ ಸ್ಫೋಟದ ಪರಿಣಾಮ. ನಾಗರಾಜ್ ೭೦–೮೦ರ ದಶಕದಲ್ಲಿ ಬಹಳ ಆಧುನಿಕರಾಗಿದ್ದವರೇನೇ. ಅಪ್ಪಟ ವಿಚಾರವಾದಿಯಾಗಿದ್ದವರೇನೇ! ಬಂಡಾಯ ಸಾಹಿತ್ಯ ಸಂಘಟನೆಗೆ ಸ್ಫೂರ್ತಿಯಾಗಿ 'ಖಡ್ಗವಾಗಲಿ ಕಾವ್ಯ!' ಎಂಬ ಹುಂಬ ಘೋಷಣಾ ವಾಕ್ಯವನ್ನು ಕೊಟ್ಟವರೂ, ನಂತರ ಅದರ ವಿರುದ್ಧ ತಿರುಗಿಬಿದ್ದವರೂ ಅವರೇ! ಅವರನ್ನು ಬಹು ಹತ್ತಿರದಿಂದ ಕಂಡವನು ನಾನು. ಆದರೆ ನಮಗೆ ಎಲ್ಲರಿಗೂ ಆದ ಹಾಗೆ

ಅವರಿಗೂ ಆಧುನಿಕತೆಯ ಆಯಾಸ ಆದಾಗ ಆಧುನಿಕತೆಯ ಬಗ್ಗೆ ಮರುಚಿಂತನೆಗೆ ತೊಡಗಿದರು. ಇದಕ್ಕೆ ಆಗ ತಾನೇ ನಮ್ಮ ಬುದ್ಧಿಜೀವಿಗಳನ್ನು ಪ್ರಭಾವಿಸತೊಡಗಿದ್ದ ಪಶ್ಚಿಮದ ಆಧುನಿಕೋತ್ತರತೆಯೂ ಕುಮ್ಮಕ್ಕು ನೀಡಿರಬಹುದು. ನೀಡಿರಬಹುದೇನು, ಅವರ ಚಿಂತನೆಯ ಪಾರಿಭಾಷಿಕತೆಯಲ್ಲೇ ಅದು ಢಾಳಾಗಿ ಕಾಣುತ್ತದೆ. ಆದರೆ ಈ ತರಹದ ಚಿಂತನೆ– ಈ ಹೆಸರಿನಲ್ಲದಿದ್ದರೂ– ಬಹು ಹಿಂದೆಯೇ ನವೋದಯದ ಕಾಲದಲ್ಲೇ ಆರಂಭವಾಗಿತ್ತು ಎಂಬುದನ್ನೂ ನಾವು ಗಮನಿಸಬೇಕು. ಕುವೆಂಪು ಈ ಹಿಂದೆ ಪ್ರಸ್ತಾಪಿಸಿದ 'ಇದ್ಯಾವ ನ್ಯಾಯ?' ಅನ್ನೊ ಪ್ರಬಂಧದಲ್ಲೇ ಮಹಾಭಾರತವನ್ನು ನಾವು ಕಲಿತುಕೊಂಡಂತಹ ಅಥವಾ ನಮ್ಮ ಅರಿವಿಗೆ ದಕ್ಕಿಸಿಕೊಂಡಂತಹ ಪಾಶ್ಚಾತ್ಯ ಸಾಹಿತ್ಯ ಮಿಮಾಂಸೆಯ ಮೂಲಕ ಅರಿತುಕೊಳ್ಳಲು ಸಾಧ್ಯವಾ? ಮಹಾಭಾರತಕ್ಕೆ ಇದರಿಂದ ಎಷ್ಟು ದೊಡ್ಡ ಅನ್ಯಾಯವಾಗುತ್ತೆ ಅನ್ನೋ ಸೂಚನೆಗಳನ್ನು ಅವರು ಆವಾಗಲೇ ಕೊಟ್ಟಿದ್ದರು. ಆದರೆ ಅದನ್ನು ಅವರು ಮತ್ತೆ ಅವರಂತೆ ಯೋಚಿಸಿದ ಅನೇಕರು ಒಂದು ಪ್ರಮೇಯವಾಗಿ ಕಟ್ಟಲಿಲ್ಲ. ಬಹುಶಃ ಅದಕ್ಕೆ ಕಾಲ ಕೂಡಿ ಬಂದಿರಲಿಲ್ಲ. ತೇಜಸ್ವಿಯವರು ಒಕ್ಕೂಟದ ಭಾಷಣದಲ್ಲಿ ಈ ದೇಸಿ ಚಿಂತನೆಯ ಸಾಧ್ಯತೆಯ ಎಳೆಯನ್ನು ಶೂದ್ರ ಚಿಂತನೆಯ ರೂಪದಲ್ಲಿ ಮಂಡಿಸಿದರಾದರೂ, ಅದು ಅಖಿಲ ಭಾರತೀಯ (Pan Indian) ದೀಕ್ಷೆ ಪಡೆದು ಆಧುನಿಕತೆಯ ನಿರ್ಣಾಯಕ ಮುಖಾಮುಖಿಯಲ್ಲಿ ಬಹು ಆಯಾಮಗಳ ಪ್ರಮೇಯವಾಗಿ ಬೆಳೆಯಲು ಡಿ.ಆರ್. ನಾಗರಾಜರವರೆಗೆ ಕಾಯಬೇಕಾಯಿತು.

ಪ್ರಾಚೀನ ಭಾರತದ ಬಗ್ಗೆ ಆಧುನಿಕತೆಯ ಪ್ರವಾದಿಗಳಿಂದಾಗಿ ಒಂದು ತಪ್ಪು ಕಲ್ಪನೆ ಉಂಟಾಗಿತ್ತು. ಅಂದರೆ ಪ್ರಾಚೀನ ಭಾರತ ಒಂದು ಮೂಢ ಭಾರತ. ಅದು ನಿರಂತರವಾಗಿ ಯಾವುದೋ ಒಂದು ಯಜಮಾನ ಸಂಸ್ಕೃತಿಗೆ ಒಳಗಾಗಿ ಯಾರನ್ನೋ ತುಳಿದಂತಹ, ಯಾವುದೋ ಜ್ಞಾನ ಪರಂಪರೆಯನ್ನು ನಾಶ ಮಾಡಿದಂತಹ ಬರೀ ಏಕಮುಖಿಯಾದ ಶೋಷಣಾ ಸಮಾಜ ಆಗಿತ್ತು ಅನ್ನೊದು. ಆದರೆ ಹಾಗೇನೂ ಆಗಿರಲಿಲ್ಲ ಅನ್ನುವ ಹೊಸ ಅರಿವು ಈಗ ಉಂಟಾಗೋಕೆ ಶುರುವಾಯಿತು. ಆಧುನಿಕತೆ ತನ್ನ ಡೆಡ್ ಎಂಡ್ ಮುಟ್ಟಿದೆ ಅಂತ ನಮ್ಮ ಚಿಂತಕರಿಗೆ ಅನ್ನಿಸತೊಡಗಿ, ಅದರ ಪರಿಣಾಮವಾಗಿ ಆಧುನಿಕ ಕಾವ್ಯ ಮಿಮಾಂಸೆಯನ್ನು ಮೀರಿ ಯೋಚನೆ ಮಾಡೋದು ಅನಿವಾರ್ಯವಾಗಿದೆ ಅಂತ ಆಲೋಚನೆ ಮಾಡೋದಕ್ಕೆ ಶುರು ಮಾಡಿದ ಘಟ್ಟದಲ್ಲಿ ಈ ಸಾಂಪ್ರದಾಯಿಕ ಚಿಂತನಾ ಲಹರಿಗೆ ಒಂದು ತಿದ್ದುಪಡಿಯಾಯಿತು. ಏನು ಅಂದರೆ, ನಾವು ಪ್ರಾಚೀನ ಭಾರತವನ್ನು ಆಧುನಿಕತೆಯ ಹೆಸರಲ್ಲಿ ಸಾರಾ ಸಗಟಾಗಿ ತಿರಸ್ಕರಿಸುವುದಕ್ಕೆ ಆಗೋದಿಲ್ಲ. ಆದರೆ, ಪ್ರಾಚೀನ ಭಾರತವನ್ನು ತಿದ್ದಿದ, ಪ್ರಾಚೀನ ಭಾರತದೊಡನೆ ಬಹು ಆಯಾಮಗಳಲ್ಲಿ ಸಂವಾದ ಮಾಡಿ ಸೃಷ್ಟಿಯಾದಂತಹ ಮಧ್ಯಕಾಲದ ಭಾರತ ಒಂದಿದೆ. ವಸಹಾತುಶಾಹಿ ಪೂರ್ವದ ಇಮ್ಮಿಡಿಯೇಟ್ ಪಾಸ್ಟ್ ಅಂತ ಏನು ಕರೀತೀವಿ; ಬ್ರಿಟಿಷರು ಬರೋದಕ್ಕೆ ಮುಂಚೆ ಇದ್ದಂತಹ ಭಾರತವದು. ಪ್ರಾಚೀನ ಭಾರತದ ಎಲ್ಲಾ ಕೆಟ್ಟ ನಡಾವಳಿಗಳೊಂದಿಗೆ ಮುಖಾಮುಖಿಯಾಗಿ, ಸಂವಾದ ಮಾಡಿ, ಬಹು ಸಂಸ್ಕೃತಿಯ ಒಂದು ಸಮ್ಮಿಶ್ರಣವನ್ನು ಏನು ಅದು ಕೊಟ್ಟಿತ್ತು,

ಯಾವುದನ್ನು ನಾವು ಶ್ರಮಣ ಪರಂಪರೆ ಅಂತ ಗುರುತಿಸಬಹುದು; ಆತ್ಮವಾದಿ ವೈದಿಕ ಚಿಂತನೆ ಇತ್ತಲ್ಲ, ಅದಕ್ಕೆ ಪ್ರತಿಯಾಗಿ ಅನಾತ್ಮವಾದಿ ವೈದಿಕ ಚಿಂತನೆಯೊಂದು ಏನು ಬೌದ್ಧ, ಜೈನ ಮತ್ತು ಇನ್ನಿತರ ಅವುಗಳ ಉಪ ಉತ್ಪನ್ನ ತಾತ್ವಿಕ ಧಾರೆಗಳ ಹುಟ್ಟಿಗೆ ಕಾರಣವಾದ ಶ್ರಮಣ ಪರಂಪರೆಯ ರೂಪದಲ್ಲಿ ಆರಂಭವಾಯಿತು ಅದರ ಬಗ್ಗೆ ಆಸಕ್ತಿ ಶುರುವಾಯಿತು. ಈ ಪರಂಪರೆ ಕ್ರಮೇಣ ಅನೇಕ ಕಾರಣಗಳಿಂದಾಗಿ ವೈದಿಕೆ ಚಿಂತನೆಯ ರಾಜಕೀಯ ಆಕ್ರಮಣ, ಗಡಿಯಾಚೆಯಿಂದ ಆದಂತಹ ಅನಾಗರಿಕ ದುರಾಕ್ರಮಣ ಮತ್ತು ವಸಾಹತುಶಾಹಿ ಕಾರಣಗಳಿಂದಾಗಿ ಅದು 'ಸ್ಮಾಲ್ ಟ್ರಡಿಶನ್ಸ್' ಆಗಿ, ಅಂದರೆ ಸಣ್ಣ ಸಂಪ್ರದಾಯಗಳಾಗಿ ಏನು ವಿಘಟಿತವಾಯಿತು, ಆ 'ಸ್ಮಾಲ್ ಟ್ರಡಿಶನ್ಸ್' ಮತ್ತೆ ನಾವು ಈ ಆಧುನಿಕತೆಯ ವೈರುಧ್ಯಗಳನ್ನು ಎದುರಿಸುವ ಮಾರ್ಗಗಳನ್ನು ಹುಡುಕುತ್ತಿರುವ ಪ್ರಯತ್ನದಲ್ಲಿ ಮತ್ತೆ ಚೈತನ್ಯ ಪಡೆಯೋದಕ್ಕೆ ಸಾಧ್ಯ ಎನ್ನುವ ಚಿಂತನಾ ಲಹರಿ ಭಾರತದ ಆಧುನಿಕೋತ್ತರ ಚಿಂತನೆಯಲ್ಲಿ ಪ್ರಾಧಾನ್ಯ ಪಡೆಯಿತು. ಇಲ್ಲಿ ಜಾಗತಿಕ ಆಧುನಿಕೋತ್ತರ ಚಿಂತಕರಾದ ಡೆರಿಡಾ, ಸೈದ್, ಫ್ಯುಕೋ ಮತ್ತು ಗೂಗಿಗಳ ದಟ್ಟ ಪ್ರಭಾವವನ್ನು ಅಲ್ಲಗೆಳಯಲಾಗುವುದಿಲ್ಲ ಎಂಬುದು ಬೇರೆ ಮಾತು!

ಈ ಎಲ್ಲ ಹಿನ್ನೆಲೆಯಲ್ಲಿ ನಾವು ಮತ್ತೆ ಪುನರನ್ವೇಷಣೆ ಮಾಡಬೇಕಾಗಿರುವುದು, ಇಮ್ಮಿಡಿಯೇಟ್ ಪಾಸ್ಟ್‌ನ್ನು. ಅಂದರೆ ವಸಾಹತುಶಾಹಿ ಪೂರ್ವ ಸಮಾಜದ ಸಾಂಸ್ಕೃತಿಕ ಮಾದರಿ ಏನಿತ್ತಲ್ಲ, ಅದರ ಮೂಲಕ ನಾವು ಇವತ್ತು (ಸಾಂಸ್ಕೃತಿಕ)'ಮುಕ್ತಿ'ಯ ಮಾರ್ಗವನ್ನು ಕಂಡುಕೊಳ್ಳಬಹುದು ಅನ್ನೋ ಒಂದು ವಾದವನ್ನು ಡಿ.ಆರ್. ನಾಗರಾಜ್ ಮಂಡಿಸಿದರು. ಅದಕ್ಕೋಸ್ಕರ ದೇಸಿ ಚಿಂತನೆ, ಹಾಗೆಂದ ಕೂಡಲೇ ಅದು ಮತ್ತೆ ವೈದಿಕ ಚಿಂತನೆ ಆಗಿ ಬಿಟ್ಟೀತು ಅನ್ನುವ ಆತಂಕದಲ್ಲಿ 'ಸ್ಮಾಲ್ ಟ್ರೆಡಿಷನ್ಸ್'ನ ಧಾರೆ ಅಂತ ಏನು ಗುರುತಿಸ್ತೀವಿ, ಅದರ ಮಾದರಿಗಳನ್ನು ಹುಡುಕಿಕೊಳ್ಳಬೇಕಾದಂತಹ ಒಂದು ಪ್ರಮೇಯ ಸೃಷ್ಟಿ ಆಗಿದೆ ಅಂತ ಅವರು ಹೇಳಿದರು. ಅದಕ್ಕೋಸ್ಕರನೇ ಅವರು ನಾಗಾರ್ಜುನನ ಬಗ್ಗೆ, ದಾರಾ ಶಿಕೋ ಬಗ್ಗೆ, ಸೂಫಿ ಸಂತ ರೂಮಿ ಬಗ್ಗೆ, ವೇದ ಸಂಹಿತೆ, ಕುಮಾರಿಲ ಭಟ್ಟ ಕುರಿತಂತೆ ಹೀಗೆ ಅನೇಕ ಸ್ಮಾಲ್ ಟ್ರಡಿಷನ್ಸ್ ಮತ್ತು ಅವಕ್ಕೆ ಪೂರಕವಾದ ಚರ್ಚೆಗಳು ಅಂತ ಅವರೇನು ಗುರುತಿಸಿದರಲ್ಲಾ ಆ ಮಾದರಿಗಳು ಮತ್ತು ಅವುಗಳನ್ನು ವಿಮರ್ಶಾತ್ಮಕವಾಗಿ ನೋಡಲು ಅಗತ್ಯವಾದ ಇಂದಿನ ಅಧ್ಯಯನ ಶಿಸ್ತುಗಳ ಬಗ್ಗೆ– ಉದಾಹರಣೆಗೆ ಗಾಂಧಿ– ಅಂಬೇಡ್ಕರ್ ಸಂವಾದಗಳ ಬಗ್ಗೆ, ಆಶೀಸ್ ನಂದಿ, ಶಿವ ವಿಶ್ವನಾಥನ್, ಮಧು ಕಿಶ್ವರ್, ಕಾಪ್ರ ಇತ್ಯಾದಿ ಇತ್ತೀಚಿನ ಚಿಂತಕರ ಬಗ್ಗೆ– ಹೊಸ ಹೊಸ ಅಧ್ಯಯನವನ್ನು ಆರಂಭ ಮಾಡಿದರು, ಮಾಡಿಸಿದರು. ಇದನ್ನು ಒಂದು ರೀತಿಯಲ್ಲಿ ಸಾಂಸ್ಕೃತಿಕ ಚಿಂತನೆಗಳಿಗಿಂತ ಹೆಚ್ಚಾಗಿ ಸಾಂಸ್ಕೃತಿಕ ರಾಜಕೀಯ ಚಿಂತನೆ ಅಂತ ಕರೆಯಬಹುದು. ಇದನ್ನ ಇತ್ತೀಚಿನ ವರ್ಷಗಳಲ್ಲಿ ಅವೈದಿಕ ಚಿಂತನೆಯ ಸಂಘಟನೆಯ ಒಂದು ಪ್ರಯೋಗ ಅನ್ನೋ ಮಟ್ಟದಲ್ಲಿ ಸ್ಥೂಲವಾಗಿ ಹೇಳುವುದಕ್ಕೆ ಶುರು ಮಾಡಿದ್ದಾರೆ. ಈ ಅರ್ಥದಲ್ಲಿ ಇದು ಇಂದಿನ ಬಹು ಜನಪ್ರಿಯ 'ಸಾಮಾಜಿಕ ನ್ಯಾಯ'

ರಾಜಕಾರಣಕ್ಕೆ ಸುಲಭ ಸ್ಫೂರ್ತಿಯಾಗಿಯೂ ಪರಿಣಮಿಸಿ, ಕರ್ನಾಟಕದ ಮಟ್ಟಿಗಾದರೂ ತನ್ನ ಸರಳೀಕೃತ ರೂಪದಲ್ಲಿ ಸಾಂಸ್ಕೃತಿಕ ರಾಜಕಾರಣದ ಒಂದು ಬೌದ್ಧಿಕ ಪಠ್ಯವಾಗಿಯೂ ಕೆಲಸ ಮಾಡುತ್ತಿದೆ ಎಂದೂ ಇಲ್ಲಿ ಹೇಳಬಹುದು.

ನಾಗರಾಜರ ಸಂಸ್ಕೃತಿ ಚಿಂತನಾ ಮಾದರಿ ದೇಸಿ ಚಿಂತನೆಯ ಪುನರುಜ್ಜೀವನದ ಪ್ರಯತ್ನವೂ ಆದುದರಿಂದ ನಮ್ಮ ಜನಪದ ಸಾಹಿತ್ಯದಲ್ಲಿ, ಜಾನಪದ ಸ್ಮೃತಿಗಳಲ್ಲಿ ದೇಸಿ ಅನುಭವ ಪಾಕ ಏನಿದೆ ಅದನ್ನು ನಾವು ಅಧ್ಯಯನ ಮಾಡಬೇಕು, ಪುನರ್‌ನಿರೂಪಣೆಗೆ ಒಳಪಡಿಸಬೇಕು ಎನ್ನುವ ಒಂದು ಹೊಸ ಲಹರಿ ಆರಂಭವಾಗಿ ಜನಪದ ಸಾಹಿತ್ಯ ಮಾದರಿಗಳನ್ನು ಕುರಿತಂತಹ ಹೊಸ ಕುತೂಹಲ ಹೊಸ ಸಂಶೋಧನೆಗಳು ಕೂಡ ಆರಂಭವಾದವು. ಕಳೆದ ೧೦- ೧೫ ವರ್ಷಗಳಲ್ಲಿ ಜನಪದ ಸಾಹಿತ್ಯ ಅಧ್ಯಯನವು ಸಂಗ್ರಹವನ್ನು ದಾಟಿ, ವಿಶ್ಲೇಷಣೆಯನ್ನೂ ಮೀರಿ, ವಿಸ್ತರಣೆ ಮತ್ತು ವ್ಯಾಖ್ಯಾನ ಮಟ್ಟಕ್ಕೆ ಹೋಯಿತು. ಇದು ವೈವಿಧ್ಯಮಯ ಬುಡಕಟ್ಟು ಅಧ್ಯಯನಗಳಿಗೂ ದಾರಿ ಮಾಡಿಕೊಟ್ಟಿತು. ಮಂಟೆಸ್ವಾಮಿ ಕಾವ್ಯ ಅಥವಾ ಮಲೆ ಮಹದೇಶ್ವರನ ಕಾವ್ಯ, ಜುಂಜಪ್ಪನ ಕಾವ್ಯ, ಜನಪದ ಮಹಾಭಾರತ ಇತ್ಯಾದಿ ನಮ್ಮ ಜನಪದ ಮಹಾಕಾವ್ಯಗಳನ್ನು ಸಾಂಸ್ಕೃತಿಕ ಆಕರಗಳನ್ನಾಗಿ, ಪರ್ಯಾಯ ಬದುಕಿನ ಮಾದರಿಗಳ ಮಾತೃಕೆಗಳ ಗಣಿಗಳಂತೆ ಪರಿಗಣಿಸಿ ಅಧ್ಯಯನಗಳು ನಡೆದವು. ಈ ಕಾವ್ಯಗಳ ಸಂಪಾದನೆ- ಪುನರ್‌ಸಂಪಾದನೆಗಳು ನಡೆದವು. 'ಮುಖಾ ಮುಖಿ' ಶೀರ್ಷಿಕೆಯಡಿ ಅವುಗಳನ್ನು ವರ್ತಮಾನದಲ್ಲಿ ಪ್ರಸ್ತುತಗೊಳಿಸಿಕೊಳ್ಳುವ ಸಾಧ್ಯತೆಗಳನ್ನು ಕುರಿತ ಚರ್ಚೆಗಳೂ ನಡೆದವು. ನಾಗರಾಜ್ ಒಂದು ಕಡೆ ಹೇಳುತ್ತಾರೆ, ಜುಂಜಪ್ಪನ ಕಾವ್ಯವನ್ನೂ, ಪಂಪನ ಆದಿ ಪುರಾಣವನ್ನೂ ಒಟ್ಟಿಗೆ ಇಟ್ಟು ಯಾಕೆ ಯೋಚನೆ ಮಾಡಬಾರದು ಅಂತಾ. ಹೀಗೆಲ್ಲ ಮಾತನಾಡೋದು ಸುಲಭ. ಆದರೆ ಹೀಗೆ ಬರೀ ಮಾತಾಡಿ ಪ್ರಯೋಜನವಿಲ್ಲ. ಯಾಕೆಂದರೆ ಇದುವರೆಗೂ ಯಾರೂ ಇಂತಹ ಕೆಲಸವನ್ನು ಮಾಡಿಲ್ಲ. ಹೀಗೇ ಮಂಟೆಸ್ವಾಮಿ ಕಾವ್ಯವನ್ನು ಮತ್ತು ವಚನ ಸಾಹಿತ್ಯವನ್ನು ಜೊತೆಗೆ ಇಟ್ಟು ನಾವೇನಾದರೂ ಹೊಸ ಹೊಳಹು ಪಡೆಯಬಹುದೇ ಅಂತ ಬೆರಗಿನಿಂದ ಪ್ರಶ್ನೆ ಕೇಳಬಹುದು. ಆದರೆ ಇಂತಹ ಬರೀ ಊಹಾ ಪ್ರಶ್ನೆಗಳೊಂದಿಗೇ, ರೋಮಾಂಚನಕಾರಿ ಉಹಾ ಪ್ರಪಂಚದೊಂದಿಗೇ ಮತ್ತು ಬಹುಶಃ ಆ ಕಾರಣದಿಂದಾಗಿಯೇ ಈ ಅಧ್ಯಯನಗಳು ಈಗ ಸದ್ಯಕ್ಕಾದರೂ ಒಂದು ಮುಗಿತಾಯಕ್ಕೆ ಬಂದಂತೆ ನನಗೆ ಕಾಣ್ತಿದೆ.

ಏಕೆಂದರೆ ನಾನು ಹಂಪಿ ವಿಶ್ವವಿದ್ಯಾನಿಲಯದ ಈ ಕಾವ್ಯಗಳ ಸಂಪಾದನೆಯ, 'ಮುಖಾಮುಖಿ' ಸರಣಿಯ ಮತ್ತು ಬುಡಕಟ್ಟು ಅಧ್ಯಯನಗಳ ಪುಸ್ತಕಗಳನ್ನು ಗಮನಿಸಿದ್ದೇನೆ. ಜೊತೆಗೆ ಇತ್ತೀಚೆಗೆ ಹಿರಿಯ ವಿದ್ವಾಂಸ ಸಿ.ಎನ್. ರಾಮಚಂದ್ರನ್ ಅವರು ಈ ಎಲ್ಲಾ ಮಹಾಕಾವ್ಯಗಳನ್ನು ಕುರಿತು ವಿಶ್ಲೇಷಣೆ ಮಾಡಿರುವಂತಹ ಪುಸ್ತಕವನ್ನು ಕೂಡಾ ('ಹೊಸ ಮಡಿಯ ಮೇಲೆ ಚದುರಂಗ': ಸ್ವಪ್ನ ಪಬ್ಲಿಕೇಷನ್ಸ್: ೨೦೦೯) ಕುತೂಹಲದಿಂದ ಗಮನಿಸಿದ್ದೇನೆ. ಹಾಗೇ ಸೂಫಿ, ನಾಥ ಪರಂಪರೆ ಇತ್ಯಾದಿ ಕಿರು ಧಾರ್ಮಿಕ- ಸಾಂಸ್ಕೃತಿಕ ಧಾರೆಗಳನ್ನು ಅಧ್ಯಯನ ಮಾಡಿರುವ ಪುಸ್ತಕಗಳನ್ನೂ. ಆದರೆ ಅವನ್ನು ನೋಡಿದಾಗ ಜನಪದ ಕಾವ್ಯವನ್ನು

ಅಥವಾ ಬುಡಕಟ್ಟು ಬದುಕಿನ ಮಾದರಿಗಳನ್ನು ಅಥವಾ ಈ ಧಾರ್ಮಿಕ- ಸಾಂಸ್ಕೃತಿಕ ಧಾರೆಗಳನ್ನು ನಾವು ರೂಪಿಸಬಯಸುತ್ತಿರುವುದು ನಮ್ಮ ದೇಸಿ ಚಿಂತನೆಗೆ ಮೂಲ ಆಕರಗಳನ್ನಾಗಿ ಅಥವಾ ಸಾಂಸ್ಕೃತಿಕ ಮಾತೃಕೆಗಳನ್ನಾಗಿ ಬಳಸಿಕೊಳ್ಳಬಹುದಾ ಅನ್ನೋ ಪ್ರಶ್ನೆಗೆ ಯಾವ ಉತ್ತರವೂ, ಅದರ ಸೂಚನೆಯೂ ನನಗೆ ಸಿಗಲಿಲ್ಲ. ಈ ಅಧ್ಯಯನಗಳಲ್ಲಿ ಮಾಹಿತಿ ಇದೆ, ವಿಶ್ಲೇಷಣೆ ಇದೆ, ವ್ಯಾಖ್ಯಾನವೂ ಇದೆ. ಆದರೆ ಇದೆಲ್ಲ ಕೇವಲ ಅಧ್ಯಯನಕ್ಕಾಗಿ ಅಧ್ಯಯನವೋ ಅಥವಾ ಯಾವ ಉದ್ದೇಶದಿಂದ ಇವು ಆರಂಭವಾದವೋ ಆ ಅನ್ವಯ ಸಾಧ್ಯತೆಗಳ ಪರಿಶೀಲನೆಯ ಸಾಂಸ್ಕೃತಿಕ ಉದ್ದೇಶವೂ ಇದೆಯೋ ಎಂಬ ಪ್ರಶ್ನೆಗೆ ಈ ಪುಸ್ತಕಗಳಲ್ಲಂತೂ ಉತ್ತರ ಕಾಣುವುದಿಲ್ಲ. ಇದೆಲ್ಲವೂ 'ಸಾಮಾಜಿಕ ನ್ಯಾಯ'ದ ಹೆಸರಲ್ಲಿ ನಡೆಯುತ್ತಿರುವ ರಾಜಕೀಯ ಬಡಿವಾರ ಮತ್ತು ಲಾಭಕೋರತನಕ್ಕಷ್ಟೇ ಸದ್ಯಕ್ಕೆ ಬಳಸಲ್ಪಡುತ್ತಿದೆ.

ಅಲ್ಲದೆ, ಒಟ್ಟಾರೆ ಹಂಪಿ ವಿಶ್ವವಿದ್ಯಾಲಯದ ಸಾಂಸ್ಕೃತಿಕ ಅಧ್ಯಯನದ ಪುಸ್ತಕಗಳ ವಿಶ್ವಾಸಾರ್ಹತೆಯ ಬಗ್ಗೆಯೂ ದೊಡ್ಡ ಪ್ರಶ್ನೆ ಇದೆ. ಈ ಪುಸ್ತಕಗಳ ಲೇಖಕರ ಹೊರತಾಗಿ ಇವುಗಳ ವಿಶ್ವಾಸಾರ್ಹತೆಯನ್ನು ದೃಢಪಡಿಸುವವರು ಯಾರು? ಇವುಗಳಲ್ಲಿ ಬಹುಪಾಲು ಯಾವುದೋ ಯೋಜನೆಯಡಿಯಲ್ಲಿ ಬಿಡಿ ಬಿಡಿಯಾಗಿ ಬರೆಯಲ್ಪಟ್ಟ ಪುಸ್ತಕಗಳಾಗಿದ್ದು, ಯಾವುದೇ ಸಂಪಾದಕ ಮಂಡಳಿಯ ಅಥವಾ ಈಗಾಗಲೇ ಈ ಕ್ಷೇತ್ರಗಳಲ್ಲಿ ತಮ್ಮ ವಿದ್ವತ್ತಿನಿಂದ ಸಾರ್ವತ್ರಿಕ ಮಾನ್ಯತೆ ಪಡೆದ ನುರಿತ ವಿದ್ವಾಂಸರ (ಸಂಪಾದಕೀಯ)ಮೇಲ್ವಿಚಾರಣೆಯಲ್ಲಿ ರಚಿತವಾದ ಪುಸ್ತಕಗಳಲ್ಲ. ಜೊತೆಗೆ ಈ ಪುಸ್ತಕಗಳು ಆಯಾ ಲೇಖಕರು ತಂತಮ್ಮ ಸಾಮರ್ಥ್ಯಕ್ಕನುಗುಣವಾಗಿ ಕಟ್ಟಿಕೊಂಡಿರುವ ಚೇಲಾಗಳ ಗುಂಪಿನ ಹೊರತಾಗಿ, ವಿದ್ವದ್ವಲಯದಲ್ಲಿ ವಿಮರ್ಶೆಗಾಗಲೀ, ಚರ್ಚೆಗಳಿಗಾಗಲೀ ಒಳಗಾಗುತ್ತಿಲ್ಲ. ಈ ಮಾತನ್ನು ಇಲ್ಲಿ ಏಕೆ ಹೇಳಬೇಕಾಯಿತೆಂದರೆ, ಈ ಕೆಲವು ಪುಸ್ತಕಗಳ ಲೇಖಕರು ಕನ್ನಡ ಅಧ್ಯಯನ ಲೋಕಕ್ಕೆ ಸಂಪೂರ್ಣ ಅಪರಿಚಿತರಾಗಿದ್ದಾರಷ್ಟೇ ಅಲ್ಲ, ಈ ಪುಸ್ತಕಗಳಲ್ಲಿನ ಚರ್ಚೆಗಳು ಮತ್ತು ಇವುಗಳಲ್ಲಿ ಕೆಲವಕ್ಕೆ ಅಲ್ಲಿನವರೇ ಬರೆದ ಮುನ್ನುಡಿಗಳು ನನ್ನಂತಹ ಸಾಮಾನ್ಯ ಓದುಗನಿಗೇ ಗಾಬರಿ ಹುಟ್ಟಿಸುವಷ್ಟು ಅಪ್ರಬುದ್ಧವಾಗಿರುವುದರ ಜೊತೆಗೆ ಸರ್ವಜ್ಞಗರ್ವವನ್ನೂ ಪ್ರದರ್ಶಿಸುತ್ತವೆ.

ಒಟ್ಟಿನಲ್ಲಿ ಹೇಳುವುದಾದರೆ, ಈ ಅಧ್ಯಯನಗಳು ಆ ವಸಾಹತುಶಾಹಿ ಮನಸ್ಸಂಕೀರ್ಣದಿಂದ ನಾವು ಬಿಡುಗಡೆಗೊಳ್ಳಬೇಕಾದರೆ ನಮ್ಮ ಆಲೋಚನಾ ಲಹರಿಗೆ ಏನಾದರೂ ಪರಿಣಾಮಕಾರಿ ಕೊಡುಗೆ ಸಲ್ಲಿಸುತ್ತವಾ ಅಂತ ಯೋಚನೆ ಮಾಡಿದಾಗ ನಮಗೆ ತುಂಬ ಪ್ರಸ್ತುತವಾದಂತಹ ಅಂಶಗಳನ್ನು ಇವು ಈವರೆಗೆ ಕೊಟ್ಟಿಲ್ಲ ಎಂದೇ ನನಗನ್ನಿಸುತ್ತದೆ. ಹೆಚ್ಚೆಂದರೆ ಜನ ಸಾಮಾನ್ಯರಲ್ಲಿ ನಮ್ಮ ಪರಂಪರೆ ಕುರಿತಂತೆ ಇದ್ದ ಸರಳೀಕೃತ ಕಲ್ಪನೆಯನ್ನು ಇವು ಬದಲಿಸಿದೆ ಎಂದು ಹೇಳಬಹುದು. ಈ ಅರ್ಥದಲ್ಲಿ ಇದು ಒಂದು ಮುಂದಡಿಯೇ ಇರಬಹುದು. ಆದರೆ ಈ ಅಧ್ಯಯನಗಳು ಅನ್ವಯ ಸಾಧ್ಯತೆಗಳನ್ನು ಪ್ರದರ್ಶಿಸಲಾಗದಿರುವುದಕ್ಕೆ ನನಗೆ ಒಂದು ಕಾರಣ ಹೊಳೆಯುತ್ತದೆ. ನಟರಾಜ್ ಬೂದಾಳು ಇಲ್ಲಿರುವುದರಿಂದ ನಾನು

ಈ ಮಾತನ್ನು ಹೇಳುತ್ತಿದ್ದೇನೆ. ನನ್ನನ್ನು ಮೀರಿದ ಮಾತು ಇದಿರಬಹುದು. ಡಿ.ಆರ್. ನಾಗರಾಜ್ ಈ ಶ್ರಮಣ ಪರಂಪರೆಯನ್ನು ಕುರಿತು ಬಹಳ ಹೇಳುತ್ತಾರೆ. ಈ ಶ್ರಮಣ ಪರಂಪರೆಯೇ ನಮ್ಮ ವಿಸ್ಮೃತಿಯ ಕಾರಣದಿಂದಾಗಿ ನಮಗೆ ಕಾಣದೇ ಹೋಗಿದ್ದ ಪರ್ಯಾಯ ಪರಂಪರೆಗೆ ಮತ್ತು ಅದನ್ನು ಮತ್ತೆ ಕಂಡುಕೊಳ್ಳುವ ನಮ್ಮ ಪ್ರಯತಕ್ಕೆ ಮುಖ್ಯ ಮೂಲ ಆಕರ ಆಗಬಹುದು ಅನ್ನೋ ಮಾತನ್ನೂ ಅವರು ಹೇಳ್ತಾರೆ. ಈ ದಿಸೆಯಲ್ಲಿ ಅವರು ಸಾಕಷ್ಟು ಕೆಲಸ ಕೂಡ ಮಾಡಿದರು. ಆದರೆ ಈ ಶ್ರಮಣ ಪರಂಪರೆಯ ತಾತ್ವಿಕ ಬೆನ್ನೆಲುಬು ಎಂದು ಹೇಳಬಹುದಾದ ಅನಾತ್ಮವಾದದ ಬಗೆಗೆ, ಅದರ ತಿರುಳಿನ ಬಗ್ಗೆ, ಅದರೊಳಗಿನ ಸೂಕ್ಷ್ಮ ತಾತ್ವಿಕ ಸಂಕೀರ್ಣತೆಗಳ ಬಗ್ಗೆ ಈ ಸಂದರ್ಭದಲ್ಲಿ ಸಾಕಷ್ಟು ಚರ್ಚೆ, ಪರಿಶೀಲನೆ ಆಗಿಲ್ಲ ಎಂದೆನ್ನಿಸುತ್ತದೆ.

ಇದರಿಂದಾಗಿಯೇ, ಉದಾಹರಣೆಗೆ ಕನ್ನಡ ಸಾಹಿತ್ಯವನ್ನು ವೈದಿಕ ಮತ್ತು ಜೈನ ಚಿಂತನೆಗಳೇ ಕಟ್ಟುತ್ತಾ ಬಂದಿವೆ ಎಂಬ ನಂಬಿಕೆ ಬೇರೂರುತ್ತಾ ಬಂದಿದೆ. ನಾಗರಾಜರ ಸಂಸ್ಕೃತಿ ವಿಮರ್ಶೆ ಕೂಡಾ ಇದನ್ನು ನಿರ್ಣಾಯಕವಾಗಿ ಭಂಗಿಸಲು ಸಾಧ್ಯವಾಗಿಲ್ಲ. ಅದೇನೇ ಇರಲಿ, ಈ ಜನಪ್ರಿಯ ನಂಬಿಕೆಗೆ ಪ್ರತಿಯಾಗಿ ನನಗೆ ಅನ್ನಿಸುತ್ತಿರುವುದು, ಇಲ್ಲ; ಕನ್ನಡ ಸಾಹಿತ್ಯವನ್ನು ಮುನ್ನಡೆಸಿಕೊಂಡು ಬಂದಿರುವುದು ಪ್ರಧಾನವಾಗಿ ಬೌದ್ಧ ಚಿಂತನೆಯೇ– ವೈದಿಕ; ಮತ್ತು ಜೈನ ಚಿಂತನೆ ಸೇರಿದಂತೆ ಎಲ್ಲ ಇತರೆ ಅವೈದಿಕ ಚಿಂತನಾ ಧಾರೆ– ಕಿರುಧಾರೆಗಳನ್ನೂ ಅದು ಪ್ರಭಾವಿಸುತ್ತಾ, ಅದರ ಪರಿಣಾಮವಾಗಿ ರೂಪಿಸುತ್ತಾ ಬಂದಿರುವ ವಿಕಾಸಶೀಲ ಮಾದರಿಗಳ ಮೂಲಕ ಎಂದು. ಪರ್ಯಾಯ ಪರಂಪರೆಯನ್ನು ಹುಡುಕಿಕೊಳ್ಳುವ ಅಥವಾ ರೂಪಿಸಿಕೊಳ್ಳುವ ಅವಸರದಲ್ಲಿ; ಚಿಂತನೆ ಎನ್ನಿ, ಪರಿಕಲ್ಪನೆ ಎನ್ನಿ, ಅವುಗಳಿಂದ ರೂಪಿತಗೊಳ್ಳುತ್ತ ಹೋಗುವ ಪರಂಪರೆಯೆಂಬುದು ಕಾಲಾನುಕಾಲದಲ್ಲಿ ಮೇಲುಗೈ ಪಡೆಯುವ ಸಾಂಸ್ಕೃತಿಕ ರಾಜಕಾರಣಕ್ಕನುಗುಣವಾಗಿ ಒತ್ತುಗಳನ್ನೂ, ವ್ಯಾಖ್ಯಾನ– ಪುರ್ನವ್ಯಾಖ್ಯಾನಗಳನ್ನು ಪಡೆಯುತ್ತಾ ಹೋಗುವ ಒಂದು ಸಂಕೀರ್ಣ ಪ್ರಕ್ರಿಯೆ ಎಂಬ ಮೂಲ ಅರಿವೇ ಕಾಣೆಯಾಗಿರುವುದೇ ಇದಕ್ಕೆ– ಬೌದ್ಧ ಪ್ರಭಾವವನ್ನು ಗುರುತಿಸದೇ ಹೋಗಿರುವುದಕ್ಕೆ– ಕಾರಣವಾಗಿದೆಯೆಂದು ನನಗನ್ನಿಸುತ್ತದೆ.

ಇತ್ತೀಚಿನ ಉದಾಹರಣೆಯನ್ನೇ ನೀಡುವುದಾರೆ, ಕುವೆಂಪು ಸಾಹಿತ್ಯದಲ್ಲಿ ಸಮನ್ವಯ ರೂಪದಲ್ಲಿ, ಆನಂತರ ತೇಜಸ್ವಿ ಮತ್ತವರ ಶೂದ್ರವಾದಿ ಸಹವರ್ತಿ ಲೇಖಕರ ಬರಹಗಳಲ್ಲಿ ಸ್ಪಷ್ಟ ರೂಪಗಳಲ್ಲಿ ಕಾಣಿಸುವ ಲೋಕದೃಷ್ಟಿಯ ಹಿಂದೆ ಇರುವುದು ಬೌದ್ಧ ಮೂಲವಾದ ಪ್ರತೀತ್ಯ ಸಮುತ್ಪಾದ ತತ್ವವೇ. ಕುವೆಂಪು ಪ್ರತೀತ್ಯ ಸಮುತ್ಪಾದ ಎಂಬ ಬೌದ್ಧ ಪರಿಕಲ್ಪನೆಯನ್ನು ಕುರಿತು ಓದಿದ್ದರೋ ಇಲ್ಲವೋ ಗೊತ್ತಿಲ್ಲ. ಆದರೆ ಅವರು 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಆದಿಯಲ್ಲಿ ತಮ್ಮ ಆತ್ಯಂತಿಕ ಲೋಕದರ್ಶನದ ರೂಪದಲ್ಲಿ ದಾಖಲಿಸಿರುವ, 'ಇಲ್ಲಿ ಯಾವುದೂ ಮುಖ್ಯವಲ್ಲ, ಯಾವುದೂ ಅಮುಖ್ಯವಲ್ಲ.... ಯಾವುದೂ ಅಲ್ಲ ವ್ಯರ್ಥ, ನೀರೆಲ್ಲವೂ ತೀರ್ಥ...' ಇತ್ಯಾದಿ ಮಾತುಗಳು ಈ ಪ್ರತೀತ್ಯ ಸಮುತ್ಪಾದ ಪರಿಕಲ್ಪನೆ ಏನಿದೆ, ಅಂದರೆ ಈ ಜಗತ್ತಿನಲ್ಲಿ ಜಡ– ಚೇತನಗಳೂ ಸೇರಿದಂತೆ ಯಾವುದಕ್ಕೂ ಪ್ರತ್ಯೇಕ ಅಸ್ತಿತ್ವವಿಲ್ಲ;

ಪ್ರತಿಯೊಂದೂ ಇನ್ನೊಂದರ ಸಂಬಂಧದಲ್ಲಿ, ಸಮತೋಲನದಲ್ಲಿ ಇದ್ದು ತನ್ನ ಅಸ್ತಿತ್ವದ ಅರ್ಥ ಪಡೆದುಕೊಂಡಿದೆ ಎಂಬ ಅನಾತ್ಮವಾದಿ ಸತ್ಯದ ಅನಾವರಣದ ಅತ್ಯದ್ಭುತ ಅಭಿವ್ಯಕ್ತಿಯೇ ಆಗಿದೆ. ಇದನ್ನು ಸುಲಭವಾಗಿ ವೈದಿಕ ವಿರೋಧಿ ತತ್ವ ಎಂದು ಹೇಳಿಬಿಡಬಹುದು, ವೈದಿಕ ಚಿಂತನೆ ಆತ್ಮ ಇದೆ ಎಂದೂ ಬೌದ್ಧ ಚಿಂತನೆ ಆತ್ಮ ಇಲ್ಲವೆಂತಲೂ ಹೇಳುತ್ತದೆ ಎಂಬ ಪಾರಿಭಾಷಿಕ ನಿರೂಪಣೆಗಳ ಆಧಾರದ ಮೇಲೆ. ಆದರೆ ವೈದಿಕ ಮತ್ತು ಬೌದ್ಧ ಚಿಂತನೆಗಳು ಕಾಲಕ್ರಮದಲ್ಲಿ ಮುಖಾಮುಖಿಯಾಗುತ್ತಾ ಪಡೆದುಕೊಂಡ ವಿವಿಧ ರೂಪಗಳು ಮತ್ತು ಆವೃತ್ತಿಗಳನ್ನು ಗಮನಿಸಿದರೆ ಮತ್ತು ಅವನ್ನೇ ಇಂದು ನಾವು ಸ್ಥೂಲಾರ್ಥದಲ್ಲಿ ವಿವಿಧ ವೈದಿಕ ಮತ್ತು ಅವೈದಿಕ ಧಾರೆಗಳೆಂದು ಗುರುತಿಸುತ್ತಿದ್ದೇವೆ ಎಂಬುದನ್ನು ಅರಿಯುವಂತಾದರೆ ಈಗ ನಾವು ನಡೆಸುತ್ತಿರುವ ವೈದಿಕ- ಅವೈದಿಕ ಎಂಬ ಕಲ್ಪನೆಗಳನ್ನು ಆಧರಿಸಿದ ವಾದಗಳು ಸದ್ಯದ ಸಾಮಾಜಿಕ ನ್ಯಾಯ ರಾಜಕಾರಣದ ಲಾಭೋದ್ದೇಶಗಳ ಉತ್ಪತ್ತಿಗಳೇ ಹೊರತು, ಅವುಗಳ ಮೂಲ ತಾತ್ವಿಕತೆಗಳಂತೆ ಪರಸ್ಪರ ವಿಮುಖವಾದವುಗಳಲ್ಲ; ಬದಲಿಗೆ ಅವೆರಡೂ ಸೇರಿ, ಹಾಸುಹೊಕ್ಕಾಗಿ ನಮ್ಮ ಪರಂಪರೆಯನ್ನು ರೂಪಿಸುತ್ತಾ ಬಂದಿವೆ ಎಂಬುದು ಗೊತ್ತಾಗುತ್ತದೆ. ಇಂದಿನ ಅಪಾಯವಿರುವುದು ಈ ಹಾಸುಹೊಕ್ಕಾದ ಅನುಸಂಧಾನವನ್ನು, ಅದರ ಪ್ರಗತಿಪರ ದ್ವಂದ್ವಾತ್ಮಕ ಮುಂದುವರಿಕೆಯನ್ನು ತಡೆಯುವ ಪಟ್ಟಭದ್ರ ಹಿತಾಸಕ್ತಿಗಳ ಅಪ್ಪಟ ವೈದಿಕ ರಾಜಕಾರಣ ಮೇಲುಗೈ ಪಡೆಯಲು ಯತ್ನಿಸುತ್ತಿರುವುದರಲ್ಲಿ. ಇಂತಹ ಸಂದರ್ಭದಲ್ಲಿ ತಮ್ಮನ್ನು ಅವೈದಿಕ ಸಾಂಸ್ಕೃತಿಕ ರಾಜಕಾರಣದ ವಕ್ತಾರರು ಎಂದು ಗುರುತಿಸಿಕೊಳ್ಳುವ ಲೇಖಕರು ಮತ್ತು ಚಿಂತಕರು ತಮ್ಮ ಭಾಷೆ, ತರ್ಕ ಮತ್ತು ವಾದಗಳ ಲಯ ಮತ್ತು ಶೈಲಿಗಳನ್ನು ಬದಲಿಸಿಕೊಳ್ಳುವ ಮೂಲಕ ಮಾತ್ರ ಈ ವೈದಿಕ ಪಟ್ಟಭದ್ರ ಹಿತಾಸಕ್ತಿಗಳ ರಾಜಕಾರಣವನ್ನು ಎದುರಿಸುವ ಶಕ್ತಿಯನ್ನು ಗಳಿಸಿಕೊಳ್ಳಬಲ್ಲರು. ಅವರು ಶ್ರಮಣ ಪರಂಪರೆಯನ್ನು ಅದರ ಸೃಜನಶೀಲ ಅನ್ವೇಷಕ ಪ್ರವೃತ್ತಿಯ ನೆಲೆಯಲ್ಲಿ ಪುನಾರಚಿಸಿಕೊಳ್ಳುವ ಮೂಲಕ ಮಾತ್ರ ಇದನ್ನು ಸಾಧಿಸಿಕೊಳ್ಳಬಲ್ಲರು. ಮತ್ತೆ ಅದಕ್ಕೆ ಐತಿಹಾಸಿಕವಾಗಿ ಹಾಗೇ ಹಿಂದಿರುಗುವ ಮೂಲಕ ಅಲ್ಲ.

ಡಿ.ಆರ್. ನಾಗರಾಜ ಅವರ ಚಿಂತನಾ ಲಹರಿಗೆ ನಾವು ಹೀಗೆ ವಿಸ್ತರಣೆ ಒದಗಿಸುವ ಮೂಲಕ ಮಾತ್ರ ಅವರ ಸಂಸ್ಕೃತಿ ವಿಮರ್ಶೆಯ ಪ್ರಸ್ಥಾನಕ್ಕೆ ನಾವು ವಾರಸುದಾರರಾಗಬಲ್ಲೆವು. ಈ ದಿಸೆಯಲ್ಲಿ- ಎಲ್ಲವನ್ನೂ ದ್ವಿದಳವಾಗಿ ನೋಡುವುದರ ವಿರುದ್ಧ- ಡಿ.ಆರ್. ಅವರೇ ತಮ್ಮ ಅಪೂರ್ಣ ಅಧ್ಯಯನಗಳಲ್ಲಿ ಕೆಲವು ಸೂಚನೆಗಳನ್ನು ನೀಡಿದ್ದರು. ಆದರೆ ಅವರು ಭೌಗೋಳಿಕವಾಗಿಯೂ ವಿಶ್ವಸ್ಥರಾಗದೆ ಸ್ಥಳೀಯರಾಗಿ ಉಳಿದು ಕನ್ನಡ ಸಾಹಿತ್ಯ ಪರಂಪರೆಯನ್ನು ಇನ್ನಷ್ಟು ವ್ಯವಧಾನದಲ್ಲಿ ಮತ್ತು ವಿವರವಾಗಿ ನೋಡಲು ಸಾಧ್ಯವಾಗಿದ್ದರೆ, ಇಡೀ ಕನ್ನಡ ಸಾಹಿತ್ಯವನ್ನು ಅಥವಾ ಅದರ ತಾತ್ವಿಕತೆಯನ್ನು ಅಥವಾ ಅದರ ಲೋಕದೃಷ್ಟಿಯನ್ನು ಕಟ್ಟಿರುವುದು- ಅದು ಜೈನ ಅಥವಾ ವೈದಿಕ ಅಥವಾ ವೀರಶೈವ ಅಥವಾ ಭಾಗವತ ಅಥವಾ ಜನಪದ ಅಥವಾ ಆಧುನಿಕ ಎಂಬ ಯಾವುದೇ ಹೆಸರಿನಲ್ಲಿರಲಿ- ಬದಲಾಗದ ಅಮೂರ್ತ ಮತ್ತು ಸದಾ ಬದಲಾಗುತ್ತಿರುವ ಮೂರ್ತಗಳ ನಡುವೆ ಸೆಣೆಸಾಡುತ್ತಾ

ನಿರಂತರ ತಾತ್ವಿಕ ಅನ್ವೇಷಣೆಯಲ್ಲಿ ತೊಡಗಿಕೊಂಡು ಇಂದೂ ಅಸ್ತಿತ್ವದಲ್ಲಿರುವ, ವೇದಗಳನ್ನು ಅಪೌರುಷೇಯವೆಂದಾಗಲೀ, ಸ್ವಯಂಸಂಪೂರ್ಣವೆಂದಾಗಲೀ ಒಪ್ಪದ ಶ್ರಮಣ ಪರಂಪರೆಯು ತನ್ನ ಆತ್ಯಂತಿಕ ದರ್ಶನವಾದ ಪ್ರತೀತ್ಯ ಸಮುತ್ಪಾದ ತತ್ವವನ್ನು ಹೊಸ ಹೊಸ ರೂಪಗಳಲ್ಲಿ ಕಂಡರಿಸುವ ಪ್ರಯೋಗಶೀಲತೆಯೇ ಎಂಬುದು ಅರಿವಾಗುತ್ತಿತ್ತೇನೋ! ಈ ಅರ್ಥದಲ್ಲಿ ಪಂಪನಿಂದ ಕುವೆಂಪುವರೆಗೆ ಕನ್ನಡದ ಎಲ್ಲ ಶ್ರೇಷ್ಠ ಲೇಖಕರೂ ಶ್ರಮಣರೇ. ಬೇಂದ್ರೆ, ಮಾಸ್ತಿ, ಕಾರಂತ, ಪುತಿನ, ಲಂಕೇಶ್, ತೇಜಸ್ವಿ, ಅನಂತಮೂರ್ತಿ ಎಲ್ಲರೂ; ಆದರೆ ಬೇರೆ ಬೇರೆ ಶಕ್ತಿ ಸಾಮರ್ಥ್ಯಗಳಲ್ಲಿ ಮತ್ತು ದೌರ್ಬಲ್ಯಗಳಲ್ಲಿ. ಹಾಗೆಂದೇ ಆಧುನಿಕ ಕನ್ನಡದ ಶ್ರೇಷ್ಠ ಅಭಿವ್ಯಕ್ತಿ 'ಮಲೆಗಳಲ್ಲಿ ಮದುಮಗಳು' ಎಂದಾಗಿರುವುದು!

ಮತ್ತೆ ನನ್ನ ಪ್ರಬಂಧದ ವಿಷಯಕ್ಕೇ ಹಿಂದಿರುಗುವುದಾದರೆ, ನಾನು ಮೊದಲೇ ಹೇಳಿದಂತೆ ಕನ್ನಡ ವಿಮರ್ಶೆ ಈಗ ತನ್ನನ್ನು ಪ್ರಮುಖವಾಗಿ ತೊಡಗಿಸಿಕೊಂಡಿರುವುದು ತನ್ನ ಚರಿತ್ರೆಯೊಂದಿಗೆ; ನಿಕಟಪೂರ್ವ ಚರಿತ್ರೆಯೂ ಸೇರಿದಂತೆ. ಇದಕ್ಕೆ ಕಾರಣ, ಅದು ಆಧುನಿಕತೆಯ ದಟ್ಟ ಪ್ರಭಾವದಲ್ಲಿ ಈ ಮೇಲೆ ನಿರೂಪಿಸಿದಂತಹ– ಶ್ರಮಣ ಪರಂಪರೆಯ– ತನ್ನ ಮೂಲ ಆಶಯ ಮತ್ತು ಆಕೃತಿಯನ್ನು ಕಳೆದುಕೊಳ್ಳುವ ಆತಂಕದಲ್ಲಿದ್ದಂತಿರುವುದು. ಈ ದೃಷ್ಟಿಯಿಂದ ಸಮಕಾಲೀನ ಕೃತಿಗಳು ಅದಕ್ಕೆ ನಂಬಿಕೆ ಹುಟ್ಟಿಸಿದಂತಿಲ್ಲ. ಅದು ಈ ಯುಗದ ಸಾಹಿತ್ಯ ಶಿಖರದಂತಿರುವ ಕುವೆಂಪು ಅವರೊಂದಿಗೆ ನಡೆಸಿರುವ ನಿರಂತರ ಸಂವಾದವನ್ನೇ ಗಮನಿಸಿರಿ. ಒಮ್ಮೆ ಕೆ.ವಿ.ನಾರಾಯಣರು ಹೇಳಿದಂತೆ, ಕುವೆಂಪು ನಮ್ಮ ಕಣ್ಣಲ್ಲಿ ಬೆಳೆದದ್ದು ಅವರ ನಿಧನಾನಂತರವೇ; ಅವರ ಸಾವು ಸೃಷ್ಟಿಸಿದ ಶೂನ್ಯಾವರಣದಲ್ಲಿ! ಕನ್ನಡದ ಈ ಶ್ರಮಣ ಶ್ರೇಷ್ಠನನ್ನು ನಮ್ಮ ನಡುವೆ ಆಧುನಿಕ ಸಂವೇದನೆಯ ತೀಕ್ಷ್ಣ ಮಾದರಿಯೆನಿಸಿದ್ದ ಪಿ.ಲಂಕೇಶ್ ನೋಡಿರುವ ಕ್ರಮಗಳಲ್ಲಿನ ಬದಲಾವಣೆಯನ್ನು ಗಮನಿಸಿದರೆ ಒಂದು ಸಾಹಿತ್ಯ ಪರಂಪರೆ ಬೆಳೆಯುವ ಬಗೆಗೆ ನಮಗೆ ಒಂದು ಒಳನೋಟ ಸಿಗುತ್ತದೆ. ನವ್ಯದ ಉತ್ತುಂಗ ಕಾಲದಲ್ಲಿ ಲಂಕೇಶ್ ಬರೆದ 'ರಮ್ಯ ಪ್ರಜ್ಞೆಯ ಉತ್ತುಂಗ ಶಿಖರ' ('ಪ್ರಸ್ತುತ': ಅಕ್ಷರ ಪ್ರಕಾಶನ: ೧೯೭೦) ಲೇಖನ ಕುವೆಂಪು ಅವರನ್ನು ನವೋದಯದ ಮಾದರಿಯಾಗಿ ತೀಕ್ಷ್ಣ ವಿಮರ್ಶೆಗೆ ಒಳಪಡಿಸಿ, ಅವರನ್ನು ಮೀರುವ ಆಶಯವನ್ನು ವ್ಯಕ್ತಪಡಿಸುತ್ತದೆ. ಆದರೆ ನಂತರ ಕುವೆಂಪು ನಿಧನರಾಗುವ ವೇಳೆಗೆ– ಸುಮಾರು ಎರಡೂವರೆ ದಶಕಗಳಲ್ಲಿ– ಸಾಹಿತ್ಯ ವಿಮರ್ಶೆಯ ಪರಿಪ್ರೇಕ್ಷ್ಯವೇ ಸಂಪೂರ್ಣ ಬದಲಾಗಿ, ಲಂಕೇಶ್ ಕಣ್ಣಿಗೆ ಕುವೆಂಪು ಸಾಹಿತ್ಯ ವಿಮರ್ಶೆಯ ಚೌಕಾಶಿ ಲೆಕ್ಕಾಚಾರಗಳನ್ನು ಮೀರಿದ ತಮ್ಮ ಕಾಲದ ಗುರು ಆಗಿ ('ಅಂಕುಶಗಳ ವಿರುದ್ಧ ಸಿಡಿದೆದ್ದ ರಸಋಷಿ ಕುವೆಂಪು': 'ಸಾಹಿತಿ– ಸಾಹಿತ್ಯ– ವಿಮರ್ಶೆ': ಪತ್ರಿಕೆ ಪ್ರಕಾಶನ : ೨೦೦೮) ಕಾಣುತ್ತಾರೆ! ಇಲ್ಲಿ ನಿಧನರಾಗಿರುವುದು ಕುವೆಂಪು ಅಲ್ಲ; ಲಂಕೇಶ್! ಈ ಅರ್ಥದಲ್ಲಿ ಲಂಕೇಶ್ ಇಲ್ಲಿ ಸತ್ತು ಹುಟ್ಟಿದ್ದಾರೆ ಎನ್ನಬಹುದು. ಲಂಕೇಶ್ ಮಾತ್ರವಲ್ಲ ಇಡೀ ಕನ್ನಡ ಸಾಹಿತ್ಯ ವಿಮರ್ಶೆ ಕೂಡ. ಅದು ನವ್ಯದಿಂದಾಗಿ ಕಡಿದುಕೊಂಡಿದ್ದ ಪರಂಪರೆಯ ಸಾತತ್ಯವನ್ನು ಇಲ್ಲಿ ಮತ್ತೆ ಕಂಡುಕೊಂಡು ಸಹಜ ಉಸಿರಾಟದ ಲಯವನ್ನು ಮರಳಿ ಗಳಿಸಿಕೊಂಡಿದೆ.

ಪ್ರತೀತ್ಯ ಸಮುತ್ಪಾದದತ್ತ ಮರಳಿ ಧಾವಿಸಿದೆ; ವಿಮರ್ಶೆಯಲ್ಲಿ ಮಾತ್ರವಲ್ಲ– ಅದು ಹಾಗೆ ಸಂಭವಿಸದು ಕೂಡಾ– ಸೃಜನಶೀಲ ಕೃತಿಗಳಲ್ಲೂ.

ಇದೇ ಸಂಬಂಧವಾಗಿ ಇನ್ನೊಂದು ಕುತೂಹಲಕಾರಿ ಮಾಹಿತಿಯನ್ನೂ ಇಲ್ಲಿ ನೀಡಬೇಕು. ಕಳೆದ ೧೦– ೧೫ ವರ್ಷಗಳ ಕನ್ನಡ ಸಾಹಿತ್ಯ ವಿಮರ್ಶೆ ಕುವೆಂಪು ಬಿಟ್ಟರೆ ಅತಿ ಹೆಚ್ಚು ತೊಡಗಿಕೊಂಡಿರುವುದು ಬಸವಣ್ಣ ಮತ್ತು ಗಾಂಧಿ ಬಗೆಗೆ; ಕನ್ನಡ ಸಾಹಿತ್ಯ ವಿಮರ್ಶೆ ಸಂಸ್ಕೃತಿ ವಿಮರ್ಶೆಯಾಗುವ ಪ್ರಕ್ರಿಯೆಯಲ್ಲಿ. ಈ ಬರಹದ ಆರಂಭದಲ್ಲಿ ಹೆಸರಿಸಿದ ವಿಮರ್ಶಕರಲ್ಲಿ ತಮ್ಮ ವಿಮರ್ಶೆಯನ್ನು ಹದಗೊಳಿಸಿಕೊಳ್ಳುವುದರ ಭಾಗವಾಗಿ ಈ ಮೂವರನ್ನು ಚರ್ಚಿಸದವರು, ಪ್ರಸ್ತಾಪಿಸದವರು ಬಹಳ ಕಡಿಮೆ ಎಂದೇ ಹೇಳಬೇಕು. ಇವರಲ್ಲಿ ಬಸವಣ್ಣ ಅರ್ಧ ಸಾಹಿತ್ಯಿಕ ಅರ್ಧ ಸಾಮಾಜಿಕ ವಿದ್ಯಮಾನವಾಗಿದ್ದರೆ, ಗಾಂಧಿ ಸಂಪೂರ್ಣ ಸಾಮಾಜಿಕ– ರಾಜಕೀಯ ವಿದ್ಯಮಾನ. ಕನ್ನಡ ಸಾಹಿತ್ಯ ವಿಮರ್ಶೆ ಪ್ರಾಚೀನ ಮತ್ತು ನವೋದಯ ಲೇಖಕರನ್ನು ಬಿಟ್ಟರೆ ಸಮಕಾಲೀನ ಲೇಖಕರ ಕಡೆ ಅಷ್ಟು ಗಮನವನ್ನೂ ನೀಡದೆ ಹೀಗೆ ಈ ಗುರು, ಭಕ್ತ ಮತ್ತು ನಾಯಕನನ್ನು ಹುಡುಕುತ್ತಾ ಹೊರಟಿರುವುದು ಮೇಲ್ನೋಟಕ್ಕೆ ಬಲು ಸೋಜಿಗವೆನ್ನಿಸಿದರೂ, ಅದು ಆಳದಲ್ಲಿ ತನ್ನ ಪರಂಪರೆಯೊಂದಿಗೆ ನಡೆಸಿರುವ ವಿಶಿಷ್ಟ ಅನುಸಂಧಾನದ ಪ್ರತೀಕವೇ ಆಗಿದೆ. ಕುವೆಂಪು, ಬಸವಣ್ಣ ಮತ್ತು ಗಾಂಧಿ ನಮ್ಮ ಶ್ರಮಣ ಪರಂಪರೆಯ ಅತ್ಯುತ್ಕೃಷ್ಟ ಮಾದರಿಗಳೇ ಆಗಿದ್ದಾರೆ ಎಂಬುದನ್ನು ಅರಿಯಬಲ್ಲವರಿಗೆ ಇದನ್ನು ಬಿಡಿಸಿ ಹೇಳಬೇಕಾಗಿಲ್ಲ. ನಿಜ, ಅಲ್ಲಮನನ್ನೂ, ಅಂಬೇಡ್ಕರರನ್ನೂ ಆಧುನಿಕ ಕನ್ನಡ ಸಾಹಿತ್ಯ ವಿಮರ್ಶೆ ತನ್ನ ತಾತ್ವಿಕ ಭಿತ್ತಿಗಳಾಗಿ ಸಾಕಷ್ಟು ಚರ್ಚಿಸಿದೆ. ಆದರೆ ಇವರಿಬ್ಬರೂ ಅದರ ಪರಂಪರೆಯ ಪುನರನ್ವೇಷಣೆಯ ಪ್ರಕ್ರಿಯೆಗೆ ಇನ್ನೂ ದಕ್ಕದಷ್ಟು ಜಟಿಲರಾಗಿದ್ದಾರೆ ಎಂಬುದೂ ಅಷ್ಟೇ ನಿಜವಾಗಿದೆ.

ಇಲ್ಲಿ ಮನು ವಿ.ದೇವದೇವನ್ ಅವರ 'ಪೃಥ್ವಿಯಲ್ಲೊದಗಿದ ಘಟವು... ಕರ್ನಾಟಕದ ನಿನ್ನೆಗಳು' (ಪ್ರ: ಅಕ್ಷರ ಪ್ರಕಾಶನ:೨೦೦೯) ಎಂಬ ಪುಸ್ತಕದ ಪ್ರಸ್ತಾಪ ಮಾಡುವುದು ಉಚಿತ. ಕರ್ನಾಟಕದ ಚರಿತ್ರೆಯನ್ನು ವ್ಯಾಪಕ ಆಕರ– ಅಧ್ಯಯನಗಳ ಆಧಾರದ ಮೇಲೆ ಮಾರ್ಕ್ಸ್‌ವಾದಿ ದೃಷ್ಟಿಕೋನದಿಂದ (ಲೇಖಕರ ಮಾತಿನಲ್ಲೇ ಹೇಳುವುದಾರೆ, ಭೌತಿಕ ನೆಲೆಗಳಿಂದ) ಪುನಾರಚಿಸುವ ಪ್ರಯತ್ನದಂತೆ ಕಾಣುವ ಈ ಪುಸ್ತಕ, ನಮ್ಮ ಹಿರಿಯ ಸಂಶೋಧಕರ ಹಲವು ತೀರ್ಮಾನಗಳನ್ನು ತಲೆಕೆಳಗು ಮಾಡುವ ಹುಮ್ಮಸ್ಸನ್ನು ಪ್ರದರ್ಶಿಸುತ್ತಾ, ಅದಕ್ಕೆ ಪೂರಕವೆನಿಸುವ ವಾದಗಳನ್ನೂ ಮಂಡಿಸುತ್ತದೆ. ಇದರ ಭಾಗವಾಗಿ ಕನ್ನಡ ಮನಸ್ಸು ಬಹು (ಹುಸಿ?)ಹೆಮ್ಮೆಯಿಂದ ನೆನೆಸಿಕೊಳ್ಳುವ ೧೨ನೇ ಶತಮಾನದ 'ಕಲ್ಯಾಣ ಕ್ರಾಂತಿ' ಕಲ್ಪನೆಯನ್ನೇ ಹಾಸ್ಯಾಸ್ಪದವೆನ್ನುತ್ತದೆ. ಬಸವಣ್ಣನಿರಲಿ, ಅವನಿಗೆ ಆಶ್ರಯ ನೀಡಿದ ಬಿಜ್ಜಳನೇ ಕಲ್ಯಾಣಕ್ಕೆ ಬಂದಿದ್ದ ಎನ್ನುವುದಕ್ಕೆ ಯಾವುದೇ ಸಾಕ್ಷ್ಯಗಳಿಲ್ಲ ಎನ್ನುವ ಇದರ ಲೇಖಕರು, ಅನುಭವ ಮಂಟಪ, ಶರಣರ ಸಂಘಟನೆ, ವಚನ ಚಳುವಳಿ, ಜಾತಿ ಸಂಘರ್ಷ ಇತ್ಯಾದಿಗಳೆಲ್ಲ ಪ್ರಕ್ಷಿಪ್ತ ವಚನ ರಾಶಿಯನ್ನು ಆಧರಿಸಿದ ಕಟ್ಟು ಕಥೆಗಳು ಎಂದು ವಾದಿಸಿ ತೀರ್ಮಾನ ಕೊಡುತ್ತಾರೆ.

ಈ ಸಂಬಂಧ ಡಿ.ಆರ್ ನಾಗರಾಜರನ್ನೂ ತರಾಟೆಗೆ ತೆಗೆದುಕೊಳ್ಳುವ ಲೇಖಕರು, ಅವರ 'ಅಲ್ಲಮಪ್ರಭು ಮತ್ತು ಶೈವ ಪ್ರತಿಭೆ'ಯಲ್ಲಿ ಮಂಡಿತವಾಗುವ ಸಿದ್ಧಾಂತಗಳನ್ನು ನಾಲ್ಕನೇ ದರ್ಜೆ ಸಂಶೋಧಕರ ಅಧ್ಯಯನಗಳಿಗೆ ಹೋಲಿಸಿ, ಅದನ್ನು ಜಥಿಣಜಟಠಟಠರುಥಿಚಿಟ ಛಠರತಿಭೆಃ ಎಂದು ಅವರು ವರ್ಗೀಕರಿಸುವ 'ಸಾಹಿತ್ಯ ವಿಮರ್ಶೆ'ಯ ಶಾಖೆಗೆ ಸೇರಿಸಲುದ್ಯುಕ್ತರಾಗುತ್ತಾರೆ! ಬಹಳ ವರ್ಷಗಳಿಂದ ಕನ್ನಡ ಸಾಹಿತ್ಯ ವಿಮರ್ಶೆಯ ತೋರುಗೈಗಳಲ್ಲಿ ಒಂದಾಗಿರುವ ಮತ್ತು ಈಚಿನ ವರ್ಷಗಳ ಸಾಹಿತ್ಯ ವಿಮರ್ಶೆಯ ಮುಖ್ಯ ಕಾಳಜಿಗಳಲ್ಲಿ ಒಂದಾಗಿರುವ ವಚನ ಸಾಹಿತ್ಯ ಮತ್ತು ಚಳುವಳಿಯನ್ನೂ, ಬಸವಣ್ಣ ಎಂಬ ವಿದ್ಯಮಾನವನ್ನೂ ಹೀಗೆ ಒಂದು ಪುಟದ ಸಬಲ ವಾದದ ಮೂಲಕ ತಳ್ಳಿ ಹಾಕಿಬಿಡುವ ಈ 'ಅಧ್ಯಯನ'ವನ್ನು ನಮ್ಮ ಹಿರಿ– ಕಿರಿಯ ಇತಿಹಾಸ ಮತ್ತು ಸಾಹಿತ್ಯ ಸಂಶೋಧಕರು, ಈ ಪುಸ್ತಕ ಹೊರಬಂದು ಎರಡು ವರ್ಷಗಳಾದರೂ ಏಕಿನ್ನೂ ಮುಖಾಮುಖಿ ಮಾಡಿಕೊಂಡಿಲ್ಲ ಎಂದು ಆಶ್ಚರ್ಯವಾಗುತ್ತದೆ ಹಾಗೂ ಈಚಿನ ಕನ್ನಡ ಸಾಹಿತ್ಯ ಅಧ್ಯಯನ ಮತ್ತು ವಿಮರ್ಶೆ ಡಿ.ಆರ್.ರ ನಂತರ ಸಾಹಸ– ದುಸ್ಸಾಹಗಳ ಅನ್ವೇಷಕ ಮಾರ್ಗವನ್ನು ತ್ಯಜಿಸಿ 'ಕ್ಷೇಮವಾದಿ' ವೃತ್ತಿಪರ ಮಾರ್ಗವನ್ನು ಅನುಸರಿಸತೊಡಗಿದೆಯೇನೋ ಎಂಬ ಅನುಮಾನ ಹುಟ್ಟಿಸುತ್ತದೆ.

ಅದೇನೇ ಇರಲಿ, ಡಿ.ಆರ್. ನಾಗರಾಜ್‌ರವರ ಈ ಸಾಹಿತ್ಯ ವಿಮರ್ಶೆಯ ಪ್ರಸ್ಥಾನವನ್ನು ಕಳೆದ ಹತ್ತು ವರ್ಷಗಳ ಸಾಹಿತ್ಯ ವಿಮರ್ಶೆಯಲ್ಲಿ, ಅತ್ತ ನಿರ್ದಿಷ್ಟವಾಗಿ ಗಮನ ಹರಿಸದವರೂ ಸೇರಿದಂತೆ, ಹೇಗೆ ನೋಡಲಾಗಿದೆ ಅನ್ನುವುದು ಬಹಳ ಕುತೂಹಲಕಾರಿ ಪರಿಶೀಲನೆಯಾಗಬಹುದು. ನಾನು ಈ ಹಿಂದೆ ಹೇಳಿದ ಹಾಗೆ, ಸಾಕಷ್ಟು ಜನ ಇಂದು ವಿಮರ್ಶೆ ಬರೀತಾ ಇದ್ದಾರೆ. ಇದರಲ್ಲಿ ಅನೇಕ ಶೈಲಿಗಳಿವೆ, ಅನೇಕ ಮಾದರಿಗಳಿವೆ. ಇಂದು ಗಂಭೀರ ಅಥವಾ ಠಿಣಡಿಠಿಥಜಜಿಣಟ ಎಂದು ಕರೆಯಬಹುದಾದ ಎಲ್ಲ ವಿಮರ್ಶಕರೂ ಒಂದಲ್ಲ ಒಂದು ರೀತಿಯಲ್ಲಿ ಡಿ.ಆರ್.ರ (ಮತ್ತು ಆ ಮೂಲಕ ಸ್ಥೂಲವಾಗಿ ತೇಜಸ್ವಿಯವರ) ಚಿಂತನಾ ಮಾದರಿನ್ನು ತಮ್ಮ ಮನಸ್ಸಿನ ಹಿನ್ನೆಲೆಯಲ್ಲಾದರೂ ಇಟ್ಟುಕೊಂಡು ಬರೆಯುತ್ತಿದ್ದಾರೆ ಎಂದು ಹೇಳಬಹುದು. ಏಕೆಂದರೆ ಈಗ ಬಹುಪಾಲು ಬರುತ್ತಿರುವುದು ಸಂಸ್ಕೃತಿ ಚಿಂತನೆ ಮಾದರಿಯ ವಿಮರ್ಶೆಯೇ. ಉದಾಹರಣೆಗೆ ಹೆಚ್.ಎಸ್.ರಾಘವೇಂದ್ರ ರಾವ್ ('ನಮಸ್ಕಾರ': ಅಭಿನವ ಪ್ರಕಾಶನ:೨೦೦೬, ಚಕ್ರವರ್ತಿಯ ಬಟ್ಟೆಗಳು: ಚಾಣಕ್ಯ ಪ್ರಕಾಶನ, ೨೦೧೦) ಅಥವಾ ಟಿ.ಪಿ.ಅಶೋಕ ('ಸಾಹಿತ್ಯ ಸಂಬಂಧ' ಮತ್ತು 'ಸಾಹಿತ್ಯ ಅಧ್ಯಯನ': ಅಕ್ಷರ ಪ್ರಕಾಶನ:೨೦೦೮ ಮತ್ತು ೨೦೧೧) ಸಾಹಿತ್ಯದ ಬಗ್ಗೆ ಅಪಾರ ಪ್ರೀತಿ ಮತ್ತು ಕುತೂಹಲವಿರುವ ವಿದ್ಯಾರ್ಥಿಗಳಿಂದ ತುಂಬಿದ ತರಗತಿಗಳಿಗೆ (ಎಚ್ಚೆಸ್ಸಾರ್ ಸ್ನಾತಕೋತ್ತರ ತರಗತಿಯಲ್ಲಿಯೂ, ಅಶೋಕ ಪದವಿ ತರಗತಿಯಲ್ಲಿಯೂ ಇದ್ದಂತೆ ಭಾವಿಸಿಕೊಳ್ಳಿ, ಅಷ್ಟೆ!) ಪಾಠ ಮಾಡುತ್ತಿರುವಂತಹ ಸರಳ– ಸುಭಗ ಶೈಲಿಯಲ್ಲಿ ಬರೆಯುವಾಗಲೂ ಸಾಂಸ್ಕೃತಿಕ ರಾಜಕಾರಣ ಕುರಿತ ಅವರ ಎಚ್ಚರ ಸದಾ ಜಾಗೃತವಾಗಿರುವುದನ್ನು ನಾವು ಗಮನಿಸಬಹುದು.

ರಹಮತ್ ಮೂಲತಃ ಬಂಡಾಯದ ಉತ್ಪನ್ನವಾದುದರಿಂದ ಅವರ ಬಗ್ಗೆ ಪ್ರತ್ಯೇಕವಾಗಿ ಈ ಮಾತನ್ನು ಹೇಳುವುದು ಅನಗತ್ಯವಾದರೂ, ಅದೇ ಕಾರಣದಿಂದಾಗಿ ಅವರ ಪ್ರತಿ ಸಂಸ್ಕೃತಿ ನಿರ್ಮಾಣದ ಹಳೆಯ ಪ್ರಣಾಳಿಕೆಯ ಗುಂಗಿನಲ್ಲೇ ಬರೆಯುತ್ತಿದ್ದು ('ಕತ್ತಿಯಂಚಿನ ದಾರಿ':ನವ ಕರ್ನಾಟಕ ಪ್ರಕಾಶನ: ೨೦೦೭) ಅವರಿಗೆ ಸಾಹಿತ್ಯಕ್ಕೆ ತನ್ನದೇ ಆದ ಸ್ವಾಯತ್ತೆ ಎಂಬುದೊಂದಿರುತ್ತದೆ ಎಂಬ ನಂಬಿಕೆಯೇ ಹುಟ್ಟಿದಂತಿಲ್ಲ. ಹಾಗಾಗಿ ಅವರಿಗೆ ತಮ್ಮ ಪ್ರತಿ ಸಂಸ್ಕೃತಿ ಭವನದ ನಿರ್ಮಾಣಕ್ಕೆ ಇಟ್ಟಿಗೆಯೋ, ಸಿಮೆಂಟೋ, ಕಬ್ಬಿಣವೋ ಅಥವಾ ಮರವೋ ಆಗಿ ಒದಗದ ಲೇಖಕರೆಲ್ಲರೂ ಒಂದಲ್ಲ ಒಂದು ತಕರಾರಿಗೆ ಅರ್ಹರೇ ಆಗಿದ್ದಾರೆ! ಮೊಗಳ್ಳಿ ಗಣೇಶ್ ('ತಕರಾರು':ಪಲ್ಲವ ಪ್ರಕಾಶನ:೨೦೦೬) ಮಹಾತ್ವಾಕಾಂಕ್ಷೆಯ ಓಘದೊಂದಿಗೆ ಬರೆಯುತ್ತಾ, ಇಡೀ ಆಧುನಿಕ ಸಾಹಿತ್ಯವನ್ನು ಒಂದೇ ಬೀಸಿಗೆ ವಿಮರ್ಶೆಗೆ ಒಡ್ಡುವ ಉತ್ಸಾಹದಲ್ಲಿ ಬಹು ದೊಡ್ಡ ಸಾಹಿತ್ಯಿಕ– ಸಾಂಸ್ಕೃತಿಕ ಪ್ರಶ್ನೆಗಳನ್ನು ಎತ್ತುವರಾದರೂ, ಅವುಗಳಿಗೆ ಅವರು ನೀಡುವ ಉತ್ತರಗಳು– ತಾವು ಮೆಚ್ಚುವ ಲಂಕೇಶ್, ತೇಜಸ್ವಿ, ಕಂಬಾರರಂತಹ ಒಂದಿಬ್ಬರು ಮುವ್ವರು ಲೇಖಕರಿಗೆ ಸಂಬಂಧಿಸಿದ್ದರ ಹೊರತಾಗಿ– ಸೂಕ್ತ ಸಮರ್ಥನೆಗಳೇ ಇಲ್ಲದೆ ಬರೀ ಅವರ ಬಾಯಿಬಡುಕತನದಂತೆ ಕಂಡು ನಿರಾಶೆ ಹುಟ್ಟಿಸುತ್ತವೆ. ಇದೆ ಲೇಖಕರ ಇನ್ನೊಂದು ಕೃತಿ 'ಅವ್ಯಕ್ತ ಚರಿತ್ರೆ' (ಪ್ರಸಾರಾಂಗ. ಕನ್ನಡ ವಿಶ್ವವಿದ್ಯಾಲಯ, ಹಂಪಿ: ೨೦೦೯) ಸಾಹಿತ್ಯ ಚರಿತ್ರೆಯನ್ನು ಅಲ್ಲಲ್ಲಿ ಪರೋಕ್ಷವಾಗಿ ಮುಟ್ಟುವ ಕೃತಿಯಾದರೂ, ಅತಿ ಅಮೂರ್ತ ಭಾಷೆಯಲ್ಲೇ ಸಿಕ್ಕಿ ಹಾಕಿಕೊಂಡು ಅವ್ಯಕ್ತವಾಗಿಯೇ ಉಳಿದುಬಿಟ್ಟಿದೆ.

'ಮಾಧ್ಯಮ ಮಾರ್ಗ' (ಅಕ್ಷರ ಪ್ರಕಾಶನ: ೨೦೧೦) ಎಂಬ ಬೃಹದ್ ಗ್ರಂಥವನ್ನು ಪ್ರಕಟಿಸಿರುವ ಮನು ಚಕ್ರವರ್ತಿಯವರು ನಾಗರಾಜರ ವಾರಸುದಾರಿಕೆಯನ್ನು ಅಲ್ಲಲ್ಲಿ ಸ್ಪಷ್ಟಪಡಿಸಿಕೊಳ್ಳುತ್ತಾ, ಸಮಾಜ– ಸಾಹಿತ್ಯ– ಸಂಗೀತ– ಸಿನೆಮಾ– ರಾಜಕಾರಣ ಇತ್ಯಾದಿಗಳನ್ನೊಳಗೊಂಡ ಬಹು ಆಯಾಮಗಳ ವಿಶಾಲ ಭಿತ್ತಿಯಲ್ಲಿ ಬರೆಯುವ ಮಹತ್ವಾಕಾಂಕ್ಷೆಯನ್ನು ತೋರುವರಾದರೂ, ಈ ಬಹು ಆಯಾಮಗಳ ಅಂತರ್ಸಂಬಂಧಗಳಲ್ಲಿ ತಾವೇ ಕಳೆದುಹೋಗುವಷ್ಟು ತಮ್ಮ ಬರವಣಿಗೆಯಲ್ಲಿ ಬೌದ್ಧಿಕ ಜಟಿಲತೆಗಳನ್ನು ಸೃಷ್ಟಿಸಿಕೊಂಡು ತಾವೂ ಕಂಗಾಲಾಗಿ ತಮ್ಮ ಓದುಗರನ್ನೂ ಕಂಗಾಲು ಮಾಡಲು ಹವಣಿಸಿರುವಂತೆ ತೋರುತ್ತದೆ. ತಮ್ಮ ಓದುಗ ಅಥವಾ ಕೇಳುಗ ವರ್ಗದ ಸಾಮಾಜಿಕ– ಸಾಂಸ್ಕೃತಿಕ ಸ್ವರೂಪಕ್ಕನುಸಾರವಾಗಿ ಇಂಗ್ಲಿಷ್– ಕನ್ನಡಗಳೆರಡರಲ್ಲೂ ಒಟ್ಟಿಗೇ ಯೋಚಿಸಿ ಬರೆಯುವಂತೆ ತೋರುವ ಇವರ ಗ್ರಹಿಕೆ ಮತ್ತು ಅಭಿವ್ಯಕ್ತಿಯ ಕ್ರಮಗಳನ್ನು ಅವರ ಕೆಲವು ಲೇಖನಗಳ ಈ ಉದ್ದುದ್ದ ಮತ್ತು ಜಟಿಲ ಶೀರ್ಷಿಕೆಗಳೇ ಸೂಚಿಸುವಂತಿವೆ: 'ಮಹಿಳೆ ಮತ್ತು ಅಂತಶ್ಚೇತನ: 'ಸ್ಥಾನನಿರ್ದೇಶನ ರಾಜಕೀಯ'– ಒಂದು ಪುನರಾಲೋಚನೆ', 'ವಸಾಹತುಶಾಹಿ ಅನುಭವ ಮತ್ತು ಅನಂತಮೂರ್ತಿಯವರ ಸೃಜನಾತ್ಮಕ ಕೃತಿಗಳಲ್ಲಿನ ಕ್ರಿಯಾತ್ಮಕ ಪ್ರಕ್ರಿಯೆಗಳು', 'ರಾಷ್ಟ್ರೀಯ ಅಸ್ಮಿತೆ ಮತ್ತು ಮಾಧ್ಯಮಗಳು: ಪ್ರವೃತ್ತಿಗಳು, ಮುನ್ನೋಲವುಗಳು ಮತ್ತು ನಿಜವಾದ ಬಿಕ್ಕಟ್ಟು', 'ಮಧ್ಯಮವರ್ಗದತ್ತ ಮಸೂರ ನೋಟ: ಇತ್ತೀಚಿನ ಭಾರತೀಯ ಪ್ರಧಾನವಾಹಿನಿಯ

ಸಿನಿಮಾದಲ್ಲಿನ ನೈತಿಕ ಮತ್ತು ಸೌಂದರ್ಯಾತ್ಮಕ ಖಾಲಿತನ' ಇತ್ಯಾದಿ., ಆದರೆ ಇವೆಲ್ಲಕ್ಕೆ ಹೋಲಿಸಿದರೆ, 'ಖಾಸಗಿ ವಿಮರ್ಶೆ' ಎಂಬ ಕುತೂಹಲಕಾರಿ ಶೀರ್ಷಿಕೆಯ ಪುಸ್ತಕ ಪ್ರಕಟಿಸಿರುವ ಕೆ. ಸತ್ಯನಾರಾಯಣ, ಬಹುಶಃ ಇವರು ಸೃಜನಶೀಲ ಲೇಖಕರೂ ಆಗಿರುವ ಮತ್ತು ಅಕಡೆಮಿಕ್ ಲೋಕದಿಂದ ದೂರವಿರುವ ಕಾರಣ ಸಾಹಿತ್ಯ– ಸಮಾಜ– ರಾಜಕಾರಣಗಳ ಬಗ್ಗೆ ಗಂಭೀರ– ಜನಪ್ರಿಯ ಎಂಬ ತಾರತಮ್ಯಗಳಿಲ್ಲದೆ ಅಭಿನ್ನವಾಗಿ ಬರೆಯುತ್ತಾ ನಮ್ಮ ಚಿಂತನೆ ಮತ್ತು ವಿಮರ್ಶೆಗೆ ಹೊಸ ಖದರನ್ನು ನೀಡಿದ್ದಾರೆ. ಇಲ್ಲಿ ಸಾಹಿತ್ಯ ವಿಮರ್ಶೆ ಮತ್ತು ಸಂಸ್ಕೃತಿ ವಿಮರ್ಶೆ ಅನೌಪಚಾರಿಕವಾಗೆಂಬಂತೆ ಅಭಿನ್ನವಾಗಿ ಪ್ರಸ್ತುತಗೊಂಡಿದೆ. ಹಾಗೆ ನೋಡಿದರೆ ಈ ಸಂದರ್ಭದಲ್ಲಿ ಉಲ್ಲೇಖಿಸಲೇಬೇಕಾದ ಇನ್ನೊರ್ವ ಲೇಖಕರೆಂದರೆ 'ಲೌಕಿಕ– ಅಲೌಕಿಕ' (ಆನಂದಕಂದ ಗ್ರಂಥಮಾಲೆ: ೨೦೦೧) ಮತ್ತು 'ಗತಕಥನ' (ಆನಂದಕಂದ ಗ್ರಂಥಮಾಲೆ: ೨೦೦೫) ಕೃತಿಗಳ ಲೇಖಕರಾದ ಡಾ. ರಾಜಾರಾಮ ಹೆಗಡೆಯವರು. ಮೊದಲ ಪುಸ್ತಕದಲ್ಲಿ ಜಾನಪದ ಮತ್ತು ಶಿಷ್ಟ ಸಂಸ್ಕೃತಿಗಳ ನಡುವಣ ಸಂಕೀರ್ಣ ಸಂಬಂಧಗಳನ್ನು ನಿರ್ದಿಷ್ಟ ಪ್ರಕರಣಗಳ ಹಿನ್ನೆಲೆಯಲ್ಲಿ ಅಭ್ಯಸಿಸಿರುವ ಮತ್ತು ಆ ಮೂಲಕ ಮಧ್ಯಯುಗೀನ ಭಾರತದ ಧಾರ್ಮಿಕ ಸಂಪ್ರದಾಯಗಳನ್ನು ಹೊಸ ಕಣ್ಣುಗಳಿಂದ ನೋಡಿರುವ ಈ ಲೇಖಕರು ಕನ್ನಡ ಸಾಹಿತ್ಯ ವಿಮರ್ಶೆಗೆ ಅಗತ್ಯವಾಗಿ ಗಮನಿಸಬೇಕಾದ ಒಂದು ಸಾಂಸ್ಕೃತಿಕ ಭಿತ್ತಿಯನ್ನು ಒದಗಿಸುತ್ತಾರೆ. ಆದರೆ ಇವರ ಈ ಮೇಲೆ ಉಲ್ಲೇಖಿಸಿದ ಎರಡನೇ ಪುಸ್ತಕದ ಬಗ್ಗೆ ಇದೇ ಮಾತುಗಳನ್ನು ಹೇಳಲಾಗುವುದಿಲ್ಲ. ಅದು ಆಧುನಿಕೋತ್ತರವಾದವನ್ನು ಆವಾಹಿಸಿಕೊಂಡಂತೆ ಎಲ್ಲ ವಿದ್ಯಮಾನಗಳನ್ನೂ ಒಂದು ಪಠ್ಯ ಮಾತ್ರವೆಂಬಂತೆ ನೋಡತೊಡಗಿ, ಗುಣಾತ್ಮಕ ವಿಮರ್ಶೆಯ ಲಕ್ಷಣವನ್ನೇ ಕಳೆದುಕೊಂಡಿದೆ. ಭೈರಪ್ಪನವರ 'ಸಾರ್ಥ' ಕುರಿತ ಇವರ ಬರಹ ಈ ದೃಷ್ಟಿಯಿಂದ ಗಾಬರಿ ಹುಟ್ಟಿಸುವಂತಿದೆ!

ಮಿಕ್ಕಂತೆ ಜಿ.ಎಸ್.ಅಮೂರ ('ಕೊರಳು– ಕೊಳಲು': ಪ್ರಿಯದರ್ಶಿನಿ ಪ್ರಕಾಶನ: ೨೦೦೫) ಸಿ.ಎನ್.ರಾಮಚಂದ್ರನ್ ('ಪರಂಪರೆ– ಪ್ರತಿರೋಧ': ಸಂವಾದ ಪ್ರಕಾಶನಿ: ೨೦೦೨) ಗಿರಡ್ಡಿ ('ಪ್ರಮಾಣು': ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ: ೨೦೦೭), ಜಿ.ಎಚ್.ನಾಯಕ (ಸ್ಥಿತಿಪ್ರಜ್ಞೆ': ಕನ್ನಡ ವಿಶ್ವವಿದ್ಯಾಲಯ:೨೦೦೭)ರಂತಹವರ ಹಿರಿಯರ ವಿಮರ್ಶೆ ನಾಗರಾಜರ ವಿಮರ್ಶಾ ಪ್ರಸ್ಥಾನವನ್ನು ನೋಡಿಯೂ ನೋಡದಂತೆ ಬಹುಪಾಲು ತನ್ನ ಹಳೆಯ ಬೋಳು ವಿಶ್ಲೇಷಣಾತ್ಮಕ ಶೈಲಿಯೊಂದಿಗೆ ಪರಿಚಯಾತ್ಮಕ ನೆಲೆಯಲ್ಲೇ ತೊಡಗಿಕೊಂಡು ಯಾವುದೇ ಹೊಸ ಚರ್ಚೆಯನ್ನು ಹುಟ್ಟುಹಾಕುವ, ವಿಮರ್ಶೆಯನ್ನು ಬೆಳೆಸುವ ಚೈತನ್ಯವನ್ನು ಪ್ರಕಟಿಸದೆ ನಿಂತಲ್ಲೇ ನಿಂತಿವೆ. ಕೆ.ವಿ. ತಿರುಮಲೇಶ್ ('ಆಳ– ನಿರಾಳ', ಭಾಗ– ೧ ಹಾಗೂ– ೨: ಅಭಿನವ ಪ್ರಕಾಶನ: ೨೦೦೯) ಎಂದಿನಂತೆ ಸಂಸ್ಕೃತಿ ದ್ವೀಪಸ್ಥರಾಗಿ ವೈಯುಕ್ತಿಕ ನೆಲೆಯಲ್ಲೇ ಬರೆದುಕೊಂಡಿರುವುದರಿಂದ ಈ ಬರಹಗಳು (ಪತ್ರಿಕಾ ಅಂಕಣಗಳಾಗಿ ಸೀಮಿತ ಸ್ಥಳಾವಕಾಶದಲ್ಲಿ ಕುಗ್ಗಿಹೋದಂತನ್ನಿಸುತ್ತಾ) ನವ್ಯ ವಿಮರ್ಶೆಯ ವಿಸ್ತರಣೆಗಳಂತೆ ಮಾತ್ರ ಓದಿಸಿಕೊಳ್ಳುತ್ತವೆ.

ಇನ್ನು ಕೆ.ವಿ. ನಾರಾಯಣ ಅವರು 'ಇನ್ನು ಕನ್ನಡಿಗಳು ಸಾಕು' ಎಂಬ ತಮ್ಮ ಹಳೆಯ ವಾದವನ್ನು ಈಗ ಪುನರುಜ್ಜೀವನಗೊಳಿಸಿ, ಕನ್ನಡಕ್ಕೆ ಕನ್ನಡದ್ದೇ ಅದ ಸಾಹಿತ್ಯ ಮೀಮಾಂಸೆಯನ್ನು ಪುನರನ್ವೇಷಿಸಿಕೊಳ್ಳುವ ಚರ್ಚೆಗಳನ್ನು ಆರಂಭಿಸಿರುವವರಾದರೂ ಮತ್ತು ಇದನ್ನು ತೇಜಸ್ವಿ ಮತ್ತು ಡಿ.ಆರ್. ನಾಗರಾಜರ ಮೂಲಕ ಆರಂಭಗೊಂಡ ದೇಸೀ ಚಿಂತನೆಯ ಪುರನ್ವೇಷಣೆಯ ಇನ್ನೊಂದು ಮಾದರಿಯ ಪ್ರಯತ್ನ ಎಂದು ಪರಿಗಣಿಸಿದರೂ, ಅವರ ಇತ್ತೀಚಿನ ಮಹತ್ವಾಕಾಂಕ್ಷೆಯ ಕೃತಿ 'ಕನ್ನಡ ಜಗತ್ತು: ಅರ್ಧ ಶತಮಾನ' (ಕನ್ನಡ ವಿಶ್ವವಿದ್ಯಾಲಯ: ೨೦೦೭)ದಲ್ಲಿ ಶಿಕ್ಷಣ ಮಾಧ್ಯಮ, ಮಕ್ಕಳ ಬಹು ಭಾಷಾ ಕಲಿಕೆಯ ಸಾಮರ್ಥ್ಯ, ಭಾಷೆಯ ಸಾಮಾಜಿಕತೆ ಇತ್ಯಾದಿಗಳನ್ನು ಕುರಿತಂತೆ ಮುಂಡಿಸಿರುವ ಅನುಮಾನಾಸ್ಪದ ಮತ್ತು ಸಂದಿಗ್ಧ ನಿಲುವುಗಳನ್ನು ಗಮನಿಸಿದಾಗ ಇವರ ಈ ಪ್ರಯತ್ನಗಳಿಗೆ ಇನ್ನೂ ಒಂದು ಸ್ಥಿರವಾದ ಬೆನ್ನೆಲುಬು ಮೂಡಬೇಕಾಗಿದೆ ಎನ್ನಿಸದಿರದು.

ಇನ್ನು ಸಂಸ್ಕೃತಿ ವಿಮರ್ಶೆಯ ಭಾಗವಾಗಿಯೇ ಮೂಡಿದ ಸ್ತ್ರೀವಾದದ ಹೊಸ ಆವೃತ್ತಿಯ ವಕ್ತಾರರಾಗಿ ತಾರಿಣಿ ಶುಭದಾಯಿನಿ, ಕವಿತಾ ರೈ, ಸಬಿತಾ ಬನ್ನಾಡಿ, ಶೈಲಜಾ ಹಿರೇಮಠ ಸೇರಿದಂತೆ ಹಲವರು ಬರೆಯುತ್ತಿರುವರಾದರೂ, ಇದರ ಎರಡು ಮಾದರಿಗಳಾಗಿ ಇಂದು ಈ ಸಮೂಹದ ಎರಡು ತಲೆಮಾರುಗಳನ್ನು ಪ್ರತಿನಿಧಿಸುತ್ತಾ ಪ್ರಮುಖ ವಕ್ತಾರರೆನಿಸಿರುವ ಡಾ.ಬಿ.ಎನ್.ಸುಮಿತ್ರಾ ಬಾಯಿ ಹಾಗೂ ಡಾ.ಎಂ.ಎಸ್. ಆಶಾದೇವಿಯವರ ಇತ್ತೀಚಿನ ಎರಡು ಕೃತಿಗಳನ್ನು ಗಮನಿಸಬಹುದು. ಬಿ.ಎನ್.ಸುಮಿತ್ರಾಬಾಯಿಯವರು ೭೦-೮೦ರ ದಶಕದಲ್ಲಿ 'ಸಾರ್ವತ್ರಿಕದೆಡೆಗೆ' ಎಂಬ ಸಾರ್ವತ್ರಿಕ ವಿಮರ್ಶಾ ಕೃತಿಯಿಂದ ಅರಂಭಿಸಿ 'ವಿಚಯ'ದಲ್ಲಿ ಸ್ತ್ರೀವಾದಿ ವಿಮರ್ಶೆಗೆ ಹೊರಳಿಕೊಂಡು ಹಲವು ಬಗೆಯ ತಾತ್ವಿಕ ಚರ್ಚೆಗಳ ಮೂಲಕ ಈ ಕ್ಷೇತ್ರದಲ್ಲಿ ಸಾಕಷ್ಟು ಕೆಲಸ ಮಾಡಿದವರು. ಆದರೆ ಈಚಿನ ಇವರ 'ಸರಹದ್ದುಗಳ ಆಚೆ- ಈಚೆ' (ಇಳಾ ಪ್ರಕಾಶನ: ೨೦೦೯) ಕೃತಿಯನ್ನು ಗಮನಿಸಿದಾಗ ಇವರ ಈ ಮುಂಚಿನ ಕೃತಿಗಳಲ್ಲಿ ಕಾಣುವ ಚೂಪಾದ ಒಳ್ಳೆ ರಂಪ ತಗೊಂಡು ಕತ್ತರಿಸುತ್ತಾರಲ್ಲ ಆ ರೀತಿಯ ಸ್ತ್ರೀವಾದ ಕಾಣೆಯಾಗಿ, ಅಂದರೆ ಪುರುಷ- ಸ್ತ್ರೀ ಅನ್ನೊ ಬೇಧವನ್ನು watertight compartment ತರಹ ಮಾಡಿ, ಅವೆರಡೂ ಮೂಲತಃ ಒಂದೇ ಆಗಿದ್ದು ಪ್ರಾಕೃತಿಕ ವಿಕಾಸದ ಭಾಗವಾಗಿ ಎರಡಾಗಿ ಮತ್ತೆ ಒಂದಾಗುವ ಜೈವಿಕ ತಹತಹಿಕೆಯನ್ನು ಪ್ರಕಟಿಸುವ ಒಂದೇ ತಳಿ ಮಾದರಿಯ ಎರಡು ಆವೃತ್ತಿಗಳು, ಹಾಗೇ ಸಾಮಾಜಿಕ ನೆಲೆಯಲ್ಲಿ ಎರಡು 'ಕೌಟುಂಬಿಕ' ಘಟಕಗಳೂ ಅನ್ನುವುದನ್ನು ಗಮನದಲ್ಲೇ ಇಟ್ಟುಕೊಳ್ಳದೇ ಮಾಡಿದಂತಹ ಸ್ತ್ರೀ ಸ್ವಾಯತ್ತತೆಯ ಕುರಿತ ಒಂದು ದೊಡ್ಡ ಪ್ರತಿಪಾದನೆ ಏನಿದೆ; ಅದು ಇಲ್ಲಿ ಸ್ವಲ್ಪ ಮಾಗಿದ ಹಾಗೆ, ವಿಮರ್ಶೆಯ ಸಾರ್ವತ್ರಿಕ ವಾಹಿನಿ ಅಂತ ಏನನ್ನು ಕರೆಯಬಹುದು ಅದರೊಂದಿಗೆ ಸಮನ್ವಯ ಸಾಧಿಸಿಕೊಳ್ಳುವ ಒಲವು- ನಿಲುವುಗಳನ್ನು ಈ ಪುಸ್ತಕದ ಲೇಖನಗಳನ್ನು ಕಾಣುತ್ತೇವೆ. ಉದಾಹರಣೆಗೆ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಬಹು ಚರ್ಚಿತ ಮೊಲೆಯುಣ್ಣಿಸುವ ಪ್ರಸಂಗವನ್ನು ಇವರು ಈ ಹಿಂದೆ ವ್ಯಾಖ್ಯಾನಿಸಿರುವ ಪರಿಯನ್ನು

(‘ಕುವೆಂಪು ಅವರ ಕಾದಂಬರಿಗಳಲ್ಲಿ ಸ್ತ್ರೀತ್ವದ ಪ್ರತೀಕಗಳು’: ವಿಜಯ :ಇಳಾ ಪ್ರಕಾಶನ: ೧೯೯೫) ಈ ಕೃತಿಯಲ್ಲಿನ ‘ಕುವೆಂಪು ಕಾವ್ಯದಲ್ಲಿನ ಸ್ತ್ರೀದರ್ಶನಂ’ ಲೇಖನದ ಹದಕ್ಕೆ ಹೋಲಿಸಿ ನೋಡಬಹುದು. ಹಾಗೇ ಈ ಕೃತಿಯಲ್ಲಿನ ‘ಆದಿಪುರಾಣದಲ್ಲಿ ಸ್ತ್ರೀಪ್ರಪಂಚದ ಬಳಕೆ’ (ಸ್ತ್ರೀ– ಪ್ರಪಂಚವೆಂಬುದು ಗ್ರಾಹಕ ವಸ್ತುವಾಗಿದ್ದು ಎಂದಿನಿಂದಲೋ!) ಎಂಬ ಲೇಖನದಲ್ಲಿ ಪಂಪ ಈ ಪಾರಮಾರ್ಥಿಕ ಕಾವ್ಯದಲ್ಲೂ ಭೋಗ ಎಂದರೇ ಹೆಣ್ಣು ಎಂಬಂತೆ ಕಥೆ ಕಟ್ಟಿಯೂ, ಆತ್ಯಂತಿಕವಾಗಿ ಮುಕ್ತಿಯನ್ನೂ ಮುಕ್ತಿ ವಧು, ಮುಕ್ತಿ ಸ್ತ್ರೀ ಎಂಬಿತ್ಯಾದಿ ಬಣ್ಣನೆಗಳ ಮೂಲಕ ಸ್ತ್ರೀರೂಪದಲ್ಲೇ ಕಾಣುತ್ತಾನೆಂದು ಹೇಳಿ ಪಂಪನಲ್ಲೂ ಸ್ತ್ರೀವಾದಿತ್ವವನ್ನು ಕಾಣುವ ಲೇಖಕಿಯ ಪರಿ ಸ್ತ್ರೀವಾದ ಇಂದು ಸ್ತ್ರೀ ಅಸ್ಮಿತೆಯ ಸಂಬಂಧವಾಗಿ ಜಾಗತೀಕರಣ ಹುಟ್ಟು ಹಾಕಿರುವ ಒತ್ತಡಗಳ ಎದುರಿಗೆ ಬಿರಿದು ಬೀಳುತ್ತಿರುವ ಸೂಚನೆಯೇ ಎಂಬ ಪ್ರಶ್ನೆಯನ್ನು ಹುಟ್ಟು ಹಾಕುತ್ತಿದೆ.

ಇದು, ಇದೇ ಲೇಖಕಿ ಮತ್ತು ಆಶಾದೇವಿಯವರು (‘ನಡುವೆ ಸುಳಿವ ಆತ್ಮ: ಅಹರ್ನಿಶಿ ಪ್ರಕಾಶನ; ೨೦೧೧) ತೇಜಸ್ವಿಯವರ ‘ಕಿರಗೂರಿನ ಗಯ್ಯಾಳಿ’ ಕೃತಿಯನ್ನು ನೋಡಿರುವ ಪರಿಯನ್ನು ಗಮನಿಸಿದರೆ ಈ ಬಿಕ್ಕಟ್ಟು ಇನ್ನಷ್ಟು ಸ್ಪಷ್ಟವಾದೀತು. ಬಿ.ಎನ್ ಸುಮಿತ್ರಾಬಾಯಿ ಮತ್ತು ಆಶಾದೇವಿ ಈ ಕೃತಿಯೆದುರು ಎಷ್ಟು ವಿಚಲಿತರಾಗಿದ್ದಾರೆ ಅಂದರೆ, ಸುಮಿತ್ರಾ ಇದಕ್ಕೆ ದೀರ್ಘ ಪಾರಭಾಷಿಕ ಪ್ರಸ್ತಾವನೆ ಕಟ್ಟಿ, ಹೀಗೆ ಹೇಳಿದರೆ ಸ್ತ್ರೀವಾದಿ ಓದು ಆಗುತ್ತದೋ ಇಲ್ಲವೋ, ಸ್ತ್ರಿವಾದದ ವಿಸ್ತರಣೆಯಾದರೂ ಆಗುತ್ತದೆಯೋ ಇಲ್ಲವೋ, ಹಾಗೆ ಹೇಳಿದರೆ ಮತ್ತೆ ಹಳೇ ಸಾರ್ವತ್ರಿಕ ಸಾಹಿತ್ಯ ವಿಮರ್ಶೆಗೆ ಹೊರಳಿಬಿಡುತ್ತೇವೇನೋ, ಕೃತಿಗೆ ಅನ್ಯಾಯವಾಗಿಬಿಡುತ್ತದೇನೋ ಎನ್ನುವ ಪ್ರಮಾಣಿಕ ಆತಂಕ– ಸಂದಿಗ್ಧತೆಗಳಲ್ಲಿ ಕೃತಿ ಬಗ್ಗೆ ನಿರ್ದಿಷ್ಟವಾಗಿ ಏನನ್ನೂ ಹೇಳೋಕೆ ಆಗದೆ, ‘...ಆದ್ದರಿಂದ ಪಠ್ಯವೊಂದರ ಭಾಷೆಯ ಸಾಂಕೇತಿಕ ನೆಲೆಗಳನ್ನೂ ಗ್ರಹಿಸುವ, ಅದರಲ್ಲಿನ ಸಾಮಾಜಿಕ ಸಂದರ್ಭದಲ್ಲಿನ ಲಿಂಗಪ್ರಭೇಧ ವ್ಯವಸ್ಥೆಯನ್ನೂ ವಿಶ್ಲೇಷಿಸುವ ಸಂತುಲಿತ ವಿಮರ್ಶಾ ಕ್ರಮ ಇಂದು ಹೆಚ್ಚು ಪ್ರಸ್ತುತವಾಗಬಲ್ಲುದು’ ಎಂದು ತಮ್ಮ ಸ್ತ್ರೀವಾದವನ್ನೇ ಪುರ್ನಪ್ರಸ್ತುತಗೊಳಿಸಿಕೊಳ್ಳುವ ದೊಡ್ಡ ಸಾಹಸ ಮಾಡಿದ್ದಾರೆನಿಸುತ್ತದೆ. ಇದು ‘ಕಿರಗೂರಿನ ಗಯ್ಯಾಳಿಗಳು’ದಂತಹ ಕೃತಿಗಳ ಸಾರ್ವತ್ರಿಕ ಯಶಸ್ಸೆಂದೇ ನಾನು ಭಾವಿಸುತ್ತೇನೆ. ಇನ್ನು ಆಶಾದೇವಿಯವರೂ ಒಟ್ಟಾರೆ ತೇಜಸ್ವಿ ಸಾಹಿತ್ಯದಲ್ಲಿನ ಸ್ತ್ರೀಲೋಕದ ಪರಿಶೀಲನೆ ಮಾಡುವ ಪ್ರಯತ್ನದಲ್ಲಿ ದೀರ್ಘ ಪೀಠಿಕೆಯಾಗಿ ತೇಜಸ್ವಿಯುವರ ‘ಸರ್ವಾತ್ಮ ಘನತೆ’ಯನ್ನು ಗುರುತಿಸುವ ನೋಟ– ಕ್ರಮವನ್ನು ಪ್ರಸ್ತಾಪಿಸುತ್ತಾರಾದರೂ, ‘ಕಿರಗೂರಿನ ಗಯ್ಯಾಳಿಗಳು’ ಬಗ್ಗೆ ಬರೆಯುವಾಗ ಮಾತ್ರ ಸ್ತ್ರೀವಾದ ಇದ್ದಕ್ಕಿದಂತೆ ಎಚ್ಚೆತ್ತುಕೊಂಡಂತೆ ಕೃತಿಯಲ್ಲಿ ಗಯ್ಯಾಳಿ ಶಬ್ದದ ಅರ್ಥ ಪಲ್ಲಟ ಮಾಡೋದಕ್ಕೆ ಅದು ಸೋತಿದೆ ಅಂತ ತೀರ್ಮಾನ ಕೊಡುತ್ತಾರೆ!

ಆಶಾದೇವಿಯುವರ ಈ ಅಭಿಪ್ರಾಯ, ತೇಜಸ್ವಿ ಸಾಹಿತ್ಯ ಅದರ ವಿಶಿಷ್ಟ ಸ್ವರೂಪದಿಂದಾಗಿಯೇ ಬೇಡುವಂತಹ ಓದುವ ಹೊಸ ಕ್ರಮವನ್ನು ಗುರುತಿಸಲಾಗದ್ದರಿಂದ

ಮೂಡಿದ್ದೆಂದು ನನಗೆ ತೋರುತ್ತದೆ. ಬಹಳ ಜನ ಸರಳವಾಗಿ ಉಡಾಫೆಯೆಂದು ಕರೆದುಬಿಡುವ ತೇಜಸ್ವಿಯವರ ಉದ್ದೇಶಪೂರ್ವಕ ಉತ್ಪ್ರೇಕ್ಷಿತ ಬರವಣಿಗೆಯ ಕ್ರಮದ ಹಿಂದಿನ ತಾತ್ವಿಕತೆಯನ್ನು ಅರಿಯದವರು ಮಾತ್ರ (ಈ ಕುರಿತ ನನ್ನ ಆಲೋಚನೆಗಳಿಗಾಗಿ 'ತೇಜಸ್ವಿಯವರ ಬೌದ್ಧ 'ಮಾರ್ಗ ಪ್ರವರ್ತಕತೆ': 'ಇಲ್ಲಿ ಯಾವುದೂ ಅಮುಖ್ಯವಲ್ಲ': ಹಸಿರು ಪ್ರಕಾಶನ: ೨೦೦೯ ಗಮನಿಸಬಹುದು) ತೇಜಸ್ವಿ ಇಲ್ಲಿ 'ಗಯ್ಯಾಳಿಗಳು' ಎಂಬ ಶಬ್ದವನ್ನು ನಿಷೇಧಾತ್ಮಕ ಅಥವಾ ನಿಂದನೆಯ ಅರ್ಥದಲ್ಲಿ ಬಳಸಿದ್ದಾರೆಂದು ಬಗೆಯುವರು. ಹಾಗಾಗಿ ಇಲ್ಲಿ ಅರ್ಥ ಪಲ್ಲಟದ ಪ್ರಶ್ನೆಯೇ– ಅದು ಕೃತಿಯ ಯಾವ ಸ್ತರದ ಉದ್ದೇಶವೂ ಆಗಿಲ್ಲದಿರುವುದರಿಂದ– ಅಸಂಗತವೆನ್ನಿಸುತ್ತದೆ. ಹಾಗೇ ಆಶಾದೇವಿಯವರು ಸ್ತ್ರೀವಾದದ ಮುಖ್ಯ ಪ್ರಸ್ಥಾನಗಳಲ್ಲಿ ಒಂದಾದ 'ದಾಂಪತ್ಯ'ದ ಪರಿಕಲ್ಪನೆಯ ಮೂರ್ತ ಮತ್ತು ಅಮೂರ್ತ ನೆಲೆಗಳನ್ನು ಗುರುತಿಸುತ್ತಾ, ಇವರೆಡರ ನಡುವಣ ಸಂಬಂಧದ ಶೋಧನೆಯ ಕೊರತೆಯ ಬಗ್ಗೆ ಇಲ್ಲಿ ಬರೆಯುತ್ತಾರೆ. ಈ ಲೇಖನದಲ್ಲಿ ಮಾತ್ರವಲ್ಲ, ಇಲ್ಲಿ ಉಲ್ಲೇಖಿತವಾಗಿರುವ ಅವರ ಕೃತಿಯ ಇನ್ನೆರಡು ಮೂರು ಲೇಖನಗಳಲ್ಲೂ ಈ ಮೂರ್ತ– ಅಮೂರ್ತ ನೆಲೆಗಳ ಬಿರುಕಿನ ಪ್ರಸ್ತಾಪ ಮಾಡುತ್ತಾರಾದರೂ, ಅವರು ಹೇಳುವ ಅಮೂರ್ತ ನೆಲೆ ಮಾತ್ರ ಅಮೂರ್ತವಾಗಿಯೇ ಉಳಿಯುತ್ತದೆ.

ಬಹುಶಃ ಇದನ್ನು ಸ್ಪಷ್ಟಪಡಿಸಲೆಂದೇ 'ಮನುಸ್ಮೃತಿ'ಯ ಹುಟ್ಟಿಗೆ ಕಾರಣವೆಂದು ಹೇಳಲಾಗುವ ಒಂದು ಕಥೆಯನ್ನೂ ಆಶಾದೇವಿ ನಿರೂಪಿಸಿದ್ದಾರೆ. ಆದರೆ ಈ ಕಥೆ, ಇವರು ಹೇಳುವಂತಹ ಬಿರುಕನ್ನು ಮುಚ್ಚುವುದಕ್ಕೆ ಸಂಬಂಧಿಸಿದಂತೆ ನೀಡುವ ಸೂಚನೆಯ ಭಾಗವೇ ಆಗಿದ್ದರೆ, ಈ ಕಥೆಯನ್ನು ಅವರು ದಾಂಪತ್ಯದ ಪರಿಕಲ್ಪನೆಯ ಜೊತೆಗೇ ಸಜೀವ ಸಂಬಂಧ ಹೊಂದಿರುವ 'ಕುಟುಂಬ'ದ ಪರಿಕಲ್ಪನೆಯ ಮೂರ್ತ– ಅಮೂರ್ತ ಸ್ತರಗಳ ನಡುವಣ ಬಿರುಕನ್ನು ಮುಚ್ಚುವ ಚರ್ಚೆಗೂ ವಿಸ್ತರಿಸಬೇಕಾಗುತ್ತದೆ. ಇಲ್ಲಿ ಇಂತಹ ವಿಸ್ತರಣೆಯ ಸಾಧ್ಯತೆಗಳೇ ಗೋಚರವಾಗದಿರುವುರಿಂದಲೇ ಮುಂದೆ ಇವರು ರಾಮಯಣದ 'ಸೀತೆ'ಯನ್ನು 'ಅಪ್ಪಟ ಆಧುನಿಕ ಹೆಣ್ಣು' ಎಂದು ಚಿತ್ರಿಸುವುದರಲ್ಲಿನ ತಾತ್ವಿಕ ಗೊಂದಲಗಳಿಗೆ– ಇತರ ಲೇಖನಗಳಲ್ಲಿನ ತಮ್ಮ ನಿಲುವುಗಳನ್ನು ತಾವೇ ವಿರೋಧಿಸಿಕೊಳ್ಳುವಂತಹ– ಸಿಕ್ಕಿಕೊಳ್ಳುತ್ತಾರೆ. ಈ ಸ್ತ್ರೀವಾದಿ ತಾತ್ವಿಕ ಗೊಂದಲದ ಮಾತು ಅತ್ತ ಇರಲಿ, ಇದೇ ಕೃತಿಯಲ್ಲಿ ಇವರು ಇನ್ನೊಂದೆಡೆ ಹೇಳುವ, 'ಬರವಣಿಗೆಯ ಮಹತ್ವವನ್ನು ಅದರ ಕಾವ್ಯಾತ್ಮಕ ಯಶಸ್ಸು ನಿರ್ಧರಿಸಬೇಕೋ, ಸನ್ನಿವೇಶದ ಅಗತ್ಯ ಮತ್ತು ತುರ್ತುಗಳು ನಿರ್ಧರಿಸಬೇಕೋ ಎನ್ನುವ ಚರ್ಚೆ ಅರ್ಥಪೂರ್ಣವಾಗಿ ನಡೆಯುತ್ತಿರುವ ಕಾಲಘಟ್ಟ ಇದು' ಎಂಬ ಮಾತಿನಲ್ಲಿ ಕಾಣುವ ಸಾಹಿತ್ಯದ ಪರಿಕಲ್ಪನೆ ಕುರಿತ ಮೂಲ ಗೊಂದಲವೇ ಆತಂಕವನ್ನು ಹುಟ್ಟಿಸುವಂತಿದೆ! ಹಾಗೆ ನೋಡಿದರೆ, ಆಶಾದೇವಿಯವರ ಸಾಹಿತ್ಯ ವಿಮರ್ಶೆ ಮಾತಿನ ಜಾಣ್ಮೆ ಮತ್ತು ಚಾತುರ್ಯಗಳನ್ನೇ ಹೆಚ್ಚು ನೆಚ್ಚಿದಂತಿದೆ.

ಕೊನೆಯದಾಗಿ ನಾನು ಪ್ರಸ್ತಾಪ ಮಾಡಬಯಸುವುದು ಬಹುಶಃ ಡಿ.ಆರ್. ನಾಗರಾಜ್‌ರ ವಿಮರ್ಶಾ ಪ್ರಸ್ಥಾನವನ್ನು ವ್ಯಾಪಕ ಮತ್ತು ಬಹುಮುಖಿ ಓದಿನ ಹಿನ್ನೆಲೆಯಲ್ಲಿ ಬಹಳ ಅರ್ಥಪೂರ್ಣವಾಗಿ, ವಿಮರ್ಶಾತ್ಮಕವಾಗಿ ವಿಸ್ತರಿಸುವ ಪ್ರಯತ್ನ ಮಾಡುತ್ತಿದ್ದಾರೆಂದು ನಾನು ಭಾವಿಸಿರುವ ರಾಜೇಂದ್ರ ಚೆನ್ನಿಯವರ ಬಗ್ಗೆ. ಕಳೆದ ಹತ್ತು ವರ್ಷಗಳಲ್ಲಿ ಮೂರು ವಿಮರ್ಶಾ ಸಂಕಲನಗಳನ್ನು ಪ್ರಕಟಿಸಿರುವ ಇವರು ('ಅಮೂರ್ತತೆ ಮತ್ತು ಪರಿಸರ': ಅಭಿನವ ಪ್ರಕಾಶನ: ೨೦೦೩, 'ನಡುಹಗಲಿನ ಕಂದೀಲುಗಳು': ಲೋಹಿಯಾ ಪ್ರಕಾಶನ: ೨೦೦೪, ಹಾಗೂ 'ಅಸಮಗ್ರ': ಪಲ್ಲವ ಪ್ರಕಾಶನ: ೨೦೧೦) ನಾಗರಾಜರಂತೆಯೇ ಬಹಳ ರಿಛಿಲಿಟಿಚಿಣಜಲಿಗಿ, ಜ್ಞಾನ ಶಾಖೆಗಳ ಅಂತರ್ಸಂಬಂಧಗಳನ್ನು ಹುಡುಕುವ ಕಾಯಕದಂತೆ ವಿಮರ್ಶೆಯನ್ನು ಬರಿತಾರೆ. ಮೊದಮೊದಲು ಬಹಳ ಅಮೂರ್ತವಾಗಿ ಬರೆಯುತ್ತಿದ್ದ ಚೆನ್ನಿ ಈಗ 'ಅಸಮಗ್ರ'ದ ಹೊತ್ತಿಗೆ ಸಾಹಿತ್ಯದ, ಅದರಲ್ಲೂ ಇಂಗ್ಲಿಷ್ ಸಾಹಿತ್ಯದ ಮೇಷ್ಟ್ರಾಗಿದ್ದರೂ, ಪಾರಿಭಾಷಿಕ ಪಾಂಡಿತ್ಯದ ಪರಿಧಿಯಿಂದ ಹೊರಬಂದು; ತೇಜಸ್ವಿ ಭಾಷೆಯಲ್ಲಿ ಹೇಳುವುದಾದರೆ, ಅನ್ನ ತಿನ್ನುವ ಎಲ್ಲರಿಗೂ ಅರ್ಥವಾಗುವ ಹಾಗೆ ಬರೆಯತೊಡಗಿದ್ದಾರೆ. ಒಮ್ಮೊಮ್ಮೆ ಜನಪ್ರಿಯ ಎಡಪಂಥೀಯತೆಯ ಪಡಿಯಚ್ಚಿಗೆ ಜಾರುವ ಹಾಗೆ ಪ್ರಗತಿಪರತೆಯ ಭೋಳೆತನಕ್ಕೆ ಒಳಗಾಗುವರಾದರೂ ತಕ್ಷಣ ಎಚ್ಚೆತ್ತುಕೊಂಡವರಂತೆ ಸಾಹಿತ್ಯದ ಸ್ವಾಯತ್ತತೆ ಮತ್ತು ಸ್ವಯಂಸಂಪೂರ್ಣತೆಯ ನಂಬುಗೆಯತ್ತ ವಾಪಸ್ಸಾಗುತ್ತಾರೆ.

ಉದಾಹರಣೆಗೆ ಇವರ ಆಧುನಿಕ ಕನ್ನಡದ ಹತ್ತು ಶ್ರೇಷ್ಠ ಕವನಗಳ ಪಟ್ಟಿಯಲ್ಲಿ ಬೇಂದ್ರೆ ಮತ್ತು ಅಡಿಗರ ತಲಾ ಎರಡು ಕವನಗಳ ಜೊತೆಗೆ ರಾಮಚಂದ್ರ ಶರ್ಮ ಮತ್ತು ಗಂಗಾಧರ ಚಿತ್ತಾಲರ ಒಂದು ಕವನವೂ ಸೇರಿಕೊಂಡು, ತಾವೇ ಸಾರಾ ಸಗಟಾಗಿ ಮೆಚ್ಚಿರುವ ('ಕುವೆಂಪು ಕಾವ್ಯ ಮೀಮಾಂಸೆ ಮತ್ತು ಸಾಹಿತ್ಯ ವಿಮರ್ಶೆ': 'ಅಸಮಗ್ರ') ಕಾವ್ಯ ಮೀಮಾಂಸೆಯ ನಂಬಿಕೆಯಲ್ಲಿ ಕಾವ್ಯ ರಚಿಸಿದ ಕುವೆಂಪುಗೂ ಜಾಗವಿಲ್ಲದೇ ಹೋಗಿದೆ! ಆದರೆ 'ಅದೇನೇ ಇದ್ದರೂ ಕನ್ನಡನಾಡು ಇಂದಿಗೂ ನೋಡುತ್ತಿರುವ 'ಚರಿತ್ರೆ'ಯ ಸಮಕಾಲೀನ ಲೇಖಕೆಂದರೆ ಕುವೆಂಪು ಒಬ್ಬರೇ' ಎಂದೂ ಹೇಳಬಲ್ಲ, ಸಮರ್ಥಿಸಬಲ್ಲ ಛಾತಿಯನ್ನೂ ಹೊಂದಿದ್ದಾರೆ! ಬೇಂದ್ರೆ ಮತ್ತು ಮಾಸ್ತಿ ಕುರಿತ ಇವರ ಲೇಖನಗಳಲ್ಲಿ ಕಾಣುವ ಸೂಕ್ಷ್ಮ ಒಳನೋಟಗಳು ಚೆನ್ನಿ ಸಂಸ್ಕೃತಿ ವಿಮರ್ಶೆಯ ಎಂತಹ ಗಂಭೀರ ಅಭ್ಯಾಸಿ ಎನ್ನುವುದನ್ನು ಮನಗಾಣಿಸುವುವಾದರೂ, ಇವರ 'ಮತ್ತೆ ಕಲ್ಯಾಣದತ್ತ' ಎಂಬ ಲೇಖನದಲ್ಲಿ ('ಅಸಮಗ್ರ') ಚರಿತ್ರೆಯನ್ನೂ ವರ್ತಮಾನವನ್ನೂ ಕೂಡಿಸಿ ಅಥವಾ ಒಂದು ರೀತಿಯಲ್ಲಿ ಅ– ಭಿನ್ನಗೊಳಿಸಿ, ಯಾವುದನ್ನು ಮನು ದೇವದೇವನ್ ತಮ್ಮ ಸಂಶೋಧನೆಯ ಮೂಲಕ 'ಹುಸಿ' ಎಂದು ಘೋಷಿಸಿದ್ದಾರೋ ಆ ಕಲ್ಯಾಣವನ್ನು ಇವೊತ್ತಿಗೆ ನಿಜಗೊಳಿಸುವ ಪರಿ ಡಿ.ಆರ್. ನಾಗರಾಜರ ಪ್ರತಿಭೆಯ ನಿಜ ವಾರಸುದಾರಿಕೆ ಎಂದರೇನು ಎಂಬುದನ್ನು ಸ್ಪಷ್ಟಪಡಿಸುವಂತಿದೆ.

ಆದರೆ ಹೀಗೆ passionateಆಗಿ ಬರೆಯುವುದರ ಆವೇಗಕ್ಕೆ ಸಿಕ್ಕಿಯೋ ಏನೋ, ಅನೇಕ ಬಾರಿ ಚೆನ್ನಿಯವರ ನಿಲುವು ಹಾಗೂ ಅಭಿಪ್ರಾಯಗಳಲ್ಲಿ inconsistencyಗಳೂ

ಕಾಣತೊಡಗುತ್ತವೆ. ತಾವು ಒಂದು ಕಡೆ ಹೇಳಿದ್ದಕ್ಕೆ ವಿರುದ್ಧವಾಗಿ ಕಾಣುವ ಮಾತುಗಳನ್ನು ಇನ್ನೊಂದೆಡೆ ಹೇಳುವಂತಹ ಪ್ರಯತ್ನವನ್ನು ಮಾಡುತ್ತಾರೆ. ಕೆಲವು ಉದಾಹರಣೆಗಳನ್ನು ಕೊಡುವುದಾದರೆ, ಅಡಿಗರನ್ನು ಕುರಿತಂತೆ, 'ಅಡಿಗರ ನವ್ಯ ವಿಮರ್ಶೆ ಮತ್ತು ಸಾಕ್ಷಿ' ಅನ್ನೋ ಲೇಖನದಲ್ಲಿ ('ಅಸಮಗ್ರ') ಹೇಳುವ ಮಾತುಗಳಿಗೂ, 'ಕನ್ನಡ ವಿಮರ್ಶೆ ಮತ್ತು ಅಡಿಗರ ಸಂಸ್ಕೃತಿ ವಿಮರ್ಶೆ' ('ಅಸಮಗ್ರ') ಬಗ್ಗೆ ಬರೆದ ಲೇಖನದಲ್ಲಿನ ಮಾತುಗಳಿಗೂ, ಡಿ.ಆರ್. ನಾಗರಾಜ್ ಕುರಿತಂತಹ ಲೇಖನದಲ್ಲಿ ('ಅಮೂರ್ತತೆ ಮತ್ತು ಪರಿಸರ') ಅಡಿಗರ ಬಗ್ಗೆ ಮಾಡುವ ಪ್ರಸ್ತಾಪಗಳಿಗೂ ಅಜಗಜಾಂತರ ವ್ಯತ್ಯಾಸಗಳಿವೆ. ಇನ್ನು, ubaltern studies ಬಗ್ಗೆ ಬರೆದ ಲೇಖನವೊಂರದಲ್ಲಿ ಸಬಾಲ್ಟ್ರನ್– ಸ್ಟಡೀಸ್‌ನ ಪರಿಕಲ್ಪನೆಯನ್ನ ಪರಿಚಯಿಸಿ, ವಿಸ್ತರಿಸಿ, ಒಂದು ಕನ್‌ಕ್ಲೂಷನ್‌ಗೆ ಬರೋ ಹಂತದಲ್ಲಿ ಈ ಸಬಾಲ್ಟ್ರನ್– ಸ್ಟಡೀಸ್ ಬಗ್ಗೆ ಬಂದಿರುವ ೧೩ ಪುಸ್ತಕಗಳಲ್ಲಿ ಒಂದರಲ್ಲಿಯೂ ಅಂಬೇಡ್ಕರ್ ಬಗ್ಗೆ ಪ್ರಸ್ತಾಪವೇ ಇಲ್ಲವಲ್ಲ ಅಂತ 'ಛೀ!' ಅನ್ನೋ ರೀತಿನಲ್ಲಿ ಸರಿಯಗೇ ಬರೀತಾರೆ. ಆದರೆ, ಇವರೇ 'ಕನ್ನಡ ಸ್ವರಾಜ್' ಅಂತಾ ಒಂದು ಲೇಖನ ಬರೆದಿದ್ದಾರೆ. ಗಾಂಧಿಯವರ 'ಹಿಂದ್ ಸ್ವರಾಜ್'ನ್ನು ಕನ್ನಡ ಸಂಸ್ಕೃತಿ ವಿಮರ್ಶೆಯ ಆವರಣದಲ್ಲಿಟ್ಟು ವಿಸ್ತಾರವಾಗಿ ಚರ್ಚಿಸುವ ಈ ಲೇಖನದಲ್ಲಿ ಇರಲೇಬೇಕಿದ್ದ ಅಂಬೇಡ್ಕರ್ ಪ್ರಸ್ತಾಪವನ್ನು ಚೆನ್ನಿಯವರೇ ಒಮ್ಮೆಯೂ ಮಾಡಿಲ್ಲ! ಇದಕ್ಕೆ ಏನು ಹೇಳುತ್ತೀರಾ?

ಬಸವಣ್ಣನ ಬಗ್ಗೆ ತುಂಬಾ passionateಆಗಿ ('ಹಠಾತ್ತನೆ ಹತ್ತಿಕೊಂಡ ಬೆಂಕಿ ನೆಲಮುಗಿಲೆನ್ನದೆ ಎಲ್ಲವನ್ನೂ ಆವರಿಸಿಕೊಂಡು...' ಇತ್ಯಾದಿ) ಬರೆದಿದ್ದಾರೆ. ಆದರೆ ಮನು ದೇವದೇವನ್‌ರ ವಾದದ ಹಿನ್ನೆಲೆಯಲ್ಲಿ ಇದು ಸ್ವಲ್ಪ 'ಜಾಸ್ತಿ' ಅನ್ನಿಸಿದರೂ ಆಶ್ಚರ್ಯವಿಲ್ಲ. ಇನ್ನು ಅಕ್ಕಮಹಾದೇವಿ ಬಗ್ಗೆ ಬರೀತ ಅವರು, ಅಕ್ಕಮಹಾದೇವಿ ಯಾಕೆ ಬೆತ್ತಲೆಯಾದಳು? ಅವಳು ಕಾಮದಿಂದ ಹೇಗೆ ಮುಕ್ತಿ ಸಾಧಿಸಿಕೊಂಡಳು ಅನ್ನೋ ಪ್ರಶ್ನೆಗಳನ್ನು ಎತ್ತಿಕೊಂಡು ಈ ಸಂಬಂಧವಾಗಿ ಕಿನ್ನರಿ ಬ್ರಹ್ಮಯ್ಯ ಮಾಡಿದನೆಂದು ಹೇಳಲಾಗುವ ಒಂದು ಪ್ರಯೋಗವನ್ನು ತಮ್ಮ ಮುಖ್ಯ ವಾದಕ್ಕೆ ಸಮರ್ಥನೆ ಎಂಬಂತೆ ಬಳಸುತ್ತಾ, ಈ ಪ್ರಸಂಗ ಹೇಳಲು ಕಷ್ಟವಾಗುತ್ತಿದೆ (ಅಸಹ್ಯಕರವಾಗಿದೆ ಎಂಬರ್ಥದಲ್ಲಿಯೂ) ಎಂದೆಲ್ಲ ಹೇಳುತ್ತಾ ಸಂಸ್ಕೃತಿ ವಿಮರ್ಶೆಯ ಹೊಸ ಎತ್ತರಗಳನ್ನು ಮುಟ್ಟುತ್ತಿರುವಂತೆ ಬರೆಯುತ್ತಾರೆ. ಆದರೆ ಕಿನ್ನರಿ ಬ್ರಹ್ಮಯ್ಯ ಮತ್ತು ಅಕ್ಕಮಹಾದೇವಿ ಪ್ರಸಂಗ ಒಂದು ಪ್ರಕ್ಷಿಪ್ತ ಪ್ರಸಂಗ; ಅದು ಶೂನ್ಯ ಸಂಪಾದನೆಗಳಲ್ಲಿ ಎಡಿಟ್ ಆಗ್ತಾ ಆಗ್ತಾ ಹೋಗಿ ಕೊನೆಗೆ ಶರಣ ಸಂಕಥನದಲ್ಲಿ ಸಾಂಕೇತಿಕ– ಅವಶೇಷವಾಗಿ ಮಾತ್ರ ಉಳಿದಿದೆ. ಆ ಪ್ರಸಂಗ ನಿಜವಾಗಿ ನಡೆದೇ ಇಲ್ಲದೇ ಇರೋ ಸಂಭವ ಬಹಳ ಉಂಟು ಎನ್ನುವುದು ಬಹಳ ಜನ ವಿದ್ವಾಂಸರ ಅಭಿಪ್ರಾಯ. ಇದು ಚೆನ್ನಿಯವರಿಗೂ ಗೊತ್ತು. ಅದನ್ನು ಹೇಳುತ್ತಾರೆ ಅವರು. ಆದರೂ ಅವರು ಈ ಪ್ರಸಂಗ ಚರಿತ್ರೆಯಲ್ಲಿ ಹೇಗೆ ಮತ್ತು ಏಕೆ ತಿರಸ್ಕೃತವಾಗುತ್ತಾ ಹೋಯಿತು ಎಂಬುದನ್ನು ಗಮನಿಸಿದೆ, ಮೊದಲಾಗಿ ಅದು ಹೇಗೆ

ಸೇರಿಕೊಂಡಿತು ಎಂಬುದನ್ನೇ ಮುಖ್ಯ ಪ್ರಶ್ನೆಯನ್ನಾಗಿ ಮಾಡಿಕೊಂಡು, ಈ ಪ್ರಸಂಗವನ್ನು ಆಧರಿಸಿ ವಾದ– ವಿಶ್ಲೇಷಣೆ ಮಾಡುವುದು ಎಷ್ಟು ಸರಿ? ಅನ್ನೋ ಪ್ರಶ್ನೆ ಕೂಡ ಇಲ್ಲಿ ಬರುತ್ತದೆ.

ಹಾಗೇ ಕುವೆಂಪು ಅವರ 'ನೆನಪಿನ ದೋಣಿಯಲ್ಲಿ' ಬಗ್ಗೆ ಪೀಠಿಕೆಯಾಗಿ ಬರೀತಾ ಎಲ್ಲಾ ಲೇಖಕರುಗಳ ಚಿಂತನೆಗಳೂ ಅಸಮಗ್ರವೇ ಆಗಿರುತ್ತವೆ ಅಂತ ಹೇಳುತ್ತಾರೆ. ಆದರೆ 'ಲೋಕಾಯುತ"ದ ಬಗ್ಗೆ ಬರೆಯುವಾಗ ಅವ್ಯವಸ್ಥೆಗೊಳಗೊಂದು ವ್ಯವಸ್ಥೆ ಇದ್ದೇ ಇರುತ್ತದೆ ಎಂದು ಪ್ರತಿಪಾದನೆ ಮಾಡುತ್ತಾರೆ! ಈ ಅವರ ಚಿಂತನೆಯ ಅಸಮಗ್ರತೆ ಪರಿಕಲ್ಪನೆಗೂ ಅವ್ಯವಸ್ಥೆಯೊಳಗಿನ ಈ ವ್ಯವಸ್ಥೆಯ ಪರಿಕಲ್ಪನೆಗೂ ದೊಡ್ಡ ವಿರೋಧಾಭಾಸ ನನಗೆ ಕಾಣುತ್ತದೆ. ಈ ವಿರೋಧಾಭಾಸಗಳಿಗೆ ಮುಖ್ಯ ಕಾರಣ, ನಾನು ಈ ಮೊದಲು ಪ್ರಸ್ತಾಪಿಸಿದ ಅವರಲ್ಲಿ ಮರುಕಳಿಸುವ 'ಪ್ರಗತಿಪರತೆ'ಯ ಚಟ! ಬಹುಶಃ ಹತ್ತಿಕ್ಕಲಾಗದ ಈ ಚಟದಿಂದಾಗಿ ತಾವು ಮೆಚ್ಚಿದ್ದನ್ನು, ಸಾರಾಸಗಟಾಗಿ ಎತ್ತಿ ಹಿಡಿಯ ಬಯಸಿದ್ದನ್ನು ಒಂದು ಪ್ರಮೇಯದಂತೆ ಮಂಡಿಸಿ ವಾದ ಕಟ್ಟುವ 'ಹುಂಬ' ಹವಣಿಕೆಯನ್ನು ಇಂತಹ ಕಡೆ ಅವರು ಪ್ರದರ್ಶಿಸುತ್ತಾರೇನೋ, ತಿಳಿಯದು!

ಆಮೇಲೆ ನನಗೆ ಡಿ.ಆರ್. ನಾಗರಾಜ್‌ರ ಸಂಸ್ಕೃತಿ ವಿಮರ್ಶೆ ಪರಿಕಲ್ಪನೆಯ ಚೆನ್ನಿಯವರ ವಾರಸುದಾರಿಕೆಯನ್ನು ಕುರಿತಂತೆ ನನ್ನ ವಿಮರ್ಶೆಯ ಮುಖ್ಯ ಮಾತನ್ನು ದಾಖಲಿಸಿ ಈಗಾಗಲೇ ದೀರ್ಘವಾಗಿ ಹೋಗಿರುವ ನನ್ನ ಈ ಪ್ರಬಂಧವನ್ನು ಮುಗಿಸುವೆ. ಆ ಮಾತು ಏನು ಅಂದರೆ, ಯಾವುದನ್ನು modernity project ಅಥವಾ ಆಧುನಿಕತೆಯ ಯೋಜನೆ ಅಂತ ಕರೆಯಬಹುದೋ, ಯಾವುದನ್ನು ವಸಾಹತುಶಾಹಿಯ ಬೌದ್ಧಿಕ ಕೊಡುಗೆ ಅಂತ ಗುರುತಿಸುತ್ತೀವೋ ಆ ಯೋಜನೆಯೊಳಗೇ, ಆಲೋಚನಾಕ್ರಮದೊಳಗೇ ಪಟ್ಟಾಗಿ ಕೂತುಕೊಂಡು ಅವರು ಮಾತನಾಡುತ್ತಿರುತ್ತಾರೆ. ಅಂದರೆ ಚೆನ್ನಿಯವರು ಅವರಿಗೆ ಗೊತ್ತಿಲ್ಲದಂತೆಯೇ, ಮಾಡ್ರೆನಿಟಿ ಪ್ರಾಜೆಕ್ಟ್‌ನ ಒಬ್ಬ ಕ್ರಿಯಾಶೀಲ ಸದಸ್ಯನಾಗಿಯೇ ಮಾತನಾಡುತ್ತಿರುತ್ತಾರೆ. ಇದು ಒಂಥರಾ ಆಧುನಿಕ ಅರ್ಥದ ಮಾಯೆ ಇರಬಹುದು! ಯಾಕೆಂದರೆ 'ವಡ್ಡಾರಾಧನೆಯ ಆಧುನಿಕ ಓದು' ('ಅಮೂರ್ತತೆ ಮತ್ತು ಪರಿಸರ') ಅಂತ ಇವರು ಬರೆಯುವಾಗ ಇದು (ಲೋಕೋತ್ತರವಾದ) ಜೈನ ಕಥೆಯಲ್ಲ, ಇದು ಲೋಕದ ಕಥೆ ಅಂತ ಪ್ರತಿಪಾದಿಸುವ ವಿಚಾರವಾದಿ ಹಠವನ್ನು ಪ್ರದರ್ಶಿಸುತ್ತಾರೆ. ಲೋಕ ಮತ್ತು ಲೋಕೋತ್ತರತೆಯನ್ನು ಒಡೆದಿರುವುದೇ, ನಮ್ಮ ನೋಟಕ್ರಮವನ್ನು ಹೀಗೆ ವಿಭಜಿಸಿರುವುದೇ ಮಾಡ್ರನಿಟಿ. ಹಾಗಾಗಿ ಇವರು ಈ ನೋಟಕ್ರಮವನ್ನೇ ಮುಂದುವರೆಸುವುದು ಸಾಧ್ಯ ಆದರೆ, ಅದೇ ಪರಿಭಾಷೆಯಲ್ಲಿ ಇವರು ಮಾತನಾಡುತ್ತಾರಾದರೆ..... ಏನಂತ ಹೇಳುವುದು? ಆದರೆ ಇವರು ಬಸವಣ್ಣನ ಬಗ್ಗೆ ಬರೆಯುವಾಗ ಮಾತ್ರ– 'ನಾನು ಇವೊತ್ತಿನ ಓದುಗನಾಗೇ ಎಲ್ಲವನ್ನೂ ಓದುವುದು' ಎಂದು ಘೋಷಿಸಿಕೊಂಡೇ– ವಿಶೇಷ ಎಚ್ಚರಿಕೆಯಿಂದೆಂಬಂತೆ, '.....ಬಸವಣ್ಣ ಕಪ್ಪಡಿ ಸಂಗಮದಲ್ಲಿ ಅದೃಶ್ಯರಾದರು' ಎಂದು ಬರೆಯುತ್ತಾರೆ! ಏಕೆ? ಜೊತೆಗೆ ಇವರ ಪ್ರಕಾರ ಇವೊತ್ತು ಎಂದರೆ ಏನು ಎಂಬ ಪ್ರಶ್ನೆಯೂ ಏಳುತ್ತೆ!

ಅಕ್ಕಮಹಾದೇವಿ ಕುರಿತ ಬರೆಯುವಾಗಲೂ ಅಷ್ಟೇನೇ! ಅವಳೇ ಲೋಕಕ್ಕೊಂದು ತನು ಪಾರಮಾರ್ಥಕ್ಕೊಂದು ತನು ಇಲ್ಲ ಅಂತಾ ಹೇಳುತ್ತಾಳೆ ಅಂತ ಅದನ್ನೇ ಉಲ್ಲೇಖ ಮಾಡುತ್ತಾರೆ. ಆದರೆ ಲೌಕಿಕತೆ– ಪಾರಮಾರ್ಥಿಕತೆಗಳ ದ್ವಂದ್ವದ ನೆಲೆಯಲ್ಲೇ ತಮ್ಮ ವಾದ ಕಟ್ಟಹೋಗುತ್ತಾರೆ. ಅದನ್ನು ಅವರು ಮಾಡುತ್ತಿರುವುದು ಮಾರ್ಡಿನಿಟ ಪ್ರಾಜೆಕ್ಟ್‌ನ ಪ್ರಜೆಯಾಗಿರುವುದರಿಂದಲೇ! ಅಂದರೆ, ಇವರ ಪ್ರಕಾರ ಎಲ್ಲವೂ ಹಿಸ್ಟರಿಯಿಂದ, ಚರಿತ್ರೆಯಿಂದ ಸೃಷ್ಟಿಯಾದದ್ದೇ. ಆದರೆ ಇಲ್ಲ, ಹಾಗಿಲ್ಲ. ಮನುಷ್ಯನ ಬದುಕೇ, ಅದರೊಳಗಿನ ಮೂಲ ಹೋರಾಟವೇ– ಸಾಹಿತ್ಯ, ಸಂಸ್ಕೃತಿ, ರಾಜಕಾರಣ, ಕಲೆ ಎಲ್ಲವೂ– ಅವನ ಹೋರಾಟದ ಮೂಲ ತುಡಿತವೇ ಈ ಚರಿತ್ರೆಯ ಹಿಂಸೆಯಿಂದ ಪಾರಾಗುವುದು. ದೇಶ ಕಾಲಗಳ ಹಿಂಸೆಯಿಂದ ಪಾರಾಗುವುದು. ಅವನ ಲೋಕೋತ್ತರವಾಗುವ, ಅಪೂರ್ಣತೆಯ ತುಡಿತ ಇರುವುದೇ ಈ ಮೂಲಭೂತ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ನೆಲೆಯಲ್ಲಿ: ಈ ಚರಿತ್ರೆಯ ಹಿಂಸೆಯಿಂದ ಪಾರಾಗುವುದು ಹೇಗೆ? ದೇಶ ಕಾಲಗಳ ವಿಭಾಗೀಕರಣದ ಹಿಂಸೆಯಿಂದ ಪಾರಾಗುವುದು ಹೇಗೆ? ಹಾಗಿರುವಾಗ ಇವರು ಪ್ರಾಚೀನ ಸಾಹಿತ್ಯದ ಸಂದರ್ಭದಲ್ಲೂ ಧರ್ಮ ಅಂದ ತಕ್ಷಣ, ಅಲೌಕಿಕ ಅಂದ ಕೂಡಲೇ, ಒಂದು ತರಹದ ಮಡಿ– ಮೈಲಿಗೆ ಮನೋಭಾವ ತೋರತೊಡಗುತ್ತಾರೆ; ಅದನ್ನು correct ಮಾಡಲೂ ಹೋಗುತ್ತಾರೆ! ಈ ಮಡಿ– ಮೈಲಿಗೆ ಅಗತ್ಯ ಇಲ್ಲ ಅಂತ ಅನ್ನಿಸುತ್ತೆ ನನಗೆ. ಇದು ಮಾರ್ಡಿನಿಟಿ ಪ್ರಾಜೆಕ್ಟ್‌ನ ಒಳಗಿದ್ದುಕೊಂಡೇ ಯೋಚಿಸುವುದರಿಂದ ಹುಟ್ಟುವ ಪಾರಿಭಾಷಿಕ ಗೊಂದಲ ಎಂದೇ ನಾನು ಭಾವಿಸಿದ್ದೇನೆ.

ಕೊನೆಯ ಮಾತು. ಡಿ.ಆರ್. ನಾಗರಾಜ್‌ರ ಒಂದು ಕಾಲದ ಆಪ್ತ ಮಿತ್ರನಾಗಿ, ಅವರ ಅಧ್ಯಯನಶೀಲತೆಯ ಆಳ– ವಿಸ್ತಾರಗಳ ಬಗ್ಗೆ ಸಾಕಷ್ಟು ಗೌರವ ಇಟ್ಟುಕೊಂಡೇ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಡಿ.ಆರ್. ನಾಗರಾಜ್‌ರವರು ಏನು ಹುಡುಕೋಕೆ ಹೊರಟರಲ್ಲಾ, ಅಂದರೆ ದೇಸಿ ಚಿಂತನಾ ಮಾದರಿಗಳ ಮೂಲಕ ವಸಾಹತುಶಾಹಿ ಹುಟ್ಟು ಹಾಕಿರುವ ರಾಜಕೀಯ– ಸಾಂಸ್ಕೃತಿಕಸಮಸ್ಯೆಗಳನ್ನು ಪರಿಹರಿಸುವುದು, ಅದು ಸಾಧುವಿರಬಹುದು. ಆದರೆ ಸಾಧ್ಯವೇ ಅನ್ನೋ ಪ್ರಶ್ನೆ ಬಹಳ ದೊಡ್ಡ ಪ್ರಶ್ನೆ. ಯಾಕೆಂದರೆ ಡಿ.ಆರ್. ನಾಗರಾಜ್‌ರವರೇ ತಮ್ಮ ವಿವೇಕದಲ್ಲಿ ಹೇಳುತ್ತಾರೆ. ಎಲ್ಲಾ ವಿಭಾಗೀಕರಣಗಳು ಅಧ್ಯಯನಕ್ಕಾಗಿ ಮಾಡಿಕೊಂಡವು. ವೈದಿಕ– ಅವೈದಿಕ, ಶಿಷ್ಟ– ಜಾನಪದ ಇವೆಲ್ಲವೂ. ವೈದಿಕದೊಳಗೆ ಅವೈದಿಕವೂ, ಅವೈದಿಕದೊಳಗೆ ವೈದಿಕವೂ ಸೇರಿಕೊಂಡಿದೆ. ಶ್ರಮಣ ಪರಂಪರೆ ವೈದಿಕ ಚಿಂತನೆಯೊಂದಿಗೆ ಸಂವಾದ ಮಾಡಿಕೊಳ್ಳುತ್ತಾ ಪರಸ್ಪರ ಎರಡೂ ಹಾಸುಹೊಕ್ಕಾಗಿ ಹೋಗಿವೆ ಅಂತಾ ಹೇಳಿಕೊಂಡೇ 'ಸ್ಮಾಲ್ ಟ್ರೆಡಿಶನ್ಸ್' ಹುಡುಕೋಕೆ ಹೋಗುತ್ತಾರೆ ಇವರು! ಬಹಳ ಗೊಂದಲದ, ದಾರಿ ತಪ್ಪುವ ಬಹಳ ಸಂಭವವಿರುವ ಅನ್ವೇಷಣೆ ಇದು. ಹುಡುಕಲಿ. ಹುಡುಕಿದರೆ ಬಹಳ ಸಂತೋಷ. ಏನಾದರೂ ಅಮೂಲ್ಯವಾದದ್ದು ಸಿಕ್ಕರೂ ಬಹಳ ಸಂತೋಷ. ಅವು ಈಗಲೂ ಕೂಡ ತಲೆಮರೆಸಿಕೊಂಡಿವೆ ನಮ್ಮ ನಡುವೇನೆ. ಅವನ್ನು

ಹುಡುಕಿ ತೆಗೆಯುವುದು ಬಹಳ ಮುಖ್ಯ. ಆದರೆ, ಇಂದಿನ ಸ್ವರೂಪದ ಅಖಿಲ ಭಾರತ ಕಲ್ಪನೆಯನ್ನು ಇಟ್ಟುಕೊಂಡು ನಾವು ಈ ಸ್ಮಾಲ್ ಟ್ರೆಡಿಷನ್ಸ್ ಹುಡುಕೋಕೆ, ಹುಡುಕಿಕೊಂಡರೂ ಉಳಿಸಿಕೊಳ್ಳೋದಕ್ಕೆ ಸಾಧ್ಯವಾ? ಅನ್ನೋದು ಮುಖ್ಯ ಪ್ರಶ್ನೆ. ಎಕೆಂದರೆ, ನಮ್ಮ ಆಡಳಿತ, ನಮ್ಮ ಮನಸ್ಸು, ನಮ್ಮ ಆಲೋಚನಾ ಕ್ರಮದ ಚೌಕಟ್ಟು ಅಖಿಲ ಭಾರತ ಮಟ್ಟದಲ್ಲಿದ್ದು ಈಗ ಜಾಗತೀಕರಣದಿಂದಾಗಿ ಜಗತ್ತಿನ ಮಟ್ಟಕ್ಕೆ ಹೋಗಿದೆ!

ಈ ಅಖಿಲ ಭಾರತ ಆಡಳಿತ ನಡೆಯೋಕೆ ಆಗಿದ್ದೇನೆ, ನಡೆಯೋಕೆ ಸಾಧ್ಯವಾದದ್ದೇನೇ ಒಂದು ರೀತಿಯ ಏಕಾಧಿಕಾರದ ಮೂಲಕ. ಸಾಂಸ್ಕೃತಿಕ bulldozing ಮೂಲಕ. ಅದು ಪ್ರಜಾಪ್ರಭುತ್ವದ ಹೆಸರಲ್ಲಿ ನಡೀತಷ್ಟೆ, ನಡೆಯುತ್ತಿದೆಯಷ್ಟೆ. ಹಾಗಾಗಿ, ಅಖಿಲ ಭಾರತ ಆಡಳಿತ ಅನ್ನೋದೇ ಅದರ ಇವೊತ್ತಿನ ಸ್ವರೂಪದಲ್ಲಿ ಸಾಂಸ್ಕೃತಿಕ ಸರ್ವಾಧಿಕಾರಾನೇ! ಜೊತೆಗೆ ನಮ್ಮ ಅಸ್ತಿತ್ವದ ಕಲ್ಪನೆಯ ಜಗತ್ತು ಕಾಂಕ್ರೀಟ್ ಆಗಿ ಭಾರತದ ಒಂದು ಸಂವಿಧಾನದ ರೂಪದಲ್ಲಿ ನಿರ್ಬಂಧಿತವಾಗಿದೆ. ನೀವು ಅದರ ವಿಧೇಯ ಪ್ರಜೆಗಳಾಗಿದ್ದುಕೊಂಡು, ನೀವು ಅದರ ಪ್ರಕಾರವೇ ಯೋಜನೆ– ಕಾರ್ಯಕ್ರಮಗಳನ್ನು ಸಂಪನ್ಮೂಲಗಳನ್ನೂ ಪಡೆದುಕೊಂಡು ನೀವು ನಿಜವಾಗಿ ಮತ್ತು ನಿಜವಾದ ಸ್ಮಾಲ್ ಟ್ರೆಡಿಷನ್ಸ್ ಹುಡುಕೋಕೆ ಸಾಧ್ಯವಾ? ಸ್ಮಾಲ್ ಟ್ರೆಡಿಷನ್ಸ್ ಗುರುತಿಸುವುದಕ್ಕೆ ಮತ್ತು ಉಳಿಸಿಕೊಳ್ಳುವುದಕ್ಕೆ ಸಾಧ್ಯವಾ? ಈ ಪ್ರಶ್ನೆ ಬಹಳ ಮುಖ್ಯವಾದ ಪ್ರಶ್ನೆ. ಅದನ್ನು ಡಿ.ಆರ್. ನಾಗರಾಜ್ ಅವರೇ ಮನು ಚಕ್ರವರ್ತಿಯವರೊಂದಿಗೆ ನಡೆಸಿದ ಮಾತುಕತೆಗಳಲ್ಲಿ ('ಮಾಧ್ಯಮ ಮಾರ್ಗ') ಹೇಳುತ್ತಾರೆ. ನಾನು ಮಾಡ್ರನಿಸ್ಟ್ ಆಗಿದ್ದುಕೊಂಡೇನೆ ಮಾಡ್ರನ್ ಅಲ್ಲದನ್ನು ಹುಡುಕೋಕೆ ಎಷ್ಟರ ಮಟ್ಟಿಗೆ ಸಾಧ್ಯ ಎನ್ನುವ ಪ್ರಶ್ನೆಯನ್ನು ಅವರಿಗೆ ಅವರೇ ಕೇಳಿಕೊಳ್ಳುತ್ತಾರೆ. ಬಹುಶಃ ನಾವು ಬರೀ theorists ಆಗದೆ activistsಊ ಆದರೆ ಸಾಧ್ಯವಾಗಬಹುದೇನೋ ಅಂತಾ ಹೇಳುತ್ತಾರೆ.

ಆದರೆ, ಡಿ.ಆರ್. ನಾಗರಾಜ್ ಆಗಲೀ, ಡಿ.ಆರ್. ನಾಗರಾಜರ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗುವಂತಹ ಸಂಶೋಧಕರಾಗಲೀ, ಅವರು ನಿಜವಾದ ಅರ್ಥದಲ್ಲಿ ಯಾರು activists ಆಗಲಿಲ್ಲ. activists ತರ ತೋರಿಸಿಕೊಂಡರು ಅಷ್ಟೇ. ನಮ್ಮಲ್ಲಿ ಬಹುಶಃ ಭಾರತ ಮಟ್ಟದಲ್ಲಿ ಗಾಂಧಿ– ಲೋಹಿಯಾ– ಅಂಬೇಡ್ಕರ್ ಮತ್ತು ಕೆಲ ಕಮ್ಯೂನಿಸ್ಟ್ ನಾಯಕರನ್ನು ಬಿಟ್ಟರೆ ಇನ್ಯಾರೂ idealogues– activists ಎರಡೂ ಒಟ್ಟಿಗೇ ಆಗಿರಲಿಲ್ಲ. ನಾವೆಲ್ಲ ಪೇಪರ್ ಟೈಗರ್ಸ್– ಕಾಗದದ ಹುಲಿಗಳು ಅಷ್ಟೆ. We are all paid rebels! ಹಿಂದೆ ಬಯ್ಯೋದಕ್ಕೆ ಅಂತಾನೆ ಪ್ರಭುತ್ವ ವಿಶೇಷ ಸೌಲಭ್ಯಗಳನ್ನು ಕೊಟ್ಟು ಕೆಲವರನ್ನು ಇಟ್ಟುಕೊಂಡಿರುತ್ತಿತ್ತಂತೆ. ಸಂಸ್ಕೃತ ನಾಟಕಗಳಲ್ಲಿನ ಆಸ್ಥಾನ ವಿದೂಷಕರು ಅಂತ ಕರೀತಿದ್ರಲ್ಲಾ ಆ ತರ. ಹಾಗೇ ನಾವು ಬುದ್ಧಿಜೀವಿಗಳು, ಲೇಖಕರು, ಕಲಾವಿದರು ಅನ್ನಿಸಿಕೊಂಡವರು ದೊಡ್ಡ ದೊಡ್ಡ ಸಂಬಳಗಳನ್ನು ತೆಗೆದುಕೊಂಡು ದೊಡ್ಡ ದೊಡ ರಾಯಲ್ಟಿಗಳನ್ನು ತೆಗೆದುಕೊಂಡು ಪ್ರಭುತ್ವವನ್ನು ಬಯ್ಯುತ್ತಿದ್ದೇವೆ. ಹಾಗೆ ಬಯ್ಯದೆ ಪ್ರಭುತ್ವದ ಜೊತೆ ಸಮನ್ವಯ

ಸಾಧಿಸಿಕೊಂಡವರನ್ನೂ ನಾವು ಬಯ್ಯುತ್ತಿದ್ದೇವೆ! (ಒಮ್ಮೊಮ್ಮೆ ನಮಗಿಂತ ಇವರೇ ಮೇಲೇನೋ ಎನ್ನಿಸಿಬಿಡುವುದೂ ಉಂಟು!) ಇವೊತ್ತಿನ ಪ್ರಭುತ್ವ ಇದೆಲ್ಲವನ್ನೂ ಸಹಿಸಿಕೊಳ್ಳುತ್ತಿದೆ. ಯಾಕೆ ಎಂದರೆ, ಇವರಿದ್ದರೇನೇ ಪ್ರಭುತ್ವ ಅನ್ನೋದು ಪ್ರಜಾಪ್ರಭುತ್ವ ಅನ್ನಿಸಿಕೊಳ್ಳೋದಕ್ಕೆ ಸಾಧ್ಯ ಅಂತಾ. ಹಾಗಾಗಿ ಈ ಇಡೀ ಅಧ್ಯಯನ, ಸಂಶೋಧನೆ ಅನ್ನೋದೆ ಈ ಪೇಯ್ಡ್ ರೆಬಲ್ಸ್‌ನ ಜಗತ್ತು ಅನ್ನೋ ತರ ಆಗಿ ಹೋಗಿಬಿಟ್ಟಿದೆ. ಇದರಿಂದಾಗಿಂತಹ ಈ ಜಗತ್ತಿನ ಪ್ರಜೆಗಳು ಹುಡುಕಿ, ಗುರುತಿಸಿ ತರುವ ಯಾವ ಸ್ಮಾಲ್ ಟ್ರೆಡಿಷನ್ನೂ ಜನತೆಯ ಇಂದಿನ ಬದುಕಿನ ಸವಾಲುಗಳಿಗೆ ಪರಿಹಾರವಾಗಿ ಬರೋದಕ್ಕೆ ಸಾಧ್ಯವಿಲ್ಲ. ಮೊದಲು ನಾವು ಪ್ರಭುತ್ವದ ಹಂಗನ್ನು ಬಿಡಬೇಕು. ಪ್ರಭುತ್ವದ ಹಂಗಿಗೆ ಕಾರಣವಾಗಿರತಕ್ಕಂತಹ ನಮ್ಮ ಜೀವನ ಶೈಲಿಯನ್ನು ಬದಲಾಯಿಸಿಕೊಳ್ಳಬೇಕು. ಪ್ರಭುತ್ವ ನಮ್ಮನ್ನು ಸಾವಿರ– ಸಾವಿರಗಟ್ಟಲೆ– ಲಕ್ಷಗಟ್ಟಲೆ ರೂಪಾಯಿಗಳ ಸಂಬಳ– ಸಾರಿಗೆ– ಯೋಜನೆ– ಕಾರ್ಯಕ್ರಮಗಳನ್ನು ಕೊಟ್ಟು ಸಾಕುತ್ತಾ ಇದೆಯಲ್ಲಾ, ಯಾಕೆ ಸಾಕುತ್ತಾ ಇದೆ ಅನ್ನೋ ಪ್ರಶ್ನೆಯನ್ನು ಕೇಳಿಕೊಳ್ಳಬೇಕು. ಇಂಥ ಪ್ರಶ್ನೆಗಳನ್ನು ಕೇಳಿಕೊಂಡಾದ ನಂತರ ಮಾತ್ರ ಪ್ರಭುತ್ವ, ಸರ್ವಾಧಿಕಾರ, ಬಲಪಂಥೀಯತೆ, ಎಡಪಂಥೀಯತೆ ಅನ್ನೋ ಮಾತುಗಳನ್ನು ಆಡೋದನ್ನು ನಿಲ್ಲಿಸಿ; ಜನ, ಜನಪರ ರಾಜಕಾರಣ, ಜನಪರ ಸಂಸ್ಕೃತಿಯಂತಹ ಶಬ್ದಗಳನ್ನು ಬಳಸುವ ಹಕ್ಕನ್ನು ಪಡಕೋತೀವಿ ಅಂತ ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

(ಕರ್ನಾಟಕ ಸಾಹಿತ್ಯ ಅಕಾಡೆಮಿಯು ಶಿವಮೊಗ್ಗದಲ್ಲಿ ೨೦೧೧ರ ಅಕ್ಟೋಬರ್ ನಲ್ಲಿ ಅಲ್ಲಿನ ಕರ್ನಾಟಕ ಸಂಘದ ಸಹಯೋಗದೊಂದಿಗೆ ಆಯೋಜಿಸಿದ್ದ 'ಈ ದಶಕದ ಸಾಹಿತ್ಯ' ಕುರಿತ ವಿಚಾರ ಸಂಕಿರಣದಲ್ಲಿ ಆಡಿದ ಮಾತುಗಳ ಬರಹ ರೂಪ)

◇◇◇

೩. ಕವಿತೆಗಳತ್ತ ಸಾಗುವ ಮುನ್ನ...

ಸವಿತಾ ನನ್ನ ಮೆಚ್ಚಿನ ಕವಯಿತ್ರಿಯಲ್ಲೊಬ್ಬಳು. ಅವಳು ನನ್ನ ಹೆಂಡತಿಯೆಂದು ನಾನು ಈ ಮಾತು ಹೇಳುತ್ತಿಲ್ಲ. ಏಕೆಂದರೆ ಅವಳು ನನ್ನ ಹೆಂಡತಿಯಾಗುವ ಮುಂಚಿನಿಂದಲೂ ಅವಳ ಪದ್ಯಗಳನ್ನು ನಾನು ಇಷ್ಟಪಡುತ್ತಿದ್ದೆ. ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ, ಅವಳ ಕಾವ್ಯ ಪ್ರತಿಭೆ ಮತ್ತು ಮತ್ತು ಅದರ ಹಿಂದಿನ ಅವಳ ಸ್ಪಂದನಶೀಲ ವ್ಯಕ್ತಿತ್ವಗಳೇ ನನ್ನನ್ನು ಅವಳೆಡೆಗೆ ಸೆಳೆದದ್ದು.

ನಮ್ಮ ಮದುವೆಯ ನಂತರ ಅವಳ ಕಾವ್ಯದ ಹರಹು ಮತ್ತು ಸ್ವರೂಪ ಬದಲಾದ ಬಗೆಗೆ ಸವಿತಾಳೇ ಒಂದೆಡೆ ಹೇಳಿಕೊಂಡಿದ್ದಾಳೆ. ಅದರ ಬಗ್ಗೆ ನಾನು ಇಲ್ಲಿ ಹೆಚ್ಚಿಗೆ ಹೇಳಬಯಸುವುದಿಲ್ಲ. ಆದರೆ ಅವಳು ಕನ್ನಡದಲ್ಲಿ ಈಗ ಗಳಿಸಿರುವಷ್ಟು ಹೆಸರನ್ನು ಗಳಿಸುವ ಕವಯತ್ರಿಯಾಗುತ್ತಾಳೆಂದು ನಾನು ಭಾವಿಸಿಯೂ ಇರಲಿಲ್ಲ, ಊಹಿಸಿಯೂ ಇರಲಿಲ್ಲ! ಈ ಯಶಸ್ಸಿಗಾಗಿ, ಅವಳು ತನ್ನ ಆಯಸ್ಸಿನ ಐವ್ವತ್ತು ವರ್ಷಗಳನ್ನು ಪೂರೈಸುತ್ತಿರುವ ಸಂದರ್ಭದಲ್ಲಿ ಶುಭ ಹಾರೈಸುತ್ತಿದ್ದೇನೆ. ಹಾಗೇ ಈ ಹಾರೈಕೆಯ ಸಂದರ್ಭದ ಕಿರು ಕಾಣಿಕೆಯಾಗಿ ನನಗೆ ಇಷ್ಟವಾದ ಅವಳ ಐವತ್ತು ಕವನಗಳನ್ನು ಇಲ್ಲಿ ಸಂಗ್ರಹಿಸಿ ನೀಡುತ್ತಿದ್ದೇನೆ. ಈ ಸಂಗ್ರಹ ಅವಳ ಸಹೃದಯಿ ಓದುಗರಾದ ನಿಮಗೂ ಇಷ್ಟವಾಗುತ್ತದೆ ಎಂದು ಭಾವಿಸುತ್ತೇನೆ.

ನಾನು ಒಬ್ಬ ವಿಮರ್ಶಕನೆಂದು ಕನ್ನಡ ಸಾಹಿತ್ಯ ಲೋಕ ಪರಿಗಣಿಸಿದೆ ಎಂದು ಭಾವಿಸಿದ್ದೇನೆ. ಹಾಗಾಗಿ ಇಲ್ಲಿನ ಈ ಸಂಗ್ರಹದ ಹಿಂದೆ ಒಬ್ಬ ಅಭಿಮಾನಿ ಓದುಗ, ಪ್ರೀತಿಯ ಗಂಡ ಮಾತ್ರವಲ್ಲದೆ, ಒಬ್ಬ ವಿಮರ್ಶಕನೂ ಇದ್ದಾನೆ. ಇದರಿಂದಾಗಿ ಈ ಸಂಗ್ರಹ ಸಾಮಾನ್ಯ ಸಹೃದಯತೆ ಮತ್ತು ವಿಮರ್ಶಾ ನಿಷ್ಠುರತೆಗಳ ವಿಶಿಷ್ಟ ಸಂಗಮವೂ ಆಗಿದ್ದರೆ ಆಶ್ಚರ್ಯವಿಲ್ಲ.

ಹಾಗೆ ನೋಡಿದರೆ ಈ ಆಯ್ಕೆ ಸವಿತಾ ನನ್ನ ಹೆಂಡತಿಯಾದಾಗಲೇ ಆರಂಭವಾದ ಆಯ್ಕೆ ಎಂದು ಹೇಳಬಹುದು. ಪ್ರತಿ ಬಾರಿ ಪದ್ಯ ಬರೆದಾಗಲೂ ಅದನ್ನು ನನಗೆ ಒಮ್ಮೆ ತೋರಿಸಿ ಪ್ರಕಟಣೆಗೆ ಕಳಿಸುವುದು ಅವಳ ವಾಡಿಕೆ. ಒಮ್ಮೊಮ್ಮೆ ನನ್ನ ನಿಷ್ಠುರ ಅಭಿಪ್ರಾಯಗಳಿಗೆ ತಳಮಳಿಸಿದವಳಂತೆ, ಅವಳು ಕೆಲವು ಪದ್ಯಗಳನ್ನು ನನಗೆ ತೋರಿಸದೆಯೇ ಪ್ರಕಟಣೆಗೆ ಕಳಿಸಿದ್ದೂ ಉಂಟು. ನಂತರ ನನ್ನ ಟೀಕೆ ಟಿಪ್ಪಣಿಯ ಮಾತುಗಳನ್ನು ಎದುರಿಸಿದ್ದೂ ಉಂಟು. ಆದರೆ ಇಂತಹ ಹಲವು ಸಂದರ್ಭಗಳಲ್ಲಿ ನಾನು ನನ್ನ ಈ ಟೀಕೆ ಟಿಪ್ಪಣಿಗಳ ಬಗ್ಗೆ ಪುನರಾಲೋಚನೆ ಮಾಡುವಂತಹ ಸಂದರ್ಭಗಳೂ ಸೃಷ್ಟಿಯಾದುದುಂಟು ಎಂದೂ ಇಲ್ಲಿ ಹೇಳಿಬಿಡಬೇಕು. ಏಕೆಂದರೆ, ನಾನು ಯಾವುದೋ ಕಾರಣದಿಂದ ಚೆನ್ನಾಗಿಲ್ಲ ಎಂದು ಹೇಳಿದ್ದ ಪದ್ಯ ಇನ್ನಾವುದೋ ಕಾರಣದಿಂದ, ಹಿರಿ ಕಿರಿಯರೆನ್ನದೆ ಅಪಾರ ಜನ ಓದುಗರ ಮೆಚ್ಚುಗೆಗೆ

ಪಾತ್ರವಾಗಿ ನಾನು ಪೆಚ್ಚಾಗಿದ್ದುಂಟು! ಅಷ್ಟಲ್ಲದೆ, ಕುವೆಂಪುರಂತಹ ಕುವೆಂಪು ಅವರೇ, 'ನಾನೇರುವ ಎತ್ತರಕೆ ನೀನೇರಬಲ್ಲೆಯಾ? ಎಂದು ವಿಮರ್ಶಕರಿಗೆ ಸವಾಲೆಸೆಯುವರೆ?

ಸವಿತಾ ಓದುಗ, ವಿಮರ್ಶಕರಿಬ್ಬರ ಗಮನವನ್ನೂ ಸೆಳೆದ ವಿಶಿಷ್ಟ ಕವಿ ಎಂದು ಹೇಳಲಾಗುತ್ತದೆ. ಅವಳ ಐದು ಕವನ ಸಂಕಲನಗಳೂ ಮತ್ತು ಅವುಗಳ ಎರಡು ವಿಶೇಷ ಸಂಗ್ರಹಗಳೂ ಪ್ರಕಾಶಕರಿಗೆ ನಷ್ಟವಾಗದಂತೆ ಮಾರಾಟವಾದ ಗತಿ, ಕವಿಗೋಷ್ಠಿಗಳಲ್ಲಿ ಅವಳ ಕವಿತೆಗಳಿಗೆ ಸಿಗುವ ವಿಶೇಷ ಜನ ಮನ್ನಣೆ ಹಾಗೂ ಅವಳು ತನ್ನ ಈ ಕಾವ್ಯಕ್ಕಾಗಿ ಪಡೆದಿರುವ ವಿವಿಧ ಪ್ರಶಸ್ತಿಗಳು ಈ ಮಾತನ್ನು ಪುಷ್ಠೀಕರಿಸುತ್ತವೆ, ನಿಜ. ಆದರೆ ಅವಳ ಕಾವ್ಯ ಕುರಿತಂತೆ ಅಂತಹ ಗಂಭೀರ ಮತ್ತು ವ್ಯಾಪಕ ವಿಮರ್ಶೆ ಬಂದಂತಿಲ್ಲ. ವಿವಿಧ ವಿಶ್ವವಿದ್ಯಾಲಯಗಳ ಹಲವು ಸಂಶೋಧನಾ ವಿದ್ಯಾರ್ಥಿಗಳು ಎಂ.ಫಿಲ್/ಪಿಎಚ್‌ಡಿಗಳಿಗಾಗಿ ಇವಳ ಕಾವ್ಯದ ಅಧ್ಯಯನವನ್ನು ಆಯ್ದುಕೊಂಡಿರುವರಾದರೂ ಮತ್ತು ತಾರಿಣಿ, ಪ್ರತಿಭಾ, ಸಬಿತಾ, ಕವಿತಾ ರೈ, ಲಕ್ಷ್ಮೀಶ ತೋಳ್ಪಾಡಿ, ಸಿರಾಜ್ ಅಹಮದ್, ಆಶಾದೇವಿ, ಟಿ.ಪಿ. ಅಶೋಕ, ಎಲ್.ಸಿ. ಸುಮಿತ್ರಾ, ಸಂತೋಷ ಚೊಕ್ಕಾಡಿ ಮುಂತಾದವರು ಸಾಕಷ್ಟು ಪ್ರೀತಿ ಅಭಿಮಾನಗಳ ಜೊತೆಗೇ ವಸ್ತುನಿಷ್ಠತೆಯೊಡನೆಯೂ ವಿಮರ್ಶೆ ಬರೆದಿರುವರಾದರೂ; ಕಾವ್ಯವೆಂದರೇನು ಎಂಬ ಮೂಲ ಪ್ರಶ್ನೆ ಮತ್ತು ಅದನ್ನು ಕಟ್ಟುವ ಬಗೆಗಿರುವ ಪ್ರಚಲಿತ ಪಂಡಿತ ತತ್ವಗಳನ್ನು ಅವಳ ಕಾವ್ಯ ಎದುರು ಹಾಕಿಕೊಂಡಿರುವುದರ ಹಿಂದಿನ ಮುಗ್ಧ ಧೈರ್ಯವನ್ನು ಹಾಗೂ ಅದೇ ಅವಳ ಕಾವ್ಯವನ್ನು ಒಂದು ವಿಶಿಷ್ಟ ನೆಲೆಗೊಯ್ದಿದೆ ಎಂಬ ಸಂಗತಿಯನ್ನು ಯಾರೂ ಗಮನಿಸಿದಂತಿಲ್ಲ. ಅಥವಾ ವಿಷದವಾಗಿ ಬರೆದಂತಿಲ್ಲ.

ಕೆಲವರು ಅವಳ ಕಾವ್ಯದ ವಿಶಿಷ್ಟತೆಯನ್ನು, ಸರಳ ವಿನ್ಯಾಸಗಳ ಅಭಿವ್ಯಕ್ತಿಯಲ್ಲಿಯೇ ಅಪೂರ್ವ ಬೆರಗು ಹುಟ್ಟಿಸುವ ಶಕ್ತಿ ಎಂದು ಗುರುತಿಸಿ ಮೆಚ್ಚುಗೆಯ ಮಾತುಗಳನ್ನಾಡಿದ್ದರೆ, ಇನ್ನು ಕೆಲವರು ಸಂಕೀರ್ಣವಾದ ಬದುಕನ್ನು ಆಳವಾಗಿ ನೋಡದೆ ಸರಳ ಆಯ್ಕೆಗಳಲ್ಲೇ ತೃಪ್ತಿಪಡುವ 'ಮೃದು' ಕಾವ್ಯ ಎಂದು ವಸ್ತುನಿಷ್ಠವಾಗಿ ಅಭಿಪ್ರಾಯಪಟ್ಟಿದ್ದಾರೆ. ಕವಿಯ ಗಂಡನಾಗಿ ಇವುಗಳ ಬಗ್ಗೆ ಯಾವ ಟೀಕೆಯನ್ನೂ ಮಾಡದೆ, ಕೇವಲ ಒಬ್ಬ ವಿಮರ್ಶಕನಾಗಿ ಕಾವ್ಯ ಕುರಿತಂತೆ ಕೆಲವು ಪಂಡಿತ ವಲಯಗಳಲ್ಲಿ (ವಿಶೇಷವಾಗಿ ಇಂಗ್ಲಿಷ್ ನವ್ಯ ಕಾವ್ಯ ಮೀಮಾಂಸೆಯಿಂದ ಪ್ರಭಾವಿತರಾದವರಲ್ಲಿ) ರೂಪುಗೊಂಡಿರುವ ಒಂದು ನಂಬಿಕೆಯ ಮಿತಿಗಳ ಬಗ್ಗೆ ಇಲ್ಲಿ ಎರಡು ಮಾತು ಹೇಳಬಯಸುವೆ. ಏಕೆಂದರೆ ಈ ನಂಬಿಕೆ 'ಕುರಿತೋದೆಯುಂ ಕಾವ್ಯ ಪರಿಣಿತಮತಿಗಳ್' ಎಂದು ತನ್ನ ಸಮಾಜದ ಸಹಜ ಕಾವ್ಯಶಕ್ತಿಯನ್ನು ಹೆಮ್ಮೆಯಿಂದ ಗುರುತಿಸಿಕೊಂಡಿರುವ ಕನ್ನಡ ಕಾವ್ಯ ಪರಂಪರೆಗೇ, ಅದರ ಸತ್ವ-ಸೌಂದರ್ಯಗಳಿಗೇ ಅನ್ಯಾಯ ಮಾಡುವಂತಿದೆ.

ಕಾವ್ಯ ಅನುಭವದ ಶೋಧನೆ ಮಾಡಬೇಕು ಮತ್ತು ಆ ಶೋಧನೆ ಅದರ ಭಾಷೆಯ ಮೈಯಲ್ಲಿ ಸಾಕ್ಷಾತ್ಕಾರವಾಗಿರಬೇಕು ಎಂಬುದು ಈ ನಂಬಿಕೆ ಮತ್ತು ವಿಮರ್ಶಾ ಪ್ರತಿಪಾದನೆ. ಆದರೆ ಈ ಅನುಭವ ಶೋಧನೆ ಎಂಬ (ಪರಿ)ಕಲ್ಪನೆಯ ಹಿಂದೆ ಬದುಕು ಸಂಕೀರ್ಣವಾದದ್ದು ಎಂಬ ನಂಬಿಕೆ ಇದೆ. ಆದರೆ ಈ ಸಂಕೀರ್ಣತೆ ಎಂಬ (ಪರಿ)ಕಲ್ಪನೆ ಹುಟ್ಟಿದ್ದು ಯಾವುದರಿಂದ? ಅದು ಹುಟ್ಟಿದ್ದು, ಆಧುನಿಕ ವೈಚಾರಿಕತೆ ಸೃಷ್ಟಿಸಿದ ಸಂದೇಹವಾದದಿಂದ. ಈ ಸಂದೇಹವಾದ

ಆಧುನಿಕತಾವಾದಿಗಳಾಧ ನಮ್ಮನ್ನು ಎಷ್ಟರ ಮಟ್ಟಿಗೆ ಆವರಿಸಿಬಿಟ್ಟಿದೆಯೆಂದರೆ, ಯಾವುದನ್ನೂ ಸರಳವಾಗಿ, ನೇರವಾಗಿ, ಇದ್ದುದನ್ನು ಇದ್ದ ಹಾಗೆ ನೋಡುವ, ಅರಿಯುವ, ಆನಂದಿಸುವ ನಮ್ಮ ಸಂವೇದನೆಯನ್ನೇ ಅಳ್ಳಕಗೊಳಿಸಿಬಿಟ್ಟಿದೆ. 'ಪ್ರತ್ಯಕ್ಷವಾದರೂ, ಪ್ರಮಾಣಿಸಿ ನೋಡು' ಎಂಬ ಆಧುನಿಕತಾವಾದಿ ಪ್ರತಿಪಾದನೆ ಒಂದು ತತ್ವವೇ ಆಗಿಬಿಟ್ಟು, ಅದು ನಮ್ಮ ಕಾವ್ಯ ಮೀಮಾಂಸೆಯನ್ನೂ ಪ್ರವೇಶಿಸಿಬಿಟ್ಟಿದೆ! ಇದರಿಂದಾಗಿ ನಮ್ಮ ಕಾವ್ಯ ಕಲ್ಪನೆ ಆಧುನಿಕತಾವಾದಿಯಾದ ಒಂದು ಎರಕಕ್ಕೆ ಬಿದ್ದು, ಕನ್ನಡ ಕಾವ್ಯವೇ ಶ್ರೇಣೀಕರಣಗೊಂಡು ಏಕರೂಪೀಕರಣದ ಒತ್ತಡಗಳಿಗೆ ಸಿಕ್ಕಿದಂತೆ ಕಾಣುತ್ತದೆ...

ಕಾವ್ಯ ತಾನು ಹೇಳುತ್ತಿರುವ ಅನುಭವದ (ನಿಜತ್ವದ) ಬಗ್ಗೆ ಎಷ್ಟು ಹೆಚ್ಚು ಸಂದೇಹವಾದಿಯಾಗಿ, ಎಷ್ಟು ಹೆಚ್ಚು ಪದರಗಟ್ಟಿಕೊಂಡು (ಅಥವಾ ನಿಜವೇ, ನಿಜವೇ ಎಂದು ಮೈ ಜಿಗುಟಿಕೊಂಡು?), ರಚನೆಯಲ್ಲೂ ಎಷ್ಟು ಹೆಚ್ಚು ಜಟಿಲವಾಗುತ್ತದೋ; ಅಷ್ಟು ಆ ಕಾವ್ಯ ಹೆಚ್ಚು ಶ್ರೇಷ್ಠ ಎಂಬ ನಂಬಿಕೆ ಇಂದು ವಿಮರ್ಶಾ ತತ್ವವಾಗಿ ಪ್ರತಿಷ್ಠಾಪಿಸಲ್ಪಟ್ಟಿದೆ. ಈ ನಂಬಿಕೆ ಬದುಕು, ಅದನ್ನು ನೋಡುವವನ ನೆಲೆ, ದೃಷ್ಟಿಕೋನ ಮತ್ತು ಅವನ್ನು ನಿರ್ಧರಿಸುವ ಅವನ ವ್ಯಕ್ತಿತ್ವವನ್ನು ಕಟ್ಟಿರುವ ಜೀವನ ತತ್ವವನ್ನು ಅವಲಂಬಿಸಿ ತನ್ನ ಸ್ವರೂಪವನ್ನು ಬಿಚ್ಚಿಡುತ್ತದೆ ಎಂಬ ವ್ಯಕ್ತಿತ್ವ ಸತ್ವಗಳ ಬಹುತ್ವವನ್ನೇ ನಿರಾಕರಿಸುತ್ತದೆ. ಆಧುನಿಕ ದೃಷ್ಟಿಕೋನವೇ ಏಕೈಕ ಬದುಕಿನ ತತ್ವವಾಗಿ ಹೇರಲ್ಪಡುತ್ತಿದ್ದು, ಸರಳತೆ ಮತ್ತು ಮುಗ್ಧತೆಗಳು ಆಧುನಿಕ ಕಾವ್ಯ ಮೀಮಾಂಸೆಯಲ್ಲಿ ಮಿತಿಗಳ ಪಟ್ಟಿಯಲ್ಲಿ ಸೇರಿ ಹೋಗಿವೆ. ಇವು ಬದುಕಿನ ಮೌಲ್ಯಗಳು ಹೇಗೋ, ಕಾವ್ಯದ ಮೌಲ್ಯಗಳೂ ಆಗಬಲ್ಲವು ಎಂಬ ಅರಿವೇ ಮರೆಯಾಗಿದೆ. ಸಂಕೀರ್ಣತೆ, ಅದಕ್ಕೆ ತಕ್ಕುನಾದ ಜಟಿಲ ವಿನ್ಯಾಸದ ಶೋಧನೆಗಳಷ್ಟೇ ಕಾವ್ಯ ವಿಮರ್ಶೆಯ ಮಾನದಂಡಗಳಾಗಿಬಿಟ್ಟಿವೆ. ಸದ್ಯ ಇವು ಇನ್ನೂ ಕನ್ನಡ ಸಹೃದಯತೆಯ ಮಾನದಂಡಗಳಾಗಿಲ್ಲವಲ್ಲ ಎಂಬುದೇ ಸಮಾಧಾನ! ಹಾಗಾಗಿಯೇ ಈ ಹಿಂದೆ ಅವಜ್ಞೆಗೆ, ಒಮ್ಮೊಮ್ಮೆ ಅಪಹಾಸ್ಯಕ್ಕೂ ಈಡಾಗಿದ್ದ ಅನೇಕ ಹಿರಿಯ ಕವಿಗಳು (ಕುವೆಂಪು ಸೇರಿದಂತೆ!) ಈಗ ಪುನರನ್ವೇಷಿತರಾಗಿ ನಮ್ಮ ಮಧ್ಯೆ ಮತ್ತೆ ಜೀವಂತವಾಗಿ ಪ್ರಸ್ತುತಗೊಳ್ಳುತ್ತಿದ್ದಾರೆ. ಆದರೆ ದೊಡ್ಡವರ ಈ ಸೌಭಾಗ್ಯಕ್ಕೆ ಕಾವ್ಯೇತರ ಕಾರಣಗಳೇ ಹೆಚ್ಚು ಎನ್ನುವುದೂ ಅಷ್ಟೇ ಸತ್ಯ.

ಅಂದ ಮಾತ್ರಕ್ಕೆ ಕವಿ ಬರೆದದ್ದನ್ನೆಲ್ಲ ಹಾಗೇ ನಂಬಬೇಕು ಎಂದು ನಾನು ಹೇಳುತ್ತಿಲ್ಲ. ಕನಿಷ್ಟ ಒಂದು ಸಾವಿರ ವರ್ಷಗಳ ಕಾವ್ಯ ಸಂಪ್ರದಾಯದ ಚರಿತ್ರೆಯುಳ್ಳ ಕನ್ನಡ ಸಮಾಜದಲ್ಲಿ, ಯಾರಾದರೂ, ಅವರೆಷ್ಟೇ 'ದೊಡ್ಡವ'ರಾದರೂ, ನಂಬಬೇಕು ಎಂದು ಹೇಳಿದಾಕ್ಷಣ ಯಾರೂ ನಂಬುವುದೂ ಇಲ್ಲ. ಕವಿ ಹೇಳಿದ ಮಾತುಗಳಲ್ಲಿ, ಅವನ್ನು ಹೇಳಿದ ವಿನ್ಯಾಸದಲ್ಲಿ ಅವು ಪಡೆಯುವ ಹೊಸ ಅರ್ಥ ಪ್ರಕಾಶಗಳಲ್ಲಿ ಮೂಡುವ ಪ್ರಾಮಾಣಿಕತೆಯಷ್ಟೇ ಓದುಗನಲ್ಲಿ ನಂಬಿಕೆ ಹುಟ್ಟಿಸುವುದು. ಆದರೆ ಅದರ ಪರಿಶೀಲನೆ ಬಿಟ್ಟು, ಮಿಕ್ಕದ್ದನ್ನೆಲ್ಲ– ಅಲ್ಲಿ ಇರಲಾಗದ್ದು ಮತ್ತು ಇರಬೇಕಾಗಿಲ್ಲದುದನ್ನೆಲ್ಲ– ಹುಡುಕಿ ಕಾಣದೆ, ಅದರಿಂದ ದಣಿದ ತನ್ನ ಹತಾಶೆಯನ್ನೆಲ್ಲ ಕವಿಯ ಮೇಲೆ ವಿಮರ್ಶೆಯ ಹೆಸರಲ್ಲಿ ಪ್ರಯೋಗಿಸುವುದು, ವಿಮರ್ಶಕನ ಮೇಲೆ ಆಧುನಿಕತೆ ಹೊರೆಸಿರುವ ಅನಗತ್ಯ ಭಾರವಾಗಿದೆ. ಅದು ಗೊತ್ತಿಲ್ಲದೆ ಆತ ಅದನ್ನು ತನ್ನ ಕರ್ಮದಂತೆ ಮಾಡುತ್ತಲೇ ಇದ್ದಾನೆ.

ನಿಜ, ಕಾವ್ಯವೆಂದರೆ ಭಾಷೆಯ ಮೂಲಕ ಮಾಡುವ ಅನುಭವ ಶೋಧನೆಯೇ. ಆದರೆ ಆ ಶೋಧನೆ ಸದಾ ಸಂದೇಹವಾದಿಯಾಗಿ, ಆ ಮೂಲಕ ಸಲ್ಲದ 'ಸಂಕೀರ್ಣತೆ'ಯನ್ನು ತಾನೇ ಸೃಷ್ಟಿಸಿಕೊಳ್ಳುತ್ತಾ ಶಬ್ದ– ಸಕಲ್ಪನೆಗಳ ಚಕ್ರವ್ಯೂಹಕ್ಕೆ ಸಿಕ್ಕಿ ಬದುಕಿನ ಸಹಜ ರುಚಿಯನ್ನು ಕೆಡಿಸುವಂತಾಗಬಾರದು. ಸರಳ, ನೇರ ವರ್ಣನೆ, ನಿವೇದನೆ, ನಿರೂಪಣೆ ಹೀಗೆ ಹಲವು ಬಗೆಗಳಲ್ಲಿಯೂ ಕಾವ್ಯ, ಅಭಿವ್ಯಕ್ತಿಯ ಸಹಜ ಪ್ರಾಮಾಣಿಕತೆಯಿಂದಾಗಿಯೇ ತನ್ನ ಪರಿಣಾಮಶೀಲತೆಯನ್ನು ಕಂಡುಕೊಂಡು ಬಹುರೂಪಿಯಾಗಿರಬಲ್ಲುದು ಎಂಬ ಅರಿವಿಗೆ ಆಧುನಿಕ ಕನ್ನಡ ವಿಮರ್ಶೆ ತನ್ನನ್ನು ತಾನು ತೆರೆದುಕೊಳ್ಳಬೇಕಾಗಿದೆ. ಆ ಮೂಲಕ ಹಲವು ಬಗೆಯ ಕಾವ್ಯ ಸೌಂದರ್ಯವನ್ನು ಆನಂದಿಸುವ ಶಕ್ತಿಯನ್ನು ಮರಳಿ ಗಳಿಸಿಕೊಳ್ಳಬೇಕಿದೆ. ಕನ್ನಡ ಕಾವ್ಯ ಪರಂಪರೆಯ ಸತ್ವ ಸಾಗಿ ಬಂದಿರುವುದೇ ತನ್ನ ಕಥನಾತ್ಮಕತೆಯ ಮೂಲಕವೇ ಅಲ್ಲವೇ? ಸದಾ ಜಗಳಾಡುವ ದಂಪತಿಗಳದ್ದೇ ನಿಜವಾದ ದಾಪಂತ್ಯಾನುಭವ ಶೋಧನೆ; ಜಗಳಗಳಿಲ್ಲದ ದಂಪತಿಗಳದ್ದು ಹುಸಿ ದಾಂಪತ್ಯ ಎಂದು ಹೇಳಲಾಗುವುದೆ? 'ಕತ್ತಿ ಎರಗುವೆಡೆಯಲೆಲ್ಲ ಶೂನ್ಯ ಸೃಷ್ಟಿಸಿ ಪಾರಾಗು ಮಾರನಿಂದ' ಎಂಬ ಜೆನ್ ತಿಳುವಳಿಕೆ ಬಂದದ್ದು ಅನುಭವದ ಭಾಷಿಕ ಶೋಧನೆಯಿಂದಲ್ಲ. ಹಾಗಾಗಿ, ಆ ತಿಳುವಳಿಕೆ ಕಾವ್ಯದಲ್ಲಿ ಕಾಣುವುದೂ ಭಾಷೆಯ ಮೈಮಣಿತದಲ್ಲಲ್ಲ. ತನ್ನ ಸುಮ್ಮನಿರುವ ಸುಮ್ಮಾನದಿಂದ.

ಸವಿತಾ ಕಾವ್ಯವನ್ನು ನಾನು ಹೀಗೆ 'ಅನಾಧುನಿಕ'ವಾಗಿ ನೋಡಿ ಮೆಚ್ಚಿದ್ದೇನೆ. ಹಲವು ಕವನಗಳನ್ನು ನಾನು ಮೆಚ್ಚದೆಯೂ ಇದ್ದೇನೆ. ಅದಕ್ಕೆ ಕಾರಣವೂ ಅದೇ. ಸವಿತಾ ಮೊದಲಲ್ಲಿ ಬರೆದ ಪ್ರೇಮ ಕವನಗಳು, ನಂತರ ಬರೆದ ತಾತ್ವಿಕ ಕವನಗಳು ಮತ್ತು ಈಗ ಬರೆಯುತ್ತಿರುವ ಹೊಸ ಕಾಣ್ಕೆಯ ಕವನಗಳು ಎಲ್ಲವೂ ಅವಳ ವ್ಯಕ್ತಿತ್ವವನ್ನು ರೂಪಿಸಿದ, ರೂಪಿಸುತ್ತಿರುವ ಸತ್ವ ಮತ್ತು ಭಾವ ವಿನ್ಯಾಸಗಳನ್ನು ಅವಲಂಬಿಸಿಯೇ ರಚಿತವಾಗಿವೆ. ಬದುಕಿನಲ್ಲಿ ಈ ವ್ಯಕ್ತಿತ್ವ ನಿರ್ಮಾಣದ ಹಾದಿಯಲ್ಲಿ ಎದುರಾದ ಅನುಭವಗಳಂತೆಯೇ, ಪರಿಣಾಮದಲ್ಲಿ ಕೆಲವು ಗೆದ್ದಿವೆ, ಕೆಲವು ಸೋತಿವೆ. ಆದರೆ ಸೋಲುಗಳ ಮಧ್ಯೆಯೇ ಗೆಲುವೆಂಬುದು ಅರಿವಿಗೆ ಬರುವುದು; ಅಂತಹ ಅರಿವೇ ನಮ್ಮನ್ನು ಮಾಗಿಸುವುದು, ಬದುಕಿನ ನಿಜವಾದ ಸೌಂದರ್ಯವನ್ನು ಕಟ್ಟುವುದು ಎಂದು ನಂಬಿ 'ಸುಮ್ಮನೆ' ಬರೆಯುತ್ತಿರುವ ಸವಿತಾಳ ಕಾವ್ಯ, ನಮ್ಮ ಆಧುನಿಕ ವಿಮರ್ಶೆಯನ್ನು ಅದರ ಕಲಿತ ಪಾಂಡಿತ್ಯದ ಜಡತೆಯಿಂದ ಎಚ್ಚರಿಸಬಲ್ಲುದಾಗಿದೆ.

ಇದನ್ನು ನನ್ನ ಅನುಭವದ ಆಧಾರದ ಮೇಲೇ ಇಲ್ಲಿ ಹೇಳುತ್ತಿರುವೆ. ನನಗೆ ಈ ಎಚ್ಚರ ಪೂರ್ಣವಾಗಿ ಅರಿವಿಗೆ ಬಂದದ್ದು, ಅನುಭವದ 'ಶೋಧನೆ'ಯಲ್ಲಿ ಮುಳುಗಿದ್ದರೆ ಕಳೆದುಹೋಗಬಹುದಾಗಿದ್ದ; ಆದರೆ ಹಾಗೆ ಕಳೆದು ಹೋಗಲು ನಿರಾಕರಿಸಿ ಸುಮ್ಮನೆ ತನ್ನ ಅನುಭವವನ್ನು ಸರಳವಾಗಿ, ನೇರವಾಗಿ, ಪ್ರಾಮಾಣಿಕವಾಗಿ ಹೇಳುತ್ತಾ ಹೋದ 'ಜಾತ್ರೆಯಲ್ಲಿ ಶಿವ' ಕವನವನ್ನು ಮೊದಲ ಬಾರಿಗೆ ಓದಿದಾಗ ಅಲ್ಲ; ಕೇಳಿದಾಗ, ಮತ್ತೆ ಮತ್ತೆ ಕೇಳುತ್ತಾ ಅದರ ಸಾಲುಗಳು ನನ್ನೊಳಗೆ ಅನುರಣಿಸುತ್ತಾ ನನ್ನನ್ನು ಎಲ್ಲೆಲ್ಲಿಗೋ ಕರೆದುಕೊಂಡು ಹೋಗತೊಡಗಿದಾಗ. ಸವಿತಾ ಕಾವ್ಯವನ್ನು ಕಟ್ಟಿರುವ ಸರಳತೆ ಮತ್ತು ಮುಗ್ಧತೆಗಳ ಪರಿಣಾಮಶೀಲತೆಯ ಅಪ್ರತಿಮ ಸೌಂದರ್ಯ ರೂಪವಿದು. ಹಾಗೇ ಇದು, ಕಾವ್ಯ ತತ್ವಗಳ,

ಜ್ಞಾನದ ನಿರ್ದೇಶನಗಳನ್ನೆ ಸವಿತಾ ತನಗೊಲ್ಲವೆಂದು ನಿರ್ಲಕ್ಷಿಸಿ ಸುಮ್ಮನೆ ಬರೆಯುತ್ತಾ ಹೋಗಿ ತಲುಪಿರುವ, ತನ್ನ ಓದುಗರನ್ನೂ ತಲುಪಿಸಿರುವ ವಿಶಿಷ್ಟ ಕಾವ್ಯಾನುಭವದ ಸತ್ವ ದರ್ಶನವೂ ಹೌದು. ಸಹಜವಾಗಿಯೇ ಇದನ್ನು ಸುಮ್ಮನೆ ಓದಿದವರು ಮೆಚ್ಚಿದ್ದಾರೆ. ಆದರೆ ಸಹಜ ಆಯ್ಕೆ ಮತ್ತು ಸುಲಭ ಆಯ್ಕೆಗಳ ನಡುವಣ ವ್ಯತ್ಯಾಸಗಳ ಪರಿವೆ ಕಳಕೊಂಡ ಪರಿಣಾಮವಾಗಿ ಸುಮ್ಮನೆ ಓದಲಾಗದವರು ಕಷ್ಟಗಳಿಗೆ ಸಿಕ್ಕಿ ಹಾಕಿಕೊಂಡು ಬಳಲಿದ್ದಾರೆ.

ಇರಲಿ. 'ಜಾತ್ರೆಯಲ್ಲಿ ಶಿವ' ಮತ್ತು ಅಂತಹ 'ದರುಶನ'ದ ಪದ್ಯಕ್ಕೆ ದಾರಿ ಮಾಡಿಕೊಟ್ಟ ಇನ್ನಿತರ 'ಸರಳ, ನೇರ, ಮುಗ್ಧ' ಪದ್ಯಗಳು ಹುಟ್ಟಿಸಿದ ಈ ಎಚ್ಚರದಲ್ಲೇ, ಈ ವಿಮರ್ಶಾ ಎಚ್ಚರವನ್ನು ಉದಾಹರಣೆಗಳ ಮೂಲಕ ವಿಷದಪಡಿಸಲೆಂದೇ ಅವಳ ಈವರೆಗಿನ ಐದು ಕವನ ಸಂಕಲನಗಳಿಂದ ಈ ಐವತ್ತು ಕವನಗಳನ್ನು ಆಯ್ದು ಕೊಟ್ಟಿದ್ದೇನೆ. ಹಾಗೇ ಈ ಪದ್ಯಗಳು ಈ ಸರಳ, ನೇರ, ಮುಗ್ಧ ಎಂಬ ಶಬ್ದಗಳ ಅರ್ಥ ಛಾಯೆಗಳ ವ್ಯಾಪ್ತಿಯನ್ನು ವಿಸ್ತರಿಸಬಲ್ಲವಾಗಿವೆ ಎಂದು ನಂಬಿದ್ದೇನೆ. ಈ ಐವತ್ತು ಕವನಗಳನ್ನು ಆಯುವಾಗ ಇಂತಹುದೇ ಹಲವಾರು ಕವನಗಳನ್ನು ಕೈಬಿಡಬೇಕಾದ ನೋವನ್ನೂ ಅನುಭವಿಸಿದ್ದೇನೆ. ಅದೇನೇ ಇರಲಿ, ಇವು ಸವಿತಾಳ ಕಾವ್ಯದ ಸತ್ವ ಮತ್ತು ಸೌಂದರ್ಯಗಳ ವಿಶಿಷ್ಟತೆಯನ್ನು ಪ್ರತಿಬಿಂಬಿಸುವ ಮೂಲಕ ನನ್ನ ಈ ಮೇಲಿನ ಮಾತುಗಳನ್ನು ಪುಷ್ಟೀಕರಿಸುತ್ತವೆ ಎಂದು ನಂಬಿದ್ದೇನೆ. ಇಷ್ಟು ಬಿಟ್ಟು ಈ ಕವನಗಳ ಬಗ್ಗೆ ನಾನು ಏನೂ ಹೇಳುವುದಿಲ್ಲ. ಹೇಳಿದರೆ ಅವುಗಳಿಗೆ, ಅವುಗಳ ಸೂಕ್ಷ್ಮ ಬಂಧ, ಸಮತೋಲನಗಳಿಗೆ ಅನ್ಯಾಯ ಮಾಡಿದಂತೆ.

ಈ ಮಾತನ್ನು ಮೀರಿಯೂ ಒಂದು ಕಡೆಯ ಮಾತೆಂದರೆ, ಈ ಕವನಗಳು ಅವಳು ನಡೆದು ಬಂದ ಕಾವ್ಯದಾರಿಯ ಹೆಜ್ಜೆ ಗುರುತುಗಳನ್ನು ಪರಿಚಯಿಸುತ್ತವೆ. ಅದು ನಿಮಗೆ ಹಳ್ಳಿಯ ದಾರಿಯ ಹಾಗೆ ಕಂಡರೆ ನನ್ನ ಆಯ್ಕೆ ಸಾರ್ಥಕ.

ಇನ್ನು ಮುಂದಿನ ಮಾತೇನಿದ್ದರೂ, ನಿಮ್ಮದೇ.

(ಸವಿತಾ ನಾಗಭೂಷಣರ ಆಯ್ದ ಐವತ್ತು ಪದ್ಯಗಳ ಸಂಗ್ರಹ 'ಹಳ್ಳಿಯ ದಾರಿ'ಗೆ ಬರೆದ ಸಂಪಾದಕನ ಮಾತುಗಳು– ೨೦೧೧ ಏಪ್ರಿಲ್)

◇◇◇

೪. ಕಾದಂಬರಿಕಾರ ಗೆಳೆಯರೊಬ್ಬರಿಗೊಂದು ಪತ್ರ

ದಿನಾಂಕ: ೨೫.೧೧.೨೦೦೯

ಪ್ರಿಯಶ್ರೀ ________ ಅವರೇ,

ನೀವು ವಿಶ್ವಾಸಪೂರ್ವಕವಾಗಿ ಕಳಿಸಿದ ನಿಮ್ಮ 'ಅಜ್ಞಾತನೊಬ್ಬನ ಆತ್ಮ ಚರಿತ್ರೆ' ಎಂಬ ಕಾದಂಬರಿಯ ಹಸ್ತಪ್ರತಿಯನ್ನು ಕಳೆದೆರಡು ದಿನಗಳ ಅನಾರೋಗ್ಯದ ನಡುವೆಯೂ ಓದಿ ಮುಗಿಸಿದೆ.

ಈ ಕಾದಂಬರಿಯನ್ನು ನೀವು ಯಾವ ಉದ್ದೇಶ/ಒತ್ತಡದಿಂಥ ಬರೆದಿರುವಿರೋ ತಿಳಿಯದು. ಈ ಬರಹದಲ್ಲಿ ಸೂಚಿತವಾಗಿರುವ ಕಾಲಮಾನದ ಜೀವನ ಚಿತ್ರವೊಂದನ್ನು ಜನಸಾಮಾನ್ಯರ ದೃಷ್ಟಿಯಿಂದ ನೀಡುವುದೇ ನಿಮ್ಮ ಉದ್ದೇಶವಾಗಿದ್ದರೆ, ಅದರಲ್ಲಿ ನೀವು ಬಹುಪಾಲು ಯಶಸ್ವಿಯಾಗಿದ್ದೀರಿ ಎಂದು ಹೇಳಬಹುದು. ಇದಕ್ಕಾಗಿ ನೀವು (ಬಹುಶಃ ಮಾಸ್ತಿ ಮಾದರಿಯನ್ನುಸರಿಸಿ) ಬಳಸಿರುವ ತಂತ್ರ ಹಾಗೂ ಅದಕ್ಕೆ ಹೊಂದಿಕೊಂಡಂತೆ ಬಳಸಿರುವ ಹಳೇ ದಫ್ತರಿ ಭಾಷೆಯ ಮೇಲಿನ ನಿಮ್ಮ ಹಿಡಿತ ಮೆಚ್ಚತಕ್ಕದ್ದೇ ಆಗಿದೆ. ಅಲ್ಲದೆ, ಈ ತಂತ್ರ ಮತ್ತು ಭಾಷೆಗೆ ಆಧಾರವಾದ ನಿಮ್ಮ ವ್ಯಾಪಕ ಓದು, ಸಂಚಾರ, ಜನ ಸಂಪರ್ಕ ಮತ್ತು ಅನುಭವ ಸಂಪತ್ತು ಇಲ್ಲಿ ಎದ್ದು ಕಾಣುವಂತಿದೆ. ಇದೆಲ್ಲದಕ್ಕಾಗಿ ನಿಮಗೆ ಅಭಿನಂದನೆಗಳು!

ಇದರ ಜೊತೆಗೇ ಈ ಬರಹದ ಬಗ್ಗೆ ನನ್ನ ಕೆಲವು ಮೂಲಭೂತ ಪ್ರಶ್ನೆ ಮತ್ತು ಸಂದೇಹಗಳು ಇಂತಿವೆ.

೧. ಈ ಬರಹದ ಉದ್ದೇಶವೇನೋ ಸರಿ. ಆದರೆ ಈ ಉದ್ದೇಶದ ಹಿಂದಿನ ಒತ್ತಡ ಯಾವ ಬಗೆಯದು? ಜೀವನ ಚಿತ್ರ ಕೊಡುವುದಾದರೂ ಯಾವ ಪುರುಷಾರ್ಥಕ್ಕಾಗಿ?

೨. ಇಡೀ ಬರಹ ದೇಸಪ್ಪನೆಂಬ ಬೆನ್ನೆಲುಬಿಲ್ಲದ ಅಡ್ಡನಾಡಿಯೊಬ್ಬನ ಸುಲಭ ಬಡಬಡಿಕೆಯಂತಿದ್ದು, ಅದರಿಂದ ಯಾವುದೇ ಜೀವನ ದರ್ಶನವಿರಲಿ, ಜೀವನ ದೃಷ್ಟಿಯೂ ಮೂಡುವುದಿಲ್ಲ.

೩. ಹೇಗೆಂದರೆ ಹಾಗೆ ಹೊರಳಬಲ್ಲ ದೇಸಪ್ಪನಿಗೆ ಒಂದು ವ್ಯಕ್ತಿತ್ವವೇ ಮೂಡುವುದಿಲ್ಲವಾದ್ದರಿಂದ, ಇಡೀ ಬರಹಕ್ಕೆ ಒಂದು ವ್ಯಕ್ತಿತ್ವವಿಲ್ಲದಾಗಿದೆ. ಹೀಗಾಗಿ ಇದಕ್ಕೊಂದು (ಕಾದಂಬರಿ) ರೂಪವೂ ಸರಿಯಾಗಿ ಪ್ರಾಪ್ತಿಯಾಗದಾಗಿದೆ.

೪. ಇಲ್ಲಿ ನಿಮ್ಮ ಜಾನಪದ ಜ್ಞಾನಸಿರಿ ಅನುಚಿತ ರೀತಿಯಲ್ಲಿ ಮತ್ತು ಪ್ರಮಾಣದಲ್ಲಿ ಚೆಲ್ಲಾಡಿ ಹೋಗಿ, ಅದು ಹಳೇ ದಫ್ತರಿ ಭಾಷೆಯ ಜೊತೆ ಸೇರಿ ನಿರೂಪಣೆಯ ದೃಷ್ಟಿಕೇಂದ್ರವನ್ನೇ ವಿಚಲಿತಗೊಳಿಸಿದೆ.

೫. ನಿರೂಪಣಾ ತಂತ್ರವೂ ಅರ್ಧ ಭಾಗದ ನಂತರ ಗೋಜಲು ಗೋಜಲಾಗತೊಡಗಿ, ನಿರೂಪಕ/ಕಿಗೆ ವಾಸ್ತವವಾಗಿ ಸಾಧ್ಯವಾಗದ ಸಂದರ್ಭ ವರ್ಣನೆಗಳೂ ಸೇರಿ, ಅದರ ವಿಶ್ವಾಸಾರ್ಹತೆ ಮುಕ್ಕಾಗತೊಡಗುತ್ತದೆ.

೬. ಆರಂಭದಲ್ಲಿಯೇ, ಹುಲಿ ಹಿಡಿಯುವ ತಯಾರಿ ವರ್ಣನೆ ಸವಿವರವಾಗಿ ಕುತೂಹಲ ಹುಟ್ಟಿಸಿ, ನಂತರ ನಿಜವಾಗಿ ಹುಲಿ ಹಿಡಿಯುವ ಸಂದರ್ಭದ ಒಂದು ಸಾಲೂ ವರ್ಣನೆ ಇಲ್ಲದಾಗಿ, ಅಲ್ಲೇ ಕಥಾ ನಿರೂಪಣಾ ಶಕ್ತಿ ಅನುಮಾನಾಸ್ಪದವೆನ್ನಿಸತೊಡಗುತ್ತದೆ.

೭. ದೇಸಪ್ಪ ಪೂರ್ತಿ ಬರಹಗಾರನ ಕೈಗೊಂಬೆಯಾಗಿದ್ದು, ಸ್ವಂತ ಬೆಳವಣಿಗೆ (ಒಳತೋಟಿ) ಇಲ್ಲದೆ ಬರಹ ಪೂರ್ತಿ ವರ್ಣನಾತ್ಮಕತೆಯನ್ನಷ್ಟೇ ನಂಬಿ ನಿಜವಾಗಿಯೂ ಸೃಜನಶೀಲವಾಗದೇ ಹೋಗಿದೆ.

೮. ಬರಹ ಪರೋಕ್ಷವಾಗಿಯಾದರೂ ಹೈದರ್– ಟಿಪ್ಪು ಆಳ್ವಿಕೆಗಳ ಬಗ್ಗೆ ಇರುವ ಜನಪ್ರಿಯವಾದ ಜನಪರ ಆಡಳಿತ ಚಿತ್ರವನ್ನು ಭಂಗಗೊಳಿಸುವಂತಿದೆ. ಇದಕ್ಕೆ ಚಾರಿತ್ರಿಕ ಸಾಕ್ಷ್ಯಗಳಿದ್ದಲ್ಲಿ, ಹಾಗೆ ಮಂಡಿತವಾಗುವುದು ತಪ್ಪೇನಲ್ಲ. ಆದರೆ ಈ ಬರಹದಲ್ಲಿ ಅಂತಹ ಅಥೆಂಟಿಕ್ ಸಾಕ್ಷ್ಯಗಳ ಸೂಚನೆಗಳೇನೂ ದೊರೆಯುವುದಿಲ್ಲ. ಹಾಗಾಗಿ ಈ ಬರಹ ಉದ್ದೇಶಪೂರ್ವಕ ಅಪಪ್ರಚಾರದ ಆಪಾದನೆಗೂ ಸಿಗುವ ಅಪಾಯವಿದೆ!

ಈ ನನ್ನ ಅಭಿಪ್ರಾಯಗಳು ಕಟು ಎನಿಸಿದರೆ, ಕ್ಷಮಿಸಿ ಇದನ್ನು ಹರಿದು ಹಾಕಿ ಬಿಡಿ. ಪುಸ್ತಕವನ್ನು ಪ್ರಕಟಿಸಿ. ನನ್ನದೇನೂ ಅಭ್ಯಂತರವಿಲ್ಲ. ಆ ಪುಸ್ತಕಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದರೂ ನನ್ನ ಆಕ್ಷೇಪಣೆ ಇರುವುದಿಲ್ಲ! ಆದರೆ ಸ್ನೇಹ ಇರಲಿ.

ವಂದನೆಗಳೊಂದಿಗೆ

ವಿಶ್ವಾಸದ

ಡಿ.ಎಸ್. ನಾಗಭೂಷಣ

◇◇◇

೫. 'ಗಾಂಧಿ ಬಂದ': ಅನಗತ್ಯ ವಿವಾದ

ಮಾನ್ಯರೇ,

ಕನ್ನಡದ ಪ್ರತಿಭಾವಂತ ಲೇಖಕಿಯರಲ್ಲೊಬ್ಬರಾದ ಎಚ್. ನಾಗವೇಣಿಯವರು 'ಸಂಗತ'ದಲ್ಲಿ (ಪ್ರವಾ: ೨೯.೧೧.೨೦೧೧) ಬರೆದಿರುವ ಪತ್ರ ಓದಿ ಗಾಬರಿಯಾಗಿ, ನಾವು ವಿಷಾದದಿಂದ ಈ ಪತ್ರ ಬರೆಯುತ್ತಿದ್ದೇವೆ.

ಮಂಗಳೂರು ವಿಶ್ವವಿದ್ಯಾಲಯದ ಪದವಿ ತರಗತಿಗಳಿಗೆ ತನ್ನ ಸಂಕ್ಷಿಪ್ತ ರೂಪದಲ್ಲಿ ಪಠ್ಯವಾಗಿರುವ ನಾಗವೇಣಿಯವ ಕಾದಂಬರಿ 'ಗಾಂಧಿ ಬಂದ' ಅದು ಪ್ರಕಟವಾದ ಹನ್ನೆರಡು ವರ್ಷಗಳ ಹಿಂದಿನಿಂದಲೂ, ಕನ್ನಡದ ಶ್ರೇಷ್ಠ ಕಾದಂಬರಿಗಳಲ್ಲಿ ಒಂದು ಎಂದು ಸಾಹಿತ್ಯ ವಿಮರ್ಶಕರಿಂದಲೂ, ಸಾಮಾನ್ಯ ಓದುಗರಿಂದಲೂ ಮಾನ್ಯತೆ ಪಡೆಯುತ್ತಾ ಬಂದಿದೆ. ಅದು ಅನೇಕ ಪ್ರಶಸ್ತಿಗಳ ಗೌರವವನ್ನೂ, ಈವರಗೆ ನಾಲ್ಕು ಮುದ್ರಣಗಳನ್ನೂ ಕಂಡಿರುವುದಲ್ಲದೆ, ನಾಟಕ ರೂಪದಲ್ಲಿ ಕನ್ನಡ ನಾಡಿನಾದ್ಯಂತ ಜನಮನ್ನಣೆ ಗಳಿಸಿ ಪ್ರದರ್ಶಿತವಾಗುತ್ತಿರುವುದೇ ಇದಕ್ಕೆ ಸಾಕ್ಷಿಯಾಗಿದೆ. ಪರಿಸ್ಥಿತಿ ಹೀಗಿರುವಾಗ, ಅದು ಕಾಲೇಜು ವಿದ್ಯಾರ್ಥಿಗಳಿಗೆ ಪಠ್ಯವಾದೊಡನೆ ಅದರ ವಿರುದ್ಧ ಜಾತಿ ಹೆಸರಿನಲ್ಲಿ ಗುಲ್ಲೆದ್ದಿರುವುದು ಅನೇಕ ಸಂಶಯಗಳಿಗೆ ಎಡೆಮಾಡಿಕೊಟ್ಟಿದೆ.

ಈ ಕಾದಂಬರಿ ಬಹುಶಃ ಕನ್ನಡದ ಯಾವ ಸೃಜನಶೀಲ ಕೃತಿಯೂ ಕಟ್ಟಿಕೊಡದಷ್ಟು ಸೂಕ್ಷ್ಮವಾಗಿ, ಸ್ಪಂದನಶೀಲವಾಗಿ ಮತ್ತು ಸಮಗ್ರವಾಗಿ ಗಾಂಧಿ ವ್ಯಕ್ತಿತ್ವವನ್ನು ಕಟ್ಟಿಕೊಡುತ್ತದೆ. ಗಾಂಧಿ ಹೇಗೆ ಸಮಾಜದ ಕೆಳ ವರ್ಗಗಳಲ್ಲಿ ಹೊಸ ಸಂಚಲನವನ್ನುಂಟು ಮಾಡಿ, ಅವರ ಆತ್ಮವಿಶ್ವಾಸವನ್ನು ಹೆಚ್ಚಿಸಿ ಅವುಗಳನ್ನು ಸಮಾನತೆಯೆಡೆಗೆ ತುಡಿಯುವ ಶಕ್ತಿಗಳನ್ನಾಗಿ ಪರಿವರ್ತಿಸುತ್ತಾರೆ ಎಂಬ ಆರ್ದ್ರ ಚಿತ್ರಣ ಈ ಕಾದಂಬರಿಯಲ್ಲಿದೆ. ಈ ಚಿತ್ರಣದ ಭಾಗವಾಗಿಯೇ, ಮುಖ್ಯವಾಗಿ ಮೇಲ್ಜಾತಿಗಳಿಗೇ ಸೇರಿದ ಗಾಂಧಿವಾದಿಗಳು ಜಾತಿ ಪದ್ಧತಿಯ ಅಸಂಗತೆಯನ್ನು ಎತ್ತಿ ಹಿಡಿಯಲು ಸಹಭೋಜನದ ಪ್ರಯತ್ನ ಮಾಡಿ, ಸಂಪ್ರದಾಯವಾದಿ ಬ್ರಾಹ್ಮಣರ ಮತ್ತು ಅಸ್ಪೃಶ್ಯರೂ ಸೇರಿದಂತೆ ಸ್ವತಃ ಕೆಳಜಾತಿಗಳಲ್ಲಿರುವ ಜಾತಿ ಬೇಧ-ಭಾವಗಳ ಕಾರಣದಿಂದಾಗಿಯೇ ಸೋಲುತ್ತಾರೆ ಎಂಬುದನ್ನು ಲೇಖಕಿ ಆ ಕಾಲದ ಮಾತಿನ ರೀತಿ-ರಿವಾಜುಗಳ ಮೂಲಕ ಸ್ವಾರಸ್ಯಕರವಾಗಿ ನಿರೂಪಿಸುತ್ತಾರೆ. ಹಾಗೆ ನೋಡಿದರೆ ಇದು ಕಾದಂಬರಿಯ ಬಹು ಮುಖ್ಯ ಭಾಗಗಳಲ್ಲಿ ಒಂದು.

ಈ ಸಂದರ್ಭದಲ್ಲಿಯೇ, ಈ ಕಾದಂಬರಿಯ ವಿರುದ್ಧ ಜಾತಿ ನಿಂದನೆಯ ಆರೋಪ ಹೊರಿಸಿರುವ ವಿಶ್ವಕರ್ಮರ ಪ್ರಸ್ತಾಪ ಬರುವುದು. ಇದರಲ್ಲಿ ತಮ್ಮನ್ನು 'ಆಚಾರಿಗಳೆಂದು

ಸಂಬೋಧಿಸಿ, ಅಬ್ರಾಹ್ಮಣ ಜಾತಿಗಳೊಂದಿಗೆ ಸೇರಿಸಿ ಚಿತ್ರಿಸಿ ತಮ್ಮ ಸಾಮಾಜಿಕ ಪ್ರತಿಷ್ಠೆಗೆ ಕುಂದುಂಟು ಮಾಡಲಾಗಿದೆ' ಎಂಬುದು ಅವರ ನೋವು. ಆದರೆ, ಈ ಹಿಂದೆ ಇರಲಿ; ಇಂದೂ ಹಲವು ಸ್ತರಗಳಿಂದ ಕೂಡಿದ ವಿಶ್ವಕರ್ಮರನ್ನು ಸಮಾಜ ಅವರ ವೃತ್ತಿ ಹಿನ್ನೆಲೆಯಲ್ಲಿ 'ಆಚಾರಿ'ಗಳೆಂದೇ ಸಾಮಾನ್ಯವಾಗಿ ಗುರುತಿಸುವುದು. ಅದನ್ನೇನೂ ಯಾರೂ ಅವಮಾನಕಾರಿ ಸಂಬೋಧನೆಯ ಅರಿವಿನಲ್ಲಿ ಮಾಡುವುದಿಲ್ಲ. ಈಗ ವಿಶ್ವಕರ್ಮರು ಬಹುಪಾಲು ಮಧ್ಯಮ ಜಾತಿಗಳಂತೆ ತಮ್ಮನ್ನು ಸಾಂಸ್ಕೃತಿಕವಾಗಿ ಮೇಲ್‌ಸ್ತರದಲ್ಲಿ ಗುರುತಿಸಿಕೊಳ್ಳಲು ಹಳೆಯ ಪುರಾಣ ಮತ್ತು ಕೋರ್ಟು ತೀರ್ಪುಗಳನ್ನು ಹುಡುಕಿ ತೆಗೆದು, ತಮ್ಮನ್ನು ತಾವು ಬ್ರಾಹ್ಮಣರೆಂದು (ಕೆಲವೆಡೆ ಬ್ರಾಹ್ಮಣರಿಗಿಂತ ಶ್ರೇಷ್ಠರೆಂದು) ಕರೆದುಕೊಳ್ಳಲು ಪ್ರಯತ್ನಿಸುತ್ತಿರುವರಾದರೂ, ಅದಕ್ಕೆ ಸಾರ್ವತ್ರಿಕ ಸಾಮಾಜಿಕ ಮಾನ್ಯತೆ ಸಿಕ್ಕಿಲ್ಲ. ಇವರು ಹೇಳುವಂತಹ ಶ್ರೇಣೀಕೃತ ಜಾತಿ ಪದ್ಧತಿಯನ್ನು ತನ್ನ ಹೃದಯ ಭಾಗವನ್ನಾಗಿ ಮಾಡಿಕೊಂಡಿರುವ ಹಿಂದೂ ಸಂಸ್ಕೃತಿಯ ಯಾವ ಸಾರ್ವತ್ರಿಕ ವಿಧಿ– ಆಚರಣೆಗಳಲ್ಲೂ ಇವರನ್ನು ಬ್ರಾಹ್ಮಣರ ಅಕ್ಕ ಪಕ್ಕ ಕೂಡಾ ಸುಳಿಯಗೊಡುವುದಿಲ್ಲ. ಇದನ್ನು ಕಲ್ಲು, ಮಣ್ಣು, ಮರ, ಲೋಹ ಇತ್ಯಾದಿ ಪ್ರಾಕೃತಿಕ ಸಂಪನ್ಮೂಲಗಳೊಡನೆ ಒಡನಾಡುತ್ತಾ ದುಡಿಯುವ ವರ್ಗವೆನಿಸಿರುವ ವಿಶ್ವಕರ್ಮ ಸಮಾಜದ ಚಿಂತನಶೀಲರು– ವಿವೇಕಿಗಳು ದಯವಿಟ್ಟು ಗಮನಿಸಬೇಕು. ಹಾಗೂ ಬ್ರಾಹ್ಮಣ ಜಾತಿಯೊಂದಿಗೆ ಗುರುತಿಸಿಕೊಳ್ಳಲು ಹಪಹಪಿಸುತ್ತಿರುವ ಈ ಸಮುದಾಯದ ನಾಯಕರುಗಳಿಗೆ ಇದರಲ್ಲಡಗಿರುವ ಆತ್ಮವಂಚನೆಯನ್ನೂ, ಅದರ ದೂರ ಪರಿಣಾಮಗಳನ್ನು ಬಿಡಿಸಿಹೇಳಬೇಕು.

ನಿಜ, ವಿಶ್ವಕರ್ಮರಲ್ಲಿ ಕೆಲವರಲ್ಲಿ ಜನಿವಾರ ಹಾಕಿಕೊಳ್ಳುವ ರೂಢಿಯಿದೆ. ಇದು ಕಾದಂಬರಿಯ ಸದರಿ ಸಂದರ್ಭದಲ್ಲೂ ಪ್ರಸ್ತಾಪಿತವಾಗುತ್ತದೆ. ಆದರೆ ಬಹುಪಾಲು ವಿಶ್ವಕರ್ಮರು ಇದನ್ನು ಒಂದು ಔಪಚಾರಿಕತೆಯೆಂಬಂತೆ ಮಾತ್ರ ಮದುವೆಯ ಸಂದರ್ಭದಲ್ಲಿ ಧರಿಸುತ್ತಾರೆ. ಬ್ರಾಹ್ಮಣರಂತೆ ಬಾಲ್ಯದಲ್ಲೇ ಪ್ರತ್ಯೇಕ ಆಚರಣೆಯಾಗಿ ಉಪನಯನ ನೆರವೇರಿಸುವ ರಿವಾಜು ಇಲ್ಲ. ಈಗ 'ಬ್ರಾಹ್ಮಣೀಕರಣ'ದ ಮೋಹ ಅರಂಭವಾದ ಕೆಲವರಲ್ಲಿ ಇದು ಆರಂಭವಾಗಿರಬಹುದು. ಹಾಗೇ ಇದು ಜಾತಿಪದ್ಧತಿಯು ರಾಜಕಾರಣಕ್ಕೆ ಅಪಾಯವುಂಟಾದಾಗ ಹಿಂದೂ ಪುರೋಹಿತಶಾಹಿಯು ತನ್ನ ಬೆಂಬಲಕ್ಕಾಗಿ ಕೆಲವು ಆಯ್ದ ಜಾತಿಗಳಿಗೆ ನೀಡಿದ ವಿಶೇಷ 'ಮಾನ್ಯತೆ'ಯ ಕುರುಹೂ ಆಗಿರಬಹುದು. ಅದನ್ನೇ ಈ ಜಾತಿಗಳು ತಮ್ಮ ಪಾಲಿನ ವರವೆಂದು ಬಾಚಿಕೊಂಡು ಸಂತೋಷಪಡುವಂತಾಗಿದ್ದರೆ, ಆ ಸಂತೋಷ ಕನಿಕರಕ್ಕೆ ಮಾತ್ರ ಅರ್ಹವಾಗುವಂತಹುದಾಗಿದೆ. ಏಕೆಂದರೆ ಈ ಜನಿವಾರದ ಅಧಿಕಾರದ 'ಮಾನ್ಯತೆ'ಯಿಂದ ತಾವು ಬ್ರಾಹ್ಮಣರ ಮಟ್ಟಕ್ಕೇ ಏರಿದ್ದರೆ, ನಮ್ಮ ರಾಜ್ಯದ ಮತ್ತು ಅಖಿಲ ಭಾರತ ಮಟ್ಟದ ಹಿಂದುಳಿದ ವರ್ಗಗಳ ಆಯೋಗಗಳ ಸಮೀಕ್ಷೆಗಳ ಪ್ರಕಾರ ಇವರು ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ಜಾತಿಗಳ ಪಟ್ಟಿಗೆ ಏಕೆ ಸೇರುತ್ತಿದ್ದರು?

ಹಾಗಾಗಿ ವಿಶ್ವಕರ್ಮರು ಹಿಂದೂ ಸಮಾಜದಲ್ಲಿ ಬ್ರಾಹ್ಮಣರ ಮಟ್ಟದಲ್ಲಿರುವವರು ಎಂದು ನಿಜವಾಗಿ ಮತ್ತು ಪ್ರಾಮಾಣಿಕವಾಗಿ ತಮ್ಮ ಪ್ರತಿಷ್ಠೆಯನ್ನು ಮೆರೆಯಬಯಸುವವರು ಮಾಡಬೇಕಾದ ಮೊದಲ ಕೆಲಸವೆಂದರೆ, ತಮ್ಮ ಜಾತಿಯ ಹೆಸರು ಹಿಂದುಳಿದ ವರ್ಗಗಳ ಪಟ್ಟಿಯಲ್ಲಿರುವುದು ಅವಮಾನವೆಂದು ಹೇಳಿ, ಅದರಿಂದ ತಮ್ಮ ಜಾತಿಯ ಹೆಸರನ್ನು ತೆಗೆಸಲು ಆಂದೋಲನವನ್ನು ಆರಂಭಿಸುವುದು. ಅದನ್ನು ಮಾಡಲು ಈ ಸಮಾಜದವರು ಸಿದ್ಧರಿರುವರೇ? ಈ ಸಮಾಜದ ಹಿತಚಿಂತಕರೂ, ಪ್ರಾಜ್ಞರೂ ಯೋಚಿಸಬೇಕು ಹಾಗೂ ತಮ್ಮ ಸಾಮಾಜಿಕ ಮತ್ತು ಸಾಂಸ್ಕೃತಿಕ ಮುಕ್ತಿ ನಿಜವಾಗಿ ಇರುವುದು, ಇತರ ಬ್ರಾಹ್ಮಣೇತರ ಜಾತಿಗಳ ಜೊತೆಯ ಸಾಮಾಜಿಕ ನ್ಯಾಯದ ಹೋರಾಟದಲ್ಲಿ ಎಂಬುದನ್ನು ತಮ್ಮ ಸಮಾಜದ ಸಾಮಾನ್ಯ ಸದಸ್ಯರಿಗೆ ಮನವರಿಕೆ ಮಾಡಿಕೊಡಬೇಕು. ಆಗ ಮೂಲತಃ ಕಲಾವಿದ ಮನಸ್ಸಿನವರಾದ ವಿಶ್ವಕರ್ಮರು ಒಂದು ಕಲಾಕೃತಿಯನ್ನು ಅರ್ಥ ಮಾಡಿಕೊಳ್ಳುವ ನೆಲೆ ಮತ್ತು ಬಗೆಗಳನ್ನು ಅರಿಯುವ ಸಾಮರ್ಥ್ಯವನ್ನು ಮರಳಿ ಪಡೆಯುವರು. ಅದರ ಪರಿಣಾಮವಾಗಿ 'ಗಾಂಧಿ ಬಂದ' ಕಾದಂಬರಿ ತಮಗೆ ಅವಮಾನ ಮಾಡಿಲ್ಲ; ಬದಲಿಗೆ ಕೆಲವರ ಹುಸಿ ಪ್ರತಿಷ್ಠೆಯ ಹಪಾಹಪಿಯಲ್ಲಿ ಮಸುಕಾಗಿದ್ದ ತಮ್ಮ ಸಾಮಾಜಿಕ ಸ್ಥಾನಮಾನದ ಅರಿವನ್ನು ಮರಳಿ ಗಳಿಸಿಕೊಟ್ಟಿದೆ ಮತ್ತು ತಮ್ಮ ಸಾಮಾಜಿಕ ಜವಾಬ್ದಾರಿಯನ್ನು ಹೆಚ್ಚಿಸಿದೆ ಎಂಬುದು ಗೊತ್ತಾಗುತ್ತದೆ.

ಈಗ ಬ್ರಾಹ್ಮಣಶಾಹಿಯ ಜೊತೆ ಸೇರಿರುವ ಈ ಕೆಲವು ವಿಶ್ವಕರ್ಮರ ಭಾಷೆ ಮತ್ತು ಸಂಸ್ಕೃತಿ ಎಂತಹ ಅವನತಿಗೆ ಈಡಾಗಿದೆ ಎಂಬುದು ದ.ಕ.ದ ಈ ಜಾತಿ ಸಮಾಜದವರು ನಾಗವೇಣಿ ಅವರಿಗೆ ನೀಡಿರುವ ಕಾನೂನು ನೋಟೀಸಿನಲ್ಲಿ, ಅದನ್ನು ಉದ್ದೇಶಿಸಿರುವುದು ಓರ್ವ ಮಹಿಳೆಗೆ ಎಂಬ ಪರಿವೆಯೇ ಇಲ್ಲದೆ ಬಳಸಿರುವ ಭಾಷೆ ಸಾಬೀತುಪಡಿಸುತ್ತದೆ. ಇನ್ನು ಹೆಚ್ಚು ಕಾಲ ಈ ಸಹವಾಸ ಮುಂದುವರೆದರೆ, ಕಾರ್ಕಳದ ಶಿವಳ್ಳಿ ಬ್ರಾಹ್ಮಣ ಪರಿಷತ್‌ನವರು ಇದೇ ಸಂಬಂಧವಾಗಿ ಮಂಗಳೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವ ದೂರಿನಲ್ಲಿ ಉಲ್ಲೇಖಿತವಾಗಿರುವ ಬ್ರಾಹ್ಮಣ ಶಾಪದ ಬೆದರಿಕೆಯಂತಹ ಮೂರ್ಖ ಮತ್ತು ಹಾಸ್ಯಾಸ್ಪದ 'ಜ್ಞಾನ ಸಂಪತ್ತಿ'ನ ವಾರಸುದಾರರಾಗಬೇಕಾಗಿ ಬಂದು ವಿವೇಕವಂತ ಸಮಾಜದ ಕಣ್ಣಿನಲ್ಲಿ ನಗೆಗೀಡಾಗಬೇಕಾಗುತ್ತದೆ ಎಂಬ ಎಚ್ಚರ ವಿಶ್ವಕರ್ಮ ಸಮಾಜಕ್ಕೆ ಇರಲಿ.

ಇತ್ತೀಚಿನ ವರ್ಷಗಳಲ್ಲಿ ಸಾಹಿತ್ಯ ಕೃತಿಯನ್ನು ಜಾತಿ ಸಂಘಗಳ ಒತ್ತಡಗಳ ಮೇಲೆ ಬಹಿಷ್ಕರಿಸುವ ಪ್ರವೃತ್ತಿ ಹೆಚ್ಚುತ್ತಿದೆ ಎಂಬುದನ್ನು ನಾವು– ಶಿವಮೊಗ್ಗದ ಲೇಖಕ ಕಲಾವಿದರ ಬಳಗವು– ಆತಂಕದಿಂದ ಗಮನಿಸಿದ್ದೇವೆ. ಸಾಹಿತ್ಯ ಕೃತಿಯ ಮೌಲ್ಯಮಾಪನ ಸಾಹಿತ್ಯಿಕ ಮಾನದಂಡಗಳ ಪ್ರಕಾರ ಮಾತ್ರ ನಡೆಯಬೇಕು. ಒಂದು ಸಮಾಜ ಇಂತಹ ವಿವೇಕವನ್ನು ಕಳೆದುಕೊಂಡಾಗ ಅದು ಸಂಸ್ಕೃತಿಯನ್ನು ಕಳೆದುಕೊಂಡು ಅಸಂಸ್ಕೃತವಾಗುತ್ತದೆ, ಅನಾಗರಿಕವಾಗುತ್ತದೆ. ಈ ಎಚ್ಚರ ಸರ್ಕಾರಕ್ಕಿರಬೇಕು. ಅದಕ್ಕಿಂತ ಹೆಚ್ಚಾಗಿ ವಿಶ್ವವಿದ್ಯಾನಿಲಯಗಳ ಜವಾಬ್ದಾರಿ ಸ್ಥಾನಗಳಲ್ಲಿರುವವರಿಗೆ ಇರಬೇಕು. ಮಂಗಳೂರು

ವಿಶ್ವವಿದ್ಯಾಲಯದ ಕುಲಪತಿ, ಕುಲಸಚಿವ, ಅಧ್ಯಯನ ಮಂಡಳಿಯ ಸದಸ್ಯರು, ಅಧ್ಯಾಪಕರು ಮತ್ತು ಸಂಬಂಧಪಟ್ಟ ಇತತರಿಗೆ ಈ ಅರಿವು ಇದೆಯೆಂದು ನಾವು ಭಾವಿಸುತ್ತೇವೆ. ಯಾವುದೇ ಕಾರಣಕ್ಕೂ 'ಗಾಂಧಿ ಬಂದ' ಕಾದಂಬರಿಯನ್ನು ಪಠ್ಯಕ್ರಮದಿಂದ ತೆಗೆಯಬಾರದೆಂದೂ, ಅದನ್ನು ಈಗಿರುವ ರೂಪದಲ್ಲೇ ಪಠ್ಯವಾಗಿ ಮುಂದುವರೆಸಬೇಕೆಂದೂ ವಿಶ್ವಕರ್ಮ ಜಾತಿಯೂ ಸೇರಿದಂತೆ ಎಲ್ಲ ಜಾತಿಗಳ ಸದಸ್ಯರಿಂದ ಕೂಡಿದ ಶಿವಮೊಗ್ಗ ಲೇಖಕ– ಕಲಾವಿದರ ಬಳಗವು ಆಗ್ರಹಿಸುತ್ತದೆ.

– **ಡಿ.ಎಸ್. ನಾಗಭೂಷಣ,** (ರಾಜೇಂದ್ರ ಚೆನ್ನಿ, ಕಡಿದಾಳು ಶಾಮಣ್ಣ, ಸವಿತಾ ನಾಗಭೂಷಣ, ಸತ್ಯನಾರಾಯಣ ರಾವ್ ಅಣತಿ, ಎಂ.ಬಿ.ನಟರಾಜ್, ಎಸ್. ಸಿರಾಜ್ ಅಹಮದ್, ಟಿ. ಅವಿನಾಶ್, ಸ. ಉಷಾ, ಎಂ. ಚಂದ್ರಶೇಖರಯ್ಯ, ದಿವಾಕರ ಹೆಗ್ಡೆ, ಸಬಿತಾ ಬನ್ನಾಡಿ, ನಿಸಾರ್ ಅಹಮದ್, ಮಲ್ಲಿಕಾರ್ಜುನ ಮೇಟಿ, ಮಂಜುಳಾ ಎಂ.ರಾಜು, ಅಕ್ಷತಾ ಕೆ, ಶುಭಾ ಮರವಂತೆ, ಶಿವಮೊಗ್ಗ)

('ಪ್ರಜಾವಾಣಿ'ಯ 'ಸಂಗತ'ದಲ್ಲಿ ಪ್ರಕಟ– ಜನವರಿ, ೨೦೧೨)

‘ಆಚಾರಿ’ಯೆಂಬ ‘ಅಪಮಾನಕಾರಿ’ ಪ್ರಯೋಗ: ಒಂದು ಪ್ರತಿಕ್ರಿಯೆ

ಪ್ರಿಯ ಗೆಳೆಯರೇ,

‘ಗಾಂಧಿ ಬಂದ’ ಕಾದಂಬರಿ ಕುರಿತಂತೆ ಕೆಲ ವಿಶ್ವಕರ್ಮರು ಎಬ್ಬಿಸಿರುವ ವಿವಾದದ ಹಿನ್ನೆಲೆಯಲ್ಲಿ ನೀವು ಬರೆದುದನ್ನು ಓದಿದೆ. ಅದು ಸಾರ್ವಜನಿಕ ಪ್ರಕಟಣೆಗೋ ಅಲ್ಲವೋ ತಿಳಿಯದು. ಅದು ಸಾರ್ವಜನಿಕ ಪ್ರಕಟಣೆಗೇ ಆಗಿದ್ದರೆ, ಅದರ ಟೈಮಿಂಗ್ ಸರಿಯಲ್ಲ. ‘ಗಾಂಧಿ ಬಂದ’ದ ಬಹಿಷ್ಕಾರಕ್ಕೆ ಸಿದ್ಧವಾಗುತ್ತಿರುವವರಿಗೆ ಅದು ಕೈ- ಅಸ್ತ್ರವಾಗುತ್ತದೆ. ಅದು ಆಗಬಾರದು. ಅದೂ ಪ್ರಜ್ಞಾವಂತರೆಂದು ಗುರುತಿಸಿಕೊಳ್ಳುವ ನಿಮ್ಮಂಥವರಿಂದ.

ನೀವು ಹೇಳುವಂತಹ ಅವಮಾನಕಾರಿ ಸಂಬೋಧನೆಯಿಂದ, ವಿಶ್ವಕರ್ಮ ಜಾತಿ ಮಾತ್ರವಲ್ಲ, ಮೇಲ್ಜಾತಿಗಳೂ ಸೇರಿದಂತೆ ಎಲ್ಲ ಜಾತಿಗಳೂ ನರಳಿವೆ; ನರಳುತ್ತಿವೆ. ಇದು ಜಾತಿ ಪದ್ಧತಿಯ ಸ್ವರೂಪದಲ್ಲೇ ಅಂತರ್ಗತವಾಗಿರುವ ಪರಸ್ಪರ ಬಿಗುವಿನ ಪರಿಣಾಮ. ಬ್ರಾಹ್ಮಣರನ್ನು ‘ಹಾರುವ’ ಎಂದೂ ಹೀಯಾಳಿಸುವ ಚಾಳಿ ಜಾರಿಯಲ್ಲಿಲ್ಲವೇ? ಸಂದರ್ಭಾನುಸಾರ ಒಂದು ಜಾತಿ ಇನ್ನೊಂದು ಜಾತಿಯನ್ನು ಸಾಮಾಜಿಕ ಸ್ಥಾನಮಾನದ ಸ್ಪರ್ಧೆಯಲ್ಲಿ ಹಿಂದಿಕ್ಕಲು ಬಳಸುವ ಅಸ್ತ್ರವದು. ವಿಶ್ವಕರ್ಮರು ಉಪ್ಪಾರ, ಗಾಣಿಗ, ಕ್ಷೌರಿಕ, ಅಗಸ, ಹೊಲೆಯ- ಮಾದಿಗ ಇತ್ಯಾದಿ ತನ್ನ ಕೆಳಗಿನ ಜಾತಿಗಳೆಂದು ನಂಬಿ ಈ ಜಾತಿಗಳಿಗೆ ಸೇರಿದ ಜನರನ್ನು ಇಂತಹ ‘ಅವಮಾನಕಾರಿ’ ಸಂಬೋಧನೆಗಳಿಂದ ಹೀಯಾಳಿಸುವ ಚಾಳಿಯ ಅವಿಭಾಜ್ಯ ಅಂಗವಾಗಿಯೇ ‘ಆಚಾರಿ’ ಎಂಬ ಅವಮಾನಕಾರಿ ಯೆಂದು ನೀವು ಹೇಳುವ ಸಂಬೋಧನೆಯನ್ನೂ ಪರಿಗಣಿಸಿ ಅರ್ಥ ಮಾಡಿಕೊಳ್ಳಬೇಕು. ಅಂದರೆ ಇದರರ್ಥ, ಎಲ್ಲಿಯವರೆಗೆ ನಾವು

ಜಾತಿಪದ್ಧತಿಯನ್ನು ಅದರೆಲ್ಲ ರೂಪಗಳಲ್ಲಿ ಮಾನ್ಯ ಮಾಡುತ್ತೇ ವೆಯೋ, ಅಲ್ಲಿಯವರೆಗೆ ಇದು ತಪ್ಪದು. ಅವರು ಹಾಗೆ ಮಾಡಿದಾಗ ಇವರು ಏಕೆ ಸುಮ್ಮನಿದ್ದರು ಎಂದೆಲ್ಲ ಕೋಳಿ ಜಗಳ ಕೆದಕುವು ದರಿಂದ ಯಾವ ಪ್ರಯೋಜನವೂ ಇಲ್ಲ. ಬದಲಿಗೆ ನಮಗೆ ಗೊತ್ತಿದ್ದೋ ಗೊತ್ತಿಲ್ಲದೆಯೋ ನಮ್ಮ ನಮ್ಮ ಹುಟ್ಟು ಜಾತಿಗಳೊಡನೆ ನಮ್ಮ ಸಂಬಂಧವನ್ನು

ಭದ್ರಗೊಳಿಸಿಕೊಳ್ಳುತ್ತೇವಷ್ಟೆ. ಇದು ನಿಮಗೆ ಅಪ್ಯಾಯಮಾನವಾಗಿದ್ದರೆ, ಇಂತಹ ಚರ್ಚೆಯನ್ನು ನೀವು ಮುಂದುವರೆಸಬಹುದು. ಆದರೆ ಇದು ನನ್ನ ಪ್ರಕಾರ ಅಪಾಯಕಾರಿ ಮಾರ್ಗ. ನೀವು 'ಗಾಂಧಿ ಬಂದ' ಓದಿರುವಿರಿ ಎಂದು ಭಾವಿಸುವೆ.

೨೦.೧.೨೦೧೨ – ಡಿ.ಎಸ್. ನಾಗಭೂಷಣ

✧✧✧

೨. ಕನ್ನಡ ಶಾಲೆಗಳ ಪುನರುಜ್ಜೀವನವೊಂದೇ ಉತ್ತರ!

ಮೊನ್ನೆ ಬೇಂದ್ರೆ ಕುರಿತ ವಿಚಾರ ಸಂಕಿರಣವೊಂದರಲ್ಲಿ ಕೂತಿದ್ದೆ. ಭಾಷಣಕಾರರೊಬ್ಬರು ಕನ್ನಡದ ಹಿರಿಯ ಚಿಂತಕರೊಬ್ಬರನ್ನು ಉಲ್ಲೇಖಿಸುತ್ತಾ, 'ಬೇಂದ್ರೆ ಕನ್ನಡದ ಶ್ರೇಷ್ಠ ಕವಿ ಮಾತ್ರವಲ್ಲ; ಜಗತ್ತಿನ ಶ್ರೇಷ್ಠ ಕವಿ' ಎಂದು ಬಹು ಬಿಂಕದಿಂದ ಘೋಷಿಸಿದರು. ಅವರನ್ನು ಅನೇಕ ಪಾಶ್ಚಿಮಾತ್ಯ ಕವಿಗಳಿಗೆ ಹೋಲಿಸಿ, ಇವರಿಗಿಂತ ನಮ್ಮ ಬೇಂದ್ರೆ ಹೇಗೆ ಕಮ್ಮಿ ಎಂದು ಪ್ರಶ್ನಿಸಿ ತಮ್ಮ ಮಾತನ್ನು ಸಮರ್ಥಿಸಿಕೊಂಡರು.

ಜಾಗತೀಕರಣ WTOನಿಂದ ಆರಂಭವಾಯಿತೆಂದು ನಾವು ನಂಬಿದ್ದೇವೆ. ಆದರೆ ಅದು ತಪ್ಪು ಕಲ್ಪನೆ. ಜಾಗತೀಕರಣವೆಂಬುದು, ಬೇಂದ್ರೆ ಕುರಿತ ಮೇಲಿನ ಅಭಾಸಕರ ಹೆಮ್ಮೆಯ ಮಾತುಗಳಲ್ಲೇ ಇದೆ. ಹಾಗೇ ಇಂತಹ ಅನೇಕ 'ಜಗತ್ತಿನ ಶ್ರೇಷ್ಠ'ಗಳ ಕಲ್ಪನೆಯ ಮಾತುಗಳಲ್ಲೂ ಇದೆ. ಏಕೆಂದರೆ, ಬೇಂದ್ರೆ ಕನ್ನಡದ ಶ್ರೇಷ್ಠ ಕವಿ ಆಗಿರುವಲ್ಲೇ ಜಗತ್ತಿನ ಶ್ರೇಷ್ಠ ಕವಿ ಕೂಡಾ ಆಗಿರುತ್ತಾರೆ ಎಂದು ಭಾವಿಸಲಾಗದ ಮನಸ್ಸು ನಿಜವಾದ ಮತ್ತು ಕನ್ನಡದ ಮನಸ್ಸೇ ಅಲ್ಲ. ಅದು ತನ್ನ ನೆಲದಿಂದ ಜೀವ ಸತ್ವ ಪಡೆಯುವುದನ್ನು ನಿಲ್ಲಿಸಿರುವ, ಬೇರಿಲ್ಲದ ಜಾಗತಿಕ ಮನಸ್ಸು. ಆ ಕಾರಣದಿಂದಾಗಿ ಅದು ಬೇಂದ್ರೆಯವರನ್ನು ಅವರೆಲ್ಲ ಆಳಗಳಲ್ಲಿ, ಸೂಕ್ಷ್ಮಗಳಲ್ಲಿ ಗ್ರಹಿಸಲಾಗದ ಭೋಳೆ ಮನಸ್ಸು ಕೂಡ.

ಕನ್ನಡ ಜಗತ್ತು ಎಂಬುದು ಒಂದು ಸ್ವಯಂಪೂರ್ಣವಾದ ಮತ್ತು ಸ್ವಾಯತ್ತವಾದ ಜಗತ್ತು ಎಂದು ಅರಿಯಲಾಗದ ಕೀಳರಿಮೆಯ ಮನಸ್ಸಿದು. ಆದುದರಿಂದ ಕನ್ನಡ ಜಗತ್ತು ಎಂದರೆ ವಸಾಹತುಶಾಹಿ ಮನಸ್ಸಿನ ರಚನೆಯಾದ– ತನ್ನಾಚೆಗೂ ಭೌತಿಕವಾಗಿ ಹರಡಿಕೊಂಡು ನಮ್ಮ ಮನಸ್ಸಿನ ಮೇಲೆ ಕವುಚಿಕೊಡು ನಮ್ಮನ್ನು ಭಾವ ವಿಚಲಿತಗೊಳೊಸಿರುವ– ಬಹು ದೊಡ್ಡ ಜಗತ್ತಿನ ಒಂದು ಉಪ ಘಟಕ ಮಾತ್ರ ಎಂದಷ್ಟೇ ಗ್ರಹಿಸಬಲ್ಲ ಹುಸಿ ಆಧುನಿಕ ಮನಸ್ಸಿದು. ಇದು, ಕನ್ನಡ ಭಾವ ಜಗತ್ತೆಂಬುದು ಈ ವಿಶಾಲ ಜಗತ್ತಿನ ಅಳತೆಯಲ್ಲಿ ಒಂದು ಕಿರಿದಾದ ಮತ್ತು ಹಾಗಾಗಿ ಆನುಷಂಗಿಕವಾದ ಜಗತ್ತು ಮಾತ್ರ ಎಂದು ಭಾವಿಸುವ 'ಗಾತ್ರ' ಪ್ರಧಾನವಾದ ಬಾಹ್ಯಾಂತರ ದೃಷ್ಟಿಕೋನದ ಪರಿಣಾಮವಿದು.

ಕವಿರಾಜಮಾರ್ಗ ಕಾರನೇ, ಜಗತ್ತಿನಲ್ಲಿ ಕನ್ನಡವಿದ್ದಂತೆ; ಕನ್ನಡದಲ್ಲಿ ಜಗತ್ತೇ ಇದೆ ಎಂದು ಹೇಳಿರುವನಾದರೂ, ಜಾಗತೀಕರಣದ ಭರಾಟೆಯಲ್ಲಿ ಅದು ನಮಗೆ ಕೇಳಿಸದೇ ಹೋಗಿದೆ! ತಾನು ಜಗತ್ತನ್ನು ಗುರುತಿಸಲು, ಗ್ರಹಿಸಲು ಮತ್ತು ಅಭಿವ್ಯಕ್ತಿಸಲು ಸಾಧ್ಯ ಮಾಡಿದ ತನ್ನ ಮಣ್ಣಿನ– ಮಾತೃ– ಭಾಷೆಯನ್ನು ಆನಂತರ 'ಕಲಿತುಕೊಂಡ' ಜಗತ್ತಿನ ಗಾತ್ರದ ಪರಿಕಲ್ಪನೆಯ

ಹಿನ್ನೆಲೆಯಲ್ಲಿ ಅಪ್ರಯೋಜಕ ಮತ್ತು ಅಪ್ರಧಾನವಾ ದುದು ಎಂದು ಭಾವಿಸತೊಡಗುವ ಜನ ಸಮುದಾಯ ಆಂತರಿಕವಾಗಿ ಕುಬ್ಜಗೊಂಡಿದೆ ಎಂದೇ ಅರ್ಥ. ಈ ಕುಬ್ಜೀಕರ ಣವೇ ಇಂದು ಜಾಗತೀಕರಣವೆನಿಸಿಕೊಂಡಿದೆ. ಇದನ್ನು ತಿಳಿಯಬಲ್ಲವರು ಮಾತ್ರ ಜಾಗತೀಕರಣದ ಪ್ರಭಾವ– ಪರಿಣಾಮ ಗಳನ್ನು ಅರ್ಥ ಮಾಡಿಕೊಳ್ಳಬಲ್ಲರು.

ಆದರೆ ಈವರೆಗೆ ಜಾಗತೀಕರಣವನ್ನು ಸಮಾಜದ ಯಜಮಾನರುಗಳು 'ಅವಕಾಶಗಳ ವಿಸ್ತರಣೆ' ಎಂದೇ ಅರ್ಥೈಸುತ್ತಾ, ಅದನ್ನು ವಂಚಿತರ ಉನ್ನತೀಕರಣಕ್ಕಾಗಿ ಮತ್ತು ಎಲ್ಲರ ಬದುಕಿನ 'ಸುಖ'ಕ್ಕಾಗಿ ಬಳಸಿಕೊಳ್ಳುವ ಮಾತನಾಡುತ್ತಿದ್ದಾರೆ. ಈ ಹಿನ್ನೆಲೆಯಿಂದಲೇ ಕೇಳಿಬರತೊಡಗಿರುವುದು, ಭಾರತೀಯ ಭಾಷೆಗಳಲ್ಲಿ ಜಾತಿ ಶ್ರೇಣೀಕರಣ– ಅವಮಾನಗಳ ನೆನಪುಗಳಿವೆ; ಹಾಗಾಗಿ ಅವು ದಲಿತರ ಮತ್ತು ಹಿಂದುಳಿದ ಜಾತಿಗಳವರ ವಿಮೋಚನೆಯನ್ನು ಮತ್ತು ಆ ಮೂಲಕ ಇಡೀ ಸಮಾಜದ ವಿಮೋಚನೆಯನ್ನು ಸಾಧ್ಯ ಮಾಡುವುದಿಲ್ಲ ಎಂಬ ವಾದ ಸರಣಿ. ಆದರೆ ಈ ಭಾಷೆಗಳು ಜಾತಿ– ಶ್ರೇಣೀಕರಣ ಮತ್ತು ಅವಮಾನಗಳ ನೆನಪುಗಳನ್ನಷ್ಟೇ ಅಲ್ಲ, ಅದರ ವಿರುದ್ಧ ನಡೆದ ಹೋರಾಟಗಳ ನೆನಪುಗಳನ್ನೂ ಒಳಗೊಂಡಿವೆ. ಈ ಎರಡೂ ನೆನಪುಗಳನ್ನು ಹೊತ್ತುಕೊಂಡಿರುವುದರಿಂದಾಗಿಯೇ ಅದು ಬಹುಮುಖಿ ಜನಭಾಷೆಯಾಗಿ ಈವರೆಗೆ ಬೆಳೆದು ಬಂದಿದ್ದು, ನಾವಿಂದು ಈ 'ವಿಮೋಚನೆ'ಯ ಮಾತನಾಡಲು ಸಾಧ್ಯವಾಗಿದೆ ಎಂಬ ತಿಳುವಳಿಕೆಯೇ ಇಲ್ಲಿ ಸಾಧ್ಯವಾಗದೇ ಹೋಗಿದೆ. ಒಂದು ಸಮುದಾಯದ ಭಾಷಾ ಚರಿತ್ರೆ ಕುರಿತ ಈ ಒಂದು ಅಖಂಡ ಅರಿವೇ ಈ ವಾದ ಸರಣಿಯಲ್ಲಿ ಕಾಣೆಯಾಗಿದ್ದು, ಇಂತಹ ವಾದಸರಣಿಯನ್ನು ಮಂಡಿಸುತ್ತಿರುವವರಲ್ಲಿ ತಮ್ಮನ್ನು ಭಾಷಾ ತಜ್ಞರೆಂದು ಕರೆದುಕೊಳ್ಳುವ ಕೆಲವರೂ ಇದ್ದಾರೆ ಎಂದರೆ ಏನು ಹೇಳುವುದು?

ಕನ್ನಡ ಆಧುನಿಕ ಜ್ಞಾನವನ್ನು ಹೊರಬಲ್ಲ ಭಾಷೆಯಾಗಿಲ್ಲ ಎಂಬ ದೂರೂ ಇಂತಹುದೇ 'ವಿಮೋಚನೆ'ಯ ಅಪಕಲ್ಪನೆಯಿಂದ ಉದ್ಭವವಾಗಿದ್ದು, ಇದು ಮತ್ತೆ ಜಾಗತೀಕರಣ ಹೇಗೆ ನಮ್ಮೆಲ್ಲರ ಮಾನಸಿಕ ಕುಬ್ಜೀಕರಣಕ್ಕೂ, ಆ ಮೂಲಕ ಕೆಲವರ ಸಮಯಸಾಧಕ ರಾಜಕಾರಣಕ್ಕೂ ಕಾರಣವಾಗಿದೆ ಎಂಬುದರ ಒಂದು ಉದಾಹರಣೆಯಾಗಿದೆ. ಏಕೆಂದರೆ ಕನ್ನಡದಲ್ಲಿ ಅಭಿವ್ಯಕ್ತಿಗೊಳ್ಳಲು ಸಾಧ್ಯವಾಗದ ಯಾವುದೇ ಜ್ಞಾನ (ಆ ಅಭಿವ್ಯಕ್ತಿ ಸಾಧ್ಯವಾಗುವವರೆಗಾದರೂ) ಕನ್ನಡ ಸಮಾಜಕ್ಕೂ ಬೇಡವಾದ (ಅಂದರೆ ಅದನ್ನು ವಿನಾಶಕಾರಿಯಾಗಿ ಶಿಥಿಲಗೊಳಿಸುವಂತಹ) ಜ್ಞಾನವೇ ಆಗಿರುತ್ತದೆ ಎಂಬ ಮೂಲ ಸಾಮಾಜಿಕ– ಸಾಂಸ್ಕೃತಿಕ ವಿವೇಕ ಇಲ್ಲಿ ಕಾಣೆಯಾಗಿರುತ್ತದೆ.

ಹಾಗಾಗಿ ಇಂದು ಕನ್ನಡದ ಪ್ರಶ್ನೆ ಎಂದರೆ ಮನಸ್ಸಿನ ಕುಬ್ಜೀಕರಣ ಮತ್ತು ಸಮಯಸಾಧಕತನ ಹಾಗೂ ಅವುಗಳಿಂದುಂಟಾಗುವ ಸಾಮಾಜಿಕ ಶಿಥಿಲೀಕರಣದೊಂದಿಗೆ ಸೆಣೆಸಬೇಕಾದ ಬಹು ದೊಡ್ಡ ಪ್ರಶ್ನೆಯೂ ಆಗಿದೆ. ಇದು ಯಾವುದೇ ಜನಸಮುದಾಯದ ಸಾಂಸ್ಕೃತಿಕ ತಳಪಾಯವನ್ನೇ ಅಲ್ಲಾಡಿಸುವಂತಹ ವಿನಾಶಕಾರಿ ಸಂದರ್ಭವೇ ಆಗಿದೆ. ಈ ಅರ್ಥದಲ್ಲಿ ಇದು ಕನ್ನಡ ಜನ ಸಮುದಾಯದ ಆಂತರಿಕ ಸತ್ವದ ನಿರ್ನಾಮದ ಆರಂಭ ಕೂಡ. ಇದೀಗ ಅದು ಕರ್ನಾಟಕದಲ್ಲಿ ಕನ್ನಡ ಶಾಲೆಗಳ ನಿರ್ನಾಮದ ರೂಪದಲ್ಲಿ

ಕಾಣತೊಡಗಿದೆ. ಈ ನಿರ್ಮಾಮ ಪರಸ್ಪರ ಪೂರಕವೆಂಬಂತೆ ಸಂಖ್ಯೆ ಮತ್ತು ಗುಣಮಟ್ಟ ಈ ಎರಡೂ ನೆಲೆಗಳಲ್ಲಿ ಆಗುತ್ತಿದೆ. ಹಾಗಾಗಿ ಜಾಗತೀಕರಣದ ಸಂದರ್ಭದಲ್ಲಿ ಕನ್ನಡದ ಪರ ಹೋರಾಟವೆಂದರೆ, ಕನ್ನಡ ಶಾಲೆಗಳ ಪುನರುಜ್ಜೀವನದ ಹೋರಾಟವೇ ಆಗಿದೆ.

ಈ ಹೋರಾಟ ಅಥವಾ ಆಂದೋಲನ ಮುಂದೆ ಏಕ ರೂಪದ ಶಿಕ್ಷಣಕ್ಕಾಗಿನ ಚಳುವಳಿಯಾಗಿ ವಿಸ್ತಾರಗೊಳ್ಳುವ ಎಲ್ಲ ಸಾಧ್ಯತೆಗಳಿವೆ. ಆ ಮೂಲಕ; ಜಾಗತೀಕರಣವು ಮನುಷ್ಯನಲ್ಲಿ 'ಇಷ್ಟು ಬೇಕು ಮತ್ತು ಇಷ್ಟು ಸಾಕು' ಎಂಬ ಇಲ್ಲಿನ ಮಣ್ಣಿನ ಗುಣದಿಂದ ಮೂಡಿದ್ದ ಸ್ಥಳೀಯ ಸ್ವಯಂಪೂರ್ಣತೆ ಮತ್ತು ಸ್ವಾಯತ್ತ ಬದುಕಿನ ಅರಿವನ್ನು ನಾಶಮಾಡಿ, ಇಂದು ಸಮಾಜದಲ್ಲಿ 'ಸುಖ'ದ ಹೆಸರಿನಲ್ಲಿ ಯಾವ 'ಹಪಾಹಪಿ'ಯನ್ನು ಸೃಷ್ಟಿಸಿ ವೈವಿಧ್ಯಮಯ ಮಾನಸಿಕ ಅಸ್ವಸ್ಥತೆಯನ್ನುಂಟು ಮಾಡಿದೆಯೋ ಆ ಅಸ್ವಸ್ಥತೆಗಳನ್ನು ಇಲ್ಲವಾಗಿಸುವ ಕಡೆ ದೊಡ್ಡ ಹೆಜ್ಜೆಯನ್ನಿಟ್ಟಂತಾಗುತ್ತದೆ. ಅದು ಸದ್ಯದ ಎಲ್ಲ ಸಾಮಾಜಿಕ ಗೊಂದಲ ಮತ್ತು ಅಶಾಂತಿಗಳನ್ನು ಒಂದು ಸ್ಥಿಮಿತಕ್ಕೆ ತರಬಲ್ಲುದಾಗಿದೆ. ಕನ್ನಡ ಶಿಕ್ಷಣ ಎಂದರೆ ಕನ್ನಡದ ಅರಿವಿನಲ್ಲಿ ಮೂಡಿದ ಬದುಕಿನ ಗೊತ್ತುಗುರಿಗಳು ಮತ್ತು ಕನಸುಗಳ ಸಾಕ್ಷಾತ್ಕಾರ. ಒಂದು ಸಮುದಾಯಕ್ಕೆ ಇದಕ್ಕಿಂತ ಹೆಚ್ಚು ಅರ್ಥಪೂರ್ಣವೆನಿಸುವ, ಸಾರ್ಥಕವೆನಿಸುವ ಬದುಕು ಇನ್ನೊಂದು ಇರಲಾರದು.

ಆದುದರಿಂದ ಸರ್ಕಾರದ ಪ್ರಾಥಮಿಕ ಶಿಕ್ಷಣ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕನ್ನಡ ಪುಸ್ತಕ ಪ್ರಾಧಿಕಾರ, ರಾಜ್ಯದ ಎಲ್ಲ ಅಕಾಡೆಮಿಗಳು, ಎಲ್ಲ ಕನ್ನಡ ಸಂಘಟನೆಗಳು ಮತ್ತು ಲೇಖಕ– ಬುದ್ಧಿಜೀವಿಗಳು ತಮ್ಮೆಲ್ಲ ಮಾತಿನ ಆಟಗಳನ್ನೂ, ವ್ಯವಹಾರಗಳನ್ನೂ ನಿಲ್ಲಿಸಿ ತಮ್ಮ ಏಕೈಕ ಕಾರ್ಯಕ್ರಮವಾಗಿ ಕನ್ನಡ ಶಾಲೆಗಳ ಪುನರುಜ್ಜೀವನದ ಕಡೆ ಗಮನ ಹರಿಸುವ ಮನಸ್ಸು ಮಾಡಿದರೆ ಮತ್ತು ಇವೆಲ್ಲ ಒಟ್ಟಿಗೆ ಸೇರಿ ಪ್ರತಿ ಶೈಕ್ಷಣಿಕ ವರ್ಷದ ಆರಂಭದಲ್ಲಿ ಪ್ರತಿ ಊರಿನಲ್ಲಿ ಕನ್ನಡ ಶಾಲೆಗಳಿಗೆ ಪ್ರವೇಶಾತಿ ಆಂದೋಲನವನ್ನು ಒಂದು ಸಾಂಸ್ಕೃತಿಕ ಆಂದೋಲನವನ್ನಾಗಿ ಹಮ್ಮಿಕೊಳ್ಳಲು ಸಾಧ್ಯವಾದರೆ, ಜಾಗತೀಕರಣದ ಎದುರಿನಲ್ಲಿ ಕನ್ನಡವನ್ನು ಅದರ ಮೂಲ ಸತ್ವ ಮತ್ತು ಸೌಂದರ್ಯಗಳೊಂದಿಗೆ ಉಳಿಸಿಕೊಂಡು ಕನ್ನಡ ಜನಸಮುದಾಯ ಒಂದು ಸ್ಪಂದನಶೀಲ ಬದುಕನ್ನು ಕಟ್ಟಿಕೊಳ್ಳಲು ಸಾಧ್ಯವಾಗಬಹುದಾಗಿದೆ. ಇದೆಲ್ಲ ಆಗಿ ಹೋಗುವುದಲ್ಲ ಎಂದು ಭಾವಿಸುವವರು, ಇಂದಿನ ಸಂದರ್ಭದಲ್ಲಿ ಕನ್ನಡದ ಅಳಿವು– ಉಳಿವಿನ ಬಗ್ಗೆ ಮಾತನಾಡದಿರುವುದೇ ಲೇಸು.

(ವಿಶ್ವ ಕನ್ನಡ ಸಮ್ಮೇಳನ– ೨೦೧೧ರ 'ಪುನರಾವಲೋಕನ' ಎಂಬ ಸಂದರ್ಭ ಗ್ರಂಥದಲ್ಲಿ ಮತ್ತು' ಉದಯವಾಣಿ'ಯ 'ಮ್ಯಾಗಜೀನ್ ವಿಭಾಗ'ದಲ್ಲಿ ಪ್ರಕಟ– ಮಾರ್ಚ್, .೨೦೧೧)

◇◇◇

೭. ದೇವನೂರರ ಕನ್ನಡ ಶಿಕ್ಷಣಪರ ಪ್ರತಿಭಟನೆ ಕುರಿತು...

ರಾಜ್ಯದಲ್ಲಿನ ಸಾಹಿತ್ಯ ಕ್ಷೇತ್ರದ ಅತ್ಯುನ್ನತ 'ಬೆಲೆ'ಯದೆಂದು ಹೇಳಲಾಗುವ 'ನೃಪತುಂಗ' ಪ್ರಶಸ್ತಿಯನ್ನು ಕನ್ನಡ ಸಾಹಿತ್ಯ ಪರಿಷತ್ತು ಕನ್ನಡದ ಅತಿ ವಿಶಿಷ್ಟ ಬರಹಗಾರರಲ್ಲೊಬ್ಬರಾದ ದೇವನೂರ ಮಹಾದೇವ ಅವರಿಗೆ ಪ್ರಕಟಿಸಿದಾಗ ಅದು ರಾಜ್ಯ ಮಟ್ಟದ ಸುದ್ದಿಯಾಯಿತು. ಆದರೀಗ ಮಹಾದೇವ ಅವರು ಆ ಪ್ರಶಸ್ತಿಯನ್ನು ತಿರಸ್ಕರಿಸಿರುವಾಗ ಅದೇನೂ ರಾಜ್ಯ ಮಟ್ಟದ ಸುದ್ದಿಯಾಗಿಲ್ಲ! ಇದು ನಮ್ಮ ಸದ್ಯದ ಮಾಧ್ಯಮ ಪ್ರಪಂಚದ ಸೋಜಿಗಗಳ ಲ್ಲೊಂದಾಗಿದೆ.

ಇದಕ್ಕೆ ಕಾರಣವಿದೆ. ಮಹಾದೇವ ರಾಜ್ಯದ ಶಾಲೆಗಳಲ್ಲಿ ಹತ್ತನೇ ತರಗತಿಯವರೆಗೆ ಕನ್ನಡ ಮಾಧ್ಯಮವನ್ನು ಕಡ್ಡಾಯವಾಗಿ ಜಾರಿಗೆ ತರುವ ತನಕ ಮತ್ತು ಈ ದಿಸೆಯಲ್ಲಿ ಸರ್ಕಾರ ಕ್ರಮ ಕೈಗೊಳ್ಳುವವರಗೆ ಸಾಹಿತ್ಯ ಸಮ್ಮೇಳನ ನಡೆಸುವುದಿಲ್ಲವೆಂದು ಕನ್ನಡ ಸಾಹಿತ್ಯ ಪರಿಷತ್ ಘೋಷಿಸುವ ತನಕ ತಾವು ಈ ಪ್ರಶಸ್ತಿಯನ್ನು ಸ್ವೀಕರಿಸುವುದಿಲ್ಲ ವೆಂದು ಪ್ರಕಟಿಸಿದ್ದಾರೆ. ಇದು ಅಷ್ಟೇನೂ ಜನಪ್ರಿಯವಲ್ಲದ ನಿರ್ಧಾರವಾಗಿದೆ. ಕನ್ನಡ ಸಂಸ್ಕೃತಿ ಎಂಬುದು ಇಂದು ಬಹು ಒತ್ತಡದಲ್ಲಿ ಸಿಲುಕಿ ತನ್ನ ಮೂಲ ಅಸ್ಮಿತೆಯನ್ನೇ ಕಳೆದುಕೊಳ್ಳುವ ಅಪಾಯದಲ್ಲಿದೆ. ಹಾಗಾಗಿ, ಅದನ್ನು ಉಳಿಸುವ ಒಂದು ನಿರ್ಣಾಯಕ ಪ್ರಯತ್ನದ ಭಾಗವಾಗಿ, ಕನ್ನಡ ಸಂಸ್ಕೃತಿಯ ಮೂಲ ಲಾಕ್ಷಣಿಕ ಗ್ರಂಥವೆನಿಸಿದ 'ಕವಿರಾಜ ಮಾರ್ಗ'ದ ಕೃತಿಕಾರನ ಹೆಸರಲ್ಲಿ ಸ್ಥಾಪಿಸಲಾಗಿರುವ ಈ ಪ್ರಶಸ್ತಿಯನ್ನು ತಿರಸ್ಕರಿಸುವ ಮೂಲಕ ಮಹಾದೇವ ಇಂದಿನ ನಿಜವಾದ ಕನ್ನಡ ಚಳುವಳಿಕಾರರೆನಿಸಿದ್ದಾರೆ.

ಮೂರು- ನಾಲ್ಕು ವರ್ಷಗಳ ಹಿಂದೆ ರಾಜ್ಯದ ಶಾಲೆಗಳಲ್ಲಿ ಒಂದನೇ ತರಗತಿಯಿಂದಲೇ ಮಕ್ಕಳಿಗೆ ಇಂಗ್ಲಿಷ್ ಕಲಿಸುವಂತೆ ಸರ್ಕಾರದ ಮೇಲೆ ಒತ್ತಡ ಹೇರಿ, ಅದನ್ನು ಇಂಗ್ಲಿಷ್ ಶಿಕ್ಷಣದ 'ಮಾಫಿಯಾ'ದ ಬೆಂಬಲದೊಂದಿಗೆ ಸಾಧ್ಯ ಮಾಡಿದ ಕೆಲವು ಬುದ್ಧಿಜೀವಿ ಹೋರಾಟಗಾರರಿಗೆ ದೇವನೂರರು ಬೆಂಬಲ ನೀಡಿದ್ದರು. ಸರ್ಕಾರದ ಈ ಕ್ರಮದಿಂದ ಸರ್ಕಾರಿ ಶಾಲೆಗಳಿಗೆ ಹೋಗುವ ದಲಿತ ಮತ್ತು ಹಿಂದುಳಿದ ಜಾತಿಗಳ ಮಕ್ಕಳಿಗೆ ಅನುಕೂಲವಾಗುವುದೆಂದೂ, ಇದರ ಫಲವಾಗಿ ಸರ್ಕಾರಿ ಶಾಲೆಗಳಲ್ಲಿ ದಾಖಲಾತಿ ಹೆಚ್ಚಾಗಿ ಅವುಗಳು ಸುಧಾರಿಸುವ ಅವಕಾಶ ಹೆಚ್ಚೆಂದೂ ತಮ್ಮ ನಿಲುವನ್ನು ಅವರು ಸಮರ್ಥಿಸಿಕೊಂಡಿದ್ದರು. ಮಹಾದೇವ ಅವರು ನಮ್ಮ ನಡುವೆ ಈಗಲೂ ನೈತಿಕ ಬಲ ಉಳಿಸಿಕೊಂಡಿರುವ ಕೆಲವೇ ಕೆಲವು ಸಾಂಸ್ಕೃತಿಕ ವ್ಯಕ್ತಿತ್ವಗಳಲ್ಲಿ ಒಬ್ಬರಾಗಿರುವುದರಿಂದ,

ಅವರ ಆ ನಿಲುವಿನಿಂದಾಗಿ ಅಂದಿನ ಇಂಗ್ಲಿಷ್‌ವಾದಿಗಳಿಗೆ ಹೆಚ್ಚಿನ ನೈತಿಕ ಬೆಂಬಲವೂ ದೊರಕಿದಂತಾಗಿತ್ತು.

ಆದರೆ ಸರ್ಕಾರದ ಆ ಕ್ರಮ ದಲಿತ– ಹಿಂದುಳಿದ ಜಾತಿಗಳ ಮಕ್ಕಳ ಕ್ಷೇಮಾಭ್ಯುದಯವನ್ನು ದೃಷ್ಟಿಯಲ್ಲಿಟ್ಟುಕೊಂಡು ಕೈಗೊಳ್ಳಲಾಗಿರುವ ಕ್ರಮವಲ್ಲ. ಇದು ಮುಕ್ತ ಮಾರುಕಟ್ಟೆ ನೀತಿಯ ಹೆಸರಲ್ಲಿ ಜಗತ್ತನ್ನೇ ಮತ್ತು ಆ ಮೂಲಕ ಮನುಷ್ಯ ಬದುಕನ್ನೇ ಒಂದು ಮಾರುಕಟ್ಟೆಯನ್ನಾಗಿ ಮಾಡಿ ಹಣ ಲೂಟಿ ಮಾಡಬಯಸಿರುವ ಜಾಗತೀಕರಣವಾದಿಗಳ ಸಾಂಸ್ಕೃತಿಕ ರಾಜಕಾರಣದ ಹುನ್ನಾರ. ಹಾಗಾಗಿ ಇದು ಕನ್ನಡದ ಮೇಲೆ ಮಾಡಲಾಗುತ್ತಿರುವ ಉದ್ದೇಶಪೂರ್ವಕ ಪ್ರಹಾರವೆಂಬುದನ್ನು ಗಮನಿಸಬೇಕೆಂದು ನಾವು ಕೆಲವರು ವಾದಿಸಿದ್ದೆವು. ಹಾಗೇ, ಶಾಲಾ ಮಟ್ಟದಲ್ಲಿ ಕನ್ನಡ ಮಾಧ್ಯಮವನ್ನು ಕಡ್ಡಾಯ ಮಾಡಿದ ನಂತರ ಬೇಕಾದರೆ, ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಸುವ ಕ್ರಮ ಕೈಗೊಳ್ಳಲಿ ಎಂದೂ ಸೂಚಿಸಿದ್ದೆವು. ಆದರೆ ಏಕೋ ಏನೋ ಆಗ ನಮ್ಮ ಮಾತಿಗೆ ಕಿವಿಗೊಡದ ಮಹಾದೇವ ಅವರು ಈಗ ರಾಜ್ಯಾದ್ಯಂತ ಕನ್ನಡ ಶಾಲೆಗಳು ಒಂದೊಂದಾಗಿ ಮುಚ್ಚತೊಡಗಿರುವುದನ್ನು ನೋಡಿ ಗಾಬರಿಯಾಗಿಯೋ ಏನೋ, ತಮ್ಮ ತಪ್ಪನ್ನು ತಿದ್ದಿಕೊಳ್ಳಬಯಸಿದಂತೆ ನೃಪತುಂಗ ಪ್ರಶಸ್ತಿಯನ್ನು ಕನ್ನಡಪರ ಷರತ್ತುಗಳೊಂದಿಗೆ ತಿರಸ್ಕರಿಸುವ ನಿರ್ಧಾರ ಕೈಗೊಂಡಿದ್ದಾರೆ. ಅವರಿಗೆ ಜಾಗತೀಕರಣ ವಿರೋಧದ ಭಾಗವಾಗಿ ಕನ್ನಡ ಶಿಕ್ಷಣವಾದಿಗಳಾಗಿರುವವರ ಪರವಾಗಿ ಅಭಿನಂದನೆಗಳು.

ರಾಜ್ಯದಲ್ಲಿ ಜನಸಂಖ್ಯೆ ಹೆಚ್ಚುತ್ತಿದ್ದಂತೆ, ಹೊಸ ಕನ್ನಡ ಶಾಲೆಗಳ ಆರಂಭ ಕ್ಷೀಣವಾಗುತ್ತಿದ್ದರೂ, ಇರುವ ಕನ್ನಡ ಶಾಲೆಗಳು ಮುಚ್ಚಲ್ಪಡುವ ಪರಿಸ್ಥಿತಿ ಈವರೆಗೆ ಉಂಟಾಗಿರಲಿಲ್ಲ. ಆದರೆ ಕಳೆದ ನಾಲ್ಕೈದು ವರ್ಷಗಳಲ್ಲಿ ರಾಜ್ಯಾದ್ಯಂತ ಕನ್ನಡ ಶಾಲೆಗಳು ಅತಿ ವೇಗದಲ್ಲಿ ಮುಚ್ಚಲ್ಪಡುತ್ತಿರುವ ವಿದ್ಯಮಾನವನ್ನು ನಾವು ನೋಡುತ್ತಿದ್ದೇವೆ. ಇದಕ್ಕೆ ಕಾರಣ, ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಸುವ ಒತ್ತಾಯದ 'ಚಳುವಳಿ' ಮತ್ತು ಅದಕ್ಕೇ ಕಾಯುತ್ತಿದ್ದಂತೆ ಸರ್ಕಾರ ಅದಕ್ಕೆ ಮಾನ್ಯತೆ ನೀಡಿದ ಕ್ರಮದ ಹಿಂದೆ– ಕರ್ನಾಟಕದಲ್ಲಿ ಮೊದಲ ಬಾರಿಗೆ ಯಾವುದೇ ಸಂಕೋಚವಿಲ್ಲದೆ ಧೈರ್ಯದಿಂದ ಪ್ರತಿಪಾದಿಸಲ್ಪಟ್ಟ– ಕನ್ನಡವನ್ನು ಎರಡನೇ ದರ್ಜೆಯ ಭಾಷೆಯ ಸ್ಥಾನಕ್ಕೆ ತಳ್ಳಿ ಇಂಗ್ಲಿಷ್‌ನ್ನು ಮೊದಲ ದರ್ಜೆಯ ಭಾಷೆಯನ್ನಾಗಿ ಮಾನ್ಯ ಮಾಡಿದ 'ವ್ಯಾವಹಾರಿಕ' ರಾಜಕಾರಣವೇ ಆಗಿದೆ ಎಂದರೆ ತಪ್ಪಾಗಲಾರದು. ಇದರಿಂದಾಗಿ ಇಂದು ಬೆಂಗಳೂರಿನಲ್ಲಿ ಮಾತ್ರವಲ್ಲ, ರಾಜ್ಯದ ಬಹುಪಾಲು ಎಲ್ಲ ಪಟ್ಟಣಗಳಲ್ಲಿ ಕನ್ನಡ ಶಾಲೆಗಳಿಗೆ ತಮ್ಮ ಮಕ್ಕಳನ್ನು ಸೇರಿಸಬಯಸುವ ತಂದೆ ತಾಯಿಗಳಿಗೆ ಒಳ್ಳೆಯ ಕನ್ನಡ ಶಾಲೆಗಳೇ ಇಲ್ಲವಾಗಿವೆ. ಇದರಿಂದಾಗಿ ಸಣ್ಣ ಸಣ್ಣ ಊರುಗಳೂ ಸೇರಿದಂತೆ ರಾಜ್ಯಾದ್ಯಂತ ಕನ್ನಡ ಶಿಕ್ಷಣದ ಅವಕಾಶಗಳು ಕಿರಿದಾಗುತ್ತಾ ಇಂಗ್ಲಿಷ್ ಶಿಕ್ಷಣವೆಂಬ ವಿಷವೃತ್ತವೊಂದು ಸೃಷ್ಟಿಯಾಗತೊಡಗಿದೆ.

ಕನ್ನಡದ ಮಕ್ಕಳನ್ನು ಈ ವಿಷವೃತ್ತದಿಂದ ಪಾರು ಮಾಡಬೇಕಾದ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಿದ್ದ ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಶಿಕ್ಷಣಕ್ಕೂ ತನಗೂ ಏನೂ ಸಂಬಂಧವಿಲ್ಲವೆಂಬಂತೆ, ಭರ್ಜರಿ ಟಿಎ ಡಿಎ ಆಧಾರಿತ ಭಾಷಣ– ಭೀಷಣಗಳ

ಬರಡು ಕಾರ್ಯಕ್ರಮಗಳಲ್ಲಿ ತೊಡಗಿದೆ. ಇನ್ನು ಐದನೇ ತರಗತಿಯವರೆಗಾದರೂ ಕನ್ನಡ ಮಾಧ್ಯಮವನ್ನು ಕಡ್ಡಾಯ ಮಾಡುವುದಾಗಿ ತನ್ನ ಕನ್ನಡ ಬದ್ಧತೆಯನ್ನು ಘೋಷಿಸಿಕೊಂಡು ಪಕ್ಷಾತೀತವಾಗಿ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದ್ದ ಸದ್ಯದ ಸರ್ಕಾರ, ನ್ಯಾಯಾಲಯದಲ್ಲಿ ಅದನ್ನು ಸಾಧಿಸಿಕೊಳ್ಳುವಲ್ಲಿ ಯಾವುದೇ ಆಸಕ್ತಿಯನ್ನಾಗಲೀ, ತುರ್ತನ್ನಾಗಲೀ ತೋರುತ್ತಿಲ್ಲ. ಪ್ರಕರಣ ಸರ್ವೋಚ್ಚ ನ್ಯಾಯಾಲಯದ ಮೆಟ್ಟಿಲೇರಿ ಎರಡು ಶೈಕ್ಷಣಿಕ ವರ್ಷಗಳು ಮುಗಿಯುತ್ತಾ ಬಂದಿದ್ದರೂ, ಅದು ಇನ್ನೂ ವಿಚಾರಣೆಗೆ ಬಂದಂತಿಲ್ಲ. ನಮ್ಮ ನ್ಯಾಯಾಲಯಗಳಿಗೂ ಶಿಕ್ಷಣ ಮಾಧ್ಯಮದ ಪ್ರಶ್ನೆ ಮಹತ್ವದ ಪ್ರಶ್ನೆಯೇ ಆಗಿಲ್ಲವೆಂಬುದು ನಮ್ಮ ರಾಷ್ಟ್ರ ಜೀವನವೆಂಬುದು ಎಂತಹ ತಲೆಕೆಳಗಾದ ಆದ್ಯತೆಗಳಿಂದ ನರಳುತ್ತಿದೆ ಎಂಬುದನ್ನು ಸೂಚಿಸುತ್ತದೆ.

ಕರ್ನಾಟಕದಲ್ಲಿ ಕನ್ನಡದ ಹೆಸರಲ್ಲಿ ಹೊಸ ಹೊಸ ವೇದಿಕೆಗಳೂ, ದಳಗಳೂ, ಸೇನೆಗಳೂ ಹುಟ್ಟಿಕೊಳ್ಳುತ್ತಿದ್ದಂತೆ, ಸರ್ಕಾರ ಕನ್ನಡ ಪರವಾದ ಹೊಸ ಹೊಸ ಘೋಷಣೆಗಳನ್ನು ಕೂಗುತ್ತಿದ್ದಂತೆ ಮತ್ತು ಹಿಂಡು ಹಿಂಡು ರಾಜ್ಯೋತ್ಸವ ಪ್ರಶಸ್ತಿಗಳನ್ನು ಪ್ರಕಟಿಸುತ್ತಿದ್ದಂತೆ ಹಾಗೂ ಶಾಸ್ತ್ರೀಯ ಭಾಷೆಯ ಸ್ಥಾನಮಾನದ ಹೆಸರಲ್ಲಿ ಕನ್ನಡದ ಉದ್ಧಾರಕ್ಕಾಗಿ ನಮ್ಮ ಗಬ್ಬೆದ್ದು ಹೋಗಿರುವ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳಿಗೆ ಕೋಟ್ಯಾಂತರ ರೂಪಾಯಿಗಳ ಅನುದಾನ ಬಿಡುಗಡೆಯಾಗುತ್ತಿದ್ದಂತೆ, ಕರ್ನಾಟಕದಲ್ಲಿ ಕನ್ನಡ ಶಕ್ತಿಯ ಮೂಲಕೇಂದ್ರಗಳಂತಿರುವ ಕನ್ನಡ ಶಾಲೆಗಳು ಒಂದೊಂದಾಗಿ ಮುಚ್ಚಿಹೋಗುತ್ತಾ, ಕನ್ನಡ ಕಲಿಕೆ ಎಂಬುದು ಕ್ರಮೇಣ ಯಾರಿಗೂ ಬೇಕಾಗದ ವಿದ್ಯಮಾನವಾಗುತ್ತಿದೆ.

ಇಂತಹ ದುರಂತಮಯ ವಿಪರ್ಯಾಸದ ಸಂದರ್ಭದಲ್ಲಿ ದೇವನೂರ ಮಹಾದೇವ ಅವರ ಪ್ರತಿಭಟನೆ ಸಾಂಕೇತಿಕವಾದುದಾದರೂ, ಅವರ ಸಾಹಿತ್ಯದಂತೆಯೇ ಆಳದ ಪರಿಣಾಮಶೀಲತೆಯಿಂದ ಕೂಡಿದುದಾಗಿದೆ. ಅದನ್ನು ಸರ್ಕಾರ ಮತ್ತು ಕನ್ನಡ ಸಾಹಿತ್ಯ ಪರಿಷತ್ತು ಗಂಭೀರವಾಗಿ ಪರಿಗಣಿಸಬೇಕಿದೆ. ಕನ್ನಡ ಚಳುವಳಿಗಾರರು, ಸಾಹಿತಿ ಮಿತ್ರರು ಮತ್ತು ಕನ್ನಡ ಸಂಸ್ಕೃತಿ ಚಿಂತಕರು ಇದು ಕನ್ನಡ ಬದುಕಿನ ನಿರ್ಣಾಯಕ ಪ್ರಶ್ನೆಯೆಂಬಂತೆ ದೇವನೂರರನ್ನು ಬೆಂಬಲಿಸಬೇಕಿದೆ.

('ಸಂವಾದ'ದ ೨೦೧೦ರ ಡಿಸೆಂಬರ್ ಸಂಚಿಕೆಯಲ್ಲಿ ಪ್ರಕಟವಾದ ಬರಹ)

✧✧✧

೮. ಕನ್ನಡ ಶಾಲೆಗಳನ್ನು ಮುಚ್ಚಿಸುತ್ತಿರುವವರು ಯಾರು?

ಎಲ್ಲ ಅನಿಷ್ಟಗಳಿಗೂ ಶನೇಶ್ವರನೇ ಹೊಣೆ ಎಂಬಂತೆ ಇತ್ತೀಚೆಗೆ ಎಲ್ಲ ಅನಾಹುತಗಳ ಜವಾಬ್ದಾರಿಯನ್ನೂ ಸರ್ಕಾರದ ತಲೆಗೆ ಕಟ್ಟಿ, ಈ ಅನಾಹುತಗಳಿಗೆ ತಾವೆಷ್ಟು ಕಾರಣರು ಎಂಬ ಪ್ರಶ್ನೆಯಿಂದ ನುಣುಚಿಕೊಳ್ಳುವ ಪ್ರವೃತ್ತಿ ನಮ್ಮ ಪ್ರಜಾ ಸಮುದಾಯದಲ್ಲಿ ಕಂಡುಬರುತ್ತಿರುವುದು ಆತಂಕಕಾರಿ ಸಂಗತಿಯಾಗಿದೆ. ಇದು ಪ್ರಜಾಪ್ರಭುತ್ವದ ಕಲ್ಪನೆಯನ್ನು ಏಕಮುಖಗೊಳಿಸಿ ಸಂಕುಚಿತಗೊಳಿ ಸುವ ಬೆಳವಣಿಗೆಯೂ ಆಗಿದ್ದು, ಇದರಲ್ಲಿ ನಮ್ಮ ಬುದ್ಧಿಜೀವಿ ವರ್ಗವೂ ಪಾಲ್ಗೊಳ್ಳುತ್ತಿರುವುದು ಇನ್ನೂ ಹೆಚ್ಚಿನ ಆತಂಕಕ್ಕೆ ಎಡೆ ಮಾಡಿಕೊಟ್ಟಿದೆ.

ಈ ಆತಂಕಕಾರಿ ಪ್ರವೃತ್ತಿ ಈಗ ಎದ್ದು ಕಾಣತೊಡಗಿರುವುದು ಸರ್ಕಾರ ಕನ್ನಡ ಶಾಲೆಗಳನ್ನು ಮುಚ್ಚಬೇಕಾಗಿ ಬಂದಿರುವ ಪ್ರಸಂಗ ಕುರಿತು ಎದ್ದಿರುವ ಹಾಹಾಕಾರದ ವೈಖರಿಯಲ್ಲಿ. ಕನ್ನಡ ಶಾಲೆಗಳನ್ನು ಈಗ ಸಾಮೂಹಿಕವಾಗಿ ಮುಚ್ಚಬೇಕಾಗಿ ಬಂದಿರುವ ಸಂದರ್ಭಕ್ಕೆ ಕಾರಣವೇನು ಎಂಬುದರ ಆಳವಾದ ಮತ್ತು ವಿವರ ವಾದ ಪರಿಶೀಲನೆಗೆ ಹೋಗದೆ, ಇಡೀ ಸಂದರ್ಭವನ್ನು ಸರಳೀಕರಿಸಿ ಇದಕ್ಕೆ ಸರ್ಕಾರವನ್ನಷ್ಟೇ ಹೊಣೆ ಮಾಡಿ ಅದನ್ನು ದೂಷಿಸತೊಡಗಿರುವುದು ಕನ್ನಡ ಜನತೆ ಇತ್ತೀಚಿನ ವರ್ಷಗಳಲ್ಲಿ ಬೆಳೆಸಿಕೊಂಡು ಬಂದಿರುವ ಆತ್ಮದ್ರೋಹಿ ಪ್ರವೃತ್ತಿಯ ಪ್ರತೀಕವಷ್ಟೇ ಆಗಿದೆ. ಇದರ ಬಹು ಒಳ್ಳೆಯ ಪ್ರಾತ್ಯಕ್ಷಿಕೆಯನ್ನು ಮೊನ್ನೆ ನಡೆದ ರಾಜ್ಯೋತ್ಸವ ಆಚರಣೆಯ ಭಾಗವಾಗಿ ಕನ್ನಡ ಶಾಲೆಗಳನ್ನು ಮುಚ್ಚುವುದರ ವಿರುದ್ಧ ನಡೆದ ಪ್ರತಿಭಟನೆಗಳ ಆಚರಣೆಯಲ್ಲಿ ನಾವು ಕಂಡೆವು. ವಾಸ್ತವ ಸಂಗತಿ ಎಂದರೆ, ಕನ್ನಡ ಶಾಲೆಗಳ ಈ ದುರ್ಗತಿಗೆ ಹಿಂದಿನ ಎಲ್ಲ ಸರ್ಕಾರಗಳೂ ಸೇರಿದಂತೆ ಇಂದಿನ ಸರ್ಕಾರವೂ ಭಾಷೆ ಮತ್ತು ಶಿಕ್ಷಣ ಕುರಿತ ತನ್ನ ಸಂದಿಗ್ಧ ನೀತಿ, ಆಲಸ್ಯ ಮತ್ತು ಬದ್ಧತೆಯ ಕೊರತೆಗಳಿಂದಾಗಿ ಕಾರಣವಾಗಿ ದೆಯಾ ದರೂ, ಅದೊಂದೇ ಕಾರಣವಲ್ಲ ಎಂಬುದನ್ನು ನಾವು ಅರಿಯಬೇಕಿದೆ.

ವಿಚಿತ್ರವೆಂದರೆ, ಕನ್ನಡ ಶಾಲೆಗಳನ್ನು ಮುಚ್ಚಬೇಕಾದ ಸಂದರ್ಭದ ಸಂಬಂಧವಾಗಿ ಈ ಶಾಲೆಗಳ ಗುಣಮಟ್ಟದ ಬಗ್ಗೆ ಹೆಚ್ಚು ಮಾತನಾಡಲಾಗುತ್ತಿದೆ. ಸರ್ಕಾರ ಇದರ ಗುಣಮಟ್ಟವನ್ನು ಕಾಪಾಡಲಾಗದಿದ್ದರಿಂದ ಅವು ಮುಚ್ಚಲ್ಪಡುತ್ತಿವೆ ಎಂದು ಸರಳವಾಗಿ ವಾದಿಸಲಾಗುತ್ತಿದೆ. ಅತ್ಯುತ್ತಮ ಫಲಿತಾಂಶ ನೀಡುತ್ತಿದ್ದ ಶ್ರೇಷ್ಠ ಮಟ್ಟದ ಗುಣಮಟ್ಟದ ಅನೇಕ ಕನ್ನಡ ಶಾಲೆಗಳು ಕರಾವಳಿ ಮತ್ತು ಮಲೆನಾಡಿನ ಅನೇಕ ಊರುಗಳಲ್ಲಿ ಕಳೆದ ಎರಡು ಮೂರು ವರ್ಷಗಳಲ್ಲಿ ಮುಚ್ಚಿ ಹೋದ/ಹೋಗುತ್ತಿರುವುದನ್ನು ಕಣ್ಣಾರೆ ಕಂಡವರು ಈ ವಾದವನ್ನು ಅದರ ಮುಖಬೆಲೆಯಲ್ಲಿ ಒಪ್ಪಲಾಗುವುದಿಲ್ಲ. ಅಷ್ಟೇ ಅಲ್ಲ, ಇಂತಹ ವಾದದ

ಹಿಂದೆ ಖಾಸಗಿ ಇಂಗ್ಲಿಷ್ ಶಾಲೆಗಳ ಗುಣಮಟ್ಟವನ್ನು ಸಾರಾಸಗಟಾಗಿ ಒಪ್ಪುವ ಭೋಳೆತನ ಎದ್ದು ಕಾಣುವಂತಿದೆ. ಇದು ಮೇಲ್ನೋಟಕ್ಕೇ ಪ್ರತಿಷ್ಠಿತ ಖಾಸಗಿ ಶಾಲೆಗಳಲ್ಲಿ ತಮ್ಮ ಮಕ್ಕಳನ್ನು ಓದಿಸುತ್ತಿರುವವರು ನೀಡುವ ಕುಂಟು ನೆವವನ್ನು ಆಧರಿಸಿ ಕಟ್ಟಲಾದ ವಾದದಂತೆ ತೋರುತ್ತದಷ್ಟೆ. ಸರ್ಕಾರಿ ಶಾಲೆಗಳ ಸಿಬ್ಬಂದಿ ಪಡೆಯುವ ಸಂಬಳದ ಶೇ. 30 ಭಾಗವನ್ನೂ ಪಡೆಯದ ಖಾಸಗಿ ಶಾಲೆಗಳ ಸಿಬ್ಬಂದಿ ಯಾವ ಮಟ್ಟದ ಶಿಕ್ಷಣವನ್ನು ಮಕ್ಕಳಿಗೆ ಒದಗಿಸುತ್ತಿದೆ ಎಂಬುದನ್ನು ಬಲ್ಲವರೇ ಬಲ್ಲರು! ಇನ್ನು ಇಲ್ಲಿ ಲಭ್ಯವಿರುವ ಮೂಲ ಸೌಕರ್ಯಗಳನ್ನು ನೋಡಿಯೇ ತೀರಬೇಕು.

ಸರ್ಕಾರಿ ಶಾಲೆಗಳ ಗುಣಮಟ್ಟ (ಶಿಕ್ಷಣ ಮತ್ತು ಮೂಲ ಸೌಕರ್ಯಗಳ ವಿಷಯದಲ್ಲಿ) ಈಗ ತೃಪ್ತಿಕರವಾಗಿಲ್ಲ, ನಿಜ. ಅಲ್ಲಿಗೆ ತಮ್ಮ ಮಕ್ಕಳನ್ನು ಕಳಿಸಿದರೆ ಕೆಟ್ಟು ಹೋಗುತ್ತಾರೆ ಎಂಬ ನಂಬಿಕೆ ಪಟ್ಟಣಿಗರಲ್ಲಿ ಗಟ್ಟಿಯಾಗಿ ಬೇರೂರಿದೆ. ಆದರೆ ಇದಕ್ಕೆ ಯಾರು ಹೊಣೆ? ಖಾಸಗಿ ಇಂಗ್ಲಿಷ್ ಶಾಲೆಗಳ ಬಿನ್ನಾಣಗಳಿಗೆ ಮಾರು ಹೋಗಿ ಕ್ರಮೇಣ ನಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಿಂದ ಸ್ಥಳಾಂತರಿಸಿ ಅವುಗಳ ಹೊಣೆಗೇಡಿತನಕ್ಕೆ ಕಾರಣವಾಗಿ, ಅವನ್ನು ಶಾಪಾರ್ಹ 'ದೊಡ್ಡಿ'ಗಳನ್ನಾಗಿ ಪರಿವರ್ತಿಸಿದವರು ಯಾರು? ಎಲ್ಲರ ಮಕ್ಕಳೂ ಸರ್ಕಾರಿ ಕನ್ನಡ ಶಾಲೆಗಳಲ್ಲಿ ಓದುವಂತಿದ್ದ ಸಂದರ್ಭದಲ್ಲಿ ಗುಣಮಟ್ಟದ ಮಾತೆಲ್ಲಿತ್ತು? 'ದೊಡ್ಡಿ'ಗಳು ಎಲ್ಲಿದ್ದವು? ಈಗಲೂ ಸರ್ಕಾರಿ ಶಾಲೆಗಳಲ್ಲದೆ, ಅವಕ್ಕಿಂತ ಹೀನಸ್ಥಿತಿಯಲ್ಲಿರುವ ಬೇರೆ ದೊಡ್ಡಿಗಳೂ ಇವೆ... ಆದರೆ ಅವುಗಳಿಗೆ 'ಮಮ್ಮಿ- ಡ್ಯಾಡಿ'ಗಳು ಹೆಚ್ಚಿನ ಪ್ರವೇಶ ಶುಲ್ಕ ನೀಡಿ ಠಾಕೂಠೀಕಾದ ಸಮವಸ್ತ್ರಗಳನ್ನು ಧರಿಸಿರುವಂತೆ ಮಾಡಿರುವ ಮಕ್ಕಳನ್ನು ಕೂಡಿಹಾಕಿರುವುದರಿಂದ ಅವನ್ನು ದೊಡ್ಡಿಗಳೆಂದು ಕರೆಯಲಾಗುವುದಿಲ್ಲವಷ್ಟೆ! ಅವು ಬೆಂಗಳೂರು ಮತ್ತು ಇತರ ಪಟ್ಟಣಗಳಲ್ಲಿನ ಇಕ್ಕಟಾದ ಬೀದಿಗಳಲ್ಲಿ ಇಕ್ಕಟ್ಟಾಗಿ ಕಟ್ಟಲ್ಪಟ್ಟಿರುವ ಕಟ್ಟಡಗಳ ಮೂರನೆಯ ಅಥವಾ ನಾಲ್ಕನೆಯ ಮಹಡಿಗಳಲ್ಲಿ ನಡೆಯುತ್ತಿರುವ ಇಂಗ್ಲಿಷ್ ಶಾಲೆಗಳ ರೂಪದಲ್ಲಿವೆ.

ಇರಲಿ. ಈ ಖಾಸಗಿ ಇಂಗ್ಲಿಷ್ ಶಾಲೆಗಳು ಆರಂಭವಾದ್ದಾದರೂ ಏಕೆ? ಬೇಡಿಕೆ ಇದ್ದರೆ ಮಾತ್ರ ಸರಕು ಉತ್ಪಾದನೆಯಾಗುತ್ತದಲ್ಲವೇ? ಇಂಗ್ಲಿಷ್ ಶಾಲೆಗಳ ಬೇಡಿಕೆ ಏಕೆ ಹೆಚ್ಚುತ್ತಾ ಹೋಯಿತು? ಇತ್ತೀಚಿನ ವರ್ಷಗಳಲ್ಲಿ ಎಲ್ಲವೂ ಸರ್ಕಾರದ ನಿಯಂತ್ರಣ ಮೀರಿ, ಸಾರ್ವಜನಿಕ ಜೀವನದಲ್ಲಿ ವ್ಯಾವಹಾರಿಕ ಲಾಭ ಮತ್ತು ಅನುಕೂಲಗಳಷ್ಟೇ ಮುನ್ನೆಲೆಗೆ ಬಂದುದನ್ನು ನಾವು ಕಂಡಿದ್ದೇವೆ. ಈ ಸಂದರ್ಭದಲ್ಲಿ ನಮ್ಮ ಕೆಲ ಬುದ್ಧಿಜೀವಿಗಳೂ ಸೇರಿದಂತೆ ಹಲವು ವಲಯಗಳು ತಮ್ಮ ಜಾಣ ಮತ್ತು ಸಮಯಸಾಧಕ ವಾದಗಳ ಮೂಲಕ ಸಾರ್ವಜನಿಕ ವ್ಯವಹಾರಗಳಲ್ಲಿ ಇಂಗ್ಲಿಷ್‌ನ ಮಹತ್ವವನ್ನು ಹೊಸ ಉತ್ಸಾಹದಿಂದ ಎತ್ತಿ ಹಿಡಿಯುತ್ತಾ ಕನ್ನಡದ ಪ್ರಾಥಮಿಕತೆಯನ್ನು ಅಲ್ಲಗಳೆಯುತ್ತಾ ಹೋದವು. ಇದಕ್ಕೆ ಒಂದು ಕಡೆ ಕನ್ನಡದ ಬಗೆಗಿನ ಬದ್ಧತೆಯನ್ನು ಪುನರುಚ್ಚರಿಸುತ್ತಾ, ಇನ್ನೊಂದು ಕಡೆ ತನ್ನ ರಾಜಕೀಯ ಹಿತಾಸಕ್ತಿ ಕಾಪಾಡಿಕೊಳ್ಳಲು ಕುಮ್ಮಕ್ಕು ಕೊಡುತ್ತಾ ಹೋದ ಸರ್ಕಾರದ ವರ್ತನೆ ಈ ಬೆಳವಣಿಗೆಗೆ

ಒಂದು ಕಾರಣ. ಇನ್ನೊಂದು ಕಾರಣವೆಂದರೆ, ಜನಪ್ರಿಯವೆಂದು ಕರೆಯಬಹುದಾದ ಕನ್ನಡ ಚಳುವಳಿಯ ಮುಂಚೂಣಿಯಲ್ಲಿದ್ದ ಹಲವು ಸಂಘ– ಸಂಸ್ಥೆಗಳು ಮತ್ತು ಅದರ ನಾಯಕರು ಈ ಹೊಸ 'ಆಸೆ ಬುರಕ' ವಾತಾವರಣದಲ್ಲಿ ಮೈಮರೆತವರಂತೆ ಈ ವಲಯದೊಂದಿಗೆ ನಿಧಾನವಾಗಿ ಶಾಮೀಲಾಗುತ್ತಾ ಹೋದದ್ದು.

ನಾಲ್ಕೈದು ವರ್ಷಗಳ ಹಿಂದೆ ದಲಿತ– ಹಿಂದುಳಿದ ವರ್ಗಗಳ ಹಿತದ ಹೆಸರಿನಲ್ಲಿ ಸರ್ಕಾರಿ ಶಾಲೆಗಳಲ್ಲಿ ಒಂದನೇ ತರಗತಿಯಿಂದಲೇ ಇಂಗ್ಲಿಷ್ ಕಲಿಸಬೇಕೆನ್ನುವ ಚಳುವಳಿಯನ್ನು ನಮ್ಮ ಕೆಲವು ಲೇಖಕ– ಬುದ್ಧಿಜೀವಿಗಳು ಹಮ್ಮಿಕೊಂಡಿದ್ದು ಸರ್ಕಾರದ ಕಡೆಯಿಂದ ಸಿಕ್ಕ ಕುಮ್ಮಕ್ಕಿನಿಂದ ಎಂಬುದು ಈಗ ಬಹಿರಂಗ ಸತ್ಯವಾಗಿದೆ. ಈ ಸಂಬಂಧ ಸರ್ಕಾರದ ಹಿಂದೆ ಯಾರಿದ್ದರು ಮತ್ತು ಅವರ ಉದ್ದೇಶ ಏನಾಗಿತ್ತು ಎಂಬುದೂ ಈಗ ಅಷ್ಟೇ ಬಹಿರಂಗವಾದ ಸತ್ಯವಾಗಿದೆ. ಈ ಸಂದರ್ಭದಲ್ಲಿ ಈ ಲೇಖಕರು– ಬುದ್ಧಿಜೀವಿಗಳು ಕನ್ನಡ ಭಾಷಾ ಪರಂಪರೆಯ ವಿರುದ್ಧ– ಅದು ದಲಿತ ಮತ್ತು ಶೂದ್ರ ಮಕ್ಕಳಿಗೆ ಮಾರಕ ಎಂಬಂತೆ– ಮಂಡಿಸಿದ ವಾದಗಳನ್ನು ಗಮನಿಸಿದರೆ ಯಾರಿಗಾದರೂ ಗಾಬರಿಯಾದೀತು!

ಆದರೆ ಈಗ ಇವರ ಈ ಚಳವಳಿಯ ಸೃಷ್ಟಿಸಿದ ಪರೋಕ್ಷ ಕನ್ನಡ ವಿರೋಧಿ ವಾತಾವರಣದ ಪರಿಣಾಮವೋ ಎಂಬಂತೆ ಸಾವಿರಾರು ಕನ್ನಡ ಶಾಲೆಗಳನ್ನು ಒಮ್ಮೆಲೇ ಮುಚ್ಚಬೇಕಾಗಿ ಬಂದಿರುವ ಸಂದರ್ಭದಲ್ಲಿ ಇದೇ ಲೇಖಕರು ಮತ್ತು ಬುದ್ಧಿಜೀವಿಗಳು ದಾಖಲಿಸುತ್ತಿರುವ ಪ್ರತಿಭಟನೆ, ಮಂಡಿಸುತ್ತಿರುವ ವಾದ ಮತ್ತು ಸುರಿಸುತ್ತಿರುವ ಕಣ್ಣೀರನ್ನು ನೋಡಿದರೆ ಇವರ ಆತ್ಮ ವಂಚನೆಯ ಮಟ್ಟ ಎಲ್ಲಿಗೆ ಬಂದು ಮುಟ್ಟಿದೆಯೆಂದು ಆಶ್ಚರ್ಯವಾಗುತ್ತದೆ. ಇವರೂ ಸೇರಿದಂತೆ ಈಗ ರಾಜ್ಯೋತ್ಸವ ಆಚರಣೆಯ ಅಂಗವಾಗಿ ಕನ್ನಡ ಭುವನೇಶ್ವರಿ ಮೈಮೇಲೆ ಬಂದಂತೆ ಕಿರುತೆರೆಗಾಗಿ ವೀರಾವೇಶದ ಪ್ರತಿಭಟನೆಗಳನ್ನು ಆಚರಿಸುತ್ತಿರುವ ಕನ್ನಡ ಪರವೆಂದು ಹೇಳಲಾಗುವ ಸಂಘಟನೆಗಳ ಎಷ್ಟು ಜನ ಕಾರ್ಯಕರ್ತರು ಮತ್ತು ನಾಯಕರು ತಮ್ಮ ಮಕ್ಕಳು ಮತ್ತು ಮೊಮ್ಮಕ್ಕಳನ್ನು ಕನ್ನಡ ಶಾಲೆಗಳಿಗೆ ಕಳಿಸಿದ್ದಾರೆ ಅಥವಾ ಕಳಿಸುತ್ತಿದ್ದಾರೆ ಎಂಬುದನ್ನು ಪರಿಶೀಲಿಸಿದರೆ ಈ ಪ್ರತಿಭಟನೆ, ವಾದ ಮತ್ತು ಕಣ್ಣೀರಿನ ಪ್ರಾಮಾಣಿಕತೆ ಬಯಲಾಗುತ್ತದೆ. ಏಕೆಂದರೆ, ಕೆಲವು ವರ್ಷಗಳ ಹಿಂದೆ ಸರ್ಕಾರವು ಎಲ್ಲ ಶಾಲೆಗಳಲ್ಲಿ ಐದನೇ ತರಗತಿಯವರೆಗೆ ಕನ್ನಡ ಮಾಧ್ಯಮವನ್ನು ಕಡ್ಡಾಯ ಮಾಡುವ ತನ್ನ ನೀತಿಯನ್ನು ಜಾರಿಗೆ ತರಲು ಯತ್ನಿಸಿದಾಗ ವ್ಯಕ್ತವಾದ ವಿರೋಧ ಮತ್ತು ಆರಂಭವಾದ ನ್ಯಾಯಾಂಗ ಹೋರಾಟದ ಸಂದರ್ಭದಲ್ಲಿ ನಡೆದ ಕನ್ನಡ ಮಾಧ್ಯಮಪರ ಹೋರಾಟದಲ್ಲಾಗಲೀ, ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಕೆ ಪರವಾದ ಚಳುವಳಿಯ ಹಿಂದೆ ವ್ಯಕ್ತವಾದ ಕನ್ನಡ ವಿರೋಧಿ ಧ್ವನಿಯ ಬಗ್ಗೆ ನಡೆದ ಪ್ರತಿಭಟನೆಗಳ ಸಂದರ್ಭದಲ್ಲಾಗಲೀ ಇವರಾರೂ ತುಟಿಕ್ ಪಿಟಕ್ ಎನ್ನಲಿಲ್ಲ!

ಆದರೆ ಈಗ ಸರ್ಕಾರವನ್ನು ದೂಷಿಸುವ ಸುಲಭದ ಕೆಲಸದಲ್ಲಿ ಇವರೆಲ್ಲ ಒಂದಾಗಿದ್ದಾರೆ! ಏಕೆಂದರೆ, ಇದರಿಂದ ಇವರು ಈಗ ಕಳೆದುಕೊಳ್ಳುವುದು ಏನೂ ಇಲ್ಲ!

ಜೊತೆಗೆ, ಈಗಿರುವುದು ಬಿಜೆಪಿ ಸರ್ಕಾರವಾದ್ದರಿಂದ ಇವರ ಕ್ರಾಂತಿಕಾರಿ ಎಡಪಂಥೀಯತೆಯ ಪ್ರದರ್ಶನಕ್ಕೂ ಇದು ಉಚಿತ ಅವಕಾಶ ಒದಗಿಸಿದೆ! ಅಲ್ಲದೆ, ಶಾಲೆಗಳನ್ನು ಮುಚ್ಚದೆ ನಾಲ್ವರು ವಿದ್ಯಾರ್ಥಿಗಳಿಗೆ ಶಾಲೆಯೊಂದನ್ನು ನಡೆಸುವ ವೆಚ್ಚದ ನೇರ ಮತ್ತು ತಾಕ್ಷಣಿಕ ಜವಾಬ್ದಾರಿ ಇವರದ್ದೇನಲ್ಲವಲ್ಲ! ಇವರ ಮನೆಗಳಲ್ಲಿ ಇಂತಹ ನಷ್ಟದ ಬಾಬತ್ತನ್ನು ಆದರ್ಶದ ನೆಲೆಯಲ್ಲಿ ಎಷ್ಟು ಕಾಲ ಮುಂದುವರೆಸಿಕೊಂಡು ಹೋಗುವವರು ಎಂಬುದನ್ನು ಅವರನ್ನೇ ಕೇಳಿ ತಿಳಿದುಕೊಳ್ಳಬೇಕಷ್ಟೆ! ಕೆಲವರು ಇದಕ್ಕೆಲ್ಲ ಪರಿಹಾರವಾಗಿ ಇಂಗ್ಲಿಷ್ ಶಾಲೆಗಳನ್ನು ಮುಚ್ಚುವಂತೆ ಮತ್ತು ಇನ್ನು ಕೆಲವರು ಕನ್ನಡ ಮಾಧ್ಯಮಕ್ಕೆ ಪರವಾನಿಗಿ ಪಡೆದು ಇಂಗ್ಲಿಷ್ ಮಾಧ್ಯಮದಲ್ಲಿ ಬೋಧಿಸುತ್ತಿರುವ ಶಾಲೆಗಳನ್ನು ಮುಚ್ಚುವಂತೆ ಸಲಹೆ ನೀಡಿದ್ದಾರೆ! ಐದನೇ ತರಗತಿವರೆಗೆ ಮಾತ್ರ ಕನ್ನಡ ಮಾಧ್ಯಮ ಕಡ್ಡಾಯ ಮಾಡಿದಾಗ ಎದ್ದ ಹಾಹಾಕಾರ ಮತ್ತು ಅದು ನ್ಯಾಯಾಲಯದ ಮೆಟ್ಟಿಲೇರಿ ಪಡೆದ ತೀರ್ಪನ್ನು ಬಲ್ಲವರಾರೂ ಹುಡುಗಾಟದ ಹೊರತಾಗಿ ಇಂತಹ ಸಲಹೆಗಳನ್ನು ನೀಡಲಾರರು. ರಾಜ್ಯದ ಶ್ರೇಷ್ಠ ನ್ಯಾಯಾಲಯವು ತನ್ನಲ್ಲಿ ಈ ಸಂಬಂಧವಾಗಿ ಮೊಕದ್ದಮೆ ದಾಖಲಾದ ೧೩ ವರ್ಷಗಳ ಕಾಲ ಸುಮ್ಮನಿದ್ದು, ಕೊನೆಗೆ ಕೆಲವು ಕನ್ನಡ ಪರ ಶಕ್ತಿಗಳು ಸರ್ಕಾರದ ಮೇಲೆ ತಂದ ಒತ್ತಡದಿಂದಾಗಿ ವಿಚಾರಣೆ ನಡೆಸಿ, ಮತ್ತೆ ೨ ವರ್ಷಗಳ ಕಾಲ ತೀರ್ಪನ್ನು ಕಾದಿರಿಸಿತು! ಅಂತಿಮವಾಗಿ ಈ ವಿಚಾರಣೆಯ ನೇತೃತ್ವ ವಹಿಸಿದ್ದ ಮುಖ್ಯ ನ್ಯಾಯಾಧೀಶರು ಬಡ್ತಿ ಪಡೆದು ಸರ್ವೋನ್ನತ ನ್ಯಾಯಾಲಯಕ್ಕೆ ಹೋಗಬೇಕಾಗಿ ಬಂದ ಕೊನೆಯ ದಿನ ಅನಿವಾರ್ಯವೆಂಬಂತೆ ಈ ತೀರ್ಪನ್ನು ಪ್ರಕಟಿಸಲಾಯಿತು. ಈ ತೀರ್ಪಿನ ಸಾರಾಂಶವಾದರೂ ಏನು? ಮಕ್ಕಳ ಶಿಕ್ಷಣ ಮಾಧ್ಯಮದ ಆಯ್ಕೆ ತಂದೆ ತಾಯಿಗಳ ಮೂಲಭೂತ ಹಕ್ಕಿಗೆ ಸಂಬಂಧಿಸಿದ ವಿಷಯ ಎಂಬುದು! ಹೀಗಿರುವಾಗ ಸರ್ಕಾರ ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನು ಮುಚ್ಚಲು ಹೇಗೆ ಸಾಧ್ಯ? ಈಗ ಈ ತೀರ್ಪಿನ ವಿರುದ್ಧ ಸರ್ವೋನ್ನತ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿ ವರ್ಷಗಳೇ ಸಂದು ಹೋದವು! ವಿಚಾರಣೆ ಯಾವ ಹಂತದಲ್ಲದೆ ಎಂಬುದರ ಸುಳಿವೂ ಯಾರಿಗೂ ಇಲ್ಲ! ಸದ್ಯ ಸರ್ಕಾರದ ವಿರುದ್ಧ ಗುಟುರು ಹಾಕುತ್ತಿರುವ ಕನ್ನಡ ಹೋರಾಟಗಾರರಿಗಂತೂ ಇಲ್ಲವೇ ಇಲ್ಲ!

ನಮ್ಮ ಪ್ರಬಲ ರಾಜಕಾರಣಿಗಳ ಮತ್ತು ಅಧಿಕಾರಿಗಳ ಜಾಮೀನು ಅರ್ಜಿಗಳನ್ನು ಕೂಡಲೇ ವಿಚಾರಣೆಗೆ ಎತ್ತಿಕೊಂಡು ಕೆಲವೇ ದಿನಗಳಲ್ಲಿ ಇತ್ಯರ್ಥಪಡಿಸುವ ನಮ್ಮ ನ್ಯಾಯಾಲಯಗಳಿಗೆ ನಮ್ಮ ರಾಷ್ಟ್ರದ ಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದ ವಿಷಯ ಅಷ್ಟು ಮುಖ್ಯವಾಗಿ ಕಾಣುತ್ತಿಲ್ಲ ಮತ್ತು ಸಂದರ್ಭ ಸಿಕ್ಕಾಗಲೆಲ್ಲ ತನ್ನ ಕನ್ನಡ ಬದ್ಧತೆಯ ಬಗ್ಗೆ ದೊಡ್ಡ ಗಂಟಲಲ್ಲಿ ಉದ್ಘೋಷಣೆಗಳನ್ನು ಮಾಡುವ ಸರ್ಕಾರ ಈ ಬಗ್ಗೆ ಯಾವ ವಿಶೇಷ ಪ್ರಯತ್ನವನ್ನೂ ಮಾಡುತ್ತಿಲ್ಲ. ಇದು ನಮ್ಮ ರಾಷ್ಟ್ರ ಜೀವನದ ಆದ್ಯತೆಗಳು ಹೇಗೆ ಬುಡದಿಂದ ತುದಿಯವರೆಗೆ ತಲೆಕೆಳಗಾಗಿ ಹೋಗಿವೆ ಎಂಬುದರ ಸೂಚನೆಯಾಗಿದೆ. ಪರಿಸ್ಥಿತಿ ಹೀಗಿರುವಾಗ

ಸರ್ಕಾರಕ್ಕೆ ಇಂಗ್ಲಿಷ್ ಶಾಲೆಗಳನ್ನು ಮುಚ್ಚಿ ಎಂದು ಕರೆಕೊಡುವುದು ಸಾರ್ವಜನಿಕರ ಕಣ್ಣಿಗೆ ಮಣ್ಣೆರಚುವ ಜಾಣ ಇಲ್ಲವೆ ಬಾಯಿಬಡುಕತನದ ಮಾತು ಮಾತ್ರ ಆಗುತ್ತದೆ.

ಹಾಗಾಗಿ ಇಂದು ಕನ್ನಡ ಶಾಲೆಗಳನ್ನು ಉಳಿಸುವ ನಿಜವಾದ ಮತ್ತು ಏಕೈಕ ಮಾರ್ಗವೆಂದರೆ, ಈಗ ಕನ್ನಡ ಶಾಲೆಗಳ ಪರವಾಗಿ ಬೊಬ್ಬೆ ಹಾಕುತ್ತಿರುವವರೆಲ್ಲರೂ (ಈಗ ಈ ಸಂಬಂಧವಾಗಿ ರಾಜ್ಯ ಶ್ರೇಷ್ಠ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ಸಲ್ಲಿಸಿರುವ ಹಿರಿಯ ಸಾಹಿತಿಗಳ ಪೈಕಿ ಕೆಲವರೂ ಸೇರಿದಂತೆ) ಮೊದಲಾಗಿ, ತಮ್ಮ ಮಕ್ಕಳನ್ನು ಕನ್ನಡ ಶಾಲೆಗಳಿಗೆ ಕಳಿಸಿದ್ದರೆ ಈ ಶಾಲೆಗಳಿಗೆ ಈ ದುರ್ಗತಿ ಬರುತ್ತಿರಲಿಲ್ಲ ಎಂಬ ಮೂಲ ಸತ್ಯವನ್ನು ಮನಗಾಣುವುದು. ಈಗಲಾದರೂ ತಮ್ಮ ಕನ್ನಡ ಪ್ರೇಮವನ್ನು ಮತ್ತು ಅದರ ಹಿಂದಿನ ತಾತ್ವಿಕತೆಯನ್ನು ತಮ್ಮ, ತಮ್ಮ ಬಂಧು- ಮಿತ್ರರ ಹಾಗೂ ನೆರೆಹೊರೆಯ ಕುಟುಂಬಗಳ ಮಕ್ಕಳು ಹತ್ತಿರದ ಕನ್ನಡ (ಮಾಧ್ಯಮ)ಶಾಲೆಗಳಿಗೆ ಹೋಗುವಂತೆ ಪ್ರಭಾವ ಬೀರುವ ಕ್ರಮಗಳನ್ನು ಪಶ್ಚಾತ್ತಾಪ ಮತ್ತು ಕರ್ತವ್ಯಪ್ರಜ್ಞೆಯೊಂದಿಗೆ ಕೈಗೊಳ್ಳುವುದು. ಇದಕ್ಕೆ ತಕ್ಕ ಕಾರ್ಯಕ್ರಮಗಳನ್ನು ರೈತ ಸಂಘ, ದಲಿತ ಸಂಘ ಮತ್ತು ಸ್ಥಳೀಯ ಜನಸಂಘಟನೆಗಳ ಸಹಯೋಗದೊಡನೆ ರೂಪಿಸಿಕೊಳ್ಳಬೇಕು. ಕನ್ನಡ ಪರ ಸಂಘಟನೆಗಳು ಅಕಾಲಿಕವಾಗಿ ಮತ್ತು ಅರ್ಥಹೀನವಾಗಿ ಕನ್ನಡಪರ ಬೊಬ್ಬೆ ಹಾಕುವುದನ್ನು ನಿಲ್ಲಿಸಿ, ಪ್ರತಿ ವರ್ಷ ಶಾಲಾ ಪ್ರವೇಶಾತಿ ಸಮಯದಲ್ಲಿ (ಈಗ ಮುಂದಿನ ಮೇ ಹೊತ್ತಿಗೆ) ಪ್ರತಿ ಊರು ಮತ್ತು ಬಡಾವಣೆಗಳಲ್ಲಿ ಕನ್ನಡ ಶಾಲಾ ಪ್ರವೇಶಾತಿ ಆಂದೋಲನಗಳನ್ನು ಹಮ್ಮಿಕೊಳ್ಳಬೇಕು. ಅದೇ ನಿಜವಾದ ಕನ್ನಡದ ಕೆಲಸ, ಕನ್ನಡವನ್ನು ಉಳಿಸಿ ಬೆಳಸುವ ಕೆಲಸ ಎಂಬುದನ್ನು ಅವು ಅರಿಯಬೇಕು.

ಸರ್ಕಾರ ಕೂಡಾ ಇಂಗ್ಲಿಷ್ ಮಾಧ್ಯಮ ಶಾಲೆಗಳ ಮೇಲೆ ಅವುಗಳ ಒಟ್ಟು ಹೂಡಿಕೆ ಆಧಾರದ ಮೇಲೆ ವಿಶೇಷ ತೆರಿಗೆ ಹಾಕುವ ಕಾನೂನಿನ ಅವಕಾಶಗಳನ್ನು ಪರಿಶೀಲಿಸಬೇಕು. ಇದರಿಂದ ಒಂದು ವಿಶೇಷ ನಿಧಿಯನ್ನು ಸ್ಥಾಪಿಸಿ ಅದನ್ನು ಈಗಿರುವ ಕನ್ನಡ ಶಾಲೆಗಳ ಶೈಕ್ಷಣಿಕ ಮತ್ತು ಮೂಲ ಸೌಕರ್ಯಗಳ ಸುಧಾರಣೆಗಾಗಿ ಬಳಸಲು ಒಂದು ಕಾಲಬದ್ಧ ಕಾರ್ಯಕ್ರಮವನ್ನು ರೂಪಿಸಿ, ಅದರ ಸುಪರ್ದಿಯನ್ನು ಅದಕ್ಕೆಂದೇ ವಿಶೇಷವಾಗಿ ನಿಯೋಜಿತವಾದ ಸ್ಥಳೀಯ ಸಮಿತಿಗಳಿಗೆ ನೀಡಬೇಕು. ಅವುಗಳ ಜವಾಬ್ದಾರಿಯನ್ನೂ ಫಲಿತಾಂಶಾಧಾರಿತವಾಗಿ ನಿಗದಿಪಡಿಸಬೇಕು. ಕೇಂದ್ರೀಯ ಪಠ್ಯಕ್ರಮದ ಶಾಲೆ ತೆರೆಯಲು ಅನುಮತಿ ಕೊಡುವ ಮುನ್ನ ಅದರ ಅಗತ್ಯವನ್ನು, ಅಲ್ಲಿನ ಪ್ರವೇಶಾವಕಾಶಗಳನ್ನು ಕಟ್ಟುನಿಟ್ಟಾಗಿ ಪರಾಮರ್ಶಿಸಬೇಕು. ಈಗ ಅನಗತ್ಯವಾಗಿ ನಾಯಿಕೊಡೆಗಳಂತೆ ತಲೆ ಎತ್ತಿರುವ ಇಂತಹ ಶಾಲೆಗಳನ್ನು ಮುಚ್ಚಲು ಕೂಡಲೇ ಕ್ರಮ ಕೈಗೊಳ್ಳಬೇಕು. ಕನ್ನಡವನ್ನು ಒಂದು ಭಾಷೆಯಾಗಿಯಾದರೂ ಕಲಿಸುವ ಅವಕಾಶವನ್ನು ಬೇಕೆಂದೇ ಹತ್ತಿಕ್ಕಿರುವ ಮತ್ತು ಶಾಲಾ ಆವರಣದಲ್ಲಿ ಕನ್ನಡ ಮಾತಾಡಿದರೆ ದಂಡ ಹಾಕುವಂತಹ ಮತಿಗೆಟ್ಟ ಕ್ರಮಗಳನ್ನು ಕೈಗೊಂಡಿರುವ ಶಾಲೆಗಳನ್ನು ಗುರುತಿಸಿ ಅವುಗಳ ಆಡಳಿತ ಮಂಡಳಿಗೆ ಸಾರ್ವಜನಿಕವಾಗಿ

ಛೀಮಾರಿ ಹಾಕಬೇಕು; ಅವುಗಳ ಆವರಣದಲ್ಲಿ ಕನ್ನಡ ವಾತಾವರಣವನ್ನು ಉಂಟು ಮಾಡುವಂತಹ ಕಾನೂನಿನ ಕ್ರಮಗಳನ್ನು ಕೈಗೊಳ್ಳಬೇಕು.

ಈಗ ಬರೀ ಕೆಲಸಕ್ಕೆ ಬಾರದ ವಿಚಾರ ಸಂಕಿರಣ, ಮೆರವಣಿಗೆ, ಯಾತ್ರೆಗಳನ್ನು ಆಯೋಜಿಸುತ್ತಾ ಕಂತ್ರಾಟುದಾರರಿಗೆ ಮತ್ತು ಭಾಷಣಕೋರರಿಗೆ ಭರ್ಜರಿ ಸಂಭಾವನೆ, ಪ್ರಯಾಣ ಭತ್ಯೆಗಳನ್ನು ನೀಡುತ್ತಾ ಕಾಲ ಕಳೆಯುತ್ತಿರುವ ಕನ್ನಡ ಅಭಿವೃದ್ಧಿ ಪ್ರಾಧಿಕಾರವನ್ನು ಕೂಡಲೇ ವಿಸರ್ಜಿಸಿ, ವಿಶೇಷಜ್ಞರನ್ನೊಳಗೊಂಡ ಒಂದು ಸ್ವಾಯತ್ತ ಕನ್ನಡ ಶಾಲಾ ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸಬೇಕು. ಅದರ ನಿಗಾದಲ್ಲಿ ಪ್ರತಿ ಹೋಬಳಿ ಕೇಂದ್ರದಲ್ಲಾದರೂ ಮುಂದಿನ ಶೈಕ್ಷಣಿಕ ವರ್ಷದ ಆರಂಭದ ವೇಳೆಗಾದರೂ ಸುಸಜ್ಜಿತವಾದ ಒಂದು ಮಾದರಿ ಕನ್ನಡ ಶಾಲೆಯನ್ನು ತೆರೆಯಲು ಕೂಡಲೇ ಕ್ರಮ ಕೈಗೊಳ್ಳಬೇಕು. ಇದರ ಪ್ರವೇಶಾತಿಗಾಗಿ ಒಂದು ವಿಶೇಷ ಶುಲ್ಕವನ್ನೂ ನಿಗದಿಪಡಿಸಬಹುದು. ಉಚಿತ ಶಾಲಾ ಶಿಕ್ಷಣದ ನಿಯಮಗಳು ಇದಕ್ಕೆ ಅಡ್ಡಿಯಾಗಬಾರದು. ಇಂದು ಬಡವರೆಂದು ಹೇಳಿಕೊಳ್ಳುವವರು ಕೂಡಾ ದುಬಾರಿ ಶುಲ್ಕ ನೀಡಿ ತಮ್ಮ ಮಕ್ಕಳನ್ನು ಇಂಗ್ಲಿಷ್ ಶಾಲೆಗಳಿಗೆ ಸೇರಿಸುತ್ತಿಲ್ಲವೇ? ಹಾಗೇ ಕನ್ನಡ ಶಾಲೆ ತೆರೆಯಲು ಆಸಕ್ತಿ ವಹಿಸಿ ಮುಂದೆ ಬರುವ ವ್ಯಕ್ತಿಗಳಿಗೆ ನಿವೇಶನ, ಕಟ್ಟಡಗಳಿಗಾಗಿ ಸರ್ಕಾರ ಆದ್ಯತೆಯ ಮೇಲೆ ಸಹಾಯ ಒದಗಿಸಬೇಕು.

ಜೊತೆಗೆ ಸರ್ಕಾರ ಕನ್ನಡ ಮಾಧ್ಯಮದಲ್ಲಿ ಶಾಲಾ ಶಿಕ್ಷಣ ಪೂರೈಸಿದವರಿಗೆ, ರಾಜ್ಯದಲ್ಲಿನ ಸರ್ಕಾರಿ ಇಲಾಖೆಗಳಲ್ಲಿ ಮತ್ತು ರಾಜ್ಯ ಸರ್ಕಾರದ ಕೃಪಾಶ್ರಯದಲ್ಲಿ ನಡೆಯುತ್ತಿರುವ ಸಂಘ– ಸಂಸ್ಥೆ ಹಾಗೂ ಉದ್ಯಮಗಳಲ್ಲಿನ ಉದ್ಯೋಗಗಳಲ್ಲಿ ಶೇಕಡಾ ಇಂತಿಷ್ಟೆಂದು ಗರಿಷ್ಟ ಸಾಧ್ಯ ಪ್ರಮಾಣದಲ್ಲಿ ಮೀಸಲಿರಿಸುವ ಕಾನೂನನ್ನು ಜಾರಿಗೆ ತರಬೇಕು. ಹಾಗೇ ಎಲ್ಲ ರಾಜ್ಯ ಸರ್ಕಾರದ ಉದ್ಯೋಗಿಗಳು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೇ ಕಳಿಸಬೇಕೆನ್ನುವ ನಿಯಮ ಜಾರಿಗೆ ತರುವ ನಿಟ್ಟಿನಲ್ಲಿ ಆಲೋಚನೆ ಮಾಡಬೇಕು. ಈ ಕ್ರಮಗಳು ಸ್ವಲ್ಪ ಕಾಲ ಮತ್ತು ಕೆಲವು ವಲಯಗಳಲ್ಲಿ ಅಸಮಾಧಾನಕ್ಕೆ, ವಿರೋಧಕ್ಕೆ ಹಾಗೂ ಕಾನೂನು ಹೋರಾಟಕ್ಕೆ ಆಸ್ಪದ ನೀಡಬಹುದು. ಆದರೆ ಸರ್ಕಾರ ನಿಜವಾದ ಕನ್ನಡಪರ ಸಂಘಟನೆಗಳ ಮತ್ತು ಶಿಕ್ಷಣ ತಜ್ಞ– ಬುದ್ಧಿಜೀವಿಗಳ ಸಮನ್ವಯದ ಕಾರ್ಯಾಚರಣೆಯ ಮೂಲಕ ಈ ಅಸಮಧಾನ– ಹೋರಾಟಗಳು ಹೇಗೆ ಅನೈತಿಕ ಎಂಬುದನ್ನು ಜನತೆಗೆ ಮನದಟ್ಟು ಮಾಡುವ ಗಂಭೀರ ಪ್ರಯತ್ನ ಮಾಡಬೇಕು. ಪ್ರತಿ ರಾಜಕೀಯ ಪಕ್ಷವೂ ಇಂಗ್ಲಿಷ್ ಶಾಲೆಗಳನ್ನು ನಡೆಸುವ ತನ್ನ ನಾಯಕರನ್ನು, ಅವನ್ನು ಕೂಡಲೇ ಮುಚ್ಚುವಂತೆ ಕನ್ನಡ ಶಾಲೆಗಳಾಗಿ ಪರಿವರ್ತಿಸುವಂತೆ ನಿರ್ದೇಶನ ನೀಡಬೇಕು. ಹಾಗೆ ಮಾಡದ ಪಕ್ಷಗಳ ನಾಯಕರಿಗೆ ಕನ್ನಡಪರ ಸಂಘ– ಸಂಸ್ಥೆ– ವೇದಿಕೆಗಳು ಮುತ್ತಿಗೆ ಹಾಕುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಈ ಎಲ್ಲ ಕೆಲಸಗಳು ಒಟ್ಟಿಗೇ, ಸ್ವಲ್ಪ ಸ್ವಲ್ಪ ಪ್ರಮಾಣದಲ್ಲಾದರೂ ನಡೆದಲ್ಲಿ ನಮ್ಮ ಶಾಲಾ ಶಿಕ್ಷಣದ ಚಿತ್ರವೇ ನಿರ್ಣಾಯಕವಾಗಿ ಬದಲಾಗಿ ಈ ಕೆಲಸಗಳು ಪೂರ್ಣ ಪ್ರಮಾಣದಲ್ಲಿ ನಡೆಯುವಂತಹ ವಾತಾವರಣ ನಿರ್ಮಾಣವಾಗಬಹುದು. ಒಟ್ಟಿನಲ್ಲಿ ರಾಜ್ಯದಲ್ಲಿ ಕನ್ನಡಪರವಾದ ಒಂದು

'ಹವಾ' ಸೃಷ್ಟಿಯಾಗಬೇಕಿದೆ. ಅದು ಎಲ್ಲ ಭಾಷಣ– ಘೋಷಣೆಗಳಿಗಿಂತ ಹೆಚ್ಚು ಚುರುಕಾಗಿ ಕೆಲಸ ಮಾಡಬಲ್ಲದಾಗಿದೆ! ಇದಕ್ಕೆಲ್ಲ ನಮ್ಮ ರಾಜಕಾರಣಿಗಳಲ್ಲಿ ಶಿಕ್ಷಣ ಕುರಿತ ಗಂಭೀರ ಚಿಂತನೆ ಮತ್ತು ಇಚ್ಛಾ ಶಕ್ತಿ ಜಾಗೃತವಾಗಬೇಕಿದೆ ಎಂಬುದನ್ನೂ ಈ ಸಂದರ್ಭದಲ್ಲಿ ಹೇಳಬೇಕು.

ಎಲ್ಲಕ್ಕಿಂತ ಮುಖ್ಯವಾಗಿ ಸರ್ಕಾರ, ಸರ್ವೋನ್ನತ ನ್ಯಾಯಾಲಯದಲ್ಲಿ ವಿಚಾರಣೆಗಿರುವ ಕನ್ನಡ ಮಾಧ್ಯಮಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ರಾಜ್ಯ ಶ್ರೇಷ್ಠ ನ್ಯಾಯಾಲಯದ ತೀರ್ಪಿನ ಹಿನ್ನೆಲೆಯಲ್ಲಿ, ಸಂವಿಧಾನದ ವಿವಿಧ ಕಲಮುಗಳನ್ನು ಕನ್ನಡ ಮಾಧ್ಯಮಪರ ತೀರ್ಪು ಹೊಮ್ಮುವ ರೀತಿಯಲ್ಲಿ ವ್ಯಾಖ್ಯಾನಿಸಬಲ್ಲ ಸಮರ್ಥ ಮತ್ತು ಕನ್ನಡ ಪ್ರೇಮಿ ಸಂವಿಧಾನ ತಜ್ಞರ ನೆರವನ್ನು ಪಡೆಯಲು ಎಲ್ಲ ಪ್ರಯತ್ನಗಳನ್ನೂ ಮಾಡಬೇಕು. ಇದಕ್ಕಾಗಿ ವಿವಿಧ ಕ್ಷೇತ್ರಗಳ ತಜ್ಞರ ಸಲಹಾ ಸಮಿತಿಯನ್ನು ರಚಿಸುವ ಕಡೆ ಕೂಡ ಸರ್ಕಾರ ಗಮನ ಹರಿಸಬಹುದು. ಒಂದು ವೇಳೆ ಸರ್ವೋನ್ನತ ನ್ಯಯಾಲಯ ನಮ್ಮ ಶ್ರೇಷ್ಠ ನ್ಯಾಯಾಲಯದ ತೀರ್ಪನ್ನೇ ಎತ್ತಿ ಹಿಡಿದರೆ, ಆ ತೀರ್ಪಿನ ಆಧಾರದ ಮೇಲೆ, ಮಾತೃಭಾಷಾ ಶಿಕ್ಷಣಕ್ಕೆ ಪೂರಕವಾಗಿ ಸಂವಿಧಾನದ ಸೂಕ್ತ ತಿದ್ದುಪಡಿಗಾಗಿ ಒತ್ತಾಯಿಸುವ ಜನಾಂದೋಲನವೊಂದನ್ನು ರೂಪಿಸುವ ಜವಾಬ್ದಾರಿಯನ್ನು ಈಗ ಕನ್ನಡ ಶಾಲೆಗಳ ಪರ ಬೊಬ್ಬೆ ಹಾಕುತ್ತಿರುವ ಬುದ್ಧಿಜೀವಿಗಳು ಮತ್ತು ಚಳುವಳಿಕಾರರು ವಹಿಸಿಕೊಳ್ಳಬೇಕು. ಅದು ಮಾತ್ರ ನಿಜವಾದ ಕನ್ನಡದ ಕೆಲಸವಾದೀತು. ಇದಲ್ಲದೆ, ಕನ್ನಡ ಶಾಲೆಗಳನ್ನು ಮತ್ತು ಆ ಮೂಲಕ ಕನ್ನಡವನ್ನು ಉಳಿಸುವ; ಹಾಗೇ ನಮ್ಮನ್ನು ನಾವು ಉಳಿಸಿಕೊಳ್ಳುವ ಅನ್ಯ ಮಾರ್ಗವಿಲ್ಲ.

('ಸಂವಾದ'ದ ೨೦೧೨ರ ಮಾರ್ಚ್ ಸಂಚಿಕೆಯಲ್ಲಿ ಪ್ರಕಟ)

◇◇◇

೯. ಡೊನೇಷನ್ ಹಾವಳಿ ಕುರಿತಂತೆ

ಪ್ರತಿ ವರ್ಷ ಶಾಲಾ ಕಾಲೇಜುಗಳು ಆರಂಭವಾಗುವ ಹೊತ್ತಿಗೆ ಡೊನೇಷನ್ ಕುರಿತು ಪೋಷಕರ ಹುಯ್ಲು ಮತ್ತು ಪತ್ರಿಕಾ ವರದಿಗಳ ಮಹಾಪೂರ, ಎಲ್ಲರಿಗೂ ಮಾಮೂಲಿಯಾಗಿಬಿಟ್ಟಿದೆ. ಹಾಗೇ ಸರ್ಕಾರದ ವತಿಯಿಂದ ಕಟ್ಟುನಿಟ್ಟಿನ ಕ್ರಮಗಳ ಆಶ್ವಾಸನೆಗಳು ಕೂಡಾ. ಆದರೆ ಡೊನೇಷನ್ ವಸೂಲಿಯ ಹಾವಳಿ ಮಾತ್ರ ನಿಂತಿಲ್ಲ. ಬದಲಿಗೆ ವರ್ಷ ವರ್ಷವೂ ಹೆಚ್ಚುತ್ತಿದೆ!

ಡೊನೇಷನ್ ವಸೂಲಿ ಎಂಬುದೇ ಒಂದು ವಿರೋಧಾಭಾಸದ ಪದ ಪ್ರಯೋಗ. ಡೊನೇಷನ್ ಎಂದರೆ ದಾನ. ದಾನವನ್ನು ಯಾರಾದರೂ ವಸೂಲಿ ಮಾಡುತ್ತಾರೆಯೇ? ಇಂತಹ ವಿರೋಧಾಭಾಸ ಸೃಷ್ಟಿಯಾಗಿರುವುದು, ಶಿಕ್ಷಣ ಕುರಿತ ನಮ್ಮ ನಿಲುವಿನ ವಿರೋಧಾಭಾಸದಿಂದ. ಇದು ಎಲ್ಲಿಯವರೆಗೆ ಅರ್ಥವಾಗುವುವುದೊಲ್ಲವೋ, ಅಲ್ಲಿಯವರೆಗೆ ಈ ಹಾವಳಿ ನಿಲ್ಲಲಾರದು. ತಮ್ಮ ಮಕ್ಕಳಿಗೆ ಶ್ರೇಷ್ಠ ಶಿಕ್ಷಣ ಸಿಗಬೇಕೆಂಬ ಪೋಷಕರ ಸಹಜ ಆಸೆ ಇಂದಿನ ಸ್ಪರ್ಧಾತ್ಮಕ ದಿನಗಳಲ್ಲಿ ತೀವ್ರ ಹಪಾಹಪಿಯಾಗಿ ಪರಿವರ್ತಿತವಾಗಿದೆ. ಈ ಹಪಾಹಪಿಯಲ್ಲಿ, ಉತ್ತಮ ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶ ನೀಡಿ, ಅವರನ್ನು ಮತ್ತೆ ಮುಂದಿನ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಪಡೆವ ವಿದ್ಯಾರ್ಥಿಗಳನ್ನಾಗಿ 'ತಯಾರಿ'ಸುವುದನ್ನೇ ಶ್ರೇಷ್ಠ ಶಿಕ್ಷಣ ಎಂದು ಬಗೆಯಲಾರಂಭಿಸಿರುವ ಪೋಷಕರು, ತಮ್ಮ ಈ ಮೂರ್ಖತನಕ್ಕಾಗಿ ತೆರಬೇಕಾಗಿರುವ ಬೆಲೆಯೇ ಇಂದು 'ಡೊನೇಷನ್' ಎಂದಾಗಿರುವುದು.

ಸರ್ಕಾರ ನಡೆಸುವ ಪಕ್ಷಗಳು ಕೆಲವು ವರ್ಷಗಳ ಹಿಂದೆ ತಮ್ಮ ಪಾಲಿನ 'ರಾಜಕೀಯ ಡೊನೇಷನ್'ಗಳಿಗಾಗಿ ಹುಡುಕಿಕೊಂಡ ಹೊಸ ದಾರಿಗಳ ರೂಪದಲ್ಲಿ ಆರಂಭವಾದ ಖಾಸಗಿ ಶಿಕ್ಷಣ ಸಂಸ್ಥೆಗಳು, ತಾವು ಬದುಕಲು ಸಹಜವಾಗಿಯೇ ಶಿಕ್ಷಣವನ್ನು ವ್ಯಾಪಾರೀಕರಿಸಬೇಕಾಯಿತು. ಇವುಗಳ ದಾತರು ವ್ಯಾಪಾರ 'ಧರ್ಮ'ಕ್ಕೆ ತಕ್ಕಂತೆ, ಈ ವ್ಯಾಪಾರಕ್ಕೆ ಬೇಕಾದ ಗ್ರಾಹಕರನ್ನು ಸೆಳೆಯುವ ಹೊಸ ಹೊಸ ತಂತ್ರಗಳನ್ನು ರೂಪಿಸಬೇಕಾಯಿತು. ಈ ತಂತ್ರಗಳನ್ನೇ ಉತ್ತಮ ಶಿಕ್ಷಣದ ಮಾದರಿಗಳು ಎಂದು ಬಗೆದ ಪೋಷಕರು ತಮ್ಮ ಮಕ್ಕಳನ್ನು ಇಲ್ಲಿಗೆ ಕಳಿಸಲಾರಂಭಿಸಿ, ಉಚಿತ ಶಿಕ್ಷಣ ಲಭ್ಯವಿದ್ದ ಸರ್ಕಾರಿ ಶಾಲಾ–

ಕಾಲೇಜುಗಳನ್ನು ಕ್ರಮೇಣ 'ದಾತ'ರೇ ಇಲ್ಲದ' 'ದೊಡ್ಡಿ'ಗಳನ್ನಾಗಿ ಪರಿವರ್ತಿಸಿದರು. ಆದರೆ ಇಂದಿಗೂ ಬೋಧನಾ ಸಿಬ್ಬಂದಿಯ ಗುಣಮಟ್ಟ ಹಾಗೂ ಸೌಲಭ್ಯಗಳ ದೃಷ್ಟಿಯಿಂದ ಸರ್ಕಾರಿ ಶಾಲಾ ಕಾಲೇಜುಗಳೇ ಉತ್ತಮವಾಗಿವೆ ಎಂಬುದು ಸತ್ಯ ಸಂಗತಿಯಾಗಿದೆ. ಆದುದರಿಂದ ನಮ್ಮ ಪೋಷಕರು ತಾವು ಮಾಡಿದ ಈ 'ಸಾಮಾಜಿಕ ಪಾಪ'ಕ್ಕೆ ಪ್ರಾಯಶ್ಚಿತ್ತವಾಗಿ ಈ ಸತ್ಯ ಸಂಗತಿಯನ್ನು ಒಪ್ಪಿಕೊಂಡು, ತಮ್ಮ ಮಕ್ಕಳನ್ನು ಮತ್ತೆ ಸರ್ಕಾರಿ ಶಾಲೆ- ಕಾಲೇಜುಗಳಿಗೆ ಕಳಿಸಲಾರಂಭಿಸುವ ಮೂಲಕ ಅಲ್ಲಿನ ಶೈಕ್ಷಣಿಕ ವಾತಾವರಣವನ್ನು ಸುಧಾರಿಸುವ ಪ್ರಯತ್ನಕ್ಕೆ ಮುಂದಾಗಬೇಕಿದೆ. ಇದರ ಬದಲಿಗೆ, ತಾವು ಬದುಕುವ ಸಮಾಜವನ್ನು ಮರೆತು, ಕೇವಲ ತಮ್ಮ ಮಕ್ಕಳ 'ಸ್ಪರ್ಧಾತ್ಮಕತೆ'ಯ ಬಗೆಗೇ ಅವರು ಎಲ್ಲಿಯವರೆಗೆ ಯೋಚಿಸುತ್ತಿರುತ್ತಾರೋ, ಅಲ್ಲಿಯವರೆಗೆ ಈ ಡೊನೇಷನ್ ಹಾವಳಿ ನಿಲ್ಲಲಾರದು.

('ವಿಜಯ ಕರ್ನಾಟಕ'ದಲ್ಲಿ ಪ್ರಕಟ- ಜೂನ್, ೨೦೧೧)

✧✧✧

೧೦. ಇವರಿಗೇಕೆ ಈ ವಿಶೇಷ ವೇತನ ಶ್ರೇಣಿ? ಹೆಚ್ಚಿನ ನಿವೃತ್ತಿ ವಯಸ್ಸು?

ಯುಜಿಸಿ (ವಿಶ್ವವಿದ್ಯಾಲಯ ಧನ ಸಹಾಯ ಆಯೋಗ) ವೇತನ ಶ್ರೇಣಿ ಪಡೆಯುವ ಸರ್ಕಾರಿ ಮತ್ತು ಅನುದಾನಿತ ಕಾಲೇಜುಗಳ ಅಧ್ಯಾಪಕರುಗಳ ನಿವೃತ್ತಿ ವಯಸ್ಸನ್ನು ೬೦ ವರ್ಷಗಳಿಂದ ೬೫ ವರ್ಷಗಳಿಗೆ ಹೆಚ್ಚಿಸುವಂತೆ ರಾಜ್ಯದ ಶ್ರೇಷ್ಠ ನ್ಯಾಯಾಲಯದ ಏಕ ಸದಸ್ಯ ಪೀಠ ಸರ್ಕಾರಕ್ಕೆ ಆದೇಶಿಸಿದೆ. ಈ ಸಂಬಂಧ ಕೆಲವು ಅಧ್ಯಾಪಕರುಗಳು ಸಲ್ಲಿಸಿದ್ದ ಅರ್ಜಿಯನ್ನು ಅಪರೂಪವೆನಿಸುವ ಕ್ಷಿಪ್ರ ಗತಿಯಲ್ಲಿ ಇತ್ಯರ್ಥಗೊಳಿಸಿ ತೀರ್ಪು ನೀಡಿರುವ ನ್ಯಾಯಾಲಯದ ಕಾರ್ಯಕ್ಷಮತೆಯನ್ನು ರಾಜ್ಯದ ಇತರ ದುಡಿಯುವ ವರ್ಗಗಳ ಜನ ಮೆಚ್ಚುಗೆಯ ಜೊತೆಗೇ, ಆಶ್ಚರ್ಯದಿಂದಲೂ ಗಮನಿಸಿದ್ದಾರೆ. ತಮ್ಮ ಸಮಸ್ಯೆ/ತಗಾದೆಗಳಿಗೆ ಸಂಬಂಧಿಸಿದ ಅರ್ಜಿಗಳನ್ನೂ ಈ ನ್ಯಾಯಾಲ ಯಗಳು ಇಷ್ಟು ಕ್ಷಿಪ್ರ ಗತಿಯಲ್ಲೇ ಇತ್ಯರ್ಥಪಡಿಸಲಾಗು ವುದೆಂಬ ನಿರೀಕ್ಷೆಯಲ್ಲಿದ್ದಾರೆ.

ಯುಜಿಸಿ ವೇತನ ಶ್ರೇಣಿಯನ್ನು ಶಿಫಾರ್ಸು ಮಾಡಿದ ಕೇಂದ್ರ ಸರ್ಕಾರದ ಪತ್ರ ಈ ತೀರ್ಪಿಗೆ ಆಧಾರವಾದಂತಿದ್ದು, ಅದರ ಸರಳ ಅನ್ವಯ ಈ ತೀರ್ಪಿನ ಹಿಂದೆ ಇದ್ದಂತಿದೆ. ಅರ್ಜಿಯ ಕ್ಷಿಪ್ರ ಗತಿಯ ಇತ್ಯರ್ಥಕ್ಕೂ ಇದೇ ಕಾರಣವಾಗಿರಲೂಬಹುದು. ಅದೇನೇ ಇರಲಿ, ಈ ತೀರ್ಪನ್ನು ಒಪ್ಪದ ರಾಜ್ಯ ಸರ್ಕಾರ ಇದರ ವಿರುದ್ಧ ವಿಭಾಗೀಯ ಪೀಠಕ್ಕೆ ಮೇಲ್ಮನವಿ ಸಲ್ಲಿಸುವುದಾಗಿ ಹೇಳಿ ರಾಜ್ಯದ ಜನತೆಯ ಮೆಚ್ಚುಗೆಗೆ ಪಾತ್ರವಾಗಿದೆ ಎಂದು ಹೇಳಬಹುದು. ಅದು ಆ ಮೂಲಕ ಯುಜಿಸಿ ವೇತನ ಶ್ರೇಣಿಯನ್ನು ಪೂರ್ವಾಪರ ವಿವೇಚನೆ ಇಲ್ಲದೆ, ಕೆಲವು ಪಟ್ಟಭದ್ರ ಹಿತಾಸಕ್ತಿಗಳ 'ಅನುಚಿತ' ರೀತಿಯ ಒತ್ತಡಕ್ಕೆ ಒಳಗಾಗಿ, ಸರ್ಕಾರ ಸಾರಾ ಸಗಟಾಗಿ ಎಲ್ಲ ಕಾಲೇಜುಗಳ ಎಲ್ಲ ಅಧ್ಯಾಪಕರುಗಳಿಗೆ ಅನ್ವಯಿಸಿ ಜಾರಿಗೆ ತಂದ ತಪ್ಪನ್ನು ಸರಿಪಡಿಸಿಕೊಳ್ಳುವ ದಿಸೆಯಲ್ಲಿ ಒಂದು ದಿಟ್ಟ ಹೆಜ್ಜೆ ಇಟ್ಟಿದೆಯೆಂದು ಭಾವಿಸಬಹುದು. ಈಗ ಇವರಿಗೆ ಸಂಬಳ ವಿಶೇಷ ವೇತನ ಶ್ರೇಣಿಯ ಪ್ರಕಾರ ದ್ವಿಗುಣಗೊಂಡಿದ್ದು, ತಿಂಗಳಿಗೆ ಸುಮಾರು ೩೫ ಸಾವಿರ ರೂಪಾಯಿ ಗಳಿಂದ ಆರಂಭವಾಗಿ, ಸೇವಾವಧಿಯನ್ನು ಆಧರಿಸಿ ಹತ್ತಿರ ಹತ್ತಿರ ಒಂದೂವರೆ ಲಕ್ಷ ರೂಪಾಯಿಗಳವರೆಗೆ ಹಬ್ಬಿದೆ! ಇದು ಜನತೆಯ ಹಣ. ಇದು, ಈ ವೇತನಶ್ರೇಣಿಯನ್ನು ಸದ್ದಿಲ್ಲದೆ ಸವಿಯುತ್ತಿರುವ ಕ್ರಾಂತಿಕಾರಿ ಚಿಂತನೆಯ ಅಧ್ಯಾಪಕರೊಬ್ಬರು ಇತ್ತೀಚೆಗೆ ಒಂದು ವಿಚಾರ ಸಂಕಿರಣದಲ್ಲಿ ಹೇಳಿದಂತೆ, ನಮ್ಮ ಜನಸಂಖ್ಯೆಯ ಒಂದು ಬಹು ದೊಡ್ಡ ಪಾಲು ಇನ್ನೂ ಎರಡು ಹೊತ್ತಿಗೂ ಕೂಳಿಲ್ಲದ ದಟ್ಟ ದರಿದ್ರಾವಸ್ಥೆಯಲ್ಲೇ ಇರುವ ದೇಶದ ಜನತೆಯ ಹಣ!

ನಿಜ, ಶಿಕ್ಷಣ ಕ್ಷೇತ್ರ ಮಾನವ ಸಂಪನ್ಮೂಲಗಳನ್ನು ಬೆಳಸುವ ರಾಷ್ಟ್ರದ ಮೂಲಾಧಾರವೆನ್ನಬಹುದಾದ ಒಂದು ಪ್ರಮುಖ ಕ್ಷೇತ್ರ. ಆದರೆ ಅದು ಪ್ರಾಥಮಿಕ ಶಿಕ್ಷಣ ಹಂತದಲ್ಲೇ ಆರಂಭವಾಗುತ್ತದೆ. ಹಾಗಾಗಿ ಈ ವಿಶೇಷ ವೇತನ ಶ್ರೇಣಿ ಅಲ್ಲಿಂದ ಆರಂಭವಾಗದೆ, ಈ ತುಟ್ಟ ತುದಿಯ ಹಂತದಲ್ಲಿ ಮಾತ್ರ ಏಕೆ ಅನ್ವಯವಾಗುತ್ತಿದೆ? ಅಲ್ಲದೆ ಈ ನಿವೃತ್ತಿ ವಯಸ್ಸಿನ ಹೆಚ್ಚಳದ ಸದ್ಯದ ಆದೇಶಕ್ಕೆ ಕಾರಣವಾಗಿರುವ ಯುಜಿಸಿ ವೇತನವನ್ನು ಶಿಫಾರ್ಸು ಮಾಡಿರುವ ಆದೇಶದಲ್ಲಿ ಅಡಕವಾಗಿರುವ ಷರತ್ತುಗಳನ್ನು ಈ ವೇತನ ಶ್ರೇಣಿಯನ್ನು ಪಡೆಯುತ್ತಿರುವ ಕಾಲೇಜು ಹಾಗೂ ವಿಶ್ವವಿದ್ಯಾಲಯಗಳ ಅಧ್ಯಾಪಕ ವೃಂದ ಮತ್ತು ಅವರು ಕೆಲಸ ಮಾಡುತ್ತಿರುವ ಶೈಕ್ಷಣಿಕ ಸಂಸ್ಥೆಗಳು ಪೂರೈಸುತ್ತಿವೆಯೋ ಎಂಬುದನ್ನು ನಮ್ಮ ಉನ್ನತ ಶಿಕ್ಷಣ ಇಲಾಖೆ ವಿವರವಾಗಿ ಪರಿಶೀಲಿಸುವ ಪ್ರಯತ್ನ ಮಾಡಿದೆಯೇ? ಅದರ ದಾಖಲೆಗಳೇನಾದರೂ ಲಭ್ಯವಿದೆಯೇ? ನಿಜವಾಗಿ ಈ ವಿಶೇಷ ವೇತನ ಹಾಗೂ ಇನ್ನಿತರ ವಿಶೇಷ ಸೌಲಭ್ಯಗಳು ಅಗತ್ಯವೆನ್ನಿಸುವಷ್ಟು ನಮ್ಮ ಈ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ನಿರ್ಣಾಯಕ ವೆನ್ನಬಹುದಾದ ಬದಲಾವಣೆ ಆಗಿದೆಯೇ? ಹಾಗಾಗಿ, ಸರ್ಕಾರ ನಮ್ಮ ಎಲ್ಲ ಕಾಲೇಜು ಅಧ್ಯಾಪಕರುಗಳಿಗೆ ವಿಶೇಷ ವೇತನ ಶ್ರೇಣಿಯನ್ನು ಶಿಫಾರ್ಸು ಮಾಡಿದ ಯುಜಿಸಿ ಕಾರ್ಯಕ್ರಮದ ಸಕಲ ವಿವರ ಮತ್ತು ಅದನ್ನು ಜಾರಿಗೊಳಿಸಲು ಸೂಚಿಸಿದ ಕೇಂದ್ರ ಸರ್ಕಾರದ ಪತ್ರವನ್ನು ಇಡಿಯಾಗಿ ಅದರೆಲ್ಲ ವಿವರಗಳೊಂದಿಗೆ ಸಾರ್ವಜನಿಕವಾಗಿ ಬಹಿರಂಗಪಡಿಸುವ ಮೂಲಕ ಇದನ್ನು ಸ್ಪಷ್ಟಪಡಿಸಬೇಕು.

ಈ ಬಗ್ಗೆ ಈ ಅಧ್ಯಾಪಕ ವೃಂದದ ಯಾವೊಂದು ವಲಯದಿಂದಲೂ ಧ್ವನಿ ಎದ್ದಿಲ್ಲ, ಏಕೆ? ನಮ್ಮ ಅಧ್ಯಾಪಕ ವೃಂದದ ಸಾಮಾಜಿಕ ಮತ್ತು ಶೈಕ್ಷಣಿಕ ಪ್ರಜ್ಞೆ, ಅದರ ಆತ್ಮಸಾಕ್ಷಿಯೊಂದಿಗೆ ಈ ಬೃಹತ್ ಪ್ರಮಾಣದ ಸಂಬಳ ಮತ್ತು ಅದರ ಪೂರ್ವಾನ್ವಯ ಬಾಕಿ ಮೊತ್ತದ ರಾಶಿಯಲ್ಲಿ ಹೂತು ಹೋಗಿದೆಯೇ? ಏಕೆಂದರೆ, ಇವರ ಕಾಲೇಜುಗಳ ಮತ್ತು ವಿಶ್ವವಿದ್ಯಾಲಯಗಳ ಆವರಣಗಳನ್ನು ಪ್ರವೇಶಿಸಿದವರಿಗೆ ಯಾವುದೇ ಗಮನಾರ್ಹ ಬದಲಾವಣೆಯ ಸುಳಿವೂ ಸಿಗುವುದಿಲ್ಲ. ಇತ್ತೀಚಿನ ವರ್ಷಗಳಲ್ಲಿ ಶಿಕ್ಷಣದ ವಾಣಿಜ್ಯೀಕರಣ ವಿಪರೀತ ಹೆಚ್ಚಿದ ಪರಿಣಾಮವಾಗಿ ಭವ್ಯ ಕಟ್ಟಡಗಳು ಎದ್ದು ಕಾಣತೊಡಗಿವೆ. ಹಾಗೇ, 'ನ್ಯಾಕ್' ಯೋಜನೆಯಿಂದಾಗಿ ಮೂಲಭೂತ ಸೌಕರ್ಯಗಳು ಸುಧಾರಿಸಿವೆ. ಇದರ ಹೊರತಾಗಿ, ಶೈಕ್ಷಣಿಕ ಪರಿಸರ ಮತ್ತು ಅಧ್ಯಾಪಕರ ಗುಣಮಟ್ಟ ಹೆಚ್ಚುವುದಿರಲಿ, ಹಿಂದಿನ ದಶಕಗಳಿಗೆ ಹೋಲಿಸಿದಂತೆ ಇವು ಆಘಾತಕಾರಿ ಪ್ರಮಾಣದಲ್ಲಿ ಕುಸಿದಿದೆ ಎಂದೇ ಹೇಳಬೇಕು. ಮೊದಲು ವೈಚಾರಿಕ ಮಥನ, ಸಂವಾದ ಮತ್ತು ಸಂಘರ್ಷಗಳ ರೋಮಾಂಚಕಾರಿ ಅನುಭವಗಳ ನೆಲೆವೀಡಾಗಿದ್ದ ಈ ಆವರಣಗಳಲ್ಲಿ ಈಗ ಸ್ಮಶಾನ ಮೌನ ಆವರಿಸಿದೆ. ಆ ಮೌನವನ್ನು ಆವರಣದಲ್ಲಿ ತುಂಬಿ ತುಳುಕುವ ಅತ್ಯಾಧುನಿಕ ಬೈಕ್ ಮತ್ತು ಕಾರುಗಳ ಆರ್ಭಟ ಮಾತ್ರ ಕಲಕುತ್ತಿದೆ.

ಇನ್ನು ಈ ಆವರಣಗಳಲ್ಲಿ ಲಕ್ಷಾಂತರ ರೂಪಾಯಿಗಳ ಯೋಜನೆಗಳ ವೆಚ್ಚದಲ್ಲಿ ನಡೆಯುತ್ತಿರುವ ಸಂಶೋಧನೆಗಳಾದರೂ ಯಾವ ಮಟ್ಟದವು? ಅವುಗಳ ಮೌಲ್ಯಾಂಕನ

ಮಾಡುತ್ತಿರುವವರಾದರೂ ಯಾರು? ಮತ್ತು ಅವು ಯಾರನ್ನು ಮುಟ್ಟುತ್ತಿವೆ ಮತ್ತು ರಾಷ್ಟ್ರದ, ಸಮಾಜದ ಅಭಿವೃದ್ಧಿಗೆ ಇವುಗಳ ಕೊಡುಗೆಯೇನು? ಎಂಬುದನ್ನು ಸರ್ಕಾರ ಸಂಶೋಧಿಸಿ ಹೇಳಬೇಕಿದೆ. ಇತ್ತೀಚೆಗೆ ಇವರು ಯುಜಿಸಿ ಪ್ರಾಯೋಜಕತ್ವದಲ್ಲಿ ಆಯೋಜಿಸುತ್ತಿರುವ ರಾಜ್ಯ, ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದ್ದೆಂದು ಕರೆದುಕೊಳ್ಳಲಾಗುವ ವಿಚಾರ ಸಂಕಿರಣಗಳಿಗೆ ಹೋಗಿ ಕೂತವರಿಗಷ್ಟೇ ಗೊತ್ತು, ಇವರ ಸಂಶೋಧನೆಗಳು ಎಂತಹ ಬಂಡವಾಳವಿಲ್ಲದ ಬಡಾಯಿಗಳು ಮಾತ್ರ ಎಂದು! ವಿಶ್ವವಿದ್ಯಾಲಯಗಳಲ್ಲಿ ಇವರ ಬಡ್ತಿಗಳಿಗಾಗಿ ಅಗತ್ಯವಾಗಿರುವ (ಪದವಿ ಕಾಲೇಜುಗಳಲ್ಲಿ ಇದರ ಅಗತ್ಯವೇ ಇಲ್ಲ!) ಪಿಎಚ್‌ಡಿ ಸಂಶೋಧನೆಗಳು ಯಾವ ಮಟ್ಟದವು ಮತ್ತು ಅವನ್ನು ಹೇಗೆ 'ತಯಾರಿಸ'ಲಾಗುತ್ತಿದೆ ಎಂಬುದನ್ನು ಈಗಾಗಲೇ ನಮ್ಮ ಮಧ್ಯದ ಹಲವು ಹಿರಿಯ ಮತ್ತು ಗೌರವಾನೆತ ವಿದ್ವಾಂಸರು ಹೇಳಿ ಎಲ್ಲವನ್ನೂ ಸ್ಪಷ್ಟಪಡಿಸಿದ್ದಾರೆ!

ಹೋಗಲಿ, ಇಂತಹ ಪಿಎಚ್‌ಡಿಗಳನ್ನಾದರೂ ಎಷ್ಟು ಜನ ಅಧ್ಯಾಪಕರು ಮಾಡಿದ್ದಾರೆ? ಪಿಎಚ್‌ಡಿ ಬೇಡ, ಒಂದೇ ಒಂದು ಸಂಶೋಧನಾ ಲೇಖನವನ್ನೂ ಪ್ರಕಟಿಸದ, ಬರಹದ ರೂಢಿಯೇ ತಪ್ಪಿ ಹೋಗಿರುವ ಮತ್ತು ಅದೇ ತಮ್ಮ ಕಿಸುಬಾಯಿ ದಾಸತನದ ಪಾಠಗಳಲ್ಲೇ ಕಾಲ ನೂಕುತ್ತಿರುವ ಅಧ್ಯಾಪಕರ ಪ್ರಮಾಣ ಎಷ್ಟು ಎಂದು ಯಾರಾದರೂ ಅಂದಾಜಿಸಿದ್ದಾರಾ? ಇಡೀ ತಮ್ಮ ಸೇವಾವಧಿಯಲ್ಲಿ ಪಠ್ಯಕ್ರಮದ ಹೊರತು ತಮ್ಮದೇ ವಿಷಯಕ್ಕೆ ಸಂಬಂಧಿಸಿದ ಒಂದೇ ಒಂದೇ ಒಂದು ಪುಸ್ತಕವನ್ನೂ ಕೊಳ್ಳದ, ಓದದ ಅಧ್ಯಾಪಕರೂ ನಮ್ಮ ನಡುವೆ ಇದ್ದಾರೆಂಬುದು ಎಷ್ಟು ಜನಕ್ಕೆ ಗೊತ್ತು? ರಾಜಕೀಯ ವಶೀಲಿಬಾಜಿ ಮಾಡುತ್ತಾ, ವರ್ಷಗಟ್ಟಲೇ ತರಗತಿಗಳಿಗೇ ಹೋಗದ ಅನೇಕ ಅಧ್ಯಾಪಕರೂ ಇದ್ದಾರೆ ಎಂದರೆ ನೀವು ನಂಬುತ್ತೀರಾ? ಇನ್ನು ತರಗತಿಗೆ ಹೋದಲ್ಲಿ ಅರ್ಧ ತರಗತಿಯೇ ಖಾಲಿಯಾಗುವಂತೆ ಪಾಠ ಮಾಡುವ 'ಪ್ರತಿಭಾಶಾಲಿ' ಅಧ್ಯಾಪಕರಗಳು ಎಷ್ಟಿಲ್ಲ? ಹಾಗೇ ತೋಟ ತುಡಿಕೆ, ಲೇವಾದೇವಿ, ರಿಯಲ್ ಎಸ್ಟೇಟ್, ಸ್ಥಳೀಯ ಪುಢಾರಿ ರಾಜಕಾರಣ ಇನ್ನಿತರ ವ್ಯಾಪಾರ-ವ್ಯವಹಾರಗಳನ್ನು ಮಾಡುತ್ತಾ ಮೂಲ ವಾಸದ ಊರು ಬಿಡಲಾಗದೆ, ದಿನನಿತ್ಯ ದೂರದ ಊರುಗಳಿಗೆ ಗಂಟೆಗಟ್ಟಲೆ ಬಸ್ ಪ್ರಯಾಣ ಮಾಡಿ ಸಂತೆಗೆ ಮೂರು ಮೊಳ ನೇಯ್ದಂತೆ ಪಾಠ ಮಾಡಿ ಬರುವ ಎಷ್ಟು ಜನ ಅಧ್ಯಾಪಕರಿಲ್ಲ? ಇವರಿಗೂ ವಿದ್ಯಾರ್ಥಿಗಳಿಗೂ ಎಂತಹ ಶೈಕ್ಷಣಿಕ ಸಂಬಂಧ ಸ್ಥಾಪಿತವಾದೀತು? ಇವರೆನ್ನೆಲ್ಲ ವಿಶೇಷ ಸೌಲಭ್ಯಕ್ಕೆ ಅರ್ಹರಾದ ಶೈಕ್ಷಣಿಕ ಶಿಖರಗಳೆಂದು ಪರಿಗಣಿಸಬೇಕೆ?

ಕಳೆದ ಕೆಲವು ವರ್ಷಗಳಿಂದೀಚೆಗಷ್ಟೇ ಉಪನ್ಯಾಸಕರ ನೇಮಕಾತಿಗೆ ಅರ್ಹತೆಯ ಪರೀಕ್ಷೆ ನಡೆಯುತ್ತಿದೆ. ಆದರೆ ಈಗ ನಿವೃತ್ತಿ ವಯಸ್ಸಿನ ಏರಿಕೆಯನ್ನು ತಾಂತ್ರಿಕ ಆಧಾರದ ಮೇಲೆ ಒತ್ತಾಯಿಸಿ ನ್ಯಾಯಾಲಯದಿಂದ ಆದೇಶ ಪಡೆದಿರುವ ಈ ಹಳೇ ತಲೆಮಾರಿನ ಎಲ್ಲರಲ್ಲದಿದ್ದರೂ, ಸಾಕಷ್ಟು ಜನ ಅಧ್ಯಾಪಕರು ಕೆಪಿಎಸ್‌ಸಿ ಮೂಲಕವೋ, ಖಾಸಗಿ ಕಾಲೇಜುಗಳ ನೇಮಕಾತಿ ಮಂಡಳಿಗಳ ಮೂಲಕವೋ, ಹಣ, ಜಾತಿ ಮತ್ತಿತರ ಪ್ರಭಾವಗಳ ಕಾರಣದಿಂದ ಶೈಕ್ಷಣಿಕ ಆವರಣವನ್ನು ಪ್ರವೇಶಿಸಿದವರು. ಒಮ್ಮೆ ಹೀಗೆ ಪ್ರವೇಶಿಸಿದ ಮೇಲೆ ತಮ್ಮ ಶೈಕ್ಷಣಿಕ ಅರ್ಹತೆಗಳನ್ನು ಹೆಚ್ಚಿಸಿಕೊಳ್ಳುವ ಕಡೆ ಕಿಂಚಿತ್ತೂ ಗಮನ ಹರಿಸದಿರುವವರು.

ಈ ಬಹುಸಂಖ್ಯಾತರು, ತಮ್ಮ ಅ– ಶೈಕ್ಷಣಿಕ ಉದ್ದೇಶಗಳ ಗುಂಪುಗಾರಿಕೆಯ ರಾಜಕಾರಣದ ಮೂಲಕ ಅಲ್ಲಿನ ಅಳಿದುಳಿದ ಬೌದ್ಧಿಕ ವಾತಾವರಣವನ್ನೂ ಹೇಗೆ ಬುಡಮೇಲು ಮಾಡತೊಡಗಿದ್ದಾರೆ ಎಂಬುದನ್ನು ಅಲ್ಲಿಗೆ ಹೋಗಿಯೇ ನೋಡಬೇಕು. ಇತ್ತೀಚೆಗೆ ಉನ್ನತ ಶಿಕ್ಷಣದ ವಿಸ್ತರಣೆಯ ಹೆಸರಿನಲ್ಲಿ ಸರ್ಕಾರ ಅರ್ಹ ಮತ್ತು ಸಮರ್ಥ ಅಧ್ಯಾಪಕರಿರುವರೋ ಇಲ್ಲವೋ ಎಂಬುದನ್ನು ನೋಡದೆ, ಕಂಡ ಕಂಡ ಕಾಲೇಜುಗಳಲ್ಲಿ ಸ್ನಾತಕೋತ್ತರ ತರಗತಿಗಳನ್ನು ತೆರದು, ಸ್ನಾತಕೋತ್ತರ ಶಿಕ್ಷಣದ ಘನತೆಯನ್ನೇ ಹಾಳುಮಾಡಿದೆಯಲ್ಲದೆ, ಸಮಾನ ಅಧ್ಯಾಪಕರ ನಡುವೆ ಸಲ್ಲದ ಶ್ರೇಣಿ ಸೃಷ್ಟಿಸಿ ಅನಗತ್ಯ ಗೊಂದಲವನ್ನೂ ಉಂಟು ಮಾಡಿದೆ.

ಅಂದ ಮಾತ್ರಕ್ಕೆ ಈ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಈಗ ದಕ್ಷರೂ, ಕರ್ತವ್ಯ ಪ್ರಜ್ಞೆಯುಳ್ಳವರೂ, ಪ್ರತಿಭಾಶಾಲಿಗಳೂ ಇಲ್ಲವೇ ಇಲ್ಲವೆಂದಲ್ಲ. ಹಾಗೆ ಹೇಳಿದರೆ ಅಲ್ಲಿರುವ ಈ ಪ್ರತಿಭಾಶಾಲಿಗಳಿಗೆ ಅನ್ಯಾಯ ಮಾಡಿದಂತಾಗುತ್ತದೆ. ಆದರೆ ಅವರ ಪ್ರಮಾಣ, ಅಲ್ಪಸಂಖ್ಯಾತರು ಎನ್ನಬಹುದಾದಷ್ಟು ತೀರಾ ಕಡಿಮೆ. ಅಂತಹವರ ಸೇವೆ ಸರ್ಕಾರಕ್ಕೆ ಅಗತ್ಯವೆನಿಸಿದರೆ, ನಿವೃತ್ತಿಯ ನಂತರ ಅವರನ್ನು ಗೌರವ ಪ್ರಾಧ್ಯಾಪಕರೆಂದು ಆಯ್ಕೆ ಮಾಡಿ ಅವರಿಗೆ ವಿಶೇಷ ಸಂಭಾವನೆ ನೀಡುವ ವ್ಯವಸ್ಥೆ ಜಾರಿಗೆ ತರಲಿ. ಅಧ್ಯಾಪಕ ವೃತ್ತಿಯ ಶ್ರೇಷ್ಠತೆ, ವ್ಯಕ್ತಿತ್ವದ ಮೂಲದಲ್ಲೇ ಇರುವ ಕೆಲವು ವಿಶೇಷ ಶ್ರದ್ಧೆ– ಗುಣ– ಮನೋಭಾವಗಳನ್ನು ಅವಲಂಬಿಸಿದ್ದು, ಅದನ್ನು ಕಟ್ಟುನಿಟ್ಟಾದ ಆಯ್ಕೆಯ ಮೂಲಕ ಗುರುತಿಸಿ ಪೋಷಿಸಬಹುದೇ ಹೊರತು, ವಿಶೇಷ ಸಂಬಳ– ಸೌಲಭ್ಯಗಳ ಆಕರ್ಷಣೆಯ ಮೂಲಕ ಪಡೆಯಲಾಗುವುದಿಲ್ಲ ಎಂಬುದನ್ನು ಸರ್ಕಾರ ಆದಷ್ಟು ಬೇಗ ಅರಿತರೆ ಒಳ್ಳೆಯದು.

ಸರ್ಕಾರ ತನ್ನ ಎಲ್ಲ ನೌಕರರ ನಿವೃತ್ತಿ ವಯಸ್ಸನ್ನು ೬೦ಕ್ಕೆ ಮತ್ತು ಇನ್ನೂ ಕೆಲವರ ನಿವೃತ್ತಿ ವಯಸ್ಸನ್ನು ೬೨ಕ್ಕೆ ಏರಿಸಿದಾಗಿನಿಂದ ಸಾಕಷ್ಟು ಜನ ಅರ್ಹ ಯುವಜನರಿಗೆ ಈ ಕ್ಷೇತ್ರಗಳಲ್ಲಿ ಉದ್ಯೋಗಗಳನ್ನು ನಿರಾಕರಿಸಿದಂತಾಗಿದೆ. ಈಗ ಇದನ್ನು ೬೫ಕ್ಕೆ ಏರಿಸಿದರೆ, ಇವರ ಉದ್ಯೋಗದ ಬಾಗಿಲನ್ನು ಇನ್ನೈದು ವರ್ಷ ಮುಚ್ಚಿದಂತೆಯೇ. ಹಾಗಾಗಿ ವಿದ್ಯಾರ್ಥಿ ಹಾಗೂ ಯುವಜನ ಸಂಘಟನೆಗಳು ಈ ಕುರಿತು ಜಾಗೃತಿ ಕಾರ್ಯಕ್ರಮಗಳನ್ನು ರೂಪಿಸಿ ಹೋರಾಟಕ್ಕಿಳಿಯಬೇಕಿದೆ. ಹಾಗೇ ಸರ್ಕಾರ ಇದೇ ಸಂದರ್ಭವನ್ನು ಬಳಸಿಕೊಂಡು ನಮ್ಮ ಕಾಲೇಜು ಮತ್ತು ವಿಶ್ವವಿದ್ಯಾಲಯಗಳೊಳಗಿನ ತುಕ್ಕನ್ನು ಸ್ವಚ್ಛಪಡಿಸಲು ದೃಢ ಸಂಕಲ್ಪ ಮಾಡಬೇಕಿದೆ.

('ವಿಜಯ ಕರ್ನಾಟಕ'ದಲ್ಲಿ ಪ್ರಕಟವಾದ ಬರಹ– ಜುಲೈ, ೨೦೧೧)

◇◇◇

೧೧. ಮರ-ಕಟುಕತನದಿಂದ ಮನ-ಕಟುಕತನದತ್ತ...

ನಾನು ವಾಸವಾಗಿರುವ ಶಿವಮೊಗ್ಗದ ಕಲ್ಲಳ್ಳಿ ಬಡಾವಣೆಯ ನನ್ನ ಮನೆಯಲ್ಲಿ ಮೊನ್ನೆ ಮಟ ಮಟ ಮಧ್ಯಾಹ್ನ ಏನೋ ಓದುತ್ತಾ ಕೂತಿದ್ದೆ. ಇದ್ದಕ್ಕಿದ್ದಂತೆ ಹೊರಗೆ ಒಂದೇ ಸಮನೆ ಏನೋ ಕಡಿದು ಬೀಳುತ್ತಿರುವ ಸದ್ದಾದಂತಾಗಿ ಬಾಗಿಲು ತೆಗೆದು ಹೋಗಿ ನೋಡಿದರೆ ನನ್ನ ಮನೆ ಮುಂದಿನ ಮೂರು ಮರಗಳಲ್ಲಿ ಎರಡು ತಮ್ಮ ಸಮೃದ್ಧ ಕೊಂಬೆಗಳನ್ನು ಕಳೆದುಕೊಂಡು ಬರೀ ಕಾಂಡ ರೂಪದಲ್ಲಿ ಬೋಳಾಗಿ ನಿಂತಿವೆ. ಇನ್ನೊಂದರ ಮೇಲೆ ವಿದ್ಯುತ್ ಇಲಾಖೆಯ ಸಹಾಯಕನೊಬ್ಬ ಮಚ್ಚು ಹಿಡಿದು ಕೊಂಬೆಗಳನ್ನು ಕೊಚ್ಚುತ್ತಿದ್ದಾನೆ. ಕಾರಣ, ಅವು ವಿದ್ಯುತ್ ಇಲಾಖೆಯ ತಂತಿಗಳಿಗೆ ತಾಗುವುವೆಂಬುದು. ನಾವೇ ನೆಟ್ಟು ಐದು ವರ್ಷಗಳಿಂದ ನೀರು ಹಾಕಿ ಬೆಳೆಸಿದ್ದ ಎರಡು ಹೊಂಗೆ ಮರಗಳು ಹಾಗೂ ಪಕ್ಕದಲ್ಲೇ ಬಹು ಹಿಂದಿನಿಂದಲೂ ಬೆಳೆದು ನಿಂತಿದ್ದ ಸಂಪಿಗೆ ಮರವನ್ನು ಇಷ್ಟು ವರ್ಷ ಇವರ ಮರಕಟುಕತನದಿಂದ ಹೇಗೋ ರಕ್ಷಿಸಿ ಕಾಪಾಡಿದ್ದ ನಮಗೆ ಎಂತಹ ಆಘಾತವಾಗಿರಬೇಡ! ಹತ್ತು ನಿಮಿಷಗಳ ಹಿಂದಷ್ಟೇ ನನ್ನ ಹೆಂಡತಿ ಹೊರಗೆ ಹೋಗುವಾಗ ಚೈತ್ರ ಮಾಸದ ಆ ಮರಗಳ ತುಂಬು ಸೊಬಗನ್ನೂ, ಅವುಗಳಲ್ಲಿ ಸಂಸಾರ ಹೂಡಿದ್ದ ಹಲವು ಪಕ್ಷಿಗಳ ಚಿಲಿಪಿಲಿಯನ್ನೂ ಕಂಡು, ಕೇಳಿ ಹರ್ಷಿಸಿ ಹೋಗಿದ್ದಳು. ಈಗ ನೋಡಿದರೆ ಎಲ್ಲ ಬೋಳು! ಹೊರೆ ಹೊರೆಯಾದ ಹಸಿರು ರಾಶಿ ಮನೆ ಮುಂದೆ ಕಡಿದು ಬಿದ್ದಿದೆ... ನನ್ನ ಅಸಹಾಯಕತೆಯನ್ನು ಅವಳಿಗೆ ಹೇಗೆ ಹೇಳುವುದು?

ಈ ಮರಕಟುಕ ಸಿಬ್ಬಂದಿಯೊಂದಿಗೆ ಮಾತಾಡುವುದೇ ಒಂದು ಎದೆ ಬಿರಿಯುವ ಅನುಭವ. ರಾಜ್ಯದಲ್ಲಿ ನಗರಾಭಿವೃದ್ಧಿಯ ಭಾಗವಾಗಿ ಮರಗಿಡ ನೆಡುವ ಕಾರ್ಯಕ್ರಮ ದೊಡ್ಡ ಪ್ರಮಾಣದಲ್ಲಿ ಆರಂಭವಾದಾಗಿನಿಂದ, ಅದನ್ನು ಹಂತಾನುಹಂತವಾಗಿ ನಾಶ ಮಾಡುತ್ತಾ ಬಂದಿರುವ ನಮ್ಮ ವಿದ್ಯುತ್ ಇಲಾಖೆ ಅಧಿಕಾರಿಗಳಿಗೆ, ಇದಕ್ಕೊಂದು ಶಾಶ್ವತ (ತಾಂತ್ರಿಕ)ಪರಿಹಾರ ಕಂಡುಹಿಡಿಯಬೇಕೆಂಬ ಯೋಚನೆಯೇ ಬಂದಂತಿಲ್ಲ. ಹಾಗಾಗಿಯೇ ನಗರಸಭೆಗಳು ಇತ್ತೀಚೆಗೆ ಬೀದಿಗಳಲ್ಲಿ ಮರಗಿಡಗಳನ್ನು ನೆಡುವ ಕಾರ್ಯಕ್ರಮವನ್ನು ನಿಲ್ಲಿಸಿದಂತೆ ಕಾಣುತ್ತದೆ. ಇನ್ನು ಮರಕಟುಕ ಸಿಬ್ಬಂದಿಗೆ ಮೇಲಧಿಕಾರಿಗಳಿಂದ, ತಮ್ಮ ಇಲಾಖೆಗೆ ತೊಂದರೆಯಾಗದಂತೆ ಮರ- ಗಿಡಗಳನ್ನು ಹೇಗೆ ನಾಜೂಕಾಗಿ ಸವರಿಕೊಂಡು ಹೋಗಬೇಕೆನ್ನುವ ಸೂಚನೆಗಳಾಗಲೀ, ಪೌರರೊಂದಿಗೆ ಹೇಗೆ ವರ್ತಿಸಬೇಕೆಂಬುದರ ಬಗೆಗಿನ ತರಬೇತಿಯಾಗಲೀ ಇಲ್ಲವೆಂದು ಕಾಣುತ್ತದೆ. ಅವರು ನಡೆಸುವ ಸಾರಾ ಸಗಟಾದ ಮರಕಟುಕ

ಕೃತ್ಯದಲ್ಲಿ ಮಧ್ಯ ಪ್ರವೇಶಿಸಲು ಯತ್ನಿಸುವ ನಮ್ಮಂತಹವರ ಮೇಲೆ ಅವರು ಹರಿ ಹಾಯುವ ರೀತಿ ನಾವು ಯಾವ ವ್ಯವಸ್ಥೆಯಲ್ಲಿ ಬದುಕುತ್ತಿದ್ದೇವೆ ಎಂದು ಆಶ್ಚರ್ಯಪಡುವಷ್ಟು ಅನಾಗರಿಕವಾಗಿರುತ್ತದೆ.

ನಾವು ನೆಟ್ಟು, ವರ್ಷಗಳ ಕಾಲ ನೀರು ಹಾಕಿ ಬೆಳಸಿದ ಮರಗಿಡಗಳಿವು, ನಿಮ್ಮ ವಿದ್ಯುತಂತಿಗೆ ತಾಗುವ ಕೊಂಬೆಗಳನ್ನಷ್ಟೇ ಕಡಿದುಕೊಂಡು ಹೋಗಿರಿ ಎಂದು ಪರಿ ಪರಿಯಾಗಿ ಕೇಳಿಕೊಂಡರೂ, ಬೀದಿ ಬದಿಯ ಮರಗಿಡಗಳ ಮೇಲೆ ನಿಮಗೆ ಯಾವುದೇ ಅಧಿಕಾರವಿಲ್ಲ ಎಂದು ಘೋಷಿಸುತ್ತಾ, ಆಳೆತ್ತರದ ಸೌದೆ ಕಡಿದು ಹಾಕಿ ಹೋಗುತ್ತಾರೆ. ನಂತರ ಯಾರೋ ಬಂದು ಅದನ್ನು ಸಾಗಿಸಿಕೊಂಡು ಹೋಗುತ್ತಾರೆ. ನಾವು ಮಾತಿನ ಮಧ್ಯೆ, ಇಂದಿನ ಪರಿಸ್ಥಿತಿಯಲ್ಲಿ ಮರಗಿಡಗಳ ಮಹತ್ವದ ಬಗ್ಗೆ ಹೇಳುವ ಮಾತುಗಳಿಗೆ ಅವರಿಂದ ಬರುವ ವ್ಯಂಗ್ಯ– ಕುಹಕದ ಪ್ರತಿಕ್ರಿಯೆಗಳಂತೂ ಹೃದಯವನ್ನು ಇರಿಯುವಂತಹವು. ಇದರ ಜೊತೆಗೆ ನಾವು ಪ್ರತಿ ದಿನ ನೋಡಿ ಸಂತೋಷಿಸುತ್ತಿದ್ದ ಪುಟ್ಟ ಪಕ್ಷಿಗಳು, ಕಡಿದು ಬಿದ್ದ ಕೊಂಬೆಗಳ ಮೇಲಿದ್ದ ತಮ್ಮ ಮೊಟ್ಟೆ– ಮರಿ ಕಳೆದುಕೊಂಡು ಇಡೀ ದಿನ ಮಾಡುವ ಆರ್ತನಾದ ಕೇಳುವುದು ನಮಗೆ ಇನ್ನೊಂದು ಹೃದಯ ಕಲಕುವ ಸಂಗತಿ.

ಇದೆಲ್ಲದಕ್ಕಿಂತ ಆಘಾತಕರ ಸಂಗತಿ ಎಂದು ನನಗನಿಸಿದ್ದು, ನಾನು ಈ ಮರಕಟು ಕತನದ ಬಗ್ಗೆ ಇಲಾಖೆಯ ಸಿಬ್ಬಂದಿಯೊಂದಿಗೆ ವಾದ– ವಿವಾದದಲ್ಲಿದ್ದ ಸಂದರ್ಭದಲ್ಲಿ ಬೀದಿಯಲ್ಲಿ ಬಿಸಿಲ ತಾಪ ತಾಳಲಾರದೆ ತಲೆಗೆ ಟವಲ್ ಸುತ್ತಿಕೊಂಡೋ, ಛತ್ರಿ ಹಿಡಿದು ಕೊಂಡೋ ಬಸವಳಿದು ಹೋಗುತ್ತಿದ್ದ ಜನರಲ್ಲಿ (ಅಕ್ಕಪಕ್ಕದ ಮನೆಯರೂ ಸೇರಿದಂತೆ) ಯಾರೊಬ್ಬರೂ ಈ ಬಗ್ಗೆ ಕುತೂಹಲ ಅಥವಾ ಆಸಕ್ತಿ ತಾಳದೆ, ತಮಗೂ ಇದಕ್ಕೂ ಯಾವುದೇ ಸಂಬಂಧವಿಲ್ಲದಂತೆ ವರ್ತಿಸುತ್ತಿದ್ದುದು! ಒಂದು ಕಡೆ ಅಭೂತಪೂರ್ವ 'ಅಭಿವೃದ್ಧಿ'ಯ ಹೆಸರಿನಲ್ಲಿ ಶಿವಮೊಗ್ಗ ಜಿಲ್ಲೆಯಾದ್ಯಂತ ಕಳೆದ ಎರಡು– ಮೂರು ವರ್ಷಗಳಿಂದ ನೂರಾರು ವರ್ಷಗಳಷ್ಟು ಹಳೆಯದಾದ ಹಾಗೂ ವೈವಿಧ್ಯಮಯ ಪ್ರಾಣಿ– ಪಕ್ಷಿಗಳಿಗೆ ಆಶ್ರಯ ನೀಡಿದ್ದ ಸಾವಿರಾರು ಮರಗಳ ಮಾರಣ ಹೋಮ ನಡೆದಿದೆ. ಇನ್ನೊಂದು ಕಡೆ ಕೋಟ್ಯಾಂತರ ರೂಪಾಯಿಗಳ ವೆಚ್ಚದಲ್ಲಿ ಸರ್ಕಾರದ ಕಡೆಯಿಂದ ವಿವಿಧ ಹೆಸರುಗಳಲ್ಲಿ ಪರಿಸರ ಆಂದೋಲನದ ಪ್ರೋತ್ಸಾಹ ಕಾರ್ಯಕ್ರಮಗಳೂ ನಡೆದಿವೆ. ಆದರೆ ಶಿವಮೊಗ್ಗ ನಗರ ಬೆಳೆಯುತ್ತಿರುವ ತನ್ನ ವಿಸ್ತಾರಕ್ಕೆ ತಕ್ಕ ಒಂದೂ ಹೊಸ ಉದ್ಯಾನವನದ ನಿರ್ಮಾಣ ಕಾಣದೆ, ತಾಪಮಾನ ೪೦ ಡಿಗ್ರಿ ಸೆ. ಮುಟ್ಟಿದೆ. ಜನ, ಪಶು– ಪಕ್ಷಿ– ಪ್ರಾಣಿ ಮತ್ತು ಮರ ಗಿಡಗಳು ತತ್ತರಿಸಿ ಹೋಗುತ್ತಿವೆ. ಇದರ ಮಧ್ಯೆ ಅಣ್ಣಾ ಹಜಾರೆಯವರು ವಿಜಯ ಸಾಧಿಸಿದರೆಂದು ರಾಜಕೀಯ ಭ್ರಷ್ಟಾಚಾರದ ವಿರೋಧಿ ಆಂದೋಲನಕಾರರಿಂದ ಸಿಹಿ ಹಂಚಿಕೊಂಡು ತಿನ್ನುವ ಕಾರ್ಯಕ್ರಮ ಬೇರೆ! ಮಾಧ್ಯಮದವರಿಗೂ ಇಂದು ಇಂತಹ ರೋಚಕ– ಸಂಭ್ರಮಗಳ ಸುದ್ದಿಯೇ ಬೇಕಾಗಿದೆ ಎಂದು ಕಾಣುತ್ತದೆ...

ಇದನ್ನೆಲ್ಲ ಗಮನಿಸಿದಾಗ, ಇಂದು ನಾವು ಯಾವುದರ ವಿರುದ್ಧ ಹೋರಾಡಲು ಹೊರಟಿದ್ದೀವೆಯೋ ಆ ಬೃಹತ್ ಭ್ರಷ್ಟಾಚಾರ ನಿಜವಾಗಿ ಎಲ್ಲಿಂದ ಆರಂಭವಾಗಿದೆ ಎಂದು

ಯೋಚಿಸುವಂತಾಗುತ್ತದೆ. ನಮ್ಮ ಹತ್ತಿರದ ಗಿಡಮರಗಳ ಮತ್ತು ಅದನ್ನವಲಂಬಿಸಿದ ಜೀವಜಗತ್ತಿನ ಬಗೆಗೆ ಕನಿಷ್ಠ ಸಂವೇದನೆಯನ್ನೂ, ಜವಾಬ್ದಾರಿಯ ಅರಿವನ್ನೂ ಕಳೆದುಕೊಂಡಿರುವುದಕ್ಕೂ ಭ್ರಷಾಚಾರ ಹೀಗೆ ಬೆಳೆದಿರುವುದಕ್ಕೂ ಸಂಬಂಧವಿದೆ ಅನ್ನಿಸುವುದಿಲ್ಲವೆ? ಈ ಭ್ರಷ್ಟಾಚಾರವೇನು ಇದ್ದಕ್ಕಿದ್ದಂತೆ ಬೃಹದಾಕಾರವಾಗಿ ಬೆಳೆದುಬಿಟ್ಟಿತೆ? ಅದರ ಬೇರುಗಳು ಸೂಕ್ಷ್ಮ ಸಂವೇದನೆಗಳನ್ನೇ ಕಳೆದುಕೊಳ್ಳುತ್ತಿರುವ ನಮ್ಮ ವ್ಯಕ್ತಿತ್ವಗಳ ಬುಡಗಳಲ್ಲೇ ಇವೆಯಲ್ಲವೇ? ಇಂದು ನಗರಗಳ ಬೀದಿಗಳಲ್ಲಿ ಯಾವುದಾವುದೋ ಕ್ಷುಲ್ಲಕ ಕಾರಣಕ್ಕೆ ಜನರನ್ನು ಹಾಡು ಹಗಲೇ ಕಡಿದುಹಾಕಲಾರಂಭಿಸಿರುವ ಭೀಭತ್ಸ ದೃಶ್ಯಗಳನ್ನು ನಾವು ನೋಡುವಂತಾಗಿರುವುದು, ನಮ್ಮ ಬೀದಿಗಳಲ್ಲಿನ ಮರಗಿಡಗಳನ್ನು ಸರ್ಕಾರಿ ಸಿಬ್ಬಂದಿಯೇ ಪ್ರಜ್ಞಾಶೂನ್ಯರಾಗಿ ಕಡಿದುಹಾಕುತ್ತಿರುವುದರ ಮತ್ತು ಅದನ್ನು ನಾವು ಅಷ್ಟೇ ಪ್ರಜ್ಞಾಶೂನ್ಯರಾಗಿ ನೋಡುತ್ತಿರುವುದರ ದೂರದ ಪರಿಣಾಮವೇ ಇರಬಹುದಲ್ಲವೇ? ಬಹುಶಃ ಇದು ಇದ್ದರೂ ಇರಬಹುದೆಂಬ ಆಲೋಚನೆಯೂ ಸುಳಿಯದಷ್ಟು ನಾವು ನಮ್ಮ 'ಅಂತರಂಗ'ವನ್ನು ಕಳೆದುಕೊಂಡಿದ್ದೇವೆ. ಆದುದರಿಂದಲೇ ನಾವು ಅಣ್ಣಾ ಹಜಾರೆ ಉಪವಾಸ ನಿಲ್ಲಿಸಿದರೆಂದ ಕೂಡಲೇ ವಿಜಯೋತ್ಸವ ಶುರು ಮಾಡುವಷ್ಟು ನಮ್ಮ ವ್ಯಕ್ತಿತ್ವಗಳ ಟೊಳ್ಳುತನದ 'ಬಹಿರಂಗ' ಪ್ರದರ್ಶನ ಆರಂಭಿಸುತ್ತಿದ್ದೇವೆ.

ಹಾಗಾಗಿಯೇ ನಾನು ವಿದ್ಯುತ್ ಇಲಾಖೆಯ ಮರಕಟುಕರಿಗೆ, ನೀವು ಹೀಗೇ ಮರಗಿಡಗಳನ್ನು ಕಡಿಯುವುದನ್ನು ಮುಂದುವರೆಸಿದರೆ, ಯಾರಾದರೂ ನಿಮ್ಮಂತೆಯೇ ಯಾವುದೋ ಕಾರಣಕ್ಕೆ ಪ್ರಜ್ಞಾಶೂನ್ಯರಾಗಿ ನಿಮ್ಮ ಮಕ್ಕಳನ್ನೋ, ಮೊಮ್ಮಕ್ಕಳನ್ನೋ ಬೀದಿಗಳಲ್ಲಿ ಹೀಗೇ ಕಡಿದು ಹಾಕುವಂತಹ ದಿನಗಳು ಬರಲು ಬಹಳ ಕಾಲ ಕಾಯಬೇಕಿಲ್ಲ ಎಂದು ಎಚ್ಚರಿಸಬೇಕೆಂದಿದ್ದವನು ಸುಮ್ಮನಾದೆ.

('ಪ್ರಜಾವಾಣಿ'ಯ 'ಸಂಗತ'ದಲ್ಲಿ ಪ್ರಕಟವಾದ ಬರಹ– ಏಪ್ರಿಲ್, ೨೦೧೧)

◇◇◇

೧೨. ಹಿಂದ್ ಸ್ವರಾಜ್: ಕೆಲವು ಪ್ರಶ್ನೋತ್ತರಗಳು

೧.ಹಿಂದ್ ಸ್ವರಾಜ್ ಪ್ರಕಟವಾಗಿ ನೂರು ವರ್ಷಗಳಾದವು. ಸ್ವಾತಂತ್ರ್ಯ ಬಂದು ಕೂಡ ಆರು ದಶಕಗಳು ಕಳೆದವು. ಯಾವ ಹಂತದಲ್ಲೂ 'ಹಿಂದ್ ಸ್ವರಾಜ್' ಪ್ರತಿಪಾದಿಸುವ ನಾಗರೀಕತೆ, ಜೀವನ ಶೈಲಿಯ ಕಲ್ಪನೆ ನಮ್ಮ ಸಮುದಾಯದ ಆಯ್ಕೆಯಾಗಲಿಲ್ಲ. ಇದಕ್ಕೆ ಕಾರಣಗಳೇನೆಂದು ಗುರುತಿಸಬಯಸುತ್ತೀರಿ?

'ಹಿಂದ್ ಸ್ವರಾಜ್', ಹಿಂದೂಸ್ತಾನ ಏಕೆ ಸ್ವಾತಂತ್ರ್ಯವನ್ನು ಕಳೆದು ಕೊಂಡಿತು ಮತ್ತು ಅದನ್ನು ಹೇಗೆ ಮರಳಿ ಗಳಿಸಿಕೊಳ್ಳುವುದಷ್ಟೇ ಅಲ್ಲ, ಮುಂದೆ ಕಾಪಾಡಿಕೊಂಡು ಹೋಗು ವುದೂ ಹೇಗೆ ಎಂಬುದನ್ನೂ ವಿವೇಚಿಸಿದ ಕೃತಿ. ಅದು ವಿವರಗಳಲ್ಲಿ ಭಾರತಕ್ಕಷ್ಟೇ ಸಂಬಂಧಿಸಿದಂತೆ ಕಂಡರೂ, ಆಶಯದಲ್ಲಿ ಪಶ್ಚಿಮದ ಆಧುನಿಕ ನಾಗರೀಕತೆಯನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡಿ ವಿಮರ್ಶಿಸುತ್ತಾ ಇಡೀ ಜಗತ್ತಿನ ಮನುಷ್ಯ ನಾಗರೀಕತೆಯ ದಿಕ್ಕು- ದೆಸೆಗಳು ಬದಲಾಗಬೇಕಾದ ಅಗತ್ಯವನ್ನು ಪ್ರತಿಪಾದಿಸಿದ ಕೃತಿ. ಹಾಗಾಗಿಯೇ ಈ ಕೃತಿ ಪ್ರಕಟವಾದಾಗ ಅದು ಚರ್ಚಿತವಾದದ್ದು ಹೆಚ್ಚಾಗಿ ಜಾಗತಿಕ ಮಟ್ಟದ ಚಿಂತಕರಿಂದಲೇ ಹೊರತು ಭಾರತೀಯರಿಂದಲ್ಲ. ಗಾಂಧೀಜಿಯ ರಾಜಕೀಯ ಗುರು ಗೋಖಲೆಯವರೇ ಈ ಕೃತಿಯ ಬಗ್ಗೆ 'ಅವಸರದಲ್ಲಿ ಬರೆದಿರು ವುದು; ಇದನ್ನು ಮುಂದೆ ನೀವೇ ಸುಟ್ಟು ಹಾಕುವಿರಿ!' ಎಂದು ಅವರಿಗೆ ಹೇಳಿದ್ದರಂತೆ. ಆದರೆ ಗಾಂಧೀಜಿ ಮಾತ್ರ ಅದನ್ನು ಬರೆದ ಐವತ್ತು ವರ್ಷಗಳ ನಂತರವೂ, ಅದರಲ್ಲಿ ಬಳಸಿರುವ 'ವೇಶ್ಯೆ' ಎಂಬ ಶಬ್ದ ಬಿಟ್ಟು ಇನ್ನೊಂದು ಶಬ್ದವನ್ನೂ ಬದಲಿಸಲಾರೆ ಎಂದು ಘೋಷಿಸಿದ್ದರು! ಯಂತ್ರಾಧಾರಿತ ಆಧುನಿಕ ನಾಗರೀಕತೆ ಇನ್ನೂ ಅಂಬೆಗಾಲಿಟ್ಟು ಇನ್ನೂ ಭಾರತವನ್ನು ಪ್ರವೇಶಿಸಿದ್ದಾಗಲೇ; ಭಾರತ ಅತ್ಯುತ್ತಮವೆನಿಸಿದ್ದ ಮನಸ್ಸುಗಳಿಂದ ಇಂತಹ ಪ್ರತಿಕೂಲ ಪ್ರತಿಕ್ರಿಯೆಯನ್ನು ಪಡೆದಿದ್ದ ಈ ಕೃತಿ, ಭಾರತವೂ ಸೇರಿದಂತೆ ಜಗತ್ತಿನಲ್ಲಿ ಆಧುನಿಕ ನಾಗರೀಕತೆಯ ಹಿಡಿತ ಹೆಚ್ಚಾಗುತ್ತಾ ಹೋದಂತೆ ಇಡಿಯಾಗಿ ಯಾವುದೇ ಸಮುದಾಯದ ಆಯ್ಕೆಯಾಗಲು ಹೇಗೆ ಸಾಧ್ಯ? ಕಾಲ ಮತ್ತು ದೇಶಗಳ ನೆಲೆಯಲ್ಲಿ ಬಹು ವ್ಯಾಪಕತೆಯನ್ನು ಪಡೆದ ಇಂತಹ ಕೃತಿಗಳು ಯಾವತ್ತೂ ಅಲ್ಪ ಸಂಖ್ಯಾತರ ಮಧ್ಯೆಯಷ್ಟೇ ಜೀವಂತವಾಗಿರುತ್ತವೆ- ಆಳದ ಮಣ್ಣಿನಲ್ಲಿ ಮಲಗಿರುವ ಬೀಜಗಳಂತೆ. ಕಾಲ- ದೇಶಗಳು ಹದಗೊಂಡಾಗ ಅವು ವ್ಯಾಪಕ ಜನಾಂದೋಲನಗಳಾಗಿ ಚಿಗುರೊಡೆ ಯುತ್ತವೆ.

೨. ಕಾಂಗ್ರೆಸ್ ಪಕ್ಷ ನೆಹರೂ ನಾಯಕತ್ವ ಇವುಗಳನ್ನು ಮಾತ್ರ ಗಾಂಧೀವಾದದಿಂದ ನಾವು ವಿಮುಖರಾಗಲು ಕಾರಣಗಳಾಗಿ ಗುರುತಿಸುವುದು ಎಷ್ಟರಮಟ್ಟಿಗೆ ಸರಿ?

ಸ್ವಾತಂತ್ರ್ಯ ಆಂದೋಲನದ ಇತಿಹಾಸವನ್ನು ವಿವರವಾಗಿ ಅಧ್ಯಯನ ಮಾಡಿದ ಯಾರಿಗಾದರೂ, ಕಾಂಗ್ರೆಸ್ ಪಕ್ಷ ಎಂದೂ ಏಕಕಾರದ ಅಥವಾ ಏಕಾಶಯದ ಆಂದೋಲನ ವಾಗಿರಲಿಲ್ಲ ಎಂಬುದು ಗೊತ್ತಿರುತ್ತದೆ. ಹಾಗಾಗಿ, ಅದರಲ್ಲಿ ಗಾಂಧೀಜಿ ಯವರನ್ನು ಮೆಚ್ಚಿಕೊಂಡಿದ್ದವರಷ್ಟೇ ಸಂಖ್ಯೆಯಲ್ಲಿ ಅವರನ್ನು ಪೂರ್ಣವಾಗಿ ಮೆಚ್ಚದವರೂ, ಅಸಹಾಯಕವಾಗಿ ಸಹಿಸಿಕೊಂಡಿದ್ದವರೂ ಇದ್ದರು ಎಂಬುದನ್ನು ನಾವು ಮರೆಯಬಾರದು. ಇನ್ನೂ ಮುಖ್ಯ ಸಂಗತಿ ಎಂದರೆ, ಗಾಂಧೀಜಿ ದ.ಆಫ್ರಿಕಾದಲ್ಲಿ ಸತ್ಯಾಗ್ರಹದಲ್ಲಿ ತೊಡಗಿದ್ದ ಸಮಯದಲ್ಲಿ ರಚಿತವಾದ ಈ ಕೃತಿ ಅವರು ಭಾರತದ ಸ್ವಾತಂತ್ರ್ಯ ವಳುವಳಿಯ ನೇತೃತ್ವ ವಹಿಸಿಕೊಂಡ ನಂತರ ಕಾಂಗ್ರೆಸ್ ಪಕ್ಷ ಅಥವಾ ಅದು ನಡೆಸಿದ ಆಂದೋಲನಗಳ ವೇದಿಕೆಗಳಲ್ಲಿ ಎಂದೂ ಚರ್ಚೆಗೆ ಬಂದಂತೆ ಕಾಣುವುದಿಲ್ಲ. ಹಾಗಾಗಿ ಕಾಂಗ್ರೆಸ್ 'ಹಿಂದ್ ಸ್ವರಾಜ್'ನಿಂದ ವಿಮುಖವಾಯಿತು ಎಂಬ ಮಾತಿಗೇ ಅವಕಾಶವಿಲ್ಲ. ಈ ಕೃತಿ ಕುರಿತ ನೆಹರೂ ನಿಲುವನ್ನೂ ಇದೇ ನೆಲೆಯಲ್ಲಿ ಅರ್ಥ ಮಾಡಿಕೊಳ್ಳಬೇಕು. ಏಕೆಂದರೆ, ಗಾಂಧೀಜಿ ತಮ್ಮ ರಾಜಕೀಯ ಬದುಕಿನ ನಿರ್ಣಾಯಕ ಘಟ್ಟದ ಹೊತ್ತಿಗೆ, ತಮ್ಮ ಈ ಬೀಜ ಕೃತಿಯನ್ನು ಅಸಂಗತ, ಅವ್ಯಾವಹಾರಿಕ ಎಂದು ಕರೆಯಬಲ್ಲ ಮಾನಸಿಕತೆಯ ನೆಹರೂ ಅವರನ್ನೇ ತಮ್ಮ ರಾಜಕೀಯ ಉತ್ತರಾಧಿಕಾರಿ ಎಂದು ಘೋಷಿಸುವಂತಹ ಇಕ್ಕಟ್ಟಿಗೆ ಸಿಲುಕಿದ್ದರೆನ್ನುವ ಸಂಗತಿಯೇ ಈ ಕೃತಿಯ ಅಂದಿನ 'ದುಃಸ್ಥಿತಿ'ಗೆ ನೆಹರೂ ಅವರೊಬ್ಬರನ್ನೇ ಜವಾಬ್ದಾರರನ್ನಾಗಿ ಮಾಡುವುದು ತಪ್ಪೆಂದು ಸೂಚಿಸುತ್ತದೆ. ನೆಹರೂ ಅವರನ್ನು ಇಂದು ಈ ಸಂಬಂಧ ಯಾರಾದರೂ ದೂಷಿಸುತ್ತಿದ್ದರೆ, ಅದಕ್ಕೆ ಕಾರಣ; ಅವರು ಅಂದು ಆ ಮಾನಸಿಕತೆಯ ಅಧಿಕೃತ ಪ್ರತಿನಿಧಿಯಾಗಿದ್ದರೆಂಬುದೇ ಆಗಿದೆ.

೩. 'ಹಿಂದ್ ಸ್ವರಾಜ್' ಭಾರತ, ಭಾರತೀಯರನ್ನು ಕುರಿತಂತೆ ಮಾತ್ರವಲ್ಲ ಮನುಷ್ಯನ ನಾಗರೀಕತೆಯ ಬಗ್ಗೆ ಎಲ್ಲ ಕಾಲಕ್ಕೂ ಎಲ್ಲ ದೇಶಕ್ಕೂ ಅನ್ವಯವಾಗಬಲ್ಲಂತಹ ಸಂಗತಿಗಳ ಕಡೆ ಗಮನ ಸೆಳೆಯಿತು. ಹೀಗಿದ್ದೂ ಮಾರ್ಕ್ಸ್‌ವಾದ ಜಾಗತಿಕ ಮಟ್ಟದಲ್ಲಿ ಆಕರ್ಷಿಸಿದಷ್ಟು ದೇಶಗಳನ್ನು, ಸರ್ಕಾರಗಳನ್ನು, ಚಿಂತಕರನ್ನು ಗಾಂಧೀವಾದ ಆಕರ್ಷಿಸಲಿಲ್ಲ. ಇದಕ್ಕೆ ಕಾರಣಗಳೇನು?

ಮೊದಲ ಪ್ರಶ್ನೆಗೆ ನೀಡಿದ ಉತ್ತರದಲ್ಲೇ ಈ ಪ್ರಶ್ನೆಗೆ ಅರ್ಧ ಉತ್ತರವಿದೆ. ಮಾರ್ಕ್ಸ್‌ವಾದ, ಆಧುನಿಕತೆಯ ಮುಖ್ಯ ಚಾಲನಾ ಶಕ್ತಿಯಾದ 'ವೈಜ್ಞಾನಿಕತೆ'ಯ ಡಂಗುರ ಸಾರಿಕೊಂಡು ಇತಿಹಾಸವನ್ನು ಬದಲಾಯಿಸುವ 'ಕ್ರಾಂತಿ'ಯ ಪರಿಭಾಷೆಯಲ್ಲಿ ಮಾತನಾಡಿತು. ಆದರೆ ಗಾಂಧಿ 'ಧರ್ಮ'ದ ನೆಲೆಯಲ್ಲಿ ನಿಂತು ಆತ್ಮೋದ್ಧಾರದ ಪರಿಭಾಷೆಯಲ್ಲಿ ಇತಿಹಾಸವನ್ನು 'ಪುನರುಜ್ಜೀವನ'ಗೊಳಿಸುವ ಮಾತನಾಡಿದರು. ಊಳಿಗಮಾನ್ಯ ಸಮಾಜಗಳ ಹಾಗೂ ವಸಾಹತುಶಾಹಿ ದೇಶಗಳ ಶೋಷಿತರಿಗೆ ಮಾರ್ಕ್ಸ್‌ವಾದ ಸಹಜವಾಗಿಯೇ 'ಪ್ರಗತಿಪರತೆ'ಯ ಕ್ರಿಯಾಶೀಲ ರೂಪವಾಗಿ ಕಂಡರೆ, ಇದರ ಹಿನ್ನೆಲೆಯಲ್ಲಿ ಗಾಂಧಿ ಚಿಂತನೆ 'ಅವ– ಪ್ರಗತಿ'ಯ ಸ್ಥಗಿತವಾದವಾಗಿ ಕಂಡಿತು. ಇದನ್ನು 'ಕಾಲ ಮಹಿಮೆ' ಎಂದೂ ಕರೆಯಬಹುದೇನೋ! ಆದರೂ– ಇಂತಹ ಪ್ರತಿಕೂಲ ಪರಿಸ್ಥಿತಿಯಲ್ಲಿಯೂ– ಜಗತಿನಾದ್ಯಂತ ಗಾಂಧೀಜಿಗೆ ಸಿಕ್ಕ

ತಾತ್ವಿಕ ಮಾನ್ಯತೆಯೇನೂ ಕಡಿಮೆಯಲ್ಲ. ಇಂದು ಜಗತ್ತಿನ ವಿವಿಧ ವೇದಿಕೆಗಳಲ್ಲಿ 'ಹಿಂದ್ ಸ್ವರಾಜ' ಮತ್ತೆ ಮತ್ತೆ ಚರ್ಚೆಗೆ ಬರುತ್ತಿರುವುದು ಇದೇ ಕಾರಣದಿಂದಾಗಿ.

೪. ಜಾಗತೀಕರಣ ಕುರಿತಂತೆ ಈಚಿನ ಬಿಕ್ಕಟ್ಟಿನ ಪ್ರಶ್ನೆಗಳ ಬಗ್ಗೆ ಚರ್ಚೆ ನಡೆದಾಗಲೂ ಮತ್ತೆ ಮಾರ್ಕ್ಸ್‌ವಾದವೇ ಮುನ್ನೆಲೆಗೆ ಬರುತ್ತಿದೆ. 'ಹಿಂದ್ ಸ್ವರಾಜ್' ಈಗಲೂ ನಮ್ಮನ್ನು ಆಕರ್ಷಿಸುತ್ತಿಲ್ಲವೇಕೆ?

'ಆಧುನಿಕೋತ್ತರವಾದ'ದ ಹೆಸರಿನಲ್ಲಿ ಆಧುನಿಕತಾವಾದವನ್ನು ಮುಂದುವರೆಸಿಕೊಂಡು ಹೋಗುವ ನಮ್ಮ ಕೆಲವು ಬುದ್ಧಿಜೀವಿಗಳ ವಸಾಹತೋತ್ತರ ನವ ವಸಾಹತುಶಾಹಿ ಮಾನಸಿಕತೆಯಲ್ಲಷ್ಟೇ ಹೀಗೆ ಕಾಣುತ್ತಿರುವುದು. ಆದರೆ ಜಾಗತಿಕ ಮಟ್ಟದಲ್ಲಿ ಪರಿಸ್ಥಿತಿ ಹಾಗೇನೂ ಇಲ್ಲ. ಮುಕ್ತ ಬಂಡವಾಳಶಾಹಿ ವ್ಯವಸ್ಥೆಯ ಕುಸಿತದ ಇಂದಿನ ದಿನಗಳಲ್ಲಿ ಜಗತ್ತಿನ ಅತ್ಯುತ್ತಮ ಆರ್ಥಿಕ ಚಿಂತಕರು ಮತ್ತು ಹವಾಮಾನ ಬದಲಾವಣೆ ಅಧ್ಯಯನ ಕ್ಷೇತ್ರದ (ಅಭಿವೃದ್ಧಿ) ತಜ್ಞರು ಭಾರತೀಯ ಸಮಾಜವಾದ ಪ್ರತಿಪಾದಿಸಿದ್ದ ಮಿತಿಗಳುಳ್ಳ ಒಂದು ಸಭ್ಯ ಸರಳ ಜೀವನ ಮಟ್ಟದ ತತ್ವವನ್ನು ಹೆಚ್ಚೆಚ್ಚು ಮಾನ್ಯ ಮಾಡತೊಡಗಿದ್ದಾರೆ. ಇದು ಕ್ರಮೇಣ ಜಾಗತಿಕ ಚರ್ಚೆಯಲ್ಲಿ ಹೆಚ್ಚೆಚ್ಚು ಮುನ್ನೆಲೆಗೆ ಬರುವುದರಲ್ಲಿ ಸಂಶಯವಿಲ್ಲ. ಈ ಭಾರತೀಯ ಸಮಾಜವಾದವೆಂಬುದು ಗಾಂಧೀಜಿಯ 'ಹಿಂದ್ ಸ್ವರಾಜ್'ನ ಸುಧಾರಿತ– ವ್ಯಾವಹಾರಿಕ ರೂಪವಷ್ಟೆ.

೫. ಹಿಂದ ಸ್ವರಾಜ್ ಮೂಲಕ ಗಾಂಧೀವಾದ ಮನುಷ್ಯನ ಆಸೆ– ಆಕಾಂಕ್ಷೆ, ಸ್ವಭಾವಗಳಲ್ಲಿ ನಿರಂತರ ಮಾಗುವಿಕೆ, ಪರಿವರ್ತನೆಯನ್ನು ನಿರೀಕ್ಷಿಸುತ್ತದೆ. ಇಂತಹ ಪರಿವರ್ತನೆಯ ಬಗ್ಗೆ, ಮಾಗುವಿಕೆಯ ಬಗ್ಗೆ ಆಧುನಿಕ ಮನುಷ್ಯರಿಗೆ, ವಿಶೇಷವಾಗಿ ಭಾರತೀಯರಿಗೆ ಒಲವಿದೆಯೇ?

ನಿರಂತರ ಮಾಗುವಿಕೆ ಮನುಷ್ಯ ಸಹಜ ಸ್ವಭಾವ. ಆದರೆ ಅದು ಈಗ ಆಗುತ್ತಿಲ್ಲವೆಂದರೆ, ಆಧುನಿಕ ನಾಗರೀಕತೆಯಲ್ಲಿ ಏನೋ ಅಸಹಜತೆ ಇದೆ ಎಂದೇ ಅರ್ಥ. ಈ ಅಸಹಜತೆಯ ಮೂಲವನ್ನು ಗಾಂಧೀಜಿ, 'ಹಿಂದ್ ಸ್ವರಾಜ್' ಮೂಲಕ ಅನ್ವೇಷಿಸಿದರು. ಇದು ಇಡಿಯಾಗಿ ಮಾನವ ಸ್ವಭಾವದ ಪ್ರಶ್ನೆಯಾಗಿರುವುದರಿಂದ, ಭಾರತೀಯರ ಬಗ್ಗೆಯಷ್ಟೇ ವಿಶೇಷವಾಗಿ ಹೇಳುವ ಅಗತ್ಯವಿಲ್ಲ. ಬದುಕಿನ ಅಸಹಜತೆಯ ಚಕ್ರ ತನ್ನ ಪ್ರಸ್ತುತ (ಆಧುನಿಕತೆ) ಸುತ್ತನ್ನು ಇದೀಗ ಪೂರೈಸುವತ್ತಿರುವಂತಿದೆ. ಪರಿಣಾಮಗಳನ್ನು ಕಾದು ನೋಡಬೇಕಷ್ಟೆ.

೬. 'ಹಿಂದ್ ಸ್ವರಾಜ್' ಪ್ರತಿಯೊಬ್ಬ ಮನುಷ್ಯನನ್ನು, ಪ್ರತಿಯೊಂದು ಸಂಸ್ಕೃತಿಯನ್ನೂ ತನ್ನತನವನ್ನು ಗುರುತಿಸಿಕೊಳ್ಳುವುದರ ಜೊತೆಗೆ ಸಾಕ್ಷಿ ಪ್ರಜ್ಞೆಯನ್ನು ಕೂಡಾ ಬೆಳೆಸಿಕೊಳ್ಳಬೇಕು ಎಂದು ಬಯಸುತ್ತದೆ. ಇವೊತ್ತಿನ ಹಿಂದೂವಾದಿ ರಾಜಕಾರಣ 'Identity Politics'ಗೆ ಗಮನ ಕೊಡುವಷ್ಟು ಸಾಕ್ಷಿ ಪ್ರಜ್ಞೆಗೆ ಕೊಡುತ್ತಿಲ್ಲ. ಇಂಥ ಸಂದರ್ಭದಲ್ಲಿ 'ಹಿಂದ್ ಸ್ವರಾಜ್'ನ ಪುನರ್‌ಓದು ಹೇಗೆ ನೆರವಾಗಬಲ್ಲುದು?

ಅದನ್ನು ಸಂಸ್ಕೃತಿಯ 'ತನ್ನತನ'ವೆಂದು ಗುರುತಿಸುವುದು ತಪ್ಪಾಗುತ್ತದೆ. ಅದನ್ನು ಸಮುದಾಯವೊಂದರ 'ವಿಶಿಷ್ಟ' ಪ್ರತಿಭೆ ಅಥವಾ 'ದಕ್ಷತೆ' ಎಂದು ಗುರುತಿಸಬಹುದೇನೋ. ಆದರೆ ನೀವು ಪ್ರಸ್ತಾಪಿಸಿರುವ ಇಂದಿನ ಹಿಂದೂವಾದಿ ರಾಜಕಾರಣ ತನ್ನ ಮೂಲ ಸ್ವರೂಪದಿಂದಾಗಿಯೇ, ಧಾರ್ಮಿಕತೆಯನ್ನು ಕಳೆದುಕೊಂಡು ಮತೀಯವಾಗಿಬಿಟ್ಟಿರುವುದರಿಂದ ಅದು ಅಲ್ಪಕಾಲಿಕ ಲಾಭಗಳ ತತ್ಕಾಲೀನ ರಾಜಕಾರಣವನ್ನು ಮಾಡುವುದಕ್ಕಷ್ಟೇ ಸೀಮಿತವಾಗಿದೆ. ಅಂತಹ ಕಡೆ ಸಾಕ್ಷಿ ಪ್ರಜ್ಞೆಯ ಮಾತಿಗೆಲ್ಲ ಅವಕಾಶ? ಹಾಗೆ ನೋಡಿದರೆ, ಗಾಂಧೀಜಿ 'ಹಿಂದ್ ಸ್ವರಾಜ್ ಮೂಲಕ ಪ್ರತಿಪಾದಿಸುತ್ತಿರುವುದು ಹಿಂದೂ (ವಾದಿ ಅಲ್ಲ) ರಾಜಕಾರಣವನ್ನೇ– ಆದರೆ ಅದರ ಎಲ್ಲ ಅಧ್ಯಾತ್ಮಿಕ ನೆಲೆಯ ಅರ್ಥದಲ್ಲಿ. ಈ ಕೃತಿಯ ಪುನರ್ಓದು ನಡೆಯುವುದಿದ್ದರೆ, ಈ ನೆಲೆಯಲ್ಲಿ ನಡೆಯಬೇಕಿದೆ.

೭. ಗಾಂಧೀಜಿಯ 'ಹಿಂದ್ ಸ್ವರಾಜ್' ಮತ್ತು ನೆಹರೂ ಅವರ 'The Discovery of India' ಎರಡೂ ವಿಭಿನ್ನ ದೃಷ್ಟಿಕೋನಗಳನ್ನು ಮಂಡಿಸಿದವು. ಇವೆರಡರ ದೃಷ್ಟಿಕೋನಗಳು ಮೂಲತಃ ತದ್ವಿರುದ್ಧವೇ?

'The Discovery of India' ಭಾರತದ ಇತಿಹಾಸವನ್ನು ಮೆಚ್ಚುಗೆ– ಟೀಕೆಗಳಿಂದ ಇಮ್ಮುಖವಾಗಿ ವಿಮರ್ಶಿಸುವ ಆಧುನಿಕತಾವಾದಿಯಾದ ಕೃತಿ. ಇಲ್ಲಿ ಕೆಲಸ ಮಾಡಿರುವುದು 'ಪೌರ್ವಾತ್ಯವಾದಿ' ಎಂದು ಕರೆಯಲಾಗುವ ಮೂಲತಃ ಪಶ್ಚಿಮದ ಮನಸ್ಸಂಕೀರ್ಣವೇ. ಆದರೆ ಗಾಂಧೀಜಿಯದ್ದು ಶುದ್ಧ ಹಿಂದೂ ಮತೀಯತೆಯನ್ನು ಮೀರಿದ ಜಾಗತಿಕ ಪ್ರಜ್ಞೆಗೆ ತುಡಿಯುವ ಬಹುಶ್ರುತ ಮನಸ್ಸು. ಹೀಗೆ ನೆಹರೂ ಅವರದ್ದು ಕಾಲಬದ್ಧವಾದ ಮನಸ್ಸಾದರೆ, ಗಾಂಧೀಜಿಯದ್ದು ಕಾಲಾತೀತವಾದದ್ದು. ಈ ಎರಡು ಮನಸ್ಸುಗಳ ಅಂತರ ಕೇವಲ ಪ್ರಮಾಣದ ನೆಲೆಯದ್ದಲ್ಲ, ಗುಣದ ನೆಲೆಯದ್ದೂ ಎಂಬುದನ್ನು ಗಮನಿಸಬಲ್ಲವರಿಗೆ 'ತದ್ವಿರುದ್ಧ' ಇತ್ಯಾದಿಗಳ ಭಾಷೆಯಲ್ಲಿ ಮಾತಾಡುವುದು ಅಸಂಬದ್ಧ ಎಂಬುದೂ ಗೊತ್ತಾದೀತು.

೮. ಗಾಂಧೀಜಿ 'ಹಿಂದ್ ಸ್ವರಾಜ್'ನ್ನು ಬರೆಯುವಾಗ ಉಗ್ರ ರಾಷ್ಟ್ರಪ್ರೇಮಿಗಳು, ಹಿಂಸಾವಾದಿಗಳು ಯಂತ್ರನಾಗರೀಕತೆಯ ಒಲವುಳ್ಳ ಆರಾಧಕರನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದರು. 'ಹಿಂದ್ ಸ್ವರಾಜ್'ದ ಶತಮಾನೋತ್ಸವ ಹೊತ್ತಿಗೆ ನಾವು ಬಲಿಷ್ಠ ರಾಷ್ಟ್ರಗಳ ಪ್ರಭುತ್ವವನ್ನು ವಿಜ್ಞಾನದ ಸಾರ್ವಭೌಮತ್ವವನ್ನು ಕಾಣುತ್ತಿದ್ದೇವೆ. ಈ ಹಿನ್ನೆಲೆಯಲ್ಲಿ ನಮ್ಮ ದೇಶ ಮತ್ತು ಕಾಲವು 'ಹಿಂದ ಸ್ವರಾಜ್'ನ್ನು ಮುಂದಿನ ಐವತ್ತು ವರ್ಷಗಳಲ್ಲಿ ಹೇಗೆ ಓದಬಹುದು?

ಮೊದಲಿಗೆ 'ಹಿಂದ್ ಸ್ವರಾಜ್' ಪ್ರಾಥಮಿಕವಾಗಿ, ಓದಬಹುದಾದ ವಿವಿಧ ಸಾಧ್ಯತೆಗಳನ್ನು ಕುರಿತ ಬೌದ್ಧಿಕ ಚರ್ಚೆಗೆ ಒದಗುವ ಶಾಸ್ತ್ರಗ್ರಂಥವಲ್ಲ ಎಂದು ಹೇಳಿಬಿಡಬೇಕಾಗುತ್ತದೆ. ಅದು ಇಂದಿಗೆ ಬಿಟ್ಟುಕೊಡುವ ಅರ್ಥ, ತೋರುವ ಪ್ರಸ್ತುತತೆ ಮಾತ್ರ ಮುಖ್ಯ.

ಇನ್ನು ನಿಮ್ಮ ಭವಿಷ್ಯಶಾಸ್ತ್ರೀಯ ಪ್ರಶ್ನೆಗೆ ಉತ್ತರಿಸುವುದೇ ಆದರೆ, ಭಾರತವೂ ಸೇರಿದಂತೆ, ದೇಶದೊಳಗೆ ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತೆಗಳನ್ನು ಕಟ್ಟುವುದರಲ್ಲಿ ತೊಡಗಿಕೊಂಡಿರುವುದಾಗಿ ಹೇಳಿಕೊಳ್ಳುವ ಪ್ರಭುತ್ವಗಳು ಜಾಗತಿಕ ನೆಲೆಯಲ್ಲಿ 'ಸೂಪರ್

ಪವರ್' ಪರಿಭಾಷೆಯಲ್ಲಿ ಮಾತನಾಡುತ್ತಿರುವುದನ್ನು ನಾವಿಂದು ನೋಡುತ್ತಿದ್ದೇವೆ. ಇದು ಆಧುನಿಕತೆ ಸೃಷ್ಟಿಸಿರುವ ಆಘಾತಕಾರಿ ವಿರೋಧಾಭಾಸ. ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತೆಗಳನ್ನು ಪ್ರತಿಪಾದಿಸುತ್ತಿರುವಾಗಲೇ, ಅವನ್ನು ಆತ್ಯಂತಿಕವಾಗಿ ಬುಡಮೇಲು ಗೊಳಿಸುವ– ಜಾಗತಿಕ 'ಸೂಪರ್ ಪವರ್' ಆಗಲು ಬೇಕಾದ (ದುಷ್ಟ)ಶಕ್ತಿ ಕೇಂದ್ರಗಳನ್ನೂ ಸ್ಥಾಪಿಸಬೇಕಾಗಿಬರುವುದು ಆಧುನಿಕತಾವಾದದಲ್ಲಿ ಅಂತರ್ಗತವಾಗಿರುವ ಮುಖ್ಯ ವೈರುಧ್ಯಗಳಲ್ಲೊಂದು. ಇದಕ್ಕೆ ಕಾರಣ, ಇದು ಮೂಲತಃ ಭೌತವಾದಿಯಾಗಿರುವುದು.

ಇದು ಹೆಚ್ಚೆಚ್ಚು ಅರ್ಥವಾಗುತ್ತದ್ದಂತೆ 'ಹಿಂದ್ ಸ್ವರಾಜ'ನ ವಾರೆಗಣ್ಣಿನ ಓದು ನೇರವಾಗುವ ಸಾಧ್ಯತೆ ಹೆಚ್ಚುತ್ತಾ ಹೋಗುತ್ತದೆ.

('ಹಿಂದ್ ಸ್ವರಾಜ್' ಕುರಿತ ವಿಶೇಷ ಸಂಚಿಕೆಯಾಗಿ ಹೊರತರಲಾದ ೨೦೦೯ರ ಜುಲೈ– ಆಗಸ್ಟ್ 'ಸಂಚಯ'ಕ್ಕಾಗಿ ಕೇಳಲಾದ ಪ್ರಶ್ನೆಗಳಿಗೆ ನೀಡಲಾದ ಉತ್ತರಗಳು)

◇◇◇

೧೩. 'ಲೋಹಿಯಾವಾದದ ಮರುವಿಮರ್ಶೆ': ಒಂದು ಪ್ರತಿಸ್ಪಂದನ

ಪ್ರಿಯ ಶಿವಸುಂದರ್,

ನೀವು ವಿಶ್ವಾಸಪೂರ್ವಕವಾಗಿ ಓದಲು ಕೊಟ್ಟ 'ಲೋಹಿಯಾವಾದದ ಮರುವಿಮರ್ಶೆ' ಎಂಬ ನಿಮ್ಮ ಸುದೀರ್ಘ ಲೇಖನವನ್ನು ಇದೀಗ ತಾನೇ ಓದಿ ಮುಗಿಸಿದೆ. ಈ ಲೇಖನದ ಹಿಂದೆ ಎದ್ದು ಕಾಣುವ ತಾತ್ವಿಕ ಶ್ರದ್ಧೆ, ಅಪಾರ ಓದು ಮತ್ತು ಬರವಣಿಗೆಯ ಶ್ರಮಕ್ಕಾಗಿ ನಿಮ್ಮನ್ನು ಅಭಿನಂದಿಸಬಯಸುವೆ. ಆದರೆ ಸದ್ಯಕ್ಕೆ ನಿಮ್ಮ ಲೇಖನದ ಪ್ರತಿ ಅಂಶವನ್ನೂ ಎತ್ತಿಕೊಂಡು ಚರ್ಚಿಸುವ ವ್ಯವಧಾನ ನನಗಿಲ್ಲ. ಅದರ ಅಗತ್ಯ ಅಥವಾ ಅನಿವಾರ್ಯತೆಯೂ ನನಗೆ ಕಂಡುಬಂದಿಲ್ಲ. ಅದಕ್ಕಾಗಿ ಕ್ಷಮೆ ಇರಲಿ. ಇದೇಕೆ ಎಂದು ವಿವರಿಸುವ ಪ್ರಯತ್ನವನ್ನಷ್ಟೇ ನಾನಿಲ್ಲಿ ಮಾಡಿರುವೆ.

ನೀವು ಲೋಹಿಯಾ ಅವರು ಮಾರ್ಕ್ಸ್‌ವಾದದ ಬಗ್ಗೆ ಎತ್ತಿರುವ ಸರಿ ಸುಮಾರು ಎಲ್ಲ ಆಕ್ಷೇಪಣೆಗಳನ್ನೂ ಗಮನಿಸಿದ್ದೀರಿ. ನಿಮ್ಮ ವ್ಯಾಪಕ ಓದಿನ ಹಿನ್ನೆಲೆಯಲ್ಲಿ ಅದಕ್ಕೆ ತಕ್ಕನಾದ ಉತ್ತರ/ಸ್ಪಷ್ಟೀಕರಣಗಳನ್ನೂ ನೀಡಿದ್ದೀರಿ. ಆದರೆ ಇದು ನಿಮ್ಮ ಬರಹದ ರಚನಾತ್ಮಕ ಮುಖ ಹೇಗೋ, ಹಾಗೆಯೇ ನಿಷೇಧಾತ್ಮಕ ಮುಖವೂ ಆಗಿದೆ ಎಂದು ಆರಂಭದಲ್ಲಿಯೇ ತಿಳಿಸಬಯಸುವೆ. ಏಕೆಂದರೆ ನಿಮ್ಮ ಈ ಇಡೀ ಲೇಖನಕ್ಕೆ ಮಾರ್ಕ್ಸ್‌ವಾದವೆಂಬುದು ಒಂದು reference point ಆಗಿ ಇದ್ದುಕೊಂಡು, ಲೇಖನ ಮಾರ್ಕ್ಸ್‌ವಾದಿ ಯೊಬ್ಬ ಲೋಹಿಯಾ ವಿಚಾರಗಳಿಗೆ ನೀಡಿದ ಪ್ರತಿಕ್ರಿಯೆಯಂತೆ ಇದೆಯೇ ಹೊರತು, ಲೋಹಿಯಾ ವಿಚಾರ ಗಳನ್ನು ಯಾವುದೇ ತಾತ್ವಿಕ ಉಪಾಧಿಗಳಿಲ್ಲದ (ಭಾರತದ) ಸಾಮಾನ್ಯ ಮನುಷ್ಯನಾಗಿ ಗ್ರಹಿಸಿದ/ಪರಿಶೀಲಿಸಿದ ಪ್ರಯತ್ನವಾಗಿ ಕಾಣುವುದಿಲ್ಲ.

ಲೋಹಿಯಾ ವಿಚಾರಗಳನ್ನು ನೀವು ಒಪ್ಪಿ, ಮೆಚ್ಚುವ ಅಂಶಗಳ ವಿಷಯದಲ್ಲೂ ಈ ದೃಷ್ಟಿಕೋನ ಎದ್ದು ಕಾಣುವಂತಿದೆ. ಇದಕ್ಕೆ ಮುಖ್ಯ ಕಾರಣ, ಮಾರ್ಕ್ಸ್‌ವಾದ ಕುರಿತ ಲೋಹಿಯಾ ವಿಮರ್ಶೆಗೆ ಆಧಾರಗಳು ಮಾರ್ಕ್ಸ್‌ವಾದದಲ್ಲೇ ಇವೆಯೆಂಬ ನಿಮ್ಮ ನಂಬಿಕೆ. ಹಾಗೇನಿಲ್ಲ. ಲೋಹಿಯಾರ ಈ ವಿಮರ್ಶೆಯ ಆಧಾರಗಳು ಅವರ ವಿಭಿನ್ನ ಲೋಕದೃಷ್ಟಿಯಲ್ಲಿರುವ ಸಾಧ್ಯತೆಗಳೂ ಇವೆ ಎಂಬುದನ್ನು, ನೀವು ಪರಿಶೀಲಿಸಲೇ ಹೋಗಿಲ್ಲ. ಇದು ಮಾರ್ಕ್ಸ್‌ವಾದದಂತಹ

ಏಕಾತ್ಮಕವಾದಗಳು (ನಮ್ಮ ವೈದಿಕ ಅದ್ವೈತದಂತೆ) ಹುಟ್ಟಿಸುವ ಸರ್ವಜ್ಞ ಗರ್ವದ ಅಪಾಯ! ಈ ಬಗ್ಗೆ ಮುಂದೆ ಹೇಳುವೆ.

ಈ ಮಾತುಗಳನ್ನು ಏಕೆ ಹೇಳುತ್ತಿರುವೆನೆಂದರೆ, ಲೋಹಿಯಾರನ್ನು ಹೀಗೆ ಮಾರ್ಕ್ಸ್‌ವಾದಿ ದೃಷ್ಟಿಕೋನದಿಂದ ನೋಡಿದಾಗ ತಲುಪುವ ತೀರ್ಮಾನಗಳು, ಅವರನ್ನು ಗಾಂಧಿವಾದಿ ದೃಷ್ಟಿಕೋನದಿಂದ ನೋಡಿದಾಗ ತಲುಪುವ ತೀರ್ಮಾನಗಳಿಂದ ಬಹು ಭಿನ್ನವಾಗಿರಬಲ್ಲವು ಎಂಬುದನ್ನು ನಿಮಗೆ ಸೂಚಿಸಲು. ಲೋಹಿಯಾ, ಗಾಂಧಿ ಮತ್ತು ಮಾರ್ಕ್ಸ್ ಇಬ್ಬರ ಪ್ರಭಾವದ ನಡುವೆ ತಮ್ಮ ವ್ಯಕ್ತಿತ್ವ- ವಿಚಾರಗಳನ್ನು ರೂಪಿಸಿಕೊಂಡವರು. ಹಾಗಾಗಿ ಅವರನ್ನು ಮಾರ್ಕ್ಸ್‌ವಾದಿ ದೃಷ್ಟಿಕೋನದಿಂದಲೇ ಪರಿಶೀಲಿಸಲಾಗದು. (ಲೋಹಿಯಾ ತಮ್ಮ ವಿಚಾರಗಳನ್ನು ಮಂಡಿಸುವಾಗ, ಅರಿಸ್ಟಾಟಲ್‌ನಿಂದ ಹಿಡಿದು ಹೆಗಲ್‌ನವರೆಗೆ; ಹಾಗೇ ಬುದ್ಧನಿಂದ ಹಿಡಿದು ಶಂಕರಾಚಾರ್ಯರವರೆಗೆ ತಮ್ಮ ವಿಚಕ್ಷಣ ನೋಟವನ್ನೂ ಬೀರಿದ್ದಾರೆ ಎಂಬುದನ್ನು ನಾವು ಗಮನಿಸಬೇಕು) ನಿಮ್ಮ ಇಡೀ ಲೇಖನದಲ್ಲಿ ಗಾಂಧಿ ಪ್ರಭಾವದ ದೃಷ್ಟಿಕೋನ ಕಾಣೆಯಾಗಿದೆ ಎಂಬುದು ನಿಮ್ಮ ಪರಿಶೀಲನಾ ವಿಧಾನದ ಸಣ್ಣ ದೋಷವೇನಲ್ಲ.

ಹಾಗೆ ನೋಡಿದರೆ, ನಿಮ್ಮಂತೆ ಲೋಹಿಯಾರನ್ನು ಮಾರ್ಕ್ಸ್‌ವಾದಿ ದೃಷ್ಟಿಕೋನದಿಂದಲೇ ಏಕೆ ನೋಡಬೇಕು ಎಂಬ ಪ್ರಶ್ನೆಯನ್ನೂ ನಾವು ಕೇಳಿಕೊಳ್ಳಬೇಕಲ್ಲವೆ? ಭಾರತದ ಸಾಮಾನ್ಯ ಮನುಷ್ಯ ನಮ್ಮ ನಿಮ್ಮ ಹಾಗೆ ತನ್ನ ಸಾಮಾನ್ಯ ಪರಿಜ್ಞಾನದ ಹೊರತಾಗಿ ಯಾವುದೇ reference point ಇಟ್ಟುಕೊಂಡು ಲೋಹಿಯಾರನ್ನು (ಅಥವಾ ಇನ್ನಾರನ್ನೇ ಅಗಲಿ) ನೋಡುವ ಭಾರಕ್ಕೆ ಒಳಗಾಗಬೇಕಿಲ್ಲ ಅಲ್ಲವೇ? ಏಕೆಂದರೆ, ಲೋಹಿಯಾರ ಮಾರ್ಕ್ಸ್‌ವಾದದ ವಿಮರ್ಶೆಯು, ಅವರ ತತ್ವ ಮತ್ತು ರಾಜಕಾರಣದ ಮೂಲಸ್ಫೂರ್ತಿ ಏನಲ್ಲ. ಅದು ಅವುಗಳ ಒಂದು aspect ಅಷ್ಟೆ ಮುಖ್ಯವಾಗಿ ಅವರು ಆಧುನಿಕ ನಾಗರೀಕತೆಯ ವಿಮರ್ಶಕರು. ಇದರ ಹಿಂದೆ ಅವರು ಸ್ವಾತಂತ್ರ್ಯ ಹೋರಾಟಗಾರರಾಗಿ ವಸಾಹತುಶಾಹಿ ಅನುಭವವನ್ನು ಸಾಕ್ಷಾತ್ ಮುಖಾಮುಖಿಯಾಗಿಸಿಕೊಂಡು ಪಡೆದ ಹರಿತವಾದ ಅರಿವಿದೆ ಎಂಬುದನ್ನು ನಾವು ಗಮನಿಸದಿರಲಾಗದು. ಈ ಅರಿವಿನ ಭಾಗವಾಗಿ ಅವರು ಬಂಡವಾಳಶಾಹಿಯಂತೆಯೇ ಕಮ್ಯೂನಿಸಂನ್ನೂ ಆಧುನಿಕ ನಾಗರೀಕತೆಯ ಇನ್ನೊಂದು ಮುಖವೆಂದು ವ್ಯಾಖ್ಯಾನಿಸಿದರು. ಅಷ್ಟೇ ಅಲ್ಲ, ನೀವು ಹೇಳಿದ ಹಾಗೆ ಅವರು, ಇದು ಯೂರೋಪಿನ ಆಧಿಪತ್ಯವನ್ನು ಮುಂದುವರೆಸಿಕೊಂಡು ಹೋಗುವ ರಾಜಕೀಯ ಹುನ್ನಾರ ಮಾತ್ರವಲ್ಲ; ಕಮ್ಯೂನಿಸಂ, ಕ್ರಿಶ್ಚಿಯನ್ ಧರ್ಮದ ನಂತರ ಯೂರೋಪ್ ಏಷ್ಯಾದ ಮೇಲೆ ಪ್ರಯೋಗಿಸಲೆತ್ನಿಸುತ್ತಿರುವ ಇತ್ತೀಚಿನ ಅಸ್ತ್ರವೆಂದೂ ಬಣ್ಣಿಸಿದ್ದರು. ಇದು ಲೋಹಿಯಾರ ಅತಿ ಮುಖ್ಯ ಮಾತುಗಳಲ್ಲೊಂದು ಎಂದು ನಾನು ಭಾವಿಸುವೆ.

ಏಕೆಂದರೆ ಈ ಮಾತು ಲೋಹಿಯಾ, ರಾಜಕಾರಣದ ಉದ್ದೇಶವನ್ನು ಒಂದು ಲೋಕದೃಷ್ಟಿಯ ನೆಲೆಯಲ್ಲಿಯೂ ಅರ್ಥ ಮಾಡಿಕೊಳ್ಳಲು ಯತ್ನಿಸಿದ್ದರ ಸೂಚನೆಯಾಗಿ ನನಗೆ ಕಾಣುತ್ತದೆ. Secularism ಕ್ರಿಶ್ಚಿಯನ್ ಧಾರ್ಮಿಕ ರಾಜಕಾರಣದ ಕೊಡುಗೆ ಎಂಬುದನ್ನು ತಾವು ಬಲ್ಲಿರಿ. ಅದು (ಪ್ರಾಟೆಸ್ಟಂಟ್ ಎಂಬ ಕ್ರಿಶ್ಚಿಯಾನಿಟಿಯ ಆಧುನಿಕ ರೂಪ) ಯೂರೋಪ್‌ನ 'ಪುನುರುಜ್ಜೀವನ'ದ ಪ್ರಭಾವದಲ್ಲಿ ಇಡೀ ಸೃಷ್ಟಿಯನ್ನು ಬರೀ ಭೌತಿಕ ವಿದ್ಯಮಾನವಾಗಿ ಕಂಡಿದ್ದರ ಫಲ. ಇದನ್ನು (ಗಾಂಧಿಯಂತೆಯೇ) ಲೋಹಿಯಾ ಒಪ್ಪುವುದಿಲ್ಲ. ಬಹುಶಃ ಇಲ್ಲಿಂದಲೇ ಮಾರ್ಕ್ಸ್‌ವಾದ ಕುರಿತ ಲೋಹಿಯಾರ ಭಿನ್ನಮತ ಆರಂಭವಾಗುತ್ತದೆ. ಅಂದರೆ, ಜಗತ್ತನ್ನು ಗ್ರಹಿಸಲು ಹೆಗಲ್ ಮಾಡಿಕೊಂಡ ಭೌತ-ಅಭೌತವೆಂಬ ವಿಭಜನೆಯನ್ನು ಆಧರಿಸಿದ ಗತಿ ತಾರ್ಕಿಕ ವಿಧಾನವನ್ನು ಮಾರ್ಕ್ಸ್- ಏಂಗಲ್ಸರು ತಲೆಕೆಳಗು ಮಾಡಿ ಸೃಷ್ಟಿಸಿದ ಭೌತವಾದವನ್ನೇ ಅವರು ಸಂದೇಹಾಸ್ಪದ ಎಂದು ಕರೆಯುತ್ತಾರೆ. ಭೌತ- ಅಭೌತಗಳ ಪ್ರತ್ಯೇಕತೆ ಅಥವಾ ಅವುಗಳ ದ್ವಂದ್ವಮಾನ ಗ್ರಹಿಕೆ ವಿಧಾನವನ್ನು ಅವರು ಅನುಮಾನದಿಂದ ನೋಡುತ್ತಾರೆ. ಹಾಗಾಗಿ ಅವರಿಗೆ ಮಾನವ ಕುಲದ ಆಧುನಿಕ 'ಇತಿಹಾಸ' ಕಲ್ಪನೆಯ ಬಗೆಗೇ ಅನುಮಾನವಿದೆ. ಹೀಗಿರುವಾಗ ನೀವು ಲೋಹಿಯಾರ ವಿಚಾರಗಳನ್ನು ಮಾರ್ಕ್ಸ್‌ವಾದಿ ಚರ್ಚೆಗಳ ನಿಕಷಕ್ಕೊಡ್ಡಿ ವಿಮರ್ಶಿಸಿ ತಲುಪುವ ತೀರ್ಮಾನಗಳು, ಲೋಹಿಯಾ ವಿಚಾರಗಳಿಗೆ ಮಾಡುವ ಅನ್ಯಾಯಗಳಂತೆಯೇ ನನಗೆ ಕಾಣುತ್ತದೆ. ಇನ್ನು ಮಾರ್ಕ್ಸ್‌ವಾದವನ್ನು ಒಂದು ಮೆಥಡಾಲಜಿಯಾಗಿಯಾದರೂ ಲೋಹಿಯಾ ಒಪ್ಪದಿದ್ದರ ಬಗೆಗಿನ ನಿಮ್ಮ ಹಳಹಳಿಕೆ, ನಮ್ಮ ಶರಣ ಆಂದೋಲನ, ಭಕ್ತ-ಭವಿ ಎಂಬ ಒಡಕನ್ನು ಸೃಷ್ಟಿಸಿ, ಭವಿಗಳ ಬಗ್ಗೆ ವ್ಯಕ್ತಪಡಿಸಿದ ಹಳಹಳಿಕೆಯನ್ನು ನೆನಪಿಗೆ ತರುತ್ತದೆ!

ಮಾರ್ಕ್ಸ್‌ನ ಬಂಡವಾಳಶಾಹಿ ವಿಶ್ಲೇಷಣೆ ಕುರಿತ ಲೋಹಿಯಾರ ಹಲವು ಟೀಕೆಗಳ ಬಗ್ಗೆ ನೀವು,, ಇವಕ್ಕೆ ಲೋಹಿಯಾಗಿಂತ ಮೊದಲಿನಿಂದಲೇ ಚರ್ಚೆ ಆರಂಭವಾಗಿ ಮಾರ್ಕ್ಸ್‌ವಾದಿಗಳಿಂದಲೇ ಉತ್ತರ ಬಂದಿವೆ ಎನ್ನುವಿರಿ. (ಹೀಗೆ ಹೇಳುತ್ತಿರುವವರಲ್ಲಿ ನೀವು ಮೊದಲಿಗರೇನಲ್ಲ!) ಆದರೆ ನೀವೂ ಸೇರಿದಂತೆ ಇವರಾರೂ ಈ ಉತ್ತರಗಳು ಅಥವಾ ವಿಸ್ತರಣೆಗಳು ಮಾರ್ಕ್ಸ್‌ವಾದದ ಇತಿಹಾಸ ನಿರೂಪಣೆ ಮತ್ತು ಬದಲಾವಣೆಯ (ಅಥವಾ ನಿಮ್ಮ ಭಾಷೆಯಲ್ಲಿಯೇ ಹೇಳುವುದಾದರೆ, ದುಡಿಯುವ ವರ್ಗದ ಕ್ರಾಂತಿಯ) ಮೂಲ ಸಿದ್ಧಾಂತದ ವಾಸ್ತುಶಿಲ್ಪದೊಂದಿಗೆ; ಅಂದರೆ ಅದರ ತರ್ಕ ಮತ್ತು ಅದು ರೂಪಿಸಿದ ನಿಯಮಾವಳಿಯೊಂದಿಗೆ ಸಾವಯವವಾಗಿ ಹೇಗೆ ಬೆರೆತುಕೊಳ್ಳಬಲ್ಲವು ಎಂಬುದನ್ನು ಹೇಳಿಲ್ಲ. ಅವು ಹೆಚ್ಚೆಂದರೆ ಮೂಲ ಪಠ್ಯಕ್ಕೆ ಜೋತು ಬಿದ್ದ ಬಾಲಂಗೋಚಿಗಳಂತೆ ಕಾಣಬಲ್ಲವಷ್ಟೆ.. ಹಾಗಾಗಿಯೇ, ಮಾರ್ಕ್ಸೋತ್ತರ ಮಾರ್ಕ್ಸ್‌ವಾದಿಗಳ ಈ ಉತ್ತರ, ವಿಸ್ತರಣೆ ಹಾಗೂ

ಸ್ಪಷ್ಟೀಕರಣಗಳನ್ನು ಸ್ವತಃ ಲೋಹಿಯಾ ಅವರೇ, ಚರಿತ್ರೆಯನ್ನು ತಮ್ಮ ವಾದ ಹಾಗೂ ಅಂಕಿ– ಅಂಶಗಳಿಗೆ ಹೊಂದಿಸಲು ನಡೆಸುವ ಸೈದ್ಧಾಂತಿಕ ಹಿಂಸಾಚಾರ ಎಂದು ಕರೆದಿದ್ದಾರೆ. ಒಟ್ಟಂದದಲ್ಲಿ ನೋಡಿದಾಗ ನಿಮ್ಮ ಲೇಖನ, ಮಾರ್ಕ್ಸ್‌ವಾದದ ಯಜಮಾನಿಕೆಯಲ್ಲಿ ಬರೆಯಲ್ಪಟ್ಟ ಒಂದು ರಾಜಕೀಯ ಷರಾದಂತೆ ಮಾತ್ರ ಕಾಣುತ್ತದೆ. (ಸ್ವಲ್ಪ ಚೇಷ್ಟೆ ಮಾಡಿ ಹೇಳುವುದಾದರೆ, ಇದು ವೈದಿಕತೆಯ ವಿಶಿಷ್ಟಾದ್ವೈತ ವ್ಯಾಖ್ಯಾನದಂತೆ– ಅದ್ವೈತ ಮತ್ತು ದ್ವೈತಗಳಾವುವು ಎಂಬುದು ನಿಮಗೇ ಗೊತ್ತೇ ಇದೆ– ಕಾಣುತ್ತದೆ!)

ಹಾಗಾಗಿಯೇ ನೀವು ಲೋಹಿಯಾರ ವಿಕೇಂದ್ರೀಕರಣ ತತ್ವವನ್ನು ಇಂದಿನ ಪಂಚಾಯತ್ ರಾಜ್ ವ್ಯವಸ್ಥೆಯೊಂದಿಗೆ ಗೊಂದಲಗೊಳಿಸಿಕೊಂಡು, ಇದರಿಂದಾಗಿರುವ ಅನಾಹುತಗಳ ಜವಾಬ್ದಾರಿಯನ್ನು ಲೋಹಿಯಾರ ಚತುಸ್ತಂಭ ರಾಷ್ಟ್ರ ಕಲ್ಪನೆಗೆ ಕಟ್ಟಲು ಹವಣಿಸುತ್ತೀರಿ. ಲೋಹಿಯಾರ ಈ ಕಲ್ಪನೆ ಅವರ ಇಡೀ ಸಮಾಜವಾದಿ ರಾಜಕಾರಣದ ಅವಿಭಾಜ್ಯ ಅಂಗವಾಗಿದ್ದು, ಅದು ಇತರ ಸಮಾಜವಾದಿ ಕಾರ್ಯಕ್ರಮಗಳ ಜೊತೆ ಜಾರಿಯಾಗಬೇಕಾದ ಕಾರ್ಯಕ್ರಮವೇ ಹೊರತು, ಅದೊಂದು ಬಿಡಿ ಕಾರ್ಯಕ್ರಮವಲ್ಲ ಎಂಬುದು ನಿಮಗೆ ಏಕೆ ಗೊತ್ತಾಗಲಿಲ್ಲ? ಹಾಗೇ ನೀವು ಜಾತಿ, ಧರ್ಮ ಮತ್ತು ಕೃಷಿ ಮತ್ತು ಕೈಗಾರಿಕಾ ನೀತಿ ಕುರಿತ ಲೋಹಿಯಾ ವಿಚಾರಗಳನ್ನು ಬಿಡಿ ಬಿಡಿಯಾಗಿ, ಸರ್ವತಂತ್ರ ಸ್ವತಂತ್ರ ವಿಷಯಗಳಂತೆ ಪ್ರಸ್ತಾಪಿಸುವ ಮೂಲಕ ಅವನ್ನು ನಿಮ್ಮ ಮುಖ್ಯ ಚರ್ಚೆಯ ಪರಿಧಿಯ ಹೊರಗಿಟ್ಟು, ನಿಮ್ಮ ಈ ಚರ್ಚೆಯ ಮೂಲ ಕಾಳಜಿಯನ್ನೇ ಅನುಮಾನಾಸ್ಪದಗೊಳಿಸಿ ಕೊಂಡಿದ್ದೀರಿ. 'Truth is either whole or not at all' ಎಂಬುದು ಲೋಹಿಯಾ ವೈಚಾರಿಕತೆಯ ಮೂಲ ನಂಬಿಕೆ ಎಂಬುದು ನಿಮಗೆ ಗೊತ್ತಿರಬೇಕು. ಇದೇ ರಾಜಕೀಯ ಲಹರಿಯಲ್ಲಿ ನೀವು ಅಂಬೇಡ್ಕರರನ್ನು ಬೇರೆ ಎಳೆದು ತಂದು, ಅವರ ರಾಜ್ಯ ಸಮಾಜವಾದದ ಕಲ್ಪನೆಯನ್ನು ಉದ್ದೇಶಪೂರ್ವಕವಾಗಿ ಎಂಬಂತೆ (ದುಡಿಯುವ ವರ್ಗದ) ಸರ್ವಾಧಿಕಾರವೆಂದು ನಿಮ್ಮ ಮಾರ್ಕ್ಸ್‌ವಾದಿ ಪರಿಭಾಷೆಗೆ ತರ್ಜುಮೆ ಮಾಡಿಕೊಂಡಿದ್ದೀರಿ. ಆ ಮೂಲಕ ಸಂಸದೀಯ ಪ್ರಜಾಪ್ರಭುತ್ವ ಮಾದರಿಯನ್ನು ಕುರಿತ ಅವರ ಪುನರುಚ್ಚರಿತ ಬದ್ಧತೆಯನ್ನು ಹಿನ್ನೆಲೆಗೆ ಸರಿಸುವ ಪ್ರಯತ್ನ ಮಾಡಿದ್ದೀರಿ. ಮತ್ತೆ ಆ ಮೂಲಕ ನಿಮ್ಮ 'ಕ್ರಾಂತಿಕಾರಿ' ಮಾರ್ಕ್ಸ್‌ವಾದದ ಪ್ರತಿಪಾದನೆಗೆ ದಾರಿ ಮಾಡಿಕೊಂಡಿದ್ದೀರಿ. ಇದು ಅಂಬೇಡ್ಕರ್ ಚಿಂತನೆಗೆ ಮಾಡಿರುವ ಅನ್ಯಾಯವಲ್ಲದೆ ಮತ್ತೇನಲ್ಲ.

ಇಲ್ಲಿ ಮುಖ್ಯ ಸಂಗತಿ ಎಂದರೆ, ಲೋಹಿಯಾ ನೀವು ಭಾವಿಸಿದಂತೆ. ಮಾರ್ಕ್ಸ್‌ವಾದವನ್ನು ತಮ್ಮ ಮೈ ಮೇಲೆ ಎಳೆದುಕೊಂಡು ತಮ್ಮ ರಾಜಕಾರಣವನ್ನು ಕಟ್ಟಿಕೊಂಡವರಲ್ಲ. ಅವರು ಅದರ ಮೂಲ ತಾತ್ವಿಕ ವಿಮರ್ಶೆಗೆ ತೊಡಗಿದ್ದು, ಅವರೇ ಹೇಳಿಕೊಂಡಂತೆ ಮತ್ತು ನೀವೂ ಗುರುತಿಸಿರುವಂತೆ ೧೯೩೨ರಲ್ಲಿ ಕಮ್ಯುನಿಸ್ಟರು ತಮ್ಮ

ರಾಜಕೀಯ ಧೋರಣೆಯನ್ನು ಇದ್ದಕ್ಕಿದ್ದಂತೆ ತಿರುಗು ಮುರುಗಾಗಿಸಿಕೊಂಡು ಭಾರತದ ರಾಷ್ಟ್ರೀಯ ಹೋರಾಟವನ್ನು ವಿರೋಧಿಸುತ್ತಾ, ಸ್ವಾತಂತ್ರ್ಯ ಹೋರಾಟಗಾರರ ಬಗೆಗೆ ಬ್ರಿಟಿಷ್ ಸರ್ಕಾರದ ಪರವಾಗಿ ಬೇಹುಗಾರರಾಗಿ ಪರಿವರ್ತಿತರಾದಾಗ. ಮಾರ್ಕ್ಸ್‌ವಾದದ ತಾತ್ವಿಕ ಸಮಗ್ರತೆ ಕುರಿತು ಗಂಭೀರ ಅನುಮಾನ– ಆತಂಕಗಳು ಸೃಷ್ಟಿಯಾದಾಗ. ಆದರೆ ಲೋಹಿಯಾ ಈ ಸಂದರ್ಭದಲ್ಲಿ ಬಂಡುಕೋರತನದ ಆಪಾದನೆಯ ಮೇಲೆ ಕೆಳ ದರ್ಜೆ ಕೈದಿಯಾಗಿ ಸೆರೆಮನೆ ಸೇರಿ ಸತತ ಚಿತ್ರಹಿಂಸೆ ಅನುಭವಿಸಬೇಕಾಗಿ ಬಂದುದರಿಂದಾಗಿ, ಈ ವಿಮರ್ಶೆಯನ್ನು ಪೂರ್ಣಗೊಳಿಸಲಾಗಲಿಲ್ಲ. ಹಾಗಾಗಿ, ಲೋಹಿಯಾರ ಮಾರ್ಕ್ಸ್‌ವಾದದ ವಿಮರ್ಶೆಯನ್ನು ಈ ನೆಲೆಯಲ್ಲಿ ಮತ್ತು ಮಿತಿಗಳಲ್ಲಿ ಅರ್ಥ ಮಾಡಿಕೊಳ್ಳಬೇಕೇ ಹೊರತು, ಅವರು ಮಾರ್ಕ್ಸ್‌ವಾದಕ್ಕೆ ಅಥವಾ ಕಮ್ಯೂನಿಸಂಗೆ ಪ್ರತಿಯಾಗಿ ಒಂದು ಸಿದ್ಧಾಂತ ಅಥವಾ ರಾಜಕಾರಣವನ್ನು ಮಂಡಿಸುವ ಪ್ರಯತ್ನ ಮಾಡಿದರು ಎಂಬ ಗ್ರಹಿಕೆಯಲ್ಲಲ್ಲ.

ಅಂದ ಮಾತ್ರಕ್ಕೆ, ನೀವು ಮತ್ತು ನಿಮ್ಮ ಕೆಲವು ಗೆಳೆಯರು ನಂಬಿರುವಂತೆ, ಲೋಹಿಯಾ ಕಮ್ಯೂನಿಸ್ಟರ ಅಥವಾ ಮಾರ್ಕ್ಸ್‌ವಾದಿಗಳ ಕುರುಡು ವಿರೋಧಿಗಳೇನೂ ಆಗಿರಲಿಲ್ಲ. ಅವರ ಕಾಂಗ್ರೆಸ್ಸೇತರವಾದದ ಫಲವಾಗಿ ೧೯೬೭ರ ನಂತರ ಚುನಾವಣೆಗಳಲ್ಲಿ ವಿವಿಧ ರಾಜ್ಯಗಳಲ್ಲಿ ರಚಿತವಾದ ಸಂಯುಕ್ತ ವಿಧಾಯಕ ದಳ ಸರ್ಕಾರಗಳಲ್ಲಿ ಜನಸಂಘದೊಂದಿಗೆ ಕಮ್ಯೂನಿಸ್ಟ್ ಪಕ್ಷವೂ ಭಾಗವಹಿಸಿತ್ತು ಎಂಬುದನ್ನು ನಾವು ಗಮನಿಸಬೇಕು. ಅಲ್ಲದೆ, ಅವರು ಜಗತ್ತಿನ ಇತರ ಭಾಗಗಳ ಸಮಾಜವಾದಿ ಚಿಂತಕರು ಮತ್ತು ನಾಯಕರ ಜೊತೆ ಮಾತ್ರವಲ್ಲ, ಅರಬ್ ಮತ್ತು ಆಫ್ರಿಕಾದ ಹಾಗೂ ಪೂರ್ವ ಯೂರೋಪಿನ ಅನೇಕ ಕಮ್ಯೂನಿಸ್ಟ್ ನಾಯಕರೊಂದಿಗೆ ಸೌಹಾರ್ದಪೂರ್ಣ ಸಂವಾದದಲ್ಲಿ ತೊಡಗಿದ್ದರು. ರಷ್ಯಾ, ಚೀನಾ ಮತ್ತು ವಿಯಟ್ನಾಂಗಳಲ್ಲಿನ ರಾಜಕೀಯ ಬೆಳವಣಿಗೆಗಳನ್ನು ಕುತೂಹಲದಿಂದ ಗಮನಿಸುತ್ತಾ, ಕಾಲಾನುಕಾಲಕ್ಕೆ ಆ ಬಗ್ಗೆ ತಮ್ಮ ಟೀಕೆ– ಟಿಪ್ಪಣಿಗಳನ್ನು ಮಾಡುತ್ತಿದ್ದರು. ಇಂತಹ ಹಲವಾರು ಉದಾಹರಣೆಗಳನ್ನು ನಾವು ಅವರ ಸಂಪಾದಕತ್ವದ 'ಮ್ಯಾನ್‌ಕೈಂಡ್' ಪತ್ರಿಕೆಯ ಸಂಚಿಕೆಗಳಲ್ಲಿ ನೋಡಬಹುದು. ಇನ್ನು ನೀವು ಚೀನಾ ಆಕ್ರಮಣದ ಸಂದರ್ಭದಲ್ಲಿ ಲೋಹಿಯಾ ಚೀನಾವನ್ನು, ಅದರ ರಾಜಕೀಯ ನಾಯಕರನ್ನು ಟೀಕಿಸಿದ ರೀತಿ– ನೀತಿಗಳ ಬಗ್ಗೆ ಆಕ್ಷೇಪವೆತ್ತಿದ್ದೀರಿ. ಇದಕ್ಕೆ ಕಾರಣ, ಲೋಹಿಯಾ, ಚೀನಾದ ಟಿಬೆಟ್ ಆಕ್ರಮಣ ಕಾಲದಿಂದ ಹಿಡಿದು, ನೇಪಾಳದ ಪ್ರಜಾಪ್ರಭುತ್ವೀಕರಣದ ಹೋರಾಟವೂ ಸೇರಿದಂತೆ ಹಿಮಾಲಯಾ ಬಚಾವೋ ಆಂದೋಲನ ಆರಂಭಿಸುವವರೆಗೆ ಚೀನಾ ಕುರಿತು ತಮ್ಮ ನಿಲುವನ್ನು ರೂಪಿಸಿಕೊಳ್ಳುತ್ತಾ ಹೋದ ನೆಲೆ ಮತ್ತು ಬಗೆಗಳನ್ನು ನೀವು ಗಮನಿಸದೇ ಇರುವುದು. ಅದೇನೇ ಇರಲಿ, ಇನ್ನೂ ಜಾಗತಿಕ ಕ್ರಾಂತಿಯ ಕನಸಿನಲ್ಲೇ ಮುಳುಗಿರುವವರಿಗೆ ರಾಷ್ಟ್ರೀಯವಾದಿಗಳ ರಾಜಕೀಯ ಭಾಷೆ ಯಾವಾಗಲೂ ಆಕ್ಷೇಪಾರ್ಹವೇ ಎಂದಷ್ಟೇ ಇಲ್ಲಿ ಹೇಳಬಯಸುವೆ. ಜೊತೆಗೆ, ಮಾರ್ಕ್ಸ್‌ವಾದ ಮತ್ತು ಕಮ್ಯೂನಿಸಂ ಕುರಿತ ಲೋಹಿಯಾ

ವಿಶ್ಲೇಷಣೆ ಬಗ್ಗೆ ಆಕ್ಷೇಪವೆತ್ತುವ ನಿಮಗೆ ಇಲ್ಲಿಯೂ ಒಂದಿಷ್ಟು ಉತ್ತರ ದೊರಕೀತು ಎಂಬ ಒಂದು ಮಾತನ್ನೂ ಇಲ್ಲಿ ಸೇರಿಸಬಯಸುವೆ.

ಪ್ರತಿಯೊಂದು ದೇಶವೂ ತನ್ನ ಸ್ಥಳೀಯ ಆರ್ಥಿಕ– ಸಾಮಾಜಿಕ– ಸಾಂಸ್ಕೃತಿಕ ಮತ್ತು ಚಾರಿತ್ರಿಕ ಪರಿಸ್ಥಿತಿಗೆ ತಕ್ಕಂತೆ ತನ್ನ ರಾಜಕಾರಣವನ್ನು ರೂಪಿಸಿಕೊಳ್ಳಬೇಕೆಂದು ನಂಬಿದ್ದ ಲೋಹಿಯಾರ ವಿಶ್ವಾತ್ಮಕ ದೃಷ್ಟಿ, ವಿಶ್ವ ಸರ್ಕಾರ ಕುರಿತ ಅವರ ಪರಿಕಲ್ಪನೆಯ ವಿವರಗಳು ಸೂಚಿಸುವಂತೆ ವಿಕೇಂದ್ರೀಕೃತ ಸ್ವಾಯತ್ತತೆಯ ತತ್ವವನ್ನು ಆಧರಿಸಿತ್ತು. ಇಂದು ಕೆಲವರು ಹೇಳುವಂತೆ, ಲ್ಯಾಟಿನ್ ಅಮೆರಿಕಾದ ಕೆಲವು ದೇಶಗಳು ಮತ್ತು ಅವುಗಳ ನಾಯಕರು ಜಾಗತೀಕರಣದ ವಿರುದ್ಧ ಸೆಡ್ಡು ಹೊಡೆದು ತಮ್ಮದೇ ಸ್ವಾಯತ್ತ ಸರ್ಕಾರಗಳನ್ನು ರಚಿಸಿಕೊಳ್ಳುತ್ತಿರುವುದು ಮಾರ್ಕ್ಸ್‌ವಾದದ ಸ್ಫೂರ್ತಿಯಿಂದಲೇ ಎಂಬುದು ನಿಜವಾಗಿದ್ದರೆ, ಅವರು ಅನುಸರಿಸುತ್ತಿರುವ ಮಾರ್ಕ್ಸ್‌ವಾದ ನಿಜವಾಗಿಯೂ ಎಷ್ಟು ಮಾರ್ಕ್ಸ್‌ವಾದಿ ಎಂಬುದನ್ನು ವಿವರವಾಗಿ ಪರಿಶೀಲಿಸಬೇಕಾಗುತ್ತದೆ. ಬಂಡವಾಳವಾದ ಅಥವಾ ಮುಕ್ತ ಮಾರುಕಟ್ಟೆವಾದಗಳ ವಿರುದ್ಧ ನಡೆಸುವ ಎಲ್ಲ ಹೋರಾಟಗಳೂ ಮಾರ್ಕ್ಸ್‌ವಾದಿಯೇ ಆಗಬೇಕಿಲ್ಲ; ಮಾರ್ಕ್ಸ್‌ವಾದ ಎಂಬುದು ಒಂದು ಜಾಗತಿಕ ಮಾನ್ಯತೆ ಪಡೆದ ಸಿದ್ಧಾಂತವಾಗಿರುವುದರಿಂದ, ಇಂತಹ ಎಲ್ಲ ಹೋರಾಟಗಳನ್ನೂ ಅದರ ಪರಿಭಾಷೆಯ ಮೂಲಕವೇ ಗುರುತಿಸುವ ಅಭ್ಯಾಸ ಸಹಜವೇ ಆಗಿದೆ. ಹಾಗೆ ನೋಡಿದರೆ, ಭಾರತದ ವಿವಿಧ ಕಮ್ಯೂನಿಸ್ಟ್ ಪಕ್ಷಗಳು ಮಾರ್ಕ್ಸ್‌ವಾದದ ಹೆಸರಿನಲ್ಲಿ ಇಂದು ಮುಕ್ತ ಮಾರುಕಟ್ಟೆವಾದದ ವಿರುದ್ಧ ನಡೆಸಿರುವ ಹೋರಾಟಗಳನ್ನು ಎಷ್ಟರ ಮಟ್ಟಿಗೆ ಮಾರ್ಕ್ಸ್‌ವಾದಿ ಎಂದು ಕರೆಯಬಹುದು ಯೋಚಿಸಿ!

ಅದೇನೇ ಇರಲಿ, ನೀವು ಮತ್ತು ಇನ್ನೂ ಹಲವರು (ಮತ್ತು ಸಾಂದರ್ಭಿಕವಾಗಿ ಅನಿವಾರ್ಯವೆಂಬಂತೆ ನಾನೂ) ಬಳಸುವ ಅರ್ಥದಲ್ಲಿ ಲೋಹಿಯಾವಾದ ಎಂಬುದೊಂದಿದೆ ಎಂಬ ಬಗ್ಗೆ ನನಗೇ ಅನುಮಾನವಿದೆ; 'ವಾದ' ಎಂಬುದರ ಪ್ರಚಲಿತ ಅರ್ಥದ ಹಿನ್ನೆಲೆಯಲ್ಲಿ. ಲೋಹಿಯಾ ಆಧುನಿಕತೆಯ ವೈಚಾರಿಕ ಪರಿಧಿಯೊಳಗೆ ಇದ್ದುಕೊಂಡೇ ಅದು ಕಟ್ಟಹೊರಟ ನಾಗರೀಕತೆಯ ವಿಮರ್ಶೆಗೆ ತೊಡಗಿದವರು. ಇದರ ಭಾಗವಾಗಿ ತಮ್ಮ ಕಾಲದ ಎರಡು ಧೃವೀಕೃತ ವೈಚಾರಿಕ ರೂಪಕಗಳಂತಿದ್ದ ಗಾಂಧಿ ಮತ್ತು ಮಾರ್ಕ್ಸ್‌ರಿಬ್ಬರಿಗೂ (ಆ ಮೂಲಕ ಅಂಬೇಡ್ಕರ್ ಮತ್ತು ಐರೋಪ್ಯ ಪ್ರಜಾತಾಂತ್ರಿಕ ಸಮಾಜವಾದಿಗಳಿಗೂ) ಪ್ರತಿಸ್ಪಂದಿಸುತ್ತಾ ತಮ್ಮದೇ ವೈಚಾರಿಕ ಕುಲುಮೆಯಲ್ಲಿ ಭಾರತೀಯ ಸಮಾಜವಾದದ ಮಾದರಿಯೊಂದನ್ನು ಮಂಡಿಸಿದರು. ಅವರು ಮೂಲತಃ ಅಲೆಮಾರಿಯಾದ ಅವಧೂತ ವ್ಯಕ್ತಿತ್ವದವರಾಗಿದ್ದು, ಆಕಸ್ಮಿಕವೆಂಬಂತೆ ರಾಜಕೀಯ ಸವಾಲೊಂದನ್ನು ಸ್ವೀಕರಿಸಬೇಕಾಗಿ ಬಂದಾಗ, ಸಕ್ರಿಯ ರಾಜಕಾರಣಿಯೂ ಆಗಬೇಕಾದ ಅನಿವಾರ್ಯತೆಗೆ ಸಿಕ್ಕಿದವರು. ಹಾಗೇ ಅಂದಿನ ಜನಪ್ರಿಯ ನೆಹ್ರೂ ರಾಜಕಾರಣದೆದುರಿಗೆ ಹೊಸ ತಾತ್ವಿಕ ರಾಜಕಾರಣ ಮಾಡಲು ಯತ್ನಿಸಿ ಬಸವಳಿದವರು. ಈ ಹಿನ್ನೆಲೆಯಲ್ಲಿ ತಮ್ಮ ೫೭ನೇ ವಯಸ್ಸಿಗೇ

ಅನಾರೋಗ್ಯಕ್ಕೆ ತುತ್ತಾಗಿ ಮರಣಕ್ಕೆ ಈಡಾದವರು. ಈ ಎಲ್ಲ ಕಾರಣಗಳಿಂದಾಗಿ ಅವರು ತಾರ್ಕಿಕವಾಗಿ ಸುಸಂಗತವಾದ ರಾಜಕೀಯ ಸಿದ್ಧಾಂತ 'ವ್ಯವಸ್ಥೆ'ಯೊಂದನ್ನು ರೂಪಿಸಲಾಗಲಿಲ್ಲ. ಅದೇ ಕಾರಣದಿಂದಾಗಿ ಒಂದು ಸುಭದ್ರ ರಾಜಕೀಯ ಪಕ್ಷವನ್ನೂ ಅವರಿಗೆ ಕಟ್ಟಲಾಗಲಿಲ್ಲ. ಎಲ್ಲವೂ ಅರ್ಧಂಬರ್ಧ ಮಾಡಿದ ಕೆಲಸವೇ ಆಗಿತ್ತು.

ಇದನ್ನು ಅವರ ಅನುಯಾಯಿಗಳಾದರೂ ಪೂರ್ಣಗೊಳಿಸಬೇಕಿತ್ತು. ಆದರೆ ಅದಕ್ಕೆ ಬೇಕಾದ ಬೌದ್ಧಿಕ ತಾಕತ್ತಾಗಲೀ ಸಂಘಟನಾ ಸಾಮರ್ಥ್ಯವಾಗಲೀ ಅವರಾರಿಗೂ ಇರಲಿಲ್ಲ. ಲೋಹಿಯಾರ ಕೊನೆಯ ದಿನಗಳಲ್ಲಿ ಒಂದು ಸಾಂದರ್ಭಿಕ ರಾಜಕೀಯ ತಂತ್ರವಾಗಿ ಮಂಡಿಸಿದ 'ಕಾಂಗ್ರೆಸ್ಸೇತರವಾದ'ವೇ ಅವರ ಅನುಯಾಯಿಗಳಲ್ಲಿ ಮುಂದೆ ಒಡಕನ್ನುಂಟು ಮಾಡಿ, ಪಕ್ಷವೇ ಇಲ್ಲವಾಗಲು ಕಾರಣವಾಯಿತು. ಇದಕ್ಕಾಗಿ ಲೋಹಿಯಾರನ್ನು ಈಗ ದೂಷಿಸಿ ಉಪಯೋಗವಿಲ್ಲ. ಏಕೆಂದರೆ, ಅದು ಅಂದಿನ ರಾಜಕೀಯ ಪರಿಸ್ಥಿತಿಯ ಅನಿವಾರ್ಯತೆಯಾಗಿದ್ದರಿಂದಲೇ ಲೋಹಿಯಾ ಆ ತಂತ್ರವನ್ನು ರೂಪಿಸಿದರು. ಅದು ಭಾರತದ ಸ್ವಾತಂತ್ರ್ಯೋತ್ತರ ರಾಜಕೀಯ ಚರಿತ್ರೆಯಲ್ಲಿ ಉಂಟಾದ ಮೊದಲ ಸ್ಥಿತ್ಯಂತರಕ್ಕೆ ಕಾರಣವಾಯಿತು ಎಂಬುದನ್ನು ನಾವು ಮರೆಯಬಾರದು. ಇಂದು ಅದು ಕೋಮುವಾದಿ ರಾಜಕಾರಣಕ್ಕೆ ಕುಮ್ಮಕ್ಕು ನೀಡಿತು ಎಂದು ಹೇಳುವವರನ್ನು, ಆ ಕಾಂಗ್ರೆಸ್ಸೇತರವಾದದ ನಿರ್ಣಾಯಕ ರಾಜಕೀಯ ಪರಿಣಾಮಗಳ ಗತಿತಾರ್ಕಿಕತೆಯ ಮಹತ್ವವನ್ನು ತಮ್ಮ ಸೈದ್ಧಾಂತಿಕ ಪೂರ್ವಾಗ್ರಹಗಳಿಂದಾಗಿ ಮಾನ್ಯ ಮಾಡಲಿಚ್ಚಿಸದ ಮತ್ತು ಅದೇ ಕಾರಣಗಳಿಂದಾಗಿ ಭಾರತದ ಕೋಮುವಾದಿ ರಾಜಕಾರಣದ ಚರಿತ್ರೆಯನ್ನು ಸಮೀಪ ದೃಷ್ಟಿ ದೋಷದಿಂದ ನೋಡುವ ರಾಜಕೀಯ ವಿಕಲತೆಗೆ ತುತ್ತಾಗಿರುವ ಸಂಕುಚಿತ ಬುದ್ಧಿಯವರು ಎಂದೇ ಕರೆಯಬೇಕಾಗುತ್ತದೆ.

ಲೋಹಿಯಾರ ಸ್ಫೂರ್ತಿಯಿಂದ ರಚಿತವಾದ ಪಕ್ಷ ಮತ್ತು ರೂಪುಗೊಂಡ ಆಂದೋಲನ ಇಂದಿಲ್ಲ ಎಂದು ಕೊರಗಬೇಕಿಲ್ಲ. ಅವು ತಮ್ಮ ಯೋಗ್ಯತಾನುಸಾರವಾದ ಕರ್ತವ್ಯಗಳನ್ನು ಮುಗಿಸಿ ಹೋಗಿವೆ. ಇಂದು ಲೋಹಿಯಾ ಬಿಟ್ಟುಹೋದ ವಿಚಾರ ಗುಚ್ಛಗಳು ಮತ್ತು ನೀಡಿ ಹೋದ ಹಲವು ಸಾಮಾಜಿಕ– ಸಾಂಸ್ಕೃತಿಕ– ರಾಜಕೀಯ ಹೊಳಹುಗಳು ನಮ್ಮ ಮುಂದಿವೆ. ಅದಕ್ಕಿಂತ ಮುಖ್ಯವಾಗಿ, ಅವು ಇಂದು– ಯಾವುದನ್ನು ಲೋಹಿಯಾ ಕಟುವಾಗಿ ವಿಮರ್ಶಿಸಿದರೋ, ಆ ಆಧುನಿಕ ನಾಗರೀಕತೆಯ ಕೆಟ್ಟ ಆವೃತ್ತಿ ಜಾಗತೀಕರಣದ ರೂಪದಲ್ಲಿ ನಮ್ಮನ್ನು ನಿರ್ಣಾಯಕವಾಗಿ ಮುಖಾಮುಖಿ ಯಾಗಿರುವಾಗ– ಅಂದಿಗಿಂತ ಇಂದು ಹೆಚ್ಚು ಅರ್ಥಪೂರ್ಣವಾಗಿ ಮತ್ತು ಚೂಪಾಗಿ ಕಾಣತೊಡಗಿವೆ. ಇಂದು ಅವುಗಳ ವಿಸ್ತರಣೆ, ಮರುನಿರೂಪಣೆ ಮತ್ತು ರಾಜಕೀಯ ಅನ್ವಯದ ಕೆಲಸವಾಗಬೇಕಿದೆ. ಆಗುತ್ತಲೂ ಇದೆ. ಇದೇನೂ ಲೋಹಿಯಾವಾದದ ಹೆಸರಿನಲ್ಲೇ ಆಗಬೇಕಿಲ್ಲ. ಆಗುತ್ತಲೂ ಇಲ್ಲ.

ಆದುದರಿಂದ ಇಂದು ಅಗತ್ಯವಾಗಿರುವುದು ಇಂತಹ ಕೆಲಸಗಳೊಂದಿಗೆ ನಮ್ಮ ಕೈಲಾದ ಮಟ್ಟಿಗೆ ಕೈಜೋಡಿಸುವುದೇ ಆಗಿದೆಯೇ ಹೊರತು, ತಾತ್ವಿಕ ಮತಾಂತರದ ಪ್ರಯತ್ನಗಳಲ್ಲ. ಇದರ ಭಾಗವಾಗಿಯೋ ಎಂಬಂತೆ, ಮೂಲತಃ ಲೋಹಿಯಾವಾದಿಯಾಗಿ

ಕಮ್ಯೂನಿಸಂ ಕುರಿತಂತೆ ತಮ್ಮ ಜೀವನಪರ್ಯಂತ ಒಂದು ಸ್ಪಷ್ಟ ನಿಲುವು ಹೊಂದಿದ್ದ ಪ್ರೊ. ಎಂ.ಡಿ. ನಂಜುಂಡಸ್ವಾಮಿಯವರು ಜಾಗತೀಕರಣದ ಬಗ್ಗೆ ಸ್ಪಷ್ಟ ನಿಲುವು ತಾಳಲು ಸಾಧ್ಯವಾದದ್ದು ಅವರು ಮಾರ್ಕ್ಸ್‌ವಾದಿಗಳ ಜೊತೆಗೂಡಿ ಕೆಲಸಮಾಡಿದ್ದರಿಂದ ಎಂಬ ನಿಮ್ಮ ಕೆಲವು ಪಂಥೀಯ ಸ್ನೇಹಿತರು ಚಾಲ್ತಿಗೆ ತಂದಿರುವ ಹಸಿಸುಳ್ಳನ್ನು, ನೀವೂ ನಿಮ್ಮ ವಾದಕ್ಕೆ ಬಳಸಿಕೊಂಡಿರುವುದು ವಿಷಾದಕರ ಎಂಬುದನ್ನೂ ಇಲ್ಲಿ ದಾಖಲಿಸಬಯಸುವೆ. ಹಾಗಾಗಿಯೇ, ನೀವು ಲೋಹಿಯಾವಾದದ ಮರುವಿಮರ್ಶೆಯ ನೆಪದಲ್ಲಿ ಕೊನೆಕೊನೆಗೆ ನೆಪಕ್ಕೆ ಮಾತ್ರ ಮಾವೋವಾದದ ವಿಮರ್ಶೆ ಮಾಡಿದಂತೆ ಮಾಡಿ, ಅಂತಿಮವಾಗಿ ಅದನ್ನು ಸಮರ್ಥಿಸಿ ಪ್ರಚುರಪಡಿಸುವ ಪ್ರಯತ್ನ ಮಾಡಿರುವುದು ನಿಮ್ಮ ಈ ಸುದೀರ್ಘ ಲೇಖನದ ಸದುದ್ದೇಶವನ್ನೇ ಭಂಗಗೊಳಿಸುವಂತಿದೆ ಎಂದು ತಿಳಿಸಬಯಸುವೆ.

(ಅಂತರ್ಜಾಲದಲ್ಲಿ ನೀಡಲಾದ ಉತ್ತರ– ಆಗಸ್ಟ್, ೨೦೦೧; 'ನವ ಮಾನವ ಮಾಸಿಕ'ದ ಏಪ್ರಿಲ್, ೨೦೧೨ರ ಸಂಚಿಕೆಯಲ್ಲಿ ಪ್ರಕಟ)

✧✧✧

೧೪. ಸಾಮಾಜಿಕ ನ್ಯಾಯ ರಾಜಕಾರಣ ದಾರಿ ತಪ್ಪಿದೆ*

ಈ ಜಾತಿ ವಿರೋಧಿ ಸಮ್ಮೇಳನದ ಅಧ್ಯಕ್ಷತೆ ವಹಿಸಿರುವ ಕಾಂತಾ ಅವರೇ, ಇದನ್ನು ಉದ್ಘಾಟಿಸಿದ ರಾಜೇಶ್ವರಿ ತೇಜಸ್ವಿಯವರೇ, ಈ ಸಮ್ಮೇಳನವನ್ನು ಆಯೋಜಿಸಿರುವ ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನದ ಅಧ್ಯಕ್ಷರಾದ ನಾಗಭೂಷಣ್ ಅವರೇ, ಈ ಸಮ್ಮೇಳನಕ್ಕೆ ಅನಿರೀಕ್ಷಿತವಾಗಿ ಬಂದ ನನಗೆ ತುಂಬಾ ಸಂತೋಷವಾಗಿದೆ. ಇದಕ್ಕೆ ಒಂದು ಕಾರಣ ಎಂದರೆ, ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನದ ಆಶ್ರಯದಲ್ಲಿ ನಡೆಯುತ್ತಿರುವ ಈ ಸಮ್ಮೇಳನದಲ್ಲಿ ಲೋಹಿಯಾ ಹೆಸರಿನ ಪಠಣ ನಡೆಯದೆ, ಲೋಹಿಯಾ ಹೇಳಿದ ಕೆಲಸ ನಡೆದಿದೆ . ಇದಕ್ಕಾಗಿ ನಿಮಗೆ ಮೊದಲ ಅಭಿನಂದನೆಗಳು ಇನ್ನೊಂದು ಕಾರಣವೆಂದರೆ, ಜಾತಿ ವಿನಾಶ ಅಥವಾ ಜಾತಿ ವಿರೋಧದ ಮಾತೇ ಈಗ ಎಲ್ಲೂ ಕೇಳಿ ಬರುತ್ತಿಲ್ಲ. ಈ ತರಹದ ಕಾರ್ಯಕ್ರಮಗಳು ಇಪ್ಪತ್ತು ವರ್ಷಗಳ ಹಿಂದೆ ನಡೆಯುತ್ತಿದ್ದವು. ತಮಿಳ್ನಾಡಲ್ಲಿ ನಡೆಯುತ್ತಿತ್ತು. ಉತ್ತರ ಭಾರತದಲ್ಲಿ ಅಲ್ಲಲ್ಲಿ ನಡೆಯುತ್ತಿತ್ತು. ಈಗ ಅಲ್ಲಿ ಅದರ ಸುಳಿವಿಲ್ಲ. ಇಂತಹ ಸಂದರ್ಭದಲ್ಲಿ ನೀವು ಈ ಮಹಾನ್ ಪರಂಪರೆ ಯನ್ನು ಜೀವಂತವಾಗಿಟ್ಟಿದ್ದೀರಿ. ಅದಕ್ಕಾಗಿ ನಿಮಗೆ ದೊಡ್ಡ ಸಲಾಂ ಹೇಳಲೇಬೇಕು. ಶಿವಮೊಗ್ಗಕ್ಕೆ ನಾನು ಬರುತ್ತಿರುವುದು ಇದೇ ಮೊದಲ ಸಲ. ಶಿವಮೊಗ್ಗದ ಬಗ್ಗೆ ನಾನು ಅಲ್ಪ ಸ್ವಲ್ಪ ತಿಳಿದಿದ್ದೆ. ಇದು ಗೋಪಾಲಗೌಡರ ಕರ್ಮಭೂಮಿ, ಕರ್ನಾಟಕದ ಸಮಾಜವಾದಿ ಆಂದೋಲನದ ತವರು ಎಂದು ಕೇಳಿದ್ದೆ. ಅನಂತಮೂರ್ತಿಯವರ ಕಾದಂಬರಿಗಳನ್ನು ಓದಿ ನಾನು ಶಿವಮೊಗ್ಗ ಜಿಲ್ಲೆ ಬಗ್ಗೆ ಕುತೂಹಲ ತಾಳಿದ್ದೆ. ಈ ಜಿಲ್ಲೆಯಲ್ಲಿ ಸಮಾಜವಾದಿ ರಾಜಕೀಯ ಚೇತನವೊಂದು ಇನ್ನೂ ಜೀವಂತವಿದೆ ಎಂದು ಗೆಳೆಯ ರಾಜಾರಾಂ ತೋಳ್ಪಾಡಿ ನನಗೆ ಹೇಳುತ್ತಿದ್ದರು. ಇಂತಹ ಜಿಲ್ಲೆಗೆ ಬಂದು ಮಾತನಾಡಲು ಅವಕಾಶ ಮಾಡಿಕೊಟ್ಟಿರುವುದಕ್ಕಾಗಿ ನಿಮಗೆಲ್ಲ ನನ್ನ ಧನ್ಯವಾದಗಳು. ಈ ಸಮ್ಮೇಳನಕ್ಕೆ ನನ್ನನ್ನು ಯಾಕೆ ಮುಖ್ಯ ಅತಿಥಿಯನ್ನಾಗಿ ಕರೆಯಲಾಗಿದೆ ಎಂಬುದು ನನಗೆ ಗೊತ್ತಿಲ್ಲ! ಅಂತಹ ಯಾವ ವಿಶೇಷ ಅರ್ಹತೆಯೂ ನನಗಿಲ್ಲ. ನಿಮ್ಮಲ್ಲಿ

*ಶಿವಮೊಗ್ಗದಲ್ಲಿ ನಡೆದ ಜಾತಿ ವಿರೋಧಿ ಸಮ್ಮೇಳನದಲ್ಲಿ ಯೋಗೇಂದ್ರ ಯಾದವ್ ಮಾಡಿದ ಭಾಷಣದ ಕನ್ನಡಾನುವಾದ*ಅನುವಾದ: ಡಿ.ಎಸ್. ನಾಗಭೂಷಣ)

ಬಹಳ ಜನರಂತೆ ನಾನೂ ಅಂತರ್ಜಾತಿ ವಿವಾಹವಾದವನು, ನಿಜ. ಆದರೆ ಅದೇ ಅರ್ಹತೆಯಾಗಿದ್ದಲ್ಲಿ ನಿಮ್ಮಲ್ಲಿ ಬಹಳ ಜನ ನನ್ನ ಈ ಜಾಗದಲ್ಲಿ ಕೂರಬೇಕಿತ್ತು! ಇರಲಿ, ಈ ಅವಕಾಶವನ್ನು ನಾನು ಬಳಸಿಕೊಂಡು ಇಂದು ನಾನು ಕೆಲವು ದೊಡ್ಡ ವಿಷಯಗಳ ಬಗ್ಗೆ ನನ್ನ ಸಣ್ಣ ಪುಟ್ಟ ವಿಚಾರಗಳನ್ನು ಮಂಡಿಸ ಬಯಸುವೆ. ನಿಜ, ಇಂತಹ ಸಂದರ್ಭಗಳಲ್ಲಿ ಜಾತಿ ವ್ಯವಸ್ಥೆ ಎಷ್ಟು ಕೆಟ್ಟದು, ಏಕೆ ಮತ್ತು ಹೇಗೆ ಅದನ್ನು ವಿರೋಧಿಸಬೇಕು ಎಂದು ಮಾತಾಡಬಲ್ಲವರು ಸಾಕಷ್ಟು ಜನರಿದ್ದಾರೆ. ಆದರೆ ಇಂದು ಜಾತಿ ವಿರೋಧಿ ಆಂದೋಲನ ಎದುರಿಸುತ್ತಿರುವ ಜಟಿಲ ಪ್ರಶ್ನೆಗಳ ಬಗ್ಗೆ, ಕಠಿಣ ಸವಾಲುಗಳ ಬಗ್ಗೆ ಆಲೋಚನೆ ಮಾಡುವವರು ಕಡಿಮೆಯಾಗಿದ್ದಾರೆ. ಹಾಗಾಗಿ ನನ್ನನ್ನು ಸ್ವಲ್ಪ ಕಟು ಎಂದರೂ ಸರಿಯೇ, ನಾನಿಂದು ಈ ಕೆಲವು ಕಠಿಣ ಪ್ರಶ್ನೆಗಳ ಬಗ್ಗೆ ಮಾತಾಡಬಯಸುವೆ.

ಇಂದಿನ ಮುಖ್ಯ ಪ್ರಶ್ನೆ, ಈ ಸಾಮಾಜಿಕ ನ್ಯಾಯ ಆಂದೋಲನ ಅಥವಾ ಜಾತಿ ವಿರೋಧಿ ಆಂದೋಲನ ಏನಿದೆ, ಯಾವುದನ್ನು ಕಳೆದ ನೂರೈವತ್ತು ವರ್ಷಗಳಿಂದ ನಾರಾಯಣ ಗುರು, ಪೆರಿಯಾರ್, ಫುಲೆ- ಅಂಬೇಡ್ಕರದ ಮತ್ತು ಲೋಹಿಯಾ ಧಾರೆಗಳು ಬೇರೆ ಬೇರೆ ಹೆಸರುಗಳಲ್ಲಿ ಕಟ್ಟುತ್ತಾ ಬಂದವು, ಅದು ಇಂದು ಯಾವ ಸ್ಥಿತಿಯಲ್ಲಿದೆ? ಅದರ ಮುಂದಿನ ಗುರಿ ಏನೆಂಬುದು. ಏಕೆಂದರೆ ಈ ಆಂದೋಲನ ೨೦ನೇ ಶತಮಾನದಲ್ಲಿ 'ದಿಗ್ವಿಜಯ' ಎಂದೇ ಹೇಳಬಹುದಾದ ಯಶಸ್ಸನ್ನು ಸಾಧಿಸಿ, ೨೧ ಶತಮಾನದ ಹೊಸ್ತಿಲಿನಲ್ಲಿ ಬಂದು ನಿಂತಿದೆ. ದಕ್ಷಿಣದಲ್ಲಿ ಆರಂಭವಾದ ಈ ರಾಜಕಾರಣ ಈಗ ಉತ್ತರದಲ್ಲಿ ತನ್ನ ತಾರ್ಕಿಕ ಅಂತ್ಯ ಮುಟ್ಟಿದೆ ಎಂದು ಹೇಳಲಾಗುತ್ತಿದೆ. ಉದಾಹರಣೆಗೆ ತಮಿಳ್ನಾಡು ನೋಡಿ, ಕಳೆದ ನಾಲ್ಕು ವರ್ಷಗಳಿಂದ ಅಧಿಕಾರದಲ್ಲಿರುವ ಅಲ್ಲಿನ ಎರಡು ಪ್ರಮುಖ ಪಕ್ಷಗಳೂ ಜಾತಿ ವಿರೋದಿ ಆಂದೋಲನದ ಉತ್ಪನ್ನಗಳೇ. ಕರ್ನಾಟಕದಲ್ಲಿ ಎಪ್ಪತ್ತರ ದಶಕದ ನಂತರ ಸಾಮಾಜಿಕ ನ್ಯಾಯವನ್ನು ನಿರ್ಲಕ್ಷಿಸಿ ರಾಜಕಾರಣ ಮಾಡಲು ಸಾಧ್ಯವಿಲ್ಲ ಎನ್ನುವಂತಹ ಪರಿಸ್ಥಿತಿ ಉಂಟಾಗಿದೆ. ಕೇರಳದಲ್ಲಿ ಬಹು ಹಿಂದೆಯೇ ಈ ಬೆಳವಣಿಗೆ ಆಗಿ ಹೋಗಿದೆ. ಆಂಧ್ರ- ಮಹಾರಾಷ್ಟ್ರಗಳಲ್ಲಿ ಬ್ರಾಹ್ಮಣರ ರಾಜಕೀಯ ಪ್ರಭುತ್ವ ಹಿನ್ನೆಲೆಗೆ ಸರಿದು ಹೋಗಿ ಬಹಳ ಕಾಲವೇ ಆಯಿತು! ಉಳಿದಿದ್ದ ಉತ್ತರ ಪ್ರದೇಶ ಮತ್ತು ಬಿಹಾರಗಳಲ್ಲಿ ಮುಲಾಯಂ- ಲಲ್ಲೂ ಪ್ರಸಾದ್, ಮತ್ತೀಗ ನಿತೀಶರ ವಿಜಯದೊಂದಿಗೆ; ಅದಕ್ಕಿಂತ ಹೆಚ್ಚಾಗಿ ಇನ್ನೂ ಮುಂದಿನ ಹೆಜ್ಜೆಯೆಂಬಂತೆ ಕಳೆದ ಹತ್ತು ವರ್ಷಗಳಲ್ಲಿನ ಮಾಯಾವತಿ ರಾಜಕಾರಣದ ಉದಯದೊಂದಿಗೆ ಈ ದಿಗ್ವಿಜಯ ಸಂಪೂರ್ಣಗೊಂಡಿದೆ ಎಂದೇ ಹೇಳಬೇಕು.

ಆದರೆ ಈ ದಿಗ್ವಿಜಯವನ್ನು ಆಚರಿಸುವ ಸಂಭ್ರಮದ ಸಮಯದಲ್ಲೇ ಅದು ಒಂದು ಬಿಕ್ಕಟ್ಟನ್ನೂ ಎದುರಿಸುವಂತಾಗಿದೆ. ಏಕೆಂದರೆ ಈ ಆಂದೋಲನ ತನ್ನ ನೀತಿ ಮತ್ತು ರಾಜಕಾರಣದ ನೆಲೆಯಲ್ಲಿ ಈಗ ಒಂದು ಸ್ಥಗಿತತೆಯ ಹಂತ ತಲುಪಿಬಿಟ್ಟಿರುವುದನ್ನು ನಾವು ಕಾಣುತ್ತಿದ್ದೇವೆ. ಈ ವಿಜಯ ಅಥವಾ ದಿಗ್ವಿಜಯ ಎನ್ನುವುದು ನಿಜವಾದ

ವಿಜಯವಲ್ಲವೇನೋ, ಇದು ಖೋಟಾ, ಟೊಳ್ಳು ವಿಜಯವೇನೋ ಎಂಬ ಅನುಮಾನ ನಮ್ಮಂತಹವರಲ್ಲಿ ಈಗ ಆರಂಭವಾಗಿದೆ. ಈ ಸಾಮಾಜಿಕ ನ್ಯಾಯ ನೀತಿ ಮತ್ತು ರಾಜಕಾರಣದ ಸದ್ಯದ ಲಕ್ಷಣಗಳನ್ನು ನೋಡಿ. ಅದು ಇತರೆಲ್ಲ ಆಯಾಮಗಳನ್ನೂ ಕಳೆದುಕೊಂಡು ಮೀಸಲಾತಿ ಕುರಿತ ಮಂಡಲ್‌ವಾದವೇ ಆಗಿಹೋಗಿಟ್ಟಿದೆ. ಅಂದರೆ ಅದರ ಬೆಂಬಲಿಗರು ಮತ್ತು ವಿರೋಧಿಗಳಿಬ್ಬರೂ, ಈವರೆಗೇನೂ ಆಗಿಯೇ ಇಲ್ಲವೆಂಬಂತೆ ಇಪ್ಪತ್ತು ಮುವ್ವತ್ತು ವರ್ಷಗಳ ಹಿಂದೆ ಆಡುತ್ತಿದ್ದ ಮಾತುಗಳನ್ನೇ ಈಗಲೂ ಆಡುತ್ತಿದ್ದಾರೆ. ಹಾಗೆ ನೋಡಿದರೆ, ಮಂಡಲ್ ವಿರೋಧಿಗಳಿಗೆ ಹೊಸ ಭಾಷೆ ಸಿಕ್ಕಿಬಿಟ್ಟಿದೆ. ಅವರು ಈಗ ಸಮಾನತೆಯ ಮಾತನಾಡತೊಡಗಿದ್ದಾರೆ! 'ಸಮಾನತಾ ವೇದಿಕೆ'ಯೆಂಬುದೊಂದನ್ನು ರಚಿಸಿಕೊಂಡಿದ್ದಾರೆ. ಆ ಮೂಲಕ ಅವರು ಜನಬೆಂಬಲ ಸಂಘಟಿಸಿಕೊಂಡು ಆಕ್ರಾಮಕ ನೀತಿಯನ್ನು ಅಳವಡಿಸಿಕೊಂಡಿದ್ದಾರೆ. ಈ ಮಂಡಲ್‌ವಾದಿಗಳನ್ನು ನೋಡಿ, ಅವರು ರಕ್ಷಣಾತ್ಮಕವಾಗಿ ವಾದಿಸುವ ದುಸ್ಥಿತಿಗೆ ಈಡಾಗಿದ್ದಾರೆ!

ಏಕೆ? ಏಕೆಂದರೆ ಇವರು ಜಾತಿ ಜಾತಿಗಳಾಗಿ ಒಡೆದು ಹೋಗಿ, ವಿವಿಧ ತರಂಗಾತರಂಗಗಳಲ್ಲಿ ಮಾತನಾಡತೊಡಗಿದ್ದಾರೆ. ದಲಿತರದ್ದೇ ಒಂದು ದನಿ, ಮುಸ್ಲಿಮರದ್ದೇ ಒಂದು ದನಿ, ಆದಿವಾಸಿಗಳದ್ದೇ ಒಂದು ದನಿ, ಹಿಂದುಳಿದ ವರ್ಗಗಳದ್ದೇ ಒಂದು ದನಿ! ಇದರಲ್ಲೂ ಒಡಕು! ಇದರಿಂದ ಯಾರಿಗೆ ಏನು ಲಾಭವಾಯಿತು? ಏನೂ ಇಲ್ಲ! ಮುಂಬಾಲಿಗಿನಿಂದ ಕೊಟ್ಟ ಮೀಸಲಾತಿಯನ್ನು ಈಗ ಹಿಂಬಾಲಿಗಿನಿಂದ ನಿರಾಕರಿಸಲಾಗುತ್ತಿದೆ! ಹಿಂದುಳಿದ ವರ್ಗಗಳಿಗೆ ಕೊಟ್ಟಿದೆಯೆಂದು ಹೇಳಲಾದ ಮೀಸಲಾತಿ ವ್ಯಾವಹಾರಿಕ ಮಟ್ಟದಲ್ಲಿ ಎಷ್ಟರ ಮಟ್ಟಿಗೆ ಜಾರಿಯಾಗಿ, ಯಾರ್ಯಾರಿಗೆ ಏನೇನು ಪ್ರಯೋಜನವಾಗಿದೆ ಎಂಬುದನ್ನು ಯಾರಾದರೂ ಅಧ್ಯಯನ ಮಾಡಿದರೆ ನನ್ನ ಮಾತಿನ ಸತ್ಯ ಗೊತ್ತಾದೀತು. ಏಕೆ ಹೀಗಾಯಿತು? ಏಕೆಂದರೆ ಹೊಸ ಕಾಲದ ಸವಾಲುಗಳನ್ನು ಗುರುತಿಸುವಲ್ಲಿ, ಅವನ್ನು ಅರ್ಥ ಮಾಡಿಕೊಂಡು ಎದುರಿಸುವಲ್ಲಿ, ಸಕಾಲಿಕ ನೀತಿ ರೂಪಿಸಿ ಅದಕ್ಕೆ ತಕ್ಕನಾದ ರಾಜಕಾರಣ ಮಾಡುವಲ್ಲಿ ಈ ಮಂಡಲ್‌ವಾದಿಗಳು ಸೋತಿದ್ದಾರೆ. ಭೂತಕಾಲದ ಗೂಡಿನಿಂದ ಹೊರಬರಲು ಅವರು ನಿರಾಕರಿಸುತ್ತಿದ್ದಾರೆ. ಇವರು ಇನ್ನೂ ಬರೀ ಮಂಡಲ್ ವಾದಿಗಳಾಗಿರುವುದೇ ಇದಕ್ಕೆ ಮುಖ್ಯ ಕಾರಣವಾಗಿದೆ. ಹಾಗಾಗಿ ನಾವು, ಈ ಜಾತಿ ವಿರೋಧಿ ಮತ್ತು ಅಂತರ್ಜಾತಿ ವಿವಾಹಿತರ ಸಮ್ಮೇಳನದಲ್ಲಿ ಭಾಗವಹಿಸಿರುವವರು, ಈ ಸಾಮಾಜಿಕ ನ್ಯಾಯದ ನೀತಿ ಮತ್ತು ರಾಜಕಾರಣವು ದೀರ್ಘಕಾಲಿಕ ದೃಷ್ಟಿ ಹೊಂದಿ ಬೆಳೆಯಲು, ಮುಂದಿನ ಫಲ ನೀಡಲು ಏನು ಮಾಡಬೇಕು ಎಂದು ಯೋಚಿಸಬೇಕಾಗಿದೆ. ಇದಕ್ಕಾಗಿ ಈ ಆಂದೋಲನ ಇಟ್ಟ ತಪ್ಪು ಹೆಜ್ಜೆಗಳನ್ನು ಮೊದಲು ಗುರುತಿಸಬೇಕಾಗಿದೆ.

ಸಾಮಾಜಿಕ ನ್ಯಾಯ ಆಂದೋಲನ ಮಂಡಲ್‌ವಾದವಾಗಿ ಸಂಕುಚಿತಗೊಂಡು ಕುಬ್ಜಗೊಳ್ಳಲು ನನ್ನ ಪ್ರಕಾರ ಐದು ಮೋಹಗಳು ಕಾರಣ. ಒಂದು ರಾಜ್ಯ ಮೋಹ.

ರಾಜ್ಯಾಧಿಕಾರದ ಬಗೆಗಿನ ವ್ಯಸನವೆಂದೂ ಇದನ್ನು ಕರೆಯಬಹುದು. ನಿಜ, ಸಾಮಾಜಿಕ ನ್ಯಾಯಕ್ಕೆ ಪ್ರಭುತ್ವದ ಬೆಂಬಲ ಬೇಕು. ಆದರೆ ರಾಜ್ಯ ಪ್ರಭುತ್ವವೆಂಬುದು ಜನ ಪ್ರಭುತ್ವದ ಒಂದು ಭಾಗ ಮಾತ್ರ; ಸರ್ಕಾರದೊಡನೆಯ ಕೊಡು– ಕೊಳೆಯ ವ್ಯವಹಾರದಾಚೆಗೂ, ತಾನು ಪರಿವರ್ತನೆಯ ರಾಜಕಾರಣ ಮಾಡಬೇಕಾದ ವಿಶಾಲ ವ್ಯಾಪ್ತಿಯ ಪ್ರಭುತ್ವವಿದೆ ಎಂಬುದನ್ನು ಅದು ಮರೆಯಿತು. ಎರಡನೆಯದು ಜಾತಿ ಮೋಹ. ಇದರಿಂದಾಗಿ, ನಾವು ಸಾಮಾಜಿಕ ನ್ಯಾಯದ ಮಾತನಾಡುತ್ತಲೇ, ಜಾತಿವಾದಿ ರಾಜಕಾರಣ ಮಾಡುವ ಪಕ್ಷಗಳ ಬೆನ್ನ ಹಿಂದೆ ಹೋದೆವು. ನಾವಿಂದು ಈ ಸಮ್ಮೇಳನವನ್ನು ಲೋಹಿಯಾ ಹೆಸರಿನ ಸ್ಫೂರ್ತಿಯೊಂದಿಗೆ ಆಯೋಜಿಸಿದ್ದೇವೆ. ಆದ ಕಾರಣ, ಲೋಹಿಯಾ ರಾಜಕೀಯ ಪರಿವರ್ತನೆಯ ಮಾತನಾಡುವಾಗ ಎಂದೂ ಜಾತಿಯೊಂದರ ಬಗ್ಗೆಯೇ ಮಾತನಾಡತ್ತಿರಲಿಲ್ಲ ಎಂಬುದನ್ನು ನಾವು ನೆನಪಿಟ್ಟುಕೊಳ್ಳಬೇಕು. ಅವರು ಯಾವಾಗಲೂ ಒಟ್ಟಿಗೇ ಜಾತಿ, ವರ್ಗ ಮತ್ತು ಲಿಂಗ ವಿಷಮತೆ ಅಥವಾ ತಾರತಮ್ಯಗಳ ಬಗ್ಗೆ ಮಾತನಾಡುತ್ತಿದ್ದರು. ಅವೆಲ್ಲವೂ ಜೊತೆ ಜೊತೆಯಲ್ಲೇ ಕ್ರಿಯಾಶೀಲವಾಗಿ ಸಾಮಾಜಿಕ ವಿಷಮತೆಗೆ ಕಾರಣವಾಗಿದೆ ಎಂಬುದು ಅವರ ವಾದವಾಗಿತ್ತು. ಆದರೆ ಲೋಹಿಯಾ ಅನುಯಾಯಿಗಳು, ಸಾಮಾಜಿಕ ನ್ಯಾಯದ ರಾಜಕೀಯ ನಾಯಕರು ಅದನ್ನು ಜಾತಿಯೊಂದಕ್ಕೇ ಸೀಮಿತಗೊಳಿಸಿದರು. ಜಾತಿಯೊಳಗಿನ ಮತ್ತು ಹೊರಗಿನ ಲಿಂಗ ಮತ್ತು ವರ್ಗ ಅಸಮಾನತೆಗಳನ್ನು ನಿರ್ಲಕ್ಷಿಸಿದರು.

ಮೂರನೆಯ ಮೋಹ ಮೀಸಲಾತಿಯ ಮೋಹ. ನಾನು ಮೊದಲೇ ಸ್ಪಷ್ಟ ಪಡಿಸಿಬಿಡುವೆ: ನಾನು ಜಾತಿ ಆಧಾರಿತ– ಅದರಲ್ಲೂ ವಿಶೇಷವಾಗಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಸಂಬಂಧಪಟ್ಟಂತೆ– ಮೀಸಲಾತಿಯ ಸಮರ್ಥಕ. ಅದು ಅನಿವಾರ್ಯ; ನಮ್ಮ ಸಮಾಜದಲ್ಲಿ ಅದು ಈವರೆಗೆ ರಚನಾತ್ಮಕ ಪಾತ್ರ ವಹಿಸಿದೆ, ಮುಂದೆಯೂ ಅದನ್ನು ಮುಂದುವರೆಸಬೇಕು ಎಂದು ಹೇಳುವವನು ನಾನು. ಆದರೆ ಇದೊಂದೇ ಸಾಮಾಜಿಕ ನ್ಯಾಯದ ಸಾಧನ ಎಂದು ನಂಬಲು, ನಂಬಿಸಲು ನಾನು ಬಯಸುವುದಿಲ್ಲ. ಅದು ಮತ್ತೆ ಸಾಮಾಜಿಕ ನ್ಯಾಯ ಕಲ್ಪನೆಯನ್ನು ಕುಬ್ಜಗೊಳಿಸಿ ನಾಶ ಮಾಡುವಂತಹ ರಾಜಕಾರಣವಾಗುತ್ತದೆ. ನಾಲ್ಕನೆಯ ಮೋಹ, ಪ್ರಮಾಣಾನುಸಾರ ಪ್ರಾತಿನಿಧ್ಯದ ಮೋಹ. ಅಂದರೆ ಜನಸಂಖ್ಯಾ ಪ್ರಮಾಣಾನುಸಾರ ಅಧಿಕಾರ ಮತ್ತು ಸೌಲಭ್ಯಗಳ ವಿತರಣೆ. ಉದಾಹರಣೆಗೆ, ಹಿಂದುಳಿದ ವರ್ಗದವರು ಜನಸಂಖ್ಯೆಯ ಶೇ.೫೨ ಇದ್ದಾರೆ; ಹಾಗಾಗಿ ಅವರಿಗೆ ಶೇ.೫೨ ಮೀಸಲಾತಿ ಕೊಡಬೇಕು ಎನ್ನುವುದು! ಮುಖ ನೋಡಿ ಮಣೆ ಹಾಕುವ ಇಂತಹ ವಿತರಣೆಯನ್ನು ಹಿಂದಿಯಲ್ಲಿ 'ಕೋತಿ ನ್ಯಾಯ' ಎಂದು ಕರೆಯಲಾಗುತ್ತದೆ. ಸದಾ ಪ್ರಮಾಣದ ಉಲ್ಲಂಘನೆಯಾಗುತ್ತಿರುವ ಸಮಾಜದಲ್ಲಿ ಇದನ್ನು ಸಾಮಾಜಿಕ ನ್ಯಾಯ ಎಂದು ಯಾವ ಅರ್ಥದಲ್ಲೂ, ಸಂದರ್ಭದಲ್ಲೂ ಕರೆಯಲಾಗದು.

ಐದನೆಯ ಮೋಹ ಎಂದರೆ ಸಾಮಾಜಿಕ ನ್ಯಾಯದ ವ್ಯಾಪ್ತಿಯನ್ನು ಸದಾ ವಿಸ್ತಾರಗೊಳಿಸುತ್ತಾ ಹೋಗುವ ಮೋಹ. ಪರಿಶಿಷ್ಟ ಜಾತಿಗಳ ಜೊತೆಗೆ ಪರಿಶಿಷ್ಟ ಪಂಗಡಗಳು, ನಂತರ ಇತರ ಹಿಂದುಳಿದ ಜಾತಿಗಳನ್ನು ಸೇರಿಸಿದ್ದಾಯಿತು. ಅನಂತರ ಆರ್ಥಿಕ ದುರ್ಬಲರು, ವಿಕಲ ಚೇತನರು ಹೀಗೆ ಸೇರಿಸುತ್ತಲೇ ಹೋಗಲು ಯತ್ನಿಸುವ ವ್ಯಸನ. ಸೇರಿಸು, ಸೇರಿಸು; ಯಾರನ್ನೂ ಹೊರದೂಡುವ ಬಾಬತ್ತೇ ಇಲ್ಲ! ಈ ಸಂಬಂಧವಾಗಿ ಕರ್ನಾಟಕದಲ್ಲಿ ನಡೆದಿರುವ ಬೆಳವಣಿಗೆಗಳ ಬಗ್ಗೆ ನನಗೆ ಅಷ್ಟು ಮಾಹಿತಿ ಇಲ್ಲವಾದರೂ, ಸಾಮಾಜಿಕ ನ್ಯಾಯ ಪರಿಕಲ್ಪನೆಗೇ ಅನ್ಯಾಯ ಮಾಡುವಂತಹ ಹಲವು ಜಾತಿ ವರ್ಗಗಳು ಮೀಸಲಾತಿ ಪಟ್ಟಿಗೆ ಸೇರಿವೆ ಎಂದು ಕೇಳಿದ್ದೇನೆ. ಇದು ಕೇವಲ ಕರ್ನಾಟಕದ ಕಥೆಯಲ್ಲ. ಎಲ್ಲ ಕಡೆ ಹೀಗಾಗುತ್ತಿದೆ. ಉತ್ತರದ ಜಾಟರ ನಂತರ ಮಹಾರಾಷ್ಟ್ರದಲ್ಲಿ ಮರಾಠರನ್ನು ಸಾಮಾಜಿಕ ನ್ಯಾಯ ವ್ಯಾಪ್ತಿಗೆ ಸೇರಿಸುವ ಪ್ರಯತ್ನ ನಡೆದಿದೆ. ಇದು ಸಾಮಾಜಿಕ ನ್ಯಾಯದ ಕಲ್ಪನೆಯ ವಿಶ್ವಾಸಾರ್ಹತೆಯನ್ನೇ ನಾಶ ಮಾಡುತ್ತಿದೆ ಎಂಬ ಪರಿವೆಯೇ ಯಾರಿಗೂ ಇದ್ದಂತಿಲ್ಲ.

ಇಂತಹ ಪರಿಸ್ಥಿತಿಯಲ್ಲಿ ನಾವು ಏನು ಮಾಡಬಹುದು? ಈ ಸಂಬಂಧವಾಗಿ ನಾನು ನಿಮ್ಮ ಮುಂದೆ ನಾಲ್ಕು ಸೂತ್ರ ರೂಪದ ಕಾರ್ಯಕ್ರಮವನ್ನು ಮುಂದಿಡಬಯಸುತ್ತೇನೆ. ಇವು ನಿಮ್ಮೆಲ್ಲರಿಗೂ ಸಮ್ಮತವಾಗದಿರಬಹುದು. ನೀವು ಈ ಬಗ್ಗೆ ಬಲವಾದ ಭಿನ್ನಾಭಿಪ್ರಾಯಗಳನ್ನೇ ವ್ಯಕ್ತ ಪಡಿಸಬಹುದು. ಇನ್ನು ಕೆಲವರು ನನ್ನನ್ನು ಒಪ್ಪಲೂಬಹುದು. ನಾನು ನಿಜವಾದ ಲೋಹಿಯಾ ಪರಂಪರೆಯ ಅನುಯಾಯಿಯಾಗಿ ನಿಮ್ಮ ಮುಂದೆ ವಿವಾದಾಸ್ಪದವೇ ಅನ್ನಬಹುದಾದ ಪ್ರಶ್ನಾರ್ಹ, ಚರ್ಚಾರ್ಹ ವಿಷಯಗಳನ್ನು ಮಂಡಿಸಬಯಸುವೆ.

ಮೊದಲನೆಯದಾಗಿ ಈ ಸಾಮಾಜಿಕ ನ್ಯಾಯದ ಮೂಲ ಸಿದ್ಧಾಂತವೇನು ಎಂಬುದರ ಬಗ್ಗೆ ಪುನರಾಲೋಚನೆ ಮಾಡಬೇಕಿದೆ. ಈ ಸಂಬಂದ ಈ ಮೊದಲು ನಾನು ಪ್ರಸ್ತಾಪಿಸಿದ ಜನಸಂಖ್ಯಾ ಪ್ರಮಾಣಾನುಸಾರ ರಾಜಕಾರಣವನ್ನು ತಿರಸ್ಕರಿಸಬೇಕಾಗುತ್ತದೆ. ನಮ್ಮ ಸಮಾಜದಲ್ಲಿ ಅತಿ ಕಡಿಮೆ ಪ್ರಮಾಣದ ಜನ ಸಮುದಾಯ ಬಹು ದೊಡ್ಡ ಪ್ರಮಾಣದ ಆಸ್ತಿ– ಅನುಕೂಲಗಳನ್ನು ಹೊಂದಿದ್ದಾರೆ. ಇದನ್ನು ಕಂಡು ಪ್ರಮಾಣಾನುಸಾರ ವಿತರಣೆಯ ಮೋಹ ನಮ್ಮನ್ನು ಆವರಿಸುವುದು ಸಹಜ. ಆದರೆ ಇದನ್ನು ಆಳದಲ್ಲಿ ನೋಡಿದಾಗ ಯಥಾಸ್ಥಿತಿವಾದಿ ನಿಲುವು ಎಂಬುದು ನಮ್ಮ ಅರಿವಿಗೆ ಬಂದೀತು. ಬದಲಾವಣೆಯ ಹಂಬಲವನ್ನು ಕಳೆದುಕೊಂಡ ಸಮಾಜದಿಂದ ಮಾತ್ರ ಬರಬಲ್ಲ ಇಂತಹ ಬೇಡಿಕೆಯ ಆಧಾರದ ಮೇಲೆ ಯಾವ ಪ್ರಗತಿಪರ ರಾಜಕಾರಣವನ್ನೂ ಮಾಡಲಾಗುವುದಿಲ್ಲ. ತನ್ನಲ್ಲಿನ ಮೌಲಿಕ ಸರಕನ್ನು ತತ್ಕಾಲೀನ ಸಂದರ್ಭದ ಒತ್ತಡದಲ್ಲಿ ಹೀಗೆ ಅವೈಚಾರಿಕವಾಗಿ ಹಂಚುವ ಯಾವ ಸಮಾಜವೂ ಉದ್ಧಾರವಾಗಲಾರದು. ಏಕೆಂದರೆ ಇಂತಹ ರಾಜಕಾರಣ ಕೇವಲ ಪ್ರಾತಿನಿಧ್ಯದ ಪ್ರಶ್ನೆಯನ್ನು ಬಗೆಹರಿಸಬಹುದೇ ಹೊರತು ಗುಣಾತ್ಮಕ ಸಾಮಾಜಿಕ

ಬದಲಾವಣೆಯ ಪ್ರಶ್ನೆಯನ್ನು ಬಗೆಹರಿಸಲಾರದು. ದಲಿತರಿಗೆ ಪ್ರಾತಿನಿಧ್ಯ, ಹಿಂದುಳಿದವರಿಗೆ ಪ್ರಾತಿನಿಧ್ಯ, ಮುಸ್ಲಿಮರಿಗೆ ಪ್ರಾತಿನಿಧ್ಯ ಇತ್ಯಾದಿಗಳಿಂದ ನಮ್ಮ ರಾಜಕೀಯದಲ್ಲಿ ಏನು ಗುಣಾತ್ಮಕ ಬದಲಾವಣೆ ಆಗಿದೆ?

ಉದಾಹರಣೆಗೆ ಉತ್ತರ ಪ್ರದೇಶದಲ್ಲಿ ದಲಿತ ಮಹಿಳೆ ಮಾಯಾವತಿ ಮುಖ್ಯ ಮಂತ್ರಿಯಾಗಿದ್ದಾರೆ. ಅಲ್ಲಿ ಏನಾಗಿದೆ? ದಲಿತ ಹೆಣ್ಣು ಮಗಳೊಬ್ಬಳು ಅಷ್ಟು ದೊಡ್ಡ ರಾಜ್ಯದ ಮುಖ್ಯ ಮಂತ್ರಿಯಾಗುವುದು ಸಾಮಾಜಿಕ ನ್ಯಾಯದ ಒಂದು ದೊಡ್ಡ ಸಾಧನೆಯೇ. ಆದರೆ ಆ ಸಾಮಾಜಿಕ ನ್ಯಾಯವೆಂಬುದು ಅಲ್ಲಿಗೇ ನಿಂತು, ಈ ಪ್ರಾತಿನಿಧ್ಯವೆಂಬುದು ಕೇವಲ ಚಹರೆಗಳನ್ನು ಅಥವಾ ಮುಖವಾಡಗಳನ್ನು ಮಾತ್ರ ಸೃಷ್ಟಿಸುತ್ತಾ ಅದು ಪ್ರತಿಪಾದಿಸುವ ಜೀವನ ಮೌಲ್ಯಗಳನ್ನು ಸೃಷ್ಟಿಸದೇ ಹೋಗುವಂತಾದರೆ ಏನು ಪ್ರಯೋಜನ? ಇದನ್ನೇ ನಾನು ಈ ಹಿಂದೆ ಹೇಳಿದ ಸಾಮಾಜಿಕ ನ್ಯಾಯ ರಾಜಕಾರಣದ ಸ್ಥಗಿತತೆಯ ಅವಸ್ಥೆ ಎಂದು ಗುರುತಿಸಿದ್ದು. ಈ ಅವಸ್ಥೆ ಹೊಸ ಪಟ್ಟಭದ್ರ ಹಿತಾಸಕ್ತಿಗಳನ್ನು ಮಾತ್ರ ಹುಟ್ಟುಹಾಕಬಲ್ಲುದು. ಈವರೆಗಿನ ಸಾಮಾಜಿಕ ನ್ಯಾಯ ರಾಜಕಾರಣ ಲಲ್ಲೂ ಪ್ರಸಾದ್ ಯಾದವ್, ಮುಲಾಯಂ ಸಿಂಗ್ ಯಾದವ್, ರಾಮ್ ವಿಲಾಸ ಪಾಸ್ವಾನ್, ಮಾಯಾವತಿ, ಕರುಣಾನಿಧಿ ಇತ್ಯಾದಿ ಮುಖವಾಡಗಳನ್ನು ಸೃಷ್ಟಿಸುವಲ್ಲಿ ಕೊನೆಗೊಂಡಿದೆ. ಇದು ಸಾಮಾಜಿಕ ನ್ಯಾಯದ ದುರಂತ. ಹಾಗಾಗಿ ನಮಗೆ ಬೇಕಾದದ್ದು, ಸಾಮಾಜಿಕ ನ್ಯಾಯ ಸಿದ್ಧಾಂತ ಮೂಲತಃ ಹೇಳುವ ಮತ್ತು ಅದರ ಕೇಂದ್ರ ಕಾಳಜಿಯಾದ ಸಮಾನ ಅವಕಾಶಗಳ ನೀತಿ ಮತ್ತು ರಾಜಕಾರಣ. ಇದನ್ನು ಬಳಸಿಕೊಂಡು ವ್ಯಕ್ತಿ ತನ್ನ ಕಾರ್ಯಕ್ಷಮತೆ, ಶ್ರದ್ಧೆ ಮತ್ತು ಪ್ರಯತ್ನಗಳ ಮೂಲಕ ಬೆಳೆಯಬೇಕು. ಅದು ಮಾತ್ರ ಅಸಮಾನತೆಯನ್ನು ತೊಡೆಯುವ ನಿಜವಾದ ಸಮಾಜವಾದಿ ರಾಜಕಾರಣ ಎನಿಸಿಕೊಳ್ಳುತ್ತದೆ.

ಎರಡನೆಯದು, ಸಾಮಾಜಿಕ ನ್ಯಾಯದ ತತ್ವವನ್ನು ಸರ್ಕಾರಿ ವಲಯದಲ್ಲಿ ಅದಿನ್ನೂ ಜಾರಿಯಾಗದ ಕ್ಷೇತ್ರಗಳಿಗೆ ವಿಸ್ತರಿಸುವುದು. ಉದಾಹರಣೆಗೆ ನ್ಯಾಯಾಂಗ ಮತ್ತು ಸೇನೆ. ಇಲ್ಲಿ ಸಾಮಾಜಿಕ ನ್ಯಾಯದ ತತ್ವವನ್ನು ಏಕೆ ಅನ್ವಯಿಸಲಾಗಿಲ್ಲವೋ ತಿಳಿಯದಾಗಿದೆ. ನ್ಯಾಯಾಂಗದ ಸಾಮಾಜಿಕ ಸ್ವರೂಪ ಕುರಿತ ಅಂಕಿ ಅಂಶಗಳನ್ನು ಗುಟ್ಟಾಗಿ ಇಡುವ ಪ್ರಯತ್ನ ಮಾಡಲಾಗುತ್ತಿದೆ. ಕೂಡಲೇ ಈ ಅಂಕಿ ಅಂಶಗಳನ್ನು ಬಹಿರಂಗಗೊಳಿಸಿ, ಈ ಕ್ಷೇತ್ರಗಳಲ್ಲಿ ಕೂಡಾ ಅಗತ್ಯ ಕಂಡರೆ ಸಾಮಾಜಿಕ ನ್ಯಾಯದ ತತ್ವ ಅಳವಡಿಸುವ ಬಗ್ಗೆ ಚರ್ಚೆಯನ್ನಾದರೂ ಶುರುಮಾಡಬೇಕಿದೆ. ಇನ್ನು, ಸಾಮಾಜಿಕ ನ್ಯಾಯದ ನೀತಿ ಮತ್ತು ರಾಜಕಾರಣವನ್ನು ಸರ್ಕಾರಿ ವಲಯದಾಚೆಗೆ ವಿಸ್ತರಿಸುವ ಸಾಧ್ಯತೆಗಳನ್ನೂ ಪರಿಶೀಲಿಸಬೇಕು. ಕಳೆದ ಇಪ್ಪತ್ತು ವರ್ಷಗಳಲ್ಲಿ ಬಹಳಷ್ಟು ಒಳ್ಳೆಯ ಅವಕಾಶಗಳು ಸೃಷ್ಟಿಯಾಗಿರುವುದು ಖಾಸಗಿ ವಲಯದಲ್ಲಿ. ಅಂದ ಮಾತ್ರಕ್ಕೆ ನಾನು ಖಾಸಗಿ ವಲಯದಲ್ಲಿ ಸ್ಥಾನ ಮೀಸಲಾತಿ ಜಾರಿಗೆ ಬರಬೇಕೆಂದುದು ಹೇಳುತ್ತಿಲ್ಲ. ಬದಲಿಗೆ, ಸಾಮಾಜಿಕ ನ್ಯಾಯವು ಇಲ್ಲಿ ಮೀಸಲಾತಿ ಕಲ್ಪನೆಯಾಚೆಗೂ ಇರುವ

ಸಾಧನಗಳನ್ನು ಕಂಡುಕೊಳ್ಳುವಲ್ಲಿ ತನ್ನನ್ನು ತಾನು ಗಂಭೀರವಾಗಿ ತೊಡಗಿಸಿಕೊಳ್ಳಬೇಕು ಎಂದು ಹೇಳಬಯಸುತ್ತೇನೆ.

ಇದನ್ನು ಸ್ಪಷ್ಟಪಡಿಸಲು, ನಿಮಗೆ ಬಂಡವಾಳಶಾಹಿ ಆರ್ಥಿಕತೆ ಎಂದು ಹೇಳಲಾಗುವ ಅಮೆರಿಕಾದ ಉದಾಹರಣೆ ಕೊಡುತ್ತೇನೆ. ಆ ದೇಶದಲ್ಲಿ ಎಲ್ಲ ಕಂಪನಿಗಳೂ ಪ್ರತಿ ವರ್ಷದ ಕೊನೆಯಲ್ಲಿ ತನ್ನ ಸಾಮಾಜಿಕ ಸ್ವರೂಪದ ಮಾಹಿತಿ ನೀಡಬೇಕು. ಅಂದರೆ ತನ್ನ ಕಂಪನಿಯಲ್ಲೆ ಎಷ್ಟೆಷ್ಟು ಜನ ಬಿಳಿಯರು, ಕರಿಯರು ಮತ್ತು ಇತರರು ಇದ್ದಾರೆ ಎಂಬುದರ ಅಂಕಿ ಅಂಶಗಳನ್ನು ಘೋಷಿಸಬೇಕು. ಭಾರತದಲ್ಲೂ ಹೀಗೆ ಮಾಡಬಹುದು. ನಮ್ಮ ಖಾಸಗಿ ಕಂಪನಿಗಳು ಇಲ್ಲಿನ ನೆಲ– ಜಲ– ವಿವಿಧ ರೀತಿಯ ತೆರಿಗೆ ಇತ್ಯಾದಿ ಅನೇಕ ವಿಷಯಗಳಲ್ಲಿ ಸರ್ಕಾರಗಳಿಂದ ರಿಯಾಯ್ತಿ ಮತ್ತು ಸಹಾಯ ಪಡೆಯುತ್ತಿವೆ. ಇದಕ್ಕೆ ತಕ್ಕನಾಗಿ ಅವು ತಮ್ಮ ಸಾಮಾಜಿಕ ಜವಾಬ್ದಾರಿಯನ್ನು ಉತ್ತಮ ರೀತಿಯಲ್ಲಿ ನಿರ್ವಹಿಸುತ್ತಿವೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವ ಎಲ್ಲ ಹಕ್ಕೂ ಸರ್ಕಾರಕ್ಕಿದೆ. ಅದನ್ನು ಬಳಸಿಕೊಂಡು ಸಮಾಜಿಕ ನ್ಯಾಯದ ಹೊಸ ರಾಜಕಾರಣ ಮಾಡಬಹುದು.

ಇನ್ನು ಸಾಮಾಜಿಕ ನೀತಿಯ ಗುರಿಗಾರಿಕೆ ಬಗ್ಗೆ ಹಲವು ಸಂದೇಹಗಳಿವೆ. ಉದಾಹರಣೆಗೆ, ಮೀಸಲಾತಿ ನಿಜವಾದ ಅರ್ಹರಿಗಿಂತ ಹೆಚ್ಚಾಗಿ ಅನರ್ಹರಿಗೆ ಅವಕಾಶ ಮಾಡಿಕೊಡಲಾರಂಭಿಸಿದೆ ಎಂಬುದು. ಇದು ನಮ್ಮನ್ನು ಕೆನೆ ಪದರ ಕುರಿತ ಚರ್ಚೆಯತ್ತ ಒಯ್ಯುತ್ತದೆ. ಕೆನೆ ಪದರ ಎಂಬ ಶಬ್ದದ ಸಮರ್ಪಕತೆ ಬಗ್ಗೆ ನನ್ನ ಸಂದೇಹಗಳಿವೆಯಾದರೂ, ಕೆನೆಪದರ ನೀತಿಯ ಜಾರಿಯ ಅವಶ್ಯಕತೆ ಬಗ್ಗೆ ನನಗಾವ ಸಂದೇಹವೂ ಇಲ್ಲ. ಆದರೆ ಇದರಲ್ಲಿ ಒಂದು ತಿದ್ದುಪಡಿ ಸೂಚಿಸಬಯಸುತ್ತೇನೆ. ಅದೆಂದರೆ ಕೆನೆ ಪದರದ ಅಭ್ಯರ್ಥಿಗಳನ್ನು ಮೀಸಲಾತಿಯಿಂದ ಸಂಪೂರ್ಣ ಹೊರಗಿಡುವುದು ಬೇಡ. ಅವರಿಗೆ ಕೊನೆಯ ಫಲನಾಭವದ– ಅಂದರೆ ಕೆನೆ ಪದರ ವ್ಯಾಪ್ತಿಗೆ ಒಳಪಡದ ಅರ್ಹ ಅಭ್ಯರ್ಥಿ ದೊರೆಯದಿದ್ದರೆ ಇವರನ್ನು ಪರಿಗಣಿಸುವ– ಸೌಲಭ್ಯ ನೀಡಬಹುದಾಗಿದೆ.

ಹಾಗೇ ಕೋಟಾದೊಳಗಿನ'ಕೋಟಾದ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಕೋಟಾದಲ್ಲಿ, ವಿಶ್ವಾಸಾರ್ಹ ಅಂಕಿ ಅಂಶಗಳ ಸಾಕ್ಷ್ಯ ದೊರಕಿದಲ್ಲಿ ಒಳ ಕೋಟಾವನ್ನು ಜಾರಿಗೆ ತರಬಹುದಾಗಿದೆ. ಆದರೆ ಹಿಂದುಳಿದ ವರ್ಗಗಳ ಕೋಟಾದಲ್ಲಿ ಅನ್ಯಾಯ ಎದ್ದು ಕಾಣುತ್ತಿದೆಯಾದ್ದರಿಂದ, ಇದರ ಕೋಟಾದಲ್ಲಿ ಬಹಳ ಹಿಂದುಳಿದ ಜಾತಿಗಳ ಕೋಟಾವೊಂದನ್ನು ಸೃಷ್ಟಿಸಲೇ ಬೇಕಾಗಿದೆ. ನಮ್ಮಲ್ಲಿ ನನ್ನದೇ ಜಾತಿಯಾದ ಯಾದವ್ ಅಥವಾ ಕುರ್ಮಿ ಇತ್ಯಾದಿ ಜಾತಿಗಳು ಮತ್ತು ನಿಮ್ಮಲ್ಲಿ ಲಿಂಗಾಯ್ತ, ಒಕ್ಕಲಿಗ ಇತ್ಯಾದಿ ಜಾತಿಗಳು ಈ ಮೀಸಲಾತಿಯ ಬಹುಪಾಲು ಲಾಭವನ್ನು ಪಡೆಯುತ್ತಿವೆ ಹಾಗಾಗಿ, ಇತರೆ ಹೆಚ್ಚು ಅರ್ಹ ಹಿಂದುಳಿದ ಜಾತಿಗಳನ್ನು ಈ ಅನ್ಯಾಯದಿಂದ ಪಾರು ಮಾಡಲು ತುರ್ತು

ಮಾರ್ಗಗಳನ್ನು ಕಂಡು ಹಿಡಿಯಬೇಕಿದೆ. ಇದಕ್ಕಾಗಿ ಸಮೀಕ್ಷೆ, ಅಧ್ಯಯನಗಳಿಗಾಗಿ ಆಯೋಗಗಳ ರಚನೆಯಾಗಬೇಕಿದೆ.

ಮುಖ್ಯವಾಗಿ ನಾನು ಹೇಳುವುದೇನೆಂದರೆ, ಸಾಮಾಜಿಕ ನ್ಯಾಯ ಎಂದರೆ ಮೀಸಲಾತಿ ಎಂಬ ವ್ಯಸನದಿಂದ ನಾವೂದಷ್ಟು ಬೇಗ ಹೊರಬರಬೇಕಿದೆ. ಮಹಿಳೆಯರಿಗೆ ಶಾಸನ ಸಭೆಗಳಲ್ಲಿ ಸೂಕ್ತ ಪ್ರಾತಿನಿಧ್ಯವಿಲ್ಲವೆಂದ ಕೂಡಲೇ ಮೀಸಲಾತಿಯ ಮಾತನಾಡತೊಡಗುತ್ತೇವೆ. ಖಾಸಗಿ ವಲಯದಲ್ಲಿ ಸಾಮಾಜಿಕ ನ್ಯಾಯವಿಲ್ಲದಾಗಿದೆ ಎಂದ ಕೂಡಲೇ ಮೀಸಲಾತಿಯ ಕೂಗು ಹಾಕುತ್ತೇವೆ. ಇದು ಸರಿಯಲ್ಲ. ಸಾಮಾಜಿಕ ನ್ಯಾಯದ ಇತರ ರೂಪ, ಸಾಧನ ಮತ್ತು ಮಾರ್ಗಗಳನ್ನು ನಾವು ಅನ್ವೇಷಿಸಬೇಕಿದೆ. ಅದರ ಪರಿಕಲ್ಪನೆಯನ್ನು ಬದಲಾದ ಕಾಲ ಸಂದರ್ಭಕ್ಕೆ ತಕ್ಕಂತೆ ವಿಸ್ತರಿಸಬೇಕಿದೆ, ಬದಲಿಸಬೇಕಿದೆ. ಆ ಮೂಲಕ ಮೀಸಲಾತಿ ನೀತಿ ಮತ್ತು ಮಾರ್ಗಗಳನ್ನು ಅವುಗಳ ಸಂಕುಚಿತತೆ ಮತ್ತು ದೌರ್ಬಲ್ಯಗಳಿಂದ ಪಾರು ಮಾಡಬೇಕಿದೆ. ಉದಾಹರಣೆಗೆ ನಾನು ಮತ್ತು ಸ್ನೇಹಿತ ಸತೀಶ್ ದೇಶಪಾಂಡೆ ಸೇರಿ ಬಹು ಆಯಾಮಗಳ ಅನ್ಯಾಯ ಸೂಚ್ಯಂಕವೊಂದನ್ನು ರೂಪಿಸುವ ಕೆಲಸ ಮಾಡುತ್ತಿದ್ದೇವೆ. ಇದರಲ್ಲಿ ಜಾತಿ ಮಾತ್ರವಲ್ಲದೆ, ವರ್ಗ, ಲಿಂಗ, ಹಳ್ಳಿ, ಪಟ್ಟಣ, ಶಿಕ್ಷಣ ಮಾಧ್ಯಮ, ವೃತ್ತಿ, ಆದಾಯ, ಈವರೆಗಿನ ಮೀಸಲಾತಿ ಲಾಭ, ಇತ್ಯಾದಿಗಳನ್ನು ಅಂತರ್ಗತಗೊಳಿಸುವ ಪ್ರಯತ್ನ ಮಾಡುತ್ತಿದ್ದೇವೆ.

ಇದಕ್ಕೆ ಪೂರಕವಾಗಿ ಸರ್ಕಾರ ಕೂಡ ಸಾಮಾಜಿಕ ನ್ಯಾಯ ವಿತರಣೆಯ ಮೇಲ್ವಿಚಾರಣೆಗೆ ರಚಿಸಲಾಗಿರುವ ಸಂಸ್ಥೆಗಳ ಸ್ವರೂಪವನ್ನೂ ಬದಲಿಸಬೇಕಿದೆ. ಉದಾಹರಣೆಗೆ ನಾವು ಪರಿಶಿಷ್ಟ ಜಾತಿ ಪಂಗಡಗಳ ಆಯೋಗ, ಹಿಂದುಳಿದ ವರ್ಗಗಳ ಆಯೋಗ ಇವುಗಳಿಗೆ ಬದಲಾಗಿ ಸಮಾನ ಅವಕಾಶಗಳ ಆಯೋಗ ರಚಿಸುವಂತೆ ಒತ್ತಾಯಿಸಿದ್ದೇವೆ. ಇದೆಲ್ಲವೂ ಸೇರಿ ಸಾಮಾಜಿಕ ನ್ಯಾಯವೆಂದರೆ ಸಮತೆಯ ಸಾಧನೆ ಎಂಬ ಸರ್ವಸಮ್ಮತ ಪರಿಕಲ್ಪನೆಗೆ ದಾರಿ ಮಾಡಿಕೊಡಬಲ್ಲುದು. ಈ ಬಗ್ಗೆ ಚರ್ಚೆ ಆಗಲಿ. ಭಿನ್ನಾಭಿಪ್ರಾಯಗಳು ಹೊರ ಹೊಮ್ಮಲಿ. ಆ ಮೂಲಕ ಸಾಮಾಜಿಕ ನ್ಯಾಯದ ಪ್ರತಿಪಾದಕರು ಯೋಚನೆ ಮಾಡಲಾದರೂ ಸಾಧ್ಯವಾಗಲಿ. ಸಾಮಾಜಿಕ ನ್ಯಾಯದ ಸದ್ಯದ ದೊಡ್ಡ ತೊಂದರೆ ಎಂದರೆ, ಇಲ್ಲಿ ಆಲೋಚನೆ ಎಂಬುದೇ ನಿಂತು ಹೋಗಿದೆ. ಇದು ಸಮತೆಯ ಹೊಸ ಕಲ್ಪನೆ ನೀಡಿದ ಲೋಹಿಯಾ ಪರಂಪರೆಗೆ ಮಾಡುವ ಅನ್ಯಾಯ ಮತ್ತು ಅವಮಾನ. ನಮ್ಮಲ್ಲಿ ಕೆಲವರು ಲೋಹಿಯಾ ಅವರೇ ನಮಗಾಗಿ ನಲವತ್ತು ವರ್ಷಗಳ ಹಿಂದೆಯೇ ಆಲೋಚನೆ ಮಾಡಿ ಹೋಗಿದ್ದಾರೆ ಎಂದು ನಂಬಿ ಆಲೋಚನೆ ಮಾಡುವುದನ್ನೇ ನಿಲ್ಲಿಸಿ ಬಿಟ್ಟಿದ್ದಾರೆ!

ಇಂತಹ ಸಂಕಲ್ಪ ಇಲ್ಲಿ, ಈ ಜಾತಿ ವಿರೋಧಿ ಹಾಗೂ ಅಂತರ್ಜಾತಿ ವಿವಾಹಿತರ ಸಮ್ಮೇಳನದ ಸಂದರ್ಭದಲ್ಲಿ ಆಗುವುದಾದರೆ ಅದಕ್ಕಿಂತ ಹೆಚ್ಚಿನ ಗೌರವ ಲೋಹಿಯಾ ನೆನಪಿಗೆ ಸಲ್ಲಲಾರದು. ಏಕೆಂದರೆ ಅಂತರ್ಜಾತಿ ವಿವಾಹದ ಹಿಂದೆ ರಮ್ಯ ಪ್ರೇಮ ಮಾತ್ರವಿರದೆ–

ಅದು ಇದ್ದೇ ಇರುತ್ತದೆ ಎಂಬುದು ಬೇರೆ ವಿಷಯ- ಜಾತಿ ಗಡಿ ದಾಟುವ ಧೈರ್ಯವೂ ಇರುತ್ತದೆ. ಈ ಪ್ರೇಮ ಮತ್ತು ಧೈರ್ಯ ನಮ್ಮಲ್ಲಿ ಜಾತಿ ವ್ಯವಸ್ಥೆ ಯಾವುದರ ದ್ಯೋತಕವಾಗಿದೆಯೋ ಆ ಅಸಮಾನತೆ, ಅನ್ಯಾಯಗಳ ಎಲ್ಲ ರೂಪಗಳನ್ನೂ ತೊಡೆದು ಹಾಕುವ ಸಂಕಲ್ಪವನ್ನು ನಮ್ಮಲ್ಲಿ ಹುಟ್ಟು ಹಾಕುವಂತಾಗಬೇಕು. ಆ ಮೂಲಕ ಐವತ್ತು-ಅರವತ್ತು ವರ್ಷಗಳ ಹಿಂದೆ ಆರಂಭವಾದ ಸಾಮಾಜಿಕ ನ್ಯಾಯದ ಆಂದೋಲನ ಹುಟ್ಟು ಹಾಕಿದ ಹೊಸ ಸಾಮಾಜಿಕ ಚೈತನ್ಯ ಪುನಶ್ಚೇತನಗೊಂದು, ಆ ಆಂದೋಲನ ಅಂದು ರೂಪಿಸಿದ ಹುಲಿಗಳು ಈಗ ದೆಹಲಿ ಮತ್ತು ಬೆಂಗಳೂರುಗಳಲ್ಲಿ ಸಿದ್ಧಮಾಡಲಾಗಿರುವ ದೊಡ್ಡ ದೊಡ್ಡ ವೈಭವೋಪೇತ ಬೋನುಗಳಲ್ಲಿ ಸಾಕಿದ ನಾಯಿಗಳಂತೆ ಕಾಣತೊಡಗಿರುವುದನ್ನು ಗಮನಿಸಿ, ಬಹು ಎಚ್ಚರದಿಂದ ಸಮತೆಯ ಹೊಸ ಆಯಾಮಗಳ ಅನ್ವೇಷಣೆಗೆ ತೊಡಗುವಂತಾಗಲಿ. ಆಗ ಮಾತ್ರ ಈ ಲೋಹಿಯಾ ಜನ್ಮ ಶತಾಬ್ಧಿ ಸಂದರ್ಭದಲ್ಲಿ ನಡೆಯುತ್ತಿರುವ ಲೋಹಿಯಾ ಹೆಸರಿನ ಪತಣದಿಂದ ದೂರ ಸರಿದು ಲೋಹಿಯಾ ಹೇಳಿದ್ದ ಕೆಲಸವನ್ನು ಮಾಡಿದ ಕೀರ್ತಿಗೆ ನೀವು ಭಾಜನರಾಗುತ್ತೀರಿ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ನಮಸ್ಕಾರ.

(೨೦೧೧ರ ಜೂನ್ ನಲ್ಲಿ 'ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನ' ಮತ್ತು ಸಮಾನ ಮನಸ್ಕ ಸಂಘ- ಸಂಸ್ಥೆಗಳು ಶಿವೊಗ್ಗದಲ್ಲಿ ಆಯೋಜಿಸಿದ್ದ ಜಾತಿ ವಿರೋಧಿ ಸಮ್ಮೇಳನದಲ್ಲಿ ಮಾಡಿದ ಭಾಷಣ; 'ನವ ಮಾನವ ಮಾಸಿಕ'ದ ಸೆಪ್ಟಂಬರ್- ೨೦೧೧ರ ಸಂಚಿಕೆಯಲ್ಲಿ ಪ್ರಕಟಿತ)

೧೫. ಅಬ್ಬಿಗೇರಿ ವಿರೂಪಾಕ್ಷಪ್ಪ: ಒಂದು ನೆನಪಿನ ಚಿತ್ರ

ಅಬ್ಬಿಗೇರಿ ವಿರೂಪಾಕ್ಷಪ್ಪ ಅವರ ಹೆಸರನ್ನು ನಾನು ಮೊದಲು ಕೇಳಿದ್ದು, ೧೯೮೦ರಲ್ಲಿ. 'ಸಂಕ್ರಮಣ' ಪತ್ರಿಕೆಯ ಸಂಪಾದಕರಾದ ಚಂದ್ರಶೇಖರ ಪಾಟೀಲರು ಆ ವರ್ಷ 'ಸಂಕ್ರಮಣ'ದ ಲೋಹಿಯಾ ವಿಶೇಷ ಸಂಚಿಕೆಯನ್ನು ಸಂಪಾದಿಸಿ ಕೊಡಲು ದೆಹಲಿಯಲ್ಲಿದ್ದ ನನ್ನನ್ನು ಕೇಳಿದ್ದರು. ಈ ಸಂಬಂಧ ನಾನು ಕರ್ನಾಟಕದ ಹಲವಾರು ಸಮಾಜವಾದಿ ಗೆಳೆಯರಿಗೆ ಮತ್ತು ಸಮಾಜವಾದಿ ಹಿನ್ನೆಲೆಯ ಲೇಖಕರಿಗೆ ಪತ್ರ ಬರೆದು ಲೋಹಿಯಾ ಕುರಿತಂತೆ ಲೇಖನಗಳನ್ನು ಆಹ್ವಾನಿಸಿದ್ದೆ. ಆಗ ಗೆಳೆಯ ಕಾಳೇಗೌಡ ನಾಗವಾರ ಅವರು ಉತ್ತರ ಕರ್ನಾಟಕದ ಸ್ಥಳೀಯ ಪತ್ರಿಕೆಯೊಂದರಲ್ಲಿ ಲೋಹಿಯಾ ಬಗ್ಗೆ ಪ್ರಕಟವಾಗಿದ್ದ ಲೇಖನವೊಂದನ್ನು ಕಳಿಸಿ ಅದನ್ನು ಸಂಚಿಕೆಗಾಗಿ ಬಳಸಿಕೊಳ್ಳಲು ಸಾಧ್ಯವೇ ನೋಡಿ ಎಂದಿದ್ದರು. ಆ ಲೇಖನ ಓದಿ ನಾನು ದಂಗಾದೆ. ಅದೊಂದು, ಆಳದಲ್ಲಿ ನಿಜವಾದ ಸಮಾಜವಾದಿಯಾಗಿದ್ದವನೊಬ್ಬ ಮಾತ್ರ ಬರೆಯಬಲ್ಲ ಲೇಖನವಾಗಿತ್ತು. ಭಾಷೆ, ಶೈಲಿ ಮತ್ತು ವಿವರಗಳಲ್ಲಿ ಸರಳತೆಯನ್ನೇ ಸೌಂದರ್ಯವನ್ನಾಗಿ ಒಡಮೂಡಿಸಿದ್ದ ಸಂವೇದನಾಶೀಲ ಕುಶಲ ಲೇಖನವಾಗಿತ್ತದು. ಅದನ್ನು ಬರೆದಿದ್ದವರು ಅಬ್ಬಿಗೇರಿ ವಿರೂಪಾಕ್ಷಪ್ಪ. (ಈ ಲೇಖನ ಈಗ ಪರಿಷ್ಕೃತ ಆವೃತ್ತಿಯಾಗಿ ಬಳ್ಳಾರಿಯ ಲೋಹಿಯಾ ಪ್ರಕಾಶನದಿಂದ ಹೊರ ಬಂದಿರುವ 'ಲೋಹಿಯಾ: ವ್ಯಕ್ತಿ– ವಿಚಾರ– ವಿಮರ್ಶೆ' ಪುಸ್ತಕದಲ್ಲಿ 'ಲೋಹಿಯಾ: ಒಂದು ನೆನಪು' ಎಂಬ ಶೀರ್ಷಿಕೆಯಡಿ ಮೊದಲ ಲೇಖನವಾಗಿ ಪ್ರಕಟವಾಗಿದೆ.)

ಲೋಹಿಯಾ ಮತ್ತು ಅವರ ಸಮಾಜವಾದ ಕುರಿತು ಅಪಾರ ಅಭಿಮಾನದಿಂದಲೂ ಮತ್ತು ಆಳವಾದ ವಿದ್ವತ್ತಿನಿಂದಲೂ ಬರೆದ ಹಲವು ಲೇಖನಗಳನ್ನು ನಾನು ಓದಿದ್ದೆ, ಮೆಚ್ಚಿದ್ದೆ. ಆ ಮೂಲಕ ಲೋಹಿಯಾ ಬಗ್ಗೆ ಪ್ರೀತಿ– ಶ್ರದ್ಧೆಗಳನ್ನು ಬೆಳೆಸಿಕೊಂಡಿದ್ದೆ. ಆ ಪ್ರೀತಿ– ಶ್ರದ್ಧೆಗಳಲ್ಲಿ ಲೋಹಿಯಾ ಚಿತ್ರ, ನಾನು ಅವರನ್ನು ಕಣ್ಣಾರೆ ಕಾಣದಿದ್ದ, ಅವರೊಂದಿಗೆ ಒಡನಾಡದಿದ್ದ ವಿಷಾದದೊಂದಿಗೆ ಹಿನ್ನೆಲೆಯಲ್ಲಷ್ಟೇ ಇರುತ್ತಿತ್ತು. ಆದರೆ ಅಬ್ಬಿಗೇರಿಯವರ ಈ ಲೇಖನ ಲೋಹಿಯಾ ಅವರನ್ನು ನೇರ ನನ್ನ ಕಣ್ಮುಂದೆಯೇ ಜೀವಂತವಾಗಿ ತಂದು ನಿಲ್ಲಿಸಿತು. ನನ್ನ ಕಣ್ಣುಗಳನ್ನು ಒದ್ದೆಯಾಗಿಸಿತು.

ಈಗ ಗದಗ ಜಿಲ್ಲೆಗೆ ಸೇರಿರುವ ರೋಣ ತಾಲ್ಲೂಕಿನ ಸೂಡಿ ಗ್ರಾಮದ ರೈತರಾಗಿದ್ದ ಅಬ್ಬಿಗೇರಿಯವರು, ತಾವು ರೋಣ ತಾಲ್ಲೂಕಿನ ಸಮಾಜವಾದಿ ಪಕ್ಷದ (ಬಹುಶಃ ಅವರ ರೈತ ಶಾಖೆಯಾಗಿದ್ದ ಕಿಸಾನ್ ಸಭಾದ) ಕಾರ್ಯಕರ್ತರಾಗಿ, ಕಳೆದ ಶತಮಾನದ ಅರವತ್ತರ

ವಶಕವಲ್ಲಿ ತಮ್ಮೂರಿಗೆ ಲೋಹಿಯಾ ಬಂದಾಗ ಅನುಭವಿಸಿದ ಸಂತೋಷ– ಸಂಭ್ರಮಗಳ್ನು ಈ ಲೇಖನದಲ್ಲಿ ವರ್ಣಿಸಿದ್ದಾರೆ. ಹಾಗೇ, ಅದರ ಭಾಗವಾಗಿ ಲೋಹಿಯಾ ಅವರ ಸಂಕ್ಷಿಪ್ತ, ಆದರೆ ಜೀವಂತವಾದ ವ್ಯಕ್ತಿ ಚಿತ್ರವನ್ನು; ಆ ಭೇಟಿಯ ವಿವರಗಳನ್ನು ಸ್ಥಳೀಯ ಬಣ್ಣ–ಬೆಡಗುಗಳಿಂದೊಡಗೂಡಿದ ಭಾಷೆಯಲ್ಲಿ ಕಟ್ಟಿಕೊಟ್ಟಿದ್ದಾರೆ. ಆ ಮೂಲಕ ಸಮಾಜವಾದದ ನಿಜವಾದ ಸ್ಪರ್ಶ ಪಡೆದ ಅಭಿವ್ಯಕ್ತಿಯ ಕ್ರಮ ಹೇಗಿರುವುದೆಂಬುದನ್ನೂ ಪರಿಚಯಿಸಿದ್ದಾರೆ. ಆ ಲೇಖನದಲ್ಲಿ ತಾವು ಕಂಡ ಲೋಹಿಯಾ ವ್ಯಕ್ತಿ ಚಿತ್ರವನ್ನು ಅವರು ಬಿಡಿಸಿರುವುದು ಹೀಗೆ:

> 'ಹಾಳತ ಮೈಕಟ್ಟಿನ, ಕುಳ್ಳ ನಿಲುವಿನ, ಚುರುಕು ಸ್ವಭಾವದ ಆ ವ್ಯಕ್ತಿ, ಹಿತವಾದ ಕಪ್ಪು ಬಣ್ಣ, ಗುಂಡು ಮುಖ, ದೊಣ್ಣೆ ಮೂಗು, ದಪ್ಪನೆಯ ಕನ್ನಡಕ, ಅದರ ಹಿಂದೆ ಹೊಳೆಯುವ ಪಿಳಿ ಪಿಳಿ ಕಣ್ಣುಗಳು, ಮುಖದ ಮೇಲೆ ಒಮ್ಮೊಮ್ಮೆ ಅಶಾಂತ ಜೀವನ ವಿದ್ರೋಹದ ಭಾವ ಮುದ್ರೆ, ಒಮ್ಮೊಮ್ಮೆ ಹಸುಳೆಯಾಗಿ ಹೂ ನಗೆ, ಮತ್ತೊಮ್ಮೆ ಎಳೆ ಹುಡುಗನ ತುಂಟ ನಗೆ...'

ತಾನು ಕೆಲ ನಿಮಿಷಗಳ ಕಾಲ ಮಾತ್ರ ಕಂಡ ವ್ಯಕ್ತಿಯೊಂದಿಗೆ ತಾದಾತ್ಮ್ಯ ಸಾಧಿಸಿಕೊಂಡ ಒಂದು ಸ್ಪಂದನಶೀಲ ಮನಸ್ಸು ಮಾತ್ರ ಇಂತಹ ಒಂದು ಶಬ್ದ ಚಿತ್ರವನ್ನು ಕಡೆಯಬಲ್ಲುದು. ಸಮಾಜವಾದ ಮಾತ್ರ ಅಷ್ಟೇನೂ ನುರಿತ ಬರಹಗಾರನಲ್ಲದ ಹಳ್ಳಿಯ ಸಾಮಾನ್ಯ ರೈತನೊಬ್ಬನಿಂದ ಇಂತಹ ಸಾಲುಗಳನ್ನು ಬರೆಸಬಲ್ಲುದೋ ಏನೋ! ಲೋಹಿಯಾರ ಈ ವ್ಯಕ್ತಿ ಚಿತ್ರವನ್ನು ಅದರೆಲ್ಲ ಚಲನಶೀಲತೆಯೊಂದಿಗೆ ಗ್ರಹಿಸಲು ನಮ್ಮನ್ನು ತಯಾರು ಮಾಡುವ ಆ ಲೇಖನದ ಈ ಕುತೂಹಲಕಾರಿ ಆರಂಭವನ್ನು ಗಮನಿಸಿ:

> 'ಸರಿಯಾಗಿ ಮುವ್ವತ್ತು ವರ್ಷಗಳ ಹಿಂದೆ. ಸೊಗಸಾದ ಮುಂಜಾವು. ಹನ್ನೊಂದು ಘಂಟೆ. ಸಮಾಜವಾದಿ ಸಾಥಿಯೊಬ್ಬನ ಪುಟ್ಟ ಮನೆ. ಅದರ ಪಕ್ಕದಲ್ಲೊಂದು ಹಜಾರ. ತೆಂಗಿನ ಗರಿಗಳನ್ನೋ, ತಾಳೆಗರಿಗಳನ್ನೋ ಹೊದಿಸಿದ ಚಪ್ಪರ. ಅದರ ಉದ್ದಕ್ಕೂ ಅಗಲಕ್ಕೆ ಸಮಾಂತರವಾಗಿ ಬಿಗಿದ ಬಿದಿರುಗಳು. ಅಲ್ಲಿಯ ಚೌಕುಚೌಕಾದ ಕಿಂಡಿಗಳಿಂದ ತಂತಾನೆ ರಚಿತವಾದ ಜಾಳಾಂಧ್ರಗಳು. ಅವುಗಳಿಂದ ಇಳಿದು ಬರುವ ನೆಳಲು ಬೆಳಕಿನ ಸುಸಿಲಾಟ. ಹಜಾರದ ನೆಲಕ್ಕೆ ನೇಸರಿನ ಕಿರಣಗಳು ನಕ್ಷೆ ಬರೆದು ಚುಂಬಿಸುತ್ತಿವೆ. ಇದೇ ಹಜಾರದ ಒಂದು ಕಡೆಗೆ ಹಲವರು ಕೂತುಕೊಂಡಿದ್ದಾರೆ. ಹೆಚ್ಚಿನ ಯಾವ ಠೀವಿಯೂ ಇಲ್ಲ. ಹತ್ತಾರು ಗೆಳೆಯರು ಬಳಗವಾಗಿ ಸೇರಿ ಆತ್ಮೀಯವಾಗಿ ಸರಸ– ಸಲ್ಲಾಪವಾಡುತ್ತಿರುವಂತೆ ತೋರುತ್ತಿದೆ ಆ ದೃಶ್ಯ...'

ತಮ್ಮ ಹಳ್ಳಿಗೆ ಲೋಹಿಯಾರ ಆಗಮನವನ್ನು ನಿರೀಕ್ಷಿಸುತ್ತಾ ಕೂತ ಗೆಳೆಯರ ಗುಂಪಿನ ದೃಶ್ಯದ ಇಂತಹ ಸೃಜನಶೀಲ ವಿವರಗಳನ್ನೊಳಗೊಂಡ ವರ್ಣನೆಯೊಂದಿಗೆ

ಆರಂಭವಾಗುವ ಈ ಲೇಖನದ ಮುಂದಿನ ವಿವರಗಳ ಪ್ರಕಾರ ಲೋಹಿಯಾ, ಅಬ್ಬಿಗೇರಿಯವರನ್ನು ಅವರ ಮುಖದ ಮೇಲಿನ ಕಾತರವನ್ನು ಓದಿಕೊಂಡವರಂಬಂತೆ ತಾವೇ ಮಾತನಾಡಿಸಿ, ಅವರ ಮನೆಗೆ ಹೋಗಿ ಸ್ವಲ್ಪ ಕಾಲ ತಂಗುತ್ತಾರೆ. ಆಗ ಈ ಸಮಾಜವಾದಿ ಕಾರ್ಯಕರ್ತನ ಮನೆಯ ಗೋಡೆಯ ಮೇಲೆ ನಗುತ್ತಿರುವ ತಮ್ಮ ರಾಜಕೀಯ ವಿರೋಧಿ ನೆಹರೂ ಚಿತ್ರ ನೋಡಿ ದಂಗಾಗುತ್ತಾರೆ! ಆದರೆ ಇದೆಲ್ಲ ಸಹಜವೆಂಬಂತೆ, ವಿಚಲಿತರಾಗದೆ; ಅವರ ಮನೆಯಲ್ಲೇ ಎರಡು ಚಪಾತಿ ತಿಂದು ಒಂದು ಬಟ್ಟಲು ಮಜ್ಜಿಗೆ ಕುಡಿದು ನೆಹರೂ ನೇತೃತ್ವದ ಸರ್ಕಾರದ ವಿರುದ್ಧ ದಾಳಿ ಮಾಡಲು ಸಾರ್ವಜನಿಕ ಸಭೆಗೆ ತೆರಳುತ್ತಾರೆ. ದಾರಿಯಲ್ಲಿ ಆ ಹಳ್ಳಿಯ ದೇಗುಲವೊಂದರ ಸೌಂದರ್ಯಕ್ಕೆ ಮನಸೋತು ಅದನ್ನು ಸವಿಯುತ್ತಾ, ಮೆಚ್ಚುತ್ತಾ ನಿಲ್ಲುತ್ತಾರೆ. ಇಲ್ಲಿ ಅವರ ವ್ಯಕ್ತಿತ್ವದ ಇನ್ನೊಂದು ಆಯಾಮದ ಪರಿಚಯವಾಗುತ್ತದೆ. ನಂತರ ಲೋಹಿಯಾ ರೋಣದ ವೀರಭದ್ರಗುಡಿಯ ಹಜಾರದಲ್ಲಿ ನಿಂತು ಅಬ್ಬಿಗೇರಿಯವರ ಶಬ್ದವನ್ನೇ ಬಳಸಿ ಹೇಳುವುದಾರೆ, ರೈತ 'ಜನಸಮ್ಮರ್ದ'ವನ್ನುದ್ದೇಶಿಸಿ ಸುತ್ತಮುತ್ತಲ ಜನ ಆವರೆಗೆ ಕಂಡು ಕೇಳರಿಯದಂತಹ ವಿಚಾರಗಳ ಪ್ರಚಂಡ ಭಾಷಣ ಮಾಡುತ್ತಾರೆ.

ಭಾಷಣ ಮುಗಿಸಿ ಹೊರಡುವ ಮುನ್ನ ಲೋಹಿಯಾ ಅಬ್ಬಿಗೇರಿಯವರ ಭುಜದ ಮೇಲೆ ಕೈಯಿಟ್ಟು, *'ವಿರೂಪಾಕ್ಷಪ್ಪ ತುಂ ಧೀರ್ ಹೋ, ತೇಜಸ್ವಿ ಹೋ! ಅಪನಿ ಮಂಜಿಲ್ ಕೆ ಓರ್ ಬಢತೆ ರಹೋ!'* ಎಂದು ಆಶೀರ್ವದಿಸುತ್ತಾರೆ. ಅಬ್ಬಿಗೇರಿಯವರು ಸಹಜವಾಗಿಯೇ ರೋಮಾಂಚನಗೊಳ್ಳುತ್ತಾರೆ. ಆದರೆ ಆ ರೋಮಾಂಚನವನ್ನು ಅಬ್ಬಿಗೇರಿಯವರು ಸಮಾಜವಾದಿಯಾಗಿ ತಮಗಷ್ಟೇ ಇರಿಸಿಕೊಳ್ಳದೆ, ತಮ್ಮ ಆಗಿನ ಗೆಳೆಯರಿಗಷ್ಟೇ ಅಲ್ಲ, ನಮ್ಮಂತಹ ಮುಂದಿನ ತಲೆಮಾರಿನವರಿಗೂ ಹಂಚಲೋ ಎಂಬಂತೆ, ತಮ್ಮ ಲೇಖನವನ್ನು ಮುಗಿಸುವುದು ಹೀಗೆ: ಇಡೀ ಸಮಾಜವಾದಿ ಚಳುವಳಿ ಬಗ್ಗೆ ಇಂದಿಗೂ ಅರ್ಥಪೂರ್ಣವೆನಿಸುವ ಒಂದು ಹಿನ್ನೋಟ ಒದಗಿಸಬಲ್ಲ ಮತ್ತು ಈಗಲೂ ನಮ್ಮನ್ನು ಆಳವಾಗಿ ಕಲಕಬಲ್ಲ ಈ ಭಾವಪೂರ್ಣ ವಿದಾಯದ ಈ ಸಾಲುಗಳೊಂದಿಗೆ–

> 'ಆ ಚಿತ್ರ, ಆ ದೃಶ್ಯ, ಆ ವಾಣಿ, ಆ ರಸ ನಿಮಿಷಗಳು...ವರುಷಗಳ ನಂತರ ನಾನೀಗ ಅದನ್ನೆಲ್ಲ ನೆನೆದುಕೊಳ್ಳುತ್ತಿದ್ದೇನೆ. ಮುಚ್ಚಂಜೆಯ ಮುಸುಕಿನಂತೆ ಒಂದು ಬಗೆಯ ಮಬ್ಬು ಮನಸ್ಸಿಗೆ ಕವಿದಂತಾಗಿ ನಾನು ಚಿತ್ರಸ್ಥನಾಗಿ ಕೂಡುತ್ತೇನೆ. ಲೋಹಿಯಾ ನೆನಪಿನ ಅಲೆಗಳು ಹೊನ್ನಿನ ಹುಳುಗಳಂತೆ ಮಿಂಚುತ್ತಾ ಚಿತ್ರದಲ್ಲಿ ತೂರಿಕೊಂಡು ಬರುತ್ತಿವೆ. ಆ ವಾಣಿ ಈಗಲೂ ಅಂತರಂಗದಲ್ಲಿ ಅರುಣಿತವಾಗುತ್ತಿದೆ ಮತ್ತು ಒಡಲೊಳಗಿಂದ ಯಾರೋ ಒಡನುಡಿದಂತಾಗುತ್ತದೆ.. ಪಥಿಕನಿನ್ನೂ ದಣಿದಿಲ್ಲ. ದಾರಿಯಲ್ಲಿ ನಿಂತೂ ಇಲ್ಲ. ಅವನು ಎಚ್ಚರದಿಂದ ಮುನ್ನಡೆಯುತ್ತಲೇ ಇದ್ದಾನೆ. ಆದರೆ ದಾರಿ ತೋರಿಸುವವನೇ ದೂರವಾದ, ಗಂತವ್ಯವೂ ದೂರ, ದೂರ, ದೂರ, ಬಲು ದೂರ...'

ಸಮಾಜವಾದಿ ಚರಿತ್ರೆಯ ಹಿನ್ನೋಟವೆಂದರೆ ಇಂತಹ ಹಲವಾರು ಆರ್ದ್ರ ಚಿತ್ರಗಳು ಒದಗಿಸುವ ಹಿನ್ನೋಟಗಳ ಸರಮಾಲೆಯೇ ಆಗಿದೆ. ಆದರೆ ಅವೆಲ್ಲ, ಲೋಹಿಯಾರ ವ್ಯಕ್ತಿತ್ವದ ಒಂದು ಪಾರ್ಶ್ವ ಅಥವಾ ಹೊರ ಕವಚ ಮಾತ್ರವಾಗಿದ್ದ ಚತುರ ಮಾತುಗಾರಿಕೆಯ ಸ್ಥೂಲ ಪ್ರತಿಬಿಂಬ ಮಾತ್ರಗಳಂತಿರುವ ನಮ್ಮ ಕಾಲದ ಹಲವು ಗಲಭೆಕೋರರ ರೋಚಕ ಚಿತ್ರಗಳ ಮಧ್ಯೆ ಹಿನ್ನೆಲೆಗೆ ಸರಿದು ಹೋಗಿವೆ. ಸಮಾಜವಾದಿ ಆಂದೋಲನದ ದಟ್ಟ ಪ್ರಭಾವವಿದ್ದ ಗಂಗಾ ಬಯಲಿನ ರಾಜ್ಯಗಳಲ್ಲಿ ನಾನು ಇಂತಹ ಎರಡೂ ಬದಿಯ– ಆರ್ದ್ರ ಮತ್ತು ಗಲಭೆಕೋರತನ– ಚಿತ್ರಗಳನ್ನು ನೋಡಿದ್ದೇನೆ. ಆದರೆ ಕರ್ನಾಟಕದಲ್ಲಿ ನಾನು ಕಂಡದ್ದು ಬಹುಪಾಲು ಒಂದೇ ರೀತಿಯ– ಗಲಭೆಕೋರತನದ– ಚಿತ್ರಗಳನ್ನಷ್ಟೇ. ಅಥವಾ ನಾನು ಕರ್ನಾಟಕದಲ್ಲಿನ ಸಮಾಜವಾದಿ ಚಳುವಳಿಯನ್ನು ಕಂಡ ಘಟ್ಟವೇ ಅಥವಾ ನನ್ನ ಸಹವಾಸವೇ ಹಾಗೇ ಇತ್ತೋ ಏನೋ ತಿಳಿಯದು! ಇದರ ಮಧ್ಯೆಯೇ ಆಗಾಗ್ಗೆ ಆಶ್ಚರ್ಯವೆಂಬಂತೆ ರಾಚಪ್ಪ ಬೆಟ್ಲೂರು, ವೀರಣ್ಣ ತಿಮ್ಮಾಜಿಯಂತಹವರನ್ನೂ ಕಂಡಿದ್ದೂ ನಿಜ. ಆದರೆ ಏಕೋ ಏನೋ ಈ ಗುಂಪಿನ ಮಧ್ಯೆ ಕೊರಳೆತ್ತಿ ನೋಡಿದರೂ ಅಬ್ಬಿಗೇರಿ ವಿರೂಪಾಕ್ಷಪ್ಪನವರು ಕಾಣಿಸಿಯೇ ಇರಲಿಲ್ಲ...

ಎಪ್ಪತ್ತರ ದಶಕದ ಅಂತ್ಯದ ಹೊತ್ತಿಗೆ ಸಮಾಜವಾದಿ ಚಳುವಳಿ ಜನತಾ ಪಕ್ಷದಲ್ಲಿ ಲೀನವಾಗಿ ಆನಂತರ ಜನತಾ ಪಕ್ಷದೊಂದಿಗೇ ಕಾಣೆಯಾದ ಬಳಿಕ ನಾವೆಲ್ಲ ಸಮಾಜವಾದಿ ಯುವಜನ ಸಭಾದ ಪುನರುಜ್ಜೀವನ, ಲೋಹಿಯಾ ವಿಚಾರ ಮಂಚ, ಸಮತಾ ಸಮ್ಮೇಳನ– ಸಂಘಟನೆ, 'ಲಂಕೇಶ್ ಪತ್ರಿಕೆ', ದಲಿತ ಚಳುವಳಿ, ರೈತ ಚಳುವಳಿ, 'ಮಾನವ', 'ಪಂಚಮ', ಗೋಕಾಕ್ ಚಳುವಳಿ ಎಂದೆಲ್ಲ ಆಸೆಗಣ್ಣುಗಳಿಂದ ನಮ್ಮ ನಮ್ಮ ಮಿತಿಗಳಲ್ಲೇ ಭಾಗವಹಿಸಿದ್ದೆವು. ಆದರೆ ಈ ಆಂದೋಲನಗಳು ಒಂದಾದಮೇಲೊಂದರಂತೆ ತಮ್ಮದೇ ಆಂತರಿಕ ವಿರೋಧಾಸಗಳಿಂದ ತಮ್ಮ ಮೂಲ ಉದ್ದೇಶಗಳನ್ನೇ ಕಳೆದುಕೊಂಡು ದಿಕ್ಕಾಪಾಲಾಗತೊಡಗಿದಾಗ, ಇದ್ದಕ್ಕಿದ್ದಂತೆ ನನ್ನ ಬದುಕಿನ ಲಂಗರುಗಳೇ ಕಳಚಿ ಹೋದ ಅನುಭವವಾಯಿತು. ಆಗ ನಾನು ನನ್ನ ಬದುಕಿನ ತಾತ್ವಿಕ ಮತ್ತು ತಾರ್ಕಿಕ ಅಂತ್ಯಕ್ಕೆ ಬಂದ ಗಾಬರಿಗೆ ಸಿಕ್ಕಿ (ಆ ಹೊತ್ತಿಗೆ ನಾನು ಒಂದು ಪ್ರಾಣಾಂತಿಕ ದೈಹಿಕ ಅಸ್ವಸ್ಥತೆಗೂ ಈಡಾಗಿದ್ದೆ) ತತ್ತರಿಸಿದೆ. ಅದರಿಂದ ಪಾರಾಗಲೋ ಎಂಬಂತೆ (ಈಗ ಹಿಂದಿರುಗಿ ನೋಡಿದಾಗ ಹೀಗನ್ನಿಸುತ್ತಿದೆಯೋ ಏನೋ ತಿಳಿಯದು!) ೨೦೦೨ರಲ್ಲಿ'ಶಿವಮೊಗ್ಗದಲ್ಲಿ ರಾಜ್ಯ ಮಟ್ಟದ ಮೂರು ದಿನಗಳ ಸಮಾಜವಾದಿ ಶಿಬಿರವೊಂದನ್ನು ಸಂಘಟಿಸುವ ಪ್ರಯತ್ನ ಮಾಡಿದೆ.

ಇದಕ್ಕೆ ಮೈಸೂರಿನಲ್ಲಿ ಆರಂಭವಾಗಿದ್ದ ಲೋಹಿಯಾ ಟ್ರಸ್ಟಿನ ಮತ್ತು ಕುವೆಂಪು ವಿಶ್ವವಿದ್ಯಾಲಯದ ರಾಜಕೀಯ ಶಾಸ್ತ್ರ ವಿಭಾಗದ ಆರ್ಥಿಕ ನೆರವೂ ಸಿಕ್ಕಿದುದರಿಂದ ಪಕ್ಷಾತೀತರೂ ಮತ್ತು ಅಧಿಕಾರೇತರರೂ ಆದ ಎಲ್ಲ ಸಮಾಜವಾದಿಗಳನ್ನೂ ಒಂದೆಡೆ ಸೇರಿಸುವ ಸಾಹಸ ಕೈಗೊಂಡೆ. ಆ ಹೊತ್ತಿಗೆ ಅಕಸ್ಮಾತ್ ಒಂದು ಜಿದ್ದಿಗೆ ಬಿದ್ದು, ಕರ್ನಾಟಕದ ಇಂತಹ ಎಲ್ಲ ಸಮಾಜವಾದಿಗಳ ಗುರುಗಳಾಗಿದ್ದ ಕಿಷನ್ ಪಟ್ನಾಯಕ್ ಅವರಿಗೆ ಒಂದು ಲಕ್ಷ ರೂಪಾಯಿಗಳ ನಿಧಿ ಅರ್ಪಿಸುವ ಕಾರ್ಯಕ್ರಮವನ್ನೂ ಹಮ್ಮಿಕೊಂಡಿದ್ದೆ. ಆ ವೇಳೆಗೆ

ರಾಚಪ್ಪ ಬೆಟ್ಟೂರ್ ಮತ್ತು ವೀರಣ್ಣ ತಿಮ್ಮಾಜಿ ಅಸು ನೀಗಿದ್ದರು. ಹಿರಿಯರಾಗಿ, ಅವರ ಸರೀಕರಾದ ಧಾರವಾಡದ ನೀಲಗಂಗಯ್ಯ ಪೂಜಾರ ಮತ್ತು ಅಬ್ಬಿಗೇರಿ ವಿರೂಪಾಕ್ಷಪ್ಪ ಅವರನ್ನು ಈ ಶಿಬಿರಕ್ಕೆ ಆಹ್ವಾನಿಸಿದೆ. ಅಬ್ಬಿಗೇರಿಯವರು ದೂರದ ಪ್ರಯಾಣ ಕಷ್ಟವೆಂದು ಹಿಂಜರಿದರಾದರೂ, ಶಿಬಿರದ ಎರಡನೇ ದಿನದ ಮಧ್ಯಾಹ್ನ ಬಂದೇ ಬಂದರು.

ಅವರು ದೂರದ ರೋಣದಿಂದ ಬಸ್ ಹತ್ತಿ ಇಳಿದು ಶಿವಮೊಗ್ಗದ ಬಸ್ ನಿಲ್ದಾಣದಿಂದ ಯಾರನ್ನೋ ಕೇಳಿಕೊಂಡು ಶಿಬಿರ ನಡೆಯುತ್ತಿದ್ದ ಊರಾಚೆಯ ಸಹ್ಯಾದ್ರಿ ಕಾಲೇಜಿನ ಆವರಣಕ್ಕೆ ನಡೆದೇ ಬಂದಿದ್ದರು. ಅವರ ದೇಹದಿಂದ ಬೆವರು ಬಸಿಯುತ್ತಿತ್ತು. ಮುಖ ದಣಿವಿಂದ ಸೋತಂತಿತ್ತು. 'ನೀವೇಕೆ ಆಟೋದಲ್ಲಿ ಬರಲಿಲ್ಲ?' ಎಂದು ಕೇಳಿದರೆ (ಅವರಿಗೆ ಹೋಗಿ ಬರುವ ಪೂರ್ಣ ಪ್ರಯಾಣದ ಖರ್ಚು ಮತ್ತು ಗೌರವ ಸಂಭಾವನೆ ಕೊಡುವುದಾಗಿ ಮೊದಲೇ ತಿಳಿಸಿದ್ದೆ.) ಮುಗ್ಧ ಹಳ್ಳಿಗನಂತೆ, 'ಅದೆಲ್ಲ ರೂಢಿಯಿಲ್ರೀ... ಇಷ್ಟು ನಡೆಯೂದು ನಮಗೆ ಕಷ್ಟ ಅಲ್ರಿ...' ಎಂದು ಮುಖ ಕೈಕಾಲು ತೊಳೆದು, 'ನೀವು ಕೂರ್ರಿ.. ನಾವು ತಂದು ಕೊಡುವೆವು' ಎಂದು ಹೇಳಿದರೂ ಕೇಳದೆ ಸಂಘಟಕರು ಏರ್ಪಡಿಸಿದ್ದ ಸರಳ ಊಟಕ್ಕೆ ಸರತಿ ಸಾಲಿನಲ್ಲಿ ನಿಂತು ಬಿಟ್ಟರು. (ಆ ಹೊತ್ತಿಗಾಗಲೇ ನಮ್ಮ ಗಲಭೆಕೋರ ಸಮಾಜವಾದಿ ಮಿತ್ರರನೇಕರು ಚರ್ಚೆಯಲ್ಲಿ ಭಾಗವಹಿಸಿದ್ದರಿಂದಾಗಿ ಆಯಾಸಗೊಂಡು, ಪುಷ್ಕಳ ಊಟ ಹುಡುಕಿಕೊಂಡು ತಮ್ಮ ಸ್ಥಳೀಯ ಗೆಳೆಯರ ಮನೆಗಳೆಡೆಗೆ ಧಾವಿಸಿದ್ದರು.) ನನಗೆ ತಕ್ಷಣ ಅಬ್ಬಿಗೇರಿ ಅವರ ಆ ಲೇಖನ ನೆನಪಿಗೆ ಬಂತು.

ಇಪ್ಪತ್ತು ವರ್ಷಗಳ ಹಿಂದೆ ಅವರ ಲೇಖನವನ್ನೋದಿ ವಿರೂಪಾಕ್ಷಪ್ಪನವರು ಹೇಗಿರುವರೆಂದು ನಾನು ಭಾವಿಸಿದ್ದೆನೋ ಹಾಗೇ ಇದ್ದರು ಅವರು. ಸ್ವಲ್ಪ ಎತ್ತರವೆನ್ನಬಹುದಾದ ನಿಲುವು, ಕೋಲು ಮುಖ, ಎಣ್ಣೆಗೆಂಪು ಬಣ್ಣ, ಕರುಣಾ ಪೂರಿತವೆನ್ನಬಹುದಾದ ದೃಷ್ಟಿಯುಳ್ಳ ಕಣ್ಣುಗಳು, ಉತ್ತರ ಕರ್ನಾಟಕದ ರೈತಾಪಿ ಉಡುಪೆನ್ನಬಹುದಾದ ಕಚ್ಚೆ , ಜುಬ್ಬಾ. ನಾನೆಣಿಸಿದುದಕಿಂತ ಸ್ವಲ್ಪ ಹೆಚ್ಚೇ ವಯಸ್ಸಾದಂತೆ ನನಗೆ ಆಗ ಕಂಡಿದ್ದಲ್ಲಿ, ಅದಕ್ಕೆ ಕಾರಣ; ಅಂದಿನ ಆ ದಣಿವಿಗಿಂತ, ಒಟ್ಟಾರೆ ಬದುಕಿನ ದಣಿವು ಅವರ ಮುಖವನ್ನು ಆವರಿಸಿದ್ದುದೇ ಕಾರಣವಿರಬಹುದು ಎಂದು ಅವರ ಬಗ್ಗೆ ಈಗ ಹೆಚ್ಚು ತಿಳಿದಿರುವ ನನಗೆ ಅನ್ನಿಸುತ್ತಿದೆ. ಅಬ್ಬಿಗೇರಿಯವರ ಓರಿಗೆಯ ಸಮಾಜವಾದಿಗಳಿಗೆ ಬದುಕಿನ ಕಷ್ಟದ ದಿನಗಳೇ ಹೆಚ್ಚು. ಅದರಿಂದ ಅವರು ಪಾರಾದಂತಿರಲಿಲ್ಲ. ಸುಖದ ದಿನಗಳನ್ನು ಕಂಡ ಸಮಾಜವಾದಿಗಳಾರೂ ಅವರ ನೆರವಿಗೆ ಬಂದಂತಿರಲಿಲ್ಲ. ಬಹುಶಃ ಎಷ್ಟೋ ವರ್ಷಗಳ ನಂತರ ಅವರು ಸಮಾಜವಾದಿಗಳ ಸಭೆಯೊಂದಕ್ಕೆ ಬಂದಂತಿತ್ತು. ಸ್ವಲ್ಪ ಕಾಲ ಅವರು ಕಾಂಗ್ರೆಸ್ ರಾಜಕಾರಣದಲ್ಲೂ ಇದ್ದು ವಿಷಣ್ಣಗೊಂಡಿದ್ದರು ಎಂದು ಕೇಳಿದ್ದೆ. ವಿಷಾದ ಯೋಗ ಅವರನ್ನು ಆವರಿಸಿದಂತಿತ್ತು. ಹಾಗಾಗಿ ಏಕೋ ಏನೋ ಪೂರ್ಣ ಅನ್ಯ ಮನಸ್ಕರಾದಂತಿದ್ದ ಅವರನ್ನು ಕಂಡು ನೀಲಗಂಗಯ್ಯ ಅವರು, 'ನಮ್ಮ ಅಬ್ಬಿಗೇರಿ ಒಳ್ಳೆ ವಾಗ್ಮಿ... ಈ ತಲೆಮಾರಿನ ಜನ ಅವರ ಮಾತನ್ನು ಕೇಳಲಿ. ಮೊದಲು ಅವರೇ ಮಾತಾಡಲಿ' ಎಂದು ಹುರಿದುಂಬಿಸಿದರು.

ವಿರೂಪಾಕ್ಷಪ್ಪನವರೇನೋ ಮಾತಾಡಿದರು. ಹಳೆಯ ನೆನಪುಗಳನ್ನು ಕೆದಕಿಕೊಳ್ಳುತ್ತಾ, ಉತ್ಸಾಹವನ್ನು ಆವಾಹಿಸಿಕೊಳ್ಳಲು ಹೆಣಗುತ್ತಾ ಮಾತನಾಡಲು ಪ್ರಯತ್ನಿಸಿದರಾದರೂ, ದೀರ್ಘ ರಾಜಕೀಯ ಆಯಾಸ ಅವರನ್ನು ಬಾಧಿಸುತ್ತಿದ್ದಂತಿತ್ತು. ಸಮಾಜವಾದವನ್ನು ಪ್ರಾಣ ಪದಕ ಮಾಡಿಕೊಂಡಿದ್ದ ಯಾರಿಗಾದರೂ ಆಯಾಸವಾಗಬಹುದಾದ ಸಂದರ್ಭವದು. ಸಮಾಜವಾದವು ಅರ್ಧ ಸಮಾಜವಾದಿಗಳ ರಾಜಕೀಯ ದುರ್ವರ್ತನೆಯಿಂದ ಇನ್ನರ್ಧ ಇತರರ ಅಪನಿರೂಪಣೆಗಳಿಂದ ಒಂದು ವಿಫಲ ಮತ್ತು ಕೆಲಮಟ್ಟಿಗೆ ಹಾಸ್ಯಾಸ್ಪದ ವಿದ್ಯಮಾನವೆನ್ನಿಸಿಕೊಳ್ಳುತ್ತಿದ್ದ ಜಾಗತೀಕರಣದ ಏರು ದಿನಗಳವು. ಅವರು ಸಮಾಜವಾದವನ್ನು ಹೊಸ ಹುಡುಗರಿಗೆ ಯಾವ ಪರಿಭಾಷೆಯಲ್ಲಿ ಹೇಳುವುದು, ತಮ್ಮ ಭಾಷೆಯಲ್ಲಿ ಹೇಳಿದರೆ ಅದು ಇನ್ನಷ್ಟು ಹಾಸ್ಯಾಸ್ಪದವಾಗುವುದೋ ಹೇಗೆ ಎಂಬ ಸಂದಿಗ್ಧದಲ್ಲಿದ್ದಂತಿತ್ತು. ತಮ್ಮ ಭಾಷಣದ ನಂತರ ಅವರು ನನ್ನೊಂದಿಗೆ ವೈಯುಕ್ತಿಕವಾಗಿ ಮಾತನಾಡುತ್ತಾ, ನನ್ನ ಪ್ರಯತ್ನವನ್ನು ಮೆಚ್ಚಿದರಾದರೂ, ಆ ಶಿಬಿರವನ್ನು ಉದ್ಘಾಟಿಸಿದ್ದ ದೇವನೂರ ಮಹಾದೇವ ಹೇಳಿದ್ದ ಮಾತುಗಳನ್ನೇ ಅವರೂ ಹೇಳಿದಾಗ ನನಗೆ ಆಶ್ಚರ್ಯವಾಯಿತು. ಏಕೆಂದರೆ ಶಿಬಿರದ ಉದ್ಘಾಟನೆಯ ದಿನ ಅವರು ಇರಲಿಲ್ಲ. ಅವರು ಮಹಾದೇವ ಅವರು ಆಡಿದ್ದ ಮಾತುಗಳನ್ನೇ ಪುನರುಚ್ಚರಿಸಿದ್ದು ಹೀಗೆ: 'ಈ ದಿನಗಳಲ್ಲಿ ಸಮಾಜವಾದಿಗಳನ್ನು ಒಂದುಗೂಡಿಸುವುದು ಕಷ್ಟ. ಅಂದ ಮಾತ್ರಕ್ಕೆ ಈ ಒಂದುಗೂಡಿಸುವ ಕೆಲಸವನ್ನು ಮಾಡಬಾರದೆಂದೇನಲ್ಲ. ನಾಗಭೂಷಣ ಕರೆದಿದ್ದಾರೆಂದು ಬಂದಿದ್ದೇನಷ್ಟೆ.' ನನ್ನ ಕಣ್ಣಲ್ಲಿ ನೀರಾಡಿತು. ಅವರ ಕಣ್ಣುಗಳಲ್ಲೂ...

ಅಂದಿನ ಆ ಸಂದರ್ಭದ ನನ್ನ ಒಂದೇ ವಿಷಾದವೆಂದರೆ ಈ ಇಬ್ಬರೂ– ಅಬ್ಬಿಗೇರಿ ಮತ್ತು ಮಹಾದೇವ– ಕೊನೆಯ ದಿನ ಕಿಷನ್ ಪಟ್ನಾಯಕರ ಮಾತುಗಳನ್ನು ಕೇಳಲು ಇರಲಿಲ್ಲವಲ್ಲ ಎಂಬುದು. ಕಿಷನ್ ಅಂದು ನಾನು ಗೋಷ್ಠಿಯ ಪೀಠಿಕೆಯಾಗಿ ಬೇಕೆಂದೇ– ವಿಚಾರ ಪ್ರಚೋದನೆಗೆಂದೇ– ಆಡಿದ, 'ಸಮಾಜವಾದ ಎಂದೂ ಆಚರಣೆಗೆ ಸಾಧ್ಯವಾಗದ ಒಂದು ರೊಮ್ಯಾಂಟಿಕ್ ಕಲ್ಪನೆ ಮಾತ್ರವೇನೋ!' ಎಂಬ ಮಾತನ್ನೇ ನೆಪವಾಗಿರಿಸಿಕೊಂಡು ನಾನು ಅವರಿಂದ ಆವರೆಗೆ ಕೇಳಿರದಂತಹ ಅದ್ಭುತ ಭಾಷಣ ಮಾಡಿದರು. ಅಂದು ನನ್ನ ಕಣ್ಣಿಗೆ ಅವರು ಬುದ್ಧ ಮಹಾಗುರುವಿನಂತೆ ಕಂಗೊಳಿಸುತ್ತಾ ಆಡಿದ್ದು ಈ ಮಾತುಗಳನ್ನು: 'ರೊಮ್ಯಾಂಟಿಕ್ ಕಲ್ಪನೆಗಳೇ ಪ್ರಪಂಚದ ಇತಿಹಾಸವನ್ನು ನಿರ್ಮಿಸಿರುವುದು ಮತ್ತು ಮನುಷ್ಯರ ಬದುಕನ್ನು ಬದಲಿಸಿರುವುದು. ಆಧುನಿಕ ಕಾಲದ ಮಹಾ ರೊಮ್ಯಾಂಟಿಕ್ ಕಲ್ಪನೆಯಾದ ಸಮಾಜವಾದದ ಕಾಲ ಈಗ ಬಹಳ ಜನ ಹೇಳುತ್ತಿರುವಂತೆ ಮತ್ತು ಬಹಳ ಜನ ನಂಬುತ್ತಿರುವಂತೆ ನಿಜವಾಗಿ ಮುಗಿದಿಲ್ಲ; ಅದು ಅರ್ಧ ದಾರಿ ಮಾತ್ರ ಕ್ರಮಿಸಿ ವಿಶ್ರಮಿಸುತ್ತಿದೆ; ಇದು ಅದಕ್ಕೆ ಧ್ಯಾನದ, ಆತ್ಮಾವಲೋಕನದ ಕಾಲ; ತನ್ನ ಅಧ್ಯಾತ್ಮಿಕತೆಯನ್ನು ಪುನಾರಪಿಷ್ಕರಿಸಿಕೊಳ್ಳುವ ಕಾಲ; ತನ್ನ ಆಧುನಿಕ ಬೌದ್ಧಿಕ ಪರಿಕರಗಳ ಈವರೆಗಿನ ಕಾರ್ಯಸಾಧ್ಯತೆ– ಸಾಮರ್ಥ್ಯಗಳನ್ನು ಪುರ್ನಪರಿಶೀಲಿಸಿಕೊಳ್ಳುವ ಕಾಲ. ಬುದ್ಧ, ಪರಮಹಂಸ, ಮದರ್ ಥೆರೇಸಾರಿಂದ ಪಾಠ ಕಲಿಯುವ ಕಾಲ; ತನ್ನ ಸೈದ್ಧಾಂತಿಕ ಒಡಲೊಳಕ್ಕೆ

ಬುದ್ಧ ಹೇಳಿದ 'ಕರುಣಾ'ವನ್ನು ಒಂದು ಕಾರ್ಯಕ್ರಮವಾಗಿ ಅಳವಡಿಸಿಕೊಳ್ಳಬೇಕಾದ ಕಾಲ...' ಲೋಹಿಯಾ ಪ್ರತಿಪಾದಿಸಿದ ಸಮಾಜವಾದ ಈಚಿನ ವರ್ಷಗಳಲ್ಲಿ ತನ್ನ ಗದ್ದಲಕೋರತನದಿಂದಾಗಿ ಹಿನ್ನೆಲೆಗೆ ಸರಿಸಿಕೊಂಡಿದ್ದುಬಿಟ್ಟಿದ್ದ ಆಯಾಮವೊಂದನ್ನು ಕಿಷನ್ ಅಂದು ಮುನ್ನೆಲೆಗೆ ತಂದಿದ್ದರು...

ಅಬ್ಬಿಗೇರಿಯವರು ಈ ಭಾಷಣ ಕೇಳಲಿಲ್ಲ. ಕೇಳಬೇಕಿತ್ತು. ಅವರ ಆಳದ ಬೇಸರ ಸ್ವಲ್ಪವಾದರೂ ನೀಗುತ್ತಿತ್ತು; ಅವರ ಬದುಕಿನಲ್ಲಿ ಸಮಾಜವಾದ ಹೊಸ ರೂಪ ತಾಳಿ ಜನರ ಮಧ್ಯೆ ಅವರಿಂದ ಇನ್ನಷ್ಟು ಮೌಲಿಕ ಕೆಲಸ ಮಾಡಿಸುತ್ತಿತ್ತು; ಇರುವಷ್ಟು ದಿನ ಅವರ ಬದುಕನ್ನು ಇನ್ನಷ್ಟು ಸಹ್ಯ ಮಾಡುತ್ತಿತ್ತು ಎಂದು ಈಗ ನನಗನ್ನಿಸುತ್ತಿದೆ... ಅದೇನೇ ಇರಲಿ, ಬಂದ ಆ ದಿನದ ಸಂಜೆಯೇ ಅವರು ಏನೋ ಅವಸರದಲ್ಲಿದ್ದಂತೆ ಹೊರಟು ನಿಂತರು. ಅವರಿಗೆ ಪ್ರಯಾಣ ಭತ್ಯೆ ಮತ್ತು ಗೌರವ ಧನಗಳನ್ನು ಕೊಡಿಸಿ, ಯಾರದೋ ವಾಹನ ವ್ಯವಸ್ಥೆ ಮಾಡಿಸಿ ಬಸ್ ನಿಲ್ದಾಣಕ್ಕೆ ಕಳಿಸಿಕೊಟ್ಟೆ.

ಅವರನ್ನು ಮತ್ತೆ ನೋಡಲಿಲ್ಲ. ಅವರಂತಹವರನ್ನೂ...

('ನವ ಮಾನವ ಮಾಸಿಕ'ದ ಸೆಪ್ಟಂಬರ್, ೨೦೧೧ರ ಸಂಚಿಕೆಯಲ್ಲಿ ಮತ್ತು ಡಾ.ಎನ್.ಡಿ.ತಿಪ್ಪೇಸ್ವಾಮಿಯವರು ಸಂಪಾದಿಸಿದ 'ಲೋಹಿಯಾ ಮುಟ್ಟಿದ ಚಿಗುರು': ಅಬ್ಬಿಗೇರಿ ವಿರೂಪಾಕ್ಷಪ್ಪ ನೆನಪಿನ ಸಂಪುಟದಲ್ಲಿ ಪ್ರಕಟ)

◇◇◇

೧೬. ವ್ಯರ್ಥ ಹೋರಾಟಗಳ ನಾಯಕ ಬಂಗಾರಪ್ಪ

ಸಾರೆಕೊಪ್ಪ ಬಂಗಾರಪ್ಪ ಇನ್ನಿಲ್ಲವೆಂದರೆ ನಂಬುವುದು ಕಷ್ಟ. ಅವರು ರಾಜ್ಯ ರಾಜಕಾರಣದ ಶಾಶ್ವತ ಪಾತ್ರಧಾರಿ ಎಂಬಂತೆ ತಮ್ಮ ಬದುಕಿನ ಕೊನೇ ದಿನಗಳವರೆಗೂ ಚಿರಯೌವ್ವನದ ಮುದ್ರೆ ಹೊತ್ತೇ ಸಾರ್ವಜನಿಕ ದರ್ಶನ ಮತ್ತು ಹೇಳಿಕೆ ನೀಡುತ್ತಿದ್ದ ಸೊಗಸುಗಾರ ಮತ್ತು ಸರದಾರರಾಗಿದ್ದರು. ಸಮೂಹ ಮಾಧ್ಯಮಗಳು ಅವರ ನಿಧನದ ಸಂದರ್ಭದಲ್ಲಿ ಅವರ ಬಗ್ಗೆ ಬಳಸಿದ 'ವರ್ಣರಂಜಿತ ವ್ಯಕ್ತಿತ್ವ' ಎಂಬುದು ಬಹಳ ಸಲ ಆಗುವಂತೆ ಸವಕಲು ಪ್ರಯೋಗವಾಗದೆ, ಅದರಲ್ಲಿ ಅವರ ಈ ಸೊಗಸುಗಾರಿಕೆ ಮತ್ತು ಸರದಾರಿಕೆ ಎರಡೂ ಸೇರಿ ಅಕ್ಷರಶಃ ನಿಜವಾಗಿತ್ತು. ಅವರು ಕುಗ್ರಾಮವೊಂದರ ಬಡ ಗೇಣಿದಾರನ ಮಗನಾಗಿ ಸಮಾಜವಾದಿ ಚಳುವಳಿಯ ಹಿನ್ನೆಲೆಯಲ್ಲಿ ಬೆಳೆದವರು ಎಂಬುದು ಅವರ ರಾಜಕೀಯ ಜೀವನದ ಈ 'ವರ್ಣರಂಜಕತೆ'ಗೊಂದು ಕುತೂಹಲಕಾರಿ ಆಯಾಮವನ್ನು ಒದಗಿಸುತ್ತದೆ. ಹಾಗೇ ಅವರನ್ನು ಸಮಾಜವಾದಿ ಚಳುವಳಿ ರಾಜ್ಯದಲ್ಲಿ ಕಂಡ ಏಳುಬೀಳುಗಳ ದುರಂತಮಯ ಚರಿತ್ರೆಯ ಒಂದು ರೂಪಕವನ್ನಾಗಿಯೂ ಪ್ರಸ್ತುಪಡಿಸುತ್ತದೆ.

ಬಂಗಾರಪ್ಪ ತಮ್ಮ ರಾಜಕೀಯ ಜೀವನದ ಕೊನೆಯ ದಿನಗಳಲ್ಲಿ ಅದರ ತಾರ್ಕಿಕ ಅಂತ್ಯವೆಂಬಂತೆ ಕಂಡ ಎರಡು ಭಾರಿ ಸೋಲುಗಳ ಹೊರತಾಗಿ ಎಂದೂ ಜನಮನ್ನಣೆಯಿಂದ ವಂಚಿತರಾದವರಲ್ಲ. ಬೇರುಮಟ್ಟದ ಜನಸಂಪರ್ಕ ಪಡೆದಿದ್ದ ಅವರು ತಮ್ಮದೇ ವಿಶಿಷ್ಟ ವೈಯುಕ್ತಿಕ ಶೈಲಿಯಲ್ಲಿ ಆ ಜನಸಂಪರ್ಕವನ್ನು ಭದ್ರ ಮತದಾರ ಕೋಟೆಯನ್ನಾಗಿ ಪರಿವರ್ತಿಸಿಕೊಂಡಿದ್ದರು. ಅದೇನೂ ಅಭಿವೃದ್ಧಿ ಆಧಾರಿತ– ಅವರ ಶಾಸಕತ್ವದ ಅವಧಿಯಲ್ಲಿ ಅವರ ಕ್ಷೇತ್ರ ಸೊರಬ ಹಾಳುಕೊಂಪೆಯಾಗಿಯೇ ಉಳಿದಿತ್ತು– ಅಥವಾ ಕೇವಲ ಜಾತಿ ಆಧಾರಿತ ಕೋಟೆಯಾಗಿರಲಿಲ್ಲ. ಅದು ಅವರ ರಾಜಕೀಯ ಸಂಘಟನಾ ಚಾತುರ್ಯದ ಮತ್ತು ವೈಯುಕ್ತಿಕ ಮಟ್ಟದಲ್ಲಿನ ಅವರ ಸ್ನೇಹಶೀಲತೆಯ ಪರಿಣಾಮ ಮಾತ್ರವಾಗಿತ್ತು. ಹಾಗಾಗಿಯೇ ಅವರು ತಮ್ಮ ರಾಜಕೀಯ ಜೀವನದಲ್ಲಿ ತೊಟ್ಟ ಹಲವು ವೇಷಗಳನ್ನು ಮತ್ತು ಅದರ ಭಾಗವಾಗಿ ಹಾಕಿದ ಹಲವಾರು ತಿಪ್ಪರ ಲಾಗಗಳನ್ನು ಜನ ಸಹಾನುಭೂತಿ ಬೆರೆತ ಕುತೂಹಲದಿಂದಲೇ ನೋಡುತ್ತಾ ಅವರನ್ನು ಪಕ್ಷ ನಿಷ್ಠೆ ಮೀರಿ ತಮ್ಮ ನಾಯಕನನ್ನಾಗಿ

ಒಪ್ಪಿಕೊಂಡಿದ್ದರು. ಇದು ಭಾರತದ ಸಂಸದೀಯ ರಾಜಕಾರಣದ ಕೌತುಕಪೂರ್ಣ ವಿಶಿಷ್ಟತೆ ಹೇಗೋ, ದೊಡ್ಡ ದೌರ್ಬಲ್ಯವೂ ಹೌದೆಂಬುದು ಬಂಗಾರಪ್ಪನವರ ಈ ವರ್ಣರಂಜಿತ ರಾಜಕೀಯ ಜೀವನದ ಆತ್ಯಂತಿಕ ದುರಂತವನ್ನು ಗಮನಿಸಿದರೆ ಗೊತ್ತಾದೀತು. ಸಮಾಜವಾದಿಯಾಗಿ ಅರಂಭವಾದ ಅವರ ರಾಜಕೀಯ ಜೀವನವನ್ನು ಹತ್ತಿರದಿಂದ ಗಮನಿಸುತ್ತಾ ಬಂದವರ ಮನಸ್ಸನ್ನು, ಬರೀ ಇಷ್ಟಕ್ಕಾಗಿ ಬಂಗಾರಪ್ಪ ಇಷ್ಟೆಲ್ಲ ಮಾಡಬೇಕಾಯಿತೇ ಎಂಬ ಪ್ರಶ್ನೆ ಹುಟ್ಟು ಹಾಕುವ ಒಂದು ವಿಚಿತ್ರ ವಿಷಾದ ಮುತ್ತುತ್ತದೆ.

ಬಂಗಾರಪ್ಪ ತಮ್ಮ ೪೫ ವರ್ಷಗಳ ಸಂಸದೀಯ ರಾಜಕಾರಣದಲ್ಲಿ ಅಧಿಕಾರ ಅನುಭವಿಸಿದ್ದು ಸುಮಾರು ನಾಲ್ಕೂವರೆ ವರ್ಷಗಳ ಕಾಲ ಮಾತ್ರ. ಇದನ್ನು ಕೆಲವರು, ಅವರು ಎಂದೂ ಅಧಿಕಾರಕ್ಕಾಗಿ ರಾಜಕಾರಣ ಮಾಡಲಿಲ್ಲ ಎಂಬುದಕ್ಕೆ ಸಾಕ್ಷಿ ಎಂದು ವ್ಯಾಖ್ಯಾನಿಸುತ್ತಾರೆ. ಆದರೆ ಅವರು ಈ ಅಧಿಕಾರಾವಧಿಯ ಹೊರತಾಗಿ ಮಿಕ್ಕ ಅವಧಿಯಲ್ಲಿ ಮಾಡಿದ ರಾಜಕಾರಣದ ವೈಖರಿಯನ್ನು ವಿವರವಾಗಿ ನೋಡಿದರೆ, ಇದೊಂದು ತಪ್ಪು ವ್ಯಾಖ್ಯಾನ ಎಂಬುದು ಗೊತ್ತಾಗುತ್ತದೆ. ಶಾಸನಸಭಾ ಸದಸ್ಯತ್ವದ ಎರಡನೇ ಅವಧಿಯ ಆರಂಭದಲ್ಲೇ– ತಮ್ಮ ನಾಯಕ ಗೋಪಾಲಗೌಡರು ಮರೆಯಾಗುತ್ತಿದ್ದಂತೆ– ತಮಗೆ ರಾಜಕೀಯ ಪ್ರವೇಶ ನೀಡಿದ ಸಮಾಜವಾದಿ ಪಕ್ಷವನ್ನು ವೈಯುಕ್ತಿಕ ಹಿರಿಮೆಯನ್ನು ಮುಂದೊಡ್ಡಿ ತೊರೆದ ಬಂಗಾರಪ್ಪ ಆನಂತರ ಕಟ್ಟಿದ, ವಿಸರ್ಜಿಸಿದ, ಸೇರಿದ, ಬಿಟ್ಟ ಪಕ್ಷಗಳಿಗೆ ಲೆಕ್ಕವೇ ಇಲ್ಲ. ಮೊದಲ ಪಕ್ಷಾಂತರದಿಂದ ಹಿಡಿದು ಕೊನೆಯ ಪಕ್ಷಾಂತರದವರೆಗೂ– ಸುಮಾರು ಹನ್ನೆರಡಕ್ಕೂ ಹೆಚ್ಚು ಬಾರಿ– ಅವರು ಇದನ್ನೆಲ್ಲ ಮಾಡಿದ್ದು ಸ್ವಯಂ ಪ್ರಾಮುಖ್ಯತೆಯ ವ್ಯಸನದಲ್ಲಿಯೇ. ತಮ್ಮನ್ನು ಗುರುತಿಸಿ ಅಧಿಕಾರ ನೀಡಿದ ದೇವರಾಜ ಅರಸರನ್ನು ನಡುನೀರಿನಲ್ಲಿ ಕೈಬಿಟ್ಟು ತಾವೊಮ್ಮೆ ಹೀನಾಮಾನ ದೂಷಿಸಿದ್ದ ಇಂದಿರಾ ಗಾಂಧಿ ಬಣ ಸೇರಿಕೊಂಡದ್ದು ಮತ್ತು ತಮಗೆ ಮಂತ್ರಿಗಿರಿ, ಮುಖ್ಯಮಂತ್ರಿಗಿರಿ, ಪಕ್ಷದ ಅಧ್ಯಕ್ಷ ಸ್ಥಾನ ಮತ್ತು ವಿರೋಧ ಪಕ್ಷದ ನಾಯಕನ ಸ್ಥಾನ ಹೀಗೆ ಎಲ್ಲವನ್ನೂ ನೀಡಿದ ಕಾಂಗ್ರೆಸ್ ಪಕ್ಷವನ್ನು ವೈಯುಕ್ತಿಕ ಹತಾಶೆಯಲ್ಲಿ ನಿರ್ನಾಮ ಮಾಡುವ ಪಣ ತೊಟ್ಟು ಬಿಜೆಪಿ ಸೇರಿದ್ದು ಅವರ ರಾಜಕೀಯ ಜೀವನದ ಪಾತಾಳ ಬಿಂದುಗಳು.

ಅಧಿಕಾರದಲ್ಲಿದ್ದಾಗ ಒಳ್ಳೆಯ ಮತ್ತು ಜನಪರ ಆಡಳಿತಗಾರರೆನಿಸಿಕೊಂಡಿದ್ದರೂ, ಪಕ್ಷವೊಂದರ ಶಿಸ್ತಿಗೆ ಬದ್ಧರಾಗದ ಅವರ ವೈಯುಕ್ತಿಕ ಶೈಲಿಯ ರಾಜಕಾರಣ ಅವರನ್ನು ಹೆಚ್ಚೆಚ್ಚು ಹಠಮಾರಿ, ಠೇಂಕಾರದ ಮತ್ತು ಸೇಡಿನ ರಾಜಕಾರಣಿಯನ್ನಾಗಿ ಮಾಡುತ್ತಾ ಹೋಗಿ ಕೊನೆಯಲ್ಲಿ ಅವರನ್ನು ಸಂಪೂರ್ಣವಾಗಿ ದಾರಿ ತಪ್ಪಿಸಿ ಒಂದಾದರಮೇಲೊಂದರಂತೆ ಎರಡು ಭಾರಿ ಸೋಲುಗಳಿಗೆ– ಅದರಲ್ಲೂ ಒಂದು, ಬಚ್ಚಾ ರಾಜಕಾರಣಿಯೊಬ್ಬರ ಎದುರು– ಅವರನ್ನು ತುತ್ತಾಗಿಸುವಂತೆ ಮಾಡಿತು. ಜನರ ಸಹನೆಯ ಕಟ್ಟೆ ಒಡೆದಿತ್ತು. ಅದನ್ನು ಅವರು ಅರಿಯುವ ಹೊತ್ತಿಗೆ ಎಲ್ಲಕ್ಕೂ ತಡವಾಗಿತ್ತು. ಅಲ್ಲಿಂದಾಚೆಗೆ ಅವರು ಚೇತರಿಸಿಕೊಳ್ಳಲೇ

ಆಗಲಿಲ್ಲ. ಇದೆಲ್ಲದರ ಸಂಚಿತ ಪರಿಣಾಮವಾಗಿ ಅವರ ಕುಟುಂಬ ರಾಜಕಾರಣವೂ ಬಿರುಗಾಳಿಗೆ ಸಿಕ್ಕ ಹಡಗಿನಂತಾಗಿ, ಅವರು ಕೊನೆಯಲ್ಲಿ ಇನ್ನೊಬ್ಬರ– ಹಿಂದೊಮ್ಮೆ ತಮ್ಮ ರಾಜಕೀಯ ಶತ್ರುವೆನಿಸಿದ್ದ– ಕುಟುಂಬ ರಾಜಕಾರಣದ ಏಳಿಗೆಗೆ ಬದ್ಧತೆಯನ್ನು ಘೋಷಿಸುವ ಸ್ಥಿತಿ ತಲುಪುವಂತಾಯಿತು!

ಬಂಗಾರಪ್ಪನವರ ಈ ದಿಕ್ಕು ತಪ್ಪಿದ ವೈಯುಕ್ತಿಕ ನೆಲೆಯ ರಾಜಕಾರಣ ಹೆಚ್ಚು ದುರಂತಮಯ ಎನ್ನಿಸುವುದು ಅವರು ಗೋಪಾಲಗೌಡರ ಸ್ಫೂರ್ತಿಯಲ್ಲಿ ಸಮಾಜವಾದಿಯಾಗಿ ತಮ್ಮ ರಾಜಕಾರಣವನ್ನು ಅರಂಭಿಸಿದವರು ಎಂಬ ಸಂಗತಿಯ ಹಿನ್ನೆಲೆಯಲ್ಲಿ. ಪ್ರಭುತ್ವದ ನಿರ್ಲಕ್ಷ್ಯಕ್ಕೆ ಒಳಗಾಗಿದ್ದ ಸಮುದಾಯದಿಂದ ಮತ್ತು ಸಮಾಜವಾದಿ ಆಂದೋಲನದ ಹೊಸ ಹುರುಪಿನ ಅಲೆಯ ಮೇಲೆ ಜನ ನಾಯಕರಾಗಿ ತೇಲಿಬಂದ ಬಂಗಾರಪ್ಪ ಮತ್ತು ಅವರ ಗೆಳೆಯರು ಪ್ರಭುತ್ವದ ಮೊದಲ ಹಂತಹ ಅಧಿಕಾರದ ರುಚಿಗೇ ಬಲಿಯಾದವರಂತೆ, ಸಮಾಜವಾದವನ್ನೇ, ಅದರ ರಾಜಕೀಯ ಸಮಗ್ರತೆಯನ್ನೇ ಮರೆತು ತಮ್ಮ ವೈಯುಕ್ತಿಕ ರಾಜಕೀಯ ಉಳಿವನ್ನೇ, ಉನ್ನತಿಯನ್ನೇ ಮುಖ್ಯ ಮಾಡಿಕೊಂಡರಲ್ಲಾ ಏಕೆ? ಅಂತಿಮವಾಗಿ ಗೆಲ್ಲಬೇಕಾದ್ದು, ಅಧಿಕಾರ ನಡೆಸಬೇಕಾದ್ದು ಸಮಾಜವಾದವೇ ಹೊರತು, ವೈಯುಕಿಕವಾಗಿ ತಾವಲ್ಲ ಎಂಬ ಸಮಾಜವಾದಿ ರಾಜಕಾರಣದ ಪ್ರಾಥಮಿಕ ಪಾಠಕ್ಕೇ ಇವರು ಮತ್ತು ಇವರ ಗೆಳೆಯರು ಎರವಾಗುತ್ತಾ ಹೋದರಲ್ಲಾ ಏಕೆ? ಇದನ್ನೆಲ್ಲ ವೈಯುಕ್ತಿಕ ದೌರ್ಬಲ್ಯಗಳೆಂದು ಸುಲಭವಾಗಿ ತಳ್ಳಿಹಾಕುವುದು ಬೇಜವಾಬ್ದಾರಿ ರಾಜಕೀಯ ವಿಶ್ಲೇಷಣೆಯಾದೀತು. ಸಮಾಜವಾದಿ ರಾಜಕಾರಣವನ್ನು ಹೊಸ ಕಾಲದ ಸವಾಲುಗಳ ಎದುರಿಗೆ ಪುನರ್ಪ್ರಸ್ತುಪಡಿಸಬೇಕಾದ ಈ ಹೊತ್ತಿನಲ್ಲಿ ಬಂಗಾರಪ್ಪನವರ ರಾಜಕಾರಣ ಎತ್ತುವ ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವುದು ಅನಿವಾರ್ಯವಾಗಿದೆ.

ಬಂಗಾರಪ್ಪ ಹಾಗೂ ಅವರ ಹಾಗೆ ಶೋಷಿತ, ಕೆಳ ಎಂದು ಹೇಳಲಾಗುವ ಜಾತಿಗಳಿಂದ ಬಂದ ನಾಯಕರ ರಾಜಕಾರಣ ನೋಡಿದಾಗ, ಜಾತಿ ವ್ಯವಸ್ಥೆ ಮತ್ತು ಜಾತಿ ವಿನಾಶ ಕುರಿತ ನಮ್ಮ ಪುರಾತನ ಸಮಾಜವಾದಿ ನಿಲುವು– ನೀತಿಗಳಲ್ಲಿ ತೀವ್ರ ಬದಲಾವಣೆಯ ಅಗತ್ಯ ನಮಗೆ ಕಾಣದಿರದು. ಕೆಳ ಜಾತಿಗಳ ನಾಯಕರು ಪ್ರಭುತ್ವದಲ್ಲಿ ಒಂದಿಷ್ಟು ಜಾಗ ಸಿಕ್ಕೊಡನೆ ಮಧ್ಯಮ ಜಾತಿಗಳ ಎಲ್ಲ 'ಗೌಡಿಕೆ' ಲಕ್ಷಣಗಳನ್ನು ಪಡೆದುಕೊಂಡು ಬಿಡುವುದನ್ನು ನಾವು ಇಂದು ರಾಷ್ಟ್ರವ್ಯಾಪಿ ವಿದ್ಯಮಾನವಾಗಿ ನೋಡುತ್ತಿದ್ದೇವೆ. ಈ ದೃಷ್ಟಿಯಿಂದ ನಮ್ಮ ಜಾತಿ ವ್ಯವಸ್ಥೆಯಲ್ಲಿ ಇರುವುದು ನಿಜವಾಗಿ ಮೂರೇ ಶ್ರೇಣಿಗಳೆಂದು ನಮಗೆ ಗೊತ್ತಾಗಬೇಕು. ಒಂದು ಅಸ್ಪೃಶ್ಯ, ಎರಡು ಮಧ್ಯಮ ಮತ್ತು ಮೂರು ಮೇಲು ಜಾತಿ. ಮಿಕ್ಕವೆಲ್ಲ ಸಂಚಾರಿ ಶ್ರೇಣಿಗಳು. ಲೋಹಿಯಾ, ಕೆಳಜಾತಿಗಳು ಒಂದಿಷ್ಟು 'ಚೇತನ' ಪಡೆದೊಡನೆ ಮೇಲ್ಜಾತಿಗಳನ್ನು ಅನುಕರಿಸುವ ಅಪಾಯದ ಬಗ್ಗೆ ಎಚ್ಚರಿಸಿದ್ದರು. ಆದರೆ ಅವು ಹೀಗೆ ಮಧ್ಯಮ ಜಾತಿಗಳನ್ನು ಅನುಕರಿಸುವುದಿರಲಿ, ಅದೇ ಆಗಿಬಿಡುವ ಈ ಅಪಾಯ ಸಮಾಜವಾದ ಪ್ರತಿಪಾದಿಸಿದ

ಜಾತಿವಿನಾಶದ ರಾಜಕಾರಣದ ಕಲ್ಪನೆಯನ್ನೇ ಬುಡಮೇಲುಗೊಳಿಸುವಂತಿದೆ. ಒರಿಯ ರಾಜಕೀಯ ಚಿಂತಕ ಮತ್ತು ನಮ್ಮ ತಲೆಮಾರಿನ ಸಮಾಜವಾದಿ ಗುರು ಕಿಷನ್ ಪಟ್ನಾಯಕ್ ಪ್ರಕಾರ, ಬಿಜೆಪಿಯವರಂತೆ ಸಮಾಜವಾದಿಗಳು ಅಧಿಕಾರಕ್ಕಾಗಿ ಕಾಯದೆ ಹುಡುಕಿಕೊಂಡು ಹೋದರು; ಆ ಅವಸರದ ಹಾದಿಯಲ್ಲಿ ಸಮಾಜವಾದವನ್ನೇ ಕಳೆದುಕೊಂಡರು. ಇದರ ಮೂಲ ಕಾರಣವನ್ನು ಬಂಗಾರಪ್ಪ ಮತ್ತವರ ತಲೆಮಾರಿನವರು ಪ್ರತಿನಿಧಿಸುವ ಶೂದ್ರ ರಾಜಕಾರಣದ ಮೂಲಕ ಬುಡಮೇಲುಗೊಂಡ ಸಮಾಜವಾದಿ ಜಾತಿನೀತಿಯಲ್ಲಿ ಗುರುತಿಸಬಹುದೇ? ಚರ್ಚೆಗೆ ಅವಕಾಶವಿದೆ.

('ನವ ಮಾನವ ಮಾಸಿಕ'ದ ಫೆಬ್ರುವರಿ– ೨೦೧೨ರ ಸಂಚಿಕೆಯಲ್ಲಿ ಪ್ರಕಟಿತ)

✧✧✧

೧೭. ಕೆ. ರಾಮದಾಸ್ : ಕೆಲ ಕಹಿ ನೆನಪುಗಳು...

ಸಮಾಜವಾದಿ ಕಾರ್ಯಕರ್ತರಾಗಿ, ಸಮಾಜವಾದಿ ಆಂದೋಲನ ಹಿನ್ನೆಲೆಗೆ ಸರದಾದ ನಂತರ ನಂತರ ಸಾಮಾಜಿಕ ಹೋರಾಟಗಾರರೆಂದೆನಿಸಿಕೊಂಡಿದ್ದ ಕೆ. ರಾಮದಾಸ್ ಅವರು ನಿಧನರಾಗಿ (ಜೂನ್ ೧೯) ಐದು ವರ್ಷಗಳಾದ ನಂತರ ಅವರ ನೆನಪಿನ ಸಂಪುಟವೊಂದು ಬಿಡುಗಡೆಯಾಗುತ್ತಿದ್ದು (ಸದರಿ ಲೇಖಕ ಅದರ ಸಂಪಾದಕರಲ್ಲೊಬ್ಬ), ಈ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ/ವಿಚಾರ ಸಂಕಿರಣ ನಡೆದಿವೆ. ಹಾಗೇ ವಿವಿಧ ಮಾಧ್ಯಮ/ವೇದಿಕೆಗಳಲ್ಲಿ ಅವರ ವ್ಯಕ್ತಿತ್ವ/ಕೊಡುಗೆಗಳನ್ನು ಕುರಿತಂತೆ ವಿಶೇಷ ಲೇಖನಗಳೂ, ಅವುಗಳಿಗೆ ಅವರ ದೂರದ ಅಭಿಮಾನಿ ಗಳಿಂದ ನೆನಪಿನ ಉಮ್ಮಳಿಕೆಯ ಪ್ರತಿಕ್ರಿಯೆಗಳೂ ಪ್ರಕಟವಾಗುತ್ತಿವೆ. ರಾಮದಾಸ್ ಇವೆಲ್ಲಕ್ಕೂ ಅರ್ಹರೂ ಹೌದು, ಬಾಧ್ಯರೂ ಹೌದು. ಹಾಗೇ, ಕರ್ನಾಟಕದ ಇವೊತ್ತಿನ ಸಾಮಾಜಿಕ– ಸಾಂಸ್ಕೃತಿಕ– ರಾಜಕೀಯ ಸಂದರ್ಭದಲ್ಲಿ ಈಗ ರಾಮದಾಸ್ (ಜೊತೆಗೆ ಲಂಕೇಶ್, ತೇಜಸ್ವಿ, ಎಂಡಿಎನ್) ಇದ್ದರೆ ಅದರ ಖದರೇ ಬೇರೆ ಇರುತ್ತಿತ್ತು ಎಂದು ಎಷ್ಟು ಬಾರಿ ನಮಗೆಲ್ಲ ಅನ್ನಿಸಿಲ್ಲ? ಅದರ ಹಿಂದೆಯೇ, ಅವರನ್ನು ಆಪ್ತವಾಗಿ ಬಲ್ಲವರಿಗೆ, ಈ ಎಲ್ಲರೂ ಜೊತೆಯಾಗಿ ಇರಲಾಗದ್ದಕ್ಕೇ ಅವರು ಅಷ್ಟು ಬೇಗ ಈ ಲೋಕದಿಂದ ನಿರ್ಗಮಿಸಬೇಕಾಯಿತೇನೋ ಮತ್ತು ಹಾಗೆ ಒಟ್ಟಿಗೆ ಇರಲಾಗದ ಅವರ ವ್ಯಕ್ತಿತ್ವ ದೌರ್ಬಲ್ಯಗಳಿಂದಾಗಿಯೇ ಇಂದು ಕರ್ನಾಟಕದಲ್ಲಿ ಈ ಪರಿಸ್ಥಿತಿ ಉಂಟಾಗಿದೆ ಯೇನೋ ಎಂದೂ ಅನ್ನಿಸದಿರದು.

ಕಳೆದ ಜೂನ್ ೧೯ (೨೦೧೧)ರಂದು ನಾವು ಕೆಲವು ಗೆಳೆಯರು ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನದ ಆಶ್ರಯದಲ್ಲಿ ಶಿವಮೊಗ್ಗದಲ್ಲಿ ಏರ್ಪಡಿಸಿದ್ದ ಜಾತಿ ವಿರೋಧಿ ಸಮ್ಮೇಳನ ಹಾಗೂ ಅದರ ಅಂಗವಾಗಿ ಆಯೋಜಿಸಲಾಗಿದ್ದ ಅಂತರ್ಜಾತೀಯ ವಿವಾಹಿತರ ಸಮಾವೇಶದಲ್ಲಿ ಭಾಗವಹಿಸಲು ಬಂದಿದ್ದ ರಾಮದಾಸ್ ಅವರ ಮಗಳು ಸ್ನೇಹಾ ಮತ್ತು ಅಳಿಯ ಓಂಕಾರ್, ಅಂದು ರಾಮದಾಸ್ ಅವರ ನಿಧನದ ನಾಲ್ಕನೇ ವರ್ಷಾಚರಣೆಯ ದಿನವೂ ಆಗಿದೆ ಎಂದು ಹೇಳಿದಾಗ, ಆಕಸ್ಮಿಕವಾಗಿಯಾದರೂ ನಾವು ನಮ್ಮ ಈ ಹಿರಿಯ ಗೆಳೆಯನಿಗೆ ನಮ್ಮ ಈ ಕಾರ್ಯಕ್ರಮಗಳ ಮೂಲಕ ಅರ್ಥಪೂರ್ಣ ಶ್ರದ್ಧಾಂಜಲಿ ಸಲ್ಲಿಸುತ್ತಿರುವ ಬಗ್ಗೆ ಹೆಮ್ಮೆಯೆನಿಸಿತು.

ಅದೇನೇ ಇರಲಿ, ರಾಮದಾಸ್ ನಿಧನರಾದ ಐದು ವರ್ಷಗಳ ನಂತರವಾದರೂ, ಅವರನ್ನು ಹತ್ತಿರದಿಂದ ಬಲ್ಲವರು ಈಗಲೂ ಬರೀ ಭಟ್ಟಂಗಿತನವನ್ನು ಪ್ರದರ್ಶಿಸದೆ ಅವರ ಒಟ್ಟು ವ್ಯಕ್ತಿತ್ವವನ್ನು ಅವರೆಲ್ಲ ಶಕ್ತಿ ದೌರ್ಬಲ್ಯಗಳೊಂದಿಗೆ ಅರ್ಥ ಮಾಡಿಕೊಳ್ಳುವ, ಹೊಸ ತಲೆಮಾರಿಗೆ ಪ್ರಸ್ತುತಪಡಿಸುವ ಜವಾಬ್ದಾರಿಯನ್ನು ನಿರ್ವಹಿಸಬೇಕು ಎಂದು ನನಗನ್ನಿಸುತ್ತಿದೆ. ಗೆಳೆಯರು, ಆಪ್ತರು ನಿಧನರಾದ ನಂತರ ಅವರನ್ನು, ತಾವು ಪ್ರತಿಪಾದಿಸುತ್ತಿರುವ ಸಾಂಸ್ಕೃತಿಕ ರಾಜಕಾರಣದ (ಈ ಶಬ್ದವನ್ನು ನಾನು ಅದರ ಒಳ್ಳೆಯ ಅರ್ಥದಲ್ಲಿ ಬಳಸುತ್ತಿರುವೆ) ತಮ್ಮ ಹೆಜ್ಜೆಗಳನ್ನು ಸಮರ್ಥಿಸಿಕೊಳ್ಳಲು ದಂತ ಕಥೆಯಾಗಿಸುವ ವಿದ್ಯಮಾನ ನಮ್ಮ ಅತಿ ಇತ್ತೀಚಿನ ಸಾಂಸ್ಕೃತಿಕ ಇತಿಹಾಸದಲ್ಲಿ ಹೊಸದೇನಲ್ಲ. ಆದರೆ ಒಬ್ಬ ವ್ಯಕ್ತಿ ನಿಧನರಾದ ದುಃಖ ತೀರಿದ ಮೇಲಾದರೂ, ಅವರನ್ನು ಅವರಿದ್ದ ಹಾಗೆ, ಅವರ ಎಲ್ಲ ಇತಿ- ಮಿತಿಗಳೊಂದಿಗೆ ಪ್ರಸ್ತುತಪಡಿಸುವುದು, ಅವರು ಸೇರಿದ ಅಥವಾ ಕೊಡುಗೆ ನೀಡಿದ ಪರಂಪರೆಯನ್ನು ಮುಂದಿನ ಪೀಳಿಗೆಯನ್ನು ರೂಪಿಸಬಯಸುವ ಗೆಳೆಯರ ಜವಾಬ್ದಾರಿಯಾಗಬೇಕು.

ಹಾಗೆ ನೋಡಿದಾಗ ರಾಮದಾಸ್ ಅವರಲ್ಲಿ ಸಾಮಾನ್ಯ ಮನುಷ್ಯನ ಎಲ್ಲ ಶಕ್ತಿಗಳಂತೆಯೇ, ದೌರ್ಬಲ್ಯಗಳೂ ಇದ್ದವು ಎಂಬುದನ್ನು ಇಲ್ಲಿ ದಾಖಲಿಸಲೇಬೇಕು. ಇತ್ತೀಚಿಗೆ ನಾನು ನೋಡಿದ ಒಂದು ಅಂತರ್ಜಾಲ ತಾಣದಲ್ಲಿ ಪ್ರಕಟವಾಗಿರುವ ಅಂಕಣದಲ್ಲಿ (ಇದು ಹಳೆಯ ಲೇಖನವೊಂದರ ಮರುಪ್ರಕಟಣೆ ಇರಬಹುದು) ನಟರಾಜ್ ಹುಳಿಯಾರ್ ಅವರು ಬರೆದಿರುವಂತೆ, ಲೋಹಿಯಾ ತಾತ್ವಿಕತೆ ಕುರಿತ ಅವರ ಬದ್ಧತೆ ಪ್ರಶ್ನಾತೀತವಾಗಿತ್ತು. ಅವರು ಯಾವ ಕುಂಟು ನೆವವನ್ನೂ ನೀಡದೆ, ಯಾವ ಆಮಿಷಗಳಿಗೇ ಒಳಗಾಗದೆ, ಮೈಸೂರಿನ ತಮ್ಮ ಎಲ್ಲ ಬಹುಪಾಲು ಸಮಾಜವಾದಿ ಗೆಳೆಯರಂತೆಯೇ ತಮ್ಮ ಮಗಳನ್ನು ಶಾಲಾ ಶಿಕ್ಷಣ ಮುಗಿಯುವವರೆಗೂ ಮಾತೃಭಾಷಾ ಮಾಧ್ಯಮದಲ್ಲೇ ಓದಿಸಿದರು. (ಈಗವರ ಮಗಳು ಸ್ನೇಹಾ ಇಂಗ್ಲಿಷ್ ಉಪನ್ಯಾಸಕಿ!) ಅವರು ನಿಧನರಾಗುವ ಸ್ವಲ್ಪ ಮುನ್ನ ಸರ್ಕಾರಿ ಶಾಲೆಗಳಲ್ಲಿ ಒಂದನೇ ತರಗತಿಯಿಂದಲೇ ಇಂಗ್ಲಿಷ್ ಕಲಿಸುವ ಅಧಿಕೃತ ನಿರ್ಧಾರ ಪ್ರಕಟವಾದಾಗ, ಅದನ್ನು ತೀವ್ರವಾಗಿ ಪ್ರತಿಭಟಿಸಿದರು. ಅವರ ಕೆಲವು ಲೋಹಿಯಾವಾದಿ ಮಿತ್ರರೇ ಈ ಸರ್ಕಾರಿ ಕ್ರಮವನ್ನು ಬೆಂಬಲಿಸತೊಡಗಿ ಇವರ ಮೇಲೆ ಪ್ರಭಾವ ಬೀರತೊಡಗಿದಾಗಲೂ ಅವರು ಜಗ್ಗಲಿಲ್ಲ. ನನ್ನಂತಹ ಕೆಲವರ ಅಭಿಪ್ರಾಯದಂತೆಯೇ, ಈ ಕ್ರಮ ಇಂಗ್ಲಿಷ್ ಮಾಧ್ಯಮ ಶಾಲೆಗಳ ಆರಂಭಕ್ಕೆ ಮತ್ತು ಕನ್ನಡ ಮಾಧ್ಯಮ ಶಾಲೆಗಳ ನಿರ್ನಾಮಕ್ಕೆ ಸರ್ಕಾರ (ಜಾಗತೀಕರಣವಾದಿಗಳ ಒತ್ತಡ ಮತ್ತು ಆಮಿಷಗಳಿಗೆ ಬಲಿಯಾಗಿ) ಬರೆಯತೊಡಗಿರುವ ಮುನ್ನುಡಿ ಮಾತ್ರ ಎಂದು ಊಹಿಸಬಲ್ಲಷ್ಟು, ಜಾಗತೀಕರಣವಾದಿಗಳ ರಾಜಕಾರಣವನ್ನು ಅರಿಯಬಲ್ಲ ಆಳದ ಸಮಾಜವಾದಿ ತಿಳುವಳಿಕೆಯನ್ನು ಅವರು ಹೊಂದಿದವರಾಗಿದ್ದರು. ನಮ್ಮಂತಹವರ ಹಾಗೂ ನಮಗೆ ಜೊತೆ ನೀಡಿದ ರಾಮದಾಸರ ಆತಂಕ ಇಂದು ನಿಜವಾಗತೊಡಗಿದೆ...

ದೇನೇ ಇರಲಿ, ಕೆಲವು ಲೋಹಿಯಾವಾದಿಗಳು ಸಾಮಾಜಿಕ ನ್ಯಾಯ ಕಲ್ಪನೆಯನ್ನು ಜಾತಿ ಮೀಸಲಾತಿಗಷ್ಟೇ ಕುಬ್ಜಗೊಳಿಸಿ ಜನಸಂಖ್ಯಾಧಾರಿತ ಮೀಸಲಾತಿಯ ಪ್ರತಿಪಾದನೆ ಮಾಡತೊಡಗಿದಾಗ, ರಾಮದಾಸ್ ನಿರ್ದಾಕ್ಷಿಣ್ಯವಾಗಿ ಅದನ್ನು ಖಂಡಿಸಿದರು. ಕೆಲವು ಲೋಹಿಯಾವಾದಿಗಳ ವ್ಯಸನವೇ ಆಗಿಬಿಟ್ಟಿರುವ ಸಪಾಟಾದ ಬ್ರಾಹ್ಮಣ ನಿಂದನೆ ಮತ್ತು ಶೂದ್ರ ಹೆಮ್ಮೆ ಅವರ ಹತ್ತಿರ ಎಂದೂ ಸುಳಿಯಲಿಲ್ಲ. ಅವರು ಜಾತಿ ಪದ್ಧತಿಯ ವಿರೋಧಿಯಾಗಿದ್ದರು ಮತ್ತು ಜಾತಿಯನ್ನಷ್ಟೇ ನೋಡದೆ ತನ್ನ ಸುತ್ತಲಿನ ಸಮಾಜದ ಸರಿ ತಪ್ಪುಗಳ ವಿಶ್ಲೇಷಣೆ ಮಾಡುವ ಸಮತೋಲನವನ್ನು ಪಡೆದಿದ್ದರು. ಅವರು ಎಂದಿಗೂ ತಮ್ಮ ಜಾತಿ ಯಾವುದೆಂದು ಯಾರ ಬಳಿಯೂ ಹೇಳಿಕೊಳ್ಳಲಿಲ್ಲ. ಅನ್ಯಾಯ ಕಂಡೊಡನೆ ಪ್ರತಿಭಟಿಸದಿರುವುದು, ಅನ್ಯಾಯದಲ್ಲಿ ಪಾಲ್ಗೊಂಡಂತೆಯೇ ಎಂಬ ಲೋಹಿಯಾರ ಮಾತನ್ನು ಅಕ್ಷರಶಃ ನಂಬಿದವರು ಅವರು. ಇದರಿಂದಾಗಿ ಅವರು ಎದುರಿಸಿದ ಕಷ್ಟ ನಷ್ಟಗಳಿಗೆ ಲೆಕ್ಕವಿಲ್ಲ. ಅವರು ತಮ್ಮ ಆಪ್ತ ಗೆಳೆಯರಿಗೆ (ಇದರಲ್ಲಿ ನಾನೂ ಸೇರಿದ್ದೆನೆಂಬುದು ನನ್ನ ಹೆಮ್ಮೆಯೂ ಹೌದು.) ತಮ್ಮ ಮನೆಯಲ್ಲಿ ಉಪಚಾರ ನೀಡುವುದರಲ್ಲಿ ಹಾಗೂ ಸಂಜೆಯ 'ಪಾರ್ಟಿ' ಕೊಡಿಸುವುದರಲ್ಲಿ ಬಹು ಉದಾರಿಗಳು.

ಆದರೆ ರಾಮದಾಸ್ ಅನೇಕ ದೌರ್ಬಲ್ಯಗಳನ್ನೂ ಹೊಂದಿದ್ದರು. ಈಗಲಾದರೂ ಅವುಗಳನ್ನು ನೆನಪಿಸಿಕೊಳ್ಳದೆ ಅವರ ಚಿತ್ರವನ್ನು ಕಟ್ಟಿಕೊಡುವುದು ಅವರ ಗೆಳೆತನಕ್ಕೆ ಅನ್ಯಾಯ ಮಾಡಿದಂತೆ. ಹಾಗೇ, ಅವರು ನಂಬಿದ್ದ ಲೋಹಿಯಾ ತಾತ್ವಿಕ ಪರಂಪರೆಯ ಇತಿಹಾಸಕ್ಕೂ. ಅವರು ಉಗ್ರ ಕೋಪಿಷ್ಠರೆಂದು ಪ್ರಸಿದ್ಧರು. ಅವರ ಈ ಉಗ್ರ ಕೋಪಿಷ್ಠತನವನ್ನು ಅವರ ಪ್ರತಿಭಟನೆಯ ವ್ಯಕ್ತಿತ್ವಕ್ಕೆ ಹೊಂದಿಸಿ ಕೆಲವು ಗೆಳೆಯರು ಅದನ್ನು ವೈಭವಿಕರಿಸುವುದೂ ಉಂಟು. ಆದರೆ ಅವರ ಕೋಪ ಅರ್ಧ ತಾತ್ವಿಕ ಮೂಲದಿಂದ ಬಂದಿದ್ದರೆ ಇನ್ನರ್ಧ ವೈಯುಕ್ತಿಕ ಅಹಂಕಾರ ಮೂಲವಾಗಿದ್ದಾಗಿರುತ್ತಿತ್ತು. ಹಾಗಾಗಿ ಅವರ ಕೋಪಕ್ಕೆ ಅಮಾಯಕರೆಲ್ಲ ತುತ್ತಾಗುತ್ತಿದ್ದರು. ಅವರಿಗೆ ವಿಪರೀತ ಕೋಪ ಬಂದಾಗ ಅಥವಾ ಯಾವುದನ್ನಾದರೂ ತೀವ್ರವಾಗಿ ಖಂಡಿಸಬೇಕೆನ್ನಿಸಿದಾಗ ನಮ್ಮೆಲ್ಲ ಆಧುನಿಕ ಊಳಿಗಮಾನ್ಯಶಾಹಿ ಯಜಮಾನರುಗಳಂತೆ, ಇಂಗ್ಲಿಷ್ ನುಡಿಮುತ್ತುಗಳನ್ನೂ, ನುಡಿಗಟ್ಟುಗಳನ್ನೂ ಆವಾಹಿಸಿಕೊಂಡು ತಮ್ಮ ಆವೇಶಕ್ಕೆ ಒಂದು ವರ್ಗ ಪ್ರತಿಷ್ಠೆಯನ್ನು ಒದಗಿಸಿಕೊಳ್ಳುತ್ತಿದ್ದರು! ತಮ್ಮಂತೆ ಬಾಯಿಯಲ್ಲಿ ಕೋಪ ಕಾರದ ಮನುಷ್ಯರ ಬಗ್ಗೆ ಅವರಿಗೆ ಯಾವಾಗಲೂ ಅನುಮಾನ, ತಿರಸ್ಕಾರ! ಅಂತಹವರ ಬಗ್ಗೆ ಅಸಮರ್ಥನೀಯವಾಗಿ ಟೀಕಿಸಲು, ಚುಚ್ಚಲು, ಆರೋಪಿಸಲು ಹಿಂಜರಿಯುತ್ತಿರಲಿಲ್ಲ. ತಮ್ಮನ್ನು ಪ್ರಶ್ನಿಸುವವರೆಗೂ ಕಿರಿಯರನ್ನು ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದ ರಾಮದಾಸ್, ಅವರು ಪ್ರಶ್ನಿಸತೊಡಗಿದರೆಂದರೆ ಅವರನ್ನು ತಕ್ಷಣವೇ ಸಿಟ್ಟಿನಿಂದ ಹೊರದಬ್ಬುತ್ತಿದ್ದರು. ನಂತರ ಪಶ್ಚಾತ್ತಾಪವನ್ನೂ ಪಡುತ್ತಿದ್ದರು! ಅದರೆ ಇದು ಬಹಳ ಬಾರಿ ತುಂಬಾ ತಡವಾಗಿರುತ್ತಿತ್ತು!

ರಾಮದಾಸ್ ತಮ್ಮ ಕೊನೆಯ ದಿನಗಳವರೆಗೆ ಒರಟು ವಿಚಾರವಾದಿಯಾಗಿದ್ದರು. ದೇವರು, ಧರ್ಮ, ಅಧ್ಯಾತ್ಮಿಕತೆ ಎಂಬ ಶಬ್ದಗಳನ್ನು ಕೇಳಿದೊಡನೆ ಸಂದರ್ಭ ನೋಡದೆ ಸಿಡಿದೇಳುತ್ತಿದ್ದರು. ಆ ಶಬ್ದಗಳನ್ನಾಡಿದವರ ಮೇಲೆ ಹರಿಹಾಯುತ್ತಿದ್ದರು. ನಮ್ಮ ಆಧ್ಯಾತ್ಮಿಕ ಪರಂಪರೆಯನ್ನೇ ಸುಲಭವಾಗಿ ಮತ್ತು ಸಾರಾ ಸಗಟಾಗಿ 'ಢೋಂಗಿ' ಎಂದು ಕರೆಯುತ್ತಿದ್ದರು. ಹಾಗಾಗಿ ಸಾಹಿತ್ಯದ ಅಧ್ಯಾಪಕರೂ ಆಗಿದ್ದ ಅವರ ಸಾಹಿತ್ಯ ಮತ್ತು ಸಂಸ್ಕೃತಿ ಗ್ರಹಿಕೆಯ ರೀತಿ ನೀತಿಗಳ ಬಗ್ಗೆ ನನಗೆ ಅನುಮಾನಗಳಿದ್ದವು. (ಇದು ಎಂ.ಡಿ.ಎನ್. ಅವರ ಗರಡಿಯಲ್ಲಿ ತಯಾರಾದ ಸಮಾಜವಾದಿ ಗುಂಪಿಗೆ ಸೇರಿದ ಎಲ್ಲರ ಸಮಸ್ಯೆಯೂ ಆಗಿತ್ತು. ಏಕೆಂದರೆ ಕರ್ನಾಟಕದಲ್ಲಿ ಪೆರಿಯಾರ್‌ವಾದದ ಪ್ರಚಾರಕರೂ ಆಗಿದ್ದ ಎಂಡಿಎನ್, ಧರ್ಮ ಕುರಿತ ಸಮಾಜವಾದದ ಸಂಕೀರ್ಣ ನಿಲುವನ್ನು ಪೆರಿಯಾರ್ ವಿಚಾರವಾದದ ಸರಳೀಕರಣಕ್ಕೆ ಒಳಪಡಿಸಿ ಪ್ರಸುತ್ತಪಡಿಸಿದ್ದರು) ಅದನ್ನು ಅವರಿಗೆ ಹೇಳಿ ಅವರಿಂದ 'ಗೆಟೌಟ್' ಎಂಬ ಆದೇಶಗಳನ್ನೂ ಹಲವು ಬಾರಿ ನಾನು ಪಡೆದಿದ್ದೇನೆ! ಆದರೆ ಅವರ ಶ್ರೀಮತಿಯವರ ಆರೋಗ್ಯ ತೀರಾ ಹದಗೆಟ್ಟಾಗ ಅವರ ಬಂಧುಗಳು ಪ್ರಯತ್ನಿಸಿದ ಕೆಲವು 'ಅವೈಚಾರಿಕ' ಧಾರ್ಮಿಕ ಆಚರಣೆಗಳನ್ನು ರಾಮದಾಸ್ ಮೌನವಾಗಿ ಸಹಿಸಿದರು. ಈ ಸಂಬಂಧ ತಮ್ಮ ಅಸಹಾಯಕತೆಯನ್ನು ನನ್ನ ಮತ್ತು ನನ್ನ ಪತ್ನಿಯ ಬಳಿ ಹೇಳಿಕೊಳ್ಳುತ್ತಿದ್ದುದೂ ಉಂಟು.

ರಾಮದಾಸ್ ಅವರ ಅತಿ ದೊಡ್ಡ ದೌರ್ಬಲ್ಯವೆಂದರೆ, ಎಲ್ಲ ನೈತಿಕತೆಯನ್ನೂ, ಮೌಲ್ಯಗಳನ್ನೂ ತಮ್ಮ ವರ್ತನೆಗಳಿಗೆ ವಿರೋಧವಾಗದಂತೆ 'ಎಡಿಟ್' ಮಾಡಿಕೊಂಡು ಪ್ರಸ್ತುತಪಡಿಸುತ್ತಿದ್ದ ಜಾಣರ ಜಾಣ ಲಂಕೇಶ್ ಎಂಬ ವ್ಯಕ್ತಿತ್ವ. ಎಲ್ಲ ರೀತಿಯ ವ್ಯಕ್ತಿ ಆರಾಧನೆಯನ್ನೂ ಕಟುವಾಗಿ ವಿರೋಧಿಸುತ್ತಿದ್ದ ರಾಮದಾಸ್, ಲಂಕೇಶರ ಬೇಷರತ್ ಬೆಂಬಲಿಗರಷ್ಟೇ ಅಲ್ಲ, ಮುಕ್ತ ಹಾಗೂ ಮುಗ್ಧ ಆರಾಧಕರೂ ಆಗಿದ್ದರು. ತಮಗೆ ಗೌರವಾರ್ಹವೆನಿಸಿದ ಗಣ್ಯರನ್ನು ಅರವತ್ತಕ್ಕೋ ಎಪ್ಪತ್ತಕ್ಕೋ ಸನ್ಮಾನಿಸುವ ಜನರನ್ನು ಕಂಡು ಕೆಂಡ ಕಾರುತ್ತಿದ್ದ ರಾಮದಾಸ್, ಲಂಕೇಶ್ ಅರವತ್ತರ ಆಚರಣೆಯನ್ನು, (ಅನಂತಮೂರ್ತಿಯವರ ಅರವತ್ತರ ಆಚರಣೆಯನ್ನೂ ಸೇರಿಸಿಕೊಂಡು; 'ಅಭಿನಂದನೆ' ಎಂಬ ಹೆಸರು ತೆಗೆದು) ತಾವೇ ಅದರ ನೇತೃತ್ವ ವಹಿಸಿ ನೆರವೇರಿಸಿದರು! ಆದರೆ ನಾವು ಕೆಲವು ಗೆಳೆಯರು ಜಿಎಸ್ಸೆಸ್‌ಗೆ ಎಂಭತ್ತಾದ ಸಂದರ್ಭದಲ್ಲಿ ಅಭಿನಂದನ ಗ್ರಂಥ ಅರ್ಪಿಸಿದಾಗ ಅಭಿನಂದನಾ ಭಾಷಣ ಮಾಡಲು ಖುಷಿಯಿಂದ ಬಂದ ಅವರು, 'ಅಭಿನಂದನೆ' ಎಂಬುದನ್ನೇ ಸಾರ್ವಜನಿಕವಾಗಿ ಗೇಲಿ ಮಾಡಿದರು. ಆದರೆ ಅದೇ ಉಸಿರಿನಲ್ಲಿ, ತಾವು ಮತ್ತು ಲಂಕೇಶ್ ಸೇರಿ ರಾಮಚಂದ್ರ ಶರ್ಮರಿಗೆ ಎಪ್ಪತ್ತರ 'ಅಭಿನಂದನೆ' ಮಾಡಬೇಕೆಂದಿದ್ದನ್ನೂ, ಅಷ್ಟರಲ್ಲಿ ಲಂಕೇಶ್ ನಿಧನರಾಗಿದ್ದರಿಂದಾಗಿ ಅದು ನಿಂತುಹೋದುದನ್ನೂ ದುಃಖದಿಂದ ಹೇಳಿಕೊಂಡರು! (ಇದನ್ನು ಕೇಳಿ ಗಾಬರಿಯಾದ ಅಂದಿನ ಸಮಾರಂಭದ ಇನ್ನೊರ್ವ ಅತಿಥಿಯಾಗಿದ್ದ ದೇವನೂರ ಮಹಾದೇವ ಅವರು, ತಾವು ಸಿದ್ಧಲಿಂಗಯ್ಯನವರ ಬಾಯಿಂದ

ಕೇಳಿದ್ದ 'ರಸಿಕತೆಗೂ ವ್ಯಭಿಚಾರಕ್ಕೂ ಅಂತಹ ವ್ಯತ್ಯಾಸವೇನಿಲ್ಲ; ನನ್ನ ಮಗ ಮಾಡಿದ್ದು ರಸಿಕತೆ, ಪಕ್ಕದ ಮನೆಯವರ ಹುಡುಗ ಮಾಡಿದ್ದ ವ್ಯಭಿಚಾರ ಅಷ್ಟೆ!' ಎಂಬ ಜೋಕನ್ನು ನಮ್ಮೊಂದಿಗೆ ಹಂಚಿಕೊಂಡರು)

ವೈಯುಕ್ತಿಕ ರಾಗ ದ್ವೇಷಗಳಿಗೆ ಹೆಸರಾದ ಲಂಕೇಶ್, ಯಾವುದೋ ಕಾರಣ ಎತ್ತಿಕೊಂಡು ತೇಜಸ್ವಿಯವರ ಚಾರಿತ್ರ್ಯ ಹನನ (ಇದೆಷ್ಟು ಅಸಮರ್ಥನೀಯ ಮತ್ತು ದುರುದ್ದೇಶಪೂರ್ವಕವಾಗಿತ್ತೆಂಬುದನ್ನು ಶ್ರೀಮತಿ ತೇಜಸ್ವಿಯವರು ತಮ್ಮ 'ನನ್ನ ತೇಜಸ್ವಿ' ಪುಸ್ತಕದಲ್ಲಿ ವಿವರಿಸಿದ್ದಾರೆ.) ಶುರು ಮಾಡಿದಾಗ ಇಬ್ಬರಿಗೂ ಆಪ್ತ ಗೆಳೆಯರಾಗಿದ್ದ ರಾಮದಾಸ್ ಸತ್ಯ ತಿಳಿಯುವ ಪ್ರಯತ್ನವನ್ನೇ ಮಾಡದೆ ಮೌನ ವಹಿಸಿದರು. ಅಷ್ಟು ಕುರುಡು ನಿಷ್ಠೆ ಅವರದ್ದು ಲಂಕೇಶರಲ್ಲಿ. ತೇಜಸ್ವಿ ಎಷ್ಟು ಒಂಟಿಯಾಗಿ ನೊಂದರು ಎಂಬ ಪರಿವೆಯೇ ಅವರಿಗೆ ಇದ್ದಂತಿರಲಿಲ್ಲ. ಆದರೆ ಲಂಕೇಶ್ ನಿಧನರಾಗಿ, ತೇಜಸ್ವಿ ತೀವ್ರ ಅಸ್ವಸ್ಥರಾದಾಗ ರಾಮದಾಸ್ ಅವರ ಗೆಳೆತನದ ಕರುಳು ಮಿಡಿಯಿತು. ತೇಜಸ್ವಿ ನಿಧನರಾದಾಗಲಂತೂ ರಾಮ್‌ದಾಸ್ ಬದುಕಿನಲ್ಲಿ ಎಲ್ಲ ಕಳಕೊಂಡಂತೆ ಹತಾಶರಾದರು. ರೋಧಿಸುವುದೊಂದೇ ಬಾಕಿ ಇತ್ತು.

ರಾಮದಾಸ್ ನನ್ನನ್ನು ಅತ್ಯಂತ ದಾರುಣವಾಗಿ ಬೆಚ್ಚಿ ಬೀಳಿಸಿದ್ದು, ಕೆಲವು ವರ್ಷಗಳ ಹಿಂದೆ ನನ್ನ ಕೆಲವು ಗೆಳೆಯರೊಂದಿಗೆ, ನಮ್ಮ ಗುರು ಕಿಷನ್ ಪಟ್ನಾಯಕ್ ಅವರಿಗೆ, ಅವರಿಗೆ ಆಗ ಅತ್ಯಗತ್ಯವಾಗಿದ್ದ ಒಂದು ಹಮ್ಮಿಣಿ ಅರ್ಪಿಸಲು ನಿರ್ಧರಿಸಿದಾಗ ರಾಮದಾಸ್ ನೀಡಿದ ಪ್ರತಿಕ್ರಿಯೆ. ನಮ್ಮ ಪ್ರಯತ್ನವನ್ನು ಅವರು ಎಷ್ಟು ಕ್ರೂರವಾಗಿ ವಿರೋಧಿಸಿದರೆಂದರೆ, ನಮ್ಮೆಲ್ಲರ ಬೆಳವಣಿಗೆಗೆ ಕಿಷನ್‌ರ ಕೊಡುಗೆಯೇನು; ಅದನ್ನೆಲ್ಲ ಅವರು ಎಂತಹ ಜೀವನ ನಡೆಸಿಕೊಂಡು ನಮಗೆ ನೀಡಿದ್ದಾರೆ ಎಂಬುದನ್ನೇ ಮರೆತವರಂತೆ, ಸಮಾಜದಿಂದ ದುಡ್ಡು ಪಡೆದು ಮಾಡುವ ಸಮಾಜ ಸೇವೆ ಢೋಂಗಿ ಎಂದು ಆರ್ಭಟಿಸಿದರು! ಹಮ್ಮಿಣಿ ಸಂಸ್ಕೃತಿಯೇ ಸಮಾಜವಾದಿಗಳ ಘನತೆಗೆ ಅವಮಾನ ಮಾಡುವಂತಹದ್ದು ಎಂದು ವಾದಿಸಿದರು!! ಬಹುಶಃ ಈ ಘನತೆಯನ್ನು ಕಾಪಾಡಿಕೊಳ್ಳಲೆಂದೇ ಕೊನೆ ಕೊನೆಯ ವರ್ಷಗಳಲ್ಲಿ ಅವರು ಸಮಾಜವಾದಿ ಕಾರ್ಯಕ್ರಮಗಳಲ್ಲಿ ಸಾಮಾನ್ಯ ಕಾರ್ಯಕರ್ತ/ಪ್ರತಿನಿಧಿಗಳೊಂದಿಗೆ ಊಟ– ಗೀಟಗಳಿಗೆ ಕೂಡದೆ, ತಮ್ಮ ಅನುಕೂಲಸ್ಥ/ಪ್ರತಿಷ್ಠಿತ ಸಮಾಜವಾದಿ ಗೆಳೆಯರೊಂದಿಗೆ ವಿಶೇಷ ಭೋಜನಗಳಿಗಾಗಿ ಹೊರಗೆ ಹೋಗಿಬಿಡುತ್ತಿದ್ದರು.

ಈ ಹಮ್ಮಿಣಿ ಸಂಗ್ರಹಕ್ಕಾಗಿ, ಆ ಹೊತ್ತಿಗಾಗಲೇ ಅವರ ಸಂಚಾಲಕತ್ವದಲ್ಲಿ ಸ್ಥಾಪಿಸಲಾಗಿದ್ದ ಲೋಹಿಯಾ ಟ್ರಸ್ಟ್ ಖಾತೆಯನ್ನು ಬಳಸಬಹುದೇ ಎಂದು ನಾನು ಕೇಳಿದ ಸೌಲಭ್ಯವನ್ನು ರಾಮದಾಸ್ ಖಂಡತುಂಡವಾಗಿ ನಿರಾಕರಿಸಿದರು. ಟ್ರಸ್ಟಿನ ಇನ್ನೋರ್ವ ಸಂಚಾಲಕ ರಾಜಶೇಖರ ಕೋಟಿಯವರ ಸಂಧಾನದಿಂದಾಗಿ ಈ ಸೌಲಭ್ಯ ದೊರೆಯಿತಾದರೂ, ಶಿವಮೊಗ್ಗದಲ್ಲಿ ಆಯೋಜಿಸಲಾಗಿದ್ದ ಅಧ್ಯಯನ ಶಿಬಿರವೊಂದರ ಸಂದರ್ಭದಲ್ಲಿ

ಕಿಷನ್ ಪಟ್ನಾಯಕರಿಗೆ ಹಮ್ಮಿಣಿ ಅರ್ಪಿಸುವ ದಿನದಂದು ನನ್ನ ಹಲವಾರು ನೆನಪೋಲೆ ಮತ್ತು ದೂರವಾಣಿ ಕರೆಗಳ ಹೊರತಾಗಿಯೂ, ಟ್ರಸ್ಟ್ ಖಾತೆಗೆ ಸಂದಾಯವಾಗಿದ್ದ ಈ ಸಂಬಂಧದ ಹಣವನ್ನು ತರಲು ಅವರು (ಉದ್ದೇಶಪೂರ್ವಕವಾಗಿಯೇ?) ಮರೆತಿದ್ದರು. ಇದಕ್ಕಾಗಿ ಅಂದು ಅವರೊಂದಿಗೆ ನಾನು ಬಹುಶಃ ನನ್ನ ಜೀವನದ ಅತಿ ಕಟುವಾದ, ಬಿರುನುಡಿಗಳ ವಾಗ್ವಾದಕ್ಕೆ ಇಳಿಯಬೇಕಾಯಿತು. ಆದರೂ ಅವರು ಅಂದು ಕಿಷನ್‌ರಿಗೆ ಅಭಿನಂದನಾ ಭಾಷಣ ಮಾಡದೇ ಇರಲಿಲ್ಲ! ರಾಮದಾಸ್ ಅವರ ತಿಕ್ಕಲುತನಕ್ಕೆ ಎಣೆಯೆಂಬುದೇ ಇರಲಿಲ್ಲ! ಈ ಹುಸಿ ಘನತೆ ಮತ್ತು ಎಣೆಯಿಲ್ಲದ ತಿಕ್ಕಲುತನದಿಂದಾಗಿಯೇ, ಅವರು ಪ್ರಧಾನ ಸಂಚಾಲಕರಾಗಿದ್ದ ಈ ರಾಮಮನೋಹರ ಲೋಹಿಯಾ ಟ್ರಸ್ಟ್ ತನ್ನ ಭರ್ಜರಿ ಉದ್ಘಾಟನೆಯ ನಂತರ ಯಾವುದೇ ಮಹತ್ವದ ಮತ್ತು ಕ್ರಿಯಾಶೀಲ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಸಾಧ್ಯವಾಗಲಿಲ್ಲ. ತಮ್ಮ ಬದುಕಿನ ಕೊನೆಯ ದಿನಗಳ ಹೊತ್ತಿಗೆ ತಮ್ಮ ಈ ದೌರ್ಬಲ್ಯದ ಅರಿವು ಅವರಿಗೆ ಆಗತೊಡಗಿತ್ತು. ಅವರು ಕೊನೆಯುಸಿರೆಳೆಯುವ ಹಿಂದಿನ ದಿನ ಇದನ್ನು ನನ್ನೊಂದಿಗೆ ತೋಡಿಕೊಂಡು, ಟ್ರಸ್ಟ್‌ನ ಪುನಾರಚನೆಯ ಮಾತನಾಡಿದ್ದರು.

ಹೀಗೆ ರಾಮದಾಸರ ಕೆಲವೊಮ್ಮೆ ಕ್ರೂರವೆನಿಸುತ್ತಿದ್ದ ತಿಕ್ಕಲುತನದ, ಅಸಂಬದ್ಧ ವರ್ತನೆಗಳ ಹಲವು ಪ್ರಸಂಗಗಳನ್ನು ಹೇಳುತ್ತಾ ಹೋಗಬಹುದು. ಆದರೆ ಇವೆಲ್ಲವನ್ನೂ ರಾಮದಾಸ್‌ರನ್ನು ದುರುದ್ದೇಶಪೂರ್ವಕವಾಗಿ ಟೀಕಿಸಲು, ಸಾರ್ವಜನಿಕ ಜೀವನದ ಸ್ವಚ್ಛತೆಗಾಗಿ ಅವರು ನಡೆಸಿದ ಹೋರಾಟಗಳನ್ನು ಅಲ್ಲಗೆಳೆಯಲು ನಾನು ಬರೆದಿದ್ದೇನೆಂದು ಯಾರಾದರೂ ಭಾವಿಸಿದರೆ, ಅದು ನನ್ನ ಮತ್ತು ರಾಮದಾಸ್ ಅವರ ನಡುವಣ ಸಂಬಂಧದ ವಿಚಿತ್ರ ಮತ್ತು ಸಂಕೀರ್ಣ ನೆಲೆಗಳ ಪರಿಚಯವಿಲ್ಲದವರ (ಏಕೆಂದರೆ ಎಂದೂ, ಎಲ್ಲಿಯೂ ನಾನೂ ಈ ಬಗ್ಗೆ ಹೇಳಿಕೊಂಡಿಲ್ಲ) ಮೋಳು ಮತ್ತು ಭೋಳೆ ಮಾತು ಎಂದು ಅವರಿಗೆ ಹೇಳಬೇಕಾಗುತ್ತದೆ. ಹಾಗೇ, ರಾಮದಾಸ್ ಅವರೊಂದಿಗೆ ಕೌಟುಂಬಿಕ ನೆಲೆಯಲ್ಲಿ ಆಪ್ತವಾಗಿ ಒಡನಾಡದವರಿಗೆ ಗೊತ್ತಿಲ್ಲದ ಅವರ ವ್ಯಕ್ತಿತ್ವದ ಈ ಮಿಶ್ರ ಗುಣವನ್ನೂ ದಾಖಲಿಸದ ಹೊರತು, ಅವರು ನಂಬಿದ್ದ ಸಮಾಜವಾದಿ ಹೋರಾಟದ ಪರಂಪರೆಯನ್ನು–ಮತ್ತೆ ಅವರೇ ಹೇಳುತ್ತಿದ್ದಂತೆ– ವಿಮರ್ಶಾತ್ಮಕವಾಗಿ ಬೆಳೆಸುವ ಕರ್ತವ್ಯದಿಂದ ನಾವು ಚ್ಯುತರಾಗುತ್ತೇವೆ ಎಂಬುದನ್ನೂ.

(೨೦೧೨ರ ಮಾರ್ಚ್)

◇◇◇

೧೮. ಎರಡಂಕಿ ಪ್ರಗತಿಪಥದಲ್ಲಿ ಎದುರಾಗಿರುವ ಪುಂಡು ಕಾಡಾನೆಗಳು!

ಭ್ರಷ್ಟಾಚಾರ ಮತ್ತು ಕಪ್ಪುಹಣದ ವಿರುದ್ಧ ಆಂದೋಲನಗಳು ತಾರಕ ಗತಿ ಮುಟ್ಟುತ್ತಿರುವ ಸಂದರ್ಭದಲ್ಲೇ ಮೈಸೂರು ನಗರಕ್ಕೆ ಆನೆಗಳು ನುಗ್ಗಿ ನಗರದ 'ನಾಗರಿಕ'ರನ್ನು ಭಯಭೀತಗೊಳಿಸಿವೆ. ಅರೇ, ಇವೆರಡಕ್ಕೂ ಯಾವ ಸಂಬಂಧ ಎಂದು ವಿಚಿತ್ರ ರಾಗದಲ್ಲಿ ಆಶ್ಚರ್ಯದ ಧ್ವನಿ ಎತ್ತುವವರೇ ಹೆಚ್ಚೆಂಬುದು ನನಗೆ ಗೊತ್ತು. ಹೇಗೂ ಮುಖ್ಯಮಂತ್ರಿ ಯಡಿಯೂರಪ್ಪನವರೇ, ಆನೆಗಳ ಹಾವಳಿಯನ್ನು ಇನ್ನು ಮುಂದೆ ಗಂಭೀರ ಸಮಸ್ಯೆಯೆಂದು ಪರಿಗಣಿಸುವಾದಾಗಿ ಭರವಸೆ ನೀಡಿದ್ದಾರಲ್ಲವೇ? ಹಾಗೇ ನಮ್ಮ ಅರಣ್ಯ ಮಂತ್ರಿಯವರು ಆನೆಗಳು ನಗರ ಪ್ರವೇಶಿಸದಂತೆ ತಡೆಯಲು ವಿಶೇಷ ಕಾರ್ಯಪಡೆ ರಚಿಸುವುದಾಗಿಯೂ ಘೋಷಿಸಿದ್ದಾ ರಲ್ಲವೇ? ಆದರೆ, ಜನರ ವಿಚಿತ್ರ ರೀತಿಯ ಆಶ್ಚರ್ಯದಂತೆಯೇ ಈ ಇಬ್ಬರ ಈ ಭರವಸೆ ಮತ್ತು ಘೋಷಣೆಗಳೂ ಅಸಂಬದ್ಧ, ಹಾಸ್ಯಾಸ್ಪದ ಎನ್ನದೆ ವಿಧಿಯಿಲ್ಲ.

ಭಯೋತ್ಪಾದಕರ ವಿರುದ್ಧ ಕಟ್ಟೆಚ್ಚರದ ಮಾತಾಯಿತು, ವಿಶೇಷ ಕಮಾಂಡೋ ಪಡೆಗಳ ರಚನೆಯೂ ಆಯಿತು. ಆದರೆ ಭಯೋತ್ಪಾದನೆಯ ಭಯ ಮತ್ತು ಹಾವಳಿ ನಿಂತಿದೆಯೇ? ಈಗ ಆನೆಗಳ ಹಾವಳಿ ವಿರುದ್ಧ ಕಟ್ಟೆಚ್ಚರದ ಮತ್ತು ವಿಶೇಷ ಕಾರ್ಯ ಪಡೆಯ ಮಾತು! ಇದರಿಂದ ಕಾರ್ಯತಃ ಏನಾದರೂ ಪ್ರಯೋಜನವಾದೀತೇ? ಎಲ್ಲ ಕಾಡುಗಳ ಅಥವಾ ನಗರಗಳ ಸುತ್ತ ಹಗಲೂ ರಾತ್ರಿ ಕಾವಲು ಪಡೆಗಳನ್ನು ನಿಯೋಜಿಸಲಾ ಗುವುದೇ? ಅದು ಸಾಧ್ಯವೇ? ಅದೇನೇ ಇರಲಿ, ಜನ ಜೀವನ ಯಾವಾಗಲೂ ಕಟ್ಟೆಚ್ಚರದಲ್ಲೇ, ವಿಶೇಷ ಪಡೆಗಳ ಕಣ್ಗಾವಲಿನಲ್ಲೇ ಇರುವಂತಾಗುವುದು ಯಾವುದೇ ಆರೋಗ್ಯಕರ ಸಮಾಜದ, ಅದೂ ಜಾಗತಿಕ ಶಕ್ತಿಯಾಗುವತ್ತ ಸಮೃದ್ಧವಾಗಿ ಬೆಳೆಯುತ್ತಿದೆ ಯೆಂದು ಹೇಳಲಾಗುವ ನಮ್ಮ ಸಮಾಜದ ಒಳ್ಳೆಯ ಲಕ್ಷಣವೇ?

ಸಮಾಜವಾದಿ ಚಿಂತಕ ಹಾಗೂ ಹೋರಾಟಗಾರ ಡಾ. ರಾಮಮನೋಹರ ಲೋಹಿಯಾ ವಿದೇಶವೊಂದರಲ್ಲಿ ತಮ್ಮ ಸಹವರ್ತಿಗಳೊಂದಿಗೆ ಕಾರಿನಲ್ಲಿ ಪಯಣಿಸುತ್ತಿದ್ದಾಗ ಎಲ್ಲಿಂದಲೋ ಕಣಜವೊಂದು ಹಾರಿ ಬಂದು ಅವರನ್ನೆಲ್ಲ ಕಾಡಿಸುತ್ತಿತ್ತಂತೆ. ಅವರ ಸಹವರ್ತಿಗಳು ಅದನ್ನು ಪ್ರತಿ ಬಾರಿ ಕೈಯಿಂದಲೋ, ಮತ್ತೊಂದರಿಂದಲೋ ಓಡಿಸಲು ಯತ್ನಿಸುತ್ತಿದ್ದರೂ, ಅದು ಪದೇ ಪದೇ ಹಾರಿ ಬಂದು ಕಾಡುವುದನ್ನು ಮುಂದುವರಿಸುತ್ತಿತ್ತಂತೆ.

ಆಗ ಲೋಹಿಯಾ, ಕಾರಿನಲ್ಲಿ ಆ ಕಣಜದ ಗೂಡೆಲ್ಲಿದೆ ನೋಡಿ ಅದನ್ನು ಸ್ವಚ್ಛಗೊಳಿಸಿ ಎಂದು ಸೂಚಿಸಿ, ಅವರು ಕಾರ್ಯೋನ್ಮುಖರಾಗುವಂತೆ ಮಾಡಿದ ನಂತರವೇ ಅದರ ಹಾವಳಿ ತಪ್ಪಿತಂತೆ. ಹಾಗೇ, ಇಂದು ಭಯೋತ್ಪದನೆ, ವ್ಯಾಪಕ ಭ್ರಷ್ಟಾಚಾರ, ಕಪ್ಪು ಹಣದ ವ್ಯವಹಾರ, ಇವುಗಳ ಸುತ್ತಮುತ್ತ ದಿನನಿತ್ಯ ನಡೆಯುತ್ತಿರುವ ವಿವಿಧ ರೀತಿಯ ಗೂಂಡಾಗಿರಿ, ಕೊಲೆ, ಆತ್ಮಹತ್ಯೆ ಹಾಗೂ ಇನ್ನಿತರ ಅಪರಾಧಗಳು, ರೈತರ ಆತ್ಮಹತ್ಯೆ, ಪ್ರತಿಭಟನೆಗಳು, ನಕ್ಸಲೀಯರ ದಾಳಿಗಳು ಮತ್ತು ಇವೆಲ್ಲಕ್ಕೆ ಸಾಂಕೇತಿಕ ಕಳಶವಿಟ್ಟಂತೆ ಈಗ ಆನೆಗಳ ನಗರ ಪ್ರವೇಶ ಇವೆಲ್ಲ ಪರಸ್ಪರ ಸಂಬಂಧಪಟ್ಟಂತಿದ್ದು, ಇವುಗಳ ಹಿಂದೆ ಒಂದು ಸಾಮಾನ್ಯ ಕಾರಣವಿರುವುದನ್ನು ಗುರುತಿಸದ ಹೊರತು, ಇವನ್ನು ನಿವಾರಿಸಲಾಗದು ಎಂಬ ಆಳದ ತಿಳುವಳಿಕೆ ಸಮಾಜದಲ್ಲಿ, ಮುಖ್ಯವಾಗಿ ನಮ್ಮನ್ನು ಆಳುವವರಲ್ಲಿ ತುರ್ತಾಗಿ ಮೂಡಬೇಕಿದೆ. ಅಥವಾ ಮೂಡುವಂತೆ ನಾವು ಸಾಮಾನ್ಯ ಜನ ನಮ್ಮ ಮಧ್ಯೆ ಶುದ್ಧ ಮತ್ತು ಸಮರ್ಥ ನಾಯಕತ್ವವನ್ನು ಬೆಳೆಸಬೇಕಿದೆ. ಹಾಗಾಗಿ ಕಟ್ಟುನಿಟ್ಟಿನ ಕ್ರಮ, ಕಾರ್ಯಪಡೆಯ ರಚನೆ, ಮಸೂದೆ, ಕಾನೂನು ಕ್ರಮ ಇತ್ಯಾದಿಗಳು ಪದೇ ಪದೇ ಕಾಡುವ ಕಣಜವನ್ನು ಕೈಯಿಂದ ಓಡಿಸಿದಂತೆ ತತ್ಕಾಲೀನ ಪರಿಹಾರಗಳಾದಾವೇ ಹೊರತು, ಅವುಗಳ ಮೂಲವನ್ನು ಸ್ವಚ್ಛಗೊಳಿಸುವ ಶಾಶ್ವತ ಪರಿಹಾರವಾಗಲಾರದು.

ಆನೆಗಳು ನಗರವನ್ನು ಏಕೆ ಪ್ರವೇಶಿಸಿ ದಾಂಧಲೆ ನಡೆಸುವಂತಾಯಿತು? ಇದೇನು ಇದ್ದಕ್ಕಿದ್ದಂತೆ ಅಥವಾ ತುಂಬಾ ಅನಿರೀಕ್ಷಿತವಾಗಿ ಸಂಭವಿಸಿದ ಘಟನೆಯೇನಲ್ಲ. ಆನೆಗಳು ಮಾತ್ರವಲ್ಲ, ನಮ್ಮ 'ಅಭಿವೃದ್ಧಿ'ಯ ದಾಳಿಗೆ ಸಿಕ್ಕಿ ಅಳಿದುಳಿದಿರುವ ಇತರ ವನ್ಯ ಮೃಗಗಳೂ ಪ್ರಕೃತಿ ಸಹಜವಾದ ತಮ್ಮ ಮೂಲ ನಿವಾಸ ಸ್ಥಾನಗಳನ್ನು ಕಳೆದುಕೊಂಡು ಅಸಾಹಯಕವಾಗಿ ಮತ್ತು ಅನಿವಾರ್ಯವಾಗಿ ಜನವಸತಿ ಕಡೆ ಬರುತ್ತಿರುವ ಅನೇಕ ಪ್ರಕರಣಗಳು ಇತ್ತೀಚಿನ ವರ್ಷಗಳಲ್ಲಿ ಪದೆ ಪದೇ ವರದಿಯಾಗುತ್ತಲೇ ಇವೆ. ನಾವು ಈ ಬೆಳವಣಿಗೆಯನ್ನು ಅವುಗಳ ತಂಟೆಕೋರತನ ಮಾತ್ರವೆಂಬಂತೆ, ಅದರ ಹಿಂದಿನ ಜೈವಿಕ ಒತ್ತಡವನ್ನು ಗಂಭೀರವಾಗಿ ಪರಿಗಣಿಸದೆ, ಹಾಗೆ ಕಾಡು ದಾಟಿ ಬಂದ ಆ ಪ್ರಾಣಿಗಳನ್ನು ಕೊಂದೋ, ಹೊಡೆದೋಡಿಸಿಯೋ ಅಥವಾ ನಾವು ಈಗ ಮಾಡಿರುವಂತೆ ಹಿಡಿದು ಹಾಕಿಯೋ ಸಮಸ್ಯೆಯನ್ನು ತತ್ಕಾಲೀನವಾಗಿ ಪರಿಹರಿಸಿಕೊಳ್ಳುತ್ತಿದ್ದೆವು. ಅದರ ಪರಿಣಾಮವನ್ನು ನಾವಿಂದು ಮೈಸೂರಿನಲ್ಲಿ ನೋಡಿದ್ದೇವೆ. ಹಾಗೇ ಈ ಮೈಸೂರು ಘಟನೆಯ ಮತ್ತು ಅದರ ಭವಿಷ್ಯದ ಸಾಧ್ಯ ರೂಪಗಳ ಕಲ್ಪನೆಯ ಭಯಾನಕತೆ ನಮ್ಮನ್ನು ಒಮ್ಮೆ ಎದ್ದು ಕೂತು ಯೋಚಿಸುವಂತೆ ಮಾಡಿದೆ. ಹಾಗೆ ಯೋಚಿಸುವವರಿಗೆ, ಈ ಸಮಸ್ಯೆಯನ್ನು ಕುರಿತ ನಮ್ಮ ಗ್ರಹಿಕೆಯೇ ಮತ್ತು ಹಾಗಾಗಿ ಅದರ ಪರಿಹಾರವೂ ಎಷ್ಟು ಮೇಲ್ಮೈ ಮಟ್ಟದ್ದಾಗಿತ್ತು ಎಂಬುದು ಗೊತ್ತಾಗುತ್ತದೆ.

ಈ ಘಟನೆಯ ಸಂಬಂಧವಾಗಿ ಟಿವಿ ವರದಿಯೊಂದರಲ್ಲಿ ಮೈಸೂರಿನ ಹೊರವಲಯದ ಬಡಾವಣೆಯೊಂದರ ದೊಡ್ಡ ಬಾಯಿಯ ಮಹಿಳೆಯೊಬ್ಬರು ತಮ್ಮ ವಿಶಾಲ

ಮಹಡಿ ಮನೆಯ ಮುಂದೆ ತಮ್ಮ ಗೆಳತಿಯರೊಂದಿಗೆ ನಿಂತು, 'ಈ ಆನೆಗಳು ನಮ್ಮ ಮೈಸೂರಿಗೆ ಬರುತ್ತಿದ್ದಾಗ ಅರಣ್ಯ ಇಲಾಖೆಯವರು ಏನು ಮಾಡುತ್ತಿದ್ದರು?' ಎಂದು ಕ್ಯಾಮರಾ ಮುಂದೆ ಅರಚಾಡುತ್ತಿದ್ದುದನ್ನು ನೋಡಿ ನನಗೆ ನಗು ಬಂದಿತು. ಹೌದು, ಕಾಡಾನೆಗಳನ್ನು ಕಲ್ಲು ಹೊಡೆದು ಓಡಿಸಲು ಯತ್ನಿಸುವ ಮೂರ್ಖ ಜನ ಇನ್ನೆಂತಹ ಮಾತಾಡಿಯಾರು, ಅದು ಬೇರೆ ವಿಷಯ! ಆದರೆ ಇವರು ಕಾಡಾನೆಗಳನ್ನು ಕುರಿಗಳೆಂದೂ, ಅರಣ್ಯ ಇಲಾಖೆಯ ಸಿಬ್ಬಂದಿಯನ್ನು ಈ ಕುರಿಗಳನ್ನು ಕಾಯುವ ಕುರುಬರೆಂದು ಭಾವಿಸಿದ್ದಾರೋನೋ ತಿಳಿಯದು! ಇಲ್ಲಿ ಕೇಳಬೇಕಾದ ಮುಖ್ಯ ಮತ್ತು ದೊಡ್ಡ ಪ್ರಶ್ನೆಯೆಂದರೆ, ಆನೆಗಳು ಮೈಸೂರನ್ನು ಪ್ರವೇಶಿಸುವಂತಾಗುವವರೆಗೂ ಮೈಸೂರಿಗರು ಮತ್ತು ಅವರು ಆರಿಸಿದ ಅಥವಾ ರೂಪಿಸಿದ ನಾಯಕರು ಹಾಗೂ ಆಡಳಿತಗಾರರು ಏನು ಮಾಡುತ್ತಿದ್ದರು ಎಂಬುದೇ ಆಗಿದೆ. ನೀವು ನಿಮ್ಮ ವಾಸ ಮತ್ತು ಜೀವನೋಪಾಯದ ಜಾಗವನ್ನು ಮಿತಿಯಿಲ್ಲದೆ ವಿಸ್ತರಿಸಿಕೊಳ್ಳುತ್ತಾ ಹೋಗಬಹುದು; ಅದರ ಪರಿಣಾಮವಾಗಿಯೇ, ನಿಮ್ಮಂತೆಯೇ ಈ ಭೂಮಿಯ ಮೇಲೆ ಬಾಳಲು ಬಂದ ವನ್ಯಜೀವಿಗಳು ತಮ್ಮ ವಾಸ ಮತ್ತು ಜೀವನೋಪಾಯದ ಜಾಗವನ್ನು ವಿಸ್ತರಿಸಿಕೊಳ್ಳಬಾರದೆ? ಮದ್ದು– ಗುಂಡು– ಬಂದೂಕು– ಬಾಂಬುಗಳೇ ನಿಮ್ಮ ತಳಿ ಶ್ರೇಷ್ಠತೆಯ ಹೆಗ್ಗುರುತುಗಳಾದಲ್ಲಿ, ಅವುಗಳನ್ನು ಬಳಸಿ ಅವನ್ನು ನಿಮ್ಮ 'ನಾಗರಿಕ ಗೂಂಡಾಗಿರಿ'ಯ ಮೂಲಕ ಹದ್ದುಬಸ್ತಿನಲ್ಲಿಡಲು ಸಾಧ್ಯವೇ, ಒಮ್ಮೆ ಪರೀಕ್ಷಿಸಿ ನೋಡಿ! ಹೇಗೂ ಈ 'ನಾಗರಿಕ ಗೂಂಡಾಗಿರಿ'ಯನ್ನು ನಾವು ಸಮಾಜ ರಕ್ಷಣೆಯ ಹೆಸರಿನಲ್ಲಿ ಕಾನೂನುಬದ್ಧ ಮಾಡಿಬಿಟ್ಟಿದ್ದೇವಲ್ಲ? ಅರಣ್ಯ ಸಚಿವರು ಪ್ರಸ್ತಾಪಿಸಿರುವ ಕಾರ್ಯಪಡೆಯ ಹಿಂದಿನ ತತ್ವವೂ ಸರಿ ಸುಮಾರು ಇದೇ– 'ಮಾನವ ಕುಲಶ್ರೇಷ್ಠತೆ'ಯೇ– ಅಲ್ಲವೇ?

ಇತ್ತೀಚಿನ ಬೆಂಗಳೂರು ಮಹಾನಗರ ಪಾಲಿಕೆಯ ಚುನಾವಣೆಗಳ ನಂತರ ಯಾರೋ ಪಾಪ, ದುಃಖದಿಂದ ತಮ್ಮ ಸುಂದರ ಬೆಂಗಳೂರು ಈಗ ಬರೀ ಗೂಂಡಾಗಳ ಆಳ್ವಿಕೆಗೆ ಒಳಗಾಗುತ್ತಿದೆ ಎಂದು ಅಲವತ್ತುಕೊಂಡರು. ಅದಕ್ಕೆ ನನ್ನ ಉತ್ತರ ಇದಾಗಿತ್ತು: ನಿಮ್ಮ ಸೌಂದರ್ಯ ಪ್ರಜ್ಞೆಯೇ ವಿಕ್ಷಿಪ್ತಗೊಂಡಂತಿದೆ. ಬೆಂಗಳೂರು ಈಗ ಸುಂದರ ನಗರವಾಗಿ ಉಳಿದಿಲ್ಲ. ಅದನ್ನು ನೀವು ಗೂಂಡಾಗಳು ಮಾತ್ರ ಆಳಬಲ್ಲ ರೀತಿಯಲ್ಲಿ ಕಟ್ಟಿಕೊಂಡಿದ್ದೀರಿ; ಅದಕ್ಕೆ ತಕ್ಕ ಬಾಳನ್ನೂ ಬಾಳುತ್ತಿದ್ದೀರಿ. ಹಾಗಾಗಿ, ನೀವು ಹೀಗೆ ದೂರುವ ಹಕ್ಕನ್ನು ಕಳೆದುಕೊಂಡಿದ್ದೀರಿ. ೨೬/೧೧ ಎಂದು ನಾವು ಪದೇ ಪದೇ ದೇಶಭಕ್ತಿಯ ಉಮ್ಮಳಿಕೆಯಲ್ಲಿ ಮುಂಬೈ ಮೇಲಿನ ದಾಳಿಯನ್ನು ನೆನಪಿಸಿಕೊಳ್ಳುತ್ತಾ, ಕಸಬ್‌ನನ್ನು ಇನ್ನೂ ಗಲ್ಲಿಗೇಕೇರಿಸಿಲ್ಲ ಎಂದು ಕ್ರುದ್ಧರಾಗಿ ಕೇಳುತ್ತಾ, ಪಾಕಿಸ್ಥಾನದ ಮೇಲೆ ಕಿಡಿ ಕಾರುತ್ತಲೇ ಇರುತ್ತೇವೆ. ಆದರೆ ಆ ದಾಳಿಕೋರರು ನಮ್ಮ ಸುಪರ್ದಿಯಲ್ಲಿರುವ ಸಮುದ್ರದ ಮೇಲೆಯೇ ಮೈಲುಗಟ್ಟಲೆ ದೋಣಿಯಲ್ಲಿ ನಿರಾಳವಾಗಿ ತೇಲಿ ಬಂದು ಸಶಸ್ತ್ರಧಾರಿಗಳಾಗಿಯೇ *ಗೇಟ್ ವೇ ಆಫ್ ಇಂಡಿಯಾ* ಮೂಲಕ ಮುಂಬೈ ನಗರದ ಬೀದಿಗಳನ್ನು ಪ್ರವೇಶಿಸಿದರಲ್ಲಾ, ಆಗ ಮುಂಬೈನ

'ನಾಗರೀಕ'ರು ಏನು ಮಾಡುತ್ತಿದ್ದರು? ಅದೂ ಭಯೋತ್ಪಾದನೆಯ ಆತಂಕ ಉತ್ತುಂಗ ಸ್ಥಿತಿಯಲ್ಲಿದ್ದು, ಆ ಬಗ್ಗೆ ಜನಜಾಗೃತಿಯ ಆಂದೋಲನವೇ ನಡೆದಿದ್ದ ದಿನಗಳವು! ಆದರೆ ಅಂದು ಜನ ಮಾತ್ರ ಭಯೋತ್ಪಾದನೆಯ ಸಮಸ್ಯೆಗೂ ತಮಗೂ ಏನೂ ಸಂಬಂಧವಿಲ್ಲದಂತೆ; ಕೆಲವರು ಅವರ ವಿಚಿತ್ರ ವೇಷವನ್ನು ನೋಡಿ ಸ್ವಲ್ಪ ಅನುಮಾನಗೊಂಡರೂ, ತಮಗೇಕೆ ಆ ಗೊಡವೆ ಮತ್ತು ಮುಂದಿನ ಪಡಿಪಾಟಲು ಎಂದೋ ಏನೋ, ತಂತಮ್ಮ ಬದುಕು ಕಟ್ಟಿಕೊಳ್ಳುವ ಮುಖ್ಯ 'ಕೆಲಸ'ಗಳಲ್ಲಿ ತೊಡಗಿಕೊಂಡರು! ಏಕೆಂದರೆ ಇಂತಹ ತಮ್ಮ ಬದುಕಿನ 'ಕೆಲಸ'ಗಳನ್ನು ಬಿಟ್ಟು, ಅಂತಹ ಸಾಮಾಜಿಕ ಪಡಿಪಾಟಲುಗಳಲ್ಲಿ ಸಿಕ್ಕಿ ಹಾಕಿಕೊಂಡರೆ, ಈ ಸ್ಪರ್ಧಾತ್ಮಕ ಜಗತ್ತಿನಲ್ಲಿ ಹಿಂದೆ ಉಳಿದುಹೋದೇವು ಎಂಬ ಆತಂಕ ಅವರದು!

– ೨–

ಇದು ನಾವು ಕಟ್ಟಿಕೊಂಡಿರುವ ನಾಗರೀಕತೆಯ ಸತ್ವ. ಅದೂ ಮುಂಬೈ ಎಂಬ ಮಹಾನಗರದ ಮಹಾ ನಾಗರೀಕತೆಯ ಸತ್ವ! ನಾಗರೀಕತೆ ಎಂಬುದು ನಗರ ಎಂಬ ಶಬ್ದದಿಂದ ವ್ಯುತ್ಪತ್ತಿಯಾದುದು ಎಂದು ಕೇಳಿದ್ದೇನೆ. ನಗರ ಎಂಬುದು 'ನಾಗ'ದಿಂದ ತನ್ನ ವ್ಯುತ್ಪತ್ತಿಯನ್ನು ಪಡೆದಿದೆ. 'ನಾಗ' ಎಂದರೆ ಸರ್ಪ, ಶೀಘ್ರ ಚಲನೆ ಮತ್ತು ವೇಗಕ್ಕೆ ಪ್ರತೀಕ. ಅದರಲ್ಲಿ ವಿಷವೂ, ಇದ್ದರೂ ಇಲ್ಲದಂತೆ ಇದೆಯಲ್ಲ? ಆದರೂ ನಗರೀಕರಣವೇ– ವಿಷದ ಹೊಳೆಯೇ– ನಮ್ಮ 'ಅಭಿವೃದ್ಧಿ'ಯ ಮಂತ್ರವಾಗಿದೆ. ೨೦೧೫ರ ವೇಳೆಗೆ ಭಾರತವನ್ನು ನಗರ ದೇಶವನ್ನಾಗಿ ಮಾಡಬೇಕೆಂಬುದೇ ನಮ್ಮ ಪ್ರಧಾನಿ ಮನಮೋಹನ ಸಿಂಗರಿಗೆ ವಿಶ್ವ ಬ್ಯಾಂಕ್ ನೀಡಿರುವ ಕಾರ್ಯಕ್ರಮವಂತೆ! ಈ ಕಾರ್ಯಕ್ರಮ ಜನರ ಪ್ರತಿರೋಧದಿಂದಾಗಿ ಸದ್ಯಕ್ಕಂತೂ ಯಶಸ್ವಿಯಾಗುವಂತೆ ಕಾಣುತ್ತಿಲ್ಲವಾದರೂ, ಈ ಕಾರ್ಯಕ್ರಮದ ಹಪಾಹಪಿ ರಾಷ್ಟ್ರಾದ್ಯಂತ ಯಾವುದಾವುದೋ ರೂಪದಲ್ಲಿ ಕಾಣತೊಡಗಿರುವುದಂತೂ ನಿಜ. ಹಾಗಾಗಿಯೇ, ಒಂದು ಸಣ್ಣ ಉದಾಹರಣೆಯಾಗಿ ಹೇಳುವುದಾದರೆ, ಇಂದು ಕಲ್ಲು, ಕಬ್ಬಿಣಗಳ ಗಣಿ ಮತ್ತು ಮರಳಿನ ಮಾಫಿಯಾವನ್ನು ಯಾರೂ ತಡೆಯಲಾಗದಾಗಿದೆ. ತಡೆಯಲು ಹೋದವರು– ಸರ್ಕಾರದಲ್ಲಿರುವವರೂ ಸೇರಿದಂತೆ– ಅದರ ತ್ವರಿತ ಚಲನೆ ಮತ್ತು ವಿಷ ಸ್ಫುರಣೆಗೆ ಬಲಿಯಾಗುತ್ತಿದ್ದಾರೆ. ಇದು ಗಣಿ ಮಾಲೀಕರ ಅಥವಾ ಮರಳು ಗುತ್ತಿಗೆದಾರರ ದುರಾಸೆಗೆ ಸಂಬಂಧಿಸಿದ ವಿಷಯವೇ ಅಲ್ಲ ಎಂಬುದು ಇಲ್ಲಿ ಮುಖ್ಯ ಸಂಗತಿ. ಅದು ಸಮಸ್ಯೆಯ ಸರಳೀಕರಣ. ಇದು ನಮ್ಮ 'ಅಭಿವೃದ್ಧಿ' ಕಲ್ಪನೆಯಲ್ಲೇ ಅಡಗಿರುವ ವಿಷದ ಬುಗ್ಗೆಯ ಪರಿಣಾಮ.

ಈಗ ಆಯ್ದ ಕೆಲವು ಜನರ ಕೈಗೆ ಅಲ್ಪಾವಧಿಯಲ್ಲೇ ಸುಲಭ 'ದುಡಿಮೆ'ಯ ಮೂಲಕ ರಾಶಿ ರಾಶಿ ಹಣ ಸೇರುವಂತಹ ಉದಾರ ಆರ್ಥಿಕ 'ವ್ಯವಸ್ಥೆ'ಯನ್ನು ಕಾನೂನುಬದ್ಧವಾಗಿಯೇ ಸ್ಥಾಪಿಸಲಾಗಿದೆ. ಹಾಗೇ ಈ ನವ ಶ್ರೀಮಂತರು ಆ ಹಣವನ್ನು ಸಕಾಲದಲ್ಲಿ ಖರ್ಚು ಮಾಡಲೇ ಬೇಕಾದಂತಹ ಒತ್ತಾಯ ಹಾಗೂ ಆಕರ್ಷಣೆಗಳಿರುವ ಮುಕ್ತ 'ಮಾರುಕಟ್ಟೆ'ಯನ್ನೂ ನಿರ್ಮಿಸಲಾಗಿದೆ. ಹಾಗಾಗಿ ಈ ಕೆಲವು ಜನ ತಮ್ಮ ಹಣವನ್ನು ಸುಮ್ಮನೆ ಕೊಳೆಯಲು

ಜಿಪಡೆ, ಸುಖಭೋಗಗಳ ಮೇಲೆ ಎಷ್ಟು ಖರ್ಚು ಮಾಡಿದರೂ ಅದರ ಸಿಬಿರೂ ಸವೆಯದೆ, ಮಾರುಕಟ್ಟೆಯಲ್ಲಿ ಇಂದು ಬಹು ಬೇಡಿಕೆಯಲ್ಲಿರುವ ನೆಲವನ್ನು ಸ್ಪರ್ಧಾತ್ಮಕವಾಗಿ ಕೊಳ್ಳತೊಡಗಿದ್ದಾರೆ. ಒಂದಲ್ಲ ಎರಡಲ್ಲ, ಹಲವು ವಿಶಾಲ ಬಂಗಲೆಗಳನ್ನೂ, ಮನೆಗಳ ಮೇಲೆ ಮನೆಗಳನ್ನು ಕಟ್ಟಿಸುತ್ತಿದ್ದಾರೆ. ಇದೊಂದು ವಿಷವ್ಯೂಹ. ಇಂದು ನಗರಗಳ ಮಧ್ಯಮ ವರ್ಗಗಳ ಬಡಾವಣೆಗಳಲ್ಲಿ ಪುನಿರ್ನಿರ್ಮಾಣಗೊಳ್ಳದ ಮನೆಯೇ ಇಲ್ಲವಾಗಿದೆ! ಬೀದಿ ಬೀದಿಯಲ್ಲೂ, ಇಟ್ಟಿಗೆ, ಮರಳು, ಕಬ್ಬಿಣದ ರಾಶಿ ಬಿದ್ದಿದ್ದು ಜನ ಓಡಾಡುವುದೇ ಕಷ್ಟವಾಗತೊಡಗಿದೆ! ಇನ್ನು ನವ ಶ್ರೀಮಂತರು ಬಾಡಿಗೆಗೆ ಮುಗಿಲೆತ್ತರದ ಅಪಾರ್ಟುಮೆಂಟುಗಳನ್ನೂ, ಭವ್ಯ ಮಾಲ್‌ಗಳನ್ನೂ, ತೋಟಗಳಲ್ಲಿ ರೆಸಾರ್ಟುಗಳನ್ನೂ, ಹೋಂಸ್ಟೆಗಳನ್ನೂ ಕಟ್ಟಿಸುವ ಮೂಲಕ ತಮ್ಮ ದೇಶಭಕ್ತಿಯನ್ನು ಮೆರೆಯುತ್ತಾ ದೇಶದ ಆರ್ಥಿಕತೆ ಎರಡಂಕಿ ದರದಲ್ಲಿ ಬೆಳೆಯಲು ತಮ್ಮ ಪಾಲನ್ನು ಸಲ್ಲಿಸಲು ಹಗಲೂ ರಾತ್ರಿ ದುಡಿಯುತ್ತಿದ್ದಾರೆ! ಇದಕ್ಕೆ ಅತ್ಯಗತ್ಯವಾಗಿ ಬೇಕಾದ ಅಪಾರ ಪ್ರಮಾಣದ ಮಣ್ಣು, ಕಲ್ಲು, ಕಬ್ಬಿಣ, ಮರ, ಮರಳನ್ನು ಒದಗಿಸುವ ಸುಗಮ ವ್ಯವಸ್ಥೆ ಬೇಡವೇ? ಇದಕ್ಕೆ ನಮ್ಮ ಬೆಟ್ಟ ಗುಡ್ಡಗಳನ್ನು ಅಗೆಯದಿರಲು, ಭೂಮಿಯನ್ನು ಬಗೆಯದಿರಲು, ಅರಣ್ಯಗಳನ್ನು ಕಡಿಯದಿರಲು, ನದಿಗಳನ್ನು ಒತ್ತರಿಸಿ ಬತ್ತಿಸದಿರಲು ಆಗುತ್ತದೆಯೇ? ಅಧಿಕ ಸುಖದ ಆಸೆಗಳನ್ನು ಸೃಷ್ಟಿಸುವುದು ಅಭಿವೃದ್ಧಿಯಾಗುವುದಾದರೆ, ಆ ಆಸೆಗಳನ್ನು ಪೂರೈಸಿಕೊಳ್ಳಲು ಹವಣಿಸುವುದು ಅಭಿವೃದ್ಧಿ ವಿರೋಧಿ ಹೇಗಾದೀತು? ಅದನ್ನು ಆರಂಭಿಸಿದವರೇ ಅದನ್ನು ತಡೆಯಲೂ ಯತ್ನಿಸುವುದು ಎಷ್ಟು ನೈತಿಕ?

ಇದು ಸರ್ಕಾರಕ್ಕೂ ಗೊತ್ತಿಲ್ಲದಿಲ್ಲ. ಹಾಗಾಗಿಯೇ ಅದು ಈ 'ನೈತಿಕತೆ'ಯ ಒತ್ತಡದಲ್ಲಿ; ಪ್ರತ್ಯಕ್ಷವಾಗಿ ಪರಿಸರ ರಕ್ಷಣೆಯ ಕಾನೂನನ್ನೂ ಮಾಡುತ್ತದೆ, ಪರೋಕ್ಷವಾಗಿ ಆ ಕಾನೂನುಗಳನ್ನು ಉಲ್ಲಂಘಿಸಲೂ ಅವಕಾಶ ಮಾಡಿಕೊಡುತ್ತದೆ! ಅಥವಾ ಉಲ್ಲಂಘನೆಗಳ ಬಗ್ಗೆ ಬಾಯಲ್ಲಿ ವೀರಾವೇಶದ ಮಾತುಗಳನ್ನಾಡುತ್ತಾ ತನ್ನ ಕಣ್ಣುಗಳನ್ನು ಮಾತ್ರ ಮುಚ್ಚಿಕೊಂಡಿರುತ್ತದೆ. ಗಣಿ ಸಂಪತ್ತಿನ ಲೂಟಿ, ಅರಣ್ಯ ನಾಶ, ಮರಳು ಸಾಗಣೆಗಳ ಬಗ್ಗೆ ನಮ್ಮ ರಾಜ್ಯ ಸರ್ಕಾರದ ನಿಲುವು ಇದಕ್ಕೊಂದು ಉತ್ತಮ ನಿದರ್ಶನ. ನಮ್ಮ ಲೋಕಾಯುಕ್ತರೇನೋ ಹೋದಲ್ಲೆಲ್ಲ ರಾಜ್ಯದ ಸಂಪತ್ತು ಲೂಟಿಯಾಗುತ್ತಿದೆ ಎಂದು ಕೂಗಿಕೊಂಡಿದ್ದೇ ಬಂತು; ಯಾವ ಪ್ರಯೋಜನವೂ ಇಲ್ಲದಾಗಿದೆ! ಅದೇನೇ ಇರಲಿ, ಇದನ್ನೆಲ್ಲ ನಾವು– ಈ ಅಧಿಕ ಆಸೆಗಳನ್ನು ನೈತಿಕವಾಗಿ ಕೆಟ್ಟದ್ದು ಎಂದು ಭಾವಿಸುವವರು– ಭ್ರಷ್ಟಾಚಾರ ಮತ್ತು ರಾಜಕೀಯ ಅನಾಚಾರ ಎಂದು ಕರೆಯುತ್ತೇವೆ. ಇದಕ್ಕೆ ವಿರುದ್ಧವಾಗಿ ಅವರು ನಮ್ಮನ್ನು ಅಭಿವೃದ್ಧಿಗೆ ಅಡ್ಡಗಾಲು ಹಾಕುವ ಅಧಿಕಪ್ರಸಂಗಿಗಳು ಎಂದು ಕರೆಯುತ್ತಾರೆ! ಅಲ್ಲಿಗೆ ಈ ಚರ್ಚೆಯ ವೃತ್ತ ಪೂರ್ಣಗೊಂಡಿತಲ್ಲ?

ಇದರಿಂದ ಗೊಂದಲಗೊಳ್ಳುವ ಸಾಮಾನ್ಯ ಜನ ಈ ಗೊಂದಲವನ್ನು, ತಾವು ಭಾಗಿಯಾದ ಭ್ರಷ್ಟಾಚಾರದ (ಉದಾಹರಣೆಗೆ ತಮಗೆ ನೈತಿಕ ನೆಲೆಯಲ್ಲಿ ಅಥವಾ

ಕಾನೂನುಬದ್ಧವಾಗಿ ಸಿಗಲಾರದ ಅನುಕೂಲಗಳನ್ನು ಪಡೆಯಲು ನೀಡುವ ಲಂಚ-ರುಷುವತ್ತುಗಳ) ಮತ್ತು ರಾಜಕೀಯ ಅನಾಚಾರದ (ಚುನಾವಣೆಗಳಲ್ಲಿ ಜಾತಿ- ಹಣ-ಹೆಂಡದ ಆಮಿಷಗಳಿಗೆ ಒಳಗಾಗುವ) ಪ್ರಕರಣಗಳನ್ನು ಜಾಣ ಮರವೆನಲ್ಲಿ ಬದಿಗಿಟ್ಟು, ಮಿಕ್ಕೆಲ್ಲ ಭ್ರಷ್ಟಾಚಾರ- ರಾಜಕೀಯ ಅನಾಚಾರಗಳ ವಿರುದ್ಧ ಬೊಬ್ಬೆ ಹಾಕುತ್ತಾ ನಿವಾರಿಸಿಕೊಳ್ಳಲು ಯತ್ನಿಸುತ್ತಲೇ ಇರುತ್ತಾರೆ! ಜನಮನದ ಈ ಮಾನಸಿಕ ಒಡಕಿನ ಮೂಲ ಎಲ್ಲಿದೆ ಮತ್ತು ಇದಕ್ಕೂ ಆಳುವ ವ್ಯವಸ್ಥೆ ಇಂದು ತನ್ನ ಅಭಿವೃದ್ಧಿಯ ಹಪಾಹಪಿಯಲ್ಲಿ ಎದುರಿಸುತ್ತಿರುವ ನೈತಿಕ ಬಿಕ್ಕಟ್ಟಿಗೂ ಎಂತಹ ಸಂಬಂಧವಿದೆ ಎಂಬುದನ್ನು ಗುರುತಿಸದೆ, ಭ್ರಷ್ಟಾಚಾರ ಮತ್ತು ಕಪ್ಪುಹಣದ ವಿರುದ್ಧ ನಾವಾಗಲೀ, ಅಣ್ಣಾ ಹಜಾರೆ ಮತ್ತು ಅವರ ಗೆಳೆಯರಾಗಲೀ ಅಥವಾ ಬಾಬಾ ರಾಂದೇವ್ ಹಾಗೂ ಅವರ ಬೆಂಬಲಿಗರಾಗಲೀ ಸಾರಾಸಗಟಾದ ಭಾಷೆಯಲ್ಲಿ ಹೋರಾಟದ ಮಾತಾಡುವುದು ಅರ್ಧ ಆತ್ಮದ್ರೋಹದ ಹಾಗೂ ಅರ್ಧ ಭೋಳೆತನದ ಪ್ರದರ್ಶನ ಮಾತ್ರವೆನಿಸುತ್ತದೆ. ಅದು, ಪ್ರಕೃತಿಯ ಒತ್ತಡಕ್ಕೆ ಸಿಕ್ಕಿ ಮೈಸೂರು ನಗರವನ್ನು ಪ್ರವೇಶಿಸಿದ ಕಾಡಾನೆಗಳ ಭೀತಿಯನ್ನು, ಅಂದಿನ ಮಟ್ಟಿಗೆ ತಹಬಂದಿಗೆ ತಂದುಕೊಂಡು ನೆಮ್ಮದಿಯ ನಿಟ್ಟುಸಿರು ಬಿಡುವ ಮೂರ್ಖತನದಂತೆಯೇ ಸರಿ! ಇನ್ನು ಸಾವಿರ ಕೋಟಿಗಳ ಸರದಾರ ಬಾಬಾ ರಾಂದೇವರಂತಹವರ ಸನ್ಯಾಸತ್ವ ಮತ್ತು ಅದರಿಂದ ಸ್ಫೂರ್ತಿ ಪಡೆದ, ಬಹುಪಾಲು ಸೇಠಜಿ– ಸೇಠಾಣಿಗಳೇ ತುಂಬಿರುವ ಅವರ ಅನುಯಾಯಿಗಳ ದೇಶಭಕ್ತಿಯ ಮೊಳಗುಗಳು, ಅತಿಭೋಗದಿಂದಲೋ ಅಥವಾ ಅತಿಲೋಭದಿಂದಲೋ ಉಂಟಾಗಿರುವ ಅಜೀರ್ಣದ ತೇಗುಗಳೇ ಸರಿ ಎಂದರೂ ತಪ್ಪಾಗಲಾರದು!

ಜಪಾನಿನ ಸುಪ್ರಸಿದ್ಧ ಚಲಚಿತ್ರ ನಿರ್ದೇಶಕ ಕುರೋಸಾವಾನ ಚಲಚಿತ್ರವೊಂದರಲ್ಲಿ ನಗರದ ಹುಡುಗರು ಹಳ್ಳಿಯೊಂದಕ್ಕೆ ಭೇಟಿ ನೀಡಿ, ಅದರ ಮುಗ್ಧ ಸೌಂದರ್ಯಕ್ಕೆ ಮಾರು ಹೋಗಿ, ಆ ರಾತ್ರಿ ಅಲ್ಲಿಯೇ ಉಳಿಯಲು ನಿರ್ಧರಿಸುತ್ತಾರೆ. ಆದರೆ ಅವರು ಆ ಹಳ್ಳಿಯಲ್ಲಿ ವಿದ್ಯುತ್ತಿಲ್ಲ ಎಂದು ತಿಳಿದು ಹೌಹಾರಿ, ಬೆಳಕೇ ಇಲ್ಲದೆ ಕಗ್ಗತ್ತಲಲ್ಲಿ ರಾತ್ರಿ ಕಳೆಯುವ ಬಗ್ಗೆ ಆತಂಕಿತರಾಗಿ ಹಳ್ಳಿಯ ವಯೋವೃದ್ಧನನ್ನು ಆ ಬಗ್ಗೆ ಪ್ರಶ್ನಿಸುತ್ತಾರೆ. ಆ ವಯೋವೃದ್ಧ ಇವರ ಪ್ರಶ್ನೆಯಿಂದ ಆಶ್ಚರ್ಯಚಕಿತನಾಗಿ, 'ಅರೇ, ರಾತ್ರಿ ಎಂದರೆ ಇರಬೇಕಾದುದೇ ಹಾಗಲ್ಲವೇ?' ಎಂದು ತಿರುಗಿ ಅವರನ್ನೇ ಪ್ರಶ್ನಿಸುತ್ತಾನೆ! ಈ ವಯೋವೃದ್ಧನ ಈ ಸಹಜ ಮುಗ್ಧತೆಯನ್ನು ಗಾಂಪತನವೆಂದು ನಮ್ಮ ಅಭಿವೃದ್ಧಿತನದ ಹುಸಿ ಹಮ್ಮಿನಲ್ಲಿ ಹೀನಾಯವಾಗಿ ತಿರಸ್ಕರಿಸುವ ನಾವು, ಯಾವುದು ಸಹಜವಾಗಿ ಹೇಗೆ ಇರಬೇಕೋ ಹಾಗೆ ಬಿಲ್‌ಕುಲ್ ಇರದಂತೆ ಮಾಡುವ ನಮ್ಮ ಸಾಹಸಗಳನ್ನೇ ನಾಗರೀಕತೆ, ಆಧುನಿಕತೆ, ಅಭಿವೃದ್ಧಿ ಎಂದೆಲ್ಲಾ ಎಂದು ಕರೆದುಕೊಂಡು ಬೀಗುತ್ತಿದ್ದೇವೆ. ನಮ್ಮ ನಗರಗಳನ್ನು ಅಮೆರಿಕಾದ ನಗರಗಳಲ್ಲಿರುವಂತೆ ರೋಚಕ ಮತ್ತು 'ಅಭಿವೃದ್ಧಿಪರ'ವೆಂದು ಹೇಳಲಾಗುವ ರಾತ್ರಿ ಬದುಕಿಗಾಗಿ ವಿದ್ಯುತ್ ಬೆಳಕಿನಲ್ಲಿ ಜಗಮಗಿಸುವಂತೆ ಮಾಡುವ ಆಸೆಯ ಆವೇಗಕ್ಕೆ ಸಿಕ್ಕಿ, ಅತ್ಯಾಧುನಿಕ ಅಣುವಿದ್ಯುತ್ ಸ್ಥಾವರಗಳನ್ನು ಆಹ್ವಾನಿಸುತ್ತಿದ್ದೇವೆ. ಜೊತೆಗೇ ಫುಕೋಶಿಮಾಗಳನ್ನೂ ಆಹ್ವಾನಿಸುತ್ತಿದ್ದೇವೆ ಎಂಬುದನ್ನು ಮಾತ್ರ ಮರೆಯುತ್ತಿದ್ದೇವೆ!

ಗಾಂಧೀಜಿ ಒಮ್ಮೆ ಹಡಗಿನಲ್ಲಿ ಪ್ರಯಾಣಿಸುತ್ತಿದ್ದಾಗ, ಹಡಗಿನ ಒಂದು ಬದಿಯಲ್ಲಿ ಜನಸಂದಣಿ ಕಂಡು, ಏನದೆಂದು ವಿಚಾರಿಸಿದರಂತೆ. ಜನ ಸಂದಣಿಯಲ್ಲಿದ್ದ ಒಬ್ಬ, ಇಲ್ಲಿ ಹಡಗಿನ ಮಾಲೀಕರು ಪ್ರಯಾಣಿಕರ ಆಕರ್ಷಣೆಗೆಂದು ದೂರದರ್ಶಕವನ್ನು ಇಟ್ಟಿದ್ದಾರೆ. ಇದರಲ್ಲಿ ಬರಿಗಣ್ಣಿಗೆ ಕಾಣದಂತಹ ದೂರದ ಆಕಾಶ ಕಾಯಗಳನ್ನು ಕಾಣಬಹುದು ಎಂದು ಅವರನ್ನು ಅದರತ್ತ ಆಹ್ವಾನಿಸಿದನಂತೆ. ಗಾಂಧೀಜಿ ಅದಕ್ಕೆ ನಸುನಕ್ಕು, ನನ್ನ ಕಣ್ಣಿಗೆ ಕಾಣುವಷ್ಟು ಜಗತ್ತು ನನಗೆ ಬೇಕಾದಷ್ಟಾಯಿತು; ಮಿಕ್ಕದ್ದರ ಉಸಾಬರಿ ನನಗೆ ಬೇಡ ಎಂದು ಒಂದಿಷ್ಟೂ ಕುತೂಹಲಿತರಾಗದೆ ಮುಂದೆ ನಡೆದರಂತೆ! ಇದನ್ನು ಸರಳವಾಗಿ, ಸುಲಭವಾಗಿ 'ಪ್ರಗತಿ ವಿರೋಧಿ' ಎಂದು ಕರೆದು 'ಪ್ರಗತಿ ಪಥ'ದಲ್ಲಿ ಮುಂದುವರೆದ ಜನರೇ, ತಮ್ಮ ಈ ಪ್ರಗತಿ ಪಥಕ್ಕೆ ಅಡ್ಡವಾಗಿ ಘೀಳಿಡುತ್ತಾ ನಿಂತಿರುವ ಪುಂಡಾನೆಗಳನ್ನು ಕಂಡು ಅವನ್ನು ಕಲ್ಲೆಸೆದು ಓಡಿಸುವ ಕರುಣಾಜನಕ ಸ್ಥಿತಿಗೆ ಸಿಕ್ಕಿದ್ದಾರೆ. ಇಂದು ಭಯೋತ್ಪಾದನೆ, ಭ್ರಷ್ಟಾಚಾರ, ಕಪ್ಪುಹಣ, ಗೂಂಡಾಗಳ ಆಳ್ವಿಕೆ, ರೈತರ ಆತ್ಮಹತ್ಯೆ, ಕೊನೆಗೆ ಈಗ ಆನೆಗಳ ನಗರ ಪ್ರವೇಶದಿಂದ ಕಕ್ಕಾವಿಕ್ಕಿಯಾಗಿರುವ ಈ ಜನ; ಅಣ್ಣಾ ಹಜಾರೆಯವರತ್ತಲೋ, ಬಾಬಾ ರಾಂದೇವ್‌ರತ್ತಲೋ, ಯಡಿಯೂರಪ್ಪನವರತ್ತಲೋ, ಮನಮೋಹನ ಸಿಂಗರತ್ತಲೋ, ಕೊನೆಗೆ ಓರ್ವ ದಕ್ಷ ಅರಣ್ಯಾಧಿಕಾರಿಯತ್ತಲೋ ಅಥವಾ ಕನಿಷ್ಠ ಸಮರ್ಥ ಮಾವುತನತ್ತಲೋ ಕಣ್ಣು ಹಾಯಿಸುತ್ತಾ, ಅವರಲ್ಲಿ ಯಾರಾದರೊಬ್ಬರಾದರೂ ತಮ್ಮ ರಕ್ಷಣೆಗೆ ಧಾವಿಸಿ ಬರುತ್ತಾರೋ ಇಲ್ಲವೋ ಎಂಬ ಆತಂಕದಲ್ಲಿ, ಬರಲೇ ಬೇಕೆಂಬ ಆಗ್ರಹದಲ್ಲಿ ದೊಡ್ಡ ಗಂಟಲಲ್ಲಿ ಕೂಗಾಡುತ್ತಲೋ, ಜೈಕಾರ ಹಾಕುತ್ತಲೋ, ಭಜನೆಗೆ ತಾಳ ಹಾಕುತ್ತಲೋ, ಹಾಡುತ್ತಾ ನರ್ತಿಸುತ್ತಲೋ, ಹೋಮ ಹವನ ನಡೆಸಿ ಕೃತಾರ್ಥರಾಗುತ್ತಲೋ; ಒಮ್ಮೆ ಹತಾಶೆಯಲ್ಲಿ, ಮತ್ತೊಮ್ಮೆ ಶುಭ ನಿರೀಕ್ಷೆಯಲ್ಲಿ ಮನುಷ್ಯ ಮತ್ತು ಪ್ರಾಣಿ ನಡುವಣ ಅವಸ್ಥೆಯಲ್ಲಿ ಕಾಲ ನೂಕುತ್ತಿದ್ದಾರೆ.

ಆದರೆ ಎಲ್ಲಿಯವರೆಗೆ ಈ ದೇಹಕ್ಕೆ, ಈ ಮನಸ್ಸಿಗೆ, ಈ ಭೂಮಿಗೆ, ಅದರೊಳಗಿನ ಸಂಪತ್ತಿಗೆ, ಅದರ ಮೇಲಿನ ಈ ಆಕಾಶಕ್ಕೆ, ಈ ಗಾಳಿಗೆ, ಕಾಡಿಗೆ, ಕಾಡಿನೊಳಗಿನ ಜೀವ ಜಗತ್ತಿಗೆ ಧಾರಣೆಯ, ಸೈರಣೆಯ ಒಂದು ಮಿತಿಯಿದೆ; ಅದನ್ನು, ರಾಶಿ ರಾಶಿ ಹಣ, ಮನೆ, ಒಡವೆ, ವಸ್ತ್ರ, ಮಾಹಿತಿ– ಮನರಂಜನೆಯ ಸುಖಭೋಗಗಳ ಸಾಧನ ಸಲಕರಣೆಗಳನ್ನು ಅಡ್ಡಾದಿಡ್ಡಿ ಬಳಸಿ ದಾಟಿ ಹೊರಟಿರುವ ನಮಗೆ ಎಂದೂ ತೃಪ್ತಿಯಲ್ಲಿ ಕೊನೆಗೊಳ್ಳುವ ನಿಜವಾದ ಸುಖ ಒದಗಿಬರಲಾರದು ಎಂಬ ಆಳದ ಅರಿವು ಉಂಟಾಗುವುದಿಲ್ಲವೋ; ಆ ಅರಿವು ಉಂಟಾಗುವಂತಹ ವ್ಯವಧಾನ– ವಿಶ್ರಾಂತಿಗಳ ಬದುಕಿಗೆ ನಾವು ಮರಳುವುದಿಲ್ಲವೋ, ಅಲ್ಲಿಯವರೆಗೆ ನಾವು ನಮ್ಮ ಹಳ್ಳಿಗಳನ್ನು ಹಾಳುಕೊಂಪೆಗಳೆಂದು ಹಳಿದು ನಾಶ ಮಾಡುತ್ತಾ, ನಗರಗಳನ್ನು ಹುತ್ತಗಳಂತೆ ಕಟ್ಟುತ್ತಾ, ನಮ್ಮ ಈ ಅರ್ಧ ಮೃಗ– ಅರ್ಧ ಮನುಷ್ಯ ಅವಸ್ಥೆಯಲ್ಲಿ ಮುಂದುವರೆಯುವುದು ನಮ್ಮ ಕರ್ಮವೇ ಆಗಿರುತ್ತದೇ!

('ಸಂವಾದ'ದ ಜುಲೈ, ೨೦೧೧ರ ಸಂಚಿಕೆಯಲ್ಲಿ ಪಕಟವಾದ ಬರಹ)

◇◇◇

೧೯. ಶಿವಮೊಗ್ಗದಲ್ಲಿ ದಲೇಕ ಸಮ್ಮೇಳನ:

ಒಂದು ಟಿಪ್ಪಣಿ ಹಾಗೂ ಒಂದು ಕಾರ್ಯಕ್ರಮ

೨೦೧೦ ಅಕ್ಟೋಬರ್ ೨೯ ಹಾಗೂ ೩೦ರಂದು ಶಿವಮೊಗ್ಗದಲ್ಲಿ ಎರಡನೇ ದಲಿತ ಲೇಖಕರ ಹಾಗೂ ಕಲಾವಿದರ ರಾಜ್ಯ ಸಮ್ಮೇಳನ (ದಲೇಕ) ನಡೆಯಿತು. ೧೯೭೩ರಲ್ಲಿ ದಿ॥ ಬಿ.ಕೃಷ್ಣಪ್ಪನವರ ಸಾರಥ್ಯದಲ್ಲಿ ಭದ್ರಾವತಿಯಲ್ಲಿ ನಡೆದ ಸ್ಥಾಪನಾ ಸಮ್ಮೇಳನದ ೩೭ ವರ್ಷಗಳ ನಂತರ ನಡೆದ ಮೊದಲ ಸಮ್ಮೇಳನ ಇದಾದರೂ ಮತ್ತು ಬಹುಶಃ ಆ ಸಮ್ಮೇಳನಕ್ಕಿಂತ ಹೆಚ್ಚು ಜನ ಜಂಗುಳಿ ಇಲ್ಲಿ ಸೇರಿ, ಹೆಚ್ಚು ವೈಭವೋಪೇತವಾಗಿ ನಡೆಯಿತಾದರೂ, ದಲಿತ ಚಳುವಳಿಯಲ್ಲಿನ ಮಹಾ ಒಡಕು ಇಲ್ಲಿ ಎದ್ದು ಕಾಣುವಂತಿತ್ತು. ಹಾಗೆ ನೋಡಿದರೆ, ಈ ಸಮ್ಮೇಳನವನ್ನು ಆಯೋಜಿಸಿದ್ದುದೇ ದಲಿತ ಸಂಘರ್ಷ ಸಮಿತಿಯ ಅಂಬೇಡ್ಕರ್‌ವಾದಿ ಎಂದು ಕರೆದುಕೊಳ್ಳುವ ಒಂದು ಬಣ. ಇನ್ನೊಂದು ಬಣದ ನಾಯಕರಾದ ಲಕ್ಷ್ಮೀನಾರಾಯಣ ನಾಗವಾರರು ಈ ಸಮ್ಮೇಳನದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರಾದರೂ, ಅವರ ಬಣದ ಇತರ ನಾಯಕರು ಮತ್ತು ಕಾರ್ಯಕರ್ತರ ಉಪಸ್ಥಿತಿ ಅಷ್ಟೇನೂ ಎದ್ದು ಕಾಣುವಂತಿರಲಿಲ್ಲ. ಎದ್ದು ಕಾಣುವಂತಿದ್ದದು, ಅಂಬೇಡ್ಕರ್‌ವಾದಿ ಎಂದು ಕರೆದುಕೊಳ್ಳುವ ಬಣದ ನಾಯಕರಾದ ಮಾವಳ್ಳಿ ಶಂಕರ್ ಮತ್ತು ಅವರ ಹಿಂದಿನ ಸ್ಫೂರ್ತಿ ಕೇಂದ್ರಗಳಿಂತಿದ್ದ ಇಂದಿರಾ ಕೃಷ್ಣಪ್ಪ ಹಾಗೂ ಹನಗವಾಡಿ ರುದ್ರಪ್ಪ ಅವರುಗಳ ಸಂಘಟನಾ ಸಾಮರ್ಥ್ಯ ಹಾಗೂ ಪರಿಶ್ರಮಗಳು.

ಅದೇನೇ ಇರಲಿ, ದಕ್ಷಿಣ ಕರ್ನಾಟಕದ ಕಾರ್ಯಕರ್ತರು ಮತ್ತು ಕಲಾವಿದರಿಗಿಂತ ಬಹು ಹೆಚ್ಚು ಸಂಖ್ಯೆಯಲ್ಲಿ ಭಾಗವಹಿಸಿದ್ದ ಉತ್ತರ ಕರ್ನಾಟಕ ಜಿಲ್ಲೆಗಳ ಕಾರ್ಯಕರ್ತರು ಮತ್ತು ಕಲಾವಿದರು ತಮ್ಮ ವೈವಿಧ್ಯಮಯ ಹಾಡು, ತಮ್ಮಟೆ ಮತ್ತು ಕುಣಿತಗಳಿಂದ ಸಮ್ಮೇಳನಕ್ಕೆ ಒಂದು ವಿಶಿಷ್ಟ ಸಂಭ್ರಮ ತಂದಿತ್ತರು. ಹಾಗೇ ಈ ಸಮ್ಮೇಳನದ ಇನ್ನೊಂದು ವಿಶೇಷವೆಂದರೆ, ಸ್ಥಳೀಯ ಸಂಘಟಕರಲ್ಲಿ ಹೆಚ್ಚಿನವರು ದಲಿತೇತರರೇ ಆಗಿದ್ದು, ಅವರೊಂದಿಗೆ ಇತರ ದಲಿತೇತರರು ಗಣನೀಯ ಸಂಖ್ಯೆಯಲ್ಲಿ ಭಾಗವಹಿಸಿ, ದಲಿತ ಚಳುವಳಿಯ ಹಳೆಯ ದಿನಗಳನ್ನು ನೆನಪಿಗೆ ತಂದದ್ದು. ಆದರೆ ಬಹುತೇಕ ಮತ್ತು ಪ್ರಮುಖ ದಲಿತ ಲೇಖಕರ ಗೈರು ಹಾಜರಿ ಎದ್ದು ಕಂಡು, ಸಮ್ಮೇಳನದ ನಿಜವಾದ ಯಶಸ್ಸಿಗೆ ಭಂಗ ಉಂಟಾದದ್ದೂ ನಿಜ. ಇದಕ್ಕೆ ಕಾರಣ, ದಲಿತ ಚಳುವಳಿಯ ಭೌತಿಕ ಒಡಕಿನಷ್ಟೇ ದಲಿತ ಲೇಖಕರ ಮಾನಸಿಕ ಒಡಕೂ ಕಾರಣವಿದ್ದೀತು. ಏಕೆಂದರೆ, ದಲಿತ ಬರವಣಿಗೆ ಎಂಬುದೇ ಇಂದು ತನ್ನ ವಿಶಿಷ್ಟ 'ಶೀಲ'ವನ್ನು ಕಳೆದುಕೊಂಡು,

ಕನ್ನಡ ಸಾಹಿತ್ಯದ ಸಾರ್ವತ್ರಿಕ ರಾಜಕಾರಣದ ಮಧ್ಯೆ ಕಾಣೆಯಾಗಿದೆಯಲ್ಲ? ಹಾಗಾಗಿ ಇವರ ಗೈರು ಹಾಜರಿ ಈ ಸಮ್ಮೇಳನದ ಸಂಭ್ರಮವನ್ನೇನೂ ಕಡಿಮೆ ಮಾಡಲಿಲ್ಲವಾದರೂ, ಸಮ್ಮೇಳನದ ಉದ್ದೇಶ- ಗುರಿಗಳನ್ನು ವಿಚಲಿತಗೊಳಿಸಿ ಅನುಮಾನಾಸ್ಪದವನ್ನಾಗಿ ಮಾಡಿದ್ದಂತೂ ಸತ್ಯ. ಏಕೆಂದರೆ, ದಲಿತ ಏಕತೆ ಸಾಧಿತವಾಗುವ ಮುನ್ನವೇ ಇದ್ದಕ್ಕಿದ್ದಂತೆ ಈ ಸಮ್ಮೇಳನವನ್ನು ಸಂಘಟಿಸಲು ಕಾರಣ ಅಥವಾ ಸ್ಫೂರ್ತಿಯೇನು ಎಂಬುದು ಮಾತ್ರ ಸಮ್ಮೇಳನದುದ್ದಕ್ಕೂ ಕೂಡ ನನಗೆ ಗೊತ್ತಾಗಲಿಲ್ಲ. ಇತ್ತೀಚೆಗೆ ಆರಂಭವಾಗಿದೆಯೆಂದು ಹೇಳಲಾಗುವ ದಲಿತ ಚಳುವಳಿಯ ಏಕತೆಯ ಪ್ರಯತ್ನ ಈ ದಲೇಕದ ನೆಲೆಯಲ್ಲಾದರೂ ಫಲ ನೀಡಿದ್ದಲ್ಲಿ, ಅದು ಒಳ್ಳೆಯ ಆರಂಭವಾದರೂ ಆಗಿರುತ್ತಿತ್ತು ಎಂದು ಯಾರಿಗಾದರೂ ಅನ್ನಿಸಿದ್ದಲ್ಲಿ ಆಶ್ಚರ್ಯವೇನಿಲ್ಲ.

ಈ ವಿಷಾದದೊಂದಿಗೇ ನಾನು ಈ ಸಮ್ಮೇಳನದ ವಿಚಾರ ಗೋಷ್ಠಿಯೊಂದರ ಅಧ್ಯಕ್ಷತೆ ವಹಿಸಿ ಮಾತನಾಡಬೇಕಾಯಿತು. ಗೋಷ್ಠಿಯಲ್ಲಿ ಮಾತನಾಡಬೇಕಿದ್ದ ಇಬ್ಬರು ಪ್ರಮುಖರು ಗೈರು ಹಾಜರಾಗಿದ್ದುದು ಒಂದು ರೀತಿಯಲ್ಲಿ ಒಳ್ಳೆಯದೇ ಆಯಿತೆಂದು ಹೇಳಬೇಕು! ಏಕೆಂದರೆ, ನಮ್ಮ ಎಲ್ಲ ಸಮ್ಮೇಳನಗಳಲ್ಲಿ ಆಗುವಂತೆ, ಇದರಲ್ಲೂ ಉದ್ಘಾಟನಾ ಸಮಾರಂಭವಾಗಲೀ, ನಂತರ ನಡೆದ ಮೊದಲ ವಿಚಾರ ಗೋಷ್ಠಿಯಾಗಲೀ ಸಮಯಕ್ಕೆ ಸರಿಯಾಗಿ ಆರಂಭವಾಗದೆ, ಯದ್ವಾ ತದ್ವಾ ಎಳೆದುಕೊಂಡು ಹೋಗಿ ನಮ್ಮ ಗೋಷ್ಠಿ ಆರಂಭವಾಗುವ ಹೊತ್ತಿಗೆ ಸಂಜೆಯ ಸಾಂಸ್ಕೃತಿಕ ಕಾರ್ಯಕ್ರಮಗಳ ವೇಳೆಯ ಒತ್ತಡ ನಮ್ಮ ಮೇಲೆ ಬೀಳತೊಡಗಿತ್ತು. ಹಾಗಾಗಿ ನಾನು ಟಿಪ್ಪಣಿ ಮಾಡಿಕೊಂಡಿದ್ದ ಎಲ್ಲ ಅಂಶಗಳನ್ನೂ ಮಾತನಾಡಲಾಗಲಿಲ್ಲ. ಹಾಗೇ ಈ ಗೋಷ್ಠಿಯಲ್ಲಿ ವಿಚಾರ ಮಂಡಿಸಿದ ಡಾ.ಉಮೇಶಚಂದ್ರ, ಲಕ್ಷ್ಮೀನಾರಾಯಣ ನಾಗವಾರ, ಶಿವಾನಂದ ಕುಗ್ವೆ, ಎಂ.ಚಂದ್ರಶೇಖರಯ್ಯ, ಬಸವರಾಜ ಸೂಳಿಭಾವಿ ಮತ್ತಿತರ ಗೆಳೆಯರ ಮಾತುಗಳಿಗೆ ಪ್ರತಿಕಿಯಿಸಲಾಗಲಿಲ್ಲ. ಬದಲಿಗೆ, ಇತ್ತೀಚೆಗೆ ನಾನು ಎಲ್ಲಿ ಮಾತನಾಡಲು ಹೋದರೂ ಸಭೆಯ ಮುಂದಿಡುವ ಐದು ಅಂಶಗಳ ಕಾರ್ಯಕ್ರಮವನ್ನು ಈ ಸಭೆಯ ಮುಂದೆಯೂ ಮಂಡಿಸಿದೆ. ಅದನ್ನೀಗ ನನ್ನ ಅಂದಿನ ಟಿಪ್ಪಣಿಗಳನ್ನು ಆಧರಿಸಿ ಇಲ್ಲಿ ದಾಖಲಿಸುತ್ತಿರುವೆ:

ಸ್ನೇಹಿತರೇ,

ಜಗತ್ತನ್ನು ನೋಡುವ, ಗ್ರಹಿಸುವ ವಿಶಿಷ್ಟ ಕ್ರಮವನ್ನು ನನಗೆ ನೀಡಿದರೆಂದು ನಾನು ನಂಬಿರುವ ಸಮಾಜವಾದಿ ಚಿಂತಕ ಡಾ॥ ರಾಮಮನೋಹರ ಲೋಹಿಯಾ ಅವರು ಜಗತ್ತಿನ ಅಗ್ರಗಣ್ಯ ವಿಜ್ಞಾನಿಯೆನಿಸಿದ ಆಲ್ಬರ್ಟ್ ಐನ್‌ಸ್ಟೀನ್‌ರನ್ನು ತಮ್ಮ ಅಮೆರಿಕಾ ಪ್ರವಾಸ ಸಂದರ್ಭವೊಂದರಲ್ಲಿ ಭೇಟಿ ಮಾಡಿದಾಗ, ೨೦ ನಿಮಿಷಗಳಿಗೆ ನಿಗದಿಯಾಗಿದ್ದ ಆ ಭೇಟಿ ಒಂದು ತಾಸನ್ನೂ ಮೀರಿ ಮುಂದುವರೆಯಿತು. ಮಾತುಕತೆ ನಂತರ ಲೋಹಿಯಾರನ್ನು ಬೀಳ್ಕೊಡಲು ಐನ್‌ಸ್ಟೀನರು ತಮ್ಮ ಕುಟೀರದ ಬಾಗಿಲವರೆಗೂ ಬಂದು ಹಾರ್ದಿಕವಾಗಿ ಕೈಕುಲುಕುತ್ತಾ, 'ಇನ್ನೊಮ್ಮೆ ನೀವು ಬರಬೇಕು. ಏಕೆಂದರೆ ಇತ್ತೀಚೆಗೆ ನನ್ನನ್ನು ಭೇಟಿ ಮಾಡಲು

ಬರುವವರಲ್ಲಿ ಮನುಷ್ಯರೇ ಅಪರೂಪವಾಗಿದ್ದಾರೆ...' ಎಂದರಂತೆ! ಇತ್ತೀಚೆಗೆ ನಮ್ಮಲ್ಲಿ ಬಹಳ ಜನಕ್ಕೂ ಹೀಗೇ ಅನ್ನಿಸುತ್ತಿದ್ದಲ್ಲಿ ಆಶ್ಚರ್ಯವಿಲ್ಲ. ಇದಕ್ಕೆ ಅಪವಾದವೆಂಬಂತೆ, ನಮ್ಮ ಭಾವನಾತ್ಮಕ ಒಂಟಿತನದಿಂದ ಬಿಡುಗಡೆ ಎನಿಸುವಂತೆ ನಡೆಯುತ್ತಿದೆ ಈ ಸಮ್ಮೇಳನ. ದಲಿತರ ಸಹವಾಸವೇ– ಅವರೆಲ್ಲ ವಿಚಿತ್ರ ಕಿರಿಕಿರಿಗಳ ನಡುವೆಯೂ– ನಿಜವಾದ ಮನುಷ್ಯರ ಸಹವಾಸ ಎಂದೆನ್ನಿಸುತ್ತದೆ ನನಗೆ! ಇಂದೂ ಸಹ... ಇಂದು ಇಲ್ಲಿ ನನ್ನ ಬಾಲ್ಯ ನೆನಪಿಗೆ ಬರುತ್ತಿದೆ. ಈ ಮಾತನ್ನು ನಾನು ಯಾರನ್ನೂ ಓಲೈಸಲು ಹೇಳುತ್ತಿಲ್ಲ, ಓಲೈಸಿ ನನಗೇನೂ ಆಗಬೇಕಿಲ್ಲ. ಹಾಗೆ ನೋಡಿದರೆ, ದಲಿತರು ಮತ್ತು ಇತರ ದಮನಿತರ ಬಗ್ಗೆ ನನ್ನದು ಕಠಿಣ ನಿಲುವು ಎಂಬುದು ನನ್ನ ಮೇಲಿರುವ ಜನಪ್ರಿಯ ಆರೋಪ!

ಅದಿರಲಿ, ನಾವು ಮೂಲತಃ ಸಮಾಜವಾದಿಗಳೆನಿಸಿಕೊಂಡವರು– ದಲಿತ, ರೈತ, ವಿಚಾರವಾದ, ಕನ್ನಡ ಚಳುವಳಿ, ಪರ್ಯಾಯ ರಾಜಕಾರಣ ಇತ್ಯಾದಿ ರೂಪಗಳಲ್ಲಿ– ವೇದಿಕೆಗಳ ಮೇಲೆ ಹೀಗೆ ಪದೇ ಪದೇ ಸೇರುವುದೇ ನಾವು ಕಿಂಚಿತ್ತೂ ಬದಲಾಗಿಲ್ಲ ಎಂದು ಖಚಿತಪಡಿಸಿಕೊಳ್ಳಲೆಂದು ಕಾಣುತ್ತದೆ! ಬೆಳಿಗ್ಗೆ ಉದ್ಘಾಟನಾ ಸಮಾರಂಭದಲ್ಲಿ ಬೌದ್ಧ ದೀಕ್ಷೆಯ ಬಗ್ಗೆ ಚಂಪಾ ಮತ್ತು ಕೆ.ಟಿ.ಶಿವಪ್ರಸಾದರ ನಡುವೆ ಕಂಡ ಸದ್ಯಕ್ಕೆ ಮುಗಿಯದಂತೆ ತೋರದ ವಾಗ್ವಾದದ ಕಹಿ ಮತ್ತು ನಂತರದ ಗೋಷ್ಠಿಯಲ್ಲಿ ಸ್ವಲ್ಪ ಅಸಭ್ಯವಾಗಿಯೇ ಮಾತನಾಡಿದ ರಾಜಶೇಖರ ನಾಯ್ಡು ಎಂಬುವವರ ಮೇಲೆ ಸರಿಯಾದ ಕಾರಣದಿಂದಲೇ ಹರಿಹಾಯ್ದ ಲಕ್ಷ್ಮೀನಾರಾಯಣ ನಾಗವಾರರ ಮಾತುಗಳಲ್ಲಿದ್ದ ಕ್ರೋಧ ಇದಕ್ಕೆ ಸಾಕ್ಷಿ. ಇತ್ತೀಚಿನ ವರ್ಷಗಳಲ್ಲಿ ನಮ್ಮ ಎಲ್ಲ ಚಟುವಟಿಕೆಗಳೂ ಮಾತು ಮಾತು ಮಾತು ಮಾತ್ರವಾಗಿ, ಮಾತಿನ ಆಟವಾಗಿಯೇ ಮುಗಿಯುತ್ತಿರುವುದರಿಂದ ಹೀಗೆಲ್ಲ ಆಗುತ್ತಿರಬೇಕು, ತಿಳಿಯದು! ಹಾಗಾಗಿ ನಾನು ಹೆಚ್ಚು ಮಾತನಾಡುವುದಿಲ್ಲ. ಮಾತು ನಿಲ್ಲಿಸಿ ನಮ್ಮ ನಿಜ ಜೀವನದಲ್ಲಿ ಅಳವಡಿಸಿಕೊಳ್ಳಬಹುದಾದ ಒಂದು ಕಾರ್ಯಕ್ರಮವನ್ನಷ್ಟೇ ನಿಮ್ಮ ಅವಗಾಹನೆಗಾಗಿ ಮುಂದಿಡುವೆ. ಇದರ ವಿವರಗಳ ಬಗ್ಗೆ ನಾನು ನಿರ್ದಿಷ್ಟವಾಗಿಲ್ಲ. ನಮ್ಮ ನಮ್ಮಲ್ಲೇ ಚರ್ಚಿಸಿ ಅವನ್ನು ನಿರ್ಧರಿಸಿಕೊಳ್ಳಬಹುದು. ಇದಕ್ಕೆ ಹಿನ್ನೆಲೆಯಾಗಿ ಒಂದೆರಡು ಮಾತುಗಳು:

ಈ ಗೋಷ್ಠಿ ಸಮೂಹ ಮಾಧ್ಯಮ, ಸಂಸ್ಕೃತಿ ಮತ್ತು ಜಾಗತೀಕರಣವನ್ನು ಕುರಿತಾಗಿದ್ದರೂ, ಈ ಮೂರರ ಬಗ್ಗೆ ಯಾವುದೇ ಆಳವಾದ ಮಾತು ಇಲ್ಲಿ ಕೇಳಿಬಂದಂತಿಲ್ಲ. ಸಮೂಹ ಮಾಧ್ಯಮ ಇಲ್ಲಿ ಪ್ರಸ್ತಾಪಕ್ಕೇ ಬರಲಿಲ್ಲ! ಅದು ಸಹಜ ಕೂಡಾ. ಇಂದು ಸಮೂಹ ಮಾಧ್ಯಮಗಳಾದರೂ ಎಲ್ಲಿವೆ? ಮೊದಲು 'ಸಮೂಹ'ವೆಂಬುದಿದ್ದರೆ ತಾನೇ ಸಮೂಹ ಮಾಧ್ಯಮ? ಜಾಗತೀಕರಣ ಸಮೂಹ ಅಥವಾ ಸಮುದಾಯ ಎಂಬ ಕಲ್ಪನೆಯನ್ನೇ ಕೊಂದಿದೆ. ಈ ಕೊಲೆಯ ಫಲಾನುಭವಿಗಳು ನಾವೆಲ್ಲ. ಗೆಳೆಯ ಉಮೇಶಚಂದ್ರ ಪ್ರತಿಪಾದಿಸಿದ 'ಉತ್ತರ ಪ್ರದೇಶ ಮಾದರಿ' ಅಥವಾ 'ಮಾಯಾವತಿ ಮಾದರಿ'ಯ ರಾಜಕಾರಣ ಈ ಫಲಾನುಭವದ

ಹಿನ್ನೆಲೆಯಲ್ಲೇ ಹುಟ್ಟಿದಾಗಿದ್ದು ಎಂದಷ್ಟೇ ಹೇಳಿ, ಅದನ್ನು ಒಪ್ಪುವುದು ಅಥವಾ ಬಿಡುವುದನ್ನು ನಿಮ್ಮ ತೀರ್ಮಾನಕ್ಕೇ ಬಿಡಬಯಸುತ್ತೇನೆ.

ಇಂದು ಟಿವಿ ವಾಹಿನಿಗಳ ಬಗ್ಗೆ ಮಾತನಾಡುವಂತೆಯೇ ಇಲ್ಲ. ಅವು ಟಿಆರ್‌ಪಿ ಗುಲಾಮಗಿರಿಗೆ ಬಿದ್ದು ಧರ್ಮ, ಸಂಸ್ಕೃತಿ, ರಾಜಕಾರಣ ಹೀಗೆ ಎಲ್ಲವನ್ನೂ ಮನರಂಜನೆಯ ಸರಕನ್ನಾಗಿ ಮಾಡಿ ಕೂರಿಸಿವೆ. ಇನ್ನು, ಬಹುಶಃ ಇವುಗಳು ಸೃಷ್ಟಿಸಿರುವ ಒತ್ತಡಕ್ಕೆ ಸಿಕ್ಕಿಯೇ ಏನೋ ನಮ್ಮ ಘನತೆವೆತ್ತ ಪತ್ರಿಕೆಗಳು ಮುಖರಹಿತವಾಗತೊಡಗಿವೆ. ವಾರಕ್ಕೊಮ್ಮೆಯೋ ಎರಡು ಬಾರಿಯೋ ಅಷ್ಟೇ ನಮ್ಮ ಪ್ರಮುಖ ಪತ್ರಿಕೆಗಳ ಮೂರ್ಣ ಮುಖ (ಪುಟ) ಕಾಣಸಿಗುವುದು! ತಮ್ಮ ಮುಖ ಚಹರೆಯನ್ನು ಕಾಯ್ದುಕೊಳ್ಳಲಾಗದ, ತನ್ನ ಮಾಧ್ಯಮ ಅಸ್ಮಿತೆಯ ಬಗ್ಗೆಯೇ ಗೌರವ ಉಳಿಸಿಕೊಳ್ಳಲಾಗದ ಯಾವ ಪತ್ರಿಕೆ ಏನು ಹೇಳಿದರೂ ನಾವು ಅನುಮಾನದಿಂದಲೇ ನೋಡಬೇಕಾಗಿದೆ. ಯಾವ ಹುತ್ತದ ಆಳದಲ್ಲಿ ಯಾವ ಹಾವಿದೆಯೋ ಯಾರಿಗೆ ಗೊತ್ತು?

ಹಾಗಾಗಿ ನಮಗೆ ಉಳಿದಿರುವುದು ಒಂದೇ ದಾರಿ. ನಮ್ಮ ಒಳಗಿನ ದನಿಯನ್ನು ಕಾಪಿಟ್ಟುಕೊಂಡು, ಅದರ ಮಾತು ಕೇಳುವಷ್ಟು ಗರಿಷ್ಠ ಎಚ್ಚರ ಮತ್ತು ಕನಿಷ್ಠ ಸಂಯಮಗಳನ್ನು ನಾವು ರೂಢಿಸಿಕೊಳ್ಳುವುದು. ಇಂದಿನ ಹೊರಗಣ ಆಕರ್ಷಣೆಗಳ ಒತ್ತಡಗಳ ನಡುವೆ ಇದು ಕಷ್ಟ. ಆದರೆ ನಾವು ಹೊರಗೆ ಹೇಳುವ ನಮ್ಮ ಗುರಿ ಮತ್ತು ಉದ್ದೇಶಗಳ ಬಗ್ಗೆ ಪ್ರಾಮಾಣಿಕವಾಗಿದ್ದರೆ, ಇದನ್ನು ಬಿಟ್ಟು ಬೇರೆ ದಾರಿಯಿಲ್ಲ. ಹಾಗಾಗಿ ನನ್ನ ಈ ಐದು ಅಂಶಗಳ ಕಾರ್ಯಕ್ರಮ. ಈ ಕಾರ್ಯಕ್ರಮದ ಅನಿವಾರ್ಯತೆ ಮತ್ತು ಪ್ರಸ್ತುತತೆಗಳನ್ನು ಅರಿತುಕೊಳ್ಳಲು ಮೊದಲಾಗಿ ಇತ್ತೀಚೆಗೆ ಸಾರ್ವಜನಿಕ ಚರ್ಚೆಗಳಲ್ಲಿ ಬಹುವಾಗಿ ಪ್ರಸ್ತಾಪಿತವಾಗುವ ಎರಡು ಅಂಶಗಳ ಬಗ್ಗೆ ನಮಗೆ ಸ್ಪಷ್ಟತೆ ಇರಬೇಕು.

ಒಂದು: ಸಾಮಾಜಿಕ ನ್ಯಾಯವೆಂದರೆ ಜಾತಿ ನ್ಯಾಯವಲ್ಲ. ಏಕೆಂದರೆ, ಜಾತಿ ಅನ್ನುವುದು ಕೆಟ್ಟದ್ದು, ಬಿಡಬೇಕಾದದ್ದು. ಹೆಣ ಸುಡಲು ಬಳಸುವ ಕೋಲನ್ನು ಕೊನೆಗೆ ಹೆಣದೊಡನೆಯೇ ಸುಡಬೇಕಾದಂತೆ ಜಾತಿಯನ್ನೂ ಅಂತಿಮವಾಗಿ ಸುಡಬೇಕಾಗಿದೆ. ಈ ಅರಿವಿನೊಂದಿಗೇ ಸಾಮಾಜಿಕ ನ್ಯಾಯದ ಮಾತಾಡಬೇಕು.

ಎರಡು: ಅಭಿವೃದ್ಧಿ ಎಂದರೆ ಹೊರಗಿನ ಅಭಿವೃದ್ಧಿ ಅಲ್ಲ. ಒಳಗಿನ ಅಭಿವೃದ್ಧಿ. ಹೊರಗಿನ ರಸ್ತೆ, ಸೇತುವೆ, ದೂರಸಂಪರ್ಕ, ಉನ್ನತ ಶಿಕ್ಷಣ, ಸಂಶೋಧನೆ, ಕಾರ್ಖಾನೆ, ಕಟ್ಟಡ ಇತ್ಯಾದಿಗಳೆಲ್ಲ ನಮ್ಮ ಒಳಗಿನ ಅಭಿವೃದ್ಧಿ ಅಂದರೆ ಸಾರ್ವತ್ರಿಕ ಮತ್ತು ವೈಯುಕ್ತಿಕ ಶಾಂತಿ, ನೆಮ್ಮದಿ, ಸಮತೋಲನಗಳನ್ನು ಸಾಧಿಸುವಂತಿರಬೇಕು. ಇಲ್ಲದಿದ್ದರೆ ಅದು ಅಭಿವೃದ್ಧಿ ಅಲ್ಲ. ಬರೀ ಅಹಂಕಾರ, ಡೌಲು, ಅಶಾಂತಿ.

ಇದನ್ನು ಅರಿತುಕೊಂಡವರಿಗೆ, ಇದೀಗ ಐದು ಅಂಶಗಳ ಈ ಕಾರ್ಯಕ್ರಮ:

೧. ಸರಾಸರಿ ಐದಾರು ಜನರ ಒಂದು ಸಾಮಾನ್ಯ ಕುಟುಂಬ ತಿಂಗಳಿಗೆ ಇಪ್ಪತ್ತೈದು ಸಾವಿರ ರೂಪಾಯಿಗಳನ್ನು ಮೀರಿ ಜೀವನ ನಿರ್ವಹಣೆಗೆ ಖರ್ಚು ಮಾಡುವುದನ್ನು ಸಾಮಾಜಿಕ ಪಾಪವೆಂದು ಪರಿಗಣಿಸುವುದು. (ದೊಡ್ಡ ನಗರಗಳಲ್ಲಿ ಇದರ ಮಿತಿಯನ್ನು ಸೂಕ್ತವಾಗಿ ನಿರ್ಧರಿಸಬಹುದು.) ಇದನ್ನು ಮೀರಿದ ಆದಾಯವನ್ನು ಸಮಾನ ಮನಸ್ಕರು ಒಟ್ಟಿಗೆ ಸೇರಿ ಒಂದು ಸಾಮಾನ್ಯ ನಿಧಿ ಅಥವಾ ಟ್ರಸ್ಟ್ ಮಾಡಿಕೊಂಡು ಸಾರ್ವಜನಿಕ ಹಿತಕ್ಕೆ ಬಳಸುವ ವ್ಯವಸ್ಥೆ ಮಾಡಿಕೊಳ್ಳಬಹುದು.

೨. ನಮ್ಮ ಕುಟುಂಬಗಳಲ್ಲಿ ಒಂದಾದರೂ ಅಂತರ್ಜಾತೀಯ ವಿವಾಹ ನಡೆಯುವಂತಹ ವಾತಾವರಣ ನಿರ್ಮಾಣ ಮಾಡುವುದು. ಇದು ಯಾವುದೇ ಕಾರಣದಿಂದ ಸಾಧ್ಯವೇ ಆಗದಿದ್ದಲ್ಲಿ ಪರಿಶಿಷ್ಟ ಜಾತಿ/ವರ್ಗದ ಮಕ್ಕಳನ್ನು (ಪರಿಶಿಷ್ಟ ಜಾತಿ/ವರ್ಗಗಳ ಅನುಕೂಲಸ್ಥರು ಬಡ ಕುಟುಂಬಗಳ ಮಕ್ಕಳನ್ನು) ಮನೆಯಲ್ಲಿಟ್ಟುಕೊಂಡು ಓದಿಸುವುದು ಅಥವಾ ಅವರ ಓದಿಗೆ ಹಣಕಾಸಿನ ಸಹಾಯ ಒದಗಿಸುವುದು.

೩. ನಮ್ಮ ಮಕ್ಕಳು ಮತ್ತು ಮೊಮ್ಮಕ್ಕಳನ್ನು ಕನಿಷ್ಟ ೭ನೇ ತರಗತಿಯವರೆಗಾದರೂ ಕನ್ನಡ ಶಾಲೆಯಲ್ಲಿ ಓದಿಸುವುದು.

೪. ಯಾವುದೇ ಚುನಾವಣೆಯಲ್ಲಿ, ಬೇರೆ ಯಾವುದೇ ಸಾರ್ವಜನಿಕ ಮಹತ್ವದ ಕಾರಣವಿಲ್ಲದಿದ್ದಲ್ಲಿ ಪಕ್ಷಬೇಧವಿಲ್ಲದೆ ಅತಿ ಕಡಿಮೆ ಆಸ್ತಿ ಹೊಂದಿರುವ ಅಭ್ಯರ್ಥಿಗೆ ಮತ ಹಾಕುವುದು. (ಏಕೆಂದರೆ ಇವೊತ್ತಿನ ರಾಜಕಾರಣ ನೋಡಿದರೆ, ಸದ್ಯಕ್ಕಾದರೂ ಬಡ ಜನ ಪ್ರತಿನಿಧಿ ಎಂಬುದೇ ದೊಡ್ಡ ಅರ್ಹತೆಯಾಗಿ ಮತ್ತು ಕಡಿಮೆ ಅಪಾಯಕಾರಿಯಾಗಿ ಕಾಣುತ್ತದೆ!)

೫.ಈ ನಾಲ್ಕು ಅಂಶಗಳ ಬಗ್ಗೆ ನಂಬಿಕೆ ಮತ್ತು ಸಹಾನುಭೂತಿ ಹೊಂದಿದವರನ್ನು ನಮ್ಮ ನಿಜವಾದ ಗೆಳೆಯರೆಂದು ಗುರುತಿಸಿ ಈ ಕಾರ್ಯಕ್ರಮದ ಯಶಸ್ಸಿಗಾಗಿ ದುಡಿಯುವುದು.

ಬರೀ ಮಾತುಗಳನ್ನು, ಜಾಣ ಮಾತುಗಳನ್ನು ಆಡುತ್ತಾ ಹತಾಶರಂತೆ, ದುಃಖಿತರಂತೆ, ಹೋರಾಟಗಾರರಂತೆ ನಟಿಸುತ್ತಾ ಓಡಾಡುವುದನ್ನು ಮತ್ತು ಹಾರಾಡುವುದನ್ನು ನಿಲ್ಲಿಸಿ ಮೌನವಾಗಿ ಇದನ್ನು ಮಾಡಲು ಸಾಧ್ಯವೇ ನೋಡೋಣ. ನಮಸ್ಕಾರ.

(ಇದೇ ಸಂದರ್ಭದಲ್ಲಿ ಈ ಸಮ್ಮೇಳನಕ್ಕೆ ಸಂಬಂಧಿಸಿದಂತೆ ಇನ್ನೊಂದು ಸಂಗತಿಯನ್ನು ಹೇಳಲೇಬೇಕು. ಸಮ್ಮೇಳನದ ಕೊನೆಯಲ್ಲಿ ಕೊಟ್ರಪ್ಪ ಹಿರೇಮಾಗಡಿ ಅವರ ಸಮರ್ಥ ನಿರ್ದೇಶನದಲ್ಲಿ ಪ್ರದರ್ಶಿತವಾದ ಮುಕುಂದ ಜೋಷಿಯವರ 'ಬಾಬಾ ಸಾಹೇಬ್ ಅಂಬೇಡ್ಕರ್' ಎಂಬ ಮರಾಠಿ ನಾಟಕದ ಕನ್ನಡ ಅವತರಣಿಕೆ (ಅನುವಾದ: ಬಿ.ಆರ್.ವೆಂಕಟರಮಣ ಐತಾಳ) ಸಮ್ಮೇಳನಕ್ಕೆ ಹೊಸ ಸಂದೇಶ ನೀಡಿತೆಂದೇ ಹೇಳಬೇಕು. ಗಾಂಧಿ– ಅಂಬೇಡ್ಕರ್ ನಡುವಣ ಸಂಬಂಧಗಳನ್ನು ವಿನಾಕಾರಣ ಜಟಿಲಗೊಳಿಸಿ

ವಾತಾವರಣವನ್ನು ಕಲುಷಿತಗೊಳಿಸದೆ, ಅದನ್ನು ಇಂದಿನ ಸಂದರ್ಭಕ್ಕೆ ಹೇಗೆ ವಿಸ್ತರಿಸಿ, ಸಾಮಾಜಿಕ ನ್ಯಾಯದ ಕಲ್ಪನೆಯನ್ನು ಪುನರ್ರೂಪಿಸಬಹುದಾದ ಎಂತಹ ಸಾಧ್ಯತೆಗಳಿವೆ ಎಂಬುದರ ಕಡೆಗೆ ಈ ನಾಟಕ ಹೊಸ ಬೆಳಕು ಚೆಲ್ಲುವಂತಿತ್ತು. ಆದರೆ ಬೆಳಗಾವಿ ಕಡೆಯ ಕೆಲವು ದಲಿತ ಕಾರ್ಯಕರ್ತರು ನಾಟಕದ ನಂತರ ನಿರ್ದೇಶಕರ ಬಳಿ ಈ ವಿಸ್ತರಣೆಯ ಸಾಧ್ಯತೆಗಳನ್ನು ಸೂಚಿಸುವುದೇ ಅಪರಾಧವೆಂಬಂತೆ ಬಿಸಿ ಬಿಸಿ ವಾಗ್ವಾದಕ್ಕೆ ತೊಡಗಿದ್ದುದನ್ನೂ ಕಂಡು, ನಾವು ಸಾಗಬೇಕಾದ ದಾರಿ ಇನ್ನೂ ಸಾಕಷ್ಟು ದೂರವಿದೆ ಎನ್ನಿಸಿದ್ದೂ ನಿಜ.)

('ಸಂವಾದ'ದ ಜನವರಿ, ೨೦೧೧ರ ಸಂಚಿಕೆಯಲ್ಲಿ ಪ್ರಕಟ)

✧✧✧

೨೦. ಅಯೋಧ್ಯಾ ತೀರ್ಪು : ರಾಷ್ಟ್ರ ಗ್ರಹಿಕೆ ಕುರಿತ ದೊಡ್ಡ ಪಲ್ಲಟದ ಸೂಚನೆ

ಅಯೋಧ್ಯೆ ವಿವಾದ ಕುರಿತಂತೆ ಅಲಹಾಬಾದ್ ಉಚ್ಚ ನ್ಯಾಯಾಲಯದ (ವಿವಾದಿತ ಭೂಮಿಯನ್ನು, ಮೊಕದ್ದಮೆಯಲ್ಲಿ ವಾದಿ– ಪ್ರತಿವಾದಿಗಳಾಗಿ ಭಾಗವಹಿಸಿದ ಮೂರು ಪಂಗಡಗಳಿಗೂ ಸಮನಾಗಿ ಹಂಚಿದ ತೀರ್ಪು ಹೊರಬಿದ್ದಾಗಿನಿಂದ ಸಂವಿಧಾನ ತಜ್ಞರೆಂದು ಹೇಳಲಾದ ರಾಜೀವ್ ಧವನ್‌ರಿಂದ ಹಿಡಿದು ಕಟ್ಟಾ ಸೆಕ್ಯುಲರ್‌ವಾದಿಗಳೆಂದು ಹೆಸರಾದ ನಮ್ಮ ಜಿ. ರಾಜಶೇಖರ್‌ರವರೆಗೆ ಬಹಳ ಜನ (ನಮ್ಮವರೇ ಆದ ಶಿವಸುಂದರ್, ವಿ.ಎಸ್.ಶ್ರೀಧರ್, ಕೆ.ಫಣಿರಾಜ್, ರಘುನಂದನ ಇತ್ಯಾದಿ ಹಾಲಿ ಮತ್ತು ಮಾಜಿ ಎಡಪಂಥೀಯರು) ಈ ತೀರ್ಪನ್ನು 'ಪಂಚಾಯ್ತಿ ತೀರ್ಪು', 'ಪಂಚಾಯ್ತಿ ನಿರ್ಣಯ' ಎಂದು ಟೀಕಿಸುವುದು ನಡೆದೇ ಇದೆ. ಜಿ. ರಾಜಶೇಖರ್ ಈ ತೀರ್ಪನ್ನು ಸಮರ್ಥಿಸಿರುವ ಆಶೀಶ್ ನಂದಿಯವರ ವಾದವನ್ನು (*ನೋಡಿ:೨೧.೧೧.೨೦೧೦ರ* 'ಪ್ರಜಾವಾಣಿ'ಯ ಸಾಪ್ತಾಹಿಕ ಪುರವಣಿಯಲ್ಲಿ ಪ್ರಕಟವಾದ ಕೆ.ವಿ.ಅಕ್ಷರ ಅವರ ಅನುವಾದ) ಪೂರ್ಣ ಒಪ್ಪದಿದ್ದರೂ, ಸಾಕಷ್ಟು ಸಹಾನುಭೂತಿಯಿಂದ ನೋಡಿದ್ದಾರೆ. (ಅದೇ ಪತ್ರಿಕೆಯ ೫.೧೨.೨೦೧೦ರ ಪುರವಣಿ ನೋಡಿ.) ಇದೇಕೆಂದು ಇಲ್ಲಿ ತಿಳಿಯದಿದ್ದರೂ, ಕರ್ನಾಟಕದ ಮಟ್ಟಿಗೆ ಉತ್ತಮ ಬೆಳವಣಿಗೆ ಯೆಂದೇ ಭಾವಿಸಬೇಕಿದೆ. ರಾಜ್ಯದ ಕೋಮು ಪರಿಸ್ಥಿತಿ ಬಗೆಗಿನ ಅವರ ಈವರೆಗಿನ ವಿಶ್ಲೇಷಣೆಗಳ ರೀತಿ ನೀತಿಗಳ ಹಿನ್ನೆಲೆಯಲ್ಲಿ ಈ ಮಾತನ್ನು ಹೇಳಬಹುದಾಗಿದೆ.

ನಮ್ಮ ರಾಷ್ಟ್ರ ನಿರ್ಮಾಪಕ(ರಾಷ್ಟ್ರ ಪಿತ ಅಲ್ಲ)ರೆನಿಸಿಕೊಂಡವರು 'ಸ್ವತಂತ್ರ' ಗೊಂಡ; ಆದರೆ ಮತೀಯ ರಾಜಕಾರಣದಿಂದಾಗಿ ವಿಭಜಿತವಾಗಿ ಆಘಾತಗೊಂಡಿದ್ದ ಬಹು ಸಂಸ್ಕೃತಿಯ ಭಾರತವನ್ನು, ರಾಷ್ಟ್ರಪಿತರೆಂದು ಅಧಿಕೃತವಾಗಿ ಕರೆಯಲ್ಪಡುವ ಗಾಂಧೀಜಿ ಯಾವ ಆಶಯವನ್ನಿಟ್ಟುಕೊಂಡು ಸ್ವಾತಂತ್ರ್ಯ ಚಳುವಳಿಯನ್ನು ಕಟ್ಟಿದ್ದರೋ ಆ 'ಗ್ರಾಮ ಸ್ವರಾಜ್' ಆಶಯಕ್ಕೆ ವಿರುದ್ಧವಾಗಿ ಒಂದು ಆಧುನಿಕ (ಕಲ್ಪನೆಯ)– ಸಂಕೀರ್ಣ ಸಾಂಸ್ಥಿಕ ರೂಪದ– ರಾಷ್ಟ್ರವಾಗಿಯೇ ಮುನ್ನೋಡಿದರು. (ರಾಷ್ಟ್ರೀಯ ನಾಯಕತ್ವದಲ್ಲಿ ಕಾಣಲಾರಂಭಿಸಿದ ಈ ನಿರ್ಣಾಯಕ ಬಿರುಕೇ ಗಾಂಧೀಜಿಯ ಕೊಲೆಗೂ ಕಾರಣವಾಯಿತು ಎಂದೂ ಹೇಳಬಹುದು.) ಇವರೆಲ್ಲ ಕಾಲಧರ್ಮಕ್ಕನುಸಾರವಾಗಿಯೋ ಏನೋ, ಆಧುನಿಕತೆಯ– ಅದರ ತಂತ್ರಜ್ಞಾನ ನಿರ್ದೇಶಿತ (ಬದುಕಿನ)ತತ್ವಜ್ಞಾನದ– ಸಾರಾಸಗಟಾದ ಪ್ರವಾಹದಲ್ಲಿ ಕೊಚ್ಚಿ ಹೋಗಿ, ಪ್ರಾಚೀನ ಭಾರತದ ಚರಿತ್ರೆಯಲ್ಲಿ ತಮಗೆ ಕಾಣಿಸಿದ ಎಲ್ಲ ದೌರ್ಬಲ್ಯಗಳಿಗೆ

ಪಶ್ಚಿಮದ ರಾಷ್ಟ್ರ ಕಲ್ಪನೆಯಲ್ಲಿ ಪರಿಹಾರಗಳ ಸಾಧ್ಯತೆಗಳನ್ನು ಕಂಡಿದ್ದರ ಫಲ ಇದಿರಬಹುದು. ('ಪ್ರಾಚೀನ ಭಾರತದ ಚರಿತ್ರೆ' ಎಂಬುದೇ ಒಂದು ಆಧುನಿಕ ಕಲ್ಪನೆ ಎಂಬುದನ್ನೂ ಇಲ್ಲಿ ಸೂಚಿಸಬೇಕು.) ಅದಕ್ಕೆ ತಕ್ಕಂತೆ ಅವರು ಮತ್ತು ಅವರ ವಾರಸುದಾರರು ಆ ಆಧುನಿಕತೆಯನ್ನು ಎತ್ತಿ ಹಿಡಿದು ಪೋಷಿಸುವಂತಹ ಏಕಾತ್ಮಕ ಸ್ವರೂಪದ ಸಂವಿಧಾನವೊಂದರಿಂದ ಅದನ್ನು ಬಂಧಿಸಿ, ಕಳೆದ ೬೦ ವರ್ಷಗಳಲ್ಲಿ ಬಲಿಷ್ಠ ರಾಷ್ಟ್ರ ಕಟ್ಟುವ ಹಲವು ನೆಲೆಯ ಪ್ರಯತ್ನಗಳನ್ನು ನಡೆಸಿರುವರು.

ಇವೆಲ್ಲವೂ ಅವರವರ ಮಟ್ಟಿಗೆ ಪ್ರಾಮಾಣಿಕವಾಗಿಯೇ ಇರಬಹುದು. ಆದರೆ ಇಂದು ಒಮ್ಮೆ ಹಿಂದಿರುಗಿ ನೋಡಿದರೆ, ಅವರ ಈ ಪ್ರಯತ್ನಗಳು ಈ ದೇಶದಲ್ಲಿ ಭಾಷೆ, ಸಂಸ್ಕೃತಿ, ಧರ್ಮ, ರಾಜಕಾರಣ, ಜೀವನ ಶೈಲಿ ಹಾಗೂ ದರ್ಶನ, ಸಾಮಾಜಿಕ ನ್ಯಾಯ, ನೈಸರ್ಗಿಕ ಸಂಪತ್ತಿನ ಬಳಕೆ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದಂತೆ ಎಂತೆಂತಹ ಅನಾಹುತಗಳನ್ನು ಉಂಟು ಮಾಡಿವೆ ಎಂಬುದು ನಮ್ಮ ಅರಿವಿಗೆ ಬರತೊಡಗಿದೆ. ಅಷ್ಟೇ ಅಲ್ಲ, ಅವು ಆ ಮೂಲಕ ಯಾವ ಯಾವ ಜನ ಸಮುದಾಯಗಳನ್ನು ಎಂತೆಂತಹ ಹಿಂಸೆಗಳಿಗೆ ಒಡ್ಡುತ್ತಾ ಬಂದಿವೆ ಎಂಬುದನ್ನೂ ಈಗ ಕಣ್ಣಾರೆ ಕಾಣಬಹುದಾಗಿದೆ. ಅದಕ್ಕಿಂತ ಮುಖ್ಯವಾಗಿ ಈ ಅನಾಹುತ ಮತ್ತು ಹಿಂಸೆಗಳಿಗೆ, ಸ್ವಾತಂತ್ರ್ಯ, ಸಮಾನತೆ, ಸೋದರತೆ ಮುಂತಾದ ಆಧುನಿಕ ಮೌಲ್ಯಗಳನ್ನು ಎತ್ತಿಹಿಡಿಯುವುದೆಂದು ಹೇಳಲಾಗುವ ನಮ್ಮ ಈ ಸಂವಿಧಾನ ನಮ್ಮ ನ್ಯಾಯಾಲಯಗಳ ಮೂಲಕ 'ನ್ಯಾಯ'ದ ಹೆಸರಿನಲ್ಲಿ ಎಷ್ಟೆಷ್ಟು ಕಾಲಾವಧಿಗಳ ನಂತರ ಎಂತಹ ಪರಿಹಾರಗಳನ್ನು ನೀಡಿವೆ ಮತ್ತು ಈ ಸಮಸ್ಯೆಗಳನ್ನು ಎಷ್ಟರ ಮಟ್ಟಿಗೆ ಶಮನಗೊಳಿಸುವಲ್ಲಿ ಯಶಸ್ವಿಯಾಗಿವೆ ಎಂಬುದನ್ನೂ ಕಾಣುತ್ತಿದ್ದೇವೆ. ಇವೆಲ್ಲದರ ಫಲವೇ ನಾವು ಇಂದು ನೋಡುತ್ತಿರುವ ಎರಡಂಕಿ ಪ್ರಗತಿ ದರದಲ್ಲಿ ಒಡೆದು ಹೋಗುವ ಆತಂಕದಲ್ಲಿರುವ, ಪರಿ ಪರಿಯ ಹಿಂಸಾತ್ಮಕ ಭಾರತ ಎಂದರೆ ತಪ್ಪಾಗಲಾರದೇನೋ!

ಈ ಅಯೋಧ್ಯಾ ವಿವಾದವನ್ನು; ಹಲವು ವರ್ಷಗಳ ಕಾಲ ಸುಪ್ತವಾಗಿದ್ದು, ನಂತರ ಅದು ಒಮ್ಮೆಗೇ ಬೆಳೆದು ನಿಂತ ರೀತಿ ಹಾಗೂ ಈ ಬೆಳವಣಿಗೆಯ ರೀತಿಗೆ ಕಾರಣವಾದ ವೈವಿಧ್ಯಮಯ ರೂಪದ ರಾಜಕೀಯ ಒತ್ತಡಗಳ ಹಿಂದಿನ ಒಟ್ಟಾರೆ ಸಂಕಟದ ಧ್ವನಿಯನ್ನು ಗುರುತಿಸುತ್ತಲೇ ಗಮನಿಸಬೇಕು. ಆಗ ಈ ವಿವಾದ ಒಂದು ರೀತಿಯಲ್ಲಿ ಈ ಮೇಲೆ ಸೂಚಿಸಿದ ಎಲ್ಲ ಅ- ಶಮನಿತ ಅನಾಹುತಗಳ ರಾಜಕೀಯ ಮೊತ್ತದಂತೆ ಮತ್ತು ಅವುಗಳೆಲ್ಲದಕ್ಕೆ ಕಿರೀಟಪ್ರಾಯವಾದ ಮಹಾ ಅನಾಹುತವೊಂದರ ರೂಪದಲ್ಲಿ ಕಾಣಬಲ್ಲುದಾಗಿದೆ. ಅಥವಾ ಬೇರೆ ಪರಿಭಾಷೆಯಲ್ಲಿ ಹೇಳುವುದಾದರೆ, ಈ ವಿವಾದವು ಭಾರತವು ಪಶ್ಚಿಮದ ಅರ್ಥದಲ್ಲಿ ಒಂದು ಆಧುನಿಕ ರಾಷ್ಟ್ರವಾಗಿ ಮೂಡುವುದಕ್ಕೆ, ಆರಂಭದಿಂದಲೂ ಆಳದ ಯಾವುದೋ ನೆಲೆಯಿಂದ ವ್ಯಕ್ತವಾಗುತ್ತಿರುವ ಪ್ರತಿರೋಧದ ಪ್ರಯತ್ನವು- ಆ ಪ್ರಯತ್ನ ನಿರಂತರವಾಗಿ ದಮನಕ್ಕೆ ಈಡಾಗುತ್ತಿರುವುದರಿಂದಾಗಿಯೇ- ತಾಳಿರುವ ಒಂದು ವಿಕ್ಷಿಪ್ತ ರೂಪವಾಗಿಯೂ ಕಾಣಿಸಿಗುತ್ತದೆ. ಈ ದೃಷ್ಟಿಯಿಂದ, ಅಲಹಾಬಾದ್ ನ್ಯಾಯಾಲಯದ ಇಬ್ಬರು ನ್ಯಾಯಾಧೀಶರು

ನೀಡಿರುವ ಬಹುಮತದ ತೀರ್ಪಿನ ಹಿಂದೆ, ಇಂತಹ ವಿಷಯಗಳನ್ನು ಕುರಿತ ನಮ್ಮ ಸಂವಿಧಾನದ ಗ್ರಹಿಕೆಯ ಮಿತಿಗಳನ್ನು ಈವರೆಗಿನ ಅನುಭವದ ಆಧಾರದ ಮೇಲೆ ತಾರ್ಕಿಕವಾಗಿಯಲ್ಲದಿದ್ದರೂ, ಭಾವನಾತ್ಮಕ ಸ್ತರದಲ್ಲಿ ಕಂಡುಕೊಂಡ ಅಪರೂಪದ ವಿವೇಕ ಕಾಣುತ್ತದೆ. (ಈ ವಿವಾದದ ಆರಂಭದಲ್ಲೇ, ಇದರ ಪರಿಹಾರ ಸೂಚನೆಗೆಂದು ರಾಷ್ಟ್ರಪತಿಯವರು ಕಳಿಸಿದ್ದ ಪ್ರಸ್ತಾವನೆಯನ್ನು ಸರ್ವೋಚ್ಚ ನ್ಯಾಯಾಲಯ ಪರಿಶೀಲಿಸಲು ನಿರಾಕರಿಸಿತ್ತು; ಮತ್ತು ಇದರ ಫಲವಾಗಿಯೇ ಅಲಹಾಬಾದ್ ಉಚ್ಚ ನ್ಯಾಯಾಲಯದಲ್ಲಿ ಸದರಿ ಮೊಕದ್ದಮೆಯು ಆಸ್ತಿ ವಿವಾದದ ಸದ್ಯದ ರೂಪದಲ್ಲಿ ದಾಖಲಾಯಿತು ಎಂಬುದನ್ನೂ ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬೇಕು.) ಹಾಗಾಗಿಯೇ ಈ ತೀರ್ಪು, ಸದರಿ ವಿವಾದವನ್ನು ಕಟ್ಟುನಿಟ್ಟಾಗಿ ಒಂದು ಕಾನೂನಿನ ಸಮಸ್ಯೆಯಂತೆ ನೋಡದೆ, ಅದನ್ನು ಭಾವನಾತ್ಮಕ ಜಿರುಕಿನಲ್ಲಿ ಹುಟ್ಟಿ, ಕಾಲಕ್ರಮದಲ್ಲಿ ರಾಜಕೀಯ ಕಾರಣಗಳಿಂದಾಗಿ ಜಟಿಲಗೊಂಡ ಒಂದು ಭೌತಿಕ ಆಸ್ತಿ ವಿವಾದವೆಂದು ಪರಿಗಣಿಸಿದ ಪ್ರಬುದ್ಧ ಮನಸ್ಸಿನ ಫಲವೇ ಆಗಿದೆ. (ಹಾಗೇ, ಮೂರನೇ ನ್ಯಾಯಾಧೀಶರು, ಈ ಇಬ್ಬರಿಗೆ ಭಿನ್ನವಾಗಿ ನೀಡಿರುವ ತೀರ್ಪು ಅಪ್ಪಟ ಮತೀಯ ಕಣ್ಣಿನ ತೀರ್ಪಿನಂತೆ ಕಾಣುತ್ತಿದೆ ಏಕೆ ಎಂಬುದೂ ಇಲ್ಲಿ ಚರ್ಚೆಗೆ ಅರ್ಹವಾದ ವಿಷಯವೇ ಆಗಿದೆ)

ಬಹುಮತದ ತೀರ್ಪು ನೀಡಿರುವ ಅಲಹಾಬಾದ್ ನ್ಯಾಯಾಲಯದ ಈ ಇಬ್ಬರು ನ್ಯಾಯಾಧೀಶರು, ಕಾನೂನು ನೋಡಿ 'ನ್ಯಾಯ' ನೀಡುವ ಗೋಜಿಗೆ ಹೋಗದೆ, ಭಾರತದ ಜನರ ಪ್ರಾಚೀನ ಪಾರಂಪರಿಕ ವಿವೇಕವನ್ನು ನಂಬಿ; ಸಾಮುದಾಯಿಕ ನೆಲೆಯಲ್ಲಿ ಸ್ಫೋಟಕ ರೂಪ ಪಡೆಯುತ್ತಾ ಹೋಗುತ್ತಿದ್ದ 'ಚಾರಿತ್ರಿಕ' ಜಗಳವೊಂದನ್ನು 'ಇತ್ಯರ್ಥ' ಮಾಡುವ ಪ್ರಯತ್ನ ಮಾಡಿದ್ದಾರೆ. (ಈ ಪಾರಂಪರಿಕ ವಿವೇಕವನ್ನು ಸದ್ಯದ ಚರ್ಚೆಯ ಸಂದರ್ಭದಲ್ಲಿ ೫.೧೨.೨೦೧೦ರ ಸಾಪ್ತಾಹಿಕ ಪುರವಣಿಯಲ್ಲಿ ಮುಜಾಫರ್ ಅಸ್ಸಾದಿಯವರು ಸೂಚಿಸಿರುವಂತೆ 'ಪಾರಂಪರಿಕ ಸೆಕ್ಯುಲರಿಸಂ' ಎಂದು ಬೇಕಾದರೂ ಕರೆದುಕೊಂಡು ಸಂತೋಷಿಸಬಹುದು! ಹಾಗೇ, ಈ ವಿವೇಕ ಸಿಖ್ ನರಮೇಧ, ಮುಂಬೈ ಗಲಭೆ ಮತ್ತು ಗುಜರಾತ್ ಕೋಮು ಹಿಂಸಾಚಾರಗಳಿಗೆ ಸಂಬಂಧಿಸಿದಂತೆಯೂ ಕ್ರಿಯಾಶೀಲವಾಗಿರುವು ದರಿಂದಲೇ ಈ ಅಪರಾಧಗಳನ್ನು ಮುಚ್ಚಿಹಾಕಲು ನಡೆದಿರುವ ಎಲ್ಲ ಪ್ರಯತ್ನಗಳ ನಡುವೆಯೂ ಅವುಗಳನ್ನು ಕುರಿತ ವಿಚಾರಣೆಗಳು ಮುಂದುವರೆಯುವಂತಹ ವಾತಾವರಣ ನಿರ್ಮಾಣ ವಾಗಿರುವುದು. (ಇದನ್ನು, ಇಂತಹ 'ವಿವೇಕ'ದ ಹಿಂದಿನ ವಿವೇಕವನ್ನು ಪ್ರಶ್ನಿಸಿರುವ ಜಿ. ರಾಜಶೇಖರ್‌ರಂತಹವರು ಗಮನಿಸಬೇಕು.) ಇಂತಹ 'ಇತ್ಯರ್ಥ'ದ ಪ್ರಯತ್ನದಲ್ಲಿ ಈ ನ್ಯಾಯಾಧೀಶರುಗಳು ಭಾರತವನ್ನು, ಅದು ಕಾಲಕ್ರಮದಲ್ಲಿ ಕಟ್ಟಿಕೊಂಡ 'ಚರಿತ್ರೆ'ಯ ಸ್ವರೂಪ ಕ್ಕನುಗುಣವಾಗಿಯೇ ಒಂದು ದೊಡ್ಡ ಪಂಚಾಯತ್‌ನಂತೆ ಗ್ರಹಿಸಿ, ಅದಕ್ಕೆ ತಕ್ಕುನಾದ ಪಂಚಾ ಯಿತಿಕೆ ಮಾಡಿಯೇ ವಿವಾದಿತ ಭೂಮಿಯನ್ನು ವಿವಾದದಲ್ಲಿ ಭಾಗಿಯಾಗಿರುವ ಮೂರೂ ಪಕ್ಷಗಳಿಗೆ ಸಮನಾಗಿ ಹಂಚುವ ತೀರ್ಪು ನೀಡಿದ್ದಾರೆ ಎಂದು ಹೇಳಬಹುದು. ಈ ದೃಷ್ಟಿಯಿಂದ

ಇದು (ದ್ವಂದ್ವಮಾನ ಭೌತವಾದಿ)ಆಧುನಿಕ ಚರಿತ್ರೆಯ ಪರಿಕಲ್ಪನೆಯನ್ನು ನಯವಾಗಿ ಪಕ್ಕಕ್ಕೆ ಸರಿಸುವ ಧೈರ್ಯ ಮಾಡಿರುವ ದೇಸಿ ತಿಳುವಳಿಕೆಯ ಪ್ರಯತ್ನವಾಗಿಯೂ ಕಾಣುತ್ತದೆ.

ಹಾಗಾಗಿ ಈ ತೀರ್ಪನ್ನು ಪಂಚಾಯ್ತಿ ನ್ಯಾಯ ಅಥವಾ ನಿರ್ಣಯ ಎಂದು ಯಾರಾದರೂ ವರ್ಣಿಸಿದರೆ, ಹೇಳಿದರೆ ಅದನ್ನು ಟೀಕೆ ಅಥವಾ ವ್ಯಂಗ್ಯದ ಮಾತಾಗಿ ಕೇಳಿಸಿಕೊಳ್ಳುವ ಅಗತ್ಯವಿಲ್ಲ. ನಿಜ, ಇದನ್ನು ಆಧುನಿಕ ನ್ಯಾಯದಾನ ಪದ್ಧತಿಯ ಪರಿಭಾಷೆಯನುಸಾರ 'ನ್ಯಾಯ'ವೆಂದು ಕರೆಯಲಾಗದಿರಬಹುದು. ಆದರೆ, ಮೊಕದ್ದಮೆ ಹೂಡಿದ್ದ ಸುನ್ನಿ ವಕ್ಫ್ ಮಂಡಳಿಯ ಕೆಲವು ಸದಸ್ಯರ ಹೊರತಾಗಿ, ಈ ದೇಶದ ಮುಸ್ಲಿಂ ಜನಸಮುದಾಯವೂ– ಅದರ ವಿವಿಧ ನೆಲೆಗಳ ನಾಯಕತ್ವವೂ– ಸೇರಿದಂತೆ ಬಹುಪಾಲು ಜನ ಈ ಸ್ಫೋಟಕ ಜಗಳದ ಈ ಪರಿಹಾರವನ್ನು ಅಂತಹ ವಿರೋಧ ಅಥವಾ ಅಸಮಾಧಾನವಿಲ್ಲದೆ ಸ್ವೀಕರಿಸಿರುವುದನ್ನು ನಾವು ಗಮನಿಸಬಹುದು. ಇದು, ಈ ದೇಶದ ಜನತೆ ಆಧುನಿಕತೆಯ ೬೦ ವರ್ಷಗಳ ಪಯಣದ ನಂತರವೂ ಇಂತಹ ವಿಷಯಗಳಲ್ಲಿ ನಿಜವಾಗಿ ಬಯಸುವುದು ಇಂತಹ ಪಂಚಾಯ್ತಿ ನ್ಯಾಯವನ್ನೇ ಎಂಬುದನ್ನು ಸಾರಿ ಹೇಳಿದೆ. (ಈ ತೀರ್ಪಿನ ಬಗ್ಗೆ ಜನ ಗಲಾಟೆ ಮಾಡದಿರಲು ಸರ್ಕಾರ ತೀರ್ಪಿನ ದಿನ ಕೈಗೊಂಡಿದ್ದ ಕಟ್ಟುನಿಟ್ಟಿನ ಭದ್ರತಾ ಕ್ರಮಗಳೇ ಕಾರಣ ಎಂದು ಜಿ. ರಾಜಶೇಖರರಂತೆ ಹೇಳುವವರು, ಹಾಗಿದ್ದರೆ ಅಸಮಾಧಾನಗೊಂಡ ಜನ ಮಾರನೆಯ ದಿನ ಅಥವಾ ನಂತರದ ದಿನಗಳಲ್ಲಿ ಏಕೆ ಯಾವುದೇ ರೀತಿಯ ಗಲಭೆ ಅಥವಾ ಪ್ರತಿಭಟನೆಗೆ ಕೈಹಾಕಲಿಲ್ಲ ಎಂದೂ ವಿವರಿಸಬೇಕು.) ಎಲ್ಲಕ್ಕಿಂತ ಮುಖ್ಯವಾಗಿ, ಇದು ಈ ದೇಶ ನಿಜವಾದ ಅರ್ಥದಲ್ಲಿ 'ನ್ಯಾಯ'ಯುತವಾಗಿ ಮತ್ತು ಶಾಂತಿಯುತವಾಗಿ (ಈ ನ್ಯಾಯ ಮತ್ತು ಶಾಂತಿಗಳನ್ನೇ ಆಶೀಶ್ ನಂದಿಯವರು ತಮ್ಮ ಲೇಖನದಲ್ಲಿ ಕರುಣೆ ಎಂದು ಕರೆದಿರುವುದು.) ಮುನ್ನಡೆಯಬೇಕಾದರೆ ಅದನ್ನು ಒಂದು ರಾಷ್ಟ್ರವಾಗಿ ಗ್ರಹಿಸಬೇಕಾದ ಚೌಕಟ್ಟು ಎಂತಹದಿರಬೇಕು ಎಂಬುದರ ಸೂಚನೆಯೂ ಆಗಿದೆ. ಹಾಗಾಗಿ ಈ ತೀರ್ಪು ನಮ್ಮ ರಾಷ್ಟ್ರದ ಸ್ವರೂಪವನ್ನು ಈವರೆಗಿನ ಅನುಭವಗಳ ಆಧಾರದ ಮೇಲೆ ಪುನರ್ರೂಪಿಸಬೇಕಾದ ಅಗತ್ಯ ಕುರಿತು ದೊಡ್ಡ ಚರ್ಚೆಯನ್ನು ಹುಟ್ಟು ಹಾಕಬಲ್ಲ ಮಹತ್ವವನ್ನೂ ಪಡೆದಿದೆ.

ವಿಚಿತ್ರವೆಂದರೆ, ಈ ತೀರ್ಪನ್ನು ವಿರೋಧಿಸುತ್ತಿರುವ ಎಡ ಪಂಥೀಯ ಕ್ರಾಂತಿಕಾರಿಗಳೂ ಮತ್ತು ಈ ತೀರ್ಪಿನಲ್ಲಿ ತಮ್ಮ ಮುಂದಿನ ವಿರಾಟ್ ವಿಜಯದ ಸಣ್ಣ ಸಾಧ್ಯತೆ ಕಾಣುತ್ತಿರುವ (ರಾಷ್ಟ್ರದಲ್ಲಿನ ಎಲ್ಲ ಧಾರ್ಮಿಕ ಸ್ಥಾನಗಳ ಯಥಾಸ್ಥಿತಿ ಕಾಯ್ದುಕೊಳ್ಳ ಬೇಕೆಂಬ ೧೯೯೧ರ ಕಾಯ್ದೆ ಇಂತಹ ಸಾಧ್ಯತೆಯನ್ನು ಬಲವಾಗಿ ಅಲ್ಲಗಳೆಯುವುದಾದರೂ) ಬಲಪಂಥೀಯ ಕೋಮುವಾದಿಗಳೂ ಮಾರ್ಗಗಳಲ್ಲಿ ಭಿನ್ನವಾಗಿದ್ದರೂ, ಗುರಿಯಲ್ಲಿ ಒಂದೇ ರೀತಿಯ ಧರ್ಮ ಮತ್ತು ನಿರಪೇಕ್ಷ– ವೈಜ್ಞಾನಿಕ– ವಸ್ತುನಿಷ್ಠತೆಯ ಆಧುನಿಕ ರಾಷ್ಟವಾದಿ ಗಳಾಗಿದ್ದಾರೆ. ಹಾಗಾಗಿ ಈ ತೀರ್ಪು ಮತ್ತು ಅದನ್ನು ಸ್ವಾಗತಿಸಿರುವ ಜನತೆ, ಇವರಿಬ್ಬರೂ ಬದಲಾಗಬೇಕಾದ ದಿಕ್ಕನ್ನು ಸೂಚಿಸಿವೆ ಎಂದೇ ಹೇಳಬೇಕು! (ಇಲ್ಲಿ ಆಶೀಶ್ ನಂದಿಯವರು ತಮ್ಮ ಲೇಖನದಲ್ಲಿ

ಬಳಸಿರುವ ಕರುಣೆ ಎಂಬುದನ್ನು ಒಂದು ಶಬ್ದವಾಗಿ ನೋಡದೆ, ಒಂದು ಪರಿಕಲ್ಪನೆಯಾಗಿ ನೋಡಿದರೆ, ಈ ದಿಕ್ಕು ಏನೆಂಬುದು ಅರ್ಥವಾದೀತು!) ಶುಭ ಸಂಗತಿ ಎಂದರೆ, ಬಲ ಪಂಥೀಯ ರಾಷ್ಟ್ರವಾದಿಗಳು ಈ ತೀರ್ಪನ್ನು ಸದ್ಯಕ್ಕಾದರೂ ಒಪ್ಪಿಕೊಳ್ಳುವ ಮೂಲಕ ಮತ್ತು ಎಡಪಂಥೀಯ ರಾಷ್ಟ್ರವಾದಿಗಳು ಈ ವಿವಾದ ಆರಂಭವಾದಾಗಿನಿಂದ ಒಂದು ಜಾಣ ತಂತ್ರವಾಗಿಯಾದರೂ, ತಮ್ಮ ಕಟ್ಟಾ ಸೆಕ್ಯುಲರ್‌ವಾದದ ಅಪ್ಪಟ ನಾಸ್ತಿಕತೆಯನ್ನು ತೊರೆದು, ತಾವೂ ರಾಮವಾದಿಗಳೇ; ಆದರೆ ಹಿಂದುತ್ವವಾದಿಗಳ ತರಹದ ರಾಮವಾದಿಗಳಲ್ಲ ಎಂದು ವಾದಿಸತೊಡಗಿರುವ ಮೂಲಕ (೫.೧೨.೨೦೧೦ರ ಸಾಪ್ತಾಹಿಕ ಪುರವಣಿಯಲ್ಲಿನ ರಘುನಂದನರ ಲೇಖನ ನೋಡಿ) ಬದಲಾವಣೆಗೆ ಸಿದ್ಧರಾಗಿರುವ ಸೂಚನೆ ನೀಡಿದ್ದಾರೆ. ಸರ್ವೋಚ್ಚ ನ್ಯಾಯಾಲಯ ಈ ಉಭಯರಲ್ಲಿನ ಈ ಮಾನಸಿಕ ಬದಲಾವಣೆಯನ್ನು ಯಾವ ನೆಲೆಯಲ್ಲಿ ಗ್ರಹಿಸುವುದು (ರಾಷ್ಟ್ರದ ಹಿತದೃಷ್ಟಿಯಿಂದ ಒಳ್ಳೆಯದಕ್ಕೆಂದೋ ಅಥವಾ ಕೆಟ್ಟದಕ್ಕೆಂದೋ) ಎಂಬುದರ ಮೇಲೆ ಬಹುಶಃ ಅದರ ತೀರ್ಪಿನ ಸ್ವರೂಪ ನಿರ್ಧರಿತವಾಗುತ್ತದೆ.

ಸರ್ವೋಚ್ಚ ನ್ಯಾಯಾಲಯದ ಆ ತೀರ್ಪು ಹೇಗೇ ಇರಲಿ, ಅಲಹಾಬಾದ್ ಪೀಠದ ಸದ್ಯದ ತೀರ್ಪು ಮಾತ್ರ ಸ್ವತಂತ್ರ ಭಾರತದ 'ಮುನ್ನಡೆ'ಯ ಈವರೆಗಿನ ಇತಿಹಾಸವನ್ನು, ಎಲ್ಲ ಆಧುನಿಕ ತಾತ್ವಿಕತೆಗಳ ಹೊರೆಗಳನ್ನು ಕಳಚಿಟ್ಟು ಸಾಮಾನ್ಯ ಜನತೆಯ ಸಾರ್ವತ್ರಿಕ ಮುನ್ನಡೆಯ ದೃಷ್ಟಿಯಿಂದ ಗಮನಿಸಿರುವವರಿಗೆ ನಮ್ಮ ನ್ಯಾಯಾಂಗ ಚರಿತ್ರೆಯಲ್ಲಿನ ಒಂದು ನಿರ್ಣಾಯಕ ಮೈಲಿಗಲ್ಲಾಗಿ ಕಾಣುತ್ತಿದೆ. ಹಾಗೇ ಇಲ್ಲಿ ಅಗತ್ಯವಾಗಿ ಸೂಚಿಸಬೇಕಾದ ಇನ್ನೊಂದು ವಿಷಯವೆಂದರೆ, ಈ ತೀರ್ಪಿಗೂ, ಬಾಬ್ರಿ ಮಸೀದಿ ಉರುಳಿಸಿದ ದುಷ್ಕೃತ್ಯಕ್ಕೂ ಯಾವುದೇ ಸಂಬಂಧವಿರದೆ, ಈ ದುಷ್ಕೃತ್ಯ ಕುರಿತ ಮೊಕದ್ದಮೆ ಪ್ರತ್ಯೇಕವಾಗಿ ಇನ್ನೊಂದು ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿದೆ ಎಂಬುದು.

('ಪ್ರಜಾವಾಣಿ'ಯ 'ಸಾಪ್ತಾಹಿಕ ಪುರವಣಿ'ಯಲ್ಲಿ ಪ್ರಕಟವಾಗದ ಪ್ರತಿಕ್ರಿಯೆ– ಡಿಸೆಂಬರ್, ೨೦೧೦)

✧✧✧

೨೧. ರಾಷ್ಟ್ರೀಯ ಒಕ್ಕೂಟ ತತ್ವ V. S ಭೋಳೆ ಭಾರತೀಯತೆ

ಕರ್ನಾಟಕ ವಿಧಾನ ಸಭೆಯಿಂದ ಬಿಜೆಪಿಯು ರಾಜ್ಯಸಭೆಗೆ ಹೇಮಮಾಲಿನಿ ಯವರನ್ನು ತನ್ನ ಅಭ್ಯರ್ಥಿಯನ್ನಾಗಿ ಆಯ್ಕೆ ಮಾಡಿರುವುದನ್ನು ಆಕ್ಷೇಪಿಸಿರುವವರನ್ನು ಆ ಪಕ್ಷದ ರಾಜ್ಯಾಧ್ಯಕ್ಷ ಕೆ.ಎಸ್.ಈಶ್ವರಪ್ಪನವರು 'ಅವರೇನು ಭಾರತೀಯರಲ್ಲವೇ?' ಎಂದು ಪ್ರಶ್ನಿಸಿದ್ದಾರೆ. ಈ ಪ್ರಶ್ನೆ ಅವರ ಪಕ್ಷ ನಂಬಿರುವ ರಾಷ್ಟ್ರೀಯತೆ ಅಥವಾ ಭಾರತೀಯತೆಯ ಹುಸಿತನಕ್ಕೆ ತಕ್ಕುನಾಗಿಯೇ ಇದೆ. ಏಕೆಂದರೆ, ಯಾರೇ ಒಬ್ಬ ಅಥವಾ ಒಬ್ಬಳು ಭಾರತೀಯ ಎನ್ನಿಸಿಕೊಳ್ಳುವುದು, ಆತ ಅಥವಾ ಆಕೆ ಯಾವುದೇ ಒಂದು ರಾಜ್ಯದ ನಿಜವಾದ ನಿವಾಸಿಯಾಗಿ, ಆ ರಾಜ್ಯದ ಭಾಷೆ– ಸಂಸ್ಕೃತಿಗಳ ಅವಿಭಾಜ್ಯ ಅಂಗವಾಗಿರುವ ಮೂಲಕ. ಹೀಗಿರುವಾಗ ಯಾರಾದರೂ ಇನ್ನೊಂದು ರಾಜ್ಯದ ಪ್ರತಿನಿಧಿ ಯಾಗಲು ತನ್ನ ರಾಜ್ಯದಲ್ಲಿ ಮೈಗೂಡಿಸಿಕೊಂಡ ಭಾರತೀಯತೆ ಯನ್ನು 'ಬಳಸಿ'ಕೊಳ್ಳುವುದು ಭಾರತೀಯತೆಯ ಕಲ್ಪನೆಗೇ ಮಾಡುವ ಅನ್ಯಾಯ ಮತ್ತು ಅಪಚಾರವೆನ್ನಿಸಿಕೊಳ್ಳುತ್ತದೆ. ಅಷ್ಟೇ ಅಲ್ಲ, ಭಾರತೀಯತೆ ಎನ್ನುವುದು ಇಂತಹ ಸಂದರ್ಭಗಳಲ್ಲಿ ಭಾಷೆ–ಸಂಸ್ಕೃತಿಗಳ ಆಧಾರ ಕಳಚಿಕೊಂಡು ರಾಜಕೀಯ ಸಮಯಸಾಧಕ ತನದ ಸಾಧನ ಮಾತ್ರವಾಗುತ್ತದೆ. ಹಾಗೆಂದೇ, ಮಾಸ್ತಿ, ಕುವೆಂಪು ರಂತಹವರು, ನಿಜವಾದ ಕನ್ನಡಿಗನಾಗುವ ಮೂಲಕವೇ ನಿಜವಾದ ಭಾರತೀಯನೂ ಆಗಲು ಸಾಧ್ಯ ಎಂದು ಹೇಳುತ್ತಿದ್ದುದು. ಅಂದರೆ ಕರ್ನಾಟಕದಲ್ಲಿ ಭಾರತೀಯತೆ ಎಂದರೆ ಕನ್ನಡತನವೇ–ಅಥವಾ ಕರ್ನಾಟಕತ್ವವೇ–ಆಗಿದೆ. ಇಲ್ಲಿ ಕನ್ನಡತನ ವಿಲ್ಲದೆ ಭಾರತೀಯತೆ ಎಂಬುದು ದೊಡ್ಡ ಮೋಸ ಮಾತ್ರ.

ಸಭಾರತವೆಂಬುದು ಒಂದು ರಾಷ್ಟ್ರವಾಗಿರುವುದು ಹಲವು ಭಾಷೆ– ಸಂಸ್ಕೃತಿಗಳನ್ನು ಪ್ರತಿನಿಧಿಸುವ ರಾಜ್ಯಗಳ ಒಕ್ಕೂಟವಾಗಿ. ಈ ಪ್ರತಿ ರಾಜ್ಯವೂ ಸ್ವಾತಂತ್ರ್ಯಕ್ಕೆ ಮುನ್ನ ಸಾವಿರಾರು ವರ್ಷಗಳಿಂದ ತಮ್ಮದೇ ಭಾಷೆ– ಸಂಸ್ಕೃತಿಗಳೊಂದಿಗೆ ಸ್ವತಂತ್ರ ರಾಷ್ಟ್ರಗಳಂತೆಯೇ ಇದ್ದವುಗಳು. ಇವನ್ನೆಲ್ಲ ಸ್ವಾತಂತ್ರ್ಯ ಹೋರಾಟದಲ್ಲಿ ಮೂಡಿದ ಹೊಸ ರಾಜಕೀಯ ದರ್ಶನದ ಹಿನ್ನೆಲೆಯಲ್ಲಿ ಒಂದು ಸಾಮಾನ್ಯ ಸಂವಿಧಾನದ ಮೂಲಕ ಒಗ್ಗೂಡಿಸುವಾಗ ನಮ್ಮ ಸಂವಿಧಾನ ನಿರ್ಮಾತೃಗಳು ಹೊಸ ರಾಷ್ಟ್ರದ ರಾಜಕೀಯ ಸ್ಥಿರತೆಯನ್ನು ಗಮನದಲ್ಲಿಟ್ಟುಕೊಂಡು ಕೇಂದ್ರ ಸಂಸತ್ತಿನಲ್ಲಿ ಎರಡು ಸದನಗಳು ಇರುವಂತೆ ನೋಡಿಕೊಂಡರು. ಒಂದು ಜನತೆ ನೇರವಾಗಿ ಆಯ್ಕೆ ಮಾಡುವ ಸದಸ್ಯರಿಂದ ರಚಿತವಾದ ಲೋಕಸಭೆ. ಇನ್ನೊಂದು ರಾಜ್ಯಗಳ ವಿಶಿಷ್ಟ

ಹಿತಗಳನ್ನು ಕಾಪಾಡಲು, ಆಯಾ ರಾಜ್ಯಗಳ ಶಾಸಕರು ಆಯ್ಕೆ ಮಾಡುವ ಸದಸ್ಯರಿಂದ ರಚಿತವಾಗುವ ರಾಜ್ಯಗಳ ಸಭೆ– ರಾಜ್ಯಸಭೆ. ಹಾಗಾಗಿಯೇ ಸಂವಿಧಾನ ಕರ್ತೃಗಳು, ರಾಜ್ಯಸಭೆಗೆ ಆಯ್ಕೆಯಾಗುವವರು, ಅವರು ಯಾವ ರಾಜ್ಯದಿಂದ ಆಯ್ಕೆಯಾಗುವರೋ ಆ ರಾಜ್ಯದ ನಿವಾಸಿಗಳೇ ಆಗಿರಬೇಕೆಂದು ಕಾನೂನು ಮಾಡಿದ್ದರು. ಈ ಅರ್ಥದಲ್ಲಿ ನಮ್ಮದು ಮೂಲತಃ ಒಕ್ಕೂಟ ರಾಷ್ಟ್ರ.

ಆದರೆ ಭಾರತ ಎಂಬ ಈ ಒಕ್ಕೂಟ ರಾಷ್ಟ್ರವನ್ನು ಇತ್ತೀಚಿನ ವರ್ಷಗಳಲ್ಲಿ ರಾಜಕೀಯ ಮುತ್ಸದ್ದಿಗಳಿಗಿಂತ ದೊಡ್ಡ ದೊಡ್ಡ ವಾಣಿಜ್ಯ ಹಿತಾಸಕ್ತಿಗಳ ದಲ್ಲಾಳಿಗಳು ಆಳತೊಡಗಿದ ಸಂದರ್ಭ ಉಂಟಾದ ಮೇಲೆ, ಅವರು ತಮ್ಮ ಆಳ್ವಿಕೆಯನ್ನು ಬಲಪಡಿಸಿಕೊಳ್ಳಲು, ಅದಕ್ಕೆ ಅಡ್ಡಿಯಾಗತೊಡಗಿದ್ದ ನೆಲಮೂಲ ಸಂಸ್ಕೃತಿಯನ್ನು ಆಧರಿಸಿದ ಒಕ್ಕೂಟ ತತ್ವವನ್ನು ನಿಧಾನವಾಗಿ ನಾಶ ಮಾಡತೊಡಗಿದರು. ಆ ಮೂಲಕ ವಿವಿಧ ರಾಜ್ಯಗಳ ಭಾಷೆ–ಸಂಸ್ಕೃತಿಗಳನ್ನು ಹಿನ್ನೆಲೆಗೆ ಸರಿಸುತ್ತಾ, ಜಾಗತಿಕ ಭವ್ಯ ಭಾರತದ ಕನಸನ್ನು ಬಿತ್ತಿ ಸ್ಥಳೀಯ ಬೇರುಗಳೇ ಇಲ್ಲದ ಭೋಳೆ ಭೋಳೆಯಾದ– ಹುಸಿ ಎಂದೂ ಎನ್ನಬಹುದಾದ– ಭಾರತೀಯತೆಯ ಕಲ್ಪನೆಯನ್ನು ಪೋಷಿಸತೊಡಗಿದರು. ಇವರಿಗೆ ಬೆಂಬಲವಾಗಿ ನಿಂತದ್ದು, ಧರ್ಮದ ಹೆಸರಿನಲ್ಲಿ ಏಕರೂಪಿಯಾದ ಅಖಿಲ ಭಾರತ ಸಂಸ್ಕೃತಿಯೊಂದನ್ನು ಆವಿಷ್ಕರಿಸಿಕೊಂಡು ಭಾರತವನ್ನು ಬೌದ್ಧಿಕವಾಗಿ ಆಳುತ್ತಿದ್ದ; ಆದರೆ, ಸ್ವಾತಂತ್ರ್ಯ ಹೋರಾಟ ರೂಪಿಸಿಕೊಟ್ಟ ಹೊಸ ಸಾಮಾಜಿಕ ದರ್ಶನದಿಂದಾಗಿ ಆ ಸವಲತ್ತನ್ನು ಕಳೆದುಕೊಂಡಿದ್ದ ಪುರೋಹಿತಶಾಹಿ. ಈ ಇಡೀ ಪ್ರಕ್ರಿಯೆಗೆ ಮೊದಲಿಂದ ಕೊನೆಯವರೆಗೆ ಒಂದು ರಾಜಕೀಯ ಸೈದ್ಧಾಂತಿಕ ಸ್ವರೂಪ ನೀಡಿ, ತನ್ನ ಅದ್ಭುತ ಸಂಘಟನಾ ಸಾಮರ್ಥ್ಯದ ಮೂಲಕ ಜನರ ಮಧ್ಯೆ ಅಧಿಕೃತ ಮಾನ್ಯತೆಯನ್ನೂ ಒದಗಿಸಿಕೊಟ್ಟ ಪಕ್ಷವೆಂದರೆ ಭಾರತೀಯ ಜನತಾ ಪಕ್ಷ. ಹಾಗಾಗಿಯೇ ಈ ಪಕ್ಷದ ನೇತೃತ್ವದ ಎನ್.ಡಿ.ಎ. ಸರ್ಕಾರದ ಅವಧಿಯಲ್ಲಿಯೇ, ಒಂದು ರಾಜ್ಯದಿಂದ ರಾಜ್ಯಸಭೆಗೆ ಆಯ್ಕೆಯಾಗಲು ಅಭ್ಯರ್ಥಿ ಆ ರಾಜ್ಯದ ನಿವಾಸಿಯಾಗಿರಬೇಕು ಎಂಬ ಕಾನೂನನ್ನೇ ಸಂವಿಧಾನ ತಿದ್ದುಪಡಿಯೊಂದರ ಮೂಲಕ ರದ್ದು ಮಾಡಲಾಗಿದ್ದು! ಆ ಮೂಲಕ ರಾಜ್ಯಸಭೆಯ ಮೂಲ ಉದ್ದೇಶವನ್ನೇ ಭಂಗಗೊಳಿಸಿದ್ದು!!

ಇದಕ್ಕಾಗಿ ಬಿಜೆಪಿಯೊಂದನ್ನೇ ದೂಷಿಸಿ ಫಲವಿಲ್ಲ. ಅದು ಸೈದ್ಧಾಂತಿಕವಾಗಿ ಈ ಭಂಗವನ್ನು ಎತ್ತಿ ಹಿಡಿದು ತನ್ನ ರಾಜಕೀಯ ಉದ್ದೇಶವನ್ನು ಈಡೇರಿಸಿಕೊಂಡಿದೆ ಅಷ್ಟೇ. ಮೊದಲೇ ಹೇಳಿದ ಹಾಗೆ, ರಾಜಕಾರಣವೆಂಬುದನ್ನು ಅಧಿಕಾರ ಮತ್ತು ಹಣದ ಜೂಜಿನ ಕಣವನ್ನಾಗಿ ಪರಿವರ್ತಿಸುವಲ್ಲಿ ಭಾಗಿಯಾಗಿದ್ದ ಎಲ್ಲ ಪಕ್ಷಗಳೂ ಈ ಪ್ರಕ್ರಿಯೆಗೆ ತಂತಮ್ಮ ಕೊಡುಗೆ ಸಲ್ಲಿಸಿವೆ. ನಮ್ಮ ರಾಮಕೃಷ್ಣ ಹೆಗ್ಗಡೆ. ಬೊಮ್ಮಾಯಿ, ದೇವೇಗೌಡ ಎಲ್ಲರೂ ಇದರಲ್ಲಿ ಪಾಲುದಾರರು. ಇದೆಲ್ಲದಕ್ಕೆ ಕಿರೀಟವಿಟ್ಟಂತಹ ಸಂಗತಿ ಎಂದರೆ, ಪಂಜಾಬಿನ ನಿವಾಸಿಯಾದ ಮನಮೋಹನ ಸಿಂಗರು ಎರಡು ಬಾರಿ ಈ ರಾಷ್ಟ್ರದ ಪ್ರಧಾನ ಮಂತ್ರಿಯಾಗಿರುವುದೂ ಜನರಿಂದ ನೇರ ಆಯ್ಕೆಯ ಮೂಲಕ ಅಲ್ಲ; ತಾವು ಗೌಹಾತಿ ನಗರದ ನಿವಾಸಿಯೆಂದು

(ಅಲ್ಲೊಂದು ಮನೆ ಪಡೆದು, ಅದರ ವಿಳಾಸದೊಂದಿಗೆ) ಅಫಿಡವಿಟ್ ಸಲ್ಲಿಸಿ ಅಸ್ಸಾಂ ರಾಜ್ಯದಿಂದ ರಾಜ್ಯಸಭೆಗೆ ಆಯ್ಕೆಯಾಗುವ ಮೂಲಕ!

ದುಃಖದ ಸಂಗತಿಯೆಂದರೆ, ಇದನ್ನು ಪ್ರಶ್ನಿಸಿದ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯ ಮನಮೋಹನ ಸಿಂಗ್ ಗೌಹಾತಿಯ ನಿವಾಸಿಯಲ್ಲ ಎಂದು ಸಾಬೀತು ಮಾಡುವಲ್ಲಿ ಅರ್ಜಿದಾರರು ವಿಫಲರಾಗಿದ್ದಾರೆಂದು ಘೋಷಿಸಿ, ಮನಮೋಹನ ಸಿಂಗರ ಆಯ್ಕೆಯನ್ನು ಎತ್ತಿ ಹಿಡಿಯಿತು! ಅಷ್ಟೇ ಅಲ್ಲ, ಅದು ಈ ತಕರಾರೇ ಬೇಡವೆಂದು ಮುಂದೆ ಎನ್.ಡಿ.ಎ. ಸರ್ಕಾರ ಈ ಸಂಬಂಧ ತಂದ ಸಂವಿಧಾನ ತಿದ್ದುಪಡಿಯನ್ನು ಹಿರಿಯ ಪತ್ರಕರ್ತ ಕುಲದೀಪ್ ನಯ್ಯಾರ್ ಪ್ರಶ್ನಿಸಿದಾಗ, ಅವರ ಅರ್ಜಿಯನ್ನು 'ಅಪ್ರಸ್ತುತ' ಎಂದು ತಳ್ಳಿ ಹಾಕಿತು! ಇದನ್ನು ಪೂರ್ಣ ಪೀಠದ ಮುಂದೆ ಪ್ರಶ್ನಿಸುವ ಅವಕಾಶವಿದೆಯಾದರೂ, ಸದ್ಯಕ್ಕೆ ಅದು ಯಾರಿಗೂ ಬೇಡವಾಗಿದೆ. ಏಕೆಂದರೆ, ನಮ್ಮ ಸಂವಿಧಾನ ನಿರ್ಮಾತೃಗಳಿಗೆ ಬಹು ಮುಖ್ಯವೆನಿಸಿದ ಒಕ್ಕೂಟ ತತ್ವವು ಇಂದಿನ ಜಾಗತೀಕರಣ ಸೃಷ್ಟಿಸಿರುವ ವಿಕ್ಷಿಪ್ತ ರಾಜಕೀಯ ಪರಿಪ್ರೇಕ್ಷದಲ್ಲಿ, ನ್ಯಾಯಾಂಗವೂ ಸೇರಿದಂತೆ ಯಾರಿಗೂ ಮುಖ್ಯವೆನಿಸದ ಸಂಗತಿಯಾಗಿದೆ. ಹಾಗೆ ನೋಡಿದರೆ, ಭಾರತ ಸಂವಿಧಾನಾತ್ಮಕವಾಗಿ ಏಕಾತ್ಮಕ ರಾಷ್ಟ್ರವೇ ಹೊರತು, ಒಕ್ಕೂಟ ರಾಷ್ಟ್ರವಲ್ಲ ಎಂದು ಸರ್ವೋಚ್ಚ ನ್ಯಾಯಾಲಯದಲ್ಲಿ ಬಹು ತಾಂತ್ರಿಕ ಪರಿಣಿತಿಯೊಂದಿಗೆ ವಾದಿಸಿ ಗೆಲ್ಲಬಲ್ಲ ಸಂವಿಧಾನ ಪಂಡಿತರ ದಂಡೇ ನಮ್ಮ ನಡುವೆ ಇದೆ. ಅವರಿಗೆ ಬಹು ದೊಡ್ಡ ಮೊತ್ತದ ಶುಲ್ಕ ನೀಡಬೇಕಷ್ಟೆ. ಅಂತಹ ಶುಲ್ಕ ನೀಡಬಲ್ಲವರೇ ಇಂದು ಎಲ್ಲೆಲ್ಲೂ ಆಳುತ್ತಿರುವವರೂ ಆಗಿರುವುದರಿಂದ, ಅವರ ಲಾಭಕ್ಕಾಗಿ ರಾಷ್ಟ್ರ ದಿನೇ ದಿನೇ ಹೆಚ್ಚೆಚ್ಚು ಏಕಾತ್ಮಕ ಸ್ವರೂಪ ಪಡೆಯುತ್ತಾ, ಬರೀ ಭೋಳೆಯಾದ ಭಾರತೀಯತೆ ಎಲ್ಲಡೆ ಚಾಲ್ತಿಗೆ ಬರುತ್ತಿದೆ.

ಆದುದರಿಂದ ಹೇಮಮಾಲಿನಿಯವರನ್ನು ನಮ್ಮ ರಾಜ್ಯದಿಂದ ರಾಜ್ಯಸಭೆಯ ಅಭ್ಯರ್ಥಿಯಾಗಿ ಆಯ್ಕೆ ಮಾಡಿದುದಕ್ಕೆ ಬಿಜೆಪಿಯನ್ನು ಹಂಗಿಸಿ ಪ್ರಯೋಜನವಿಲ್ಲ. (ಹಾಗೆ ಹಂಗಿಸಲೇ ಬೇಕಿದ್ದರೆ, ಈ ಬಣ್ಣದ ಬೊಂಬೆಯನ್ನು ರಾಜ್ಯಸಭೆಗೆ ಕಳಿಸಿ ಏನು ಮತ್ತು ಎಷ್ಟು ಗಳಿಸಬೇಕೆಂದಿದ್ದೀರಿ ಎಂದು ಅದರ ಶಾಸಕರನ್ನು ಕೇಳಬಹುದಷ್ಟೆ!) ಬದಲಿಗೆ, ನಮ್ಮ ಸಂವಿಧಾನ ನಿರ್ಮಾಪಕರು 'ರಾಜ್ಯಸಭೆ' ಎಂಬುದರ ಕಲ್ಪನೆಯ ಮೂಲಕ ಎತ್ತಿ ಹಿಡಿದಿದ್ದ ಒಕ್ಕೂಟ ರಾಷ್ಟ್ರ ತತ್ವವನ್ನು ನಾಶಮಾಡಿರುವ ಇಂದಿನ ರಾಜಕೀಯ ವ್ಯವಸ್ಥೆಯ ವಿರುದ್ಧ ಜನಜಾಗೃತಿ ಮೂಡಿಸಬೇಕಿದೆ. ಈ ಕೆಲಸ ಕರ್ನಾಟಕದ ಭಾಷೆ– ಸಂಸ್ಕೃತಿಗಳ ಸ್ವಾಭಿಮಾನದ ಸಂಕೇತವಾಗಿ ಮತ್ತು ಆ ಮೂಲಕ ಒಕ್ಕೂಟ ತತ್ವವನ್ನು ಎತ್ತಿ ಹಿಡಿಯಲು ರಾಜ್ಯಸಭೆಗೆ ಸ್ಪರ್ಧಿಸಿರುವ ಡಾ॥ ಕೆ. ಮರುಳಸಿದ್ಧಪ್ಪ ಅವರಿಗೆ ಬೆಂಬಲವನ್ನು ಸಂಘಟಿಸುವ ಮೂಲಕ ಆರಂಭವಾಗಬೇಕಿದೆ. ರಾಜ್ಯದ ಮೂರು ಪ್ರಮುಖ ಪಕ್ಷಗಳಲ್ಲಿರುವ, ವಿಶೇಷವಾಗಿ ಬಿಜೆಪಿಯಲ್ಲಿನ ವಿಧಾನಸಭಾ ಸದಸ್ಯರು ಮತ್ತು ರಾಜಕೀಯ ಕಾರ್ಯಕರ್ತರು ನಿಜವಾದ ಸ್ವಾಭಿಮಾನಿ ಕನ್ನಡಿಗರೇ ಆಗಿದ್ದರೆ ಮತ್ತು ಕರ್ನಾಟಕವು ತನ್ನೆಲ್ಲ ಭಾಷಾ ಮತ್ತು ಸಾಂಸ್ಕೃತಿಕ

ಅನನ್ಯತೆ ಹಾಗೂ ಗರಿಮೆಗಳೊಂದಿಗೆ ಭಾರತವೆಂಬ ಒಕ್ಕೂಟ ರಾಷ್ಟ್ರದಲ್ಲಿ ಘನತೆವೆತ್ತ ಪ್ರಗತಿಪರ ರಾಜ್ಯವಾಗಿ ಉಳಿಯಬೇಕೆಂಬ ಇಚ್ಛೆ ಅವರಿಗಿದ್ದರೆ, ಇದನ್ನೆಲ್ಲ ನಾಶ ಮಾಡಬಲ್ಲ ಭೋಳೆ ಭಾರತೀಯತೆಯ ಸಂಕೇತವಾಗಿ ನಿಂತಿರುವ ಹೇಮಮಾಲಿನಿಯವರನ್ನು ಸೋಲಿಸುವ ಮೂಲಕ ಕನ್ನಡ ಸಂಸ್ಕೃತಿಯ ನಿಜವಾದ ವಕ್ತಾರರಾಗಿರುವ ಮರುಳಸಿದ್ಧಪ್ಪನವರನ್ನು ಗೆಲ್ಲಿಸುವ ದೃಢ ನಿಶ್ಚಯ ಮಾಡಬೇಕಿದೆ. ಈ ದೃಷ್ಟಿಯಿದ ರಾಜ್ಯ ಬಿಜೆಪಿ ಸದ್ಯಕ್ಕೆ ಮಾಡಬಹುದಾದ ನಿಜವಾದ ರಾಷ್ಟ್ರೀಯ ಕೆಲಸವೆಂದರೆ, ತನ್ನ ಶಾಸಕರಿಗೆ ಇಂತಹವರಿಗೇ ಮತ ಹಾಕಬೇಕೆಂಬ 'ವಿಪ್' ಜಾರಿ ಮಾಡದಿರುವುದು. ಆ ಮೂಲಕ ಈಶ್ವರಪ್ಪನವರಂತಹ ಬಿಜೆಪಿ ನಾಯಕರು, ತಮ್ಮ ಪಕ್ಷದ ವಿಧಾನಸಭಾ ಸದಸ್ಯರಿಗೆ ಕನ್ನಡತನವಿಲ್ಲದ ಭಾರತೀಯತೆಯ ಬಗ್ಗೆ ಎಷ್ಟು ನಂಬಿಕೆಯಿದೆ ಎಂಬುದನ್ನು ಕಂಡುಕೊಂಡು, ನಂತರ ಭಾರತೀಯತೆಯನ್ನು ಕುರಿತ ತಮ್ಮ ವ್ಯಾಖ್ಯಾನಗಳನ್ನು ಪರಿಷ್ಕರಿಸಿಕೊಳ್ಳಬಹುದು! ಹಾಗೆ ನೋಡಿದರೆ, ಇದರಿಂದ ಆ ಪಕ್ಷ ರಾಜ್ಯದಲ್ಲಿ ದೀರ್ಘಕಾಲಿಕ ದೃಷ್ಟಿಯಿಂದ ಕಳೆದುಕೊಳ್ಳುವುದಕ್ಕಿಂತ ಗಳಿಸಿಕೊಳ್ಳುವುದೇ ಹೆಚ್ಚು. ಇದನ್ನು ಅರಿಯಬಲ್ಲ ವಿವೇಕಿಗಳು ಆ ಪಕ್ಷದಲ್ಲಿ ಇದ್ದಾರೆಯೇ? ಕಾದು ನೋಡಬೇಕು!

('ಪ್ರಜಾವಾಣಿ'ಯ 'ಸಂಗತ'ದಲ್ಲಿ ಪ್ರಕಟವಾದ ಬರಹ– ಏಪ್ರಿಲ್, ೨೦೧೧)

✧✧✧

೨೨. ಶಿವಮೊಗ್ಗದ ಅಭಿವೃದ್ಧಿ ಕಥನವೂ, ಗೋಪಾಲಗೌಡರ ರಾಜಕೀಯ ವಾರಸುದಾರಿಕೆಯೂ...

ರಾಜ್ಯ ಬಿಜೆಪಿಯಲ್ಲಿ ಮತ್ತೊಮ್ಮೆ ಭಿನ್ನಮತ ಕಾಣಿಸಿಕೊಂಡು, ಅದರ ನೇತೃತ್ವವನ್ನು ಪಕ್ಷದ ಅಧ್ಯಕ್ಷ ಕೆ.ಎಸ್. ಈಶ್ವರಪ್ಪನವರೇ ವಹಿಸಿದ್ದಾರೆ ಎಂಬ ಸುದ್ದಿ ಹಲವು ಕುತೂಹಲಗಳಿಗೆ ಕಾರಣವಾಗಿದೆ. ಈವರೆಗೆ ಭಿನ್ನಮತ ಸ್ಫೋಟಗೊಂಡಾಗಲೆಲ್ಲ ತಮ್ಮ ನಿಡುಗಾಲದ ಗೆಳೆಯ ಮತ್ತು ಮುಖ್ಯಮಂತ್ರಿ ಯಡಿಯೂರಪ್ಪನವರ ಬೆಂಬಲಕ್ಕೆ ನಿಲ್ಲುತ್ತಿದ್ದ ಅವರು ಇದ್ದಕ್ಕಿದ್ದಂತೆ ಈಗೇಕೆ ಹೀಗೆ ತಿರುಗಿ ಬಿದ್ದಿದ್ದಾರೆ ಎಂಬ ಪ್ರಶ್ನೆ ಎಲ್ಲರನ್ನೂ ಕಾಡುತ್ತಿದೆ. ಅದೂ, ಪಕ್ಷದ ಅಧ್ಯಕ್ಷರಾಗಿ ಮುಖ್ಯಮಂತ್ರಿಯೊಂದಿಗೆ ಸಮಾಲೋಚಿಸಿ ಭಿನ್ನಮತವನ್ನು ಇತ್ಯರ್ಥಗೊಳಿಸ ಬೇಕಾದ ಅವರು ಏಕೆ ಇಂತಹ ತುರ್ತಿಗೆ ಒಳಗಾಗಿದ್ದಾರೆ ಎಂಬ ಪ್ರಶ್ನೆ ಈಗ ಸಹಜವೇ. ಬಿಜೆಪಿಯಲ್ಲಿ, ಅದು ಆಧಿಕಾರಕ್ಕೆ ಬಂದ ಸ್ವಲ್ಪ ದಿನಗಳಲ್ಲೇ ಭಿನ್ನಮತ ಆರಂಭವಾಗಿ ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತಿತ್ತಾದರೂ, ಮುಖ್ಯಮಂತ್ರಿಗಳು ಕಳೆದ ಅಕ್ಟೋಬರ್‌ನಲ್ಲಿ ವಿಶ್ವಾಸ ಮತ ಯಾಚಿಸಿ ಅದನ್ನು ಗೆದ್ದಾಗಿನಿಂದ ಮತ್ತು ಅದರ ಫಲವಾಗಿ ಎರಡು ಡಜ಼ನ್‌ಗೂ ಹೆಚ್ಚು ಶಾಸಕರು ತಮ್ಮ ಶಾಸಕತ್ವ ಕಳೆದುಕೊಂಡು ಕೋರ್ಟು ಕಛೇರಿಗಳಿಗೆ ಅಲೆಯುವಂತಾ ದಾಗಿನಿಂದ ಸಹಜವಾಗಿಯೇ ಕಾಣೆಯಾಗಿತ್ತು. ಆದರೆ ಮೊನ್ನೆ ಎಚ್.ಡಿ.ಕುಮಾರಸ್ವಾಮಿ ಯವರು ಯಡಿಯೂರಪ್ಪನವವರ ಮಕ್ಕಳೂ ಇರುವ 'ಪ್ರೇರಣಾ ಶಿಕ್ಷಣ ಟ್ರಸ್ಟ್'ನ ದೇಣಿಗೆ 'ದುರ್ವ್ಯವಹಾರ'ವನ್ನು ಬಯಲಿಗೆಳದಾಗಿನಿಂದ ಮತ್ತೆ ಅದು ಮತ್ತೆ ಕಾಣಿಸಿಕೊಂಡಿದೆ. ಅಂದರೆ, ಪಕ್ಷದ ಶಾಸಕರು ಈಗ ಈ ಭ್ರಷ್ಟಾಚಾರದ ಪ್ರಕರಣದಿಂದ ತಮ್ಮ ಪಕ್ಷದ ವರ್ಚಸ್ಸಿಗೆ ಧಕ್ಕೆಯಾಗಿದೆಯೆಂದು ಭಾವಿಸಿದ್ದಾರೆಂದು ಅಂದುಕೊಳ್ಳಬ ಹುದೇ? ಆದರೆ ಇವರೆಲ್ಲ ಭ್ರಷ್ಟಾಚಾರ ಮತ್ತು ಸ್ವಜನ ಪಕ್ಷಪಾತಗಳ ಬಗ್ಗೆ ಅಷ್ಟು ಸೂಕ್ಷ್ಮಮತಿಗಳಾಗಿದ್ದರೆ, ಯಡಿಯೂರಪ್ಪ ನವರೇ ಈ ಹಿಂದೆ ಪರೋಕ್ಷವಾಗಿ ಹೌದೆಂದು ಒಪ್ಪಿಕೊಂಡಂತಹ ಇಂತಹ ಹಲವು ಪ್ರಕರಣಗಳು ಬಯಲಾದಾಗಲೇ ಬಂಡೇಳಬೇಕಿತ್ತಲ್ಲವೇ? ಅಥವಾ ಈಗ ಬಂಡೆದ್ದಿರುವುದು, ಇನ್ನು ಇದನ್ನೆಲ್ಲ ಸಹಿಸಲಾಗದು ಎಂದೇ? ಇದನ್ನೆಲ್ಲ ಎಂದರೆ ಯಾವುದನ್ನೆಲ್ಲ? ಈ ಪ್ರಶ್ನೆಗೆ ಸಿಗುವ ಉತ್ತರದಲ್ಲಿ ದ್ದಂತಿದೆ, ಈಶ್ವರಪ್ಪನವರೇಕೆ ಸದ್ಯದ ಭಿನ್ನಮತದ ಬೆಂಬಲಕ್ಕೆ ನಿಂತಿದ್ದಾರೆ ಎಂಬ ಪ್ರಶ್ನೆಗೂ ಉತ್ತರ!

ಶಿವಮೊಗ್ಗ ಜಿಲ್ಲೆಯ ರಾಜಕಾರಣದ ಒಳಸುಳಿಗಳನ್ನು ಬಲ್ಲವರ ಪ್ರಕಾರ, ಯಡಿಯೂರಪ್ಪನವರ ಮೇಲಿನ ಈಶ್ವರಪ್ಪನವರ ಅಸಮಧಾನ ಇತ್ತೀಚಿನದೇನಲ್ಲ. ಕಳೆದ

ಲೋಕಸಭಾ ಚುನಾವಣೆಗಳ ಸಮಯದಲ್ಲಿ ಯಡಿಯೂರಪ್ಪ ತಮ್ಮ ಮಗ ಬಿ.ವೈ. ರಾಘವೇಂದ್ರ ಅವರನ್ನು ಶಿವಮೊಗ್ಗ ಕ್ಷೇತ್ರದಿಂದ ಸ್ಥಳೀಯ ನಾಯಕರ ವಿರೋಧದ ನಡುವೆಯೂ ಅಭ್ಯರ್ಥಿಯನ್ನಾಗಿ ಮಾಡಿ ಗೆಲ್ಲಿಸಿದಾಗಿನಿಂದಲೇ, ಈಶ್ವರಪ್ಪ ಇದರ ಮರ್ಮದ ಬಗ್ಗೆ ಅನುಮಾನ ತಾಳಿದ್ದರು. ಆದರೆ ಆಗ ಸಚಿವರಾಗಿದ್ದ ಅವರು ಶಿವಮೊಗ್ಗಕ್ಕೆ ಮುಖ್ಯಮಂತ್ರಿಗಳು ಆದ್ಯತೆಯ ಮೇಲೆ ತಂದು ಸುರಿದಿದ್ದ 'ಅಭಿವೃದ್ಧಿ'ಯ ರಾಶಿ ರಾಶಿ ಹಣ ವಿವಿಧ ರಂಗಗಳಲ್ಲಿ ನಡೆಸಿದ್ದ ರೋಚಕ ನೃತ್ಯವನ್ನು ಸವಿಯುತ್ತಾ, ಆ ಬಗ್ಗೆ ಆಳವಾಗಿ ಯೋಚನೆ ಮಾಡಿದಂತ ಕಾಣುವುದಿಲ್ಲ. ಈಗಲೂ ಶಿವಮೊಗ್ಗದಲ್ಲಿ ಅಭಿವೃದ್ಧಿಯ ಹೆಸರಲ್ಲಿ ಹಣದ ಹೊಳೆಯೇ ಹರಿದಿದೆ. ಹಾಗಾಗಿಯೇ, ಯಡಿಯೂರಪ್ಪ ಪ್ರತಿ ಭಿನ್ನಮತ ಶಮನವಾದಾಗಲೂ, ಇನ್ನು ಮುಂದೆ ತಮ್ಮದೇನಿದ್ದರೂ, 'ಅಭಿವೃದ್ಧಿ, ಅಭಿವೃದ್ಧಿ, ಅಭಿವೃದ್ಧಿ' ಎನ್ನುತ್ತಿದ್ದಾರೆ. ಆದರೆ ಇಲ್ಲಿನ ರೈತ ಮುಖಂಡ ಕಡಿದಾಳು ಶಾಮಣ್ಣನವರಂತಹವರಿಗೆ ಇದು '೧೫ ಪರ್ಸೆಂಟ್, ೧೫ ಪರ್ಸೆಂಟ್. ೧೫ ಪರ್ಸೆಂಟ್... (ಕಮೀಷನ್)' ಎಂದು ಕೇಳಿಸುತ್ತಿದೆಯಂತೆ!

ಇಡೀ ಶಿವಮೊಗ್ಗ ಎರಡು ವರ್ಷಗಳಿಂದ ಬಾಂಬ್ ಬಿದ್ದ ನಗರದಂತೆ ಕಾಂಕ್ರೀಟಿನ ಹಾಳು ಪಾಳುಗಳ ನಡುವೆ 'ಅಭಿವೃದ್ಧಿ'ಗೆ ಸಜ್ಜುಗೊಳ್ಳುತ್ತಿದೆ. ಜನ ನಗರದ ತುಂಬಾ ಬೃಹತ್ ಗಾಜಿನ ಕಟ್ಟಡಗಳು, ಅದರಲ್ಲಿ ಬಿ.ಪಿ.ಓ.ನಂತಹ ಹೊಸ ಉದ್ಯಮಗಳು, ಅತ್ಯಾಕರ್ಷಕ ಮಾಲ್‌ಗಳು, ತ್ರಿ– ತಾರಾ ಹೋಟೆಲ್‌ಗಳು, ಹೈಟೆಕ್ ಆಸ್ಪತ್ರೆಗಳು, ರಸ್ತೆಯುದ್ದಕ್ಕೂ ಹರಡಿಕೊಂಡ ಮನಮೋಹಕ ಕಟ್ಟಡಗಳುಳ್ಳ ಖಾಸಗಿ ಪಬ್ಲಿಕ್ ಸ್ಕೂಲ್ ಮತ್ತು ತಾಂತ್ರಿಕ ಶಿಕ್ಷಣ ಸಂಸ್ಥೆಗಳು ತಲೆ ಎತ್ತುತ್ತಿರುವುದನ್ನು ನೋಡುತ್ತಿದ್ದಾರೆ. ಇವೆಲ್ಲ ಯಾರ ಒಡೆತನದವು ಎಂಬುದರ ಬಗ್ಗೆ ಅವರು ತಲೆ ಕೆಡಿಸಿಕೊಳ್ಳದೆ, ಮರ ಗಿಡಗಳಿಂದ ತುಂಬಿಕೊಂಡಿದ್ದ ತಮ್ಮ ಶಿವಮೊಗ್ಗ ತನ್ನೆಲ್ಲ ಸರಳ ಸೌಂದರ್ಯವನ್ನು ಕಳೆದುಕೊಂಡು ಬೆಂಗಳೂರಿನ ವಿಸ್ತರಣಾ ಕೌಂಟರ್‌ನಂತೆ ಆಗುತ್ತಿರುವ ಬಗ್ಗೆ; ಒಂದೇ ಸಮನೆ ಏರುತ್ತಿರುವ ತಾಪಮಾನದ ನಡುವೆಯೂ ಸಂಭ್ರಮಿಸುತ್ತಿದ್ದಾರೆ. ಕಾರಣ, ಇಲ್ಲಿ ಈ ಇಬ್ಬರು ನಾಯಕರು ಅಧಿಕಾರಕ್ಕೆ ಬಂದಾಗಿನಿಂದ ಸೂಜಿ ಮೊನೆ ತಾಕಿದರೆ ಸಾಕು ಒಡೆದು ಹೋಗುವಷ್ಟು ವೇಗದಲ್ಲಿ ಊದಿಕೊಳ್ಳುತ್ತಾ ಹೋದ 'ರಿಯಲ್ ಎಸ್ಟೇಟ್' ಉದ್ಯಮ ಸೃಷ್ಟಿಸಿದ 'ಅಭಿವೃದ್ಧಿ ಆರ್ಥಿಕತೆ'ಯ ಹಡಬೆ ಹಣ ಮಧ್ಯಮ ವರ್ಗದವರಿಗೆ ಹೂಡಿಕೆಯ ನವ ನವೀನ ಪ್ರವೇಶಗಳನ್ನು ತೆರೆದಿಟ್ಟಿದೆ. ಆದರೆ ಕೆಳ ಮಧ್ಯಮ ಮತ್ತು ಬಡ ವರ್ಗ ಇದರಿಂದ ತತ್ತರಿಸಿ ಹೋಗಿ ನಗರ ಜೀವನದ ಅಂಚಿಗೆ ತಲುಪಿದ್ದಾರೆ. ಹೀಗಾಗಿ ಶಿವಮೊಗ್ಗದಂತಹ ಸಣ್ಣ ಊರು ಈ ಅಭಿವೃದ್ಧಿಯ ಹೊಡೆತವನ್ನು ತಡೆದುಕೊಳ್ಳಬಹುದೇ ಮತ್ತು ಉದ್ದೇಶಿತ ವಿಮಾನ ನಿಲ್ದಾಣ, ಮಾಹಿತಿ ತಂತ್ರ ಜ್ಞಾನದ ಪಾರ್ಕ್, ವಿಶೇಷ ಆರ್ಥಿಕ ವಲಯ, ಜನಾರ್ದನ ರೆಡ್ಡಿವರ ಬೃಹತ್ ಉಕ್ಕಿನ ಕಾರ್ಖಾನೆ ಇತ್ಯಾದಿ ಯೋಜನೆಗಳು ಜಾರಿಗೆ ಬಂದು (ಬಂದರೆ!) ಈ ಹೊಡೆತ ಪೂರ್ಣಗೊಂಡಾಗ ಈ ಊರು ಮತ್ತು ಊರಿನ ಬದುಕು ಯಾರದಾಗಿ, ಏನಾಗಿರುತ್ತದೆ ಎಂಬ ಪರಿವೆಯೇ ಯಾರಿಗೂ ಇದ್ದಂತಿಲ್ಲ.

ಆದರೆ ಸಂದರ್ಭ ಬಂದಾಗಲೆಲ್ಲ ಭಾರತೀಯ ಸಂಸ್ಕೃತಿ ಎಂದು ದೊಡ್ಡ ಗಂಟಲಿನಲ್ಲಿ ಕೂಗಾಡುವ ಈಶ್ವರಪ್ಪ ತಾವು ಬೆಳೆದ ಮತ್ತು ತಮ್ಮನ್ನು ಬೆಳೆಸಿದ ಈ ಊರಿನ ಬಗ್ಗೆ ಹೀಗೆ ಯೋಚನೆ ಮಾಡುವ ಶಕ್ತಿಯನ್ನೇ ಕಳೆದುಕೊಂಡಿರುವುದು ಸಹಜವೇ ಆಗಿದೆ. ಏಕೆಂದರೆ ಹೀಗೆ ಕಳೆದುಕೊಂಡಿದ್ದನ್ನು ಬೀದಿ ಬೀದಿಯಲ್ಲಿ ದೇವಸ್ಥಾನಗಳನ್ನು ಕಟ್ಟಿಸಿ, ಅಲ್ಲಿ ಭರ್ಜರಿ ಪೂಜೆ ಮಾಡಿಸುವ ಮತ್ತು ಅವುಗಳ ಪೂಜಾರಿಗಳ ಕಾಲಿಗೆ ಬೀಳುವ ಮೂಲಕ ತುಂಬಿಸಿಕೊಳ್ಳಬಹುದೆಂದು ಅವರನ್ನು ಬೆಳೆಸಿದ ಆರೆಸ್ಸೆಸ್ ಹೇಳಿಕೊಟ್ಟಂತಿದೆ! ಇದೇ ಮಾತು ಇನ್ನೂ ದೊಡ್ಡದಾಗಿ ಯಡಿಯೂರಪ್ಪನವರಿಗೂ ಅನ್ವಯಿಸುತ್ತದೆಯಾದರೂ, ಶಿವಮೊಗ್ಗ ಹೇಗೂ ಅವರ ಊರಲ್ಲವಲ್ಲ; ಅವರಿಗೆ ಅದು ಹಣ ಹಾಕಿ ಹಣ ತೆಗೆಯುವ ಫಲವತ್ತಾದ ಒಂದು ಹೂಡಿಕೆಯ ಕೇಂದ್ರವಷ್ಟೆ !

ಅದೇನೇ ಇರಲಿ, ಈಶ್ವರಪ್ಪನವರಿಗೆ ಈಗ ಕಾಡತೊಡಗಿರುವ ಚಿಂತೆ ಎಂದರೆ, ನಗರದ ಈ ಅಭಿವೃದ್ಧಿಯ ರಾಜಕೀಯ ಲಾಭವನ್ನು ಪೂರ್ಣವಾಗಿ ಯಡಿಯೂಪ್ಪನವರೇ ಲಪಟಾಯಿಸಿಕೊಂಡು ತಮ್ಮ ರಾಜಕೀಯ ಜೀವನವನ್ನೇ, ಅದರ ವಾರಸುದಾರಿಕೆಯನ್ನೇ ಮುಗಿಸಹೊರಟಿದ್ದಾರೆಯೇ ಎಂಬುದು. ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ, ಸದ್ಯ ಜಾರಿಯಲ್ಲಿರುವ ಮತ್ತು ಹೊಸದಾಗಿ ಮಂಜೂರಾಗಿರುವ ಕೋಟ್ಯಾಂತರ ರೂಪಾಯಿಗಳ ವೆಚ್ಚದ ನಗರದ ಅಭಿವೃದ್ಧಿ ಯೋಜನೆಗಳ 'ಫಲಾನುಭವ' ಕುರಿತಂತೆ ಯಡಿಯೂರಪ್ಪನವರು ಹಾಕುತ್ತಿರುವ ಹೊಸ ಪಟ್ಟುಗಳು ತಮ್ಮ ರಾಜಕೀಯ ನೆಲೆಗಳನ್ನೇ ದುರ್ಬಲಗೊಳಿಸುವಂತಿವೆಯಲ್ಲವೇ ಎಂಬ ಅನುಮಾನ ನಗರದ ಶಾಸಕರೂ ಆಗಿ 'ಪ್ರಗತಿ ಪರಿಶೀಲನಾ ಸಭೆ'ಯ ಉಸ್ತುವಾರಿ ನೋಡಿಕೊಳ್ಳುತ್ತಿರುವ ಈಶ್ವರಪ್ಪನವರನ್ನು ಕಾಡುತ್ತಿರುವಂತಿದೆ.

ಯಡಿಯೂರಪ್ಪ ಅತಿ ಮಹತ್ವಾಕಾಂಕಿಯಾಗಿ ಕೆಲವು ಆಪ್ತ ಮಂತ್ರಿಗಳು, ಶಾಸಕರು ಮತ್ತು ಉದ್ಯಮಿಗಳ ಕೂಟ ಕಟ್ಟಿಕೊಂಡು ತನ್ನ ಮತ್ತು ತನ್ನ ಕುಟುಂಬದ ಔದ್ಯಮಿಕ ಮತ್ತು ಅದಕ್ಕೆ ಬೆಂಬಲವಾಗಿರಬೇಕಾದ ಕುಟುಂಬದ ರಾಜಕೀಯ ಭವಿಷ್ಯದ ದೃಷ್ಟಿಯಿಂದ ರಾಜ್ಯದಲ್ಲಿ ಅಧಿಕಾರದ ಏಕಸ್ವಾಮ್ಯ ಸ್ಥಾಪಿಸಲು ಹೊರಟಂತಿದೆ ಎಂಬುದು ಈಶ್ವರಪ್ಪನವರೂ ಸೇರಿದಂತೆ ಈಗ ಭಿನ್ನಮತದ ಧ್ವನಿ ಎತ್ತಿರುವ ಎಲ್ಲರ ಭಯವಾಗಿದ್ದಂತಿದೆ. ಈಶ್ವರಪ್ಪನವರಿಗೆ ಸದ್ಯದ ತುರ್ತೆಂದರೆ, ತನಗೂ ಯಡಿಯೂರಪ್ಪನವರು ಮಕ್ಕಳು ನಡೆಸುತ್ತಿರುವಂತಹ; ಆದರೆ ಅಷ್ಟು ಪ್ರಮಾಣದ್ದಲ್ಲದಿದ್ದರೂ, ಕೋಟ್ಯಾಂತರ ರೂಪಾಯಿಗಳ ಹೂಡಿಕೆಯ ಉದ್ಯಮಗಳನ್ನು ನಡೆಸುತ್ತಿರುವ ಮಗನಿದ್ದಾನೆ ಮತ್ತು ಆತನಿಗೂ ಅದನ್ನು ರಕ್ಷಿಸಿಕೊಳ್ಳಲು ಸಾಧ್ಯವಾಗುವಂತಹ ರಾಜಕೀಯ ಆಕಾಂಕ್ಷೆಗಳಿವೆ ಎಂಬುದನ್ನು ಯಡಿಯೂರಪ್ಪನವರಿಗೆ ಅರ್ಥಮಾಡಿಸುವುದು! ಅಷ್ಟೇ ಅಲ್ಲ, ಈಶ್ವರಪ್ಪನವರ ಅಣ್ಣ ಶಿವಮೊಗ್ಗ ನಗರಸಭೆಯ ಅಧ್ಯಕ್ಷರಾಗಿ ಮತ್ತು ಅವರ ಭಾವ ಮೈದುನ ನಗರಸಭೆಯ ಸದಸ್ಯರೂ ಆಗಿ ಕುಟುಂಬದಿಂದ ದೊಡ್ಡ ಪ್ರಮಾಣದ ರಾಜಕೀಯ ಹೂಡಿಕೆಯೂ ನಡೆದಿರುವಾಗ ಇದು ಅವರ ಪಾಲಿಗೆ ಅನಿವಾರ್ಯವೂ ಆಗಿದೆ!

ಯಡಿಯೂರಪ್ಪ ಮತ್ತು ಈಶ್ವರಪ್ಪ ಕಡು ಬಡತನದ ಹಿನ್ನೆಲೆಯಿಂದ ಬಂದವರು. ಯಡಿಯೂರಪ್ಪ ಕೆಲಸ ಹುಡುಕಿಕೊಂಡು ಮಂಡ್ಯದ ಕಡೆಯಿಂದ ಶಿಕಾರಿಪುರಕ್ಕೆ ಬಂದು ವೀರಭದ್ರಶಾಸ್ತ್ರಿಗಳ ರೈಸ್ ಮಿಲ್ಲಿನಲ್ಲಿ ಲೆಕ್ಕ ಬರೆಯುವ ಗುಮಾಸ್ತರಾಗಿ ಮತ್ತು ಬಳ್ಳಾರಿ ಕಡೆಯ ಈಶ್ವರಪ್ಪ ಶಿವಮೊಗ್ಗದ ಮೂಲ ನಿವಾಸಿಗಳು ನೋಡಿದಂತೆ ನಗರದ ಬೀದಿಗಳಲ್ಲಿ ಸೈಕಲ್ ಮೇಲೆ ಊದುಗಡ್ಡಿ ಇತ್ಯಾದಿಗಳನ್ನು ಮಾರುತ್ತಾ ಬದುಕು ಆರಂಭಿಸಿದವರು. ಇಬ್ಬರೂ ಆರೆಸ್ಸೆಸಿನಲ್ಲಿ ಪಳಗಿದ ಧರ್ಮ ದುರಂಧರರು. ಆದರೆ ಆಧುನಿಕ ಅಭಿವೃದ್ಧಿ ಕಲ್ಪನೆಯ ಮಹಾ ಆರಾಧಕರು! ಹಾಗಾಗಿಯೇ ಈಗ ಈ ಇಬ್ಬರೂ ಅಧಿಕೃತವಾಗಿಯೇ ಕೋಟ್ಯಾಧಿಪತಿಗಳು! ಇದನ್ನು ಪ್ರಜಾತಂತ್ರದ ಮತ್ತು ಆಧುನಿಕ ಅಭಿವೃದ್ಧಿ ಮಾದರಿಯ ಯಶಸ್ಸು ಎಂದು ಗುರುತಿಸಬೇಕೋ, ಅಣಕವೆಂದು ಕರೆಯಬೇಕೋ ತಿಳಿಯದಾಗಿದೆ! ಏಕೆಂದರೆ ಇಂದಿನ ಬಹುಪಾಲು ಎಲ್ಲ ಪಕ್ಷಗಳ ಎಲ್ಲ ರಾಜಕಾರಣಿಗಳ ವರಸೆಯೇ ಇದಾಗಿರುವುದಾಗ ಯಾರು ಯಾರನ್ನು, ಏನೆಂದು ಪ್ರಶ್ನಿಸುವುದು?

ಹಾಗೆ ನೋಡಿದರೆ ಇದೆಲ್ಲ ಸಾಧ್ಯವಾಗಿರುವುದು, ಮನಮೋಹನ ಸಿಂಗರು ಅಷ್ಟೇನೂ ಮುಕ್ತವಾಗಿ ಹೇಳದ ಈ 'ಮುಕ್ತ' ಆರ್ಥಿಕ ನೀತಿಯಿಂದಾಗಿ: 'ಗಳಿಸಿ, ಗಳಿಸಿ, ಹೇಗಾದರೂ ಗಳಿಸಿ, ಎಷ್ಟಾದರೂ ಗಳಿಸಿ, ಗಳಿಸುತ್ತಾ ಹೋಗಿ ಅಷ್ಟೆ. ಈ ಸಂಪತ್ತಿನಿಂದ ರಾಷ್ಟ್ರ ತಂತಾನೆ ಅಭಿವೃದ್ಧಿಯಾಗುತ್ತದೆ!'. ದುಡಿಮೆಯ ವ್ಯಾಖ್ಯೆಯನ್ನೇ ಬದಲಿಸಿದ ಈ ಕರೆಗೆ ತಲೆ ಕೆಟ್ಟವರೆಂದು ಹೇಳಲಾಗುವ ಕೆಲ ಗಾಂಧೀವಾದಿ/ಎಡಪಂಥೀಯ ಗುಂಪುಗಳ ಹೊರತಾಗಿ, ಇಡೀ ರಾಷ್ಟ್ರವೇ ಓಗೊಡುತ್ತಿರುವಾಗ ಮತ್ತು ಹಾಗೆ ಓಗೊಡುತ್ತಿರುವವರೇ, ಇದರ ಪರಿಣಾಮವಾಗಿ ದಿನಕ್ಕೊಂದರಂತೆ ಬಯಲಾಗುತ್ತಿರುವ ಕೋಟ್ಯಾಂತರ ರೂಪಾಯಿಗಳ ಹಗರಣಗಳ ಬಗ್ಗೆಯೂ ಹಾಹಾಕಾರ ಎಬ್ಬಿಸುತ್ತಿರುವ ವಿಚಿತ್ರ ಸಂದರ್ಭದಲ್ಲಿ ಯಾರೇ ಆಗಲಿ, ಸುಸಂಗತವಾದ ಯಾವ ಮಾತನ್ನು ಆಡಲು ಸಾಧ್ಯ?

ಆದರೂ ಕೆಲವರು ಮುಗ್ಧವಾಗಿ ಕೇಳುವುದುಂಟು, ಸಮಾಜವಾದಿಗಳ ತವರೂರಾದ ಶಿವಮೊಗ್ಗ ಜಿಲ್ಲೆಯಲ್ಲಿ ಇಂತಹ ರಾಜಕಾರಣ ಹೇಗೆ ಸಾಧ್ಯವಾಯಿತು ಎಂದು. ಹಾಗೆ ಕೇಳುವವರಿಗೆ ಶಿವಮೊಗ್ಗ ಜಿಲ್ಲೆಯ ಬಗ್ಗೆ ಮತ್ತು ಅಲ್ಲಿ ಕ್ರಿಯಾಶೀಲವಾಗಿದ್ದ ಸಮಾಜವಾದಿ ರಾಜಕಾರಣದ ಬಗ್ಗೆ ಒಂದು ಹುಸಿ ರೊಮ್ಯಾಂಟಿಕ್ ಕಲ್ಪನೆ ಮಾತ್ರ ಇದೆ ಎಂದಷ್ಟೇ ಹೇಳಬೇಕಾಗುತ್ತದೆ. ಶಾಂತವೇರಿ ಗೋಪಾಲ ಗೌಡರಂತಹ ಸೂಕ್ಷ್ಮಮತಿಯಾದ ಮತ್ತು ತೀವ್ರ ರಾಜಕೀಯ ಒಳನೋಟಗಳಿದ್ದ ನಿಸ್ಪೃಹ ರಾಜಕಾರಣಿಯೊಬ್ಬ ತನ್ನ ಸೀಮಿತವಾದ ಜೀವಿತಾವಧಿಯಲ್ಲಿ ತನಗೆ ಲಭ್ಯವಿದ್ದ ಅತಿ ಸೀಮಿತವಾದ ಸಂಪನ್ಮೂಲಗಳನ್ನು ಬಳಸಿಕೊಂಡು ಸಾಂಪ್ರದಾಯಿಕ ಆಸ್ತಿ ಮತ್ತು ಜಾತಿ ಸಂಬಂಧಗಳನ್ನು ಸ್ವಲ್ಪ ಮಟ್ಟಿಗೆ ಅಲುಗಾಡಿಸಿದಂತಹ ಹೋರಾಟಗಳನ್ನು ಮಾಡಿದರು. ಆ ಮೂಲಕ ಎಲ್ಲರಿಗೂ ಸಾಧ್ಯವಾಗಬಹುದಾದ ಒಂದು ಸರಳ ಸಭ್ಯ ಜೀವನ ಮಟ್ಟದ ಹೊಸ ಸಮಾಜವೊಂದನ್ನು ಕಟ್ಟುವ ಕನಸೊಂದನ್ನು, ಜಿಲ್ಲೆಯ ಜನತೆಗೆ ನೀಡುವ ಒಂದು ಸಣ್ಣ; ಆದರೆ ಪ್ರಾಮಾಣಿಕ ಪ್ರಯತ್ನ ಮಾಡಿದರು. ಈ ಚರಿತ್ರೆಯ

ನೆನಪಿನ ಹೊರತಾಗಿ, ನಿಜವಾದ ಇನ್ನಾವ ಸಮಾಜವಾದಿ ರಾಜಕಾರಣದ ಪ್ರಭಾವವೂ ಇಲ್ಲಿ ಅದಂತೆ ತೋರುವುದಿಲ್ಲ. ಆಗಿದ್ದಲ್ಲಿ ಅದು ಸಮಾಜವಾದಿ ರಾಜಕಾರಣದ ಹೆಸರಲ್ಲಿ ಅವರ ಅನುಯಾಯಿಗಳು ಎಂದು ಹೇಳಿಕೊಂಡ ಕೆಲವರು ನಡೆಸಿದ ಚಿಲ್ಲರೆ ರಾಜಕಾರಣದ ಪ್ರಭಾವ ಮಾತ್ರ. ಇದರ ಪರಿಣಾಮವಾಗಿಯೇ ಸಮಾಜವಾದ ಎಂಬುದೇ ಚಿಲ್ಲರೆ ರಾಜಕಾರಣವೆಂಬಂತಾಗಿ, ಜಿಲ್ಲೆಯಲ್ಲಿ ಯಡಿಯೂರಪ್ಪ– ಈಶ್ವರಪ್ಪರ ರಾಜಕೀಯ ಜೋಡಿಯ ಉದಯಕ್ಕೆ ಕಾರಣವಾದದ್ದು.

ಆದರೆ ಇಷ್ಟೆಲ್ಲ ಅನಾಹುತಗಳ ನಡುವೆಯೂ ಆಶಾದಾಯಕ ಸಂಗತಿಯೆಂದರೆ, ಜಿಲ್ಲೆಯಲ್ಲಿ ಗೋಪಾಲಗೌಡರ ನೆನಪು ಜನರನ್ನು ಇನ್ನೂ ಪುಳಕಗೊಳಿಸುವಷ್ಟು ಹಸಿಯಾಗಿದೆ. ಹಾಗೇ ಅವರು ನಂಬಿದ್ದ ಲೋಹಿಯಾರ ಮಿತಿಗಳುಳ್ಳ ಬದುಕಿನ ಬಗೆಗಿನ ವಿಚಾರಗಳೂ. ಇದಕ್ಕೆ ಈ ಜಿಲ್ಲೆಯಲ್ಲಿ ಹುಟ್ಟಿ ಗೋಪಾಲಗೌಡರೊಂದಿಗೆ ಒಡನಾಡಿದ್ದ ಕನ್ನಡದ ಹಲವು ಶ್ರೇಷ್ಠ ಲೇಖಕ– ಕಲಾವಿದರ ಬರಹಗಳೂ ಮತ್ತು ಇಲ್ಲಿ ಎಂಭತ್ತರ ದಶಕದಲ್ಲಿ ಸಮಾಜವಾದಿ ಆಶಯಗಳ ಘೋಷಣೆಯೊಂದಿಗೆ ದೊಡ್ಡ ಪ್ರಮಾಣದಲ್ಲಿ ನಡೆದ ರೈತ ಚಳುವಳಿಯೂ ಕಾರಣವಾಗಿರಬಹುದು. ಈ ಚಳುವಳಿ ಕೆಲವು ನಾಯಕರ ಮಹತ್ವಾಕಾಂಕ್ಷೆಗೆ ಬಲಿಯಾಗಿ ದಿಕ್ಕು ತಪ್ಪಿ ಹಿನ್ನೆಲೆಗೆ ಸರಿದಿದೆಯಾದರೂ, ಜನಮಾನಸದಲ್ಲಿ ಅದು ಗೋಪಾಲಗೌಡ– ಲೋಹಿಯಾರ ರೈತ ಮತ್ತು ಗ್ರಾಮಕೇಂದ್ರಿತ ಅಭಿವೃದ್ಧಿ ಮಾದರಿಯ ಪ್ರಸ್ತುತತೆಯನ್ನು ಬಿತ್ತಿ ಹೋಗಿದೆ. ಹಾಗಾಗಿಯೇ, ಯಡಿಯೂರಪ್ಪ ಜಿಲ್ಲೆಗೆ ಎಷ್ಟು ರಾಶಿ ರಾಶಿ ಹಣ ತಂದು ಸುರಿದು 'ಅಭಿವೃದ್ಧಿ, ಅಭಿವೃದ್ಧಿ' ಎಂದು ಕೂಗು ಹಾಕುತ್ತಿದ್ದರೂ, ಅವರ ರಾಜಕಾರಣ ಜಿಲ್ಲೆಯ ಜನರ ಕಣ್ಣಿಗೆ ಅನುಮಾನಾಸ್ಪದವಾಗಿಯೇ ಕಾಣುತ್ತಿದೆ.

ಬಂಗಾರಪ್ಪ ಈ ಇಳಿವಯಸ್ಸಿನಲ್ಲೂ ತಮ್ಮ ಸೇಡಿನ ರಾಜಕಾರಣ ಮುಂದುವರೆಸಿ ಈಗ ತಮ್ಮ ರಾಜಕೀಯ ಕೊನೆಯ ಅವತಾರವಾಗಿಯೋ ಏನೋ (ಆದರೆ ಇನ್ನೆಷ್ಟು ಅವತಾರಗಳು ಬಾಕಿ ಇವೆಯೋ ಯಾರಿಗೆ ಗೊತ್ತು?) ಜೆಡಿಎಸ್ ಸೇರಿ ತಮ್ಮ ಸೊರಬ ಕ್ಷೇತ್ರದಲ್ಲಿ ಕಡ್ಡಿ ಆಡಿಸಿರದಿದ್ದರೆ (ಇದರಿಂದ ಎಂದಿನಂತೆ ಅವರ ಪಕ್ಷಕ್ಕೆ ಅಂತಹ ಲಾಭವೇನೂ ಆಗಲಿಲ್ಲವಾದರೂ!) ಅಥವಾ ಕಾಗೋಡು ತಿಮ್ಮಪ್ಪನವರ ಸೂತ್ರದ ಗೊಂಬೆಯಂತಿರುವ ಜಿಲ್ಲಾ ಕಾಂಗ್ರೆಸ್ ನಾಯಕತ್ವ (ಅಂತಹುದೇನಾದರೂ ಇದ್ದರೆ!) ಸೂತ್ರ ಹರಿದು ಜನಕ್ಕೆ ಅಲ್ಲಲ್ಲಿ ಮುಖ ತೋರಿಸುವಷ್ಟಾದರೂ ಚೈತನ್ಯಶಾಲಿಯಾಗಿದ್ದಿದ್ದರೆ, ಈ ಬಾರಿ ಜಿಲ್ಲಾ ಪರಿಷತ್ ಖಂಡಿತ ಯಡಿಯೂರಪ್ಪನವರ ಪಕ್ಷದ ಕೈತಪ್ಪಿ ಹೋಗುತ್ತಿತ್ತು. ಅವರ ಪಕ್ಷ ಈಗ ಒಂದು ಕ್ಷೇತ್ರದ ಬಹುಮತದಿಂದಷ್ಟೇ ಇಲ್ಲಿ ಅಧಿಕಾರ ಹಿಡಿದಿದೆ. ಇದರಿಂದ ಯಡಿಯೂರಪ್ಪನವರಿಗೆ ಆಗಿರುವ 'ಆಘಾತ ಕಡಿಮೆ ಪ್ರಮಾಣದ್ದೇನಲ್ಲ.

ಅಷ್ಟೇನೂ ಮಹತ್ವದ್ದಲ್ಲದ ಈ ವಿವರಗಳನ್ನೆಲ್ಲ ಇಲ್ಲಿ ಏಕೆ ಹೇಳಬೇಕಾಗಿದೆಯೆಂದರೆ, ಜನ ಹೇಗೆ ಅತ್ತ ದರಿ ಇತ್ತ ಪುಲಿ ಎಂಬಂತಾಗಿ ರಾಜಕೀಯ ಪರ್ಯಾಯವಿಲ್ಲದೆ ಸಂದಿಗ್ಧದಲ್ಲಿ ಸಿಲುಕಿದ್ದಾರೆ ಎಂಬುದನ್ನು ಸೂಚಿಸಲು. ಹಾಗೇ, ಎಷ್ಟೇ ಹಣ ತಂದು ಸುರಿದರೂ, ಎಷ್ಟೇ

ಜಾತೀಯ ಹಾಗೂ ಮತೀಯ ಭಾವನೆಗಳನ್ನು ಕೆರಳಿಸಿದರೂ ಗೋಪಾಲಗೌಡರ ಸರಳ ಸಂಪನ್ನವಾದ ರಾಜಕೀಯ ವಾರಸುದಾರಿಕೆ ಜಿಲ್ಲೆಯ ಜನತೆಯ ಮನಸ್ಸಿನಲ್ಲಿ ಇನ್ನೂ ಹೇಗೆ ಸುಪ್ತವಾಗಿ ಜೀವಂತವಾಗಿದೆ ಎಂಬುದನ್ನು ವಿವರಿಸಲು. ಶಿವಮೊಗ್ಗದ ಜನತೆಯ ರಾಜಕೀಯ ಸಂಸ್ಕೃತಿ ಎಂದೂ ರೂಕ್ಷವಾಗದು. ಹಾಗಾಗಿಯೇ, ಜಿಲ್ಲೆಯ ಆರೆಸ್ಸೆಸ್ ಮತ್ತು ಬಿಜೆಪಿಯ ಹಿರಿಯ ಮುಖಂಡರೆನಿಸಿದ ಪದ್ಮನಾಭ ಭಟ್ಟರು ಯಡಿಯೂರಪ್ಪನವರ ಕೃಪಾಕಟಾಕ್ಷದಿಂದ ಮಲೆನಾಡು ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿದ್ದರೂ, ಜಿಲ್ಲೆಯ ಇಂದಿನ ರಾಜಕಾರಣದ ಬಗೆಗಿನ ತಮ್ಮೆಲ್ಲ ಮುಜುಗರವನ್ನು ಮುಚ್ಚಿಕೊಳ್ಳಲು, ಹೋದ ಕಡೆಯಲ್ಲೆಲ್ಲ ತಮ್ಮ ಆದರ್ಶ ನಾಯಕ ಗೋಪಾಲಗೌಡರೇ ಎಂದು ಘೋಷಿಸಿಕೊಳ್ಳುತ್ತಿದ್ದಾರೆ!

ಅದೇನೇ ಇರಲಿ, ಯಡಿಯೂರಪ್ಪನವರಿಗೆ ಸರಿಯಾಗಿ 'ಬುದ್ಧಿ ಕಲಿಸುವ' ಈಶ್ವರಪ್ಪನವರ ನೇತೃತ್ವದ ಸದ್ಯದ ಪ್ರಯತ್ನ ಯಶಸ್ವಿಯಾಗುವುದೋ ಇಲ್ಲವೋ ಸದ್ಯಕ್ಕೆ ತಿಳಿಯದು. ಆದರೆ ಯಡಿಯೂರಪ್ಪನವರ ರಾಜಕಾರಣದ ಅಡಿಗಲ್ಲನ್ನೇ ಅಲ್ಲಾಡಿಸುವಂತಹ ಸಾಕ್ಷ್ಯಗಳೊಂದಿಗೆ, ಅವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿ ರಾಜ್ಯದ ಜನತೆಯ ಗಮನ ಸೆಳೆದಿರುವ ಶಿವಮೊಗ್ಗದ ವಕೀಲರಾದ ಬಾಲರಾಜ್ ಮತ್ತು ಸಿರಾಜಿನ್ ಪಾಶಾ ಈ ಸಾಹಸವನ್ನು ಕೈಗೊಂಡಿರುವುದು, ಅವರೇ ಹೇಳಿಕೊಂಡಂತೆ ಗೋಪಾಲಗೌಡರ ರಾಜಕಾರಣದ ನೆನಪಿನ ಸ್ಫೂರ್ತಿಯಿಂದಲೇ ಎಂಬುದು ಗೋಪಾಲಗೌಡರ ಹುಟ್ಟುಹಬ್ಬವನ್ನು ಅವರ ಅಭಿಮಾನಿಗಳು ಹಲವು ಕಡೆ ಆಚರಿಸತೊಡಗಿರುವ ಈ ಸಂದರ್ಭದಲ್ಲಿ ಗಮನಾರ್ಹ ಸಂಗತಿಯೇ ಆಗಿದೆ.

ಈ ಇಬ್ಬರು ವಕೀಲರನ್ನು ಹುರಿದುಂಬಿಸಲು ಶಿವಮೊಗ್ಗದ 'ಬಹುಮತ' ಸಂಘಟನೆ ಇತ್ತೀಚೆಗೆ ಅಭಿನಂದನಾ ಸಮಾರಂಭವೊಂದನ್ನು ಏರ್ಪಡಿಸಿತ್ತು. ಅದರಲ್ಲಿ ಹಿರಿಯ ರಾಜಕಾರಣಿ ಎ.ಕೆ.ಸುಬ್ಬಯ್ಯನವರು ತಮ್ಮ ಎಂದಿನ ವಿಶಿಷ್ಟ ಶೈಲಿಯಲ್ಲಿ, ಗೋಪಾಲಗೌಡರಂತಹ ಧೀಮಂತ ರಾಜಕಾರಣಿಯನ್ನು ಸೃಷ್ಟಿಸಿದ ಶಿವಮೊಗ್ಗ ಜಿಲ್ಲೆ ಯಡಿಯೂರಪ್ಪ ಮತ್ತು ಈಶ್ವರಪ್ಪನವರಂತಹ ರೂಕ್ಷ ರಾಜಕಾರಣಿಗಳನ್ನೂ ಸೃಷ್ಟಿಸಿರುವುದು ಆಶ್ಚರ್ಯಕರ ಎಂದಾಗ, ಜನ ತಕ್ಷಣ ಕೂಗಿ ಹೇಳಿದ್ದು: 'ಇವರಿಬ್ಬರೂ ಶಿವಮೊಗ್ಗ ಜಿಲ್ಲೆಯವರಲ್ಲ; ಹೊರಗಿನಿಂದ ವಲಸೆ ಬಂದು ಇಲ್ಲಿ ನೆಲೆಗೊಂಡವರು'. ಇದು, ಜನತೆಯ ಒಂದು ಭಾಗವಾದರೂ ಇಂದಿನ ಮಿತಿಯಿಲ್ಲದ ಹಣದ ರಾಜಕಾರಣದ ಅನಾಹುತಗಳ ಬಗ್ಗೆ ಕೊಂಚ ಎಚ್ಚರಗೊಂಡು, ರಾಜಕಾರಣದ ಮಣ್ಣಿನ ಗುಣದ ಅಗತ್ಯದ ಬಗ್ಗೆಯೂ ಈಗ ಯೋಚನೆ ಮಾಡತೊಡಗಿದೆ ಎಂಬುದರ ಸೂಚನೆಯೂ ಆಗಿದ್ದಂತೆ ತೋರುತ್ತಿದೆ.ಕಾದು ನೋಡಬೇಕು.

('ವಿಜಯ ನೆಕ್ಸ್ಟ್' ನಲ್ಲಿ ಪ್ರಕಟ– ಏಪ್ರಿಲ್, ೨೦೧೧)

◇◇◇

೨೩. ಒಂದಿಷ್ಟು ಪತ್ರಗಳು

ಪತ್ರ- ೧

ಅಲಹಾಬಾದ್ ತೀರ್ಪು: ಇಷ್ಟೇಕೆ ಮುನ್ನೆಚ್ಚರಿಕೆ?

ಮಾನ್ಯರೇ,

ಅಲಹಾಬಾದ್ ಉಚ್ಚ ನ್ಯಾಯಾಲಯದ ಲಕ್ನೋ ಪೀಠವು ಇಂದು ನೀಡಲಿರುವ 'ಮಹತ್ವ'ದ ತೀರ್ಪಿನ ಹಿನ್ನೆಲೆಯಲ್ಲಿ ಮಾಡಲಾಗುತ್ತಿರುವ ಸಾರ್ವಜನಿಕ ಭದ್ರತಾ ವ್ಯವಸ್ಥೆಯನ್ನೂ, ಶಾಲಾ ಕಾಲೇಜುಗಳಿಗೆ ರಜೆ ಘೋಷಿಸಿರುವ ನಮ್ಮ ರಾಜ್ಯ ಸರ್ಕಾರದ ಕ್ರಮವನ್ನೂ ಮತ್ತು ಟಿವಿ ವಾಹಿನಿಗಳಲ್ಲಿ ದಿನ ನಿತ್ಯ ಪ್ರಸಾರವಾಗು ತ್ತಿರುವ ಧಾರ್ಮಿಕ ನಾಯಕರ ಶಾಂತಿ ಸಂದೇಶಗಳನ್ನು ನೋಡುತ್ತಿದ್ದರೆ, ನಾವು ಒಂದು ರಾಷ್ಟ್ರವಾಗಿ, ಸಮಾಜವಾಗಿ ಎತ್ತ ಸಾಗಿದ್ದೇವೆ ಎಂದು ಆಶ್ಚರ್ಯವಾಗುತ್ತದೆ. ಭಯವೂ ಆಗುತ್ತದೆ.

ಇಂದು ತೀರ್ಪು ಬರಲಿರುವುದು, ಬಾಬ್ರಿ ಮಸೀದಿ ಇದ್ದ ಜಾಗ ಮೂಲತಃ ಯಾರಿಗೆ ಸೇರಿದ್ದು ಎಂಬ ಮಾಲೀಕತ್ವದ ಪ್ರಶ್ನೆಯನ್ನು ಕುರಿತಂತೆ. ಈ ಮಾಲೀಕತ್ವದ ಪ್ರಶ್ನೆ ಇತ್ಯರ್ಥವಾಗು ವುದೂ, ಕಾಗದ- ಪತ್ರ ಮುಂತಾದ ಸಾಕ್ಷ್ಯಾಧಾರಗಳನ್ನು ಆಧರಿಸಿದ ತಾಂತ್ರಿಕ ಅಂಶಗಳ ಆಧಾರದ ಮೇಲೆ. ಹಾಗೇ ಈ ತೀರ್ಪು ನೀಡುತ್ತಿರುವುದು, ಯಾವುದೇ ಧಾರ್ಮಿಕ ಭಾವನೆಗಳಿಗೆ ಅವಕಾಶ ವಿರದ ಸಂವಿಧಾನದ ಚೌಕಟ್ಟಿನಲ್ಲಿ ಕೆಲಸ ಮಾಡುವ ನ್ಯಾಯಾಲಯ ದಿಂದ. ಯಾವುದೇ ಹಸ್ತಕ್ಷೇಪ, ಹೊಂದಾಣಿಕೆ ಅಥವಾ ಸಂಧಾ ನಗಳ ಸಾಧ್ಯತೆ ಇರುವ ನ್ಯಾಯ ಮಂಡಳಿ ಅಥವಾ ವಿಚಾರಣಾ ಆಯೋಗದಿಂದ ಅಲ್ಲ. ಅಲ್ಲದೆ, ಈ ತೀರ್ಪು ಅಂತಿಮವೇನಲ್ಲ. ಒಪ್ಪದಿದ್ದವರು, ಅಂತಿಮ ತೀರ್ಮಾನಕ್ಕಾಗಿ ರಾಷ್ಟ್ರದ ಸರ್ವೋಚ್ಚ ನ್ಯಾಯಾಲಯಕ್ಕೆ ಹೋಗಬಹುದು.

ಹೀಗಿರುವಾಗ ಸರ್ಕಾರದ ಕಡೆಯಿಂದ ಜನ ಭಾವೋದ್ವೇಗಗಳಿಗೆ ಒಳಗಾಗುತ್ತಾರೆ ಎಂಬ ನಿರೀಕ್ಷೆಯಾದರೂ ಏಕೆ? ಸರ್ಕಾರವೇಕೆ ಈ ವಿಶೇಷ ಬಂದೋಬಸ್ತ್‌ನ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡು ಅನಗತ್ಯ ಆತಂಕ ಸೃಷ್ಟಿಸುತ್ತಿದೆ? ಮತ್ತು ಜನತೆಗೆ ಪದೇ ಪದೇ ಕಾನೂನು ಮತ್ತು ಶಿಸ್ತು ಪಾಲನೆಯ ಭರವಸೆ ನೀಡುತ್ತಿದೆ? ಇದರರ್ಥ, ನಾವು ನೆರೆಹೊರೆಯ

ರಾಷ್ಟ್ರಗಳಿಗೆ ಹೋಲಿಸಿದರೆ ಒಂದು ಸಾಂವಿಧಾನಿಕ ಪ್ರಜಾಪ್ರಭುತ್ವವಾಗಿ ಯಶಸ್ವಿಯಾಗಿದ್ದೇವೆ ಎಂದು ಎಷ್ಟೇ ಬೊಬ್ಬೆ ಹೊಡೆದುಕೊಂಡರೂ, ಆಳದಲ್ಲೆಲ್ಲೋ ಈ ಬಗ್ಗೆ ನಮಗೇ ದಟ್ಟ ಸಂಶಯವಿದ್ದಂತಿದೆ. ಇದು ನಮ್ಮ ರಾಜಕೀಯ ಪಕ್ಷಗಳ ಮತ್ತು ಅವುಗಳಿಂದ ಈವರೆಗೆ ರಚಿತವಾದ ಸರ್ಕಾರಗಳ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ನಮ್ಮ ಧಾರ್ಮಿಕ ನಾಯಕರ ಸೋಲೇ ಸರಿ. ಬಹುಶಃ ಈ ಸೋಲನ್ನೊಪ್ಪಿಕೊಂಡೇ ಅವರೆಲ್ಲಾ ಈಗ ವಿಶೇಷ ಎಚ್ಚರಿಕೆಯ ಭದ್ರತಾ ಕ್ರಮಗಳನ್ನೂ, ಶಾಂತಿ ಸಂದೇಶಗಳ ಕಾರ್ಯಕ್ರಮವನ್ನೂ ಕೈಗೊಂಡಿದ್ದಾರೆ. ಕೈಗೊಳ್ಳಲಿ!

ಆದರೆ ಜನ ರಾಜಕೀಯ ಪಕ್ಷಗಳ, ಸರ್ಕಾರಗಳ ಮತ್ತು ಧಾರ್ಮಿಕ ನಾಯಕರ ಈ ಸಂಶಯ ಭಯಗಳನ್ನು ಹುಸಿಗೊಳಿಸಿ, ಈ ತೀರ್ಪಿನ ನಂತರ, ಇದು ದಿನ ನಿತ್ಯ ನಮ್ಮ ನ್ಯಾಯಾಲಯಗಳು ನೀಡುವ ಅನೇಕ ತೀರ್ಪುಗಳಲ್ಲಿ– ಅದೆಷ್ಟೇ ಮಹತ್ವದ್ದಾದರೂ– ಇದೂ ಒಂದು ಎಂಬಂತೆ, ಎಂದಿನ ಸಾಮಾನ್ಯ ಜನ ಜೀವನದ ಶಾಂತಿ– ಸುವ್ಯವಸ್ಥೆಯನ್ನು ಕಾಪಾಡಿಕೊಂಡು ಹೋಗುವ ಮೂಲಕ ನಮ್ಮ ಈ ನಾಯಕತ್ವ ಮತ್ತು ನಾಯಕರಿಂದ ನಾವು ಬಹು ಮುಂದಿದ್ದೇವೆ ಎಂಬುದನ್ನು ಸಾಬೀತುಪಡಿಸಬಹುದಾಗಿದೆ.

(‘ಪ್ರಜಾವಾಣಿ’ಯಲ್ಲಿ ಪ್ರಕಟವಾದ ‘ವಾಚಕರ ವಾಣಿ’ ಪತ್ರ– ನವೆಂಬರ್, ೨೦೧೦)

ಪತ್ರ– ೨

ಯಡಿಯೂರಪ್ಪನವರ ಒಂದು ದಿಟ್ಟ ನಿರ್ಧಾರಕ್ಕೆ ಇದು ಸಕಾಲ!

ಮಾನ್ಯರೇ,

ಅಕ್ರಮ ಗಣಿಗಾರಿಕೆ ಸಂಬಂಧವಾಗಿ ಕಾಂಗ್ರೆಸ್ ಪಕ್ಷ ನಡೆಸುತ್ತಿರುವ ಪಾದಯಾತ್ರೆ ಅರ್ಧ ದಾರಿಯನ್ನು ಕ್ರಮಿಸಿ ಮುಂದೆ ಹೋಗುತ್ತಿರುವಂತೆ, ರಾಜ್ಯದಲ್ಲಿ ದೊಡ್ಡ ರಾಜಕೀಯ ಸಂಚಲನವೊಂದು ಆರಂಭವಾಗಿದೆ. ಪಾದಯಾತ್ರೆಯಲ್ಲಿ ಕಾಂಗ್ರೆಸ್ ಪ್ರದರ್ಶಿಸುತ್ತಿರುವ ಅನಿರೀಕ್ಷಿತ ಒಗ್ಗಟ್ಟು ಮತ್ತು ದಣಿವರಿಯದ ಛಲ ಮುಖ್ಯಮಂತ್ರಿಯವರ ಧೃತಿಗೆಡಿಸಿದೆಯೋ ಎಂಬಂತೆ, ಅವರು ಹಂತಾನುಹಂತವಾಗಿ ಗಣಿಗಾರಿಕೆ ವಿರುದ್ಧ ಕ್ರಮಗಳನ್ನು ಪ್ರಕಟಿಸುತ್ತಿದ್ದಾರೆ. ಮೊದಲು ರಾಜ್ಯದ ಸಣ್ಣ ಬಂದರುಗಳಿಂದ ಅದಿರು ರಫ್ತು ನಿಷೇಧಿಸಿದರು. ನಂತರ ಎಲ್ಲ ಬಂದರುಗಳಿಗೂ ಅದನ್ನು ಅನ್ವಯಿಸಿದರು. ತದನಂತರ ಗಣಿಗಾರಿಕೆಗೆ ಅನುಮತಿ ಪತ್ರಗಳನ್ನು ನೀಡುವುದನ್ನೇ ನಿಷೇಧಿಸಿದರು! ಈ ಕ್ರಮಗಳು ಎಷ್ಟು ಕಾನೂನು ಬದ್ಧವೋ, ಎಷ್ಟು ವಿವೇಚನೆಯಿಂದ ಕೂಡಿವೆಯೋ ಎಂಬುದನ್ನು ಇವುಗಳಿಂದ ಬಾಧಿತರಾದವರ ಮುಂದಿನ ದಿನಗಳ ಕಾನೂನು ಹೋರಾಟಗಳಷ್ಟೇ ಹೇಳಬಲ್ಲವು.

ಅದೇನೇ ಇರಲಿ, ಇವಾವುಗಳಿಂದಲೂ ತೃಪ್ತವಾಗದ ಕಾಂಗ್ರೆಸ್ ತನ್ನ ಪಾದಯಾತ್ರೆಯನ್ನು ಇನ್ನಷ್ಟು ಉತ್ಸಾಹ–ಸಂಭ್ರಮಗಳೊಂದಿಗೆ ಮುಂದುವರೆಸಿದೆ. ಆದರೆ 'ಬಳ್ಳಾರಿಗೆ ಬನ್ನಿ, ನಿಮ್ಮನ್ನು ನೋಡಿಕೊಳ್ಳುವೆವು' ಮತ್ತು 'ನೀವು ಬಂದರೆ ನಾವೇ ಶಾಮಿಯಾನ ಹಾಕಿಸಿ ಸ್ವಾಗತಿಸುವೆವು' ಇತ್ಯಾದಿಯಾಗಿ ಮೊದಲು ಬೆದರಿಸಿ, ನಂತರ ವ್ಯಂಗ್ಯವಾಡಿದ್ದ ರೆಡ್ಡಿ ಸಹೋದರರು ಮತ್ತವರ ಗೆಳೆಯರು ಈಗ ಈ ಪಾದಯಾತ್ರೆಯ ವಿರುದ್ಧ ತಲೆ ಚೋಳಿಸಿಕೊಳ್ಳುವಂತಹ ಅಗ್ಗದ ಜನಪ್ರಿಯತೆಯ ತಂತ್ರಗಳಿಗೆ ಮೊರೆ ಹೋಗಿ, ಬಳ್ಳಾರಿ ಜಿಲ್ಲೆಯಾದ್ಯಂತ ಜಾಥಾ ಮತ್ತು ಸಮಾವೇಶಗಳನ್ನು ನಡೆಸತೊಡಗಿದ್ದಾರೆ. ಇವರು ಪಾದಯಾತ್ರೆ ಬಳ್ಳಾರಿ ಜನತೆಯ ವಿರುದ್ಧ ಎಂಬ ಅಭಿಪ್ರಾಯವನ್ನು ಬಿತ್ತಲು ಯತ್ನಿಸುತ್ತಾ, ಪರಿಸ್ಥಿತಿಯನ್ನು ಸ್ಫೋಟಕಗೊಳಿಸುತ್ತಿದ್ದಾರೆ. ಇದರಿಂದಾಗಿ, ಪಾದಯಾತ್ರೆ ಬಳ್ಳಾರಿ ಜಿಲ್ಲಾ ಗಡಿಯನ್ನು ಸಮೀಪಿಸುತ್ತಿದ್ದಂತೆ ದೊಡ್ಡ ಕಾನೂನು ಮತ್ತು ಸುವ್ಯವಸ್ಥೆಯ ಸಮಸ್ಯೆ ಸೃಷ್ಟಿಯಾಗುವ ಎಲ್ಲ ಸೂಚನೆಗಳು ಕಾಣತೊಡಗಿವೆ.

ಇದಕ್ಕಿಂತ ಗಾಬರಿ ಹುಟ್ಟಿಸುವ ಸಂಗತಿಯೆಂದರೆ, ರಾಷ್ಟ್ರ ಅಥವಾ ರಾಜ್ಯ ನಾಯಕತ್ವದ ಹಂಗೇ ಇಲ್ಲದಂತೆ ರೆಡ್ಡಿ ಸೋದರರು ಬಳ್ಳಾರಿ ಜಿಲ್ಲೆ ತಮ್ಮ ಜಹಗೀರಿ ಎಂಬಂತೆ ನಡೆಸುತ್ತಿರುವ ರಾಜಕಾರಣ. ಇದು ಬಿಜೆಪಿ ಪಕ್ಷದಲ್ಲೂ ತಳಮಳ ಆತಂಕಗಳನ್ನು ಸೃಷ್ಟಿಸಿ ಅದರ ವಿವೇಚನಾ ಶಕ್ತಿಯನ್ನೇ ಕಳೆದುಬಿಟ್ಟಿರುವಂತೆ ತೋರುತ್ತಿರುವುದು. ಬಿಜೆಪಿಯ ಒಂದು ಗುಂಪು ರೆಡ್ಡಿ ಸಹೋದರರ ಅಂದಾದುಂದಿ ರಾಜಕಾರಣವನ್ನು ನಿಯಂತ್ರಿಸಲು ಮುಖ್ಯಮಂತ್ರಿಗಳ ಮೇಲೆ ಒತ್ತಡ ಹೇರುತ್ತಿದ್ದಂತೆ, ಈ ಗೊಂದಲದಲ್ಲಿ ಕಷ್ಟಪಟ್ಟು ಸಂಪಾದಿಸಿದ ರಾಜ್ಯಾಧಿಕಾರವನ್ನೇ ಕಳೆದುಕೊಳ್ಳಬೇಕಾದಿತೋ ಎಂಬ ಭಯ ಅದರ ರಾಜ್ಯಾಧ್ಯಕ್ಷರನ್ನು ಬಾಧಿಸುತ್ತಿರುವಂತಿದೆ. ಹಾಗಾಗಿಯೇ ಅವರೀಗ ಇತ್ತೀಚಿನವರೆಗೆ ಖಳರ ಪಕ್ಷವೆಂದೂ ದೂಷಿಸುತ್ತಿದ್ದ ಜೆಡಿಎಸ್‌ನೊಂದಿಗೆ ಮೈತ್ರಿ ಸಾಧ್ಯತೆಯ ಮಾತುಗಳನ್ನಾಡತೊಡಗಿದ್ದಾರೆ. ಆ ಮೂಲಕ ರೆಡ್ಡಿ ಸೋದರರ ಗುಂಪಿಗೆ ಒಂದು ಎಚ್ಚರಿಕೆಯನ್ನೂ ರವಾನಿಸಿದ್ದಾರೆ. ಆದರೆ ಮುಖ್ಯಮಂತ್ರಿಗಳು ಎಡಬಿಡಂಗಿಯಂತೆ ಒಮ್ಮೆ ರೆಡ್ಡಿ ಸೋದರರ ಜಹಗೀರಿ ರಾಜಕಾರಣದ ಬಗ್ಗೆ ಅಸಮಾಧಾನವನ್ನು ಸೂಚಿಸುತ್ತಾ, ಮರುಕ್ಷಣದಲ್ಲೇ ಅದನ್ನು ಸಮರ್ಥಿಸುತ್ತಾ ಪರಿಸ್ಥಿತಿಯನ್ನು ಇನ್ನಷ್ಟು ಗೊಂದಲಗೊಳಿಸಿದ್ದಾರೆ. ಒಟ್ಟಿನಲ್ಲಿ ರಾಜ್ಯದ ಇಡೀ ರಾಜಕಾರಣವೇ ರಾಡಿಯಾಗಿ, ಆಡಳಿತ ತನ್ನ ಲಂಗರುಗಳನ್ನು ಕಳೆದುಕೊಳ್ಳತೊಡಗಿದೆ.

ಈ ರಾಡಿಯನ್ನೆಲ್ಲ ಮುಖ್ಯಮಂತ್ರಿಯವರು ಅಕ್ರಮ ಗಣಿಗಾರಿಕೆಯ ತನಿಖೆಯನ್ನು ಸಿ.ಬಿ.ಐ.ಗೆ ಒಪ್ಪಿಸುವ ಮೂಲಕ ಒಂದೇ ಏಟಿಗೆ ಪರಿಹರಿಸಬಹುದಾಗಿದೆ. ಆದರೆ ಮುಖ್ಯಮಂತ್ರಿಯವರು ಸಿ.ಬಿ.ಐ. ಕೇಂದ್ರ ಸರ್ಕಾರದ ಕೈಗೊಂಬೆ ಎಂಬ ಕಾರಣವನ್ನು ಒಡ್ಡುತ್ತಾ ಅದಕ್ಕೆ ಒಪ್ಪದೆ, ತಮ್ಮೆಲ್ಲ ಸಮಸ್ಯೆಗಳಿಗೆ ತಾವೇ ಕಾರಣರಾಗಿದ್ದಾರೆ. ಹಾಗೇ ರಾಜ್ಯದ ಇಂದಿನ ಸಮಸ್ಯೆಗೂ ಕಾರಣರಾಗಿದ್ದಾರೆ. ಅವರ ಪ್ರಕಾರ, ಅಕ್ರಮ ಗಣಿಗಾರಿಕೆಯಲ್ಲಿ ಕೆಲವು

ಕಾಂಗ್ರೆಸ್ಸಿಗರೂ ಪಾಲ್ಗೊಂಡಿದ್ದು, ಸಿ.ಬಿ.ಐ. ಮೇಲೆ ಕೇಂದ್ರ ಸರ್ಕಾರ ಪ್ರಭಾವ ಬೀರಿ ಇವರನ್ನು ರಕ್ಷಿಸಲು ಮುಂದಾಗಬಹುದು. ಆದರೆ, ಅಕ್ರಮ ಗಣಿಗಾರಿಕೆಯ ಪ್ರಶ್ನೆಯನ್ನು ಇಂದಿನ ರಾಜಕೀಯ ಸಂದರ್ಭದ ಹಿನ್ನೆಲೆಯಲ್ಲಿ ರಾಜ್ಯದ ಭವಿಷ್ಯದ ಪ್ರಶ್ನೆಯನ್ನಾಗಿ ಮಂಡಿಸಿದವರು ಕಾಂಗ್ರೆಸ್ಸಿಗರು ಎಂಬುದನ್ನು ಬಲ್ಲ ಯಾರೂ ನಮ್ಮ ಮುಖ್ಯಮಂತ್ರಿಗಳ ತರ್ಕವನ್ನು ಒಪ್ಪಲಾರರು. ಏಕೆಂದರೆ ಇದೇ ತರ್ಕವನ್ನು ಬಳಸಿ, ಅದ್ವಾನಿಯವರ ಹೆಸರು ಹೇಳಿ ತಮ್ಮ ರಾಜೀನಾಮೆಯನ್ನು ವಾಪಸು ಪಡೆದ ನ್ಯಾ. ಸಂತೋಷ ಹೆಗ್ಡೆಯವರ ನೇತೃತ್ವದ ಲೋಕಾಯುಕ್ತವು ಅಕ್ರಮ ಗಣಿಗಾರಿಕೆಯಲ್ಲಿ ತೊಡಗಿರಬಹುದಾದ ಬಿಜೆಪಿ ನಾಯಕರನ್ನು ರಕ್ಷಿಸುವ ಸಾಧ್ಯತೆ ಇದೆಯೆಂದೂ ತಾಂತ್ರಿಕವಾಗಿ ವಾದಿಸಬಹುದಲ್ಲವೆ? ಹಾಗಾಗಿ, ಸಂವಿಧಾನ ನಿರ್ದೇಶಿಸುವ ಒಕ್ಕೂಟ ವ್ಯವಸ್ಥೆಯ ಅಂಗಸಂಸ್ಥೆಯೊಂದರ ವಿರುದ್ಧ ಹೀಗೆ ಸಾರಾಸಗಟಾದ ನಿಲುವು ತಳೆಯುವುದು ಎಷ್ಟು ಉಚಿತ ಮತ್ತು ಮುಂದೆ ಇದು ಎಂತೆಂತಹ ಅನಾಹುತಗಳನ್ನು ಸಮರ್ಥಿಸಲು ಕೆಟ್ಟ ಉದಾಹರಣೆಯಾಗಬಲ್ಲುದು ಎಂಬ ವಿವೇಚನೆ ಮಾಡಿ ಮುಖ್ಯಮಂತ್ರಿಗಳು ತಮ್ಮ ನಿರ್ಧಾರಗಳನ್ನು ತಳೆಯಬೇಕೆಂದು ರಾಜ್ಯದ ಜನತೆ ಬಯಸುತ್ತದೆ.

ನಿಜ, ಸಿ.ಬಿ.ಐ. ಈ ಹಿಂದಿನ ಕೆಲವು ಪ್ರಕರಣಗಳಲ್ಲಿ ಅನುಮಾನಸ್ಪದವಾಗಿ ವರ್ತಿಸಿದೆಯೆಂದು ಅನಿಸುತ್ತದೆ. (ಹಾಗೇ ರಾಜ್ಯ ಸರ್ಕಾರಗಳ ತನಿಖಾ ಸಂಸ್ಥೆಗಳೂ!) ಆದರೆ, ೧೯೯೮ರ ಸುಪ್ರೀಂ ಕೋರ್ಟಿನ ಆಜ್ಞೆಯೊಂದರ ಮೇರೆಗೆ ಸಿ.ಬಿ.ಐ. ವಿರೋಧ ಪಕ್ಷದ ನಾಯಕರೂ ಸೇರಿರುವ ಆಯ್ಕೆ ಸಮಿತಿಯಿಂದ ನೇಮಕವಾದ ನಿರ್ದೇಶಕರನ್ನು ಹೊಂದಿ, ಜಾಗೃತ ಆಯೋಗದ ಮೇಲ್ವಿಚಾರಣೆಯಲ್ಲಿ ಕಾರ್ಯ ನಿರ್ವಹಿಸಬೇಕಾಗಿದೆ. ಅಲ್ಲದೆ ಮುಖ್ಯ ಪ್ರಕರಣಗಳ ಪ್ರಗತಿ ವರದಿಗಳನ್ನು ಸರ್ಕಾರಕ್ಕೆ ನೀಡದೆ, ಸುಪ್ರೀಂ ಕೋರ್ಟಿನ ಅವಗಾಹನೆಗೆ ಒಪ್ಪಿಸಬೇಕಿದೆ. ಜೊತೆಗೆ ಸಿ.ಬಿ.ಐ. ರಾಷ್ಟ್ರದ ಅತ್ಯುತ್ತಮ ತನಿಖಾಧಿಕಾರಿಗಳನ್ನು ಹೊಂದಿದ ಪ್ರತಿಷ್ಠಿತ ತನಿಖಾ ಸಂಸ್ಥೆಯಾಗಿದ್ದು, ಈವರೆಗೆ ಅನೇಕ ರಾಷ್ಟ್ರವಿರೋಧಿ ಮತ್ತು ಸಮಾಜವಿರೋಧಿ ಪ್ರಕರಣಗಳ ತನಿಖೆ ನಡೆಸಿ ಜಯಶಾಲಿಯಾಗಿದೆ. ತನ್ನ ೬೦ ವರ್ಷಗಳಿಗೂ ಹೆಚ್ಚಿನ ಕಾಲಾವಧಿಯಲ್ಲಿ ರಾಷ್ಟ್ರದ ಇತರೆ ತನಿಖಾ ಸಂಸ್ಥೆಗಳ ಶೇ. ೪೫ರ ಸರಾಸರಿ ಯಶಸ್ಸಿಗೆ ಹೋಲಿಸಿದರೆ, ಸಿ.ಬಿ.ಐ. ಶೇ.೭೦ಕ್ಕೂ ಹೆಚ್ಚಿನ ಯಶಸ್ಸನ್ನು ಸಾಧಿಸಿ ತನ್ನ ದಕ್ಷತೆಯನ್ನು ಸಾಬೀತುಪಡಿಸಿದೆ. ಇದರಲ್ಲಿ ಕೇಂದ್ರದಲ್ಲಿ ಆಡಳಿತ ನಡೆಸುತ್ತಿದ್ದ ಪಕ್ಷಗಳ ಸದಸ್ಯರನ್ನೂ ಶಿಕ್ಷೆಗೆ ಗುರಿಪಡಿಸಿದ ಪ್ರಕರಣಗಳೂ ಸೇರಿವೆ. (ಇತ್ತೀಚಿನ ಉದಾ: ಹಿರಿಯ ಕಾಂಗ್ರೆಸ್ಸಿಗರೆನಿಸಿದ್ದ ಸುಖರಾಂ ಭ್ರಷ್ಟಾಚಾರದ ಪ್ರಕರಣ.) ಹಾಗಾಗಿಯೇ, ರಾಷ್ಟ್ರದ ನಾನಾ ಭಾಗಗಳಿಂದ ಪ್ರತಿ ತಿಂಗಳು ಸರಾಸರಿ ಒಂದು ನೂರು ಪ್ರಕರಣಗಳು ಸಿ.ಬಿ.ಐ. ತನಿಖೆಗಾಗಿ ದಾಖಲಾಗುವಷ್ಟು ಅದು ತನ್ನ ವಿಶ್ವಾಸಾರ್ಹತೆಯನ್ನು ಸಾಬೀತುಪಡಿಸಿಕೊಂಡಿದೆ.

ಇಂತಹ ಸಂಸ್ಥೆ ಈಗ ಕೇಂದ್ರ ಸರ್ಕಾರದ ಸುಲಭ ಹಸ್ತಕ್ಷೇಪಕ್ಕೆ– ಅದೂ ಯಡಿಯೂರಪ್ಪನವರು ವಾದಿಸುತ್ತಿರುವಂತೆ ರಾಜ್ಯದ ಕೆಲವು ಜುಜುಬಿ ಕಾಂಗ್ರೆಸ್ ನಾಯಕರನ್ನು

ರಕ್ಷಿಸಲು– ಒಳಗಾಗುವುದೆಂದು ಭಾವಿಸುವುದು ರಾಜಕೀಯ ಅಪ್ರಬುದ್ಧತೆ ಅಥವಾ ರಾಜಕೀಯ ಕುಂಟುನೆಪ ಮಾತ್ರವೆನಿಸಿಕೊಳ್ಳುತ್ತದೆ. ಒಂದು ವೇಳೆ ಸಿ.ಬಿ.ಐ.ನ್ನು ಕೇಂದ್ರ ಸರ್ಕಾರ ದುರುಪಯೋಗ ಪಡಿಸಿಕೊಂಡರೆ, ಸುಪ್ರೀಂ ಕೋರ್ಟಿನ ಗಮನಕ್ಕೆ ತಂದು ಸಿ.ಬಿ.ಐ.ಗೆ ಮತ್ತು ಕೇಂದ್ರ ಸರ್ಕಾರಕ್ಕೆ ಛೀಮಾರಿ ಹಾಕಿಸಬಹುದಾಗಿದೆ. ಇದನ್ನು ಸಿ.ಬಿ.ಐ.ಅಧಿಕಾರಿಗಳಾಗಲೀ, ಕೇಂದ್ರ ಸರ್ಕಾರವಾಗಲೀ ಬಯಸುತ್ತದೆಂದು ಹೇಳಲಾಗದು. ಹಾಗೆ ನೋಡಿದರೆ, ಹೀಗೆ ಸುಪ್ರೀಂ ಕೋರ್ಟಿನ ಇತ್ತೀಚಿನ ಛೀಮಾರಿಗೆ ಒಳಗಾಗಿರುವುದು ಬಿಜೆಪಿ ತನ್ನ ಮಾದರಿ ಸರ್ಕಾರವಿರುವ ರಾಜ್ಯವೆಂದು ಹೇಳಿಕೊಳ್ಳುತ್ತಿರುವ ಗುಜರಾತ್‌ನ ಸಿ.ಐ.ಡಿ. ಸಂಸ್ಥೆ. ಅದು ಈಗ ರಾಷ್ಟ್ರಾದ್ಯಂತ ಚರ್ಚೆಯಾಗುತ್ತಿರುವ ಸೊಹ್ರಾಬುದ್ದೀನ್ ಕೊಲೆ (ಹುಸಿ ಮುಖಾಮುಖಿ) ಪ್ರಕರಣವನ್ನು ಮುಚ್ಚಿಹಾಕುವ ಮತ್ತು ಇದರ ಹಿಂದಿನ ನಿಜವಾದ ಅಪರಾಧಿಗಳನ್ನು ರಕ್ಷಿಸುವ ಉದ್ದೇಶವಿಟ್ಟುಕೊಂಡೇ ತನಿಖೆ ಮಾಡಿದ ರೀತಿಯಿಂದಾಗಿ, ಸುಪ್ರೀಂ ಕೋರ್ಟಿನ ಛೀಮಾರಿಗೆ ಒಳಗಾಗಿದೆ.

ಸೊಹ್ರಾಬುದ್ದೀನ್ ವಿವಿಧ ರಾಜ್ಯಗಳ ಗ್ರ್ಯಾನೈಟ್ ಗಣಿಗಾರಿಕೆಯ ಜಾಲದಲ್ಲಿ ಮಧ್ಯವರ್ತಿಯಂತೆ ಕೆಲಸ ಮಾಡುತ್ತಿದ್ದ ಭೂಗತ ಪಾತಕಿಯಾಗಿದ್ದು, ಕ್ರಮೇಣ ಆತ ಗುಜರಾತ್‌ನ ಬಿಜೆಪಿ ರಾಜಕಾರಣಿಗಳ ಗ್ರ್ಯಾನೈಟ್ ಉದ್ಯಮಕ್ಕೆ ಮಾರಕವಾಗಿ ಪರಿಣಮಿಸಿದ್ದನೆಂದು ಹೇಳಲಾಗುತ್ತಿದೆ. ಹಾಗಾಗಿ ಆತನನ್ನು ಬಿಜೆಪಿ ರಾಜಕಾರಣಿಗಳ ಒತ್ತಾಯದ ಮೇರೆಗೆ ಗುಜರಾತ್ ಪೋಲೀಸರು ಎತ್ತಾಕಿಕೊಂಡು ಹೋಗಿ ಕೊಂದಿದ್ದಲ್ಲದೆ, ಆ ಕೊಲೆಗೆ ಸಾಕ್ಷಿಯಾಗಿದ್ದ ಆತನ ಪತ್ನಿಯನ್ನೂ, ಗೆಳೆಯನನ್ನೂ ಕೊಲೆ ಮಾಡಿದ ಆರೋಪಗಳನ್ನು ಎದುರಿಸುತ್ತಿದ್ದಾರೆ. ಆದರೆ ಈ ಇಡೀ ಪ್ರಕರಣವನ್ನು ಮರೆಮಾಚಲು ಬಿಜೆಪಿ ವಕ್ತಾರರು ಸೊಹ್ರಾಬುದ್ದೀನನ್ನು ಮುಸ್ಲಿಂ ಭಯೋತ್ಪಾದಕನೆಂದು ತಾವೇ ಘೋಷಿಸುತ್ತಿದ್ದಾರೆ. ಹಾಗೇ ಕಾಂಗ್ರೆಸ್ ಈತನನ್ನು ರಾಷ್ಟ್ರೀಯ ನಾಯಕನೆಂದು ಪ್ರತಿಬಿಂಬಿಸುತ್ತಿದೆಯೆಂಬ ವಿಕ್ಷಿಪ್ತ ಪ್ರಚಾರವನ್ನೂ ನಡೆಸುತ್ತಿದ್ದಾರೆ. ಆದರೆ ಸುಪ್ರಿಂ ಕೋರ್ಟು ಈ ಪ್ರಕರಣದ ತನಿಖೆಯನ್ನು ಸಿ.ಬಿ.ಐ.ಗೆ ಒಪ್ಪಿಸಿದ್ದು, ಈಗ ಸಿ.ಬಿ.ಐ. ಈ ಪ್ರಕರಣದ ಸಂಬಂಧ ಗುಜರಾತ್‌ನ ಹಲವು ಪೋಲೀಸ್ ಅಧಿಕಾರಿಗಳನ್ನಲ್ಲದೆ, ಇತ್ತೀಚೆಗೆ ರಾಜ್ಯದ ಸಹಾಯಕ ಗೃಹ ಮಂತ್ರಿ ಅಮಿತ್ ಷಾ ಅವರನ್ನೂ ಬಂಧಿಸಿ ವಿಚಾರಣೆಗೆ ಒಳಪಡಿಸಿದೆ. ಇದರ ವರದಿಯನ್ನು ಸುಪ್ರೀಂ ಕೋರ್ಟಿಗೆ ಸಲ್ಲಿಸಿ, ಅದರ ಮುಂದಿನ ಸೂಚನೆಗಾಗಿ ಕಾಯುತ್ತಿದೆ.

ಆದರೆ ಇದಕ್ಕೆ ಬಿಜೆಪಿಯ ಪ್ರತಿಕ್ರಿಯೆಯಾದರೂ ಹೇಗಿದೆ? ಬಂಧನಕ್ಕೆ ಹೆದರಿ ತಿಂಗಳುಗಟ್ಟಲೆ ತಲೆ ತಪ್ಪಿಸಿಕೊಂಡಿದ್ದ ಅಮಿತ್ ಷಾ ಕೊನೆಗೂ ಸಿ.ಬಿ.ಐ.ಗೆ ಶರಣಾಗಲು ಬಂದಾಗ ಬಿಜೆಪಿ ಕಾರ್ಯಕರ್ತರು ಜೈಕಾರ ಹಾಕುತ್ತಾ ಅವರ ಮೆರವಣಿಗೆ ನಡೆಸಿ, ಆರತಿ ಎತ್ತುತ್ತಾರೆ! ಈ ಸಂಸ್ಕೃತಿಯನ್ನು ರಾಜಾರೋಷವಾಗಿ ಪೋಷಿಸುವ ಬಿಜೆಪಿಯ ರಾಷ್ಟ್ರೀಯ ನಾಯಕತ್ವಕ್ಕೇ ಏನಾದರೂ ರಾಷ್ಟ್ರೀಯ ಜವಾಬ್ದಾರಿ ಇದೆಯಾ ಎಂದು ಆಶ್ಚರ್ಯವಾಗುತ್ತದೆ.

ಕಾನೂನಿನ ಸಂರಕ್ಷಣೆ ಮಾಡಬೇಕಾದವರೇ ಸ್ವಹಿತಾಸಕ್ತಿಗಾಗಿ ಕಾನೂನನ್ನು ಉಲ್ಲಂಘಿಸಿದ ಗಂಭೀರ ಪ್ರಕರಣದ ವಿಚಾರಣೆಯನ್ನು ನಿಷ್ಪಕ್ಷಪಾತವಾಗಿ ತಾನೂ ಮಾಡದೆ, ಇನ್ನೊಬ್ಬರು ಮಾಡಲೂ ಬಿಡದಂತೆ ರಾಜಕೀಯ ಅಡೆತಡೆಗಳನ್ನೊಡ್ಡುವ ಬಿಜೆಪಿಯ ರಾಷ್ಟ್ರೀಯ ನಾಯಕತ್ವ ನಮ್ಮ ಮುಖ್ಯಮಂತ್ರಿಗಳಿಗೆ ಅಕ್ರಮ ಗಣಿಗಾರಿಕೆ ತನಿಖೆ ವಿಷಯವಾಗಿ ಸಿ.ಬಿ.ಐ. ಬಗ್ಗೆ ಭಯ ಹುಟ್ಟಿಸಿರುವುದರಲ್ಲಿಆಶ್ಚರ್ಯವೇನಿಲ್ಲ!

ಆದರೆ ರಾಜ್ಯದ ನೈಸರ್ಗಿಕ ಸಂಪತ್ತನ್ನು ರಕ್ಷಿಸಲು ಬದ್ಧವಾಗಿರುವುದಾಗಿ ರಾಜ್ಯದ ಜನತೆಗೆ ವಚನ ನೀಡಿರುವ ಯಡಿಯೂರಪ್ಪನವರು ಈಗ ಸ್ವಲ್ಪ ಧೈರ್ಯ ಮಾಡಬೇಕಿದೆ. ರಾಜ್ಯಕ್ಕೆ ಮಾರಕವಾಗಿರುವ ಇಂದಿನ ರಾಜಕೀಯ ಸಂಘರ್ಷದ ವಾತಾವರಣವನ್ನು ತಿಳಿಗೊಳಿಸಲು; ಮತ್ತೂ ಮುಖ್ಯವಾಗಿ ತಮ್ಮ ಮೇಲಿನ ವೈಯುಕ್ತಿಕ ಆರೋಪಗಳಿಂದ ಮುಕ್ತಗೊಂಡು ಇನ್ನೂ ಹೆಚ್ಚಿನ ಮಟ್ಟದ ಜನತಾ ಸೇವೆ ಸಿದ್ಧರಾಗಲು, ಅವರು ತಮ್ಮ ದೀರ್ಘ ರಾಜಕೀಯ ಜೀವನದ ಒಂದು ದೊಡ್ಡ ಮತ್ತು ದಿಟ್ಟ ಹೆಜ್ಜೆ ಇಡುವ ನಿರ್ಧಾರ ಮಾಡಬೇಕಿದೆ.

('ಪ್ರಜಾವಾಣಿ'ಯ 'ಸಂಗತ'ದಲ್ಲಿ ಪ್ರಕಟವಾದ ಬರಹ– ಆಗಸ್ಟ್, ೨೦೧೦)

ಪತ್ರ– ೩

ಭ್ರಷ್ಟಾಚಾರದ ಬೆದರಿಕೆಯ ಆಟ!

ಮಾನ್ಯರೇ,

ಮೊನ್ನೆ ಮಾನ್ಯ ಮುಖ್ಯಮಂತ್ರಿ ಯಡಿಯೂರಪ್ಪನವರು ಶಿವಮೊಗ್ಗದಲ್ಲಿ ಮಾತನಾಡುತ್ತಾ, ವಿಚಿತ್ರ ಹೇಳಿಕೆಯೊಂದನ್ನು ನೀಡಿದ್ದಾರೆ. ದೇವೇಗೌಡರ ಕುಟುಂಬದವರು ಬೆಂಗಳೂರಿನಲ್ಲಿ ಸಾವಿರಾರು ಕೋಟಿ ರೂಪಾಯಿಗಳ ಬೆಲೆಯ ನೂರಾರು ಎಕರೆ ಭೂಮಿಯನ್ನು ಅಕ್ರಮವಾಗಿ ಹೊಂದಿದ್ದಾರಂತೆ. ನಾಲ್ಕು ದಿನ ಕಾದು ನೋಡುತ್ತಾರಂತೆ. ಅವರ ಕುಟುಂಬದವರೇನಾದರೂ ತಮ್ಮ ವಿರುದ್ಧ ಮತ್ತೆ ಬಾಯಿ ತೆರೆದರೆ, ಆ ಭೂಮಿಯನ್ನೆಲ್ಲ ವಶ ಪಡಿಸಿಕೊಂಡು ಬಡ ಬಗ್ಗರಿಗೆ ಹಂಚುತ್ತಾರಂತೆ!

ಯಡಿಯೂರಪ್ಪನವರು ತಮ್ಮ ರಾಜ್ಯದ ಜನರನ್ನು ಕಿವಿ ಮೇಲೆ ಹೂವಿಟ್ಟುಕೊಂಡ 'ವರೆಂದೇನಾದರೂ ಭಾವಿಸಿದ್ದಾರೋ ಏನೋ ತಿಳಿಯದು! ಅಲ್ಲಾ, ಅವರು ಇವರ ಅಕ್ರಮ ಆಸ್ತಿಯ ವಿರುದ್ಧ ಬಾಯಿ ಬಿಟ್ಟರೆ ಮಾತ್ರ ಇವರು ಅವರ ಅಕ್ರಮ ಆಸ್ತಿಯ ವಿರುದ್ಧ ಕ್ರಮ ಕೈಗೊಳ್ಳಲು, ಕರ್ನಾಟಕದ ಆಸ್ತಿಯೇನು ಇವರಿಬ್ಬರ ನಡುವಣ ಪರಸ್ಪರ ಬೆದರಿಕೆ ರಾಜಕಾರಣದ ವಸ್ತುವಾಗಿಬಿಟ್ಟಿದೆಯೇ? ಇವರಿಗೆ ಈ ಬಾರಿ ಅಧಿಕಾರ ಕೊಡುವಾಗ ಕರ್ನಾಟಕದ

ಜನಸ್ವೇನಾದರೂ ರಾಜ್ಯದ ಆಸ್ತಿಯನ್ನು ಇವರಿಬ್ಬರ ನಡುವಣ ಈ ರೀತಿಯ ಬೆದರಿಕೆ ಆಟದ ಅಡಮಾನಕ್ಕಿಟ್ಟಿದ್ದಾರೆಯೇ? ದೇವೇಗೌಡರ ಕುಟುಂಬ ಎಲ್ಲಿಯಾದರೂ ಸಾವಿರಾರು ಕೋಟಿ ರೂಪಾಯಿಗಳ ಅಕ್ರಮ ಭೂಮಿ ಹೊಂದಿದ್ದರೆ, ಅದನ್ನು ವಶಪಡಿಸಿಕೊಳ್ಳಲು ಕ್ರಮ ಕೈಗೊಳ್ಳುವುದು ರಾಜ್ಯ ಸರ್ಕಾರದ ತುರ್ತು ಕರ್ತವ್ಯವಾಗಿದೆ. ಇನ್ನೂ ಹಾಗೆ ಮಾಡಿಲ್ಲವಾದರೆ, ಯಡಿಯೂರಪ್ಪನವರ ಸರ್ಕಾರ ಈವರೆಗೆ ನಡೆಸಿಕೊಂಡು ಬಂದಿರುವುದೆಂದು ಹೇಳಿಕೊಳ್ಳಲಾಗುವ 'ಅಭಿವೃದ್ಧಿ' ರಾಜಕಾರಣವನ್ನು; ಪರಸ್ಪರ ಹೊಂದಾಣಿಕೆ, ತಪ್ಪಿದರೆ ಬೆದರಿಕೆಯ ಮೂಲಕ ಕರ್ನಾಟಕವನ್ನು ಹಂಚಿಕೊಂಡು ತಿನ್ನುತ್ತಾ ಬಂದ 'ಲೂಟಿ' ರಾಜಕಾರಣ ಎಂದೇ ಕರೆಯಬೇಕಾಗುತ್ತದೆ.

ಇದನ್ನೆಲ್ಲ ನೋಡಿಯೂ ಸುಮ್ಮನಿರುವ ನಮ್ಮನ್ನು ನೋಡಿ ಯಡಿಯೂರಪ್ಪನವರೇಕೆ, ಬಹುಶಃ ರಾಜ್ಯದ ಎಲ್ಲ ರಾಜಕಾರಣಿಗಳೂ, ಕನ್ನಡಿಗರು ಎಂದರೆ ಕಿವಿ ಮೇಲೆ ಹೂವಿಟ್ಟು ಕೊಂಡವರು ಎಂದೇ ಭಾವಿಸಿದ್ದರೂ ಆಶ್ಚರ್ಯವಿಲ್ಲ!

('ಪ್ರಜಾವಾಣಿ'ಯ 'ವಾಚಕರ ವಾಣಿ'ಯಲ್ಲಿ ಪ್ರಕಟವಾದ ಪತ್ರ– ಡಿಸೆಂಬರ್, ೨೦೧೦)

ಪತ್ರ– ೪

ಹೊಸ ರಾಜಕಾರಣದ ಅಗತ್ಯ

ಮಾನ್ಯರೇ,

ನಾಲ್ಕು ವರ್ಷಗಳ ಹಿಂದೆ ಸಿದ್ಧರಾಮಯ್ಯನವರು ಜಾತ್ಯತೀತ ಜನತಾ ದಳ ಬಿಟ್ಟು ಕಾಂಗ್ರೆಸ್ ಸೇರಿದರು. ಇದರ ಪರಿಣಾಮವಾಗಿ ಜಾತ್ಯತೀತ ಜನತಾ ದಳ ಮತ್ತು ಬಿಜೆಪಿ ಪಕ್ಷಗಳ ಅಪವಿತ್ರ ಮೈತ್ರಿ ಸಾಧ್ಯವಾದಾಗಿನಿಂದ ಅವನತಿಯೆಡೆಗೆ ಸಾಗುತ್ತಾ ಹೋದ ರಾಜ್ಯ ರಾಜಕಾರಣ ಇಂದು ಪಾತಾಳ ತಲುಪಿದೆ. ಸಂಪೂರ್ಣ ಜನ ವಿರೋಧಿಯಾಗಿ ಪರಿವರ್ತಿತವಾಗಿದೆ. ತಮ್ಮನ್ನು ಆರಿಸಿ ಕಳಿಸಿದ ಜನರ ಬಗ್ಗೆ ಜನ ಪ್ರತಿನಿಧಿಗಳಿಗೆ ಯಾವುದೇ ಪ್ರೀತಿಯಾಗಲೀ, ಗೌರವವಾಗಲೀ, ಭಯವಾಗಲೀ ಇಲ್ಲವಾಗಿದೆ. ಏಕೆಂದರೆ, ಇವಾವುವೂ ಇಲ್ಲದೆ ಈಗ ಚುನಾವಣೆ ಗೆಲ್ಲಬಹುದೆಂದು ಅವರಿಗೆ ಮನವರಿಕೆಯಾಗಿಬಿಟ್ಟಿದೆ.

ಜಾತಿ ಮತ್ತು ಹಣಗಳೆರಡೇ ಇಂದಿನ 'ಪ್ರಜಾಪ್ರಭುತ್ವ'ದ ಆಧಾರ ಸ್ತಂಭಗಳಾಗಿಬಿಟ್ಟಿವೆ. ಹಾಗಾಗಿಯೇ ರಾಜ್ಯ ರಾಜಕಾರಣದ ಇಂದಿನ ಬಿಕ್ಕಟ್ಟು ರಾಜಕಾರಣಿಗಳಲ್ಲಿ ಕಿಂಚಿತ್ತೂ ಆತಂಕವನ್ನಾಗಲೀ, ನಾಚಿಕೆಯನ್ನಾಗಲೀ ಹುಟ್ಟಿಸುತ್ತಿಲ್ಲ. ಎಲ್ಲ ರೀತಿಯ ರಾಜಕೀಯ ಅನಾಚಾರಗಳೂ ಯಾವುದೇ ಎಗ್ಗಿಲ್ಲದೇ ಬಹಿರಂಗವಾಗಿಯೇ ನಡೆದಿವೆ. ಇದಕ್ಕೆ ಯಾವ ರಾಜಕೀಯ ಪಕ್ಷವೂ ಹೊರತಾಗಿಲ್ಲ. ಇದರರ್ಥ, ಇಂದಿನ ರಾಜಕಾರಣ ಜನತೆಯಿಂದ ಸಂಪೂರ್ಣ ಬೇರ್ಪಟ್ಟಿದೆ. ಅದೊಂದು ದೊಡ್ಡ ಲಾಭಕೋರ ದಂಧೆಯಾಗಿ ಮಾರ್ಪಟ್ಟಿದೆ.

ಹಾಗಾಗಿಯೇ ಹರಕೆ– ಪೂಜೆ– ಯಾಗ– ಯಜ್ಞಗಳಿಂದ ಆರಂಭವಾದ ಈ ದಂಧೆ, ಈಗ ಮಾಟ ಮಂತ್ರಗಳ ಮೂಲಕ ರಕ್ಷಣೆ ಪಡೆಯುವ ಹಂತ ತಲುಪಿದೆ. ಹಾಗೇ ವಿಧಾನಸಭೆಯ ಅಧಿವೇಶನ ನಿಷೇಧಾಜ್ಞೆ ಮತ್ತು ವಿಶೇಷ ಪೋಲೀಸ್ ಬಂದೋಬಸ್ತ್ ನಡುವೆ ನಡೆಯಬೇಕಾದ ಸ್ಥಿತಿ ಉಂಟಾಗಿದೆ. ಅಲ್ಲದೆ ಈ ದಂಧೆ ಈಗ ತನ್ನ ಉಳಿವಿಗಾಗಿ ವ್ಯಾಪಕ ಹಿಂಸಾತ್ಮಕ ರೂಪ ತಾಳುವ ಎಲ್ಲ ಸೂಚನೆಗಳು ಕಾಣತೊಡಗಿವೆ. ಆದ್ದರಿಂದ ರಾಜ್ಯದ ರಾಜಕಾರಣ ರಿಪೇರಿಯಾಗದ ಸಂಪೂರ್ಣ ಅವನತಿಯ ಹಂತ ತಲುಪಿದೆ ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಇದು ಕರ್ನಾಟಕದ ದುರಂತ.

ಆದರೆ ಇದಕ್ಕಿಂತ ದೊಡ್ಡ ದುರಂತವೆಂದರೆ, ಇದು ರಾಜ್ಯದ ಯಾವ ಚಿಂತಕನನ್ನೂ, ಬುದ್ಧಿಜೀವಿಯನ್ನೂ ತಲ್ಲಣಗೊಳಿಸಿ ಕ್ರಿಯಾಶೀಲಗೊಳಿಸದಿರುವುದು! ರಾಜ್ಯ ರಾಜಕಾರಣ ಈ ಪಾತಾಳ ಸ್ಥಿತಿ ತಲುಪುವ ಹಲವು ವರ್ಷಗಳ ಮುನ್ನವೇ ಜನತೆಯನ್ನೊಳಗೊಳ್ಳುವ ಪರ್ಯಾಯ ರಾಜಕಾರಣ ಕಟ್ಟ ಹೊರಟಿದ್ದ ಚಿಂತಕರು ಮತ್ತು ಹೋರಾಟಗಾರರು ಈಗೇಕೆ ತಣ್ಣಗಾಗಿದ್ದಾರೋ ತಿಳಿಯದಾಗಿದೆ! ಕರ್ನಾಟಕಕ್ಕೆ ನಿಜವಾಗಿ ಈಗ ಹೊಸ ರಾಜಕಾರಣ ಅತ್ಯಗತ್ಯವಾಗಿದೆ. ಅದಕ್ಕಾಗಿ ರಾಜ್ಯದ ರಾಜಕೀಯ ನೆಲ ಹದಗೊಂಡಿದೆ. ಹಣ ಮತ್ತು ಜಾತಿ ಬಲವಿಲ್ಲದೆ ರಾಜಕಾರಣ ಮಾಡಲು ಅವಕಾಶವಿದೆ ಎಂಬ ವಿಶ್ವಾಸವನ್ನು ಜನ ಸಾಮಾನ್ಯರಲ್ಲಿ ಹುಟ್ಟಿಸಬಲ್ಲ ಹೊಸ ರಾಜಕೀಯ ಚಿಂತನೆ ಮತ್ತು ನಾಯಕತ್ವಕ್ಕಾಗಿ ಅದು ಕಾಯುತ್ತಿದೆ. ಅದಕ್ಕಾಗಿ ಜನರ ಮನದ ಆಳದಲ್ಲಿ ಆಸೆಯ ಕಿಡಿ ಹೊತ್ತಿಸಬಲ್ಲ ಹೊಸ ರಾಜಕೀಯ ನುಡಿಗಟ್ಟು ಅದಕ್ಕೆ ಬೇಕಿದೆ.

ಅದನ್ನು ಒದಗಿಸುವ ಜವಾಬ್ದಾರಿ ಕರ್ನಾಟಕದ ಬುದ್ಧಿಜೀವಿಗಳಿಗೆ, ಚಿಂತಕರಿಗೆ ಈಗ ಒದಗಿ ಬಂದಿದೆ. ಅವರು ಕ್ರಿಯಾಶೀಲರಾದರೆ ಹೊಸ ಬೆಳಕು, ಹೊಸ ದಾರಿ ಮೂಡಬಲ್ಲುದು. ಹಾಗಾಗಿ ಅವರೀಗ ಕ್ರಿಯಾಶೀಲರಾಗಬೇಕಿದೆ. ಇಲ್ಲದೇ ಹೋದರೆ ಜನ ಅವರನ್ನು ಕ್ಷಮಿಸಲಾರರು.

('ಪ್ರಜಾವಾಣಿ'ಯ 'ವಾಚಕರ ವಾಣಿ'ಯಲ್ಲಿ ಪ್ರಕಟವಾದ ಪತ್ರ– ಡಿಸೆಂಬರ್, ೨೦೧೦)

ಪತ್ರ– ೫೫

ಬನ್ನಿ, ಲೋಕಾಯುಕ್ತರ ಕೈಗಳನ್ನು ಬಲಪಡಿಸೋಣ!

ಮಾನ್ಯರೇ,

ಕೆಲವೇ ವರ್ಷಗಳ ಹಿಂದೆ ನಮ್ಮೆಲ್ಲರ ಹೆಮ್ಮೆಯ ರಾಜ್ಯವೆನಿಸಿದ್ದ ಕರ್ನಾಟಕದ ರಾಜಕಾರಣ ಇಂದು ಹಿಂದೆಂದೂ ಕಾಣದ ಅಧೋಗತಿಗೆ ತಲುಪಿದೆ. ರಾಜ್ಯವು ರಾಷ್ಟ್ರದಲ್ಲಿ ಈಗ ಅತಿಭ್ರಷ್ಟ ರಾಜ್ಯವೆಂಬ ಕುಖ್ಯಾತಿ ಗಳಿಸಿ, ಕನ್ನಡಿಗರೆಲ್ಲರಿಗೆ ಮುಜುಗರವನ್ನುಂಟು

ಮಾಡಿವೆ. ಹಣ, ಜಾತಿ ಮತ್ತು ಕುಟುಂಬ ರಾಜಕಾರಣ ಈ ಮೂರೂ ಸೇರಿ ಇಂದು ಹೇಗೆ ರಾಜ್ಯ ರಾಜಕಾರಣವನ್ನು ಈ ದುಃಸ್ಥಿತಿಗೆ ಮುಟ್ಟಿಸಿವೆ ಎಂಬುದನ್ನು ಇತ್ತೀಚೆಗೆ ಮಾಧ್ಯಮಗಳಲ್ಲಿ ದಿನವಹಿ ಪ್ರಕಟವಾಗುತ್ತಿರುವ ಕೋಟ್ಯಾಂತರ ರೂಪಾಯಿಗಳ ದುರ್ವ್ಯವಹಾರಗಳನ್ನೊಳಗೊಂಡ ಅನೇಕ ಬಗೆಯ ಹಗರಣಗಳು ಸ್ಪಷ್ಟಪಡಿಸುತ್ತಿವೆ. ಈ ಎಲ್ಲ ಹಗರಣಗಳನ್ನು ಜನರಿಂದ ಮರೆಮಾಚಲು, ರಾಜ್ಯ ಸರ್ಕಾರ ಈಗ ಇದ್ದಕ್ಕಿದ್ದಂತೆ ಯಾವುದೋ ಕಾಲದಲ್ಲಿ ನಡೆದುವೆಂದು ಹೇಳಲಾದ ಹಗರಣಗಳನ್ನು ಹುಡುಕಿ, ಅವನ್ನು ಎಂದೂ ಕೊನೆ ಮುಟ್ಟದ ನ್ಯಾಯಾಂಗ ತನಿಖೆಗೊಪ್ಪಿಸುವ ನಾಟಕವಾಡುವ ಮೂಲಕ ರಾಜಕೀಯ ಕೆಸರೆರಚಾಟದಲ್ಲಿ ತೊಡಗಿದೆ. ಆ ಮೂಲಕ ತನ್ನ ಭ್ರಷ್ಟಾಚಾರದ ಹಗರಣಗಳನ್ನು ನೇರವಾಗಿ ಒಪ್ಪಿಕೊಂಡಿದೆ.

ಇಂದು ಎದ್ದು ಕಾಣುತ್ತಿರುವ ಮುಖ್ಯ ಸಂಗತಿ ಎಂದರೆ, ನಮ್ಮ ಇಂದಿನ ರಾಜಕಾರಣಿಗಳ ದಾಹಕ್ಕೆ ಮಿತಿಯೇ ಇಲ್ಲವಾಗಿದೆ. ಅದಕ್ಕಿಂತ ಹೆಚ್ಚಾಗಿ ಅವರಿಗೆ ತಮ್ಮನ್ನು ಆರಿಸಿ ಕಳಿಸಿದ ಜನತೆಯದೂ ಸೇರಿದಂತೆ, ಯಾರ ಮತ್ತು ಯಾವ ಭಯವೂ ಇಲ್ಲವಾಗಿದೆ. ಹಣ, ಜಾತಿ ಮತ್ತು ಅಧಿಕಾರಗಳ ಬಲವಿದ್ದರೆ ಏನು ಬೇಕಾದರೂ ಮಾಡಿ ಜಯಿಸಿಕೊಳ್ಳಬಹುದು, ಯಾರನ್ನು ಬೇಕಾದರೂ ಮಣಿಸಬಹುದು ಮತ್ತು ಹಣಿಯಬಹುದು ಎಂಬ ನಂಬಿಕೆ ಬಂದುಬಿಟ್ಟಿದೆ. ಹಣ ಮತ್ತು ಅಧಿಕಾರದ ಪ್ರಭಾವದಿಂದ ಈ ರಾಜಕಾರಣ ನಮ್ಮ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳ ಅಡಿಯ ಎಲ್ಲ ಸಂಘ–ಸಂಸ್ಥೆ– ವೇದಿಕೆಗಳನ್ನು ಹೇಗೆ ತಮಗೆ ಅನುಕೂಲಕ್ಕೆ ತಕ್ಕಂತೆ ಆಟವಾಡಿಸಬಲ್ಲ ರಾಕ್ಷಸ ಶಕ್ತಿಯಾಗಿ ಮಾರ್ಪಾಡಾಗಿ ಹೋಗಿದೆ ಎಂಬುದನ್ನು ಇತ್ತೀಚೆಗೆ ತಾನೇ ನಾವು ನೋಡಿದ್ದೇವೆ. ಅಲ್ಲದೆ ಈ ಪ್ರಕ್ರಿಯೆಯಲ್ಲಿ, ದೇವರು–ಧರ್ಮ, ಮಠ–ಮಂದಿರ, ಹರಕೆ–ಪೂಜೆ, ಮಾಟ–ಮಂತ್ರಗಳನ್ನು ರಾಜಕೀಯ ಲಾಭಕ್ಕಾಗಿ ಬಳಸಿಕೊಳ್ಳುವ ಮೂಲಕ ಕರ್ನಾಟಕ ಕಳೆದ ಅರವತ್ತು ವರ್ಷಗಳಲ್ಲಿ ಸಾಂವಿಧಾನಿಕ ಆಡಳಿತದಡಿಯಲ್ಲಿ ಸಾಧಿಸಿದ್ದ ಸಾಮಾಜಿಕ–ಸಾಂಸ್ಕೃತಿಕ ಮುನ್ನಡೆಯನ್ನು ಹೇಗೆ ಮಣ್ಣುಪಾಲು ಮಾಡಲಾಗಿದೆ ಎಂಬುದನ್ನೂ ನೋಡಿದ್ದೇವೆ. ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಗೆ ಮತ್ತು ಈ ವ್ಯವಸ್ಥೆಯನ್ನು ತಮ್ಮ ನೆಮ್ಮದಿ ಮತ್ತು ಉನ್ನತಿಗಾಗಿ ನಂಬಿರುವ ಮಹಾಜನತೆಗೆ ಇದಕ್ಕಿಂತ ದೊಡ್ಡ ಆತಂಕ, ದ್ರೋಹ ಇನ್ನೊಂದಿರಲಾರದು.

ಇಂತಹ ಆತಂಕ, ದ್ರೋಹಗಳ ಮಧ್ಯೆ ಕರ್ನಾಟಕದ ಜನತೆಗೆ ಏಕೈಕ ಆಶಾಕಿರಣದಂತೆ ಕಾಣುತ್ತಿರುವವರು ರಾಜ್ಯದ ಲೋಕಾಯುಕ್ತರು. ನಿಸ್ಪೃಹರೂ, ದಕ್ಷರೂ, ಸಚ್ಚಾರಿತ್ರ್ಯವುಳ್ಳವರೂ ಮತ್ತು ಸಾರ್ವಜನಿಕ ಜೀವನದ ಪರಿಶುದ್ಧತೆಗೆ ಕಟಿ ಬದ್ಧರೂ ಆದ ನ್ಯಾ॥ ಸಂತೋಷ ಹೆಗ್ಡೆಯವರು. ಇವರು ಇಂತಹ ಅಸಹಾಯಕ ಮತ್ತು ಹತಾಶೆಯ ವಾತಾವರಣದಲ್ಲೂ ಆಯ್ದ ಸ್ವಚ್ಛ ಮತ್ತು ದಿಟ್ಟ ಅಧಿಕಾರಿಗಳ ತಂಡದೊಡನೆ ಲೋಕಾಯುಕ್ತ ಸಂಸ್ಥೆಯನ್ನು ಬಲಪಡಿಸಿ ಭ್ರಷ್ಟಾಚಾರದ ವಿರುದ್ಧ ತಮ್ಮ ಸಮರವನ್ನು ಮುಂದುವರೆಸಿದ್ದಾರೆ. ತಮ್ಮ ಮುಂದೆ ದಾಖಲಾಗಿರುವ ವಿವಿಧ ಭ್ರಷ್ಟಾಚಾರ ಪ್ರಕರಣಗಳ ಕ್ಷಿಪ್ರ, ನಿಷ್ಪಕ್ಷಪಾತ ಮತ್ತು

ನಿರ್ದಾಕ್ಷಿಣ್ಯ ವಿಚಾರಣೆಗಳ ಮೂಲಕ ಭ್ರಷ್ಟರನ್ನು ಗುರುತಿಸಿ, ಶಿಕ್ಷೆಗೆ ಗುರಿಪಡಿಸುವ ನಿರಂತರ ಕೆಲಸದಲ್ಲಿ ತೊಡಗಿದ್ದಾರೆ.

ಹೀಗೆ ಲೋಕಾಯುಕ್ತರ ವಿಚಾರಣೆಗೆ ಗುರಿಯಾಗಿರುವವರಲ್ಲಿ ರಾಜ್ಯದ ಅತ್ಯುನ್ನತ ಅಧಿಕಾರ ಸ್ಥಾನಗಳಲ್ಲಿರುವ ರಾಜಕಾರಣಿಗಳೂ ಸೇರಿದ್ದಾರೆ. ಇದರಿಂದಾಗಿ, ನ್ಯಾಯದ ಕತ್ತಿ ತಮ್ಮ ಕೊರಳ ಹತ್ತಿರವೇ ಬರುತ್ತಿರುವುದನ್ನು ಕಂಡು ಗಾಬರಿಗೊಂಡಿರುವ ಈ ರಾಜಕಾರಣಿಗಳು ತಮ್ಮ ಭ್ರಷ್ಟ ಚಟುವಟಿಕೆಗಳಲ್ಲಿ ಪಾಲುದಾರರಾದ ಅಧಿಕಾರಿಗಳೊಂದಿಗೆ ಶಾಮೀಲಾಗಿ ಈಗ ಲೋಕಾಯುಕ್ತರ ಕೆಲಸ- ಕಾರ್ಯಗಳಿಗೆ ಅಡ್ಡಿಪಡಿಸುವ, ಅವರನ್ನು ಸಾರ್ವಜನಿಕವಾಗಿ ಬೆದರಿಸುವ ಮತ್ತು ಅವರ ವಿಚಾರಣಾ ವ್ಯಾಪ್ತಿಯನ್ನು ಮೊಟಕುಗೊಳಿಸುವ ನಿರ್ಲಜ್ಜ ಪ್ರಯತ್ನಗಳಿಗೆ ಕೈಹಾಕಿದ್ದಾರೆ. ಆದರೆ ನಮ್ಮ ಲೋಕಾಯುಕ್ತರು ಈ ಯಾವ ಬೆದರಿಕೆಗೂ ಮಣಿಯದೆ, ಇವರ ಈ ಎಲ್ಲ ಕಾನೂನು ಬಾಹಿರ ಪ್ರಯತ್ನಗಳನ್ನು ನಿಷ್ಫಲಗೊಳಿಸಲು ದೊಡ್ಡ ಕಾನೂನಿನ ಹೋರಾಟದ ಜೊತೆಗೆ, ಜನತಾ ಶಕ್ತಿಯ ಸಂಘಟನೆಗೂ ಕರೆ ಕೊಟ್ಟಿದ್ದಾರೆ.

ಹಾಗಾಗಿ ಸಾರ್ವಜನಿಕರಾದ ನಾವು ಈಗ ಸುಮ್ಮನೆ ಕೂರುವಂತಿಲ್ಲ. ನಾವೀಗ ಎಚ್ಚರದಪ್ಪಿದರೆ, ಮೌನ ವಹಿಸಿದರೆ, ಈ ನಾಗರಿಕ ಸಮಾಜದಿಂದಾಗಿಯೇ ಅಷ್ಟೋ ಇಷ್ಟೋ ಪ್ರಯೋಜನ ಮತ್ತು ಲಾಭ ಪಡೆದಿರುವ ನಾವು ಒಬ್ಬ ನಾಗರಿಕರಾಗಿ, ಮಾನವಂತ ಪ್ರಜೆಗಳಾಗಿ ಈ ಬ್ರಹ್ಮಾಂಡ ಭ್ರಷ್ಟ ವ್ಯವಸ್ಥೆಯ ವಿರುದ್ಧ ಸಂಘಟಿತ ಪ್ರತಿಭಟನೆಯ ಧ್ವನಿ ಎತ್ತಬೇಕಿದೆ. ಇಂತಹ ನಿರ್ಣಾಯಕ ಸಮಯದಲ್ಲೂ ನಾವು ಈ ಕನಿಷ್ಠ ನಾಗರಿಕ ಕರ್ತವ್ಯವನ್ನೂ ನಿರ್ವಹಿಸದೇ ಹೋದರೆ ಪ್ರಜಾಪ್ರಭುತ್ವಕ್ಕೆ, ನಾಗರಿಕ ಆಡಳಿತ ವ್ಯವಸ್ಥೆಗೆ ನಾವು ಅರ್ಹರಲ್ಲವೆಂದೇ ಅರ್ಥವಾಗುತ್ತದೆ. ಹಾಗಾಗದಂತೆ ನೋಡಿಕೊಳ್ಳಲು, ನಾವು ಸರ್ವರೂ ಲೋಕಾಯುಕ್ತರು ಎಲ್ಲ ರೀತಿಯ ಭ್ರಷ್ಟತೆಯ ವಿರುದ್ಧ ಸಾರಿರುವ ಸಮರದ ಜೊತೆಗಿದ್ದೇವೆ ಎಂಬುದನ್ನು ಸ್ಪಷ್ಟವಾಗಿ ಸಾರಿ ಹೇಳಬೇಕಿದೆ. ಆ ಮೂಲಕ ಲೋಕಾಯುಕ್ತರ ನೈತಿಕ ಸ್ಥೈರ್ಯವನ್ನು ಹೆಚ್ಚಿಸಬೇಕಿದೆ.

ಇದಕ್ಕಿಂತ ಹೆಚ್ಚಾಗಿ, ಅಧಿಕಾರದ ಚುಕ್ಕಾಣಿ ಹಿಡಿದು ಜನತೆಯ ಭಯವೇ ಇಲ್ಲದೆ, ಈ ನಾಡಿನ ಅನ್ನದಾತ ರೈತ ದಿನ ದಿನವೂ ಅಸಹಾಯಕನಾಗಿ ಆತ್ಮಹತ್ಯೆಗೆ ಮೊರೆ ಹೋಗುತ್ತಿರುವುದನ್ನೂ ಲೆಕ್ಕಿಸದೆ ರಾಜ್ಯದ ಆಸ್ತಿಯನ್ನು ಎಗ್ಗಿಲ್ಲದೆ ಲೂಟಿ ಹೊಡೆಯುತ್ತಾ, ಇದರಲ್ಲಿ ಒಂದು ಭಾಗವನ್ನು ತನ್ನ ದಲ್ಲಾಳಿಗಳ ಜಾಲದ ಮೂಲಕ ಅಮಾಯಕ ಜನತೆಗೆ ವಿವಿಧ ಸರ್ಕಾರಿ ಯೋಜನೆಗಳ ಹೆಸರಲ್ಲಿ ಭಿಕ್ಷೆಯಂತೆ ಹಂಚುತ್ತಾ; ಜನಸಾಮಾನ್ಯರನ್ನೂ ಈ ಭ್ರಷ್ಟ ವ್ಯವಸ್ಥೆಯ ಪಾಲುದಾರರರನ್ನಾಗಿ ಮಾಡುತ್ತಿದ್ದಾರೆ. ಆ ಮೂಲಕ ಅವರ ಬಾಯಿ ಮುಚ್ಚಿಸಲು ಯತ್ನಿಸುತ್ತಿರುವ ಈ ದುಷ್ಟ ರಾಜಕಾರಣಿಗಳಿಗೆ ಕೊನೆಯ ಎಚ್ಚರಿಕೆಯ ಮಾತನ್ನು ನಾವು ಹೇಳಬೇಕಿದೆ. ಹಾಗೆ ಹೇಳಲಾಗದವರು ಈ ಭ್ರಷ್ಟ ವ್ಯವಸ್ಥೆಯ ಪಾಲುದಾರರೆಂದೇ ಪರಿಗಣಿತರಾಗುತ್ತಾರೆ!

ಹಾಗಾಗಿ, ಈವರೆಗೆ ಲೋಕಾಯುಕ್ತರ ವಿಚಾರಣೆಯ ವ್ಯಾಪ್ತಿಗೆ ಒಳಪಟ್ಟಿರುವ ಯಾವ ಪ್ರಕರಣವನ್ನೂ ಅವರಿಂದ ಕಸಿಯದೆ, ಅವುಗಳ ಮುಕ್ತ ವಿಚಾರಣೆಗೆ ಅವಕಾಶ ನೀಡಬೇಕೆಂದು ಸರ್ಕಾರವನ್ನು ಒತ್ತಾಯಿಸಲು ಇದೇ **ಡಿಸೆಂಬರ್ ೪ರ ಶನಿವಾರ** ಶಿವಮೊಗ್ಗದ ಜನತೆ ಪ್ರತಿಭಟನಾ ಮೆರವಣಿಗೆಯಲ್ಲಿ ಪಾಲ್ಗೊಳ್ಳಬೇಕೆಂದು ಕೋರುತ್ತೇವೆ. ಇಂದಿನ ಎಲ್ಲ ಭ್ರಷ್ಟ ಮತ್ತು ದುಷ್ಟ ರಾಜಕಾರಣದ ಕೇಂದ್ರ ಸ್ಥಳದಂತಿರುವ ಶಿವಮೊಗ್ಗದಲ್ಲೇ ಈ ಪ್ರತಿಭಟನೆಯ ಕಹಳೆ ದೊಡ್ಡದಾಗಿ ಮೊಳಗಿದರೆ, ಸಂಬಂಧಪಟ್ಟವರು ಸ್ವಲ್ಪವಾದರೂ ಎಚ್ಚೆತ್ತುಕೊಂಡಾರು ಎಂಬುದು ನಮ್ಮ ಆಸೆ.

ರೈತರು, ದಲಿತರು, ಕೂಲಿಕಾರರು, ಕಾರ್ಮಿಕರು, ವ್ಯಾಪಾರಿಗಳು, ವಾಣಿಜ್ಯೋದ್ಯಮಿಗಳು, ಸರ್ಕಾರಿ ನೌಕರರು, ಬುದ್ಧಿಜೀವಿಗಳು, ಲೇಖಕರು, ಕಲಾವಿದರು, ವಿದ್ಯಾರ್ಥಿಗಳು, ಗೃಹಿಣಿಯರು, ಬಡವರು ಮತ್ತು ಶ್ರೀಮಂತರೆನ್ನದೆ ಪ್ರಜ್ಞಾವಂತರೆನಿಸಿಕೊಂಡ ಎಲ್ಲರೂ ಭಾಗವಹಿಸಬೇಕಾದ ಪ್ರತಿಭಟನೆ ಇದು ಎಂಬುದು ನಮ್ಮ ಭಾವನೆ.

ಬನ್ನಿ, ಲೋಕಾಯುಕ್ತ ಸಂತೋಷ ಹೆಗ್ಡೆಯವರ ಕೈಗಳನ್ನು ಬಲಪಡಿಸೋಣ!
ಭ್ರಷ್ಟ ಮತ್ತು ದುಷ್ಟ ರಾಜಕಾರಣದ ವಿರುದ್ಧ ಧ್ವನಿ ಎತ್ತೋಣ!
ಕರ್ನಾಟಕವನ್ನು ಉಳಿಸೋಣ!
ನಮ್ಮ ರಾಜ್ಯದ ಹೆಮ್ಮೆಯನ್ನು ಮರಳಿ ಪಡೆಯೋಣ!!

– ಡಿ.ಎಸ್. ನಾಗಭೂಷಣ, (ಕಡಿದಾಳು ಶಾಮಣ್ಣ, ಸತ್ಯನಾರಾಯಣರಾವ್ ಅಣತಿ, ಎಂ.ಬಿ.ನಟರಾಜ್, ದಿವಾಕರ ಹೆಗ್ಡೆ, ನಿಸಾರ್ ಅಹಮದ್, ರವಿ ಸಸಿತೋಟ, ಎಚ್.ಹಾಲಪ್ಪ, ಕೆ. ಅಕ್ಷತಾ, ಶಿವಮೊಗ್ಗ)

(ಶಿವಮೊಗ್ಗದ 'ಭ್ರಷ್ಟಾಚಾರ ಅಳಿಸೋಣ! ಕರ್ನಾಟಕ ಉಳಿಸೋಣ!!' ವೇದಿಕೆಗಾಗಿ ಬರೆದ ಕರಪತ್ರ. 'ಪ್ರಜಾವಾಣಿ'ಯ 'ವಾಚಕರ ವಾಣಿ'ಯಲ್ಲೂ ಇದರ ಸಂಪಾದಿತ ರೂಪ ಪ್ರಕಟವಾಗಿದೆ– ಡಿಸೆಂಬರ್, ೨೦೧೦)

ಪತ್ರ– ೬

ಲೋಕಾಯುಕ್ತರ ರಾಜೀನಾಮೆ: ಸರ್ಕಾರದ ನಿರ್ಲಜ್ಜೆ

ಮಾನ್ಯರೇ,

ಲೋಕಾಯುಕ್ತ ನ್ಯಾ॥ ಸಂತೋಷ ಹೆಗಡೆ ಅವರ ರಾಜೀನಾಮೆ ಕುರಿತಂತೆ ಬಿಜೆಪಿ ಸರ್ಕಾರದ ಸದಸ್ಯರು ಬೆಕ್ಕಿಗೆ ಜ್ವರ ಬರುವಂತಹ ಮಾತುಗಳನ್ನಾಡುತ್ತಿರುವುದು ಸೋಜಿಗದ ಸಂಗತಿಯಾಗಿದೆ! ನ್ಯಾ॥ ಹೆಗ್ಡೆಯವರು ಸರ್ಕಾರದ ಕಡೆಯಿಂದ ಕಳೆದ ಎರಡು ವರ್ಷಗಳಿಂದ

ತಾವು ಅನುಭವಿಸಿದ ನೋವು, ಮುಜುಗರ ಮತ್ತು ಹತಾಶೆಗಳನ್ನು ಎಳೆ ಎಳೆಯಾಗಿ ಜನರ ಮುಂದಿಟ್ಟಿದ್ದಾರೆ. ಹೀಗಿರುವಾಗ ಇವರು ತಮಗೆ ಲೋಕಾಯುಕ್ತರ ಬಗ್ಗೆ ಗೌರವವಿದೆಯೆಂದೂ, ಅವರ ರಾಜೀನಾಮೆಯಿಂದ ನೋವಾಗಿದೆಯೆಂದೂ ಹೇಳುತ್ತಿರುವುದು ನಿರ್ಲಜ್ಜತನದ ಪರಮಾವಧಿಯಾಗಿದೆ.

ಲೋಕಾಯುಕ್ತರು, ತಮ್ಮ ಅನೇಕ ಮನವಿಗಳ ಹೊರತಾಗಿಯೂ ಉಪ ಲೋಕಾಯುಕ್ತರ ನೇಮಕಾತಿಯನ್ನು ಮುಂದೂಡುವ ಮೂಲಕ ರಾಜ್ಯದಲ್ಲಿ ಭ್ರಷ್ಟಾಚಾರದ ವಿರುದ್ಧ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಲಾಗಿದೆ, ತಾವು ಹಿಡಿದು ಹಾಕಿದ ಲಂಚಕೋರ ಅಧಿಕಾರಿಗಳನ್ನು ಮತ್ತೆ ಅದೇ ಅಧಿಕಾರ ಸ್ಥಾನಗಳಿಗೆ ನೇಮಿಸಲಾಗುತ್ತಿದೆ ಮತ್ತು ಅಕ್ರಮ ಗಣಿಗಾರಿಕೆ ಮತ್ತು ಅಕ್ರಮ ಅದಿರು ಸಾಗಣೆಯಂತಹ ರಾಜ್ಯ ಆದಾಯದ ಬೃಹತ್ ಲೂಟಿಯ ವಿರುದ್ಧ ತಮ್ಮ ಸೂಚನೆಗಳ ಮೇರೆಗೆ ಕಾರ್ಯಾಚರಣೆಯಲ್ಲಿ ತೊಡಗಿರುವ ಅಧಿಕಾರಿಗಳನ್ನು ಹೇಗೆ ಶಿಕ್ಷಿಸಲಾಗುತ್ತಿದೆ ಎಂಬುದನ್ನು ಉದಾಹರಣೆಗಳ ಮೂಲಕ ವಿವರಿಸಿ ರಾಜೀನಾಮೆ ಘೋಷಿಸಿದ್ದಾರೆ. ಆದರೆ ಅದಾದ ಎರಡೇ ದಿನಗಳಲ್ಲಿ ಸರ್ಕಾರ ಜನತೆಯ ದುಡ್ಡಿನಿಂದಲೇ ಸಾಧನಾ ಸಮಾವೇಶ ನಡೆಸಿ ಮುಂದಿನ ಮೂರು ವರ್ಷಗಳಲ್ಲಿ ರಾಜ್ಯವನ್ನು ಮಾದರಿ ರಾಜ್ಯವನ್ನಾಗಿ ಮಾಡುವುದಾಗಿ ಹೇಳುತ್ತಿರುವುದು ಅದರ ರಾಜಕೀಯ ಭಂಡತನದ ಪ್ರತೀಕ ಮಾತ್ರವಾಗಿದೆ.

ಲೋಕಾಯುಕ್ತರು ರಾಜ್ಯದಲ್ಲಿನ ಭ್ರಷ್ಟಾಚಾರ ಕುರಿತಂತೆ ಆಡಿದ ಮಾತುಗಳನ್ನು ಮರೆಸಲೋ ಎಂಬಂತೆ, ಅವರು ಪರಮಾಧಿಕಾರಕ್ಕಾಗಿ ಅವಸರಪಟ್ಟು ರಾಜೀನಾಮೆ ನೀಡಿ ತಪ್ಪು ಮಾಡಿದ್ದಾರೆಂಬ ಭಾವನೆ ಉಂಟು ಮಾಡಲು ಕೆಲವು ಬಿಜೆಪಿ ಸದಸ್ಯರು ಯತ್ನಿಸುತ್ತಿರುವುದು ಇವರು ಮಾತುಗಾರಿಕೆಯಲ್ಲಿ ಎಂತಹ ಚಾಣಾಕ್ಷತನ ಸಾಧಿಸಿದ್ದಾರೆ ಎಂಬುದನ್ನಷ್ಟೇ ತೋರಿಸುತ್ತದೆ. ಸಾರಿಗೆ ಮಂತ್ರಿ ಅಶೋಕ್ ಅವರು ಪರಮಾಧಿಕಾರವನ್ನು ರಾತ್ರೋ ರಾತ್ರಿ ಕೊಡಲಾಗುತ್ತದೆಯೇ ಎಂದು ವ್ಯಂಗ್ಯವಾಡಿದ್ದರೆ, ಮುಖ್ಯಮಂತ್ರಿಯವರು ತಾವೇನೂ ಲೋಕಾಯುಕ್ತರ ಅಧಿಕಾರಗಳನ್ನು ಮೊಟಕುಗೊಳಿಸಿಲ್ಲ ಎಂಬ ಅಸಂಬದ್ಧ ಮಾತುಗಳನ್ನಾಡಿ ಲೋಕಾಯುಕ್ತರ ತಲೆ ಮೇಲೇ ಗೂಬೆ ಕೂರಿಸುವ ಪ್ರಯತ್ನ ಮಾಡಿದ್ದಾರೆ. ಇನ್ನು ದೊಡ್ಡ ಬಾಯಿನ ಬಿಜೆಪಿ ಅಧ್ಯಕ್ಷ ಈಶ್ವರಪ್ಪನವರು ಮೊದಲು, ಇದೊಂದು ರಾಜಕೀಯ ಪ್ರೇರಿತ ಕ್ರಮ ಎಂದಿದ್ದವರು; ರಾಜ್ಯಾದ್ಯಂತ ಲೋಕಾಯುಕ್ತರ ಪರವಾಗಿ ಕ್ರೋಢೀಕೃತವಾಗುತ್ತಿದ್ದಂತೆ ಲಹರಿ ಬದಲಾಯಿಸಿದ್ದಾರೆ. ಲೋಕಾಯುಕ್ತರು ಅವಸರದ ತೀರ್ಮಾನ ಕೈಗೊಂಡಿದ್ದಾರಾದರೂ, ಗೌರವವಿಲ್ಲದೆಡೆ ಇರಬಾರದೆಂಬ ಅವರ ಭಾವನೆಯನ್ನು ಮೆಚ್ಚುತ್ತೇನೆಂದು ಹೇಳುವ ಮೂಲಕ ಅವರು ಸರ್ಕಾರ ಈವರೆಗೆ ಲೋಕಾಯುಕ್ತರ ಬಗ್ಗೆ ತಳೆದ ನಿಲುವನ್ನು ಪರೋಕ್ಷವಾಗಿ ಸಮರ್ಥಿಸಿದ್ದಾರೆ!

ಆದರೆ ಸ್ವತಃ ಲೋಕಾಯುಕ್ತರು ತಮ್ಮ ರಾಜೀನಾಮೆಗೆ ನೀಡಿದ ಕಾರಣಗಳಲ್ಲಿ ಪರಮಾಧಿಕಾರದ ಪ್ರಶ್ನೆಯನ್ನೇ ಪ್ರಸ್ತಾಪಿಸಿಲ್ಲ ಎಂಬುದು ಗಮನಾರ್ಹ. ಅವರು ಕೇಳಿದ್ದು, ಭ್ರಷ್ಟಾಚಾರದಲ್ಲಿ ಸಿಕ್ಕಿ ಹಾಕಿಕೊಂಡ ನೌಕರರ ವಿಚಾರಣೆ ವರ್ಷಗಟ್ಟಲೆ ನಡೆಯುವುದರಿಂದ, ಅವರ ವಿಚಾರಣೆಯನ್ನು ಶೀಘ್ರ ಗತಿಯಲ್ಲಿ ನಡೆಸಿ ಮೊಕದ್ದಮೆಯನ್ನು ತ್ವರಿತವಾಗಿ ನಿಕಾಲೆ

ಮಾಡಲಾಗುವಂತಹ ಸೌಲಭ್ಯವನ್ನು ಮಾತ್ರ. ಹಾಗೆ ನೋಡಿದರೆ ಪರಮಾಧಿಕಾರದ ಮಾತನಾಡಿದ್ದೇ ಬಿಜೆಪಿ. ಅದು ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಲೋಕಾಯುಕ್ತರಿಗೆ ಪರಮಾಧಿಕಾರ ನೀಡಿ ರಾಜ್ಯವನ್ನು ಭ್ರಷ್ಟಾಚಾರ ಮುಕ್ತ ರಾಜ್ಯವನ್ನು ಮಾಡುವುದಾಗಿ ಘೋಷಿಸಿತ್ತು! ಆದರೆ ಆ ಆಶ್ವಾಸನೆಯ ಮೇಲೆ ಅಧಿಕಾರಕ್ಕೆ ಬಂದ ಸರ್ಕಾರ, ಎರಡು ವರ್ಷಗಳ ನಂತರವೂ ಪರಮಾಧಿಕಾರ ನೀಡುವುದಿರಲಿ, ಭ್ರಷ್ಟಾಚಾರದ ವಿರುದ್ಧ ಇರುವ ಅಧಿಕಾರಗಳನ್ನು ಸಮರ್ಪಕವಾಗಿ ಬಳಸಲು ಈ ಆಡಳಿತದಲ್ಲಿ ಸಾಧ್ಯವಾಗುತ್ತಿಲ್ಲವೆಂದು ಲೋಕಾಯುಕ್ತರು ರಾಜೀನಾಮೆ ನೀಡುವಂತಹ ಪರಿಸ್ಥಿತಿ ನಿರ್ಮಿಸಿದೆ ಎಂದರೆ ಏನು ಹೇಳುವುದು?

ಹೀಗಿದ್ದೂ ಮುಖ್ಯಮಂತ್ರಿಯವರು, ಲೋಕಾಯುಕ್ತರ ರಾಜೀನಾಮೆಯಿಂದ ತಮಗೆ ನೋವಾಗಿದೆಯೆಂದು ಹೇಳುತ್ತಿರುವುದನ್ನು ಯಾರೂ ಆತ್ಮ ದ್ರೋಹವೆಂದು ತಪ್ಪಾಗಿ ಅರ್ಥ ಮಾಡಿಕೊಳ್ಳುವ ಅಗತ್ಯವಿಲ್ಲ. ಏಕೆಂದರೆ ತಮ್ಮ ಈ ನೋವಿಗೆ ಕಾರಣವನ್ನೂ ಅವರು ತಿಳಿಸಿದ್ದಾರೆ. ಅವರಿಗೆ ನೋವಾಗಿರುವುದು ಸಾಧನಾ ಸಮಾವೇಶದ ಸಂದರ್ಭದಲ್ಲಿ ರಾಜೀನಾಮೆ ಘೋಷಿಸಿದ್ದರಿಂದಾಗಿ ಎಂದು ಅವರು ಸೂಚಿಸಿದ್ದಾರೆ! ಇದನ್ನು ಅವರು, ರಾಜೀನಾಮೆಯನ್ನು ಹಿಂತೆಗೆಕೊಳ್ಳುವಂತೆ ಲೋಕಾಯುಕ್ತರನ್ನು ತಾವು ಕೇಳಿ ಅವರನ್ನು ಮುಜುಗರಕ್ಕೀಡು ಮಾಡಬಯಸುವುದಿಲ್ಲ ಎಂದು ಹೇಳುವ ಮೂಲಕ ಲೋಕಾಯುಕ್ತರ ರಾಜೀನಾಮೆಯಿಂದ ತಮಗಾಗಿರುವ ಒಳ ಸಂತೋಷವನ್ನು ಸ್ಪಷ್ಟಪಡಿಸಿಯೂ ಬಿಟ್ಟಿದ್ದಾರೆ. ಹಾಗಾಗಿ, ಬಿಜೆಪಿಯ ಎರಡು ವರ್ಷಗಳ ಸಾಧನೆಯೆಂದರೆ, ಇಂತಹ ಜಾಣ ಮಾತುಗಳನ್ನಾಡುವುದರ ಮೂಲಕ ಜನರ ಹಾದಿ ತಪ್ಪಿಸುತ್ತಾ ತಮ್ಮ 'ಅಭಿವೃದ್ಧಿ ರಾಜಕಾರಣ'ವನ್ನು ಮುಂದುವರೆಸಿಕೊಂಡು ಹೋಗುವ ಚಾಣಾಕ್ಷತನವನ್ನು ಕರಗತ ಮಾಡಿಕೊಂಡಿರುವುದೇ ಆಗಿದೆ ಎಂದು ಕಾಣುತ್ತದೆ! ಆದರೆ, ಶಿವಮೊಗ್ಗಕ್ಕೆ ಬಂದು ಒಮ್ಮೆ ಜನರನ್ನು ವಿಚಾರಿಸಿದರೆ ಇವರ ಆಡಳಿತದಲ್ಲಿ ಯಾರಾರ 'ಅಭಿವೃದ್ಧಿ' ಎಷ್ಟೆಷ್ಟು ಆಗಿದೆ ಎಂಬುದು ಗೊತ್ತಾಗುತ್ತದೆ.

('ಪ್ರಜಾವಾಣಿ'ಯ 'ವಾಚಕರವಾಣಿ'ಯಲ್ಲಿ ಪ್ರಕಟಿತ– ಏಪ್ರಿಲ್, ೨೦೧೧)

ಪತ್ರ– ೭

ಎಚ್ಚರದಪ್ಪಿದ ನಮ್ಮ ಲೋಕಾಯುಕ್ತರು!

ಮಾನ್ಯರೇ,

ನೆಚ್ಚಿಕೊಂಡ ಎಮ್ಮೆ ಕೋಣನನ್ನು ಈಯಿದ್ದಿತು ಎಂಬಂತೆ, ರಾಜ್ಯದಲ್ಲಿನ ಸರ್ವವ್ಯಾಪಿ ಭ್ರಷ್ಟಾಚಾರದ ವಿರುದ್ಧ ರಾಜಿಯಿಲ್ಲದ ಸಮರ ಸಾರಿದ್ದ ನ್ಯಾ. ಸಂತೋಷ್ ಹೆಗ್ಡೆಯವರು ಯಾರೂ ನಿರೀಕ್ಷಿಸದಷ್ಟು ಶೀಘ್ರವಾಗಿ ರಾಜೀನಾಮೆಯನ್ನು ವಾಪಸ್ ಪಡೆದು ಎಲ್ಲರನ್ನೂ

ದಂಗು ಬಡಿಸಿದ್ದಾರೆ. ದಂಗು ಏಕೆಂದರೆ, ತಾವು ಎಲ್ಲ ಪೂರ್ವಾಪರವನ್ನೂ ಚೆನ್ನಾಗಿ ವಿಚಾರ ಮಾಡಿಯೇ ರಾಜೀನಾಮೆ ನೀಡಿರುವುದಾಗಿಯೂ, ಆದುದರಿಂದ ಇಲ್ಲಿ ಯಾವುದೇ ಚೌಕಾಶಿಗೆ ಅವಕಾಶವಿಲ್ಲವೆಂದೂ ಮತ್ತು ಯಾರೇ ಏನೇ ಭರವಸೆ ನೀಡಿದರೂ ತಾವು ರಾಜೀನಾಮೆ ವಾಪಸ್ ಪಡೆಯುವುದಿಲ್ಲವೆಂದೂ ಖಡಾಖಂಡಿತವಾಗಿ ಹೇಳಿದ್ದ ಅವರು ಈಗ ಎಲ್.ಕೆ.ಅಡ್ವಾಣಿಯವರ ಪತ್ರಕ್ಕೆ ತಲೆಬಾಗಿ ತಾವು ರಾಜೀನಾಮೆ ವಾಪಸ್ ಪಡೆಯುತ್ತಿರುವುದಾಗಿ ಬಹಳ ಸುಲಭದಲ್ಲಿ ಹೇಳಿಬಿಟ್ಟಿದ್ದಾರೆ.

ಹೆಗ್ಡೆಯವರಿಗೆ ಅಡ್ವಾಣಿಯವರು ತೀರ್ಥರೂಪು ಸಮಾನರೇ ಇರಬಹುದು, ಅವರ ಬಗ್ಗೆ ಇವರಿಗೆ ಅಪಾರ ಗೌರವ– ವಿಶ್ವಾಸಗಳಿರಬಹುದು. ಅದು ಯಾರೂ ಪ್ರಶ್ನಿಸಲಾಗದ, ಅವರ ವೈಯುಕ್ತಿಕ ವಿಚಾರ. ಆದರೆ ಅದನ್ನು ತಮ್ಮ ವೃತ್ತಿ ನಿರ್ವಹಣೆಯ ವಿಚಾರಕ್ಕೆ ತಳುಕು ಹಾಕಿ ಸಾರ್ವಜನಿಕರ ಮುಂದೆ ಅದನ್ನು ತಮ್ಮ ರಾಜೀನಾಮೆ ವಾಪಸಾತಿಗೆ ಕಾರಣ ಎಂದು ಸಮರ್ಥನೆ ನೀಡಿರುವುದು, ಅವರು ಈವರೆಗೆ ಕಾಪಾಡಿಕೊಂಡು ಬಂದಿದ್ದ ವೃತ್ತಿಗೌರವದ ಬಗ್ಗೆ ಜನ ಇಟ್ಟುಕೊಂಡಿದ್ದ ನಂಬಿಕೆಗೆ ಚ್ಯುತಿ ತಂದಿದೆ ಎಂದರೆ ತಪ್ಪಾಗಲಾರದು.

ಅಡ್ವಾಣಿಯವರ ದೂರವಾಣಿ ಕರೆ ಅಥವಾ ಪತ್ರ ಹೆಗ್ಡೆಯವರ ಮೇಲೆ ಪರಿಣಾಮ ಬೀರಿದ್ದರೂ, ಅವರು ಅದನ್ನು ಈ ರೀತಿಯಲ್ಲಿ ಸಾರ್ವಜನಿಕರ ಮುಂದೆ ಪ್ರಸ್ತುತಗೊಳಿಸುವ ಅಗತ್ಯವಿರಲಿಲ್ಲ. ಅವರು ರಾಜೀನಾಮೆ ನೀಡುವಾಗ ಹೇಗೆ ತಣ್ಣಗೆ ರಾಜ್ಯಪಾಲರ ಬಳಿ ಹೋಗಿ ರಾಜೀನಾಮೆ ಸಲ್ಲಿಸಿ, ನಂತರ ತಾವೇ ಪತ್ರಿಕಾ ಗೋಷ್ಠಿ ನಡೆಸಿ ತಮ್ಮ ರಾಜೀನಾಮೆಗೆ ಕಾರಣಗಳನ್ನು ವಿವರಿಸಿದರೋ, ಅಷ್ಟೇ ತಣ್ಣಗೆ ಈಗಲೂ ರಾಜ್ಯಪಾಲರ ಬಳಿ ಹೋಗಿ ರಾಜೀನಾಮೆ ವಾಪಸ್ ಪಡೆದು, ನಂತರ ತಾವೇ ಪತ್ರಿಕಾ ಗೋಷ್ಠಿ ಕರೆದು ತಮ್ಮ ರಾಜೀನಾಮೆ ವಾಪಸಾತಿಗೆ ಕಾರಣಗಳನ್ನು ವಿವರಿಸಬಹುದಿತ್ತು.

ಬದಲಿಗೆ ಈಗ ಸಂತೋಷ್ ಹೆಗ್ಡೆಯವರು, ಬಿಜೆಪಿಯ ರಾಷ್ಟ್ರೀಯ ನಾಯಕರು ತಮ್ಮ ಮನೆಗೆ ಬಂದು ಚೌಕಾಶಿ ನಡೆಸಿದ ನಂತರದಲ್ಲೇ ಪತ್ರಿಕಾ ಗೋಷ್ಠಿ ನಡೆಸಿ, ಅಡ್ವಾಣಿಯವರ ಹೆಸರು ಹೇಳುತ್ತಾ ತಮ್ಮ ರಾಜೀನಾಮೆ ವಾಪಸಾತಿ ನಿರ್ಧಾರವನ್ನು ಪ್ರಕಟಿಸಿದ್ದಾರೆ! ಅದೂ, ತಮ್ಮ ಹುದ್ದೆಗೆ ಯಾವುದೇ ಸಂಬಂಧವಿಲ್ಲದ ಬಿಜೆಪಿ ರಾಷ್ಟ್ರಾಧ್ಯಕರನ್ನು ಮತ್ತು ಯಾರ ವರ್ತನೆಯಿಂದ ತಮ್ಮ ರಾಜೀನಾಮ ಅನಿವಾರ್ಯವಾಯಿತೋ ಹಾಗೂ ಯಾರು ತಮ್ಮ ರಾಜೀನಾಮೆ ವಾಪಸಾತಿಗೆ ಒತ್ತಾಯಿಸುವುದಿಲ್ಲವೆಂದು ಬಹಿರಂಗವಾಗಿ ಘೋಷಿಸಿದ್ದರೋ, ಆ ಮುಖ್ಯಮಂತ್ರಿಯನ್ನು ಎಡ ಬಲಗಳಲ್ಲಿಟ್ಟುಕೊಂಡು! ಇದು, ಹೆಗ್ಡೆಯವರಿಗೆ ಗೊತ್ತಿದ್ದೋ ಗೊತ್ತಿಲ್ಲದೆಯೋ ಇಡೀ ಪ್ರಕರಣಕ್ಕೆ ಒಂದು ರಾಜಕೀಯ ಬಣ್ಣ ಬಳಿದುಬಿಟ್ಟಿದೆ.

ಹಾಗೇ ಇದು, ಲೋಕಾಯುಕ್ತರು ಬಿಜೆಪಿ ಸರ್ಕಾರದ ಸಾಧನಾ ಸಮಾವೇಶಕ್ಕೆ ಮುನ್ನ ರಾಜೀನಾಮೆ ನೀಡಿ ಆ ಪಕ್ಷಕ್ಕೆ ಮಾಡಿದ್ದ ಮುಜುಗರವನ್ನು ಈಗ ಸ್ವಾಭಿಮಾನಿ ಸಮಾವೇಶಕ್ಕೆ ಮುನ್ನ ಅದೇ ಪಕ್ಷದ ಹಿರಿಯ ನಾಯಕರ ಸ್ತುತಿ ಮಾಡಿ ರಾಜೀನಾಮೆ ವಾಪಸ್ ಪಡೆಯುವ ಮೂಲಕ ನಿವಾರಿಸುವ ಪ್ರಯತ್ನಮಾಡಿದಂತೆ ಕೆಲವರಿಗೆ ಕಂಡರೆ

ಆಶ್ಚರ್ಯವಿಲ್ಲ! ಹಾಗಾಗಿ, ಹೆಗ್ಡೆಯವರ ರಾಜೀನಾಮೆ ವಾಪಸಾತಿ ಜನರಲ್ಲಿ ವ್ಯಾಪಕ ಹರ್ಷವನ್ನುಂಟು ಮಾಡಿದೆಯಾದರೂ, ಇಷ್ಟು ತರಾತುರಿಯಲ್ಲಿ ರಾಜೀನಾಮೆ ವಾಪಸ್ ಪಡೆಯುವ ಅಗತ್ಯ ಏನಿತ್ತು ಎಂಬ ಸಣ್ಣ ಪ್ರಶ್ನೆಯನ್ನೂ ಅವರ ಮನಸ್ಸಿನಲ್ಲಿ ಹುಟ್ಟು ಹಾಕಿದೆ.

ಬಹುಶಃ ಒಂದು ಕ್ಷಣ ಎಚ್ಚರದಪ್ಪಿದ ಪರಿಣಾಮವಾಗಿ ಈ ಆಕಸ್ಮಿಕ ಸಂಭವಿಸಿದೆ. ಇದನ್ನು ಸ್ವಚ್ಛ ಚಾರಿತ್ರ್ಯ ಉಳ್ಳವರೂ, ದಕ್ಷರೂ ಮತ್ತು ದಿಟ್ಟರೂ ಆದ ಲೋಕಾಯುಕ್ತರು, ಈಗ ಸರ್ಕಾರವೂ ತಮಗೆ ತುಂಬು ಸಹಕಾರ ನೀಡುವ ವಾಗ್ದಾನ ಮಾಡಿರುವುದರಿಂದಾಗಿ, ಇನ್ನು ಮುಂದೆ ಇನ್ನಷ್ಟು ನಿರ್ದಾಕ್ಷಿಣ್ಯವಾಗಿ ಎಲ್ಲ ನೆಲೆಗಳಲ್ಲಿನ ಭ್ರಷ್ಟಾಚಾರವನ್ನು ಸೆದೆಬಡಿಯುವ ಪ್ರಯತ್ನ ಮಾಡುವ ಮೂಲಕ ಜನರ ನೆನಪಿನಿಂದ ಅಳಿಸಿ ಹಾಕಬಹುದಾಗಿದೆ.

('ಪ್ರಜಾವಾಣಿ'ಯ 'ಸಂಗತ'ದಲ್ಲಿ ಪ್ರಕಟಿತ– ಏಪ್ರಿಲ್, ೨೦೧೧)

ಪತ್ರ– ೮

ಪ್ರಜಾವಾಣಿಯ ಬದಲಾದ ಸಂಪಾದಕೀಯ ನಿಲುವು!

ಮಾನ್ಯರೇ

'ಪ್ರಜಾವಾಣಿ'ಯು ತನ್ನ ೧೭.೫.೨೦೧೧ರ ಸಂಪಾದಕೀಯದಲ್ಲಿ ರಾಜ್ಯದ ಸದ್ಯದ ರಾಜಕೀಯ ಪರಿಸ್ಥಿತಿಯಲ್ಲಿ ರಾಜ್ಯಪಾಲರ ಕ್ರಮವನ್ನು ಸಾರಾ ಸಗಟಾಗಿ ಖಂಡಿಸಿ, ಅದನ್ನು ಪ್ರಜಾಪ್ರಭುತ್ವ ವಿರೋಧಿ ಕ್ರಮವೆಂದು ವರ್ಣಿಸಿದೆ. ಇಂದು ಅಂದರೆ ೧೮ರಂದು ನೋಡಿದರೆ, ಮತ್ತೊಂದು ಸಂಪಾದಕೀಯ ಬರೆದು, ರಾಜ್ಯಪಾಲರ ಈ 'ಅಪ್ರಜಾಸತ್ತಾತ್ಮಕ ಕ್ರಮ'ಕ್ಕೆ ಮೂಲ ಕಾರಣವಾದ ರಾಜ್ಯ ವಿಧಾನಸಭಾಧ್ಯಕ್ಷರ ಅನುಚಿತ ವರ್ತನೆಯನ್ನು ಖಂಡಿಸಿ, ಅವರ ರಾಜೀನಾಮೆಗೆ ಆಗ್ರಹಿಸಿದೆ! ಏನಿದರ ಅರ್ಥ? ಇವರೆಡನ್ನೂ ಬೇರೆ ಬೇರೆಯಾಗಿ ನೋಡಲಾದೀತೇ?

ಪ್ರಜಾಪ್ರಭುತ್ವ ಎಂಬುದು ಕೇವಲ ಸಂಖ್ಯೆಯ ಆಟವನ್ನು ಆಧರಿಸಿದ ಒಂದು ತಾಂತ್ರಿಕ ಪ್ರಕ್ರಿಯೆಯಲ್ಲ. ಅದು ವಿಶ್ವ ನಾಗರೀಕತೆ ತನ್ನ ಸಾವಿರಾರು ವರ್ಷಗಳ ಅನುಭವದ ಆಧಾರದ ಮೇಲೆ ಆವಿಷ್ಕರಿಸಿಕೊಂಡಿರುವ ಒಂದು ಸ್ವಯಮಾಡಳಿತದ ಪರಿಕಲ್ಪನೆ. ಅದರ ಹಿಂದೆ ಕೆಲವು ಪವಿತ್ರ ಮೌಲ್ಯಗಳಿಂದ ಸ್ಫೂರ್ತಿಗೊಂಡ ಒಂದು ತೀವ್ರ ಭಾವನೆಯೂ ಇದೆ. ಅಂದರೆ, ಅದೊಂದು ಅವಿಭಾಜ್ಯವಾದ ರಾಜಕೀಯ ಪ್ರಕ್ರಿಯೆ. ಅದಕ್ಕೆ ಮೇಲ್ನೋಟಕ್ಕೆ ಗೋಚರವಾಗುವ ತಾಂತ್ರಿಕ ಮುಖ ಮಾತ್ರವಲ್ಲದೆ, ಅದಕ್ಕೆ ಆಧಾರವಾದ ಒಂದು ಮೌಲಿಕ ಮುಖವೂ ಇದೆ. ಇವೆರಡೂ ಪರಸ್ಪರ ಸಾವಯವಾಗಿ ಸಂಯೋಜಿತವಾಗಿ ಸಕ್ರಿಯವಾದಾಗ ಮಾತ್ರ ಪ್ರಜಾಪ್ರಭುತ್ವ ಜೀವಂತವೆನಿಸಿಕೊಳ್ಳುವುದು. ಈ ಹಿನ್ನೆಲೆಯಲ್ಲಿ ಇಂದು ಯಡಿಯೂರಪ್ಪ

ನವರು 'ಸಾಬೀತು' ಪಡಿಸುತ್ತಿರುವ ಬಹುಮತ ಎಂತಹುದು ಎಂಬುದನ್ನು ಸ್ವಲ್ಪ ಆಳವಾಗಿ, ವಿವರವಾಗಿ ಪರಿಶೀಲಿಸಬೇಕಾಗುತ್ತದೆ.

ಇಂದು ಕಾಂಗ್ರೆಸ್/ಜೆಡಿಎಸ್ ಪಕ್ಷದಿಂದ ಆಯ್ಕೆಯಾದವರು ರಾಜಕೀಯ ಅಧಿಕಾರ ಅಥವಾ ಅದಕ್ಕೆ ಸಮನಾದ ಇತರ ಲಾಭಗಳ ಆಮಿಷಕ್ಕೆ ಸಿಕ್ಕಿ ನಾಳೆಯೇ ಬಿಜೆಪಿ ಸೇರುತ್ತಾರೆ! ನಂತರ ಚುನಾವಣಾ ಔಪಚಾರಿಕತೆಗಳಿಗೆ ಕಾದು, ಕೆಲವೇ ದಿನಗಳಲ್ಲಿ ಬಿಜೆಪಿ ಶಾಸಕರಾಗಿ 'ಹೇಗೋ' ಆಯ್ಕೆಯಾಗಿ ಬಿಡುತ್ತಾರೆ. ಇವರು ಹೀಗೆ 'ಹೇಗೋ' ಆಯ್ಕೆಯಾಗುವ ರಾಜಕೀಯ ಕಾರ್ಯಕ್ರಮವೊಂದನ್ನು ಸದ್ಯಕ್ಕೆ ಬಿಜೆಪಿ ರೂಪಿಸಿಕೊಂಡಿದೆ. ಅಷ್ಟೇ ಅಲ್ಲ, ಇದನ್ನು ಜನತೆಯ ಆಯ್ಕೆ ಎಂದು ಮಾನ್ಯ ಮಾಡಬೇಕೆಂದು ಅದು ಆಗ್ರಹಿಸುತ್ತದೆ! ಇದರ ಬಗ್ಗೆ ಅದಕ್ಕೆ ಕಿಂಚಿತ್ತೂ ನೈತಿಕವಾದ ಸಂಕೋಚವೆಂಬುದಿಲ್ಲ. ಹಾಗಾದರೆ ಪ್ರಜಾಪ್ರಭುತ್ವದ ಅಡಿಗಲ್ಲುಗಳೆನಿಸಿದ ಪಕ್ಷ ರಾಜಕಾರಣ ಮತ್ತು ಅದಕ್ಕೆ ಆಧಾರವಾದ ರಾಜಕೀಯ ನೀತಿ– ಸಿದ್ಧಾಂತಗಳ ಮೌಲಿಕತೆಯ ಗತಿಯೇನು?

ಇದೇ ರೀತಿ, ಆರು ತಿಂಗಳುಗಳ ಹಿಂದಷ್ಟೇ ಯಡಿಯೂರಪ್ಪನವರ ನೇತೃತ್ವದ ವಿರುದ್ಧ ಬಂಡೆದ್ದು ಅವರಿಗೆ ತಮ್ಮ ಬೆಂಬಲ ವಾಪಸ್ ಪಡೆದ ಬಗ್ಗೆ ರಾಜ್ಯಪಾಲರಿಗೆ ಪತ್ರ ಸಲ್ಲಿಸಿ ಈವರೆಗಿನ ರಾಜಕೀಯ ಅಲ್ಲೋಲ ಕಲ್ಲೋಲಕ್ಕೆ ಕಾರಣರಾದ ಹನ್ನೊಂದು ಶಾಸಕರ ಪೈಕಿ ಹತ್ತು ಜನ ಈಗ ಜನತೆಗೆ ಯಾವುದೇ ಕಾರಣ ನೀಡದೆ, ಮತ್ತೆ ಅದೇ ಯಡಿಯುರಪ್ಪನವರ ನೇತೃತ್ವಕ್ಕೆ ಬೇಷರತ್ ಬೆಂಬಲ ಘೋಷಿಸಿದ್ದಾರೆಂದರೆ ಇದೆಂತಹ ಪ್ರಜಾಸತ್ತಾತ್ಮಕ ರಾಜಕಾರಣ? ಪ್ರಜಾಸತ್ತೆ ಎಂದರೆ ಬರೀ ಜಡ ದೇಹವೋ ಅಥವಾ ಅದಕ್ಕೊಂದು ಜೀವ ಅಥವಾ ಆತ್ಮವೆಂಬುದು ಇದೆಯೋ? ಯಡಿಯೂರಪ್ಪನವರಿಗೆ ನೀಡಿದ್ದ ಬೆಂಬಲ ವಾಪಸ್ ಪಡೆದಾಗ ಮತ್ತು ಅದರ ಪರಿಣಾಮವಾಗಿ ಅವರು ಎದುರಿಸಬೇಕಾದ ಕಷ್ಟ ನಷ್ಟಗಳ ಸಂದರ್ಭದಲ್ಲಿ ಈ ಶಾಸಕರು ಅವರ ವಿರುದ್ಧ ಆಡಿದ್ದ ಮಾತುಗಳು ಮತ್ತು ಮಾಡಿದ್ದ ಆರೋಪಗಳಾದರೂ ಎಷ್ಟು ಗಂಭೀರವಾದವುಗಳು ಎಂಬುದು ಈ ಶಾಸಕರಿಗಿರಲಿ, ಬಿಜೆಪಿಯಲ್ಲಿ ಮರ್ಯಾದಸ್ಥರೆನಿಸಿದ ನಾಯಕರಾರಾದರೂ ಇದ್ದಲ್ಲಿ; ಅವರಿಗಾದರೂ ನೆನಪಿದೆಯೇ? 'ಪ್ರಜಾವಾಣಿ'ಯ ಸಂಪಾದಕ ವರ್ಗಕ್ಕಾದರೂ ನೆನಪಿದೆಯೆಂದು ಭಾವಿಸುವೆ.

ಇರಲಿ, ಈ ಬಹುಪಾಲು ಶಾಸಕರು ಮೂಲತಃ ವಿರೋಧ ಪಕ್ಷಗಳ ಅಭ್ಯರ್ಥಿಗಳಾಗಿ ಆಯ್ಕೆಯಾಗಿ, ನಂತರ 'ಆಪರೇಷನ್ ಕಮಲ'ಕ್ಕೆ ಒಳಗಾಗಿ ಬಿಜೆಪಿ ಶಾಸಕರಾದವರು ಎಂಬುದನ್ನೂ ನಾವು ಗಮನಿಸಬೇಕು. ಈ ಹಿನ್ನೆಲೆಯಲ್ಲಿ, ನಿರ್ಲಜ್ಜೆಯಿಂದ ಪದೇ ಪದೇ ವೇಷ ಬದಲಾಯಿಸುವ ಮೂಲಕ ಪ್ರಜಾಪ್ರಭುತ್ವವನ್ನು ಯಾವುದೇ ಅಥವಾ ಯಾರದೇ ಭಯವಿಲ್ಲದೆ ಅಣಕ ಮಾಡುತ್ತಿರುವ ಇಂತಹ ಶಾಸಕರಿಂದ 'ಪಡೆದುಕೊಂಡ' ಬಹುಮತವನ್ನು ಪ್ರಜಾಪ್ರಭುತ್ವೀಯ ಆಡಳಿತಕ್ಕೆ ಆಧಾರವಾಗಬಲ್ಲ ರಾಜಕೀಯ ಬಹುಮತ ಎಂದು ಪರಿಗಣಿ

ಸಬಹುದೇ? ರಾಜ್ಯಪಾಲರ ಕ್ರಮ ಖಂಡನೀಯವಾದರೆ, ಈ ಹತ್ತು ಜನ ಶಾಸಕರ ವರ್ತನೆಯನ್ನು ಏನೆಂದು ಕರೆಯಬಹುದು? ಇದರ ಬಗ್ಗೆ ಯಾರೂ ಮಾತನಾಡುತ್ತಿಲ್ಲ ಏಕೆ? ಪ್ರಜಾಪ್ರಭುತ್ವ ಕುರಿತ ನಮ್ಮ ಇಂದಿನ ಚರ್ಚೆಯೆಲ್ಲವೂ ತಾಂತ್ರಿಕ ಮಟ್ಟದಲ್ಲೇ ಉಳಿದು ಬಿಟ್ಟಿರುವುದೇ ಇದಕ್ಕೆ ಕಾರಣವಲ್ಲವೇ? ಮೇಲೆ ಉಲ್ಲೇಖಿಸಿದ 'ಪ್ರಜಾವಾಣಿಯ' ಸಂಪಾದಕೀಯಗಳೂ ಇದಕ್ಕೆ ಹೊರತಾಗಿಲ್ಲ ಅಲ್ಲವೇ? ಇಂದಿನ ರಾಜ್ಯ ರಾಜಕೀಯ ಪರಿಸ್ಥಿತಿಯ ಹಿಂದೆ ಇಂತಹ ಹಲವಾರು ಪ್ರಶ್ನೆಗಳು ಮೂಡಿ ನಿಂತಿವೆ ಎಂಬುದನ್ನು ನಾವು ಗಮನಿಸಬೇಕು.

ಇನ್ನು ಇದೆಲ್ಲದಕ್ಕೆ ಕಿರೀಟವಿಟ್ಟಂತೆ, ಬಿಜೆಪಿಯ ರಾಷ್ಟ್ರೀಯ ನಾಯಕರಲ್ಲೊಬ್ಬರೂ, ಸುಪ್ರಸಿದ್ಧ ಕಾನೂನು ಪಂಡಿತರೂ ಆದ ಅರುಣ್ ಜೈಟ್ಲಿಯವರು ಪತ್ರಿಕೆಯೊಂದರಲ್ಲಿ ಲೇಖನವೊಂದನ್ನು ಬರೆದು, ಇಂದಿನ ರಾಜಕೀಯ ಗೊಂದಲಕ್ಕೆ ಕಾರಣವಾದ ಸರ್ವೋಚ್ಚ ನ್ಯಾಯಾಲಯದ ತೀರ್ಪೇ ದೋಷಪೂರ್ಣವೆಂದು ಹೇಳಿದ್ದಾರೆ. ಆದರೂ ಅದನ್ನು ಒಪ್ಪಿಕೊಳ್ಳಬೇಕಾಗಿದೆಯೆಂದೂ ಸೇರಿಸಿದ್ದಾರೆ! ಇದು ಎಷ್ಟು ರಾಜಕೀಯ ಘಾತುಕತನದಿಂದ ಕೂಡಿದೆಯೆಂದರೆ, ಈ ಬಿಜೆಪಿಯವರು ಪ್ರಜಾಪ್ರಭುತ್ವದ ಆಧಾರಗಳೆಲ್ಲವನ್ನೂ ಒಳಗಿಂದೊಳಗೇ ಕೊರೆದು ನಾಶ ಮಾಡಲು ನಿಶ್ಚಯಿಸಿದ್ದಾರೆಂದು ಕಾಣುತ್ತದೆ. ಸರ್ವೋಚ್ಚ ನ್ಯಾಯಾಲಯದ ತೀರ್ಪು ದೋಷಪೂರ್ಣವಾಗಿದ್ದರೆ, ಅದರ ಪುನರ್ವಿಮರ್ಶೆಗೆ ಬಿಜೆಪಿ ಏಕೆ ಮನವಿ ಸಲ್ಲಿಸಬಾರದು? ಅದು ನಮಗೆ ಬೇಕಿಲ್ಲ ಎಂದು ಈ ಮೊದಲೇ ಏಕೆ ಘೋಷಿಸಿಕೊಂಡಿದೆ? ಹಾಗಿದ್ದೂ, ಅದು ದೋಷಪೂರ್ಣವೆಂದು ಹೇಳುವುದರ ಉದ್ದೇಶವಾದರೂ ಏನು?

ನಿಜ, ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ನಮ್ಮ ಬಹುಪಾಲು ಎಲ್ಲ ರಾಜಕೀಯ ಪಕ್ಷಗಳೂ ಸೇರಿ ಹಾಳು ಮಾಡಿವೆ. ಆದರೆ, ಬಿಜೆಪಿ ನಮ್ಮ ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ನಡೆಸಿರುವ ಆಡಳಿತದ ಸಮಯದಲ್ಲಿ, ಇನ್ನೂ ನ್ಯಾಯಾಲಯಗಳಲ್ಲಿ ಸಾಬೀತಾಗಬೇಕಾಗಿರುವ ಅದರ ಹಣಕಾಸು ಮತು ಆಸ್ತಿ- ಪಾಸ್ತಿಗಳಿಗೆ ಸಂಬಂಧಪಟ್ಟ ಭ್ರಷ್ಟಾಚಾರದ ಪ್ರಕರಣಗಳು ಒತ್ತಟ್ಟಿಗಿರಲಿ, ಅದು ತನ್ನ ವಿವಿಧ ರೀತಿಯ ರಾಜಕೀಯ ಅನಚಾರಗಳ ಮತ್ತು ಕಾರ್ಯಚರಣೆಗಳ ಮೂಲಕ ನಮ್ಮ ಪ್ರಜಾಪ್ರಭುತ್ವದ ಅಡಿಗಲ್ಲುಗಳನ್ನೇ ಅಲ್ಲಾಡಿಸಿರುವ ರೀತಿ, ಅದರ ವ್ಯಾಪ್ತಿ ಮತ್ತು ತೀವ್ರತೆಗಳಲ್ಲಿ ಮಿಕ್ಕೆಲ್ಲ ಪಕ್ಷಗಳೂ ಸೇರಿ ಮಾಡಿರುವ ಒಟ್ಟು ಹಾನಿಯನ್ನು ಮೀರಿಸುವಂತಿದೆ ಎಂಬುದಂತೂ ಸತ್ಯ!

(ಈ ಪತ್ರ ಪ್ರಕಟವಾಗಲಿಲ್ಲವಾದರೂ, 'ಪ್ರಜಾವಾಣಿ'ಯ ಸಂಪಾದಕೀಯ ನಿಲುವು ಬಹು ಬೇಗನೆ ಬದಲಾಯಿತೆಂಬುದು ಸಂತೋಷದ ಸಂಗತಿ. ಈ ಪತ್ರ ನಂತರ 'ಬಿಜೆಪಿ ಗೆದ್ದಿದೆ, ಪ್ರಜಾಪ್ರಭುತ್ವ ಸೋತಿದೆ 'ಎಂಬ ಶೀರ್ಷಿಕೆಯೊಂದಿಗೆ ಪ್ರತ್ಯೇಕ ಲೇಖನವಾಗಿ ಮೈಸೂರಿನ 'ಆಂದೋಲನ' ಪತ್ರಿಕೆಯಲ್ಲಿ ಪ್ರಕಟವಾಯಿತು.)

ಪತ್ರ- ೯

ರಾಜಕಾರಣದ ಜಾಹೀರಾತು ಮೌಲ್ಯ!

ಮಾನ್ಯರೇ,

ಯು.ಆರ್.ಅನಂತಮೂರ್ತಿಯವರ ಅಂಕಣ ಬರಹ (ಪ್ರವಾ: ೧೩.೧೦.೨೦೧೦) ಹೊಸದೇನನ್ನು ಹೇಳಿಲ್ಲ. ಆದರೆ, ಹಳೆಯ ಸತ್ಯಗಳನ್ನೇ ಇಂದಿನ ಸಂದರ್ಭದ ದಟ್ಟ ವಿಷಾದದೊಡನೆ ಮತ್ತೆ ಹೇಳುವ ಪ್ರಯತ್ನ ಮಾಡಿದೆ. ಅವರ ಪ್ರಕಾರ, ಇಂದಿನ ರಾಜಕಾರಣ ಹುಟ್ಟಿಸುತ್ತಿರುವ ದುಃಖದ ಗರ್ಭದಿಂದ ಹೊಸ ರಾಜಕಾರಣ ಹುಟ್ಟಬೇಕು. ಆದರೆ, ಆ ದುಃಖವೇ ಜನಕ್ಕೆ ತಾಗದಂತೆ ನಮ್ಮ ಟಿವಿ ಸುದ್ದಿ ವಾಹಿನಿಗಳು ಹಗಲೂ ರಾತ್ರಿ ಸರಣಿ ಸರಣಿ ಜಾಹೀರಾತುಗಳ ಮಧ್ಯೆ, ಇನ್ನೊಂದು ಬಹು ಬೆಲೆಯುಳ್ಳ ಜಾಹೀರಾತಿನಂತೆ ಇಂದಿನ ರಾಜಕಾರಣವನ್ನು ತಮ್ಮ ಎಲ್ಲ ಹಲ್ಲುಗಳ ಮಧ್ಯೆ ಸಿಕ್ಕಿಸಿಕೊಂಡು ಜಗಿದೂ ಜಗಿದೂ ಅದರ 'ಪ್ರಾಣ'ವನ್ನೇ ತೆಗೆದುಬಿಟ್ಟಿವೆಯಲ್ಲಾ? ಆ ಮೂಲಕ ಅದನ್ನು ಕಾಲ ಕಳೆಯುವ ಮಾತಿನ ಆಟದ ಮಟ್ಟಕ್ಕೆ ಇಳಿಸಿ, ಲಘು ಮನರಂಜನೆಯನ್ನಾಗಿ ಪರಿವರ್ತಿಸಿಬಿಟ್ಟಿದೆಯಲ್ಲಾ?

ಇದು ಮಾರುಕಟ್ಟೆಯ ಕಾಲ. ಹಾಗಾಗಿ, ಇದು ಯಾವುದಕ್ಕೂ ದುಃಖ ಪಡುವ ಕಾಲವೇ ಅಲ್ಲ. ಇದು ಸಂಪೂರ್ಣ ಮನರಂಜನೆಯ- ಇನ್ನೊಬ್ಬರನ್ನು ಕೊಂದಾದರೂ ಸುಖ ಪಡೆವ- ಕಾಲ. ದುಃಖವೆಂಬುದು ಇಂದು ಬಹಿಷ್ಕೃತ ಪದ! ಅದೇನಿದ್ದರೂ, ಸೋತವರ, ಸುಸ್ತಾದವರ, ದುರ್ಬಲರ ಪದ. ಆದರೆ ಇದಕ್ಕಾಗಿ ಮಾಧ್ಯಮಗಳನ್ನು ದೂಷಿಸಿ ಪ್ರಯೋಜನವಿಲ್ಲ. ಮಾರುಕಟ್ಟೆಯ ಇಂದಿನ ದಿನಗಳಲ್ಲಿ ಅವು ತಲೆ ಎತ್ತಿರುವುದೇ ಅಂತಿಮವಾಗಿ ಜನರಿಗೆ ಬೇಜಾರು ಕಳೆಯುವ ಮನರಂಜನೆ ಒದಗಿಸಿ, ಲಾಭ ಮಾಡುವುದಕ್ಕೋಸ್ಕರ. ಆದರೆ ನಮ್ಮ ಕೆಲವರಾದರೂ ಘನತೆವೆತ್ತ ರಾಜಕಾರಣಿಗಳಿಗೆ, ಕಾನೂನು ಪಂಡಿತರಿಗೆ, ಬುದ್ಧಿಜೀವಿಗಳಿಗೆ ಏನಾಗಿದೆ, ಪದೇ ಪದೇ ಅಲ್ಲಿಗೆ ಹೋಗಿ ಮಾತಿನ ಈ ಆಟದಲ್ಲಿ ಭಾಗವಹಿಸಿ, ರಾಜಕಾರಣವನ್ನು ಕೇವಲ ಒಂದು ಮಾನಸಿಕ ವಿಲಾಸದ ಗ್ರಾಹಕ ವಸ್ತುವನ್ನಾಗಿ ಮಾಡಲು?

('ಪ್ರಜಾವಾಣಿ'ಯ ವಾಚಕರವಾಣಿ'ಗೆ ಬರೆದ; ಆದರೆ ಪ್ರಕಟವಾಗದ ಪತ್ರ- ಅಕ್ಟೋಬರ್, ೨೦೧೦)

ಪತ್ರ– ೧೦

ಅನಂತಮೂರ್ತಿಯವರ ದೇಶಾವರಿ ಶೈಲಿ!

ಮಾನ್ಯರೇ,

ರಾಜಕಾರಣ ಮತ್ತು ರಾಜಕಾರಣಿಗಳ ಬಗ್ಗೆ ಹಿಂದೆಂದಿಗಿಂತ ಹೆಚ್ಚು ಸ್ಪಷ್ಟ ಮತ್ತು ದಿಟ್ಟವಾಗಿ ಮಾತಾಡಬೇಕಾದ ಇಂದಿನ ಸಂದರ್ಭದಲ್ಲಿ ಯು.ಆರ್ ಅನಂತಮೂರ್ತಿಯವರು ಎಂ.ಪಿ. ಪ್ರಕಾಶರ ಬಗ್ಗೆ ತಮ್ಮ ಎಂದಿನ ದೇಶಾವರಿ ಶೈಲಿಯಲ್ಲಿ ಬರೆದು (*'ಅನುಸಂಧಾನ': ಪ್ರಜಾವಾಣಿ: ೧೬.೨.೨೦೧೧*) ನಮ್ಮನ್ನು ನಿರಾಶೆಗೊಳಿಸಿದ್ದಾರೆ.

ಎಂ.ಪಿ. ಪ್ರಕಾಶ್ ಅವರ ವ್ಯಕ್ತಿತ್ವದ ಸಾಂಸ್ಕೃತಿಕ ಆಯಾಮ ಏನೇ ಇರಲಿ, ಜೆಡಿಎಸ್ ಮತ್ತು ಬಿಜೆಪಿ ನಡುವಣ ಅನೈತಿಕ ರಾಜಕೀಯ ಮೈತ್ರಿ ಮತ್ತು ಆನಂತರ ಆ ಮೈತ್ರಿ ಜಿಗುಪ್ಸೆಕರವಾಗಿ ಮುಕ್ತಾಯಗೊಳ್ಳುವ ಸಂದರ್ಭಗಳಲ್ಲಿ ಉಪ ಮುಖ್ಯಮಂತ್ರಿ ಮತ್ತು ಆನಂತರ ಮುಖ್ಯಮಂತ್ರಿ ಆಗುವ ಧಾವಂತಕ್ಕೆ ಸಿಕ್ಕಿ ಎಂ.ಪಿ. ಪ್ರಕಾಶ್ ಪ್ರದರ್ಶಿಸಿದ ರಾಜಕೀಯ ವರ್ತನೆ ನಮ್ಮ ಇತ್ತೀಚಿನ ಎಲ್ಲ ಲೋಹಿಯಾವಾದಿಗಳ (ಹಾಗೆಂದು ಕರೆದುಕೊಳ್ಳುವ ನೈತಿಕ ಸ್ಥೈರ್ಯ ಯಾರಿಗಾದರೂ ಇದ್ದಲ್ಲಿ...) ರಾಜಕೀಯ ಅವನತಿಯ ಚರಿತ್ರೆಗೆ ತಕ್ಕುನಾಗೇ ಇತ್ತು. ಹಾಗೇ, ಇದನ್ನು ಅನಂತಮೂರ್ತಿಯವರು ತಮ್ಮ ಬೌದ್ಧಿಕ ಶಬ್ದ ಜಾಲದಲ್ಲಿ ತೇಲಿಸಿ ಕ್ಷಮಾರ್ಹಗೊಳಿಸಿರುವುದು ಅವರ ಪ್ರಸ್ತುತ ಅಂಕಣ ಬರಹಗಳ ಶೈಲಿಗೆ ತಕ್ಕುನಾಗೇ ಇದೆ.

('ಪ್ರಜಾವಾಣಿ'ಯ ವಾಚಕರವಾಣಿ'ಗೆ ಬರೆದ; ಆದರೆ ಪ್ರಕಟವಾಗದ ಪತ್ರ– ಫೆಬ್ರುವರಿ, ೨೦೧೧)

ಪತ್ರ– ೧೧

ಗುಹಾ ಅವರ ಪುಸ್ತಕ ಬೌದ್ಧಿಕತೆ!

ಮಾನ್ಯರೇ,

ದಲಿತರ ಅಂತಿಮ ವಿಮೋಚನೆಗಾಗಿ ಗಾಂಧಿ ಮತ್ತು ಅಂಬೇಡ್ಕರರಿಬ್ಬರ ಮಾದರಿಗಳನ್ನೂ ಸಮನ್ವಯ ಪ್ರಜ್ಞೆಯೊಂದಿಗೆ ಗ್ರಹಿಸಬೇಕಾದ್ದರ ಅಗತ್ಯವನ್ನು ತಾವು ಡಾ. ಡಿ.ಆರ್. ನಾಗರಾಜರ 'ದಿ ಫ್ಲೇಮಿಂಗ್ ಫೀಟ್' ಪುಸ್ತಕದ ಇತ್ತೀಚಿನ ಆವೃತ್ತಿಯನ್ನು ಓದಿ ಮನಗಂಡಿದ್ದಾಗಿಯೂ ಹಾಗೂ ತಮಗೆ ಇದೊಂದು ಅಪೂರ್ವ ಒಳನೋಟವಾಗಿ

ಕಂಡಿರುವುದಾಗಿಯೂ ರಾಮಚಂದ್ರ ಗುಹಾ ('ಗುಹಾಂಕಣ':ಪ್ರವಾ:೩೧.೧೨.೨೦೧೧) ಬರೆದಿದ್ದಾರೆ.

ಆದರೆ ಕರ್ನಾಟಕದಲ್ಲಿ ಕಳೆದ ಶತಮಾನದ ಎಪ್ಪತ್ತರ ದಶಕದಲ್ಲಿ ದಲಿತ ಸಂಘರ್ಷ ಸಮಿತಿಯ ರೂಪದಲ್ಲಿ ಆರಂಭವಾದ ದಲಿತ ಚಳುವಳಿ ಎಂಭತ್ತರ ದಶಕದ ಹೊತ್ತಿಗೇ ಗಾಂಧಿ–ಅಂಬೇಡ್ಕರರ ಸಮನ್ವಯದ ಅಗತ್ಯವನ್ನು ಮನಗಂಡು, ಕೆಲವರ ವಿರೋಧಗಳ ನಡುವೆಯೂ ಅದರ ಅನೇಕ ಪ್ರಯೋಗಗಳನ್ನು ಮಾಡಿ ಸಾಕಷ್ಟು ಯಶಸ್ವಿಯಾಗಿತ್ತು. ಹಾಗಾಗಿಯೇ ಅದು ಬರೀ ದಲಿತರ ಸಂಘಟನೆಯಾಗದೆ, ಎಲ್ಲ ಜಾತಿಗಳ ಜನರ ಸಹಾನುಭೂತಿ–ಬೆಂಬಲಗಳನ್ನು ಗಳಿಸಿ ಸಾಮಾಜಿಕ ಪ್ರತಿಭಟನೆಯ ಏಕೈಕ ವೇದಿಕೆಯಾಗಿ ರಾಜ್ಯಾದ್ಯಂತ ಹಬ್ಬಿತ್ತು. ಇದರ ಹಿಂದೆ ದಲಿತ ಚಳುವಳಿಯ ನಾಯಕರ ಬಹುಮುಖಿ ಓದು, ಚಿಂತನೆ ಮತ್ತು ಹೋರಾಟಗಳ ಪಾಕವಿತ್ತು. ಇದರ ಕುರುಹುಗಳನ್ನು ಆ ಕಾಲದ ದಲಿತ ಸಾಹಿತ್ಯ ಮತ್ತು ದಲಿತ ವಲಯದ ರಾಜಕೀಯ ಚರ್ಚೆಗಳಲ್ಲಿ ಸ್ಪಷ್ಟವಾಗಿ ಕಾಣಬಹುದು. ಇದು ರಾಷ್ಟ್ರದ ಇತರೆಡೆಯ ದಲಿತ ಚಳುವಳಿಗಳಿಗೆ ಹೋಲಿಸಿದರೆ ಕರ್ನಾಟಕದ ದಲಿತ ಚಳುವಳಿಯ ಒಂದು ವೈಶಿಷ್ಟ್ಯವಾಗಿತ್ತು ಕೂಡ.

ಎಂಭತ್ತು ಮತ್ತು ತೊಂಭತ್ತರ ದಶಕಗಳು ಕರ್ನಾಟಕದ ದಲಿತ ಚಳುವಳಿಯ ಏರುಗಾಲ. ಆ ಕಾಲದಲ್ಲಿ ಅಂದಿನ ಎಲ್ಲ 'ಪ್ರಗತಿಪರ' ಲೇಖಕರು ಮತ್ತು ಚಿಂತಕರಂತೆ ಈ ಚಳುವಳಿಯ ನಿಕಟ ಸಂರ್ಕ ಹೊಂದಿದ್ದ ಗೆಳೆಯ ಡಿ.ಆರ್. ನಾಗರಾಜರು ಈ ವಿಶಿಷ್ಟ ಬೆಳವಣಿಗೆಗೆ ತಮ್ಮ ವಿಶಾಲ ಓದು ಮತ್ತು ಪ್ರಖರ ಬೌದ್ಧಿಕ ವಿಶ್ಲೇಷಣೆಗಳ ಮೂಲಕ ಈ ದಲಿತ ಚಳುವಳಿಯ ಅಧ್ಯಯನ ಮಾಡಬಯಸುವವರಿಗೆ ಒಂದು ಶಾಸ್ತ್ರೀಯ ಚೌಕಟ್ಟು ಒದಗಿಸಿದ್ದಾರಷ್ಟೆ. ಆದರೆ ಇಂಗ್ಲಿಷ್ ಓದು ಬರಹಗಳನ್ನಷ್ಟೇ ತಮ್ಮ 'ಬುದ್ಧಿಜೀವತ್ವ'ಕ್ಕಾಗಿ ಅವಲಂಬಿಸಿದಂತೆ ತೋರುವ ರಾಮಚಂದ್ರ ಗುಹಾ ಅವರಿಗೆ ಇದೆಲ್ಲ ಡಿ.ಆರ್. ನಾಗರಾಜರ ಈ ಇತ್ತೀಚಿನ ಪುಸ್ತಕದ ಮೂಲಕವಷ್ಟೇ ಗೊತ್ತಾಗಿರಬಹುದು. ಹಾಗಾಗಿ ಅವರು ಈ ಗಾಂಧಿ–ಅಂಬೇಡ್ಕರರ ಸಮನ್ವಯ ತತ್ವ ಮತ್ತು ಅದರ ಹಿಂದಿನ ಚಿಂತನಾ ವಿನ್ಯಾಸಗಳನ್ನು ತಾವು ನಾಗರಾಜರ ಅಧ್ಯಯನದಲ್ಲಿ ಕಂಡ ಅಪೂರ್ವ ಒಳನೋಟಗಳೆಂದು ಹೀಗೆ ತಮ್ಮ ಅಂಕಣದ ಮೂಲಕ ಕನ್ನಡ ಜನತೆಗೇ ವಾಪಸ್ ಒಪ್ಪಿಸುತ್ತಿದ್ದಾರೆ! ಇದು ಇಂದಿನ ಬೌದ್ಧಿಕ ಚರ್ಚೆಗಳ ಸಂದರ್ಭದಲ್ಲಿ ಆಶ್ಚರ್ಯದ ಸಂಗತಿ ಏನಲ್ಲ. ಏಕೆಂದರೆ ಇಂದು ಬೌದ್ಧಿಕತೆ ಎಂದರೆ (ಇಂಗ್ಲಿಷ್‌ನ) ಅನುವಾದತ್ವ ಎಂದೇ ಆಗಿದೆಯಲ್ಲಾ?

('ಪ್ರಜಾವಾಣಿ'ಯ ವಾಚಕರವಾಣಿ'ಗೆ ಬರೆದ; ಆದರೆ ಪ್ರಕಟವಾಗದ ಪತ್ರ– ಮಾರ್ಚ್, ೨೦೧೧)

ಪತ್ರ- ೧೨

'ಪ್ರಜಾವಾಣಿ' ಸಂಪಾದಕ ವರ್ಗದ ಗಮನಕ್ಕೆ

ಪ್ರಿಯ ಸಂಪಾದಕರೇ,

ಬೆಳಗಾವಿಯ ವಿಶ್ವ ಕನ್ನಡ ಸಮ್ಮೇಳನದಲ್ಲಿ ಡಾ॥ ಎನ್.ಆರ್. ನಾರಾಯಣ ಮೂರ್ತಿಯವರು ಮಾಡಿದ ಕೃತಕ ಕನ್ನಡದ ಬಡಕಲು ಉದ್ಘಾಟನಾ ಭಾಷಣವನ್ನು ಬಹು ಉತ್ಸಾಹದೊಂದಿಗೆ ಅಗ್ರಮಾನ್ಯ ಸುದ್ದಿಯಾಗಿ ತಮ್ಮ ಪತ್ರಿಕೆಯಲ್ಲಿ ಸವಿವರವಾಗಿ ಪ್ರಕಟಿಸಿದ್ದೀರಿ. ಇದು, ತಮ್ಮ ಪತ್ರಿಕೆಯ ಇತ್ತೀಚಿನ ಬದಲಾದ ನೀತಿಗೆ ಅನುಸಾರವಾಗಿ ನಾರಾಯಣ ಮೂರ್ತಿಯವರನ್ನು ಈ ಸಮ್ಮೇಳನದ ಉದ್ಘಾಟನೆಗೆ ಆಹ್ವಾನಿಸಿದ್ದನ್ನು ಸಂಪಾದಕೀಯವೊಂದರ ಮೂಲಕ ಸಮರ್ಥಿಸಿರುವ ತಮ್ಮ ನಿಲುವಿಗೆ ತಕ್ಕುನಾಗಿಯೇ ಇದೆ. ಹಾಗೇ ಕನ್ನಡದ ಬಗ್ಗೆ ಸದ್ಯದ ಪರಿಸ್ಥಿತಿಯಲ್ಲಿ ಯಾವುದೇ ಸಾಮಾಜಿಕ ಪರಿಣಾಮ ಉಂಟು ಮಾಡಲಾಗದಂತಹ; ಆದರೆ ಬೌದ್ಧಿಕವಾಗಿ ಕ್ರಾಂತಿಕಾರಿಯಾಗಿ ಕಾಣುವಂತಹ ಅದೇ ಅಮೂರ್ತ ವಿಚಾರಗಳನ್ನು ಸಾರ್ವಜನಿಕವಾಗಿ ಹತ್ತನೇ ಬಾರಿಗೆ ಹೇಳಿದ ಅನಂತಮೂರ್ತಿಯವರ ಭಾಷಣದ ಪೂರ್ಣ ಪಾಠವನ್ನೂ ತಮ್ಮ ಪತ್ರಿಕೆ ಪ್ರಕಟಿಸಿದೆ.

ಆದರೆ ಜಾಗತೀಕರಣದ ಸಂದರ್ಭದಲ್ಲಿ ಕರ್ನಾಟಕದ ರಾಜಕಾರಣ, ಜನ, ಭಾಷೆ ಮತ್ತು ಸಂಸ್ಕೃತಿಗಳು ಎದುರಿಸುತ್ತಿರುವ ವಾಸ್ತವಿಕ ಬಿಕ್ಕಟ್ಟುಗಳು ಹಾಗೂ ಸವಾಲುಗಳ ಬಗ್ಗೆ ಮತ್ತು ಅವು ಹೇಗೆ ಒಂದಕ್ಕೊಂದು ಹೆಣೆದುಕೊಂಡಿವೆ ಎಂಬುದನ್ನು ದಿಟ್ಟವಾಗಿ ಮತ್ತು ಸ್ಪಷ್ಟವಾಗಿ ಹೇಳುವ ಮೂಲಕ ಅವುಗಳನ್ನು ಹೇಗೆ ಮುಖಾಮುಖಿ ಮಾಡಿಕೊಂಡು ಪರಿಹಾರದ ದಾರಿ ಕಂಡುಕೊಳ್ಳಬಹುದು ಎಂಬುದನ್ನು ಸುದೀರ್ಘವಾಗಿ ವಿವರಿಸಿದ ಈ ಉದ್ಘಾಟನಾ ಸಮಾರಂಭದ ಅತ್ಯುತ್ತಮ ಭಾಷಣವೆನಿಸಿದ ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪನವರ ಮಾತುಗಳೊಂದನ್ನೂ ವರದಿ ಮಾಡದ ನಿಮ್ಮ ಪತ್ರಿಕೋದ್ಯಮದ ಪರಿ ಆಶ್ಚರ್ಯವನ್ನಷ್ಟೇ ಅಲ್ಲ, ಆಘಾತವನ್ನೂ ಉಂಟು ಮಾಡಿದೆ.

ಈ ಹಿನ್ನೆಲೆಯಲ್ಲಿ, ವೇದಿಕೆಯ ಮೇಲೆ ಸಂದರ್ಭಕ್ಕೆ ಅನುಚಿತವೆನ್ನಬಹುದಾದ ಸ್ಥಾನ ಪಡೆದಿದ್ದ ನಟಿ ಐಶ್ವರ್ಯ ರೈ ಅವರು ಕಷ್ಟಪಟ್ಟು ಆಡಿದ ಎರಡು ಔಪಚಾರಿಕ ಮಾತುಗಳು ನಿಮ್ಮ ಪತ್ರಿಕೆಯಲ್ಲಿ ಒಂದು ವಿಶೇಷ ವರದಿಯ ಸ್ಥಾನ ಗಳಿಸಿರುವುದು ಸಹಜವೇ ಸರಿ.

(ಈ ಪತ್ರವನ್ನು ಬರೆದ ಎರಡು ದಿನಗಳಲ್ಲೇ ಜಿಎಸ್ಸೆಸ್ ಅವರ ಭಾಷಣದ ಪೂರ್ಣ ಪಾಠ ಪ್ರಕಟವಾಯಿತು.– ಮಾರ್ಚ್– ೨೦೧೧)

ಪತ್ರ– ೧೩

'ವಿನಾಶ' ಎಂಬ ವಿನಾಶಕಾರಿ ಶಬ್ದ!

ಮಾನ್ಯರೇ,

'ಸಂಗತ'ದಲ್ಲಿನ (ಪ್ರವಾ:೩.೬.೨೦೧೧) 'ಬೇಕಿರುವುದು ಜಾತಿ ವಿನಾಶವೇ ಹೊರತು ಜಾತಿ ವಿರೋಧವಲ್ಲ' ಎಂಬ ಡಾ.ಕೆ.ಎಸ್.ಭಗವಾನ್ ಅವರ ಬರಹವನ್ನು ಗಮನಿಸಿದ್ದೇವೆ. ಅವರು ನಾವು ಆಯೋಜಿಸುತ್ತಿರುವ ಜಾತಿ ವಿರೋಧಿ ಸಮ್ಮೇಳನ ಹಾಗೂ ಅದರ ಅಂಗವಾಗಿ ಹಮ್ಮಿಕೊಂಡಿರುವ ಅಂತರ್‌ಜಾತಿ ವಿವಾಹಿತರ ಸಮಾವೇಶವನ್ನು ಸ್ವಾಗತಿಸಿರುವುದಕ್ಕಾಗಿ ವಂದನೆಗಳು. ಆದರೆ ಅದೇ ಹೊತ್ತಿನಲ್ಲಿ ಅವರು ಈ ಬಗ್ಗೆ ತಾಂತ್ರಿಕ ತಕರಾರೊಂದನ್ನೂ ಎತ್ತಿದ್ದಾರೆ. ಅದಕ್ಕಾಗಿ ಈ ಪತ್ರ.

ನಮ್ಮ ಗುರಿ ಕೇವಲ ಬಾಯಿಮಾತಿನ ಆದರ್ಶವಾಗುಳಿಯದೆ, ಅದು ನಮ್ಮ ಅನುಭವದ ಆಧಾರದ ಮೇಲಾದರೂ ವಾಸ್ತವವನ್ನರಿತ ಪರಿಭಾಷೆಯಲ್ಲಿ ವ್ಯಕ್ತವಾಗಬೇಕು. ಈ ನಂಬಿಕೆಯಿಂದ ಉದ್ದೇಶಿತ ಸಮ್ಮೇಳನವನ್ನು ನಾವು 'ಜಾತಿ ವಿರೋಧಿ ಸಮ್ಮೇಳನ' ಎಂದು ಕರೆದಿದ್ದೇವೆ. ಜಾತಿರಹಿತ ಸಮಾಜವನ್ನು ಸೃಷ್ಟಿಸುವ ನಮ್ಮ ಗುರಿಗೆ ತಕ್ಕ– ಆದರೆ ಆ ಗುರಿಯನ್ನು ಮಸುಕು ಮಾಡದಂತಹ– ಇನ್ನಷ್ಟು ರಚನಾತ್ಮಕ ಶಬ್ದಗಳು ನಮಗೆ ದೊರೆತಿದ್ದರೆ ನಾವು ಅವನ್ನೇ ಬಳಸುತ್ತಿದ್ದೆವು. 'ಜಾತಿ ವಿನಾಶ' ಎಂಬುದು ಸದ್ಯದ ಪರಿಸ್ಥಿತಿಯಲ್ಲಿ ಬಹುಸಂಖ್ಯಾತ ಜನರ ಕಿವಿಗಳಿಗಷ್ಟೇ ಅಲ್ಲ, ಮನಸ್ಸಿಗೂ ಕಿರಿಕಿರಿ ಉಂಟುಮಾಡುವ ಶಬ್ದ ಪ್ರಯೋಗವಾಗಿದೆ ಎಂದು ನಾವು ಭಾವಿಸಿದ್ದೇವೆ.

ಹಾಗೆ ನೋಡಿದರೆ, ಲೋಹಿಯಾ ತಮ್ಮ ಸಮಾಜವಾದಿ ಆಂದೋಲನದ ಅಂಗವಾಗಿ ಅರವತ್ತರ ದಶಕದಲ್ಲಿ ನೀಡಿದ ಕರೆ 'ಜಾತ್ ತೋಡೋ' ಎಂಬುದು. ಅದನ್ನು ೭೦ರ ದಶಕದಲ್ಲಿ ಕರ್ನಾಟಕದಲ್ಲಿ ಕ್ರಿಯಾಶೀಲವಾಗಿದ್ದ 'ಸಮಾಜವಾದಿ ಯುವಜನ ಸಭಾ'ದ ಮುಖಂಡರು ತಮ್ಮ ಅಂದಿನ ಅಗತ್ಯಕ್ಕೆ ತಕ್ಕಂತೆಯೋ, ಮನಃಸ್ಥಿತಿಗೆ ಅನುಸಾರವಾಗಿಯೋ 'ಜಾತಿ ವಿನಾಶ' ಎಂದು ಅನುವಾದ ಮಾಡಿಕೊಂಡರು! ನಿಜವಾಗಿ ಅದರ ಅನುವಾದ 'ಜಾತಿ ಒಡಿ' ಅಥವಾ ಅದನ್ನೇ ಇನ್ನಷ್ಟು ಮೃದುವಾಗಿ ಹೇಳುವುದಾದರೆ, 'ಜಾತಿ ಬಿಡಿ' ಎಂದಾಗಬೇಕಿತ್ತು.

ಅದೇನೇ ಇರಲಿ, ಅಂದಿನ ಆ 'ಜಾತಿ ವಿನಾಶ' ಕಾರ್ಯಕ್ರಮದ ಫಲಗಳನ್ನು ಭಗವಾನ್ ಅವರೇ ವಿವರಿಸಿರುವಂತೆ ನಾವಿಂದು ನೋಡುತ್ತಿದ್ದೇವೆ. ಹಾಗಿರುವಾಗ, ಮತ್ತೆ ಅದೇ ಪರಿಭಾಷೆಯಲ್ಲಿ ಅಂತಹುದೇ ಕಾರ್ಯಕ್ರಮವನ್ನು ಪುನರಾರಂಭಿಸುವುದು ವಿವೇಕವಲ್ಲ

ಎಂದು ನಾವು ಭಾವಿಸಿದ್ದೇವೆ. ನಮ್ಮ ಜನಸಮುದಾಯದ ಒಂದು ಬಹು ದೊಡ್ಡ ಭಾಗ, ಜಾತಿ ಪದ್ಧತಿ ಒಳ್ಳೆಯದೋ ಕೆಟ್ಟದ್ದೋ ಎಂದು ಕೂಡಾ ಯೋಚಿಸುವ ವ್ಯವಧಾನವಿಲ್ಲದೆ, ಅದೊಂದು ಪ್ರಾಚೀನ ಸಂಪ್ರದಾಯ ಎಂದು ಭಾವಿಸಿ; ಅದರಲ್ಲೇ ತಮ್ಮ ಕ್ಷೇಮವನ್ನು ಕಂಡು ಅನುಸರಿಸುತ್ತಿರುವುದು ಇಂದಿನ ವಾಸ್ತವ. ಈ ವಾಸ್ತವವನ್ನರಿತೂ, ಅಂತಹವರನ್ನು ಉದ್ದೇಶಿಸಿ ಯಜಮಾನಿಕೆಯ ಭಂಗಿಯಲ್ಲಿ ಅದರ 'ವಿನಾಶ'ದ ಬಗ್ಗೆ ಮಾತನಾಡ ಹೊರಡುವುದು ವಿರುದ್ಧ ಪರಿಣಾಮವನ್ನಷ್ಟೇ ಉಂಟು ಮಾಡಬಲ್ಲುದು.

ಈ ಎಚ್ಚರದಿಂದಷ್ಟೇ ನಾವು ಈ ಸಮ್ಮೇಳನವನ್ನು ಜಾತಿ ವಿರೋಧಿ ಸಮ್ಮೇಳನವನ್ನಾಗಿ ಸಂಘಟಿಸುತ್ತಿದ್ದೇವೆ. ಇದಕ್ಕೆ ಅಂತರ್ಜಾತಿ ವಿವಾಹಿತರು ಮಾತ್ರವಲ್ಲ, ಇಂದು ಜಾತಿ ಒಟ್ಟಾರೆ ಸಮಾಜಕ್ಕೆ ಕೆಟ್ಟದ್ದನ್ನಷ್ಟೇ ಮಾಡುತ್ತಿದೆ ಎಂದು ತಿಳಿದೂ, ತಮ್ಮದೇ ಅನಿವಾರ್ಯ ಕಾರಣಗಳಿಂದಾಗಿ ತಮ್ಮ ಬದುಕಿನಲ್ಲಿ ಜಾತಿ ಮೀರಲಾಗದೆ ಇರುವ ಎಲ್ಲ ಬಗೆಯ ಜಾತಿ ವಿರೋಧಿಗಳ ಬೆಂಬಲವನ್ನೂ ನಾವು ಕೋರುತ್ತಿದ್ದೇವೆ.

('ಪ್ರಜಾವಾಣಿ'ಯ ವಾಚಕರವಾಣಿ'ಗೆ ಬರೆದ; ಆದರೆ ಪ್ರಕಟವಾಗದ ಪತ್ರ– ಮೇ, ೨೦೧೧)

ಪತ್ರ: ೧೪

ಆರಾಧನೆ, ಈಗ ಅಂಬೇಡ್ಕರರ ಸರದಿಯೇ?

ಪ್ರಿಯ ಇಂದೂಧರ್

ಪ್ರತಿ ಅಂಬೇಡ್ಕರ್ ಜಯಂತಿ ಸಂದರ್ಭದಲ್ಲೂ ನಡೆಯುವಂತೆ, ಈ ವರ್ಷವೂ ಅವರ ಅಭಿಮಾನಿಗಳಿಂದ ಮೆರವಣಿಗೆ, ಸಮಾರಂಭ, ಲೇಖನ, ವಿಶೇಷ ಸಂಚಿಕೆಗಳ ರೂಪದಲ್ಲಿ ಅಂಬೇಡ್ಕರರ ಆರಾಧನೆ ನಡೆದಿದೆ. ಸ್ವಾತಂತ್ರ್ಯಾನಂತರದ ಮೊದಲ ಮುವ್ವತ್ತು– ನಲವತ್ತು ವರ್ಷಗಳ ಕಾಲ ಗಾಂಧೀಜಿಯನ್ನು ದೇವರು ಮಾಡಿ ಅವರನ್ನು ಮುಗಿಸಲಾಯಿತು. ಈಗ ಅಂಬೇಡ್ಕರರ ಸರದಿ. ಈ ವರ್ಷ 'ಸಂವಾದ'ದ ವಿಶೇಷ ಸಂಚಿಕೆಯ ಹಲವು ಲೇಖನಗಳನ್ನೂ, ಈ ಸಂದರ್ಭದಲ್ಲಿ ಇತರೆಡೆ ಪ್ರಕಟವಾಗಿರುವ ಲೇಖನಗಳನ್ನೂ ಮತ್ತು ಮಾಡಲಾಗಿರುವ ಭಾಷಣಗಳ ವರದಿಗಳನ್ನೂ ಗಮನಿಸಿದಾಗ ಇದು ಸ್ಪಷ್ಟವಾದೀತು.

ಸಂವಿಧಾನದಲ್ಲಿರುವ ಎಲ್ಲ 'ಒಳ್ಳೆಯ'ದಕ್ಕೂ ಅಂಬೇಡ್ಕರರು ಕಾರಣರು. ಆದರೆ ಅದರಲ್ಲಿನ ಎಲ್ಲ ಕೆಟ್ಟದಕ್ಕೂ ಇತರರು ಕಾರಣರು! ಮೊದಲನೆಯ ಸಂದರ್ಭದಲ್ಲಿ ಅವರು 'ಸಂವಿಧಾನ ಶಿಲ್ಪಿ'. ಎರಡನೆಯ ಸಂದರ್ಭದಲ್ಲಿ ಅವರು 'ಸಂವಿಧಾನದ ಕರಡು ಸಮಿತಿಯ

ಅಧ್ಯಕ್ಷ'ರು ಮಾತ್ರ! ಈ ಎರಡನೆಯ ವಾಸ್ತವವನ್ನು ಇತರರು ಹೇಳಿದರೆ ಅದು ಅಂಬೇಡ್ಕರರಿಗೆ ಮಾಡುವ ಅವಮಾನವಾಗಿ ಸಾರ್ವಜನಿಕ ಅಶಾಂತಿಗೆ ಕಾರಣವಾಗುತ್ತದೆ... ತಮ್ಮ ಪತ್ರಿಕೆಯಲ್ಲಿ ಒಬ್ಬ ಲೇಖಕರಂತೂ, ತಾವೊಂದು ಬಹು ಮುಖ್ಯ ಪ್ರಶ್ನೆಯೊಂದನ್ನು ಎತ್ತುತ್ತಿರುವ ಘನ ತಾತ್ವಿಕ ಭಂಗಿಯಲ್ಲಿ, ಗಾಂಧಿ ರಾಜಕೀಯ ಸ್ವಾತಂತ್ರ್ಯದ ಉದ್ದೇಶ ಮಾತ್ರ ಹೊಂದಿದ್ದರೆಂದೂ, ಅಂಬೇಡ್ಕರ್ ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯ– ಈ ಎರಡೂ ಉದ್ದೇಶಗಳನ್ನು ಹೊಂದಿದ್ದರೆಂದೂ, ಇದೇ ಇವರಿಬ್ಬರ ನಡುವಣ ಮುಖ್ಯ ವ್ಯತ್ಯಾಸವೆಂಬುದನ್ನು ಗಮನಿಸಬೇಕೆಂದು ಹೇಳುತ್ತಾ ಸಣ್ಣ ದಲಿತ ರಾಜಕಾರಣ ಮಾಡಲೂ ಯತ್ನಿಸಿದ್ದಾರೆ. ಅಂಬೇಡ್ಕರರನ್ನು ಜಗಜೀವನ ರಾಮರ ಜೊತೆ ಇಟ್ಟು ಚರ್ಚಿಸುವ, ಆರಾಧಿಸುವ ಇತ್ತೀಚಿನ ದಲಿತ ರಾಜಕಾರಣದ ನಿಜ ದುರಂತದ ಬಗ್ಗೆ ಯಾರ ಸೊಲ್ಲೂ ಇಲ್ಲ!

ಇದಕ್ಕೆ ಕಾರಣ, ಅಂಬೇಡ್ಕರರನ್ನು ವಿಮರ್ಶಾತೀತರನ್ನಾಗಿ ಮಾಡುವಂತೆ ಕಟ್ಟಲಾಗುತ್ತಿರುವ ಇತ್ತೀಚಿನ ದಲಿತ ರಾಜಕೀಯ ಸಂಕಥನವೇ ಆಗಿದೆ. ಅಂಬೇಡ್ಕರರ ಹಲವು ರಾಜಕೀಯ ನಡೆಗಳು, ತತ್ವಗಳು ವಿವಾದಾಸ್ಪದವೇ ಆಗಿವೆ. ಅದಕ್ಕೆ ಕಾರಣಗಳೂ ಇವೆ. ಆದರೆ ಅವು ಚರ್ಚೆಗೇ ಬರದಂತೆ ಇತ್ತೀಚಿನ ದಿನಗಳಲ್ಲಿ ದಲಿತ ಸಮೂಹ ಸನ್ನಿಯನ್ನು ಸೃಷ್ಟಿಸಲಾಗುತ್ತಿದೆ. ಇದು ಇಂದಿನ ದಲಿತ ಮತ್ತು ದಲಿತಪರ ನಾಯಕರಿಗೆ ಒಂದಿಷ್ಟು ರಾಜಕೀಯ ಲಾಭ ತಂದುಕೊಡಬಹುದಾದರೂ, ದೀರ್ಘಕಾಲಿಕವಾಗಿ ದಲಿತರಿಗೆ ತೊಂದರೆ ಮಾಡುವಂತಹುದೇ ಆಗಿದೆ.

ಕೆಲವು ವರ್ಷಗಳ ಹಿಂದೆ, ದಸಂಸದ ನಾಯಕರಲ್ಲೊಬ್ಬರಾಗಿದ್ದ ಗೆಳೆಯ ಎಚ್. ಗೋವಿಂದಯ್ಯ ನನ್ನೊಂದಿಗೆ ಮಾತನಾಡುತ್ತಾ, ದಸಂಸ ದಲಿತರನ್ನು ಅರ್ಧ ಎಬ್ಬಿಸಿ ಈಗ ಕೈಬಿಟ್ಟು ಅವರನ್ನು ಅರ್ಧ ಮನುಷ್ಯರನ್ನಾಗಿ (ಅವರು ಇದಕ್ಕಿಂತಲೂ ಸ್ಫೋಟಕ ಶಬ್ದ ಬಳಸಿದ್ದರು!) ಮಾಡಿ ದೊಡ್ಡದೊಂದು ಸಾಮಾಜಿಕ ಅನಾಹುತಕ್ಕೆ ಕಾರಣವಾಗಿದೆ ಎಂದಿದ್ದರು. ಅದನ್ನು ಆಗ ನಾನು ಅರ್ಧ ಸತ್ಯದ ಮಾತು ಎಂದು ಭಾವಿಸಿದ್ದೆ. ಆದರಿಂದು ಅದು ಇಂದು ನನಗೆ ಪೂರ್ಣ ಸತ್ಯವಾಗಿ ಕಾಣಿಸತೊಡಗಿದೆ.

('ಸಂವಾದ'ದ ಮೇ– ೨೦೧೧ರ ಸಂಚಿಕೆಯಲ್ಲಿ ಪ್ರಕಟಿತ)

ಪತ್ರ: ೧೫

ಅಂಬೇಡ್ಕರ್: ಹೋರಾಟದ ಆಟಕ್ಕೆ ಬಂಡವಾಳವಾಗುವುದು ಬೇಡ

ಪ್ರಿಯ ಸಂಪಾದಕರೇ,

ಕಳೆದ ಏಪ್ರಿಲ್ ತಿಂಗಳಿನಲ್ಲಿ ನಡೆದ ಅಂಬೇಡ್ಕರ್ ಜಯಂತಿ ಸಂದರ್ಭದ ಭಾಷಣಗಳು ಮತ್ತು ಅದೇ ತಿಂಗಳು 'ಸಂವಾದ' ಹೊರತಂದ ಅಂಬೇಡ್ಕರ್ ವಿಶೇಷಾಂಕದ

ಕೆಲವು ಲೇಖನಗಳನ್ನು ಗಮನಿಸಿ, 'ಸಂವಾದ'ದ ಮೇ ಸಂಚಿಕೆಯಲ್ಲಿ ನಾನೊಂದು ಪತ್ರ ಬರೆದೆ. ಅದಕ್ಕೆ ಪ್ರತಿಕ್ರಿಯೆಯಾಗಿ ಡಾ॥ ಕುಂಸಿ ಉಮೇಶ್ ಅವರು ಜುಲೈ ಸಂಚಿಕೆಯಲ್ಲಿ 'ಜಾರು ಹೇಳಿಕೆಗಳ ಹಳವಂಡ' ಎಂಬ ಪತ್ರವೊಂದನ್ನು ಬರೆದಿದ್ದಾರೆ.

ಅವರ ಪತ್ರದಲ್ಲಿನ 'ದಲಿತ ಚಿಂತನೆಯ ಅನುಮಾನಗಳನ್ನು ಬಿಚ್ಚಿಡುವ ಪ್ರಯತ್ನ', 'ಗೋವಿಂದಯ್ಯ ಅಂದೆಂದೋ ಹೇಳಿದ ದಸಂಸದ ಏಕ ಪಕ್ಷೀಯ ಹೇಳಿಕೆ' ಇತ್ಯಾದಿ ವಾಕ್ಯ ಭಾಗಗಳು ನನಗೆ ಅರ್ಥವಾಗಲಿಲ್ಲ. ಅರ್ಥವಾದ ವಾಕ್ಯ ಭಾಗಗಳ ಬಗ್ಗೆ ಮಾತ್ರ ಹೇಳುವುದಾದರೆ–

೧. ನಾನು 'ಸಂವಾದ'ದ ಅಂಬೇಡ್ಕರ್ ಸಂಚಿಕೆಯಲ್ಲಿನ ಲೇಖನವೊಂದರ ನಿರ್ದಿಷ್ಟ ವಾಕ್ಯವೊಂದನ್ನು ಉಲ್ಲೇಖಿಸಿ, ಅದರಲ್ಲಿನ 'ಸಣ್ಣ ದಲಿತ ರಾಜಕಾರಣ'ವನ್ನು ಗುರುತಿಸುವ ಪ್ರಯತ್ನ ಮಾತ್ರ ಮಾಡಿದ್ದರೆ, ಉಮೇಶ್ ಅವರು ಇಡೀ ದಲಿತ ಹೋರಾಟವನ್ನೇ ನಾನು 'ಸಣ್ಣ ದಲಿತ ರಾಜಕಾರಣ'ವೆಂದು ಕರೆದಿದ್ದೇನೆಂದು ಆಪಾದಿಸಿದ್ದಾರೆ. ಇದನ್ನು ಸಮರ್ಥಿಸಿಕೊಳ್ಳಲು ಲೋಹಿಯಾವಾದದ ಗುಂಗು, ಆದರ್ಶವಾದಿ– ಸುಧಾರಣಾವಾದಿ ಚಿಂತನೆಯ ನೆಲೆ ಇತ್ಯಾದಿ ಸಂಬಂಧಪಡದದ್ದನ್ನೆಲ್ಲ ಎಳೆದು ತಂದಿದ್ದಾರೆ. ಇದೆಲ್ಲದರ ಉದ್ದೇಶವಾದರೂ ಏನು, ನನಗೆ ತಿಳಿಯದಾಗಿದೆ. ಉಮೇಶ್ ಇನ್ನೊಮ್ಮೆ ನನ್ನ ಈ ಪತ್ರಭಾಗವನ್ನು ನಿರುದ್ವಿಗ್ನರಾಗಿ ಓದಬೇಕೆಂದು ಕೋರುವೆ.

೨. ಅಂಬೇಡ್ಕರ್ ವಿರೋಧಿಸುತ್ತಿದ್ದ ರೀತಿಯ ದಲಿತ ರಾಜಕಾರಣ ಮಾಡಿದ ಜಗಜೀವನರಾಂ ಅವರೂ, ಇಂದು ದಲಿತರಿಗೆ ಅಂಬೇಡ್ಕರರರೊಂದಿಗೆ ನಾಯಕರಾಗಿದ್ದರೆ, ಅದು ಏಕೆ? ಅದರ ಹಿನ್ನೆಲೆ ಏನು ಎಂಬುದು ಎಲ್ಲರಿಗೂ ಗೊತ್ತು, ಉಮೇಶರಿಗೂ ಗೊತ್ತು. ಆದರೆ ಅದನ್ನು ಒಪ್ಪಿಕೊಳ್ಳಲಾಗದ ತಾತ್ವಿಕ ಬಿಂಕದಲ್ಲಿ, ಅದಕ್ಕೆ ಕಾರಣ ಒಳಗಿಲ್ಲ; ಇದು ಹೊರಗಿನವರದ್ದೇ ಕರಾಮತ್ತು ಎಂದು ಉಮೇಶ್‌ರಂತೆ ಕಷ್ಟಪಟ್ಟು ಕಂಡುಹಿಡಿಯಲು ತೊಡಗುವ ಮನಸ್ಸು ಏನನ್ನೂ ಸ್ಪಷ್ಟವಾಗಿ ನೋಡಲಾರದು ಮತ್ತು ಅರ್ಥ ಮಾಡಿಕೊಳ್ಳಲಾರದು ಎಂದೇ ನನ್ನ ಭಾವನೆ.

ಇದನ್ನೇ ಗೋವಿಂದಯ್ಯ ರೂಪಕ ಭಾಷೆಯಲ್ಲಿ ಹೇಳಿದ್ದು, ನಾನು ತಡವಾಗಿಯಾದರೂ ಒಪ್ಪಿದ್ದು. ಬಹುಶಃ ಉಮೇಶರಿಗೆ ಗೊತ್ತಿಲ್ಲ: ಅವರು ದಸಂಸದ ಹೆಸರು ಕೇಳುವ ಮುನ್ನವೇ ನಾನು ಅದರ ನಿಕಟ ಮತ್ತು ಆಪ್ತ ಒಡನಾಟದಲ್ಲಿದ್ದೆ ಹಾಗೂ ಅದರ ಬಹುಪಾಲು ಎಲ್ಲ ನಾಯಕರೂ ನನ್ನ ಆತ್ಮೀಯ ಗೆಳೆಯರಾಗಿದ್ದರು. ಹಾಗಿರುವಾಗ, ಅದರ ಹೋರಾಟದ ಫಲಗಳನ್ನು ನಾನು ಉಮೇಶ್ ಅವರು ಅನುಮಾನಪಟ್ಟಿರುವಂತೆ ನಿರಾಕರಿಸುವುದೆಂದರೆ, ನನ್ನನ್ನು ನಾನೇ ನಿರಾಕರಿಸಿಕೊಂಡಂತೆ. ಗೋವಿಂದಯ್ಯನವರ ಮಾತುಗಳಲ್ಲಿ ವಿಷಾದವನ್ನು ಕಾಣದೆ, ತಮಗೆ ಬೇಕಾದ ಮತ್ತೇನನ್ನೋ ಕಾಣಹೊರಟವರಿಗೆ ಬಹುಶಃ ಇದೆಲ್ಲ ಅರ್ಥವಾಗದ ಮಾತುಗಳೇ ಆಗಿರಬಹುದು.

೩. ಅಂಬೇಡ್ಕರ್‌ರ ಕೆಲವು ರಾಜಕೀಯ ನಡೆಗಳು ಮತ್ತು ಚಿಂತನೆಗಳು ವಿವಾದಾಸ್ಪದವಾದವು ಎಂಬ ನನ್ನ ಮಾತಿನ ಬಗ್ಗೆ ಉಮೇಶ್, ಇದೊಂದು ಜಾರು ಹೇಳಿಕೆ ಎಂದು ಟೀಕೆ ಮಾಡುವಾಗ, ಈ ಮಾತಿನ ಜೊತೆಗೇ ಇರುವ, ಅಂಬೇಡ್ಕರರ ಈ ವಿವಾದಾಸ್ಪದ ನಡೆ– ಚಿಂತನೆಗಳಿಗೆ ಕಾರಣವೂ ಇತ್ತು ಎಂಬ ನನ್ನ ಇನ್ನೊಂದು ಮಾತನ್ನು ಕೈಬಿಟ್ಟಿರುವುದೇಕೆ ಎಂಬುದು ಗೊತ್ತಾಗುತ್ತಿಲ್ಲ! ಇದು ಮತ್ತೊಮ್ಮೆ, ನಾನು ಯಾವುದನ್ನು ಅಂಬೇಡ್ಕರರನ್ನು ವಿಮರ್ಶಾತೀತರನ್ನಾಗಿ ಮಾಡುವ ರಾಜಕಾರಣ ಎಂದು ಕರೆದಿರುವೆನೋ ಅದಕ್ಕೆ ಒಂದು ಉದಾಹರಣೆಯೇ ಆಗಿದೆ. ಹಾಗೇ ಈ ಟೀಕೆ, ಅಂಬೇಡ್ಕರ್ ಬಗ್ಗೆ ಹೀಗೆ ಬರೆದಿರುವುದು ನಾನೊಬ್ಬನೇ ಏನೋ ಮತ್ತು ಮೊದಲ ಬಾರಿಗೆ ಏನೋ ಎಂಬ ಧ್ವನಿಯಲ್ಲಿದೆ. ಆದರೆ ವಸ್ತುಸ್ಥಿತಿ ಹಾಗೇನಿಲ್ಲ.

ಅಂಬೇಡ್ಕರ್‌ರ ಚಿಂತನೆ ಮತ್ತು ರಾಜಕಾರಣ ಐತಿಹಾಸಿಕವಾಗಿ ಎಷ್ಟು ಮಹತ್ವಪೂರ್ಣವಾದವು ಎಂದರೆ, ಅವನ್ನು ಕುರಿತು ವ್ಯಾಪಕ ಚರ್ಚೆ ಮತ್ತು ಅದರ ಭಾಗವಾಗಿ ಅವುಗಳ ವಸ್ತುನಿಷ್ಠ ವಿಮರ್ಶೆ ಜಗತ್ತಿನಾದ್ಯಂತ ನಡೆದಿದೆ, ನಡೆಯುತ್ತಿದೆ, ಮುಂದೆ ನಡೆಯುತ್ತದೆ ಕೂಡಾ. ಒಂದು ಸಣ್ಣ ಉದಾಹರಣೆಯಾಗಿ ಹೇಳುವುದಾದರೆ, ಅಂಬೇಡ್ಕರರೊಂದಿಗೆ ಹೊಸ ರಾಜಕಾರಣಕ್ಕಾಗಿ ಸಂವಾದ ಆರಂಭಿಸಿದ್ದ ಲೋಹಿಯಾ, ಅಂಬೇಡ್ಕರ್ ಹಠಾತ್ ನಿಧನರಾದ ಸಂದರ್ಭದಲ್ಲಿ ಅವರ ಬಗ್ಗೆ ಮಧು ಲಿಮಯೆ ಅವರಿಗೆ ಬರೆದ ಪತ್ರದಲ್ಲಿ ಇಂತಹ ವಿಮರ್ಶೆ ಇದೆ. ಉಮೇಶ್ ಅವರ ಕುತೂಹಲಕ್ಕಾಗಿ ಹೇಳುವುದಾದರೆ, ಅದರಲ್ಲಿ ಜಗಜೀವನರಾಂ ಅವರ ಜೊತೆಗಿನ ಹೋಲಿಕೆಯ ಮಾತುಗಳೂ ಇವೆ! ಈ ಎಲ್ಲ ಚರ್ಚೆ– ವಿಮರ್ಶೆಯ ಭಾಗವಾಗಿಯೇ, ಅದರ ಮುಂದುವರಿಕೆಯಾಗಿಯೇ ನಾನು ಅಂಬೇಡ್ಕರರ ಕೆಲವು ರಾಜಕೀಯ ನಡೆ ಮತ್ತು ಚಿಂತನೆಗಳು ವಿವಾದಾಸ್ಪದವಾದವು ಎಂದು ಹೇಳಿರುವುದು. ಅಲ್ಲದೆ, ನಾನು ಕಳೆದ ಮುವ್ವತ್ತು ವರ್ಷಗಳಿಂದ ದಲಿತ ಚಳುವಳಿ ಬಗ್ಗೆ ನನ್ನದೇ ಮಿತಿಯಲ್ಲಿ ಬರೆಯುತ್ತಾ ಬಂದಿದ್ದೇನೆ. ಆ ಬರಹಗಳಲ್ಲೆಲ್ಲಾ ಅಂಬೇಡ್ಕರ್‌ರ ಮತ್ತು ಅದರ ಜೊತೆಗೇ ದಸಂಸದ ರಾಜಕಾರಣ, ಚಿಂತನೆಗಳ ಬಗ್ಗೆ ವಿವೇಚನೆ, ವಿಮರ್ಶೆ, ಟೀಕೆ ಮಾಡುತ್ತಲೇ ಬಂದಿದ್ದೇನೆ. ಅದನ್ನು ದಲಿತ ಚಳುವಳಿಕಾರರೂ ಸೇರಿದಂತೆ ಅನೇಕರು ಓದಿದ್ದಾರೆ, ಚರ್ಚಿಸಿದ್ದಾರೆ. ಅದನ್ನು ಉಮೇಶ್ ಓದಿಲ್ಲದಿದ್ದರೆ ನಾನೇನೂ ಮಾಡಲಾರೆ.

೪. ಉಮೇಶ್ ತಾವು ಅವಮಾನದ ಮತ್ತು ಅನ್ಯಾಯದ ಜಗತ್ತಿಗೆ ಸೇರಿದವರೆಂದೂ, ನನ್ನಂತಹವರು ಅದರ ಹೊರಗಿರುವವರೆಂದೂ, ಹಾಗಾಗಿ ನಮ್ಮದು ಸುಧಾರಣಾವಾದ ವೆಂದೂ; ನನ್ನ ಪತ್ರದಲ್ಲಿನ ಎಲ್ಲ ಮಾತುಗಳಿಗೆ ಇದೇ ಕಾರಣವೆಂದೂ, ಅವರು ಸೂಚಿಸಿದ್ದಾರೆ. ಆದರೆ ಸ್ವತಃ ಉಮೇಶರನ್ನೇ ಹೀಗೆ ಹೊರ ಜಗತ್ತಿನವರೆಂದು ಭಾವಿಸಿ ಅನುಮಾನಿಸುವ ಜಗತ್ತೊಂದು ಇರುವ ದುರಂತಮಯ ಸಾಧ್ಯತೆಯನ್ನೂ ಅವರು ಊಹಿಸಬಲ್ಲರೆಂದು ನಾನು ಭಾವಿಸಿದ್ದೇನೆ. ಅದೇನೇ ಇರಲಿ, ಉಮೇಶ್ ಅವರು ತಾವು ಬಣ್ಣಿಸಿಕೊಂಡಿರುವಂತಹ

ಅವಮಾನ ಮತ್ತು ಅನ್ಯಾಯಗಳ ಜಗತ್ತಿನ ಶಾಶ್ವತ ಪ್ರಜೆಗಳಾಗಿಯೇ ಇರಬಯಸಿದ್ದರೆ ಮತ್ತು ಅದರಿಂದ ಅವರಿಗೆ ಸಮಾಧಾನ, ಲಾಭ– ಪ್ರಯೋಜನಗಳು ದೊರೆಯುವಂತಿದ್ದರೆ ನನ್ನದೇನೂ ಆಭ್ಯಂತರವಿಲ್ಲ. ಆದರೆ ಐತಿಹಾಸಿಕ ಕಾರಣಗಳಿಂದಾಗಿ ಒಡೆದು ಹೋಗಿರುವ ಜಗತ್ತು ಒಂದುಗೂಡಲಾರದು ಎಂಬ ಸ್ವಾರ್ಥ ರಾಜಕಾರಣ ಮೂಲವಾದ ನಂಬಿಕೆಯನ್ನು ಗಟ್ಟಿಗೊಳಿಸುವಂತಹ– ಮಾನವನನ್ನು ಮಾನವನನ್ನಾಗಿ ಮಾಡಿರುವ, ಎಲ್ಲವನ್ನೂ ಮೀರಬಲ್ಲ ಅವನ ಅಂತಃಕರಣ ಶಕ್ತಿಯನ್ನೇ ಅಲ್ಲಗಳೆಯುವಂತಹ– ಶೈಲಿಯಲ್ಲಿ ಅವರು ಮಾತನಾಡ ತೊಡಗಿದರೆ ಗಾಬರಿಯಾಗುತ್ತದೆ. ಹಾಗಿದ್ದಲ್ಲಿ, ಇತಿಹಾಸ ಅಂತ್ಯಗೊಂಡಿದೆ ಎಂದು ಹೇಳುವ ಜಾಗತೀಕರಣವಾದಿಗಳ ವಾದಕ್ಕೂ ಇವರ ವಾದಕ್ಕೂ ಏನು ವ್ಯತ್ಯಾಸ ಉಳಿದೀತು?

೫. ಅಂಬೇಡ್ಕರ್ ಎಂಬ ಹೆಸರು ಇಂದು ಅವಮಾನ ಮತ್ತು ಅನ್ಯಾಯಗಳನ್ನು ಮೀರಲು ಬೇಕಾಗಿರದೆ, ಅವನ್ನು ಬಂಡವಾಳವಾಗಿ ಮಾಡಿಕೊಂಡು ಹೋರಾಟದ ಆಟ ಕಟ್ಟುತ್ತಿರುವವರಿಗೆ ಒಂದು ಮುಖವಾಡ ಮಾತ್ರವಾಗಿ ಹೋಗಿರುವ ದುರಂತವನ್ನು ಇಂದು ಹಲವು ಕಡೆ ಕಾಣುತ್ತಿರುವ ಹಿನ್ನೆಲೆಯಲ್ಲಿ ಈ ಎಲ್ಲ ಮಾತುಗಳನ್ನು ಆಡುವ ಅನಿವಾರ್ಯತೆ ಉಂಟಾಗಿದೆ.

('ಸಂವಾದ'ದ ಆಗಸ್ಟ್– ೨೦೧೧ರ ಸಂಚಿಕೆಯಲ್ಲಿ ಪ್ರಕಟಿತ)

೨೪. ಶಾಸಕರ ಅನರ್ಹತೆ ಕುರಿತ ಸರ್ವೋಚ್ಚ ನ್ಯಾಯಾಲಯದ ತೀರ್ಪು:

ಹಲವು ಪ್ರಶ್ನೆಗಳು ಮತ್ತು ಕೆಲವು ಸಂಗತಿಗಳು

ಕರ್ನಾಟಕ ವಿಧಾನಸಭೆಯ ೧೬ ಜನ ಶಾಸಕರ ಅನರ್ಹತೆಯನ್ನು ರದ್ದುಗೊಳಿಸಿರುವ ಸರ್ವೋಚ್ಚ ನ್ಯಾಯಾಲಯದ ತೀರ್ಪು ರಾಜ್ಯ ರಾಜಕೀಯದಲ್ಲಿ ಒಂದು ದೊಡ್ಡ ಸಂಚಲನವನ್ನೇ ಉಂಟು ಮಾಡಿದೆ. ಜೊತೆಗೆ ಅದು ಈಗ ಹಲವು ಮುಖ್ಯ ಪ್ರಶ್ನೆಗಳನ್ನು ಹುಟ್ಟು ಹಾಕಿದೆ ಎನಿಸುತ್ತಿದೆ. ಈ ಪ್ರಶ್ನೆಗಳನ್ನು ಹುಟ್ಟು ಹಾಕಿದ ಗೊಂದಲಮಯ ರಾಜಕೀಯ ಪರಿಸ್ಥಿತಿಯನ್ನು ಇತ್ಯರ್ಥಪಡಿಸಲು, ಕೇಂದ್ರ ಸರ್ಕಾರಕ್ಕೆ ಒಂದು ವಾರದ ಅವಧಿ ಬೇಕಾಯಿತೆಂಬುದನ್ನು ಮತ್ತು ಈ ಇತ್ಯರ್ಥವೂ ರಾಜಕೀಯ ಪರಿಗಣನೆಗಳನ್ನಾಧರಿಸಿದ ತಾತ್ಕಾಲಿಕ ಇತ್ಯರ್ಥವೇ ಹೊರತು, ಸಂವೈಧಾನಿಕ ಪರಿಗಣನೆಗಳನ್ನು ಆಧರಿಸಿದ ಸಮಗ್ರ ಪರಿಹಾರವಲ್ಲ ಎಂಬುದರ ಹಿನ್ನೆಲೆಯಲ್ಲಿ ಈ ಪ್ರಶ್ನೆಗಳು ಹೆಚ್ಚು ಮಹತ್ವ ಪಡೆಯುತ್ತವೆ. ಕೇಂದ್ರ ಸರ್ಕಾರ ಈಗ ರಾಜ್ಯಪಾಲರ ವರದಿಯನ್ನು ತಿರಸ್ಕರಿಸಿ ತೆಗೆದುಕೊಂಡಿರುವ ರಾಜಕೀಯ ತೀರ್ಮಾನವನ್ನು ಒತ್ತಟ್ಟಿ ಗಿರಿಸಿ, ಇದೆಲ್ಲದಕ್ಕೂ ಮೂಲ ಕಾರಣವಾದ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ನೋಡೋಣ.

ಹನ್ನೊಂದು ಬಿಜೆಪಿಯ ಮತ್ತು ನಾಲ್ವರು ಪಕ್ಷೇತರ, ಹೀಗೆ ಒಟ್ಟು ಹದಿನಾರು ಜನ ಶಾಸಕರ ಸದಸ್ಯತ್ವವನ್ನು ಆಡಳಿತ ಪಕ್ಷದ ಶಾಸಕಾಂಗದ ನಾಯಕರ ಶಿಫಾರ್ಸಿನ ಮೇರೆಗೆ ವಿಧಾನಸಭಾಧ್ಯಕ್ಷರು ರದ್ದುಗೊಳಿಸಿದ ರೀತಿ- ನೀತಿಗಳನ್ನು ರಾಜ್ಯದ ಸಾಮಾನ್ಯ ಜನತೆ ಅದು ನಡೆದಾಗಲೇ ನೋಡಿ ಆಶ್ಚರ್ಯಗೊಂಡಿತ್ತು; ಜಿಗುಪ್ಸೆಯನ್ನೂ ಅನುಭವಿಸಿತ್ತು. ಅಂತಹುದೇ ಆಶ್ಚರ್ಯವನ್ನೂ, ಜಿಗುಪ್ಸೆಯನ್ನೂ ಸರ್ವೋಚ್ಚ ನ್ಯಾಯಾಲಯ ತನ್ನ ತೀರ್ಪಿನಲ್ಲಿ ವ್ಯಕ್ತಪಡಿಸಿದೆ. ಅದು ಯಾವ ಕಾನೂನಿನ ಕಸರತ್ತು ಗಳಿಗೂ ಕೈಹಾಕದೆ, ಆಡಳಿತ ಪಕ್ಷ ಮತ್ತು ವಿಧಾನಸಭಾಧ್ಯಕ್ಷರ ನಡುವಣ ರಾಜಕೀಯ ಪಿತೂರಿಯಂತೆ ಈ ಸದಸ್ಯತ್ವ ರದ್ದತಿ ಎಂಬ ಅಕ್ರಮ ಮತ್ತು ಅನ್ಯಾಯ ನಡೆದುಹೋಗಿದೆ ಎಂದು ನೇರ ಮತ್ತು ಸರಳ ಶಬ್ದಗಳಲ್ಲಿ ತನ್ನ ತೀರ್ಪು ನೀಡಿದೆ. ಇದರಲ್ಲಿ ವಿಧಾನಸಭಾಧ್ಯಕ್ಷರು ವಹಿಸಿದ ಪಾತ್ರವನ್ನು ಕಾನೂನು ಬಾಹಿರವಾದ ಅನುಚಿತ ನಡವಳಿಕೆ ಎಂದು ಟೀಕಿಸಿದೆ.

ಹಾಗಾಗಿ ಇಲ್ಲಿ ಹುಟ್ಟುವ ಮೊದಲ ಪ್ರಶ್ನೆಯೆಂದರೆ, ಇಷ್ಟು ನೇರ, ಸರಳ ಮತ್ತು ಸ್ಪಷ್ಟವಾಗಿ ಸರ್ವೋನ್ನತ ನ್ಯಾಯಾಲಯಕ್ಕೆ ಕಂಡ ಅಕ್ರಮ ಮತ್ತು ಅನ್ಯಾಯ, ಈ ಪ್ರಕರಣವನ್ನು ಎರಡು ಹಂತಗಳಲ್ಲಿ ವಿಚಾರಣೆಗೆ ಒಳಪಡಿಸಿದ ನಮ್ಮ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರೂ ಸೇರಿದಂತೆ ಮೂವ್ವರು ನ್ಯಾಯಾಧೀಶರ ಪೈಕಿ ಇಬ್ಬರ ಕಣ್ಣಿಗೆ ಕಾಣದೇ ಹೋದದ್ದೇಕೆ? ಈ ಇಬ್ಬರು ನ್ಯಾಯಾಧೀಶರ ಕಣ್ಣುಗಳನ್ನು ಮಂಜಾಗಿಸಿದ ಕಾನೂನು ಅಂಶಗಳು ಯಾವುವಿರಬಹುದು? ರಾಜ್ಯದ ಸಾಮಾನ್ಯ ಜನತೆಯನ್ನು ಕಾಡುತ್ತಿರುವ ಈ ಪ್ರಶ್ನೆಗೆ ಯಾರಾದರೂ ಕಾನೂನು ಪಂಡಿತರು ಉತ್ತರಿಸಿಯಾರೆ?

ಎರಡನೆಯ ಪ್ರಶ್ನೆ, ಇಷ್ಟು ಸ್ಪಷ್ಟ, ಸರಳ ಮತ್ತು ನೇರವಾದ ಪ್ರಕರಣದಲ್ಲೂ ನ್ಯಾಯ ಪಡೆಯಲು ಸರ್ವೋಚ್ಚ ನ್ಯಾಯಾಲಯದವರೆಗೂ ಹೋಗಬೇಕಾದಂತಹ ಪರಿಸ್ಥಿತಿ ಉಂಟಾದರೆ, ಜನ ಸಾಮಾನ್ಯರಿಗೆ ಅಂತಿಮ ನ್ಯಾಯವೆಂಬುದು ಗಗನ ಕುಸುಮವೇ ಆದೀತಲ್ಲವೇ? ಅವರೆಲ್ಲರೂ ಉನ್ನತ ನ್ಯಾಯಾಲಯಗಳ ವಕೀಲರುಗಳಿಗೆ ಲಕ್ಷಾಂತರ ರೂಪಾಯಿಗಳ ಶುಲ್ಕ ನೀಡಬಲ್ಲ 'ಆಪರೇಷನ್ ಕಮಲ'ದ ಫಲಾನುಭವಿಗಳಾದ ಶಾಸಕರಂತೆ ಕೋಟ್ಯಾಧೀಶರೇನೂ ಆಗಿರಲಾರರು ಅಲ್ಲವೆ?

ಮೂರನೆಯ ಪ್ರಶ್ನೆ ಅಥವಾ ಇದನ್ನು ಆಶ್ಚರ್ಯವೆಂದು ಕರೆದರೂ ನಡೆದೀತು: ಸರ್ವೋಚ್ಚ ನ್ಯಾಯಾಲಯ ಈ ಪ್ರಕರಣದ ವಿಚಾರಣೆ ಮುಗಿಸಿದ ದೀರ್ಘಾವಧಿಯ ನಂತರ ತನ್ನ ತೀರ್ಪನ್ನು ಪ್ರಕಟಿಸಲು, ರಾಜ್ಯದಲ್ಲಿನ ಉಪಚುನಾವಣೆಗಳ ಫಲಿತಾಂಶದ ದಿನವನ್ನೇ ಏಕೆ ಅಯ್ಕೆ ಮಾಡಿಕೊಂಡಿತು? ಇದು ಬರಿ ಕಾಕತಾಳಿಯವೋ ಅಥವಾ ಅದು ನಮ್ಮ ಚುನಾವಣಾ ಆಯೋಗದಂತೆ ತನ್ನ ರಾಜಕೀಯ ತಾಟಸ್ಥ್ಯವನ್ನು ಕಾಯ್ದುಕೊಳ್ಳಲು ಉದ್ದೇಶಪೂರ್ವಕವಾಗಿ ಆಯ್ದುಕೊಂಡ ದಿನಾಂಕವೋ?

ನಾಲ್ಕನೆಯ ಪ್ರಶ್ನೆ, ಈ ತೀರ್ಪು ಹೊರಬರುವ ಸುದ್ದಿ ಹರಡುತ್ತಿದ್ದಂತೆ ಆಡಳಿತ ಪಕ್ಷವು ತರಾತುರಿಯಲ್ಲಿ ಸಭೆಗಳನ್ನು ನಡೆಸಿ, ವಿಧಾನ ಸಭೆಯ ಅಧಿವೇಶನವನ್ನು ಅಗತ್ಯ ಮುನ್ಸೂಚನೆಯೂ ಇಲ್ಲದಂತೆ ತುರ್ತಾಗಿ ಕರೆಯುವ ನಿರ್ಧಾರವನ್ನೇಕೆ ಮಾಡಿತು? ಆಡಳಿತ ಪಕ್ಷದ ಅಂತರಾತ್ಮಕ್ಕೆ, ಸರ್ವೋನ್ನತ ನ್ಯಾಯಾಲಯದಲ್ಲಿ ತನಗೆ ಸೋಲು ಖಚಿತ ಎಂಬುದು ಮೊದಲೇ ಗೊತ್ತಿತ್ತೆ? ಹಾಗಾದರೆ, ಉಚ್ಚ ನ್ಯಾಯಾಲಯದಲ್ಲಿನ ಗೆಲುವೂ ಅದಕ್ಕೆ ಗೊತ್ತಿತ್ತು ಎಂದು ಹೇಳಬೇಕಾಗುತ್ತದೆ ಅಲ್ಲವೇ?

ಕಾನೂನುಗಳ ನ್ಯಾಯಾಲಯದ ಕಥೆ ಈ ಪ್ರಶ್ನೆಗಳನ್ನು ಎತ್ತಿದರೆ, ಜನತಾ ನ್ಯಾಯಾಲಯದ ಇತ್ತೀಚಿನ ತೀರ್ಪು ಇನ್ನಷ್ಟು ಪ್ರಶ್ನೆಗಳನ್ನು ಎತ್ತುತ್ತದೆ. ರಾಜ್ಯಪಾಲರ ವರದಿಯನ್ನು ತಿರಸ್ಕರಿಸಿರುವ ಕೇಂದ್ರ ಸರ್ಕಾರದ ನಿರ್ಧಾರದ ಹಿಂದೆ ಈ ಪ್ರಶ್ನೆಗಳು ಕೆಲಸ ಮಾಡಿರುವಂತಿದೆ. ಈ ಹಿಂದಿನ ಬಹುಪಾಲು ಎಲ್ಲ ಉಪಚುನಾವಣೆಗಳಂತೆಯೇ ಸದ್ಯದ ಮೂರೂ ನಿರ್ಣಾಯಕ ಉಪಚುನಾವಣೆಗಳಲ್ಲೂ ಹೀನಾಯ ಸೋಲು ಅನುಭವಿಸಿ, ರಾಜ್ಯದ ರಾಜಕೀಯ ಸಾಗರದಲ್ಲಿ ಮುಳುಗಿಯೇ ಹೋಗುವ ಅಪಾಯದಲ್ಲಿದ್ದ ವಿರೋಧ ಪಕ್ಷಗಳ ನಾಯಕರು ಈಗ ಸರ್ವೋನ್ನತ ನ್ಯಾಯಾಲಯದ ಈ ತೀರ್ಪನ್ನು ಬದುಕಿಕೊಳ್ಳಲು ಸಿಕ್ಕ

ಹುಲ್ಲುಕಡ್ಡಿಯಂತೆ ಹಿಡಿದುಕೊಂಡು ಆರ್ಭಟಿಸುತ್ತಿರುವುದನ್ನು ಮತ್ತು ತಮ್ಮ ಹೋರಾಟ ಮುಂದುವರೆಯುತ್ತದೆ ಎಂದು ಘೋಷಿಸುತ್ತಿರುವುದನ್ನು ನೋಡಿದರೆ ಮರುಕ ಹುಟ್ಟುತ್ತದೆ. ಸರ್ವೋನ್ನತ ನ್ಯಾಯಾಲಯದ ತೀರ್ಪಿನ ಹಿನ್ನೆಲೆಯಲ್ಲಿ ವಿಧಾನ ಸಭಾಧ್ಯಕ್ಷರು ಮತ್ತು ಮುಖ್ಯಮಂತ್ರಿಗಳು ರಾಜೀನಾಮೆ ನೀಡಬೇಕೆಂದು ಸರಿಯಾಗಿಯೇ ಆಗ್ರಹಿಸಿದ ಈ ನಾಯಕರಿಗೆ, ಜನತಾ ನ್ಯಾಯಾಲಯದಿಂದ ಬಂದಿರುವ ತೀರ್ಪು ತಮ್ಮಿಂದಲೂ ಇದೇ ರೀತಿಯ ರಾಜೀನಾಮೆಗಳನ್ನು ಬಯಸುತ್ತದೆ ಎಂಬ ಅರಿವಾಗದಿರುವುದು ಆಶ್ಚರ್ಯಕರ.

ವಿರೋಧ ಪಕ್ಷಗಳು ಪ್ರಸಕ್ತ ಸರ್ಕಾರ ಅತ್ಯಂತ ಭ್ರಷ್ಟ ಸರ್ಕಾರವೆಂದು, ಅದರ ಮುಖ್ಯಮಂತ್ರಿ ಮತ್ತು ಅವರ ಕೆಲವು ಸಹೋದ್ಯೋಗಿಗಳ ವಿರುದ್ಧ ಹಲವು ರಾಜಕೀಯ ಅನಾಚಾರಗಳ ಮತ್ತು ಹಣಕಾಸಿನ ಭ್ರಷ್ಟಾಚಾರಗಳ 'ಸಾಕ್ಷ್ಯಾಧಾರಿತ' ಆರೋಪಗಳ ಸುರಿಮಳೆ ಮಾಡಿದರೂ, ಈ ಸುರಿಮಳೆಯನ್ನು ಬಹುಸಂಖ್ಯಾತ ಜನ ಲೆಕ್ಕಿಸದೆ, ಈ 'ಭ್ರಷ್ಟ ಮತ್ತು ಕೋಮುವಾದಿ' ಸರ್ಕಾರದ ಮತ್ತು 'ಆಪರೇಷನ್ ಕಮಲ'ದ ಫಲಾನುಭವಿ ಅಭ್ಯರ್ಥಿಗಳನ್ನೇ ಮತ್ತೆ ಮತ್ತೆ ಆರಿಸುತ್ತಿದೆ ಎಂದರೆ ಏನರ್ಥ? ಜನತೆಯ ಮಧ್ಯೆ ಈ ವಿರೋಧ ಪಕ್ಷಗಳ ನಾಯಕರ ವಿಶ್ವಾಸಾರ್ಹತೆ ಆಡಳಿತ ಪಕ್ಷದ ನಾಯಕರ ವಿಶ್ವಾಸಾರ್ಹತೆಗಿಂತ ಒಂದು ಮಟ್ಟ ಕೆಳಗಿದೆ ಎಂದೇ ಇದರ ಅರ್ಥವಲ್ಲವೇ? ಹೇಗೂ, ಇವರ ಆಡಳಿತ ವೈಖರಿಯನ್ನು ನೋಡಿ ನಿರಾಶರಾಗಿಯೇ ತಾನೇ ಜನತೆ ಇವರನ್ನು ತಿರಸ್ಕರಿಸಿ ಹೊಸ ಸರ್ಕಾರಕ್ಕೆ ದಾರಿ ಮಾಡಿಕೊಟ್ಟದ್ದು?

ರಾಜ್ಯ ರಾಜಕೀಯದ ಯಾವುದೋ ಮೂಲೆಯಲ್ಲಿದ್ದ ಬಿಜೆಪಿಯನ್ನು ಮುನ್ನೆಲೆಗೆ ತಂದವರಾದರೂ ಯಾರು? ಮೊದಲಿಗೆ, ಮಾಜಿ ಸಮಾಜವಾದಿ ಬಂಗಾರಪ್ಪ. ಇವರು ತಮ್ಮ ಸ್ವಾರ್ಥ ರಾಜಕಾರಣದ ಸುದೀರ್ಘ ಹಾದಿಯಲ್ಲಿ ಮಾಡಿದ ಹಲವು ಪಕ್ಷಾಂತರಗಳ ಸಾಲಿನಲ್ಲಿ ಅತ್ಯಂತ ಅನಾಹುತಕಾರಿಯಾದುದೆಂದರೆ, ಅವರು ತಮ್ಮ ಕೊನೆಯ ಎರಡು ಪಕ್ಷಾಂತರಗಳ ಹಿಂದೆ; ಆಗ ಸೀಮಿತ ಪ್ರಭಾವವಿದ್ದ ಬಿಜೆಪಿ ಸೇರಿ, ಆ ಪಕ್ಷಕ್ಕೆ ರಾಜ್ಯಾದ್ಯಂತ ಹಿಂದುಳಿದ ವರ್ಗಗಳ ಮಧ್ಯೆ ಒಂದು ನೆಲೆ ಮತ್ತು ವಿಶ್ವಾಸಾರ್ಹತೆ ಒದಗಿಸಿದ್ದು. ಇನ್ನು ಯುವ ನಾಯಕ ಕುಮಾರಸ್ವಾಮಿಯವರು ನಿಘಂಟಿನಲ್ಲೆಲ್ಲಾ 'ಸೆಕ್ಯಲರಿಸಂ' ಎಂಬ ಪದ ಹುಡುಕಿ ಸಿಗದೆ ನಿರಾಶರಾಗಿ, ಬಿಜೆಪಿ ಜೊತೆ ಸೇರಿ ಸಮ್ಮಿಶ್ರ ಸರ್ಕಾರ ರಚಿಸಿದ್ದಲ್ಲದೆ, ಅದರೊಂದಿಗೆ ಮಾಡಿಕೊಂಡ ಒಪ್ಪಂದವನ್ನು ಮುರಿದ ಅಪ್ರಾಮಾಣಿಕ ರಾಜಕಾರಣ ಮಾಡಿ, ಆ ಪಕ್ಷದ ಪರವಾಗಿ ಅನುಕಂಪದ ಅಲೆಯನ್ನು ಎಬ್ಬಿಸಿ ಅದರ ಜಯಭೇರಿಗೆ ನೇರವಾಗಿ ಕಾರಣರಾದವರು. ಇನ್ನು ಜೆ.ಹೆಚ್. ಪಟೇಲರು ರಾಷ್ಟ್ರಮಟ್ಟದಲ್ಲಿ ಬಿಜೆಪಿ ಜೊತೆಗೆ ಮೈತ್ರಿಗೆ ಮುಂದಾದರೆಂದು ಜಾತ್ಯತೀತತೆಯ ಘನ ಆದರ್ಶವನ್ನು ಹೇಳಿಕೊಂಡು ಜನತಾ ದಳವನ್ನು ಒಡೆದ ಶ್ರೀಮಾನ್ ದೇವೇಗೌಡರು, ತಮ್ಮ ಮಗ ಮುಂದೆ ಅದೇ ಬಿಜೆಪಿಯೊಂದಿಗೆ ಚೆಲ್ಲಾಟವಾಡತೊಡಗಿದಾಗ ಮಾಡಿದ್ದಾದರೂ ಏನು? ನಾಲ್ಕು ದಿವಸ ಮುನಿಸಿಕೊಂಡಂತೆ ಮಾಡಿ, ಕೊನೆಗೆ ಮಗ ಮಾಡತೊಡಗಿದ ಅನಾಹುತಗಳಿಗೆಲ್ಲ ಬೆಂಬಲವಾಗಿ ನಿಂತದ್ದು! ಜನ ಇದನ್ನೆಲ್ಲ ಇಷ್ಟು ಬೇಗ ಮರೆತಾರೆಯೇ? ಮರೆಯುವಂತಹ ಘನ

ಕಾರ್ಯಗಳನ್ನೇನಾದರೂ ಇವರು ಮಾಡಿದ್ದಾರೆಯೇ? ಬಹಿರಂಗ ಕ್ಷಮೆ ಬೇಡ; ಕನಿಷ್ಟ, ಪಶ್ಚಾತ್ತಾಪ?

ಇನ್ನು, ಕಳೆದ ಚುನಾವಣೆಗಳಲ್ಲಿ ಗೆದ್ದೇ ಬಿಟ್ಟವೆಂಬಂತೆ ನಾಯಕತ್ವಕ್ಕಾಗಿ ಒಳಗೊಳಗೇ ಮಸಲತ್ತು ನಡೆಸಿ ಅದರ ಭಾಗವಾಗಿ ಶುದ್ಧ ಅಯೋಗ್ಯರಿಗೆ ಮತ್ತು ಅಗ್ಗದ ಸಿನೆಮಾ ನಟ-ನಟಿಯರಿಗೆ ಟಿಕೆಟ್ ಮಾರಿಕೊಂಡು ಮತ್ತು ತಮ್ಮ ಪಕ್ಷದ ನಾಯಕರೇ ಸೋಲುವಂತೆ ಸ್ವಯಂನಾಶದ ಒಳ ರಾಜಕಾರಣ ಮಾಡಿದ ಕಾಂಗ್ರೆಸ್ ನಾಯಕರೇ ಅಲ್ಲವೇ? ಮೊನ್ನೆ ಜಗಳೂರು ಉಪಚುನಾವಣೆಯಲ್ಲೂ ಈ ಕಾಂಗ್ರೆಸ್ ನಾಯಕರು, ಚುನಾವಣಾ ಸಮಯದಲ್ಲಿ ಬಿಜೆಪಿ ಪಕ್ಷದ ಅಭ್ಯರ್ಥಿಯ ಪರವಾಗಿ ಸ್ವಯಂಪ್ರೇರಣೆಯಿಂದ ಪ್ರಚಾರ ಮಾಡಿದ ಸಿನೆಮಾ ನಟನೊಬ್ಬನಿಗೆ ಜಾತಿ ಲೆಕ್ಕಾಚಾರದ ಮೇಲೆ ತಮ್ಮ ಪಕ್ಷದಿಂದ ಟಿಕೆಟ್ ಕೊಡಲು ಎಲ್ಲ ಪ್ರಯತ್ನಗಳನ್ನೂ ಮಾಡಿದ್ದನ್ನೂ ಜನ ಗಮನಿಸಿದ್ದಾರೆ. ಇದನ್ನೆಲ್ಲ ಒಪ್ಪಿಕೊಳ್ಳಲಾಗದಷ್ಟು ಸ್ಥೂಲ ಮನಸ್ಕರೂ, ಸ್ಥೂಲ ದೇಹಿಗಳೂ ಆಗಿರುವ ಸದ್ಯದ ವಿರೋಧ ಪಕ್ಷಗಳ ಈ ನಾಯಕರು, ಸೋತವರು ಸದಾ ಹೇಳುತ್ತಾ ಬಂದಿರುವ ಮಾಮೂಲಿ ಕಾರಣಗಳನ್ನೇ ಹೇಳುತ್ತಾ ರಾಜ್ಯ ರಾಜಕೀಯ ಅವನತಿಗೆ ತಮ್ಮ ಕೊಡುಗೆಯನ್ನು ಸಲ್ಲಿಸುತ್ತಿದ್ದಾರೆ. ಈಗಿರುವ ಗೊಂದಲಮಯ ಮತ್ತು ಅತಿ ಭ್ರಷ್ಟ ರಾಜಕೀಯ ಪರಿಸ್ಥಿತಿಯಲ್ಲೇ ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಹವಣಿಸುತ್ತಿದ್ದಾರೆ.

ಇದೆಲ್ಲ ಜನತೆಗೆ ಸ್ಪಷ್ಟವಾಗಿ ಗೊತ್ತಾಗಿದೆ. ಆದುದರಿಂದ ಕಾನೂನಿನ ನ್ಯಾಯಾಲಯದ ತೀರ್ಪಿನ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳೂ ಮತ್ತು ವಿಧಾನಸಭಾಧ್ಯಕ್ಷರೂ ಹಾಗೂ ಜನತಾ ನ್ಯಾಯಾಲಯದ ತೀರ್ಪಿನ ಹಿನ್ನೆಲೆಯಲ್ಲಿ ವಿರೋಧ ಪಕ್ಷಗಳ ಸದ್ಯದ ನಾಯಕರೂ ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಿ ರಾಜ್ಯ ರಾಜಕೀಯದ ರಾಡಿಯನ್ನು ತಿಳಿಗೊಳಿಸುವುದು ಈಗ ಅವಶ್ಯಕ. ಅದರಲ್ಲೂ ನಾಲ್ಕಾರು ದಶಕಗಳಿಂದ ರಾಜ್ಯ- ರಾಷ್ಟ್ರ ರಾಜಕಾರಣದಲ್ಲಿ ಮುಳುಗೆದ್ದು ಮುದಿ ಎತ್ತಿನಂತಾಗಿರುವ ದೇವೇಗೌಡರು ಅಧಿಕಾರ ರಾಜಕಾರಣಕ್ಕೆ ತಿಲಾಂಜಲಿಯಿತ್ತು ಈಗಲಾದರೂ ತಮ್ಮ ರಾಜಕೀಯ ಮುತ್ಸದ್ದಿತನದ ಪ್ರದರ್ಶನಕ್ಕೆ ಅಣಿಯಾಗುವುದೊಳಿತು. ಇದರಿಂದ ರಾಜ್ಯ ರಾಜಕೀಯದಲ್ಲಿ ಹೊಸ ಸಂಚಲನ ಉಂಟಾಗಿ ಅಲ್ಲಿಗೆ ಹೊಸ ನೀರು ಹರಿದು ಬಂದು, ಅದು ಹೊಸ ದಿಕ್ಕಿನಲ್ಲಿ ಒಂದಿಷ್ಟು ಪುನಶ್ಚೇತನಗೊಳ್ಳಲು ಸಹಾಯವಾದೀತು

(ಶಿವಮೊಗ್ಗದ 'ನಮ್ಮ ನಾಡು'ವಿನಲ್ಲಿ ಪ್ರಕಟಿತ- ಏಪ್ರಿಲ್, ೨೦೧೧)

◇◇◇

೨೫. ಕಾಂಗ್ರೆಸ್ಸಿಗೆ ಇದು ಆತ್ಮ ನಿರೀಕ್ಷಣೆಯ ಕಾಲ

ರಾಜ್ಯ ಸರ್ಕಾರವನ್ನು ಅಮಾನತ್ತಿನಲ್ಲಿಡುವಂತೆ ರಾಜ್ಯಪಾಲರು ಮಾಡಿರುವ ಶಿಫಾರ್ಸನ್ನು ಜಾರಿಗೊಳಿಸುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಲು ಪ್ರತಿಭಟನೆ, ಧರಣಿ, ಮೆರವಣಿಗೆ ಇತ್ಯಾದಿಗಳನ್ನು ನಡೆಸಿದ್ದಲ್ಲದೆ ದೆಹಲಿ ಯಾತ್ರೆಯನ್ನೂ ಕೈಗೊಂಡ ರಾಜ್ಯ ಕಾಂಗ್ರೆಸ್ ನಾಯಕರು ಈಗ ಹತಾಶರಾಗಿದ್ದಾರೆ. ಮಾಧ್ಯಮಗಳ ಸಮ್ಮುಖದಲ್ಲಿ ಅವರು ತಮ್ಮ ಅಸಹಾಯಕತೆಯನ್ನು ಮುಚ್ಚಿಡಲೂ ಆಗದ ಮುಖಭಾವಗಳಲ್ಲಿ ಬಿಜೆಪಿ ಸರ್ಕಾರದ ವಿರುದ್ಧ ತಮ್ಮ ಹೋರಾಟವನ್ನು ಮುಂದುವರೆಸುವುದಾಗಿ ಹೇಳುತ್ತಿರುವುದನ್ನು ನೋಡುವುದೇ ರಾಜ್ಯದ ಜನತೆಗೆ ಒಂದು ಹಿಂಸೆಯಾಗಿದೆ. ಇನ್ನು ಸ್ವತಃ ಅವರು ಆಂತರ್ಯದಲ್ಲಿ ಪಡುತ್ತಿರುವ ಹಿಂಸೆ ಎಂತಹದಾಗಿರಬಹುದು ಎಂಬುದನ್ನು ಯಾರಾದರೂ ಊಹಿಸಬಹುದು. ಇದಕ್ಕಾಗಿ ಅವರು ಒಳಗೊಳಗೇ ದೆಹಲಿಯ ತಮ್ಮ ವರಿಷ್ಠರ ಬಗ್ಗೆ ಕ್ರೋಧಿತರಾಗಿರುವ ಎಲ್ಲ ಸಾಧ್ಯತೆಗಳು ಇಲ್ಲದಿಲ್ಲ. ಆದರೆ ಇದಕ್ಕೆ ರಾಜ್ಯ ಕಾಂಗ್ರೆಸ್‌ನೊಳಗೆ ಭವಿಷ್ಯದ(ಸರ್ಕಾರದ) ನಾಯಕತ್ವಕ್ಕಾಗಿ ಈಗಲೇ ಆರಂಭವಾಗಿರುವ ಮುಸುಕಿನ ಗುದ್ದಾಟವೂ ಕಾರಣವಾಗಿದ್ದರೆ ಆಶ್ಚರ್ಯವಿಲ್ಲ. ಇದರ ಬಾಹ್ಯ ಪರಿಣಾಮಗಳನ್ನು ರಾಜ್ಯದ ಜನತೆ ಇನ್ನು ಕೆಲವೇ ದಿನಗಳಲ್ಲಿ ನೋಡಬೇಕಾಗಿ ಬರಬಹುದು.

ನಿಜ, ಕಾಂಗ್ರೆಸ್ ವರಿಷ್ಠ ಮಂಡಳಿ ರಾಜ್ಯ ಕಾಂಗ್ರೆಸ್ಸಿಗರಿಗೆ ತೀವ್ರ ಮುಖಭಂಗವುಂಟು ಮಾಡಿದೆ. ಕಪಾಳ ಮೋಕ್ಷವೆಂದರೂ ನಡೆದೀತು. ವರಿಷ್ಠ ಮಂಡಳಿ ಹೀಗೆ ರಾಜ್ಯದಲ್ಲಿ ತನ್ನ ಪಕ್ಷಕ್ಕೇ ಮುಜುಗರಗವಾಗುವಂತಹ ನಿರ್ಧಾರ ಕೈಗೊಂಡುದುದರ ಹಿಂದಿನ ಮರ್ಮವಾದರೂ ಏನು? ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಹಿನ್ನೆಲೆಯಲ್ಲಿ ಮಾಡಲಾದ ರಾಜ್ಯಪಾಲರ ಶಿಫಾರ್ಸಿನಂತೆ ವಿಧಾನಸಭೆಯನ್ನು ಅಮಾನತ್ತಿನಲ್ಲಿಡುವ ಅಥವಾ ವಿಸರ್ಜಿಸುವ ಎಲ್ಲ ಅವಕಾಶವೂ ಅದರ ಮುಂದಿತ್ತು. ಆದರೆ ಅದು ಹಾಗೆ ನಿರ್ಧಾರ ಕೈಗೊಳ್ಳದೆ ಬಿಜೆಪಿ ಸರ್ಕಾರಕ್ಕೆ ಜೀವದಾನ ನೀಡಿದುದರ ಹಿಂದೆ ಮೂರು ಕಾರಣಗಳಿರುವಂತಿವೆ. ಎರಡನ್ನು ಈಗಾಗಲೇ ವಿವಿಧ ಮಾಧ್ಯಮಗಳು ಊಹಿಸಿ, ವ್ಯಾಖ್ಯಾನವನ್ನೂ ಮಾಡಿವೆ. ವಿಧಾನಸಭೆಯ ವಿಸರ್ಜನೆ ಬಿಜೆಪಿಯ ಬೀದಿ ಹುಯ್ಲಿಗೆ ಕಾರಣವಾಗಿ, ಅದು ಅದರ ಪರವಾದ ಜನರ ಸಹಾನುಭೂತಿಗೆ ಕಾರಣವಾಗಬಹುದು ಎಂಬುದು ಒಂದಾದರೆ, ಅನೇಕ ಭ್ರಷ್ಟಾಚಾರ ಪ್ರಕರಣಗಳನ್ನು ಎದುರಿಸುತ್ತಿರುವ ಈ

ಸರ್ಕಾರ, ಮುಂದಿನ ದಿನಗಳಲ್ಲಿ ಆ ಒತ್ತಡಗಳಲ್ಲಿ ಸಿಕ್ಕಿ ತಾನೇ ಕುಸಿದು ಬಿದ್ದು ಜನರ ವಿಶ್ವಾಸಾರ್ಹತೆ ಕಳೆದುಕೊಳ್ಳುವಂತಾದರೆ ಕಾಂಗ್ರೆಸ್‌ಗೆ ಒಳ್ಳೆಯದು ಎಂಬುದು ಇನ್ನೊಂದು. ರಾಷ್ಟ್ರಪತಿ ಆಡಳಿತದ ಆಜ್ಞೆಯನ್ನು ಕಾನೂನಿನ ಪ್ರಕಾರ ಊರ್ಜಿತಗೊಳಿಸಲು ರಾಜ್ಯಸಭೆಯಲ್ಲಿ ಬಹುಮತವಿಲ್ಲ ಎಂಬಿತ್ಯಾದಿ ಕಾರಣಗಳು, ಈ ಎರಡು ಕಾರಣಗಳನ್ನು ಮರೆಮಾಚಿಕೊಳ್ಳಲು ಹೇಳಿಕೊಳ್ಳುತ್ತಿರುವ ಕುಂಟುನೆಪವಷ್ಟೆ.

ಅದೇನೇ ಇರಲಿ, ಈ ಎಲ್ಲ ಕಾರಣಗಳಿಗಿಂತ ಮುಖ್ಯವಾದ ಕಾರಣವೆಂದರೆ, ಕಾಂಗ್ರೆಸ್ಸಿನ ವರಿಷ್ಠ ನಾಯಕತ್ವಕ್ಕೆ ತನ್ನ ಪಕ್ಷದ ರಾಜ್ಯ ನಾಯಕತ್ವದ ಶಕ್ತಿ– ಸಾಮರ್ಥ್ಯಗಳ ಬಗ್ಗೆ ನಂಬಿಕೆ ಕಳೆದುಹೋಗಿರುವುದೇ ಆಗಿದೆ. ಈವರೆಗಿನ ಎಲ್ಲ ಹಂತಗಳ ಚುನಾವಣೆ– ಉಪಚುನಾವಣೆಗಳಲ್ಲಿನ ಸತತ ಸೋಲು, ವಿಶೇಷವಾಗಿ ಬಿಜೆಪಿ ಸರ್ಕಾರ ಭ್ರಷ್ಟಾಚಾರ ಮತ್ತು ಸ್ವಜನ ಪಕ್ಷಪಾತಗಳ ಸುಳಿಯಲ್ಲಿ ಸಿಕ್ಕಿ ಒದ್ದಾಡುತ್ತಿರುವ ಸಂದರ್ಭದಲ್ಲೂ, ಇತ್ತೀಚಿನ ಮೂರು ಉಪಚುನಾವಣೆಗಳ ಪೈಕಿ ಪಕ್ಷ ಎರಡರಲ್ಲಿ– ಅದೂ ತನ್ನ ಪಾರಂಪರಿಕ ಭದ್ರ ಕೋಟೆಗಳಲ್ಲಿ– ಠೇವಣಿ ಕಳೆದುಕೊಳ್ಳುವ ಸ್ಥಿತಿಯಲ್ಲಿದೆ ಎಂದರೆ, ಈ ನಾಯಕತ್ವದ ಬಗ್ಗೆ ಯಾರಿಗಾದರೂ ಹೇಗೆ ನಂಬಿಕೆ ಬಂದೀತು? ಹಾಗಾಗಿ ಇಂತಹ ಮುಖೇಡಿ ನಾಯಕತ್ವ ತನ್ನ ಚುನಾವಣಾ ಸೋಲುಗಳು ಮತ್ತು ಸದ್ಯದ ರಾಜಕೀಯ ಮುಖಭಂಗಗಳ ಒತ್ತಡಕ್ಕೆ ಸಿಕ್ಕಿ ತಂತಾನೇ ಹಿನ್ನೆಲೆಗೆ ಸರಿಯುವಂತಾಗಲಿ ಅಥವಾ ಪಕ್ಷ ಬಿಟ್ಟು ಹೋಗಲಿ; ಆನಂತರವಾದರೂ ಪಕ್ಷದಲ್ಲಿ ಹೊಸ ನಾಯಕತ್ವ ಮೂಡುವಂತಾಗಲಿ ಎಂದು ಪಕ್ಷದ ವರಿಷ್ಠ ನಾಯಕತ್ವ ಆಶಿಸಿರಬಹುದು. ಏಕೆಂದರೆ, ರಾಜ್ಯ ವಿಧಾನಸಭೆಯನ್ನು ವಿಸರ್ಜಿಸಿ ಬಿಜೆಪಿ ಸರ್ಕಾರವನ್ನು ಬರಖಾಸ್ತು ಮಾಡುವ ದುಸ್ಸಾಹಸ ಮಾಡಿ, ಸಂಸತ್ತಿನಲ್ಲಿ ಮತ್ತು ನ್ಯಾಯಾಂಗ ಹೋರಾಟದಲ್ಲಿ ಜೈಸಿದರೂ, ನಂತರದ ಚುನಾವಣೆಗಳಲ್ಲಿ ಈ ರಾಜ್ಯ ನಾಯಕತ್ವವನ್ನು ಕಟ್ಟಿಕೊಂಡು ಗೆಲ್ಲುವ ಭರವಸೆ ಅದಕ್ಕೆ ಹೇಗಾದರೂ ಇದ್ದೀತು?

ರಾಜ್ಯ ಕಾಂಗ್ರೆಸ್ ನಾಯಕತ್ವ ಎಂತಹ ಚಿಂತನಾ ದಾರಿದ್ರ್ಯ ಮತ್ತು ಕ್ರಿಯಾಶೀಲತೆಯ ಬಿಕ್ಕಟ್ಟನ್ನು ಎದುರಿಸುತ್ತಿದೆ ಎಂಬುದನ್ನು ತಿಳಿಯಲು, ಅದು ಬಿಜೆಪಿ ಸರ್ಕಾರವನ್ನು ಬರಖಾಸ್ತು ಮಾಡುವಂತೆ ಒಂದು ಬಣ (ಇವರಲ್ಲಿ ರಾಜ್ಯ ನಾಯಕರೇ ಹೆಚ್ಚು) ಮತ್ತು ಬರಖಾಸ್ತು ಮಾಡದಂತೆ ಇನ್ನೊಂದು ಬಣ (ಇವರಲ್ಲಿ ಕೇಂದ್ರ ನಾಯಕರೇ ಹೆಚ್ಚು) ತನ್ನ ವರಿಷ್ಠ ಮಂಡಳಿಯ ಮನವೊಲಿಕೆಗೆ ನೀಡಿದುವೆಂದು ವರದಿಯಾಗಿರುವ ಎರಡು ವಿಶೇಷ ರಾಜಕೀಯ ಕಾರಣಗಳನ್ನು ನೋಡಬೇಕು. ಈ ಕಾರಣಗಳು ಆ ಪಕ್ಷದ ಇತಿಹಾಸ, ಪರಂಪರೆ ಮತ್ತು ಘನತೆಗಳೆಲ್ಲವನ್ನೂ ಒಟ್ಟಿಗೇ ಬೀದಿ ಪಾಲು ಮಾಡುವಷ್ಟು ಅವಮಾನಕಾರಿಯಾಗಿವೆ ಎಂದು ವಿಷಾದದಿಂದ ಹೇಳಬೇಕಿದೆ. ಒಂದು ಬಣ ನೀಡಿದ ಕಾರಣವೆಂದರೆ, ಯಡಿಯೂರಪ್ಪನವರನ್ನು ಹೀಗೇ ಬಿಟ್ಟರೆ, ಅವರು ಕಾಂಗ್ರೆಸ್ ಪಕ್ಷದ ಶಾಸಕರನ್ನೆಲ್ಲ ಸೆಳೆದುಬಿಟ್ಟು ಪಕ್ಷವನ್ನೇ ನಿರ್ನಾಮ ಮಾಡಿಬಿಡುತ್ತಾರೆಂಬುದು! ಗಾಂಧೀಜಿ ರೂಪಿಸಿದ, ಸ್ವಾತಂತ್ರ್ಯವನ್ನು ತಂದುಕೊಟ್ಟ, ನೆಹರೂ– ಇಂದಿರಾ ಗಾಂಧಿ ಕಟ್ಟಿದ ಪಕ್ಷವೆಂದು ಹೇಳಿಕೊಳ್ಳುವ; ಒಂದೂ ಕಾಲು ಶತಮಾನಕ್ಕೂ

ಹೆಚ್ಚು ಕಾಲಾವಧಿಯ ಇತಿಹಾಸವುಳ್ಳ ಈ ಪಕ್ಷದ ನಾಯಕರು ಇಂತಹ ಆತಂಕಕ್ಕೀಡಾಗಿರುವುದು ಆಶ್ಚರ್ಯಕರವಷ್ಟೇ ಅಲ್ಲ, ನಾಚಿಕೆಗೇಡು ಕೂಡಾ. ಇದು, ಈ ಪಕ್ಷ ತಲುಪಿರುವ ದುಃಸ್ಥಿತಿ ಹಾಗೂ ಈ ದುಃಸ್ಥಿತಿ ತಲುಪವಂತೆ ಅದನ್ನು ಕಟ್ಟಿರುವ ಇತ್ತೀಚಿನ ಅದರ ನಾಯಕರ ಯೋಗ್ಯತೆಯನ್ನು ಪ್ರತಿಬಿಂಬಿಸುತ್ತದಷ್ಟೆ. ಪಕ್ಷವನ್ನು ಒಂದು ತತ್ವ– ಸಿದ್ಧಾಂತದ ಸ್ಫೂರ್ತಿಯೊಂದಿಗೆ ಕಟ್ಟಿ ಜನರ ಮಧ್ಯೆ ತನ್ನ ಶಕ್ತಿಯನ್ನು ಸಂಘಟಿಸಿಕೊಂಡಿದ್ದರೆ, ಆ ಕಡೆಯಿಂದ ಕಣ್ಣು ಹೊಡೆಯುವುದನ್ನೇ ಕಾಯುತ್ತಿದ್ದಂತೆ ಪಕ್ಷ ಬಿಟ್ಟು ಓಡಿ ಹೋಗುವಂತಹ; ಕಿಂಚಿತ್ತೂ ಘನತೆಯಿಲ್ಲದ ಶಾಸಕರು ಈ ಪಕ್ಷದಲ್ಲಿರುತ್ತಿರಲಿಲ್ಲ. ಅಂತಹ ಆತಂಕ ಇತರ ನಾಯಕರಲ್ಲಿ ಉಂಟಾಗುತ್ತಿರಲಿಲ್ಲ.

ಆದರೆ ಈ ತತ್ವ– ಸಿದ್ಧಾಂತ– ಮೌಲ್ಯಗಳನ್ನೆಲ್ಲ ಅವ್ಯಾವಹಾರಿಕವೆಂದು ಗಾಳಿಗೆ ತೂರಿ, ಜಾತಿ ಲೆಕ್ಕಾಚಾರ ಮತ್ತು ಹಣದ ಸಾಮರ್ಥ್ಯಗಳ ಆಧಾರದ ಮೇಲಷ್ಟೇ ಚುನಾವಣಾ ಅಭ್ಯರ್ಥಿಗಳನ್ನು ಆರಿಸುವ ಮಟ್ಟಕ್ಕೆ ಈ ಪಕ್ಷ ಇಳಿದಿದ್ದರಿಂದಲೇ, ಈ ಜಾತಿ ಮತ್ತು ಹಣದ ಲೆಕ್ಕಾಚಾರಗಳಲ್ಲಿ ಇದನ್ನು ಮೀರಿಸುವ ಪಕ್ಷವೊಂದು ರೂಪುಗೊಂಡೊಡನೆ ಇದು ದಿವಾಳಿಯ ಅಂಚನ್ನು ತಲುಪುವಂತಾಗಿರುವುದು! ಈ ಕಟು ವಾಸ್ತವವನ್ನು ಗುರುತಿಸುವ, ಹೇಳುವ ತಾತ್ವಿಕ ತಿಳುವಳಿಕೆ, ಬದ್ಧತೆ, ವಿವೇಕ ಮತ್ತು ಧೈರ್ಯವಿರುವ ನಾಯಕರೇ ಆ ಪಕ್ಷದಲ್ಲಿ ಇರದಂತಾಗಿರುವುದೇ ಈ ಪಕ್ಷದ ಸದ್ಯದ ದುಸ್ಥಿತಿಗೆ ಕಾರಣವಾಗಿರುವುದು. ಈವರೆಗೆ, ತಾತ್ವಿಕ ನೆಲೆಯ– ಅದು ಹುಸಿಯೋ, ದಿಟವೋ ಅದು ಬೇರೆ ವಿಷಯ– ಚರ್ಚೆ, ಸಂವಾದ, ಶಿಸ್ತುಬದ್ಧ ಸಂಘಟನೆ, ಸುಯೋಜಿತ ರಾಜಕೀಯ ತಂತ್ರಗಾರಿಕೆ ಮತ್ತು ಜಾಣ ಮಾತುಗಾರಿಕೆ ಈ ಯಾವ ನೆಲೆಗಳಲ್ಲೂ ನಿಜವಾದ ಸವಾಲನ್ನು ಎದುರಿಸದಿದ್ದ ರಾಜ್ಯ ಕಾಂಗ್ರೆಸ್‌ಗೆ, ಬಿಜೆಪಿ ಈಗ ಈ ಎಲ್ಲ ನೆಲೆಗಳಲ್ಲಿ ಸವಾಲು ಒಡ್ಡಿ ಅದನ್ನು ಸಂಪೂರ್ಣ ಮಣಿಸಿಬಿಟ್ಟಿದೆ. ಆತ್ಮಾಭಿಮಾನವಿರುವ ಯಾವ ನಾಯಕತ್ವಕ್ಕಾದರೂ ಇದು ಅವಮಾನಕಾರಿ ಎನ್ನಿಸಿ, ಅದು ಈ ಎಲ್ಲ ನೆಲೆಗಳಲ್ಲಿ ಸಮರೋಪಾದಿಯಲ್ಲಿ ಸಿದ್ಧತೆಯನ್ನು ಕೈಗೊಳ್ಳಲು ನಿಶ್ಚಯಿಸುತ್ತಿತ್ತು. ಆದರೆ ಸೋಲುಗಳ ಸರಮಾಲೆ ತನ್ನ ಕುತ್ತಿಗೆಯನ್ನು ಬಿಗಿದು ಉಸಿರು ಕಟ್ಟಿಸುತ್ತಿರುವ ಸಂದರ್ಭದಲ್ಲೂ ಈ ಕಾಂಗ್ರೆಸ್ ತನ್ನ ಭಾಷೆ ಮತ್ತು ನುಡಿಗಟ್ಟನ್ನು ಕಿಂಚಿತ್ತೂ ಬದಲಾಯಿಸಿಕೊಳ್ಳದೆ, ತನ್ನ ಇಂದಿನ ದುಃಸ್ಥಿತಿಗೆ ಅದೇ ಮಾಮೂಲಿ ಸಮಝಾಯಿಷಿಗಳನ್ನು ನೀಡುತ್ತಿದೆ! ಮತ್ತೆ ಅದೇ ಮಾಮೂಲಿ ಹುಸಿ ವೀರಾವೇಶದ ಮಾತುಗಳನ್ನಾಡುತ್ತಿದೆ!!

ಇನ್ನು ರಾಜ್ಯ ಸರ್ಕಾರವನ್ನು ಕಾಂಗ್ರೆಸ್ಸಿನ ಹಿತದೃಷ್ಟಿಯಿಂದಲೇ ಬರಖಾಸ್ತು ಮಾಡದಂತೆ ಮನವೊಲಿಸಲೆತ್ನಿಸಿದ ಇನ್ನೊಂದು ಬಣ ನೀಡಿತೆಂದು ಹೇಳಲಾದ ಕಾರಣವೆಂದರೆ, ಯಡಿಯೂರಪ್ಪನವರ ನೇತೃತ್ವದ ಸರ್ಕಾರವನ್ನು ಈಗ ಪದಚ್ಯುತಗೊಳಿಸಿದರೆ, ವೀರಶೈವ ಜನಾಂಗ ಕಾಂಗ್ರೆಸ್ ಪಕ್ಷದ ಕೈಬಿಟ್ಟು ಹೋಗುವ ಅಪಾಯವಿದೆಯೆಂಬುದು! ಇದು ಪಕ್ಷವು ಜಾತಿ ವಿಷಯದಲ್ಲಿ ಎಷ್ಟು ಕುರುಡಾಗಿ ಯೋಚಿಸುತ್ತಿದೆ ಎಂಬುದಕ್ಕೆ ಒಂದು ಸ್ಪಷ್ಟ ಉದಾಹರಣೆ. ಯಾವುದೇ ಜಾತಿ, ಯಾರಿಗೇ ಆಗಲಿ ಎಂದೆಂದಿಗೂ ಕುರುಡಾಗಿ

ನಿಷ್ಠೆಯಿಂದಿರುತ್ತವೆಂದು ಯೋಚಿಸುವ ರೀತಿಯೇ ಸಾಮಾನ್ಯ ಜನರ ಆತ್ಮಾಭಿಮಾನದ ಬಗೆಗೆ ಅಗೌರವ ತೋರುವಂತಹದ್ದು ಮತ್ತು ರಾಜಕೀಯ ಅವಿವೇಕತನದಿಂದ ಕೂಡಿದ್ದು. ಯಾವುದೇ ಜಾತಿಯ ಗಣನೀಯ ಭಾಗ ಯಾವುದಾದರೊಂದು ಪಕ್ಷಕ್ಕೆ ನಿಷ್ಠೆ ತೋರಿದ್ದರೆ, ಅದಕ್ಕೆ ಜಾತಿಯ ಹೊರತಾಗಿಯೂ ಕೆಲವು ಕಾರಣಗಳಿರಬಹುದು. ಅವನ್ನು ಗುರುತಿಸಿ ಅವರ ಒಲವನ್ನು ಗಳಿಸಿಕೊಳ್ಳುವುದು ನಿಜವಾದ ಯಾವುದೇ ಪಕ್ಷದ ರಾಜಕೀಯ ಜಾಣ್ಮೆ ಆಗಿರಬೇಕು. ಯಾವುದೇ ಕಾರಣದಿಂದ ಒಂದು ಜಾತಿ ಸಮುದಾಯ ಜಾತಿ ಆಧಾರದ ಮೇಲೇ ರಾಜಕೀಯವಾಗಿ ಸಂಘಟನೆಯಾಗಿದ್ದರೆ, ಅದನ್ನು ಸಾಮಾಜಿಕ ಕೆಡುಕೆಂದು ಪರಿಗಣಿಸಿ ಅದನ್ನು ರಾಜಕೀಯವಾಗಿ ಎದುರಿಸುವ ತಾತ್ವಿಕ ಸ್ಪಷ್ಟತೆ ಮತ್ತು ಧೈರ್ಯ ತಾಳಬೇಕು. ಆದರೆ ಇಂತಹ ದೀರ್ಘಕಾಲಿಕ ದೃಷ್ಟಿ ಮತ್ತು ಹೋರಾಟಗಳ ಗುಣಲಕ್ಷಣಗಳನ್ನೇ ಕಾಂಗ್ರೆಸ್ ಸಂಪೂರ್ಣವಾಗಿ ಕಳೆದುಕೊಂಡಂತಿದೆ. ರಾಜ್ಯದ ಅತ್ಯಂತ ಹಿರಿಯ ಮತ್ತು ಇಂದಿನ ಪ್ರಮುಖ ವಿರೋಧ ಪಕ್ಷವೇ ಈ ಬೌದ್ಧಿಕ, ತಾತ್ವಿಕ ಹಾಗೂ ನೈತಿಕ ದಿವಾಳಿಯ ಅಂಚನ್ನು ಮುಟ್ಟಿದರೆ, ಇಲ್ಲಿ ಪ್ರಜಾಪ್ರಭುತ್ವದ ಗತಿಯೇನು?

ಇನ್ನು ರಾಜ್ಯದ ಇನ್ನೊಂದು ವಿರೋಧ ಪಕ್ಷವಾದ ಜೆಡಿ (ಎಸ್) ಬಗ್ಗೆ ಹೇಳಲು ಏನೂ ಉಳಿದಂತಿಲ್ಲ. ಅದನ್ನು ರಾಜಕೀಯ ಪಕ್ಷವೆಂದು ಕರೆಯುವ ಬದಲು, ಗೌಡ ಕುಟುಂಬ (ಪ್ರ.) ಲಿ. ಎಂದು ಕರೆದರೂ ನಡೆದೀತು! ಇಂದು ಅ ಪಕ್ಷದ ಅಪ್ಪ- ಮಕ್ಕಳು ಮತ್ತು ಅವರ ಚೇಲಾಗಳ ಹೊರತಾಗಿ ಹಿರಿಯ ನಾಯಕರೆನಿಸಿದ ಎಂ.ಸಿ.ನಾಣಯ್ಯ, ಪಿ.ಜಿ.ಆರ್.ಸಿಂಧ್ಯಾ ಮುಂತಾದವರು ಎಲ್ಲಿದ್ದಾರೋ, ಏನು ಮಾಡುತ್ತಿದ್ದಾರೋ ಯಾರಿಗೂ ತಿಳಿಯದಾಗಿದೆ! ಪರಿಸ್ಥಿತಿ ಹೀಗಿರುವಾಗ, ಕಾಂಗ್ರೆಸ್‌ನಂತಹ ದೀರ್ಘ ಪರಂಪರೆಯುಳ್ಳ ಪಕ್ಷ ತನ್ನ ದಿವಾಳಿತನಕ್ಕೆ ಬಿಜೆಪಿಯನ್ನು ದೂಷಿಸದೆ, ತನ್ನ ಒಳಗನ್ನೊಮ್ಮೆ ನೋಡಿಕೊಳ್ಳಲು ಇದು ಸಕಾಲವಾಗಿದೆ. ನಿಜವಾದ ಸವಾಲುಗಳೇ ಇಲ್ಲದ ದಿನಗಳಲ್ಲಿ ಹತ್ತಿಸಿಕೊಂಡ ತುಕ್ಕನ್ನು ಸ್ವಚ್ಛಗೊಳಿಸಿಕೊಂಡು, ಅಧಿಕಾರದ ಆರಾಮ ರಾಜಕಾರಣದ ದಿನಗಳಲ್ಲಿ ಬೆಳೆಸಿಕೊಂಡ ಚರ್ಬಿಯನ್ನು ಕೂಡಲೇ ಇಳಿಸಿಕೊಳ್ಳಬೇಕಿದೆ. ಬರೀ ಹಣ ಮತ್ತು ಕೊಬ್ಬಿನ ಮೂಟೆಗಳಂತಿರುವ ನಾಯಕರನ್ನು ನಿರ್ದಾಕ್ಷಿಣ್ಯವಾಗಿ ಮೂಲೆಗೆ ಸರಿಸಬೇಕಿದೆ. ಹಿರಿ- ಕಿರಿಯರೆನ್ನದೆ ಎಲ್ಲ ಹಂತಗಳ ನಾಯಕರಿಗೆ ಪಕ್ಷಕ್ಕೊಂದು ಸಿದ್ಧಾಂತವೆಂಬುದೊಂದಿದೆ; ಅದೇ ಪಕ್ಷದ ಬೆಳವಣಿಗೆಗೆ ಶಾಶ್ವತ ಮೂಲಾಧಾರ ಎಂಬ ಅರಿವನ್ನು ಮೂಡಿಸುವ ರೀತಿಯಲ್ಲಿ ಪಕ್ಷದ ವಿವಿಧ ಹಂತಗಳ ವೇದಿಕೆಗಳಲ್ಲಿ ಚರ್ಚೆ, ಸಂವಾದ ನಡೆಯಬೇಕಿದೆ. ಪಕ್ಷದ ನಾಯಕರು ತಂತಮ್ಮ ಜಾತಿಗಳಿಗೆ ಸೇರಿದ ಅನುಯಾಯಿಗಳ ಗುಂಪು ಕಟ್ಟಿಕೊಂಡು ತಿರುಗಾಡುವುದನ್ನು ಪ್ರಜ್ಞಾಪೂರ್ವಕವಾಗಿ ನಿಲ್ಲಿಸಬೇಕಿದೆ.

ಎಲ್ಲಕ್ಕಿಂತ ಮೊದಲು ಮತ್ತು ಮುಖ್ಯವಾಗಿ ದೆಹಲಿ ನಾಯಕತ್ವದ ಚಮಚಾಗಿರಿ ಮಾಡುವುದನ್ನು ಬಿಟ್ಟು, ಸ್ಥಳೀಯ ನಾಯಕತ್ವವನ್ನು ಭದ್ರವಾಗಿ ಬೆಳೆಸುವ ಹಾಗೂ ಆ ಮೂಲಕ ದೆಹಲಿ ನಾಯಕತ್ವದಿಂದ, ವಿಧೇಯತೆಯ ಬದಲಾಗಿ ಗೌರವವನ್ನು ನಿರೀಕ್ಷಿಸುವಂತಹ ರೀತಿಯಲ್ಲಿ ಪ್ರಾದೇಶಿಕತ್ವದ ಹೆಮ್ಮೆಯನ್ನು ಮೈಗೂಡಿಸಿಕೊಳ್ಳಬೇಕಿದೆ. ರಾಜ್ಯದಲ್ಲಿನ ಸದ್ಯದ

ರಾಡಿಯಾದ ರಾಜಕಾರಣದ ನೀರಿನಲ್ಲಿ ಮೀನು ಹಿಡಿಯುವ ಅವಕಾಶವಾದಿ ರಾಜಕಾರಣದ ಹಾದಿಯನ್ನು ಕೂಡಲೇ ತೊರೆದು, ಪಕ್ಷದಲ್ಲಿ ಹೊಸ ಆಲೋಚನೆ, ಹೊಸ ಹುಮ್ಮಸ್ಸು, ಹೊಸ ವಿವೇಕ ಮತ್ತು ತಂತ್ರಗಳಿಗೆ ಅವಕಾಶ ಮಾಡಿಕೊಡುವ ರೀತಿಯಲ್ಲಿ ತನ್ನನ್ನು ಸಂಘಟಿಸಿಕೊಳ್ಳುವುದು ಕಾಂಗ್ರೆಸ್ಸಿಗೆ ರಾಜ್ಯ ರಾಜಕೀಯದ ಸದ್ಯದ ಹಿತದೃಷ್ಟಿಯಿಂದ ತುರ್ತು ಅಗತ್ಯವಾಗಬೇಕಿದೆ. ಇಲ್ಲದೇ ಹೋದಲ್ಲಿ ಈಗಾಗಲೇ ಹಲವು ರಾಜ್ಯಗಳಲ್ಲಿ ಆಗಿರುವಂತೆ ಈ ರಾಜ್ಯದಲ್ಲೂ ಅದರ ನಿರ್ನಾಮದ ದಿನಗಳು ದೂರವಿಲ್ಲ. ಇದು ಈಗ ಗೋಡೆ ಬರಹದಷ್ಟೇ ಸ್ಪಷ್ಟವಾಗಿದೆ... ಇದನ್ನು ಈಗ ಅರಿಯಲಾಗದ ನಾಯಕರನ್ನು ರಾಜ್ಯದ ಜನತೆ ಎಂದಿಗೂ ಕ್ಷಮಿಸಲಾರರು.

(ಹಾಸನದ 'ಜನತಾ ಮಾಧ್ಯಮ'ದಲ್ಲಿ ಪ್ರಕಟಿತ– ಜೂನ್, ೨೦೧೧)

✧✧✧

೨೬. ಅನಂತಮೂರ್ತಿ ಎಂಬ ವಿಶಿಷ್ಟ ವಿದ್ಯಮಾನ!

೧. ರಾಜ್ಯ ರಾಜಕೀಯ ಚಿತ್ರ ಪೂರ್ಣಗೊಳಿಸಿದ ನಮ್ಮ ಅನಂತಮೂರ್ತಿಯವರು!

ವಿರೋಧ ಪಕ್ಷದ ಮುಖಂಡರಾದ ಎಚ್.ಡಿ.ಕುಮಾರ ಸ್ವಾಮಿಯವರು ಮುಖ್ಯಮಂತ್ರಿ ಯಡಿಯೂರಪ್ಪನವರು ಸಾವಿರಾರು ಕೋಟಿ ರೂಪಾಯಿಗಳ ಅಕ್ರಮ ಆಸ್ತಿ ಮಾಡಿದ್ದಾರೆಂದು ದಾಖಲೆ ಗಳನ್ನು ಬಿಡುಗಡೆ ಮಾಡಿದರು. ಜನ ಬೆಚ್ಚಿ ಬಿದ್ದರು. ನಂತರದಲ್ಲೇ ಕುಮಾರಸ್ವಾಮಿಯವರ ಕುಟುಂಬ ದವರು ಸಾವಿರಾರು ಕೋಟಿ ರೂಪಾಯಿಗಳ ಅಕ್ರಮ ಆಸ್ತಿ ಮಾಡಿದ್ದಾರೆಂದು ಬಿಜೆಪಿ ಮುಖಂಡ ರು ಕಿರು ಹೊತ್ತಿಗೆ ಬಿಡುಗಡೆ ಮಾಡಿದರು. ಜನ ಮತ್ತೆ ಬೆಚ್ಚಿಬಿದ್ದರು.

ಇದರಿಂದ ಹೌಹಾರಿದ ಕುಮಾರಸ್ವಾಮಿಯವರು ಪ್ರತಿಭಟಿಸಿ, ತಮ್ಮ ಮೇಲಿನ ಆರೋಪಗಳ ಬಗ್ಗೆ ಸಿಬಿಐ ತನಿಖೆಗಾಗಿ ಒತ್ತಾಯಿಸಿದರು. ಸರ್ಕಾರದ ಮನ ಕರಗದಿದ್ದಾಗ, ತಮಗೆ ಮಧುಮೇಹ ಇತ್ಯಾದಿ ಇತ್ಯಾದಿ ದೈಹಿಕ ಬೇನೆಗಳಿದ್ದರೂ ಅಮರ ಣಾಂತ ಉಪವಾಸ ಕೂರುವುದಾಗಿ ಎಚ್ಚರಿಸಿದರು. ಇದಕ್ಕೂ ಸರ್ಕಾರದ ಮನ ಕರಗದಿದ್ದಾಗ ಸಕಲ ಪ್ರಚಾರ ವೈಭವಗಳೊಂದಿಗೆ ಉಪವಾಸ ಕೂತೇಬಿಟ್ಟರು. ಆದರೆ ಈ ಉಪವಾಸ ಒಂದು ದಿನ ದಾಟುತ್ತಿದ್ದಂತೆಯೇ, ಕುಮಾರಸ್ವಾಮಿಯವರ ಆರೋಗ್ಯ ಬಿಗ ಡಾಯಿಸುತ್ತಿದೆ ಎಂಬ ಸುದ್ದಿ ಮತ್ತು ಅದರ ಪರಿಣಾಮಗಳನ್ನು ಊಹಿಸಿ ಚಿಂತಿತರಾದ, ಬೇರೆಯವರದಿಲಿ, ಬಿಜೆಪಿ ಮುಖಂಡರ ಮನವೇ ಕರಗಿತು! ಅವರು ಓಡೋಡಿ ಬಂದು, ರಾಜಕೀಯದಲ್ಲಿ ಈ ಆಪಾದನೆ-ಪ್ರತಿ ಆಪಾದನೆ ಮಾಮೂಲು, ಉಪವಾಸದಿಂದ ಎದ್ದೇಳಿ ಎಂದು ಮನವಿ ಮಾಡಿದರು. ಒಂದು ದಿನದ ದೀರ್ಘ ಉಪವಾಸದಿಂದ ಮತ್ತು ತಮ್ಮ ಪಕ್ಷದ ಮುಖಂಡರ ಹಾಗೂ ಕಾರ್ಯಕರ್ತರ ಮನವಿಗಳ ಒತ್ತಡಕ್ಕೆ ಸಿಕ್ಕಿ ಬಳಲಿದ್ದ ಕುಮಾರಸ್ವಾಮಿ ಯವರೂ ಇದಕ್ಕೆ ಸ್ಪಂದಿಸಲು ಸಿದ್ಧರಾದರು. ಜನ ಮೂರ್ಛೆ ಹೋಗುವುದೊಂದೇ ಬಾಕಿ!

ಇದನ್ನೆಲ್ಲ ನೋಡುತ್ತಿದ್ದ ರಾಜ್ಯದ ಸಾರ್ವಜನಿಕ ಬುದ್ಧಿಜೀವಿಗಳ ಮುಖಂಡ ರಾದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ. ಯು.ಆರ್. ಅನಂತಮೂರ್ತಿಯವರು ಜಾಗೃತರಾದರು. ರಾಜ್ಯದ ಜನ ಮೂರ್ಛೆ ಹೋದರೆ ಗತಿಯೇನು ಎಂದು ಚಿಂತಿತರಾಗಿ ತಮ್ಮ ಸಾರ್ವಜನಿಕ ಜವಾಬ್ದಾರಿ ನಿರ್ವಹಿಸಲು ಅವರೂ ಉಪವಾಸದ ವೇದಿಕೆಯತ್ತ ಓಡೋಡಿ ಬಂದರು. ಕುಮಾರಸ್ವಾಮಿಯವರಲ್ಲಿ ತಾವು ಇತ್ತೀಚಿನ ದಿನಗಳಲ್ಲಿ ಕಂಡುಕೊಂಡ

ನಾಯಕತ್ವದ ಗುಣಗಳ ವಿಶ್ಲೇಷಣೆಯೊಂದನ್ನು ಮಂಡಿಸಿ, ಅವರನ್ನೂ, ಅವರ ಅಭಿಮಾನಿಗಳನ್ನೂ ಸಾಂತ್ವನಗೊಳಿಸಿದರು. ಉಪವಾಸ ಮುಕ್ತಾಯದ ಸಂಕೇತವಾಗಿ ಹಣ್ಣಿನ ರಸ ನೀಡಿದರು. ತಕ್ಷಣವೇ ಅನಂತಮೂರ್ತಿಯವರಲ್ಲಿ ಪಿತೃಸಮಾನರನ್ನು ಕಂಡುಕೊಂಡ ಕುಮಾರಸ್ವಾಮಿಯವರು ಪಿತೃವಾತ್ಸಲ್ಯದಿಂದ ಅದನ್ನು ಗುಟಕರಿಸಿ, ವಿಶ್ರಾಂತಿಗಾಗಿ ತಮ್ಮ ಖಾಸಗಿ ಅತಿಥಿ ಗೃಹಕ್ಕೆ (ಮನೆಗೆ ಅಲ್ಲ!) ತೆರಳಿದರು.

ಇಲ್ಲಿಗೆ ಎಲ್ಲವೂ ಶಾಂತವಾಯಿತು. ಜೊತೆಗೇ, ಕರ್ನಾಟಕ ರಾಜಕೀಯ ಚಿತ್ರ ಪೂರ್ಣವಾದಂತಾಯಿತು. ಜನತೆಗೂ, ಈ ರಾಜ್ಯ ಸದ್ಯಕ್ಕೆ ಭ್ರಷ್ಟ ರಾಜಕಾರಣದಿಂದ ಏಕೆ ಮುಕ್ತವಾಗಲಾರದೆಂಬುದೂ ಸ್ಪಷ್ಟವಾಯಿತು. ಎಲ್ಲವೂ ಈಗ ನಿಸೂರು! ಇನ್ನು ಏನೂ ಗೊಂದಲವಿಲ್ಲ! ಜನ ಇನ್ನು ಬೆಚ್ಚಿ ಬೀಳುವುದಿಲ್ಲ! ಮೂರ್ಛೆ ಹೋಗುವುದಂತೂ ದೂರದ ಮಾತು!!

('ನವ ಮಾನವ ಮಾಸಿಕ'ದ ಆಗಸ್ಟ್ ಸಂಚಿಕೆಯಲ್ಲಿ ಪ್ರಕಟಿತ)

೨. ಅನಂತಮೂರ್ತಿಯವರ Identity crisis!

ಪ್ರಿಯ ಶಿವಸುಂದರ್ ಅವರೇ,

ಅನಂತಮೂರ್ತಿ ಎಂಬ ವಿದ್ಯಮಾನ ಕರ್ನಾಟಕದಲ್ಲಿ ದಿನೇ ದಿನೇ ಜಟಿಲ ವಾಗುತ್ತಿದೆ. ತೇಜಸ್ವಿ ಒಂದು ಮಾತು ಹೇಳುತ್ತಿದ್ದರು: 'ಈ ಬ್ರಾಹ್ಮಣರ ಜೊತೆ ವಾಗ್ವಾದ ಶುರು ಮಾಡಿದರೆ ಜೀವನ ಪೂರ್ತಿ ಅದನ್ನೇ ಮಾಡುತ್ತಾ ಇರಬೇಕಾಗುತ್ತೆ, ಹುಷಾರ್!' ಅಂತ. ಅನಂತಮೂರ್ತಿಯವರೊಂದಿಗೆ ವಾಗ್ವಾದ ನಡೆಸುವವರಿಗೂ ಇಂದು ಇದೇ ಗತಿಯಾಗಿದೆ! ಅನಂತಮೂರ್ತಿಯವರನ್ನು ಈಗಲೂ ಬ್ರಾಹ್ಮಣರೇ ಎಂದು ಗುರುತಿಸುವುದು ಎಷ್ಟು ಸರಿ ಎಂದು ಕೇಳುವವರಿಗೆ ಜಾತಿ ಎಂದರೆ ಏನು ಎಂಬುದು ಸರಿಯಾಗಿ ಗೊತ್ತಿಲ್ಲ ಎಂದೇ ಹೇಳಬೇಕಾಗುತ್ತದೆ. ಅದನ್ನು ಮಾನಸಿಕವಾಗಿ ಮತ್ತು ದೈಹಿಕವಾಗಿ ಈ ಎರಡೂ ನೆಲೆಗಳಲ್ಲಿ ಒಟ್ಟಿಗೇ ತ್ಯಜಿಸುವಂತಾದರೆ ಮಾತ್ರ ಅದರಿಂದ ಬಿಡುಗಡೆ ಸಾಧ್ಯ. ಅನಂತಮೂರ್ತಿ ಜಾತಿ ಬಿಟ್ಟಿರುವುದು, ಆ ಮೂಲಕ ಮತೀಯತೆಯನ್ನು ಬಿಟ್ಟಿರುವುದು, ಯೌವ್ವನದ ದಿನಗಳಲ್ಲಿ ಆವಾಹಿತವಾದ ಸಿದ್ಧಾಂತದ ಭಾವಾನಾತ್ಮಕ ಪ್ರಭಾವದ ನೆಲೆಯಲ್ಲಿ ಮಾತ್ರ ಎಂಬುದು ಕಾಲ ಕ್ರಮೇಣ ಗೊತ್ತಾಗುತ್ತಿದೆ. ಇದನ್ನು ನಾನು ತೀವ್ರ ದುಃಖ– ನೋವು– ಬೇಸರಗಳಿಂದಲೇ ಹೇಳುತ್ತಿದ್ದೇನೆ.

೪೦ ವರ್ಷಗಳ ಹಿಂದೆ 'ಒಕ್ಕೂಟ'ದ ಸಮಾವೇಶದಿಂದ ಮತ್ತು ೩೦ ವರ್ಷಗಳ ಹಿಂದೆ 'ಸಮತಾ ಸಮ್ಮೇಳನ'ದಿಂದ ಅನಂತಮೂರ್ತಿಯವರನ್ನು ಸಮಾಜವಾದಿಗಳೆನಿಸಿ ಕೊಂಡವರೇ ದೂರವಿಟ್ಟಾಗ ನನ್ನಂತಹವರು ಅದನ್ನು ವಿರೋಧಿಸಿದ್ದೆವು. ಆದರೆ ಇದಕ್ಕೆ

ಪ್ರತಿಕ್ರಿಯೆಯೆಂಬಂತೆ ಅವರ ಪ್ರಜ್ಞೆ ನಿಧಾನವಾಗಿ 'ಸಂಸ್ಕೃತಿ'ಯ ಹೆಸರಲ್ಲಿ ಜಾತಿಗಳ ಕಕ್ಷೆಯನ್ನು ಪ್ರವೇಶಿಸುತ್ತಾ ಅದನ್ನು ಅವರು ತಮ್ಮ ಬೌದ್ಧಿಕ ಶಕ್ತಿಯನ್ನೆಲ್ಲ ಬಳಸಿ ಸಮರ್ಥಿಸಿಕೊಳ್ಳ ತೊಡಗಿರುವುದನ್ನು ನೋಡತೊಡಗಿದಂತೆಲ್ಲ ನನಗೆ ನಮ್ಮ ಹಿರಿಯ ಸಮಾಜವಾದಿಗಳ (ಮುಖ್ಯವಾಗಿ, ತೇಜಸ್ವಿ, ಲಂಕೇಶ್, ನಂಜುಂಡಸ್ವಾಮಿ ಇತ್ಯಾದಿ) ಆತಂಕ ಮತ್ತು ಅದನ್ನಾಧರಿಸಿದ ನಿರ್ಧಾರ ಸರಿಯಾಗಿಯೇ ಇತ್ತೇನೋ ಎಂಬ ಅನುಮಾನ ಖಚಿತವಾಗುತ್ತಾ ಹೊಗಿದೆ. ಅವರು ೮೦ರ ದಶಕದಲ್ಲಿ ಹೋಗಿ ಹೋಗಿ ಪೇಜಾವರರರಿಂದ 'ಸಮಾಜ ಭೂಷಣ' ಪ್ರಶಸ್ತಿ ಸ್ವೀಕರಿಸಿ ಅದನ್ನು ಸಮರ್ಥಿಸಿಕೊಂಡಾಗಲೇ ಅವರ ಕಥೆ ಮುಗಿಯಿತೆಂದು ನಾನು ತೀರ್ಮಾನಿಸಿದ್ದೆ. ಇತ್ತೀಚೆಗಷ್ಟೇ ಅವರು ಒಂದೇ ಜಾತಿ (ಅದೂ ಉಪಜಾತಿ!)ಯವರಿದ್ದ ಪುಸ್ತಕ ಬಿಡುಗಡೆ ಸಮಾರಂಭಕ್ಕೆ ಹೋದದ್ದರ ಬಗ್ಗೆ ಆಕ್ಷೇಪಿಸಿ ನಾನು ಅವರೊಂದಿಗೆ ನಡೆಸಿದ ಚರ್ಚೆ ನನ್ನನ್ನು ಸುಸ್ತು ಮಾಡಿತೆಂದೇ ಹೇಳಬೇಕು. ಇಂತಹವು ಅದೆಷ್ಟೋ! 'ದ್ವಂದ್ವ'ವೆನ್ನುವುದು ಅವರಿಗೆ ಬೌದ್ಧಿಕ ಶೋಧನೆಯ ಮಾರ್ಗವಾಗದೆ, ಒಂದು ಚಟವೇ ಆಗಿ ಹೋದಂತಿದೆ. ಏಕೆಂದರೆ, ಮಾರ್ಗವೆನ್ನುವುದಕ್ಕೆ ಗುರಿ ಎಂಬ ಗಮ್ಯವೂ ಇದೆಯಲ್ಲವೆ?

ಅನಂತಮೂರ್ತಿಯವರು ಮೂಲತಃ ಸುಖಿಗಳಲ್ಲಿ ನಂಬಿಕೆ ಇಟ್ಟವರು. ಎಷ್ಟಾದರೂ ಅವರು ಲೋಕ ನಿಜತ್ವವನ್ನು ಪ್ರತಿಪಾದಿಸಿದ ಸಂತರ ಪಾಜಕ ಕ್ಷೇತ್ರಕ್ಕೆ ವಾಪಸ್ಸಾದವರಲ್ಲವೇ? ಸುಖ ಎಂಬುದೇ ಒಂದು ಹುಸಿ ರಚನೆ ಎಂಬ ಪ್ರಾಥಮಿಕ ಬೌದ್ಧ ಮತ್ತು ಪ್ರಚ್ಛನ್ನ ಬೌದ್ಧರ 'ಕ್ಷಣಭಂಗುರತೆ'ಯ ಸತ್ಯವನ್ನು 'ಅರಿ'ಯದೆಯೇ, ಬುದ್ಧನ ಬಗ್ಗೆ ಮಾತಾಡುವಂತಹ ಅಧ್ಯಾತ್ಮಿಕರು ಅವರು! ಆದರೆ ಸುಖದ (ಅದರ ಎಲ್ಲ ಆಸ್ಥಾನ ಅರ್ಥಗಳಲ್ಲಿ) ಆಕರ್ಷಣೆಯಲ್ಲಿ ತಮ್ಮ ಬೌದ್ಧಿಕ ಸಮಗ್ರತೆ ಮುಕ್ಕಾಗುವುದನ್ನು ಗಮನಿಸಲಾಗದಷ್ಟು ಅವರು ಲೌಕಿಕರೂ ಹೌದು! ಇದು ಅವರು ಜೆ.ಎಚ್. ಪಟೇಲ್ ಮುಖ್ಯಮಂತ್ರಿ ಆದ ಕಾಲದಲ್ಲಿ ಅವರ ಆಸ್ಥಾನ ವಿದ್ವಾಂಸರಾಗಿದ್ದ ಕಾಲದಿಂದಲೂ ಗೊತ್ತಾಗುತ್ತಾ ಬಂದಿದೆ. ಅನಂತಮೂರ್ತಿಯವರಿಗೆ ತತ್ವಜ್ಞಾನ, ಸಿದ್ಧಾಂತ ಮತ್ತು ಅವನ್ನು ಕುರಿತ ಪ್ರಮೇಯಗಳು, ಚರ್ಚೆಗಳು, ಸಂವಾದಗಳು ಮಿದುಳಿನ ಕೌಶಲ ಪ್ರದರ್ಶನಗಳಾಗಿ ಮಾತ್ರ ಆಗಿರುವುದು ಮತ್ತು ಅದನ್ನು ಮೆಚ್ಚುವವವರ ಗುಂಪು ಸದಾ ಅವರ ಸುತ್ತ ನೆರೆದಿರುವುದು ಅವರು ಸಿಕ್ಕಿ ಹಾಕಿಕೊಂಡಿರುವ ಪ್ರಮುಖ ದೌರ್ಬಲ್ಯಗಳಲ್ಲಿ ಒಂದಾಗಿದೆ. ಬಾಯಲ್ಲಿ ಅವರು ಅದ್ವೈತ ಹೇಳುವವರಾದರೂ, ಅವರ identity crisis ದಿನೇ ದಿನೇ ಜಟಿಲವಾಗುತ್ತಾ ಹೋಗುತ್ತಿದೆ. ಅದರಿಂದ ಬಿಡುಗಡೆಗೊಳ್ಳಲು ನಡೆಸುತ್ತಿರುವ ಕಸರತ್ತೇ ಕನ್ನಡ ಬೌದ್ಧಿಕ ಸಮಾಜಕ್ಕೆ ಒಂದು ದೊಡ್ಡ ಆಕರ್ಷಣೆಯಾಗಿಬಿಟ್ಟಿದೆ! ಅದಕ್ಕೆ, ಬಿಡಲಾಗದ ಅವರ ದೇಶಾವರಿ ಗುಣವೇ ಕಾರಣವೆಂದು ನಾನು ಭಾವಿಸಿದ್ದೇನೆ.

ಆದರೆ ಅನಂತಮೂರ್ತಿ ಎಂಬ ವಿದ್ಯಮಾನವನ್ನು ನಿಮ್ಮಂತೆ ಎಡಪಂಥೀಯತೆ ಮತ್ತು ಬಲಪಂಥೀಯತೆ ಎಂಬ ಈಗಾಗಲೇ ಕ್ಲೀಷೆಗೊಂಡಿರುವ ಪರಿಭಾಷೆಯಲ್ಲಿ ಅರ್ಥಮಾಡಿಕೊಳ್ಳಲು, ವಿವರಿಸಲು ಸಾಧ್ಯವೇ ಇಲ್ಲ ಎಂಬುದು ನನ್ನ ಅಭಿಮತ. ಏಕೆಂದರೆ

ಈ ಎರಡೂ ಪಂಥೀಯತೆಗಳು ಸಮಾನವಾಗಿ ಭ್ರಷ್ಟಗೊಂಡು ಅರ್ಥ ಸಂದಿಗ್ಧತೆಯನ್ನು ಎದುರಿಸುತ್ತಿವೆ. ಹಾಗಾಗಿ ಬರಗೂರಾಗಲೀ, ಚಂಪಾ ಅವರಾಗಲೀ ಈ ನೆಲೆಗಳಲ್ಲಿ ಅಥವಾ ಈ ಪರಿಭಾಷೆಯಲ್ಲಿ ಅನಂತಮೂರ್ತಿಯವರನ್ನು ಟೀಕಿಸಿದರೆ, ಅದಕ್ಕೆ ಅಷ್ಟು ಬೆಲೆ ಬರಲಾರದು. ಈ ಇಬ್ಬರೂ ಪ್ರಭುತ್ವದ ಸಹವಾಸಕ್ಕಾಗಿ ಹಾತೊರೆದವರೇ; ಅದಕ್ಕೆ ಏನೆಲ್ಲ ಕಸರತ್ತು ಮಾಡಿದವರೇ! ಅದರಿಂದ ಯಾವುದೇ ಎಡಪಂಥೀಯ ಅಥವಾ ಪ್ರಗತಿಪರ ಪರಿಣಾಮಗಳನ್ನುಂಟು ಮಾಡದೆ ಅದನ್ನು ಸವಿದವರೇ! ಇಂತಹವರು ಅನಂತಮೂರ್ತಿಯವರ ಬಗ್ಗೆ ಮಾತಾಡುವುದು ಹೆಚ್ಚಿದಷ್ಟೂ, ಭೈರಪ್ಪನವರಂತಹವರ ವಿಶ್ವಾಸಾರ್ಹತೆ ಹೆಚ್ಚುತ್ತಾ ಹೋಗುತ್ತದಷ್ಟೆ.

(ಗೆಳೆಯ ಶಿವಸುಂದರ ಅವರು ಅನಂತಮೂರ್ತಿ ಕುರಿತ ತಮ್ಮ ಬರಹ ಕಳಿಸಿ ಪ್ರತಿಕ್ರಿಯೆ ಕೇಳಿದಾಗ ಬರೆದ ಅಂತರ್ಜಾಲ ಪತ್ರ– ಆಗಸ್ಟ್, ೨೦೧೧)

✧✧✧

೨೭. ಅಣ್ಣಾ ಹಝಾರೆ ಆಂದೋಲನ: ಉಳಿದು ಹೋದ ಕೆಲವು ಪ್ರಶ್ನೆಗಳು

ಅಣ್ಣ ಹಜಾರೆ ನೇತೃತ್ವದ ಜನಲೋಕಪಾಲ್ ಮಸೂದೆ ರಚನಾ ಸಮಿತಿ ವಿವಾದಕ್ಕೆ ಸಿಲುಕಿದೆ. ಒಂದು ಕಡೆ ಈ ಸಮಿತಿಯ ಸ್ವರೂಪವೇ ನಮ್ಮ ಸಂವಿಧಾನದ ಭಾವನೆಗೆ ವಿರುದ್ಧವಾಗಿದ್ದು, ಸಂಸದೀಯ ಪ್ರಜಾಸತ್ತಾತ್ಮಕ ವಿಧಿ– ವಿಧಾನಗಳಿಗೇ ಅಪಚಾರವೆಸಗುವಂತಿದೆ ಎಂದು ಕೆಲವರು ವಾದಿಸುತ್ತಿದ್ದಾರೆ. ಅದೇ ವೇಳೆಗೆ ಇನ್ನೊಂದು ಕಡೆ, ಸಾರ್ವಜನಿಕ ಜೀವನದಲ್ಲಿನ ಭ್ರಷ್ಟಾಚಾರದ ವಿರುದ್ಧದ 'ರಾಮಬಾಣ' ವೆಂದೇ ಪರಿಗಣಿಸಲಾಗುತ್ತಿರುವ ಈ ಮಸೂದೆಯನ್ನು ರಚಿಸುತ್ತಿರುವ ವರೇ ಭ್ರಷ್ಟಾಚಾರಿಗಳಾಗಿದ್ದಾರೆ ಎಂಬ ಆರೋಪಗಳನ್ನು ಮಾಡು ವವರೂ ಇದ್ದಾರೆ.

೧೯೬೮ರಿಂದಲೂ ಸಂಸತ್ತಿನಲ್ಲಿ ನೆನಗುದಿಗೆ ಬಿದ್ದಿರುವ ಈ ಮಸೂದೆ ಅಂತೂ ಅಂತಿಮ ರೂಪು ಪಡೆದು ಕಾನೂನಾಗಿ ಜಾರಿಗೆ ಬರುವ ದಿನಗಳು ದೂರವಿಲ್ಲ ಎಂಬ ಭರವಸೆ ಹುಟ್ಟಿದ ಸಂದರ್ಭದಲ್ಲೇ ಈ ವಿವಾದ ಸೃಷ್ಟಿಯಾಗಿದೆ. ಏಕೆ ಈ ವಿವಾದ? ಯಾರಿದನ್ನು ಸೃಷ್ಟಿಸುತ್ತಿ ರುವವರು? ಈ ಬಗ್ಗೆಯೂ ಈಗ ಸಾಕಷ್ಟು ಚರ್ಚೆ–ವಿವಾದಗಳು ನಡೆದಿವೆ. ಹಾಗೆ ನೋಡಿದರೆ, ಸಮಿತಿಯ ಸ್ವರೂಪ ಕುರಿತ ಆಕ್ಷೇಪ ಮತ್ತು ಅದರ ಕೆಲವು ಸದಸ್ಯರ ಮೇಲೆ ಮಾಡಲಾಗುತ್ತಿರುವ ಆರೋಪಗಳೆರಡೂ ಒಂದೇ ನೆಲೆಯಿಂದ ಹುಟ್ಟಿದವುಗಳಾಗಿವೆ ಎಂಬುದನ್ನು ನಾವು ಗಮನಿಸಬಹುದು. ಅಥವಾ ಮೊದಲನೆಯ ದರಿಂದ ಎರಡನೆಯದು ಹುಟ್ಟಿದೆ ಎಂದೂ ಹೇಳಬಹುದಾಗಿದೆ. ಸಮಿತಿಯ ಸ್ವರೂಪ ಕುರಿತ ಆಕ್ಷೇಪಣೆ ಎಂದರೆ, ಶಾಸಕಾಂಗ ಮಾಡಬೇಕಾದ ಮಸೂದೆ ರಚನೆಯ ಕೆಲಸವನ್ನು ನಾಗರಿಕ ಸಮಾಜಕ್ಕೆ ಒಪ್ಪಿಸಲಾಗಿದೆ; ಹಾಗಾಗಿ, ಚುನಾವಣೆಗಳ ಮೂಲಕ ಆಯ್ಕೆಯಾದ ಜನತಾ ಪ್ರತಿನಿಧಿಗಳ ರೂಪದಲ್ಲಿನ ಜನತಾ ಶಕ್ತಿಯೇ ರಾಷ್ಟ್ರದ ಸಾರ್ವಭೌಮ ಅಧಿಕಾರ ಶಕ್ತಿ ಎಂಬ ಸಂವಿಧಾನದ ಕೇಂದ್ರ ಭಾವನೆಗೇ ಧಕ್ಕೆ ತರಲಾಗಿದೆ ಎಂಬುದು.

ಆದರೆ ಇದು ಸರ್ಕಾರದ ಪ್ರಜ್ಞಾಪೂರ್ವಕ ನಿರ್ಧಾರವೇ? – ಎಂದೂ ನಾವು ಆಲೋಚನೆ ಮಾಡಬೇಕು. ಜನತಾ ಪ್ರತಿನಿಧಿಗಳೆಂದು ಸಂವೈಧಾನಿಕವಾಗಿ ಕರೆಯಲ್ಪಡುವ ನಮ್ಮ ಶಾಸಕರು/ಸಂಸದರು ಸಂವಿಧಾನದಿಂದ ನಿರ್ದೇಶಿತವಾದ ಈ ಲೋಕಪಾಲ ಮಸೂದೆಗೆ ಅಂತಿಮ ರೂಪು ಕೊಟ್ಟು ಕಾಯಿದೆಯನ್ನಾಗಿ ಜಾರಿಗೊಳಿಸಲು ಕಳೆದ ೫೦ ವರ್ಷಗಳಿಂದಲೂ

ಏಕೆ ಮೀನ ಮೇಷ ಎಣಿಸುತ್ತಾ ಹಿಂಜರಿಯುತ್ತಿದ್ದಾರೆ? ಒಂದಾದರ ಮೇಲೊಂದು ಸಮಿತಿ–ಉಪ ಸಮಿತಿಗಳನ್ನು ರಚಿಸುತ್ತಾ, ಈ ಸಮಗ್ರ ಭ್ರಷ್ಟಾಚಾರ ವಿರೋಧಿ ಶಾಸನಾತ್ಮಕ ಕ್ರಮವನ್ನು ಮುಂದೂಡತ್ತಲೇ ಇದ್ದಾರೆ ಏಕೆ? ಇದಕ್ಕೆ ಕಳೆದ ೫೦ ವರ್ಷಗಳಲ್ಲಿ ಒಂದಾದರ ಮೇಲೊಂದರಂತೆ ಸಾರ್ವಜನಿಕ ವಲಯದಲ್ಲಿ ಸ್ಫೋಟಿಸುತ್ತಿರುವ ಕೋಟ್ಯಾಂತರ ರೂಪಾಯಿಗಳ ಹಗರಣಗಳೇ ಉತ್ತರ ಹೇಳುತ್ತಿರುವಂತಿವೆ. ಈ ಹಗರಣಗಳಲ್ಲಿ ಆಪಾದಿತರು ಯಾರು? ಸಂವಿಧಾನದ ಯಾವ ಅಂಗಗಳಿಗೆ ಸೇರಿದವರು? ಇವರ ಪೈಕಿ ಎಷ್ಟು ಜನರ ವಿರುದ್ಧ ಪ್ರಕರಣಗಳು ದಾಖಲಾಗಿ, ಎಷ್ಟು ಜನಕ್ಕೆ ಶಿಕ್ಷೆಯಾಗಿದೆ? ಉತ್ತರಗಳು ಸ್ಪಷ್ಟವಿವೆ.

ಹೀಗೆ ನಮ್ಮ ಶಾಸಕಾಂಗ ಸಂಪೂರ್ಣ ಭ್ರಷ್ಟಗೊಂಡು, ನಿಷ್ಕ್ರಿಯವಾಗಿ ತನ್ನ ಉದ್ದೇಶಗಳ ವಿಫಲತೆಯ ಅಂಚನ್ನು ತಲುಪಿದೆ. ಇದರ ಪರಿಣಾಮವಾಗಿ ಕಾರ್ಯಾಂಗವೂ ಭ್ರಷ್ಟಗೊಂಡು, ನಮ್ಮ ಜನ ತಮ್ಮ ನಾಗರಿಕ ಬದುಕಿನ ಮೌಲ್ಯಗಳ ರಕ್ಷಣೆಗಾಗಿ, ಆ ಮೂಲಕ ಸಂವಿಧಾನದ ರಕ್ಷಣೆಗಾಗಿ ಇನ್ನೂ ಅಷ್ಟೇನೂ ಭ್ರಷ್ಟಗೊಂಡಿಲ್ಲವೆಂದು ನಂಬಲಾಗಿರುವ ಉನ್ನತ ಸ್ತರದ ನ್ಯಾಯಾಂಗದ ಮೊರೆ ಹೋಗಲಾರಂಭಿಸಿದ್ದಾರೆ. ನಮ್ಮ ಉಚ್ಚ ಮತ್ತು ಸರ್ವೋಚ್ಚ ನ್ಯಾಯಾಲಯಗಳಲ್ಲಿ ವಿಚಾರಣೆಗೆ ದಾಖಲಾಗಿರುವ ಪ್ರಕರಣಗಳ ಸ್ವರೂಪವನ್ನು ನೋಡಿದರೇ ಇದು ನಿಚ್ಚಳವಾಗುತ್ತದೆ. ಆ ಹುಡುಗನಿಗೆ ಈ ಕಾಲೇಜಿನಲ್ಲಿ ಸೀಟು ಕೊಡಿ, ಆ ಹಳ್ಳಿಗೆ ಈ ಗಡುವಿನಲ್ಲಿ ಕುಡಿಯುವ ನೀರು ಪೂರೈಸಿ ಎಂಬ ಆಜ್ಞೆಗಳಿಂದ ಹಿಡಿದು, ರೈತರಿಂದ ಸಂಗ್ರಹಿಸಿದ ಧಾನ್ಯಗಳನ್ನು ಕೊಳೆಯದಂತೆ ಸರಿಯಾಗಿ ಸಂರಕ್ಷಿಸಿ, ರೈಲುಗಳನ್ನು ಸರಿಯಾದ ಸಮಯಕ್ಕೆ ಓಡಿಸಿ ಎಂದು ಸೂಚಿಸಲೂ ಇಂದು ಈ ನ್ಯಾಯಾಲಯಗಳು ಬೇಕಾಗಿವೆ! ಅಂದರೆ, ಸಂವಿಧಾನ ಅರ್ಥಾತ್ ರಾಷ್ಟ್ರಜೀವನದ ಕಾರ್ಯಶೀಲತೆ ಇಂದು ಒಂಟಿಗಾಲ ಮೇಲೆ, ಅದೂ ಸಾಕಷ್ಟು ಕುಂಟಾಗಿರುವಂತೆ ತೋರುತ್ತಿರುವ ನ್ಯಾಯಾಂಗದ ಮೇಲಷ್ಟೇ ನಿಲ್ಲುವಂತಾಗಿದೆ. ಇಂತಹ ಸಂದರ್ಭದಲ್ಲಿ ಅದು ಕುಸಿದು ಬೀಳದಂತೆ ತಡೆಯಲು ನಾಗರಿಕ ಸಮಾಜ ಮುಂದಾದರೆ, ಅದು ಸಂವಿಧಾನ ರಕ್ಷಣೆಯ ಕ್ರಮವಾಗುತ್ತದೆಯೇ ಹೊರತು ಸಂವಿಧಾನ ವಿರೋಧಿ ಕ್ರಮ ಹೇಗಾಗುತ್ತದೋ ತಿಳಿಯದಾಗಿದೆ! ಅಷ್ಟಕ್ಕೂ, ಈ ಜನಲೋಕಪಾಲ ಮಸೂದೆ ರಚನಾ ಸಮಿತಿಯಲ್ಲಿ ನಾಗರಿಕ ಸಮಾಜದ ಸದಸ್ಯರಷ್ಟೇ ಅಲ್ಲ, ಶಾಸಕಾಂಗ ಮತ್ತು ಕಾರ್ಯಾಂಗಗಳ ಸದಸ್ಯರೂ ಇದ್ದಾರಲ್ಲವೇ? ಇದಕ್ಕಿಂತ ಮುಖ್ಯವಾಗಿ, ಈ ಮಸೂದೆ ಹಲವು ಹಂತಗಳ ಪರಿಶೀಲನೆಗಳನ್ನು ದಾಟಿ, ಅಂತಿಮವಾಗಿ ಸಂಸತ್ತಿನ ಮುಂದೆ ಬಂದು ಅದರ ಅನುಮೋದನೆ ಪಡೆದೇ ಕಾಯಿದೆಯಾಗಬೇಕಲ್ಲವೇ?

ಇರಬಹುದು, ಈಗ ಸಂವಿಧಾನದ ರಕ್ಷಣೆಗೆ ಧಾವಿಸಿ ಬಂದಿರುವ ನಾಗರಿಕ ಸಮಾಜ ಎಲ್ಲರೂ ಒಪ್ಪುವಂತಹ ರೀತಿಯಲ್ಲಿ ಪ್ರಾತಿನಿಧಿಕವಾಗಿಲ್ಲದಿರಬಹುದು. ಅಣ್ಣಾ ಹಜಾರೆ ರಾಷ್ಟ್ರದ ಇಂದಿನ ಸರ್ವಶ್ರೇಷ್ಠ ನಾಯಕರಲ್ಲದಿರಬಹುದು. ಆದರೆ ಜನತಾ ಶಕ್ತಿಯನ್ನು ಶಾಸನಾತ್ಮಕವಾಗಿ ಪ್ರತಿನಿಧಿಸಬಲ್ಲ ಜನ ಪ್ರತಿನಿಧಿಗಳ ಆಯ್ಕೆಗೆ ಅನುವು ಮಾಡಿಕೊಡಬೇಕಾದ ಚುನಾವಣಾ ಪ್ರಕ್ರಿಯೆಯೇ ಭ್ರಷ್ಟಗೊಂಡು ಕುಸಿದು ಬೀಳುತ್ತಿರುವಾಗ ನಿಜವಾದ ಜನ ಪ್ರತಿನಿಧಿಗಳೆಂದು

ಯಾರನ್ನು ಒಪ್ಪುವುದು? ಭ್ರಷ್ಟತೆಯಲ್ಲಿ ಭಾಗಿಯಾಗಿ ಅಥವಾ ಅದನ್ನು ಕಣ್ಮುಚ್ಚಿ ಸಹಿಸುತ್ತಿರುವ ಔಪಚಾರಿಕ ಶಾಸನಾತ್ಮಕ ಪ್ರತಿನಿಧಿಗಳನ್ನೋ? ಅಥವಾ, ಅವರ ಮತ್ತು ಅವರ ಚೇಲಾಗಳಾಗಿ ಪರಿವರ್ತಿತರಾಗಿರುವ ಕಾರ್ಯಾಂಗದ ಕಾರ್ಯವೈಖರಿಯನ್ನು ಇನ್ನು ಸಹಿಸಲಾಗದೆಂಬಂತೆ; ಯಾರು ಜನ ಸಂಘಟನೆ ಮಾಡಿ ಸರ್ಕಾರವನ್ನು ಮಣಿಸಿ, ಈಗ ಈ ಎಲ್ಲ ಅನಾಹುತವನ್ನು ಸ್ವಲ್ಪ ಮಟ್ಟಿಗಾದರೂ ತಡೆಯಬಲ್ಲ ಶಾಸನ ರಚಿಸುವ ಪ್ರಾಥಮಿಕ ಹಂತದ ಪ್ರಕ್ರಿಯೆಯಲ್ಲಿ ಭಾಗವಹಿಸುವ 'ಮಾನ್ಯತೆ' ಪಡೆಯಬಲ್ಲವರಾಗಿದ್ದಾರೋ, ಅವರನ್ನೋ? ಸಹಜವಾಗಿ ಎರಡನೆಯವರನ್ನು ನಮ್ಮ ಆಪತ್ಬಾಂಧವರೆಂಬ ನೆಲೆಯಲ್ಲಾದರೂ ತತ್ಕಾಲೀನ ಜನ ಪ್ರತಿನಿಧಿಗಳೆಂದು ಒಪ್ಪಿಕೊಳ್ಳಲು ನಾವು ಸಿದ್ಧರಾಗಬೇಕಲ್ಲವೇ? ಇದಾವುದನ್ನೂ ಮಾಡದೆ, ಬರೇ ಬೈಯುತ್ತಾ, ವಿಮರ್ಶಿಸುತ್ತಾ, ಅದರಲ್ಲಿ ಮಹಿಳೆಯರಿಲ್ಲ, ದಲಿತರಿಲ್ಲ ಎಂಬ ಅರ್ಧ ತಾಂತ್ರಿಕ, ಅರ್ಧ ಭಾವನಾತ್ಮಕ ಆಕ್ಷೇಪಣೆಗಳನ್ನು ದಾಖಲಿಸುತ್ತಾ ಕೂರುವುದು ಎಷ್ಟು ಸರಿ ಎಂಬ ಪ್ರಶ್ನೆಯನ್ನೂ ಇಂದು ನಾವು ಹಾಕಿಕೊಳ್ಳಬೇಕಾಗಿದೆ. ಇಲ್ಲದೆ ಹೋದರೆ ನಮ್ಮ ಅಸಮಧಾನ, ವಿರೋಧ, ವಿಮರ್ಶೆ, ಆಕ್ಷೇಪಣೆಗಳೇ ಅನುಮಾನಾಸ್ಪದವಾಗತೊಡಗುತ್ತವೆ.

ಆದರೆ ಅದೇ ಸಮಯದಲ್ಲಿ ಈ ಅನೌಪಚಾರಿಕ ಮಾರ್ಗದ ಮೂಲಕ ಮೂಡಿದ ನಾಗರಿಕ ಸಮಾಜದ ಈ 'ಜನತಾ' ಪ್ರತಿನಿಧಿಗಳು, ಕೆಲವರು ಆಪಾದಿಸುತ್ತಿರುವಂತೆ ಶಾಸನಾತ್ಮಕ ಪ್ರತಿನಿಧಿಗಳಂತೆಯೇ ನಿಜವಾಗಿ ಭ್ರಷ್ಟರೇ ಆಗಿದ್ದರೆ, ಅವರಿಂದ ಎಂತಹ ಕಾಯಿದೆ ರೂಪುಗೊಳ್ಳಬಹುದೆಂಬ ಆತಂಕ ಯಾರಲ್ಲಾದರೂ ಉಂಟಾಗುವುದು ಸಹಜವೇ ಎಂಬುದನ್ನೂ ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಈ ನಿಟ್ಟಿನಲ್ಲಿ; ಉದಾಹರಣೆಗೆ, ಖ್ಯಾತ ನ್ಯಾಯವಾದಿ ಶಾಂತಿಭೂಷಣ್ ಅವರ ಮೇಲೆ ಮಾಡಲಾಗುತ್ತಿರುವ ಆರೋಪಗಳನ್ನು ಗಮನಿಸಬೇಕು. ಆಗ ಹಝಾರೆ ಅವರ ನೇತೃತ್ವದ ಈ ಇಡೀ ಭ್ರಷ್ಟಾಚಾರ ವಿರೋಧಿ ಆಂದೋಲನ ಸದುದ್ದೇಶಿತವಾದರೂ, ಅಂತಹ ಸುಭದ್ರ ಭ್ರಷ್ಟಾಚಾರ ವಿರೋಧಿ ನೆಲೆಯ ಮೇಲೆ ರೂಪುಗೊಂಡಿಲ್ಲ ಎಂಬ ಶಂಕೆ ಸಹಜವಾಗಿಯೇ ಮೂಡುತ್ತಾ ಹೋಗುತ್ತದೆ.

ಶಾಂತಿ ಭೂಷಣ್ ಹಿರಿಯ ವಕೀಲರಾಗಿ, ಮಾಜಿ ಕೇಂದ್ರ ಕಾನೂನು ಮಂತ್ರಿಯಾಗಿ ಕಳೆದ ನಾಲ್ಕು ದಶಕಗಳಿಂದಲೂ ಭ್ರಷ್ಟಾಚಾರದ ವಿರುದ್ಧ ಹಲವು ಹೋರಾಟಗಳನ್ನು ನಡೆಸುತ್ತಾ ಬಂದಿರುವ ಇತಿಹಾಸ ಹೊಂದಿರುವವರು. ಆದರೆ, ೨೦೦೬ರಲ್ಲಿ, ಆಗ ಉತ್ತರಪ್ರದೇಶದ ಮುಖ್ಯಮಂತ್ರಿಯಾಗಿದ್ದ ಮುಲಾಯಂ ಸಿಂಗ್ ಯಾದವ್ ಪರ ನಡೆಸುತ್ತಿದ್ದ ಮೊಕದ್ದಮೆಯೊಂದರಲ್ಲಿ ಸಂಬಂಧಪಟ್ಟ ನ್ಯಾಯಾಧೀಶರ ಮೇಲೆ 'ಪ್ರಭಾವ' ಬೀರಲು ಯತ್ನಿಸಿದರೆಂದು ಈಗ ಆಪಾದಿಸಲಾಗುತ್ತಿದೆ. ಅದಕ್ಕೆ ಈಗ 'ಧ್ವನಿಮುದ್ರಿಕೆ' ರೂಪದ ಸಾಕ್ಷಿಯೂ ಲಭ್ಯವಾಗಿದೆಯಂತೆ. ಆದರೆ ಈ ಸಾಕ್ಷ್ಯ ನಿರ್ಮಾಣದ ಹಿಂದೆ ಇರುವವರು ಮತ್ತಾರೂ ಅಲ್ಲ, ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಸಮಾಜವಾದವೂ ಸೇರಿದಂತೆ ಭಾರತೀಯ ರಾಜಕಾರಣದಲ್ಲಿ ಅಳಿದುಳಿದಿದ್ದ ಎಲ್ಲ ಪವಿತ್ರ ಮೌಲ್ಯಗಳನ್ನೂ ಬುಡಮೇಲು ಮಾಡಿದ ಕುಖ್ಯಾತಿ ಹೊಂದಿರುವ ಅಮರ್ ಸಿಂಗ್ ಎಂಬ ರಾಜಕಾರಣಿ ಎಂಬುದು ಮಾತ್ರ ನಮಗೆ

ಅಷ್ಟಾಗಿ ಮುಖ್ಯವಾಗಿ ಕಾಣದೇ ಹೋಗುತ್ತದೆ! ಇನ್ನು ಶಾಂತಿಭೂಷಣ್ ಮತ್ತು ಅವರ ಮಗ ಪ್ರಶಾಂತ್ ಭೂಷಣ್ ಉತ್ತರ ಪ್ರದೇಶದಲ್ಲಿ ಮಾರುಕಟ್ಟೆ ಬೆಲೆಗಿಂತ ಅತಿ ಕಡಿಮೆ ದರದಲ್ಲಿ ಜಮೀನು ಕೊಂಡು ರಾಜ್ಯದ ಬೊಕ್ಕಸಕ್ಕೆ ನಷ್ಟ ಉಂಟುಮಾಡಿದ್ದಾರೆಂಬುದು ಇನ್ನೊಂದು ಭ್ರಷ್ಟಾಚಾರದ ಆರೋಪ. ಸರಿ, ಆದರೆ ಇವೊತ್ತು ಯಾವ ಮತ್ತು ಯಾರ ಭೂ– ಖರೀದಿ, ಮಾರುಕಟ್ಟೆ ಬೆಲೆಯಲ್ಲಿ ನೋಂದಿತವಾಗುತ್ತಿದೆ? ಇದಕ್ಕೆ ಕಾರಣವೇನು? ಯಾರು? ಈ ಪ್ರಶ್ನೆಗಳನ್ನೂ ನಮ್ಮನ್ನು ನಾವೇ ಕೇಳಿಕೊಳ್ಳಬೇಕುಗುತ್ತದೆ ಅಲ್ಲವೇ?

ಮುಖ್ಯವಾಗಿ ಇಲ್ಲಿ ಗಮನಿಸಬೇಕಾದದ್ದು, ಇಂತಹ ಆರೋಪಗಳು ಭ್ರಷ್ಟಾಚಾರ ನಡೆಯಿತೆಂದು ಹೇಳಲಾಗುತ್ತಿರುವ ಸಂದರ್ಭಗಳಲ್ಲಿ ಕೇಳಿ ಬರದೆ, ಭ್ರಷ್ಟಾಚಾರ ವಿರೋಧೀ ಆಂದೋಲನವೊಂದು ಗಂಭೀರ ರೂಪದಲ್ಲಿ ಆರಂಭವಾದಾಗ ಮಾತ್ರ ಏಕೆ ಕೇಳಿಬರುತ್ತವೆ? ಶಾಂತಿ ಭೂಷಣರು, ಸರ್ಕಾರದ ಬೊಕ್ಕಸಕ್ಕೆ ಸಾವಿರಾರು ಕೋಟಿ ರೂಪಾಯಿಗಳ ನಷ್ಟಕ್ಕೆ ಕಾರಣವಾಗಿದೆ ಎಂದು ಹೇಳಲಾಗುತ್ತಿರುವ ೨ಜಿ ಸ್ಪೆಕ್ಟ್ರಂ ಹಗರಣದ ಬಗ್ಗೆ ಆರಂಭವಾಗಿರುವ ವಿಚಾರಣೆಯ ರೂವಾರಿ ಎಂದೋ? ಅಥವಾ ಅವರೂ ಭ್ರಷ್ಟ ವ್ಯವಸ್ಥೆಯ ಫಲಾನುಭವಿಯೇ ಆಗಿದ್ದಾರೆ ಎಂದೋ? ಎರಡೂ ಇರಬಹುದು. ಆದರೆ ಈ ಎರಡೂ ಅಭಿನ್ನವಾಗಿ ಬೆರತು, ಜನಲೋಕಪಾಲ ಮಸೂದೆ ರಚನಾ ಸಮಿತಿಯ ವಿಶ್ವಾಸಾರ್ಹತೆಯನ್ನೇ ಭಂಗಗೊಳಿಸುವಂತಹ ಏಕ ಪರಿಣಾಮ ರೂಪದಲ್ಲಿ ಕಾಣಿಸಿಕೊಳ್ಳತೊಡಗಿದಾಗ ಬೇಸರವಾಗುತ್ತದೆ, ಜಿಗುಪ್ಸೆಯಾಗುತ್ತದೆ, ಗಾಬರಿಯಾಗುತ್ತದೆ.

ಸ್ವಲ್ಪ ಆಳವಾಗಿ ಯೋಚಿಸಿದಾಗ ಇದಕ್ಕೆ ಕಾರಣ, ಪ್ರಸಕ್ತ ಭ್ರಷ್ಟಾಚಾರ ವಿರೋಧಿ ಆಂದೋಲನವು 'ಭ್ರಷ್ಟಾಚಾರ' ವೆಂಬುದನ್ನು ಗ್ರಹಿಸಿರುವ ರೀತಿ– ನೀತಿಗಳಲ್ಲೇ ಅಡಗಿದೆ ಎಂದೆನಿಸುತ್ತದೆ. ಭ್ರಷ್ಟಾಚಾರವೇನೂ ಈ ದೇಶದಲ್ಲಿ ಇದ್ದಕ್ಕಿದ್ದಂತೆ ಪ್ರತ್ಯಕ್ಷವಾದದ್ದಲ್ಲ. ಗಾಂಧಿಯುಗದ ರಾಜಕಾರಣದ ಸಾಮಾನ್ಯ ಪ್ರತಿನಿಧಿಯೆಂದು ಗುರುತಿಸಬಹುದಾದ ನಿಜಲಿಂಗಪ್ಪನವರೇ ಒಂದೆಡೆ ಹೇಳಿದಂತೆ, ಶ್ರೀರಾಮನ ಕಾಲದಲ್ಲೂ ಭ್ರಷ್ಟಾಚಾರವಿತ್ತು. ಇನ್ನು ಈ ಗಾಂಧಿ ರಾಜಕಾರಣದ ಯುಗಕ್ಕೆ ಅಂತ್ಯ ಹಾಡಿದವರೆಂದು ಹೇಳಲಾಗುವ ಹೊಸ ಕಾಲದ 'ಗಾಂಧಿ', ಇಂದಿರಾ ಗಾಂಧಿಯವರು ತಮ್ಮ ವಿರುದ್ಧದ ಜೆಪಿ ನೇತೃತ್ವದ ಭ್ರಷ್ಟಾಚಾರ ಆಂದೋಲನದ ಸಂದರ್ಭದಲ್ಲಿ ಹೇಳಿದಂತೆ, ಭ್ರಷ್ಟಾಚಾರವಿಲ್ಲದ ಜಾಗ ಜಗತ್ತಿನಲ್ಲಿಯೇ ಇಲ್ಲ!

ಜೆಪಿ ಆಂದೋಲನ ಅನತಿ ಕಾಲದಲ್ಲೇ ಭ್ರಮನಿರಸನ ಉಂಟು ಮಾಡಿ ಭ್ರಷ್ಟಾಚಾರ ಕುರಿತ ಈ ಎರಡೂ ಮಾತುಗಳು ನಿಜವೆನ್ನಿಸುವಂತಾದರೂ, ಇಂದು ಮತ್ತೆ ರಾಷ್ಟ್ರಾದ್ಯಂತ ಭ್ರಷ್ಟಾಚಾರದ ವಿರುದ್ಧ ಹೊಸ ಜಾಗೃತಿ, ಹೊಸ ಆವೇಶ ಉಂಟಾಗಿರುವಂತೆ ತೋರುತ್ತಿದೆಯಾದರೆ, ಅದಕ್ಕೆ ಭ್ರಷ್ಟಾಚಾರ ಈಗ ಸಹಿಸಲಾಗದಷ್ಟು ಬೃಹದಾಕಾರವಾಗಿ ಬೆಳೆದಿದೆ ಎಂಬುದಷ್ಟೇ ಕಾರಣವಿರಲಾರದು. ಏಕೆಂದರೆ, ಭ್ರಷ್ಟಾಚಾರ ನಿಗ್ರಹಿಸಲು ಸಂವಿಧಾನದಲ್ಲಿ, ಸರ್ಕಾರಗಳನ್ನು ಕಾಲಾನುಕಾಲಕ್ಕೆ ಬದಲಿಸುವುದೂ ಸೇರಿದಂತೆ, ಸಾಕಷ್ಟು

ಅಸ್ತ್ರಗಳಿಲ್ಲವೇ? ಅವನ್ನೇಕೆ ಪರಿಣಾಮಕಾರಿಯಾಗಿ ಬಳಸಬಾರದು ಎಂಬ ಪ್ರಶ್ನೆ ಏಳುತ್ತದೆ. ಆದರೆ ಪರಿಸ್ಥಿತಿ ಇಂದು ಅಷ್ಟು ಸರಳವಾಗಿಲ್ಲ. ಸಂವಿಧಾನದ ಈ ಅಸ್ತ್ರಗಳನ್ನೇ ನಿಷ್ಕ್ರಿಯಗೊಳಿಸಬಲ್ಲಂತಹ 'ಹೊಸ ಭ್ರಷ್ಟಾಚಾರ' ಇಂದು ಮೈದಳೆದು ನಿಂತಿದೆ. ಅದು ಶಾಸಕಾಂಗವನ್ನೂ, ಕಾರ್ಯಾಂಗವನ್ನೂ ನುಂಗಿ, ನ್ಯಾಯಾಂಗವನ್ನೂ ನುಂಗಲು ಕಾದು ನಿಂತಿದೆ!

ಸಂವಿಧಾನ ಎಷ್ಟೇ ಚೈತನ್ಯಶಾಲಿ ಎಂದು ನಾವು ಬೌದ್ಧಿಕವಾಗಿ ವರ್ಣಿಸಿದರೂ, ಅದು ಆ ಚೈತನ್ಯ ಪಡೆಯುವುದು ಅದನ್ನು ನಂಬಿ ಆಚರಿಸುವ ಪ್ರಜೆಗಳ ಮೂಲಕ ತಾನೇ? ಆದರೆ ಪ್ರಜೆಗಳನ್ನೇ ನಿಶ್ಚೇಷ್ಟಿತಗೊಳಿಸುವಂತಹ ಶಕ್ತಿಗಳು ಸೃಷ್ಟಿಯಾದರೆ ಏನು ಮಾಡುವುದು? ಇಂದು ಹಣ ಎನ್ನುವುದು ಎಂತಹ ರಾಕ್ಷಸ ಪ್ರಮಾಣ ಮತ್ತು ಸಾಧ್ಯತೆಗಳನ್ನು ಗಳಿಸಿಕೊಂಡಿದೆ ಎಂದರೆ, ಅದು ಈ ಕಾಲದ ಎಂತಹ ಬೈರಾಗಿಗಳನ್ನೂ ನುಂಗಿ ನೊಣೆಯಬಲ್ಲುದಾಗಿದೆ. ಸಾವಿರ ರೂಪಾಯಿಗಳಿಗೆ ಬಗ್ಗದವನು, ಲಕ್ಷಕ್ಕೆ ಬಗ್ಗದಿರುವನೇ? ಲಕ್ಷಕ್ಕೆ ಬಗ್ಗದವನು ಕೋಟಿಗೆ ಬಗ್ಗದಿರುವನೇ? ಕೋಟಿಗೆ ಬಗ್ಗದವನು ದಶಕೋಟಿ– ಶತಕೋಟಿಗೆ ಬಗ್ಗದಿರುವನೇ? ಈ ಹಣ ಗಳಿಸಿ ಈಗ ಏನೆಲ್ಲ ಸುಖ ಅನುಭವಿಸಬಹುದು! ಈ ಸುಖದ ವೈವಿಧ್ಯತೆಗೆ, ತೀವ್ರತೆಗೆ ಮಿತಿ ಎಂಬುದಿದೆಯೇ? ಕೊನೆಯಿಲ್ಲದೆ, ಸದಾ ಆವಿಷ್ಕಾರಗೊಳ್ಳುತ್ತಾ ಹೋಗುತ್ತಿರುವ ಸುಖದ ಈ ವೈವಿಧ್ಯತೆ ಮತ್ತು ತೀವ್ರತೆಗಳ ದೊಡ್ಡ ಕೈಗಾರಿಕೆಯನ್ನೇ ನಾವಿಂದು ಮುಕ್ತ ಮಾರುಕಟ್ಟೆ ಪ್ರಪಂಚ ಎಂದು ಕರೆಯುತ್ತಿರುವುದಲ್ಲವೇ? ಶಾಂತಿಭೂಷಣ್ ಈ ಪ್ರಪಂಚದ ಒಬ್ಬ ಸಾಮಾನ್ಯ ಪ್ರಜೆ ಮಾತ್ರವಲ್ಲವೇ? ನಾನು, ನೀವು? ಹೆಚ್ಚೆಂದರೆ, ನಾವಿನ್ನೂ ಅಂತಹ ಪ್ರಜೆತನದ ಸುಖಗಳಿಗೆ ತೆರೆದುಕೊಳ್ಳುವ ಅವಕಾಶಗಳನ್ನು ಪಡೆದಿಲ್ಲದಿರಬಹುದಷ್ಟೆ!

ಇದು ನಮ್ಮ ಕಣ್ಮುಂದೆ ಇರುವ ಸತ್ಯ. ಇದನ್ನು ಎದುರಿಸಲು, ನಮ್ಮ ನ್ಯಾಯಾಲಯಗಳಲ್ಲಿ ಬಾಡಿಗೆ ಬಂಟರ ಬಾಯಿಗೆ ಸಿಕ್ಕಿ ಭಾಷೆಯ ಎಂಜಲಿನಲ್ಲಿ ಹೊರಳಾಡಿ ಉಸಿರುಗಟ್ಟಿಕೊಳ್ಳಬಲ್ಲ ಕಾಯಿದೆಯೊಂದನ್ನು ರೂಪಿಸಲು ನಾವಿಂದು ಹೊರಟಿದ್ದೇವೆ. ಯಡಿಯೂರಪ್ಪನವರಿಗೆ ಮತ್ತು ದಿಗ್ವಿಜಯ ಸಿಂಗ್ ಅವರಿಗೆ ಅರ್ಥವಾಗಿರುವ ಈ ಸಂಗತಿ ಸಂತೋಷ್ ಹೆಗ್ಡೆಯವರೂ ಸೇರಿದಂತೆ ಇತರ ಕಾನೂನು ತಜ್ಞರು ಮತ್ತು ಹೋರಾಟಗಾರರಿಗೆ ಅರ್ಥವಾಗದಿರುವುದರಿಂದಲೇ ಈ ಎಲ್ಲ ಅಸಮಧಾನ, ಆರೋಪ, ಜಗಳ, ಕಿತ್ತಾಟಗಳು! ಆದರೆ ತುಂಬಿ ತುಳುಕುತ್ತಿರುವ ಮುಕ್ತ ಮಾರುಕಟ್ಟೆಯ ಬೀದಿಗಳಲ್ಲಿ ಕಳೆದು ಹೋಗಿರುವ ಮಧ್ಯಮವರ್ಗದವರಾದ ನಮಗೆ, ಕೆಲವರಿಗೆ ಮಿತಿಯಿಲ್ಲದ ಸ್ವರ್ಗ ಸುಖವನ್ನೂ, ಇದಕ್ಕೆ ಅನುವಾಗುವಂತೆ ಮತ್ತೆ ಕೆಲವರಿಗೆ ಮಿತಿಯಿಲ್ಲದ ನರಕ ವಾಸವನ್ನೂ ಸೃಷ್ಟಿಸುತ್ತಿರುವ ಮನಮೋಹನ ಸಿಂಗ್ ಪ್ರಣೀತ ಉದಾರ ಆರ್ಥಿಕ 'ನೀತಿ'ಯು, ದುಡಿಮೆಯ ಅರ್ಥವನ್ನೇ, ದುಡಿಮೆ ಮತ್ತು ಪ್ರತಿಫಲಗಳ ನಡುವಣ ಸಮೀಕರಣವನ್ನೇ ಅಸ್ತವ್ಯಸ್ತಗೊಳಿಸಿದೆ ಎಂಬುದೇ ಗಮನಕ್ಕೆ ಬಾರದೇ ಹೋಗಿದೆ.. ಇದು ಈ ಸಂದರ್ಭದ ನಿಜವಾದ ದುರಂತ! ಈ ಹಿಂದೆ ಯಾವುದನ್ನು ಅನ್ಯಾಯ, ಅನುಚಿತ, ಅಕ್ರಮ, ಮೋಸ– ವಂಚನೆ, ದಗಾ ಎಂದು

ಕರೆಯುತ್ತಿದ್ದೆವೋ ಅವು ಇಂದು ಈ 'ನೀತಿ' ಎತ್ತಿ ಹಿಡಿಯುತ್ತಿರುವ ಅಭಿವೃದ್ಧಿ ಮತ್ತು ಅದಕ್ಕೆ ತಕ್ಕುನಾದ ವಾಣಿಜ್ಯ ವ್ಯವಸ್ಥಾಪನೆಯ ಪರಿಭಾಷೆಯಲ್ಲಿ ಬಹು ಮರ್ಯಾದಸ್ಥ ಹೆಸರುಗಳನ್ನು ಪಡೆದು, ನ್ಯಾಯ– ಅನ್ಯಾಯ, ತೃಪ್ತಿ, ನೆಮ್ಮದಿ, ಸಂತೋಷಗಳ ಅರ್ಥಗಳೇ ವಿಕ್ಷಿಪ್ತಗೊಂಡಿವೆ. ಇಂದು, ಸ್ವಲ್ಪ ಕಾಲದ ಮಟ್ಟಿಗೆ ಮತ್ತು ಸ್ವಲ್ಪ ಪ್ರಮಾಣದಲ್ಲಷ್ಟೇ ವೈಯುಕ್ತಿಕ ಮಾನ– ಮರ್ಯಾದೆಗಳನ್ನು ತ್ಯಜಿಸಿಬಲ್ಲ ದುಸ್ಸಾಹಸ ಮಾಡಬಲ್ಲಷ್ಟು 'ಉದ್ಯಮಶೀಲತ್ವ'ವನ್ನು ಪ್ರದರ್ಶಿಸಬಲ್ಲಿರಾದರೆ, ನೀವು ರಾತ್ರೋ ರಾತ್ರಿ ಕೋಟ್ಯಾಧೀಶರಾಗಬಲ್ಲಿರಿ ಮತ್ತು ಆನಂತರ ಅದರ ಹತ್ತು– ನೂರರಷ್ಟು ಕಾಲ ಮತ್ತು ಪ್ರಮಾಣದ ಸಾರ್ವಜನಿಕ ಮಾನ ಮರ್ಯಾದೆಗಳನ್ನು ಗಳಿಸಬಲ್ಲಿರಿ! ಈ ಹಿಂದಿನ ಷೇರು ಹಗರಣ, ಬ್ಯಾಂಕ್ ಹಗರಣ, ಯುಟಿಐ ಹಗರಣ ಇತ್ಯಾದಿಗಳು ಮತ್ತು ಇತ್ತೀಚಿನ ೨ಜಿ ಸ್ಪೆಕ್ಟ್ರಂ ಹಗರಣ, ಕಾಮನ್‌ವೆಲ್ತ್ ಕ್ರೀಡಾಕೂಟದ ಹಗರಣಗಳು ಹಾಗೂ ನಮ್ಮದೇ ರಾಜ್ಯದ ಗಣಿ ಹಗರಣ, ಹಾಲಿ ಮತ್ತು ಮಾಜಿ ಮುಖ್ಯಮಂತ್ರಿಗಳ ಕುಟುಂಬಗಳನ್ನೊಳಗೊಂಡ ರಿಯಲ್ ಎಸ್ಟೇಟ್ ಹಗರಣಗಳು ಇದನ್ನು ಸಾಕಷ್ಟು ದೊಡ್ಡ ರೀತಿಯಲ್ಲೇ ಸಾಬೀತುಪಡಿಸುತ್ತಿವೆ. ಆದರೆ ಇದರ ಪರಿಣಾಮಗಳನ್ನು ನಾವು ಅಭೂತಪೂರ್ವ ಅಭಿವೃದ್ಧಿ ಪಥದಲ್ಲಿ ಎದುರಾಗುವ ಸಣ್ಣ ತೊಡಕುಗಳೆಂದಷ್ಟೇ ಪರಿಗಣಿಸಿ, ಜನರ ತಕ್ಷಣದ ಸಮಾಧಾನಕ್ಕಾಗಿ ಒಂದು ತನಿಖೆಗೋ ಒಂದು ಆಯೋಗ ರಚನೆಗೋ ಆದೇಶಿಸಿ ನಿರ್ಯೋಚನೆಯಿಂದ ಮುಂದೆ ಸಾಗುತ್ತಿದ್ದೇವೆ!

ಇದೊಂದು ನೈತಿಕ ಬಿಕ್ಕಟ್ಟು ಮಾತ್ರವೆಂದೂ, ಇದನ್ನು ಮೌಲ್ಯಗಳ ಪುನರುತ್ಥಾನ ಆಂದೋಲನದ ಮೂಲಕ ಸರಿಪಡಿಸಬಹುದೆಂದೂ ಈ ಆರ್ಥಿಕ ನೀತಿಯ ಕೆಲ ಫಲಾನುಭವಿಗಳು ಅಮಾಯಕವಾಗಿ ಹೇಳತೊಡಗಿದ್ದಾರೆ. ಕೆಲವರು ನಂಬಿರುವಂತೆ ಅಂತಹ ಆಳವಾದ ನಂಬಿಕೆಯುಳ್ಳ ಗಾಂಧೀವಾದಿಯೇನೂ ಅಲ್ಲದ ಅಣ್ಣ ಹಜ಼ಾರೆಯವರು ನರೇಂದ್ರ ಮೋದಿಯವರ ಆಡಳಿತವನ್ನು ಮೆಚ್ಚಿ ಮಾತಾಡಿದ್ದೂ ಇಂತಹ ಸುಲಭ ಚಿಂತನೆಯ ಪ್ರಭಾವದಿಂದಲೇ ಇರಬಹುದು. ಆದರೆ ಮನುಷ್ಯನನ್ನು ಒಂದು ಜೈವಿಕ ಮತ್ತು ಸಾಮಾಜಿಕ ಸಮತೋಲನದಲ್ಲಿಡಬಲ್ಲ ಕರುಣೆ– ಸಹಾನುಭೂತಿ, ನ್ಯಾಯ– ಅನ್ಯಾಯ, ನೆಮ್ಮದಿ– ತೃಪ್ತಿಗಳ ಅರ್ಥಸೀಮೆಗಳನ್ನೇ ಅಸ್ತವ್ಯಸ್ತಗೊಳಿಸಬಲ್ಲಷ್ಟು ಹಣ ಕೆಲವರ ಕೈಸೇರಿ, ಅವರನ್ನು ತೀರದ ದಾಹಕ್ಕೆ ಬಲಿ ಕೊಡುವಂತಹ ರಾಕ್ಷಸ ವ್ಯವಸ್ಥೆ ಸೃಷ್ಟಿಯಾದಾಗ, ನೈತಿಕತೆ; ಮೌಲ್ಯಗಳನ್ನು ವ್ಯಾಖ್ಯಾನಿಸಬಲ್ಲ ಬಗೆಯಾದರೂ ಯಾವುದು? ಅದಕ್ಕೆ ಬೇಕಾದ ಭಾಷೆಯಾದರೂ ಎಲ್ಲಿ, ಹೇಗೆ ಉಳಿದಿರುತ್ತದೆ? ನಿಮ್ಮ ನೈತಿಕ ಪುನರುತ್ಥಾನದ ಬೋಧೆಯನ್ನು ಎಲ್ಲಿಂದ, ಹೇಗೆ ಆರಂಭಿಸುವಿರಿ? ರವಿಶಂಕರ್, ನಿತ್ಯಾನಂದರಾಶ್ರಮಗಳಿಂದಲೇ? ಅಥವಾ ನಮ್ಮ 'ಧಾರ್ಮಿಕ' ಮಠಗಳಿಂದಲೇ? ಮೂರ್ತದ ಆಧಾರವಿಲ್ಲದ ಅಮೂರ್ತಗಳು ಭ್ರೋಳೆ ಮಾತ್ರ ಎನ್ನಿಸಿಕೊಳ್ಳಬಲ್ಲವು ಅಲ್ಲವೇ?

ನಿಜ, ಇದೊಂದು ನೈತಿಕ ಬಿಕ್ಕಟ್ಟೇ. ಹಾಗೆ ನೋಡಿದರೆ ಎಲ್ಲ ಮಾನವ ಬಿಕ್ಕಟ್ಟುಗಳೂ ಆಳದಲ್ಲಿ ನೈತಿಕ ಬಿಕ್ಕಟ್ಟುಗಳೇ. ಆದರೆ ಕಳೆದ ಇಪ್ಪತ್ತು ವರ್ಷಗಳ ಆರ್ಥಿಕ ನೀತಿಯ ಉದಾರತೆ,

ಕೆಲವರ ಏಳಿ ಅನುಚಿತ ಮಾರ್ಗಗಳ ಮೂಲಕ ಮಿತಿ ಇಲ್ಲದ ಹಣ ಶೇಖರಣೆಗೆ ದಾರಿ ಮಾಡಿಕೊಟ್ಟಿರುವುದೇ ಇವರು ಹೇಳುವಂತಹ ಇಂದಿನ ನೈತಿಕ ಬಿಕ್ಕಟ್ಟಿಗೆ ಕಾರಣವಾಗಿದೆ ಎಂಬುದು ಮೊದಲು ನಮಗೆ ಅರ್ಥವಾಗಬೇಕಿದೆ. ಹಣ ಮತ್ತು ನೈತಿಕತೆಯ ನಡುವಣ ಈ ನಿರ್ಣಾಯಕ ಸಂಬಂಧವನ್ನು ಅರ್ಥಮಾಡಿಕೊಳ್ಳದ ಹೊರತು, ಯಾವುದನ್ನು ಇಂದು ಭ್ರಷ್ಟಾಚಾರ ಎಂದು ಕರೆಯುತ್ತಿದ್ದೇವೆಯೋ ಅದು ಕಾನೂನಿಗೆ ಇರಲಿ, ಕಲ್ಪನೆಗೂ ಸಿಗದಂತೆ ಬೆಳೆದು ನಮ್ಮನ್ನು ನಮ್ಮ ರಾಷ್ಟ್ರದ ಸಹಿತ ನುಂಗಿ ಹಾಕಬಲ್ಲುದು. ಈ ಅರಿವು ಭಾರತ ಮಾತೆಯ ಭವ್ಯ ಚಿತ್ರವನ್ನು ಮುಂದಿಟ್ಟುಕೊಂಡು ಉಪವಾಸ ಮಾಡಿದ ಈ ಭ್ರಷ್ಟಾಚಾರ ವಿರೋಧಿ ಆಂದೋಲನಕಾರರಲ್ಲಿ ಮತ್ತು ಅದಕ್ಕಿಂತ ಮುಖ್ಯವಾಗಿ, ಅದರ ಟೀಕಾಕಾರರಲ್ಲಿ ಮೂಡಬೇಕಿದೆ. ಅದರ ಹೊರತಾಗಿ, ಈ ಜಗಳ, ಈ ತರ್ಕ, ಈ ಕಿತ್ತಾಟಗಳು ಲೋಕಪಾಲ ಮಸೂದೆ ಕಾಯಿದೆಯಾದ ನಂತರವೂ, ಭ್ರಷ್ಟಾಚಾರದೊಂದಿಗೆ ಮುಂದುವರೆದೇ ಇರುತ್ತದೆ!

ಈ ಹೊಸ ಉದಾರ ಆರ್ಥಿಕ ನೀತಿ ಜಾರಿಗೆ ಬಂದುದು, ನೆಹರೂ ಪ್ರಣೀತ ಮಿಶ್ರ ಆರ್ಥಿಕ ನೀತಿಯ ಹೆಸರಿನ 'ಸಮಾಜವಾದಿ' ರಾಜಕಾರಣದ ವೈಫಲ್ಯಕ್ಕೆ ಉತ್ತರವಾಗಿ ಎಂದು ಹೇಳಲಾಗುತ್ತದೆ. ಆ 'ಸಮಾಜವಾದ'ದ ದಿನಗಳನ್ನು, ಉದ್ಯಮಶೀಲತೆಯನ್ನು ಲಂಚಕೋರತನದಿಂದ ನಿರ್ಬಂಧಿಸುತ್ತಿದ್ದ 'ಲೈಸೆನ್ಸ್ ರಾಜ್ಯ'ವೆಂದೂ ಹಳಿಯಲಾಗುತ್ತಿದೆ. ಆದರೆ ಈಗ ಇದಕ್ಕೆ ಪ್ರತಿಯಾಗಿ ಸೃಷ್ಟಿಯಾಗಿರುವುದು ಎಂತಹ ರಾಜ್ಯ? ಇಂದು ನಾವು ಎಂತಹ, ಯಾವುದಕ್ಕೆ, ಎಂತಹ ಅನಾಹುತಕ್ಕೆ ಲೈಸೆನ್ಸ್ ನೀಡಿರುವ ರಾಜ್ಯದಲ್ಲಿ ಬದುಕುತ್ತಿದ್ದೇವೆ? ಇಂದು ಎಂತೆಂತಹ ಹೊಸ ಹೊಸ ವೈಯುಕ್ತಿಕ, ಕೌಟುಂಬಿಕ, ವೃತ್ತೀಯ ಮತ್ತು ಸಾಮಾಜಿಕ ಹಿಂಸೆಗಳು ನಮ್ಮ ದಿನ ನಿತ್ಯ ಬದುಕಿನಲ್ಲಿ ಆವಿಷ್ಕಾರಗೊಂಡಿವೆ ಎಂಬುದನ್ನು ಯಾರಾದರೂ ಗಮನಿಸಿದ್ದಾರಾ? ಇತ್ತೀಚೆಗೆ ತಾನೇ ಜಗತ್‌ಭೀಕರ ದುರಂತಕ್ಕೀಡಾದ ಜಪಾನ್‌ನ ಫುಕೋಶಿಮಾದ ಅಣು ಸ್ಥಾವರವನ್ನು ಕಟ್ಟಿದ ಸಮಾಜದ ಜೀವನ ಶೈಲಿ, ಗುರಿ ಮತ್ತು ಗತಿಯಾದರೂ ಯಾವುದು ಮತ್ತು ಈ ದುರಂತದ ಪರಿಣಾಮಗಳ ಸ್ವರೂಪವಾದರೂ ಏನು; ಮತ್ತೂ ಮುಖ್ಯವಾಗಿ, ಈ ಶೈಲಿ, ಗುರಿ, ಗತಿ ಹಾಗೂ ಪರಿಣಾಮಗಳಿಂದ ನಾವು ನಿಜವಾಗಿ ಎಷ್ಟು ದೂರದಲ್ಲಿದ್ದೇವೆ ಎಂಬುದರ ಕಡೆಗೆ ನಮ್ಮ ಗಮನ ಕೊಂಚವಾದರೂ ಹರಿದಿದೆಯೇ? ಗಮನಿಸುವಷ್ಟು ಸಂವೇದನಾಶೀಲತೆ ಇರಲಿ, ವ್ಯವಧಾನವಾದರೂ ಯಾರಿಗಾದರೂ ಇದೆಯಾ?

ಆಯಿತು ಗಮನಿಸುವ ಸೂಕ್ಷ್ಮತೆಗಳ ಈ ಗೋಜಲೇ ಬೇಡ, ಈ ಬಗ್ಗೆ ಎಲ್ಲವನ್ನೂ ಸಾರಾಂಶ ರೂಪದಲ್ಲಿ ಹೇಳುವ ಒಂದು ಗಟ್ಟಿ ಅಂಕಿ ಅಂಶವೇ ಇಲ್ಲಿದೆ ನೋಡಿ: ಸ್ವಿಸ್ ಬ್ಯಾಂಕುಗಳಲ್ಲಿ ಭಾರತೀಯರು ಇಟ್ಟಿರುವ ಕಳ್ಳಹಣದ ಮೂರನೇ ಎರಡು ಭಾಗ ಜಮಾ ಆಗಿರುವುದು ಕಳೆದ ಇಪ್ಪತ್ತು ವರ್ಷಗಳಿಂದ ಜಾರಿಗೆ ಬಂದಿರುವ ಈ 'ಹೊಸ ಲೈಸೆನ್ಸ್ ರಾಜ್ಯ'ದ ಅವಧಿಯಲ್ಲಿ ಎಂದು Global Financial Integrity ಪ್ರಕಟಿಸಿದೆ. ಇದು ಜಾಗತಿಕ

ಕಪ್ಪು ಹಣದ ಹಾವಳಿಯ ವಿರುದ್ಧ ಹೋರಾಡುತ್ತಿರುವ ಒಂದು ಸ್ವತಂತ್ರ ಸೇವಾ ಸಂಸ್ಥೆ. ಈಗಲಾದರೂ ಇದು ನಿಜವಾಗಿ ಯೋಚಿಸಬೇಕಾದ ವಿಚಾರ ಅನ್ನಿಸುತ್ತದೆಯೇ?

ಆದುದರಿಂದ ಈ ಎರಡೂ ರೀತಿಯ ಲೈಸೆನ್ಸ್ ರಾಜ್ಯಗಳ ಅನುಭವಗಳನ್ನು ಗಮನದಲ್ಲಿಟ್ಟುಕೊಂಡು, ಹೊಸ ಮಧ್ಯಮ ಮಾರ್ಗವೊಂದನ್ನು ನಾವು ರಾಜಕೀಯ ನೆಲೆಯಲ್ಲಿ ಕಂಡುಕೊಳ್ಳಲು ಸಾಧ್ಯವೇ? ಈ ಪ್ರಶ್ನೆ ಕುರಿತು ಗಂಭೀರವಾಗಿ ಯೋಚಿಸುವ ಕಾಲ ಈಗ ಬಂದಿದೆ ಎನಿಸುತ್ತದೆ. ಹಾಗಾಗಿಯೇ ಏನೋ– ಕಾಲದ ಈ ಒತ್ತಡಕ್ಕೆ ಸಿಕ್ಕಿಯೇ ಏನೋ– ಹೀಗೆ ಆಲೋಚಿಸಲು ಪ್ರೇರೇಪಿಸುವಂತಹ ನಮ್ಮ ಇತ್ತೀಚಿನ ಇತಿಹಾಸದ ನಿರ್ಲಕ್ಷಿತ ಅಧ್ಯಾಯಗಳಲ್ಲಿ ಹುದುಗಿರುವ ವೈಚಾರಿಕ ವಿನ್ಯಾಸಗಳ ಮತ್ತು ಅನುಭವ ಸಾಮಗ್ರಿಗಳ ಉತ್ಖನನ ಹೊಸ ಉತ್ಸಾಹದೊಂದಿಗೆ ಆರಂಭವಾಗಿದೆ. ಅದರತ್ತ ನಾವೀಗ ತುರ್ತು ಗಮನ ಮತ್ತು ಹೊಸ ನೋಟ ಬೀರಬೇಕಿದೆ. ಇಂತಹ ಸಂದರ್ಭದಲ್ಲಿ ಈ ಮೇಲಿನ ಪ್ರಶ್ನೆಯನ್ನು ಮುಖಾಮುಖಿ ಮಾಡಿಕೊಳ್ಳುವ ರೀತಿಯಲ್ಲಿ ಸದ್ಯದ ಭ್ರಷ್ಟಾಚಾರ ವಿರೋಧಿ ಆಂದೋಲನವನ್ನು ಲೋಕಪಾಲ ಮಸೂದೆಯ ರಚನೆಯ ಆಚೆಗೂ ವಿಸ್ತರಿಸಿ ಬೆಳೆಸಬೇಕಿದೆ. ಆಗ ಮಾತ್ರ ಅಣ್ಣಾ ಹಜ಼ಾರೆ ಅವರ ನೇತೃತ್ವದ ಸಮಿತಿ ಕುರಿತು ನಮ್ಮ ಆಕ್ಷೇಪಣೆಗಳನ್ನು ದಾಖಲಿಸುವ ನೈತಿಕ ಅಧಿಕಾರ ನಮಗೆ ಬಂದೀತು.

('ಸಂವಾದ'ದ ಮೇ, ೨೦೧೧ರ ಸಂಚಿಕೆಯಲ್ಲಿ ಪ್ರಕಟಿತ)

ಒಂದು ಪತ್ರ:

ಪ್ರಿಯ ಶಿವಸುಂದರ್,

ಅಣ್ಣಾ ಹಜಾರೆ ಆಂದೋಲನ ಕುರಿತ ನಿಮ್ಮ ಬರಹ ಕಳಿಸಿ ಅಭಿಪ್ರಾಯ ಕೇಳಿರುವ ನಿಮ್ಮ ವಿಶ್ವಾಸಕ್ಕಾಗಿ ವಂದನೆಗಳು ಈಗ ತಾನೇ ನಿಮ್ಮ ಬರಹ ಓದಿದೆ. ಯಾರು ಏನು ಮಾಡಿದರೂ, ಅದು ನಾವು ಹೇಳಿದಂತೆ ಆಗದಿದ್ದರೆ ಅದು ಜನವಿರೋಧಿಯೇ ಎಂಬ ನಿಮ್ಮ ಎಂದಿನ ನಿಲುವು ಇದರಲ್ಲೂ ಕಾಣುತ್ತಿದೆ. ಅಂದ ಮಾತ್ರಕ್ಕೆ ನೀವು ಈ ಬರಹದಲ್ಲಿ ಎತ್ತಿರುವ ಕೆಲವು ಪ್ರಶ್ನೆಗಳನ್ನು ಗಮನಿಸದಿರಲಾಗುವುದಿಲ್ಲ. ಆದರೆ ಈ ಪ್ರಶ್ನೆಗಳಿಗೆ ಪರಿಹಾರವಾಗಿ ನೀವು ಹೇಳುವ 'ಅಧಿಕಾರ ಮತ್ತು ಅಧಿಕಾರಸ್ಥರ ಮೇಲೆ ಜನಸಮುದಾಯದ ನಿಯಂತ್ರಣ ಬರುವಂಥ ಪರ್ಯಾಯ ರಾಜಕೀಯ ಆರ್ಥಿಕ ವ್ಯವಸ್ಥೆ ರೂಪುಗೊಳ್ಳುವ', 'ನಿಜವಾದ ಅರ್ಥದಲ್ಲಿ ಪ್ರಜೆಯೇ ಪ್ರಭುವಾಗುವ' ಮತ್ತು 'ವ್ಯವಸ್ಥೆಯು ಪ್ರಜಾತಾಂತ್ರೀಕರಣವಾಗುವ' ರಾಜಕೀಯ ಪ್ರಕ್ರಿಯೆಯ ಸ್ವರೂಪ ಮತ್ತು ವಿವರಗಳನ್ನು ನೀಡದೆ ಹೀಗೆ ಸ್ಥೂಲವಾಗಿ ಮಾತನಾಡುವುದರಿಂದ ಯಾವ ಪ್ರಯೋಜನವೂ ಆಗದೆಂದೇ ನನ್ನ ಅಭಿಪ್ರಾಯ.

ನೀವು ಈ ಸಂಬಂಧ 'ಮೊದಲಿಂದಲೂ ಸಮಾಜದ ಪ್ರಜಾತಂತ್ರೀಕರಣಗೊಳಿಸುವ ಪ್ರಕ್ರಿಯೆಯಲ್ಲಿ ತೊಡಗಿಕೊಂಡೇ ಇರುವ' ಎಂದು ವರ್ಣಿಸುವ 'ಜನಪರ ಚಳುವಳಿ'ಗಳಾದರೂ ಯಾವುವು ಎಂಬುದನ್ನು ನಿರ್ದಿಷ್ಟವಾಗಿ ಗುರುತಿಸಿ ಹೇಳುವುದಾದರೆ ನಿಮ್ಮ ಬರಹದಲ್ಲಿ ಪ್ರಸ್ತಾಪಿಸಿರುವ ಅಂಶಗಳ ಬಗ್ಗೆ ಒಂದು ನಿಲುವು ತಳೆಯಲು ಮತ್ತು ಅದನ್ನು ಹೇಳಲು ಸಾಧ್ಯವಾಗಬಹುದು. ಏಕೆಂದರೆ, 'ಜನಪರ' ಎಂಬುದು ಇತ್ತೀಚಿನ ವರ್ಷಗಳಲ್ಲಿ ಬಹು ಸ್ಥೂಲ ಶಬ್ದವಾಗಿದ್ದು, ಅದು ಏನನ್ನೂ ಸೂಚಿಸದ ಮತ್ತು ಅದೇ ಸಮಯದಲ್ಲಿ ಏನೆಲ್ಲ ಸೂಚಿಸುವ ಬರಡು ಶಬ್ದವಾಗಿ ಹೋಗಿದೆ. ಇಲ್ಲಾ, 'ಜನಪರ' ಎಂದರೆ ಗೊತ್ತಾಗುವವರಿಗೆ ಗೊತ್ತಾಗುತ್ತದೆ ಎಂದು ನೀವು ಹೇಳಿದರೆ, ನನ್ನ ಉತ್ತರ; ಅಣ್ಣಾ ಹಜ಼ಾರೆ ಅವರ ಆಂದೋಲನದ ವೈರುಧ್ಯಗಳ ಬಗ್ಗೆ ನೀವು ಬರೆಯದಿದ್ದರೂ, ಗೊತ್ತಾಗುವವರಿಗೆ ಗೊತ್ತಾಗುತ್ತಿತ್ತು ಎಂಬುದೇ ಆಗಿದೆ.

ಒಟ್ಟಿನಲ್ಲಿ ನಾನು ಹೇಳುವುದು, ಇಂತಹ ಚರ್ಚೆ, ಚಳುವಳಿಗಳ ಮಾತು ಸಾಕಾಗಿದೆ. ಸಮಾಜ– ರಾಜ್ಯ– ರಾಷ್ಟ್ರ ಎನ್ನುವ ಸಂಗತಿಗಳೇ ಇಂದು ಭಾರಿ ಸಂಪನ್ಮೂಲಗಳ ಸೌಲಭ್ಯವಿಲ್ಲದ ಜನಸಾಮಾನ್ಯರ ಹಿಡಿತಕ್ಕೆ ಸಿಗದ 'ವಸ್ತು'ಗಳಾಗಿ ಹೋಗಿವೆ. ಸಿಕ್ಕರೂ, ನಾವು ಏನು ಮಾಡಲು ಹೋದರೂ ಅದು ಇನ್ನೇನೋ ಆಗುವ ಸಂಭವವೇ ಹೆಚ್ಚು! ಅವು ಅಷ್ಟು ಜಟಿಲವೂ ಹೌದು! ಹಾಗಾಗಿ ನಾವು ಏನು ಹೇಳುತ್ತೇವೋ ಅದನ್ನು ಸದ್ಯಕ್ಕೆ ನಮ್ಮ ಸನಿಹದಲ್ಲಿ ಕಾರ್ಯಕ್ರಮ ರೂಪದಲ್ಲಿ ಮಾಡಿ ತೋರಿಸೋಣ. ಅದೇ ನಮ್ಮ ಚರ್ಚೆ, ಚಳುವಳಿಗಳ ಬುನಾದಿಯಾಗಲಿ. ಆ ಮೂಲಕವೇ ಈ ಸಮಾಜ– ರಾಜ್ಯ– ರಾಷ್ಟ್ರಗಳ ಕಲ್ಪನೆಯನ್ನು ವಿರಚಿಸುವ ಪ್ರಯತ್ನ ಮಾಡಬಹುದೆಂಬುದು ನನ್ನ ಸದ್ಯದ ನಂಬಿಕೆ.

ಇದೇ ವಿಷಯವಾಗಿ 'ಸಂವಾದ'ದಲ್ಲಿ ನಾನು ಬರೆದ ಲೇಖನವನ್ನು ನೀವು ಗಮನಿಸಿರುವಿರಿ ಎಂದು ಭಾವಿಸುವೆ.

(ಜೂನ್, ೨೦೧೧– ಅಂತರ್ಜಾಲದಲ್ಲಿ)

✧✧✧

೨೮. ಜನ ಲೋಕಪಾಲ ಆಂದೋಲನ: ಅನಗತ್ಯ ಟೀಕೆ, ಆತಂಕ, ಅಡ್ಡಿ ಬೇಡ

ಪ್ರಿಯಶ್ರೀ ದಿನೇಶ್ ಅಮೀನ್‌ಮಟ್ಟು ಅವರಲ್ಲಿ,

ಇಂದಿನ (೧೩.೬.೨೦೧೧) 'ಪ್ರಜಾವಾಣಿ'ಯ ನಿಮ್ಮ ಅಂಕಣದಲ್ಲಿ ಜನಲೋಕಪಾಲ ಮಸೂದೆಯ ಕರಡನ್ನು ಸಿದ್ಧಪಡಿಸುವುದಕ್ಕೆ ಸಂಬಂಧಿಸಿದಂತೆ ನಾಗರಿಕ ಸಮಾಜದ ರೂಪದಲ್ಲಿ ಸಂವಿಧಾನೇತರ ಶಕ್ತಿಗಳ ಕೈವಾಡ ಹೆಚ್ಚುತ್ತಿದೆ ಎಂದು ಆತಂಕ ವ್ಯಕ್ತಪಡಿಸಿ ನೀವು ಬರೆದದ್ದನ್ನು ಓದಿದೆ. ನಿಮ್ಮ ವಾದ ಒಂದು ಆದರ್ಶ ಅಥವಾ ಪ್ರಬುದ್ಧ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮಾತ್ರ ಸರಿಯೆನಿಸೀತೇನೋ! ನಿಮ್ಮ ಬರಹದ ಕೊನೆಯಲ್ಲಿ ಹಾಕಿರುವ, 'ಇದರಿಂದ ಸಂಸದೀಯ ಪ್ರಜಾಪ್ರಭುತ್ವ ದುರ್ಬಲಗೊಳ್ಳುವುದಿಲ್ಲವೇ?' ಎಂಬ ಪ್ರಶ್ನೆಯನ್ನು ನಿಮ್ಮ ಬರಹದ ಆರಂಭದಲ್ಲೇ ಹಾಕಿಕೊಂಡು, ಇಂದಿನ ನಮ್ಮ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆ ಮುಟ್ಟಿರುವ ಸ್ಥಿತಿಯನ್ನು ವಿಶ್ಲೇಷಿಸುವ ಪ್ರಯತ್ನ ಮಾಡಿದ್ದರೆ ಬಹುಶಃ ನೀವು ಹೀಗೆ ವಾದ ಮಾಡುತ್ತಿರಲಿಲ್ಲ!

ಪ್ರಜಾಪ್ರಭುತ್ವ ಈಗಾಗಲೇ ನಿರ್ಣಾಯಕವೆನ್ನಿಸುವಷ್ಟು ದುರ್ಬಲಗೊಂಡಾಗಿದೆ ಅಲ್ಲವೇ? ಅದರಿಂದಾಗಿಯೇ ಇಷ್ಟೆಲ್ಲ ಗೊಂದಲಗಳಲ್ಲವೇ, ಸಾಂವಿಧಾನಿಕ– ಅಸಂವಿಧಾನಿಕ ಶಕ್ತಿಗಳನ್ನು ಕುರಿತ ಚರ್ಚೆಗಳಲ್ಲವೇ? ಪ್ರಜಾಪ್ರಭುತ್ವ ಇಂದು ದುರ್ಬಲಗೊಂಡಿರುವುದು, ಯಾವುದನ್ನು ನೀವು ಇವು ಮಾತ್ರ– ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ– ಸಾಂವಿಧಾನಿಕ ಶಕ್ತಿಗಳು ಎಂದು ಮಾನ್ಯತೆ ನೀಡಿರುವಿರೋ, ಅವುಗಳ ವೈಫಲ್ಯಗಳಿಂದಲೇ ಅಲ್ಲವೇ? ಸಭ್ಯ ಸಾಮಾನ್ಯ ನಾಗರಿಕರಾರೂ ಚುನಾವಣೆಗಳಿಗೆ ನಿಂತು ನೀವು ಚೌಕಟ್ಟು ಹಾಕಿರುವಂತಹ ಸಂವಿಧಾನಿಕ ಶಕ್ತಿಗಳಾಗಲು ಸಾಧ್ಯವೇ ಇಲ್ಲದಂತಹ ಪರಿಸ್ಥಿತಿಯನ್ನು ಇವು ಮೂರೂ ಸೇರಿ ಉಂಟು ಮಾಡಿರುವಾಗ ನೀವು ಯಾವ ತೆರೆನ ಸಾಂವಿಧಾನಿಕ ಶಕ್ತಿಯ ಬಗ್ಗೆ ಮಾತನಾಡುತ್ತಿರುವಿರೋ ನನಗೆ ತಿಳಿಯದಾಗಿದೆ!

ನಾಗರಿಕ ಸಮುದಾಯವೂ, ತನಗೆ ದತ್ತವಾಗಿರುವ 'ಪ್ರಜೆತನ'ದಿಂದಾಗಿ ಸಾಂವಿಧಾನಿಕ ಶಕ್ತಿಯ ಒಂದು ಭಾಗವೇ ಆಗಿದೆ. (ಇದನ್ನು ಬೇಕಾದರೆ ಸುಪ್ತ ಸಾಂವಿಧಾನಿಕ ಶಕ್ತಿಯೆಂದು ಕರೆಯಬಹುದು.) ನೀವು ಹೇಳುವ ಸಾಂವಿಧಾನಿಕ ಶಕ್ತಿ (ಇದನ್ನು ಕ್ರಿಯಾತ್ಮಕ ಸಾಂವಿಧಾನಿಕ ಶಕ್ತಿಂದು ಕರೆಯಬಹುದು.), ಇದರ ಪ್ರಾತಿನಿಧಿಕ ರೂಪವಷ್ಟೇ. ಹಾಗಾಗಿ

ಈ ಪ್ರಾತಿನಿಧಿಕ ಶಕ್ತಿ ರೂಪ, ಯಾವುದರ ಬಲದಿಂದ ತಾನು ಮೂಡಲು ಸಾಧ್ಯವಾಗಿದೆಯೋ ಆ ಸಂವಿಧಾನದ ಮೂಲ ಉದ್ದೇಶಗಳನ್ನೇ, ಅದರ ಪ್ರಕ್ರಿಯೆಗಳನ್ನೇ ಬುಡಮೇಲು ಮಾಡ ಬಲ್ಲಷ್ಟು ರಾಕ್ಷಸವಾದಾಗ, ಅದರ ಮೂಲಾಧಾರವಾದ ಪ್ರಜಾಶಕ್ತಿಯ ರೂಪದಲ್ಲಿರುವ (ಸುಪ್ತ)ಸಾಂವಿಧಾನಿಕ ಶಕ್ತಿಯು ಎಚ್ಚರಗೊಳ್ಳುವುದೂ ಒಂದು ಸಾಂವಿಧಾನಿಕ ಪ್ರಕ್ರಿಯೆಯೇ ಎಂದು ನಾನು ಭಾವಿಸಿದ್ದೇನೆ. ನೀವು ಸಂವಿಧಾನೇತರವೆಂದು ಗುರುತಿಸುವ ಈ ಶಕ್ತಿಗಳೂ ಜನತೆಯ ಸಾಮೂಹಿಕ ಬೆಂಬಲ ಪಡೆದಿರುವುದರಿಂದಲೇ ಅವು ಸರ್ಕಾರದ ಮೇಲೆ ಒತ್ತಡ ಉಂಟು ಮಾಡಲು ಸಾಧ್ಯವಾಗಿರುವುದು ಅಲ್ಲವೇ? ಅವಕ್ಕೆ ಜನ ಬೆಂಬಲ ಇಲ್ಲವಾದ ಕೂಡಲೇ–ಈಗ ಬಾಬಾ ರಾಂದೇವ್‌ಗೆ ಆಗುತ್ತಿರುವಂತೆ–ಅವುಗಳ ಪರಿಣಾಮವೂ ಕುಂದುತ್ತಾ ಹೋಗುತ್ತದೆ.

ನೀವು ನಿಮ್ಮ ವಾದದ ಭಾಗವಾಗಿ ಪ್ರಸ್ತಾಪಿಸುವ ಆರೆಸ್ಸೆಸ್ ಅಥವಾ ಇನ್ನಿತರ ಫ್ಯಾಸಿಸ್ಟ್ ಶಕ್ತಿಗಳ ಕೈವಾಡವನ್ನು ಜನತಾ ಶಕ್ತಿಯೇ ನಿರ್ವಹಿಸಬಲ್ಲುದಾಗಿದೆ ಮತ್ತು ಜನತಾ ಶಕ್ತಿ ಮಾತ್ರ ನಿರ್ವಹಿಸಬೇಕಾಗಿದೆ. ಆ ದಿಕ್ಕಿನಲ್ಲಿ ಜನತೆಯನ್ನು ಎಚ್ಚರಿಸುವ ಕೆಲಸವನ್ನು (ಈಗ ಬಾಬಾ ರಾಂದೇವ್ ಅವರ ಆಂದೋಲನದ ಬಗ್ಗೆ ಮಾಡಿದಂತೆ) ಮಾಡುವುದು ಪ್ರಜ್ಞಾವಂತಿಕೆಯ ಕೆಲಸವಾದೀತೇ ಹೊರತು, ಸಾರಾ ಸಗಟಾಗಿ ಜನತಾ ಶಕ್ತಿಯ ಒಂದು ಅಭಿವ್ಯಕ್ತಿ ಕ್ರಮವನ್ನು ಇಂತಹ ಕಾರಣಗಳಿಂದಾಗಿ (ಮತ್ತು ಕೆಲವು ಸಾಮಾಜಿಕ ನ್ಯಾಯ ವಾದಿಗಳು ನಮ್ಮ ಪ್ರಜಾಪ್ರಭುತ್ವದ ಆಧಾರಗಳನ್ನೇ ಬುಡಮೇಲುಗೊಳಿಸಲು ಹೊರಟಿರುವ ಇಂದಿನ ಬೃಹತ್ ಭ್ರಷ್ಟಾಚಾರದ ಬಗ್ಗೆ ಈಗ ಎಚ್ಚೆತ್ತುಕೊಂಡವರಂತೆ,ಈ ಸಮಿತಿಯಲ್ಲಿ ಹಿಂದುಳಿದವರಿಲ್ಲ, ಅಲ್ಪಸಂಖ್ಯಾತರಿಲ್ಲ, ದಲಿತರಿಲ್ಲ, ಮಹಿಳೆಯರಿಲ್ಲ ಎಂದು ಹಾಕುತ್ತಿರುವ ಬೊಬ್ಬೆಯ ಕಾರಣವೂ ಸೇರಿದಂತೆ) ಅಸಂವಿಧಾನಿಕ ಎಂದು ಗುರುತಿಸುವುದು ಸಂಸದೀಯ ಪ್ರಜಾಪ್ರಭುತ್ವವನ್ನು ಕೇವಲ ತಾಂತ್ರಿಕ ಚೌಕಟ್ಟಿನೊಳಕ್ಕೆ ತುರುಕಿ ಉಸಿರುಗಟ್ಟಿಸುವ ಅಪಾಯಕಾರೀ ಕೆಲಸವಾದೀತೆಂದು ನನ್ನ ಭಾವನೆ. ನಿಮ್ಮ ವಾದವೇ ಸರಿಯಿದ್ದರೆ, ಎಪ್ಪತ್ತರ ದಶಕದ ಜೆಪಿ ಆಂದೋಲನವೇ ಸಾಧ್ಯವಾಗುತ್ತಿರಲಿಲ್ಲ. ಅಂದು ಈ ಆಂದೋಲನದ ಬಗ್ಗೆಯೂ ಸರಿ ಸುಮಾರು ಇಂತಹುದೇ ಆಕ್ಷೇಪಣೆಗಳನ್ನು ಎತ್ತಲಾಯಿತು. (ಅವನ್ನು ಪುನರುಚ್ಚರಿಸುವ ಜನ ಈಗಲೂ ಇದ್ದಾರೆ ಎಂಬುದು ಬೇರೆ ವಿಷಯ.) ಆದರೆ ಜೆಪಿ ಆಂದೋಲನ ನಡೆಯದಿದ್ದರೆ, ಯಾವ ಸಾಂವಿಧಾನಿಕ ಸಂಸದೀಯ ಪ್ರಜಾಪ್ರಭುತ್ವದ ರಕ್ಷಣೆಯ ಕಳಕಳಿಯನ್ನು ನೀವು ಇಂದು ತೋರಿಸುತ್ತಿದ್ದೀರೋ ಆ ಪ್ರಜಾಪ್ರಭುತ್ವ ಖಂಡಿತ ನಮ್ಮ ಪಾಲಿಗೆ ಹೀಗಂತೂ ಇರುತ್ತಿರಲಿಲ್ಲ.

ಇನ್ನು ನೀವು ಸೋನಿಯಾ ಗಾಂಧಿ– ರಾಷ್ಟ್ರೀಯ ಸಲಹಾ ಮಂಡಳಿ (ಎನ್.ಎ.ಸಿ.)– ಮನಮೋಹನ ಸಿಂಗ್ ಈ ತ್ರಿಕೂಟದರ ನಡುವಣ ಸಾಂವಿಧಾನಿಕ ಸಂಬಂಧಗಳು ಮತ್ತು ಇವುಗಳ ಹಿನ್ನೆಲೆಯಲ್ಲಿ ಇಂದಿನ ಈ ಪರಿಸ್ಥಿತಿಯಲ್ಲಿ ಜನತಾ ಶಕ್ತಿಯ ಅತ್ಯಂತಿಕ ರೂಪವಾಗಿರುವ ಪ್ರಧಾನಿ ಸ್ಥಾನ ಅ– ಪ್ರಧಾನವಾಗುತ್ತಿರುವ ಆತಂಕದ ಬಗ್ಗೆ ಪ್ರಸ್ತಾಪಿಸಿರುವಿರಿ. ಇದರ ಬಗ್ಗೆ ಹೇಳುವುದಾದರೆ, ಮೊದಲಾಗಿ ಮನಮೋಹನ ಸಿಂಗರು ಯಾವ ಜನತಾ

ಶಕ್ತಿಯ, ಎಂತಹ ಪ್ರತಿನಿಧಿಯೆಂದು ಮೊದಲು ಯೋಚಿಸಬೇಕಾಗುತ್ತದೆ. ಅಣ್ಣಾ ಹಜಾರೆ ಮತ್ತವರ ಸಹವರ್ತಿಗಳೋ ಅಥವಾ ಬಾಬಾ ರಾಂದೇವ್‌ರೋ ಆರೆಸ್ಸೆಸ್ ಕೈಗೊಂಬೆಗಳೇ ಆಗಿದ್ದಾರೆಂದು ಹೇಳುವುದಾದರೆ, ಈ ಮನಮೋಹನ ಸಿಂಗ್ ಮೂಲತಃ ಯಾರ ಕೈಗೊಂಬೆ ಎಂದು ಕೇಳಬಹುದಲ್ಲವೇ? ಇವರು ಮೊದಲು ಸುಳ್ಳು ವಿಳಾಸ ನೀಡಿ ಸಂವಿಧಾನದ ನಿಯಮವನ್ನೇ ಉಲ್ಲಂಘಿಸಿ ಸಂಸತ್ತನ್ನು ಪ್ರವೇಶಿಸಿ, ಸಚಿವರೂ ಆದರು. ನಂತರ ಜನತೆಯ ಆದೇಶವಿಲ್ಲದೆಯೇ ದೇಶದ ಅಭಿವೃದ್ಧಿಯ ಆದ್ಯತೆ ಮತ್ತು ಸ್ವರೂಪಗಳನ್ನೇ ಮೂಲಭೂತವಾಗಿ ಬದಲಿಸಿದ ಈ ಮನಮೋಹನ ಸಿಂಗರು, ಈಗ ನಮ್ಮ ಸಂವಿಧಾನ ನಿರ್ಮಾತೃಗಳು ಬಹುಶಃ ತುರ್ತು ಸಂದರ್ಭಗಳಿಗಿರಲೆಂದು ಮಾಡಿಕೊಟ್ಟ ರಾಜ್ಯಸಭಾ ಸದಸ್ಯರೂ ಪ್ರಧಾನ ಮಂತ್ರಿಗಳಾಗಬಹುದೆಂಬ ಅವಕಾಶವನ್ನು ಬಳಸಿಕೊಂಡು ಎರಡನೇ ಬಾರಿಗೆ ಪ್ರಧಾನ ಮಂತ್ರಿಯಾಗಿರುವವರು! ಇವರು ಪ್ರಧಾನ ಮಂತ್ರಿಯಾಗಿರುವುದೇ ಸೋನಿಯಾ ಅವರ ಕೃಪೆಯಿಂದ ಎಂಬುದು ಸಾರ್ವಜನಿಕವಾಗಿ ಬಹಿರಂಗವಾದ ವಿಚಾರ. ಹೀಗಿರುವಾಗ ಇವರು ಎಂತಹ ರಾಜಕೀಯ ಅಧಿಕಾರಕ್ಕೆ ಬಾಧ್ಯಸ್ಥರಾಗಬಲ್ಲರು? ಹಾಗೆ ಇವರು ಬಾಧ್ಯಸ್ಥರಾಗಿಲ್ಲದಿರುವುದರಿಂದಲೇ, ಸೋನಿಯಾ ಗಾಂಧಿಯವರು ರಾಷ್ಟ್ರೀಯ ಸಲಹಾ ಮಂಡಳಿ ಎಂಬ ಸಮಾನಾಂತರ ಅಧಿಕಾರ ಪ್ರಾಧಿಕಾರವೊಂದನ್ನು ರಚಿಸಿ ಆಡಳಿತ ನೀತಿ ಹಾಗೂ ಅನುಷ್ಠಾನಕ್ಕೆ ಸಂಬಂಧಿಸಿದ ಪರಿಣಿತಿಯನ್ನು 'ಹೊರಗುತ್ತಿಗೆ'ಯ ಮೂಲಕ ಪಡೆಯುವ ಅನಿವಾರ್ಯತೆಗೆ ಸಿಕ್ಕಿರುವುದು ಅಲ್ಲವೇ? ಅಂದಹಾಗೆ ಈ 'ಹೊರ ಗುತ್ತಿಗೆ' ಪದ್ಧತಿ ಯಾರ ಕೊಡುಗೆ? ಹಾಗೆ ನೋಡಿದರೆ, ಇಂದಿನ ಎಲ್ಲ ರಾಜಕೀಯ ಬಿಕ್ಕಟ್ಟುಗಳಿಗೆ ರಾಜ್ಯಸಭಾ ಸದಸ್ಯರೊಬ್ಬರು ದೀರ್ಘಕಾಲಿಕವಾಗಿ ಪ್ರಧಾನ ಮಂತ್ರಿಯಾಗಿರುವುದೇ ಕಾರಣವೆಂದು ನಾನು ಭಾವಿಸುತ್ತೇನೆ.

ಹೀಗೆ ಪ್ರಜಾಪ್ರಭುತ್ವವೆಂಬುದೇ ಮೂಲಾಧಾರಗಳನ್ನು ಕಳಚಿಕೊಂಡು, ಹೊಸ ಸಂದರ್ಭಕ್ಕೆ ತನ್ನನ್ನು ತಾನು ಅಳವಡಿಕೊಳ್ಳುತ್ತಿರುವ ಇಂತಹ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಆದರ್ಶ ಪ್ರಜಾಪ್ರಭುತ್ವದ ಆದರ್ಶಗಳ ಪಾಲನೆಯ ಮಾತಾಡುವುದು, ರೋಗ ಲಕ್ಷಣಗಳನ್ನೇ ರೋಗವೆಂದು ಗುರುತಿಸಿ ಆತಂಕಗೊಳ್ಳುವ ಕೆಲಸವಾಗುತ್ತದೆ. ನೀವು ಸಂವಿಧಾನೇತರ ಶಕ್ತಿಗಳು ಎಂದು ಕರೆಯುವ ಈ ನಾಗರಿಕ ಸಮಿತಿಗಳು ನೀವು ಹೇಳಿದಂತೆ ಅಂತಿಮ ಶಾಸನ ರಚಿಸುವ ಕೆಲಸವನ್ನೇನೂ ಮಾಡುತ್ತಿಲ್ಲ. ಅವರದೇನಿದ್ದರೂ, ಸರ್ಕಾರದೊಂದಿಗೆ ಅನುಸಂಧಾನಿಸುತ್ತಾ (ಈಗ ಅದೂ ವಿಫಲವಾಗಿ, ನೇರವಾಗಿ ಜನತೆಯೊಂದಿಗೆ ಅನುಸಂಧಾನಿಸುತ್ತಾ) ಕರಡು ಮಸೂದೆಯನ್ನೋ ನೀತಿ ನಿರೂಪಣೆಯನ್ನೋ ಸಿದ್ಧಪಡಿಸುವುದಷ್ಟೆ. ಅದರ ಮೇಲೆ, ಸಚಿವ ಸಂಪುಟವಿದೆ, ಸಂಸತ್ತಿದೆ, ಅದರದೇ ಆದ ಅಂಗ ಸಂಸ್ಥೆಗಳಿವೆ, ಅವನ್ನು ಅಂತಿಮವಾಗಿ ಒಪ್ಪಲು ಅಥವಾ ಬಿಡಲು.

ಆದುದರಿಂದ ನೀವು ಹೇಳುವಂತಹ ಸಂವಿಧಾನೇತರ ಶಕ್ತಿಗಳು ಸಂವೈಧಾನಿಕವಾಗಿ ನಿರ್ಣಾಯಕವೆನ್ನಬಹುದಾದ ಕೆಲಸಗಳಲ್ಲೇನೂ ತೊಡಗಿಲ್ಲ. ನಮ್ಮ ಸಂವಿಧಾನದ ಕ್ರಿಯಾತ್ಮಕ ಅಂಗಗಳಾದ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ಹಾಗೂ ನಾಲ್ಕನೇ

ಅನೌಪಚಾರಿಕ ಅಂಗವೆನಿಸಿದ ಮಾಧ್ಯಮ ರಂಗ ನಿಧಾನವಾಗಿ ಭ್ರಷ್ಟತೆಯ ಗಂಭೀರ ಆರೋಪಗಳನ್ನು ಎದುರಿಸುವಂತಾಗಿ, ಇವುಗಳನ್ನಾಧರಿಸಿದ ಪ್ರಜಾಪ್ರಭುತ್ವವೇ ಅರ್ಥಹೀನವೆನ್ನಿಸತೊಡಗಿ ಅಪಾಯಕ್ಕೆ ಸಿಕ್ಕಿರುವ ಸಂದರ್ಭವಿದು. ಇಂತಹ ಸಂದರ್ಭದಲ್ಲಿ, ಸಂವಿಧಾನದ ಸುಪ್ತ ಶಕ್ತಿಯೆನಿಸಿರುವ ಜನತಾ ಶಕ್ತಿಯ ಪ್ರತಿನಿಧಿಯಾಗಿ ನಾಗರಿಕ ಸಮಿತಿಗಳು ಕ್ರಿಯಾಶೀಲವಾಗತೊಡಗುವುದು ನಮಗೆ ಭರವಸೆಯ ಬೆಳಕಾಗಿ ಕಾಣಬೇಕೇ ಹೊರತು, ಕೆಡುಕಿನ ಸೂಚನೆಯಾಗಿ ಅಲ್ಲ. ಜನತಾ ಶಕ್ತಿ ಪ್ರಜಾಪ್ರಭುತ್ವಕ್ಕೆ ಉಂಟಾಗಿರುವ ಅಪಾಯದ ಬಗ್ಗೆ ಎಷ್ಟು ಸೂಕ್ಷ್ಮ ಹಾಗೂ ಕ್ರಿಯಾಶೀಲವಾಗಿರುತ್ತದೋ ಅಷ್ಟು ಮಾತ್ರ ಈ ನಾಗರೀಕ ಸಮಿತಿಗಳು ಸೂಕ್ಷ್ಮ ಹಾಗೂ ಕ್ರಿಯಾಶೀಲವಾಗಿರಬಲ್ಲವು. ಹಾಗಾಗಿ ಈ ನಾಗರಿಕ ಸಮಿತಿಗಳ ಮಿತಿಗಳು ಮತ್ತು ಅತಿಗಳ ಬಗ್ಗೆ ದೂರುತ್ತಾ ಕೂರುವುದಕ್ಕಿಂತ, ಜನತಾ ಶಕ್ತಿಯನ್ನು ಹೆಚ್ಚು ಸೂಕ್ಷ್ಮ ಹಾಗೂ ಕ್ರಿಯಾಶೀಲಗೊಳಿಸುವತ್ತ ಗಮನ ಹರಿಸುವುದು ಪ್ರಜ್ಞಾವಂತರ ಕೆಲಸವಾಗಬೇಕು.

ನಿಮ್ಮ ಪತ್ರಿಕೆಯಲ್ಲಿ ಯಾವುದಾವುದೋ ತಾಂತ್ರಿಕ ಕಾರಣಗಳ ಮೇಲೆ ಓದುಗರಿಗೆ ದೀರ್ಘ ಪ್ರತಿಕ್ರಿಯೆ ಹಾಗೂ ಸಂವಾದಕ್ಕೆ ಅವಕಾಶವಿಲ್ಲದಿರುವುದರಿಂದ ನಿಮಗೆ ನೇರವಾಗಿ ಬರೆದಿರುವೆ. ನೀವು ಗಮನಿಸಿದ ಮೇಲೆ ಇದನ್ನು ನನ್ನ ಇತರ ಕೆಲವು ಗೆಳೆಯರಿಗೆ ತಲುಪಿಸುವ ಇರಾದೆ ನನ್ನದು.

('ನವ ಮಾನವ ಮಾಸಿಕ'ದ– ೨೦೧೧ರ ಆಗಸ್ಟ್ ಸಂಚಿಕೆಯಲ್ಲಿ ಪ್ರಕಟ)

ಒಂದು ಪತ್ರ

ಪ್ರಿಯ ದಿನೇಶ್ ಅಮೀನ್‌ಮಟ್ಟು ಅವರೇ,

ಯಾಕೋ ಪ್ರತಿವಾರ ನಿಮಗೆ ಅಣ್ಣಾ ಹಜಾರೆ ಅವರ ಭ್ರಷ್ಟಾಚಾರ ವಿರೋಧಿ ಆಂದೋಲನದ ಬಗ್ಗೆ ಟೀಕಾತ್ಮಕ ಟಿಪ್ಪಣಿ ಬರೆಯದೆ ತೃಪ್ತಿಯಾಗುವುದಿಲ್ಲವೆಂದು ಕಾಣುತ್ತದೆ! ಅಂದ ಮಾತ್ರಕ್ಕೆ ಹಜಾರೆ ಆಂದೋಲನ ಟೀಕಾತೀತವೆಂದು ನಾನಂತೂ ಹೇಳುತ್ತಿಲ್ಲ. ಆದರೆ ನೀವು, ಅದರ ಬೇಡಿಕೆಗಳು ಎಷ್ಟು ಅಸಮರ್ಥನೀಯ ಎಂಬುದನ್ನು ಪರಿಶೀಲಿಸಿ ವಿಮರ್ಶಿಸದೆ, ಜೋಳು ಜೋಳಾಗಿ ಅದು ಅಪ್ರಜಾಸತ್ತಾತ್ಮಕ ಹಾಗೂ ಅಸಂವಿಧಾನಿಕ ಎಂದು ಹೇಳುತ್ತಾ ಹೋಗುವುದರಿಂದ ಏನು ಪ್ರಯೋಜನ? ಹಾಗೇ ಇಂದಿನ ಅಂಕಣದಲ್ಲಿ (೨೭.೬.೨೦೧೧) ಅವರಿಗಿರಬಹುದಾದ ಅಥವಾ ಇಲ್ಲದಿರಬಹುದಾದ ಜನ ಬೆಂಬಲವನ್ನು ಬರೀ ರಾಜಕೀಯ ಪಕ್ಷಗಳ ಬೆಂಬಲದ ಪರಿಭಾಷೆಯಲ್ಲಿ ವಿವೇಚಿಸಿರುವುದು ನನಗೆ ಹಾಸ್ಯಾಸ್ಪದವಾಗಿ ಮಾತ್ರ ಕಂಡಿತು ಎಂದರೆ ನೀವು ತಪ್ಪು ತಿಳಿಯುವುದಿಲ್ಲ ಎಂದು ಭಾವಿಸುವೆ. ಇಂತಹ ಆಂದೋಲನಗಳ ಸಾರ್ಥಕತೆ (ವ್ಯಾವಹಾರಿಕ ಯಶಸ್ಸು ಅಲ್ಲ) ಜನತೆಯ ಬೆಂಬಲದ

‘ಪ್ರಮಾಣ’ದ ಮೇಲೆ ಅವಲಂಬಿಸಿರುವುದಿಲ್ಲ ಎಂದು ನಾನು ಭಾವಿಸುವೆ. ಸತ್ಯಾಗ್ರಹ ಎಂಬುದು ಭ್ರಷ್ಟಗೊಂಡ ಪ್ರಭುತ್ವದ ವಿರುದ್ಧ ಒಂಟಿಯಾದವನು ಕೂಡಾ ಹೋರಾಡುವ ಸ್ಥೈರ್ಯವನ್ನು ನೀಡುವ ಸಾಧನ ಎಂಬುದನ್ನು ನೀವೂ ಬಲ್ಲಿರಿ ಅಲ್ಲವೇ?

ಇಂದು ಪ್ರಜಾಪ್ರಭುತ್ವದ ಮೂಲ ಆಧಾರಗಳು, ಸಂವಿಧಾನದ ಮೂಲ ಸ್ವರೂಪ ಇತ್ಯಾದಿಗಳ ಬಗ್ಗೆ ಮಾತಾಡತೊಡಗುವವರ ಧ್ವನಿಯಲ್ಲಿ, ಅವರಿಗೆ ಗೊತ್ತಿದ್ದೋ ಗೊತ್ತಿಲ್ಲದೆಯೋ ಪಟ್ಟಭದ್ರ ಹಿತಾಸಕ್ತಿಗಳ ಪರವಾದ ಧ್ವನಿ ಇಣುಕತೊಡಗಿರುವಷ್ಟರಮಟ್ಟಿಗೆ ಈ ಕಲ್ಪನೆಗಳು ಬುಡಮೇಲುಗೊಂಡಿವೆ. ಇದಕ್ಕೆ ಕಾರಣರಾಗಿರುವವರು ಇಂದಿನ ಭ್ರಷ್ಟತೆಗೆ ಮೂಲ ಕಾರಣರಾಗಿರುವ ಉದಾರವಾದಿ ಆರ್ಥಿಕ ನೀತಿಯ ಪ್ರತಿಪಾದಕರು ಎಂಬುದು ಎಲ್ಲಿಯವರೆಗೆ ಅರ್ಥವಾಗುವುದಿಲ್ಲವೋ, ಅಲ್ಲಿಯವರೆಗೆ ಅಣ್ಣಾ ಹಜಾರೆ ಆಂದೋಲನವೂ ಪೂರ್ಣವಾಗುವುದಿಲ್ಲ ಮತ್ತು ಈ ಆಂದೋಲನವನ್ನು ಕುರಿತ ನಿಮ್ಮಂತಹವರ ಟೀಕೆಗಳೂ ಪೂರ್ಣವೆನಿಸುದಿಲ್ಲ ಎಂದಿಲ್ಲಿ ತಿಳಿಸಬಯಸುವೆ.

(‘ಪ್ರಜಾವಾಣಿ’ಯಲ್ಲಿನ ದಿನೇಶ್ ಅಮೀನ್‌ಮಟ್ಟು ಅವರ ಅಂಕಣ ‘ಅನಾವರಣ’ದ ಸಂಬಂಧ ಅವರಿಗೆ ಬರೆದ ಪ್ರತಿಕ್ರಿಯೆ)

೨೯. ಅಣ್ಣಾ ಹಜಾರೆ ಆಂದೋಲನದ ಸತ್ಯ ಮತ್ತು ಮಿಥ್ಯೆಗಳು!

ಅಣ್ಣಾ ಹಜಾರೆ ಆಂದೋಲನ ಈಗ ದೊಡ್ಡ ಸುದ್ದಿ. ಅವರು ಇದರ ಮೊದಲ ಘಟ್ಟವಾಗಿ ಅರಂಭಿಸಿದ ಭ್ರಷ್ಟಾಚಾರ ವಿರೋಧಿ ಆಂದೋಲನ; ಮತ್ತು ಆನಂತರ ಅದರ ಮುಂದುವರಿಕೆ ಯಾಗಿ ಸಂಘಟಿಸಿದ ಜನಲೋಕಪಾಲ್ ಆಂದೋಲನಕ್ಕಿಂತ ಇಂದು ಹೆಚ್ಚು ಸ್ಫೋಟಕ ಸುದ್ದಿಯಾಗುತ್ತಿರುವುದು, ಅವರ ಬಂಧನದ ವಿರುದ್ಧ ನಡೆದಿರುವ ರಾಷ್ಟ್ರವ್ಯಾಪಿ ಪ್ರತಿಭಟನೆ.

ಈ ದಿನಗಳಲ್ಲಿ ಸುದ್ದಿಯಾಗಲು ವಿಷಯ ಘನತರವಾ ಗೇನೂ ಇರುವ ಅಗತ್ಯವಿಲ್ಲ. ಇಂದು ೨೪ ತಾಸುಗಳೂ ಹಸಿದ ಹೆಬ್ಬುಲಿಗಳಂತೆ ಅರಚುತ್ತಿರುವ ಟಿವಿ ವಾಹಿನಿಗಳು; ಅವಕ್ಕೆ ಭೂಗೋಳದ ಸುತ್ತ ಮಾದಕ ವಸ್ತು ವ್ಯಸನಿಗಳಂತೆ ಜೋತುಬಿದ್ದಿ ರುವ ಹೊಸ ಮಧ್ಯಮ ವರ್ಗವೊಂದು ಸೃಷ್ಟಿಯಾಗಿದೆ. ಹಾಗಾಗಿ ಯೇ ಈ ಅಣ್ಣಾ ಹಜಾರೆ ಸುತ್ತ ಇದ್ದಕ್ಕಿದ್ದಂತೆ ಎರಡನೇ ಸ್ವಾತಂತ್ರ್ಯ ಹೋರಾಟದ ಘೋಷಣೆ ಕೂಗುವ ಮೂಲಕ, ಇಂದಿನ ಟಿವಿ ಪರಿಭಾಷೆಯಲ್ಲೇ ಹೇಳುವುದಾದರೆ, ಒಂದು 'ಬಿಗ್ ಬಿಗ್ ಸ್ಟೋರಿ'ಯನ್ನು ಕಟ್ಟಲಾಗುತ್ತಿದೆ. ಇದು ಮಾಧ್ಯಮಗಳಿಗೂ ಆಹಾರ; ಅವುಗಳ ಹಿಂದಿರುವ ಉದ್ಯಮಮೂಲ ರಾಜಕೀಯ ಹಿತಾಸಕ್ತಿ ಗಳಿಗೂ ಲಾಭ! ಅಣ್ಣಾ ಸುತ್ತಲಿನ ಜನಜಂಗುಳಿಯನ್ನೊಮ್ಮೆ ನೋಡಿ. ಅವರಾರೂ ಇಂದಿಗೆ ದುಡಿದು ತಿನ್ನಬೇಕಾದವರಂತೆ ಕಾಣುವುದಿಲ್ಲ. ಎಲ್ಲ ಜೀವನೋಪಾಯಕ್ಕಾಗಿ ಸಾಕಷ್ಟು ಕಾಪು ದಾಸ್ತಾನು ಇಟ್ಟುಕೊಂಡಂತಿರುವವರೇ!

ಹೀಗೆಂದ ಮಾತ್ರಕ್ಕೆ ಅಣ್ಣಾ ಹಜಾರೆ ಎತ್ತಿಕೊಂಡಿರುವ ಪ್ರಶ್ನೆ ನಿಜವಾದದ್ದಲ್ಲ, ತುರ್ತಾದದ್ದಲ್ಲ ಎಂದಲ್ಲ. ಹಾಗಿದ್ದಲ್ಲಿ ಈ 'ಸ್ಟೋರಿ' ನಿರಂತರವಾಗಿ ಕುತೂಹಲ ಉಳಿಸಿಕೊಂಡು ಹೀಗೆ ಸುಸ್ಥಿರವಾಗಿ ಬೆಳೆಯುತ್ತಿರಲಿಲ್ಲ. ಅಣ್ಣಾ ಹೆಸರನ್ನು ರಾಷ್ಟ್ರದಲ್ಲಿನ ಬಹುಪಾಲು ಜನ ಕೇಳಿಯೇ ಇಲ್ಲ. ಅಷ್ಟೇ ಅಲ್ಲ, ಅವರು ಮೊನ್ನೆ ತಾನೇ ತಮಗೆ ಸ್ಪರ್ಧೆ ನೀಡುವಂತೆ ಭ್ರಷ್ಟಾಚಾರ ವಿರೋಧಿ ನಾಟಕವಾಡಲು ಯತ್ನಿಸಿ ಹಾಸ್ಯಾಸ್ಪದರಾಗಿ ಹೋಗಿ, ಆ ವೈಫಲ್ಯವನ್ನು ಮರೆಮಾಚಲೋ ಎಂಬಂತೆ ಈಗ ಈ ಆಂದೋಲನದ ಬೆಂಬಲಕ್ಕಾಗಿ ದೆಹಲಿಗೆ ಬಂದಿರುವ ಬಾಬಾ ರಾಂದೇವ್‌ರಷ್ಟು 'ಜನಪ್ರಿಯ'ರೂ ಅಲ್ಲ. ಅದರೂ ಅಣ್ಣಾ ಅವರ ಬಂಧನದ ಸುದ್ದಿ ರಾಷ್ಟ್ರಾದ್ಯಂತ ಕಾಳ್ಗಿಚ್ಚಿನಂತೆ ಹಬ್ಬಿದ್ದರೆ ಅದಕ್ಕೆ ಅರ್ಧ ಕಾರಣ, ನಮ್ಮ ಹೊಟ್ಟೆಬಾಕ ಮಾಧ್ಯಮಗಳು ಮತ್ತು ಅವುಗಳ ಹಿಂದಿರುವ ನವ ಮಧ್ಯಮ ವರ್ಗವು ತನ್ನ ಹೊಸ ಸಂಪತ್ತಿನ ಗಳಿಕೆಯ

ಸುಲಭ ಮಾರ್ಗಗಳ ಬಗ್ಗೆ ಹೊಂದಿರುವ ಅಪರಾಧಿ ಭಾವವನ್ನು ಮರೆಮಾಚಿಕೊಳ್ಳಲು ಆವಾಹಿಸಿಕೊಂಡಿರುವ ನೈತಿಕತೆಯ ಅಬ್ಬರದ ಪ್ರದರ್ಶನ. ಇನ್ನರ್ಧ ಕಾರಣ, ಭ್ರಷ್ಟಾಚಾರ ನಿಜವಾಗಿ ತನ್ನ ಪ್ರಮಾಣ ಮತ್ತು ರೀತಿ– ನೀತಿಗಳೆರಡರಲ್ಲೂ ಅಸಹನೀಯ ಮಟ್ಟ ಮುಟ್ಟುವ ಮೂಲಕ ಜನಸಾಮಾನ್ಯರನ್ನೂ ಕಂಗೆಡಿಸಿ, ಅವರ ಸಹಾನುಭೂತಿ ಈ ಆಂದೋಲನದಲ್ಲಿ ಹಿನ್ನೆಲೆಯಲ್ಲಾದರೂ ಸಕ್ರಿಯವಾಗಿರುವುದು.

ಈ ದೃಷ್ಟಿಯಿಂದ ಅಣ್ಣಾ ಹಜಾರೆ ಅವರ ಭ್ರಷ್ಟಾಚಾರ ವಿರೋಧಿ ಆಂದೋಲನ ಸಮರ್ಥನೀಯವೇ. ಅದು ಇಂದು ಅತ್ಯಗತ್ಯವೇ. ಆದರೆ ಪ್ರಶ್ನೆ ಎದ್ದಿರುವುದು, ಈ ಆಂದೋಲನ ಜನ ಜಾಗೃತಿಯ ಹೋರಾಟವಾಗಿ ಉಳಿಯದೆ, ಶಾಸನ ರಚನೆಯ ಕೆಲಸದಲ್ಲಿ ಹಸ್ತಕ್ಷೇಪ ಮಾಡಲು ಹೊರಟು, ಪ್ರಜಾಪ್ರಭುತ್ವದ ಅಡಿಗಲ್ಲುಗಳನ್ನೇ ಅಲ್ಲಾಡಿಸತೊಡಗಿದೆ ಎಂಬ ಆತಂಕದ ಸಂಬಂಧವಾಗಿ. ಅಣ್ಣಾ ಈಗ ಬಂಧನಕ್ಕೊಳಗಾಗಿ ಸರ್ಕಾರ ಪೇಚಿಗೆ ಸಿಕ್ಕಂತಾಗಿರುವುದೂ ಹಸ್ತಕ್ಷೇಪವೆಂದು ಹೇಳಲಾಗುವ ಇಂತಹ ಪ್ರಯತ್ನದಿಂದಾಗಿಯೇ. ಅದೇನೇ ಇರಲಿ, ಸರ್ಕಾರದ ಈ ಪೇಚಿಗೆ, ಇಕ್ಕಟ್ಟಿಗೆ; ಸರ್ಕಾರ ಈ ಆಂದೋಲನದ ಬಗೆಗೆ, ಅದರ ಆರಂಭದಿಂದ ಈ ಘಟ್ಟದವರೆಗೆ ಅನುಸರಿಸಿಕೊಂಡು ಬಂದಿರುವ ಅವಿವೇಕಿ ಮತ್ತು ಉದ್ಧಟತನದ ನೀತಿಯೇ ಕಾರಣವಾಗಿದೆ ಎಂಬುದನ್ನು ಇಲ್ಲಿ ಮೊದಲು ಹೇಳಿಬಿಡಬೇಕು. ಅದು ಈ ಆಂದೋಲನವನ್ನು ಅದು ಎತ್ತಿದ್ದ ಮುಖ್ಯ ಪ್ರಶ್ನೆಗಳ ನೆಲೆಯಲ್ಲಿ ನೇರವಾಗಿ ಮುಖಾಮುಖಿಯಾಗದೆ, ಅದನ್ನು ಅನುಮಾನಾಸ್ಪದಗೊಳಿಸಲು, ಹೀಗಳೆಯಲು ಪ್ರಯತ್ನ ಮಾಡುತ್ತಾ ಬಂದು, ಕೊನೆಗೆ ಈಗ ಆ ಪ್ರಯತ್ನಗಳ ಫಲಗಳು ತನ್ನ ಮುಖಕ್ಕೇ ತಿರುಗಿ ರಾಚುವಂತೆ ಮಾಡಿಕೊಂಡಿದೆ.

ಅಣ್ಣಾ ಆಂದೋಲನಕ್ಕೆ ಜನಾದೇಶವೇ ಇಲ್ಲವೆಂದು ಹೇಳುತ್ತಾ ಬಂದ ಸರ್ಕಾರ, ಕೊನೆಗೆ ಅದರ 'ಅಹಂ' ತೃಪ್ತಿಪಡಿಸಲೋ ಎಂಬಂತೆ ಅದರ ಜೊತೆಗೆ ರಾಜಿಯಾಗಿ ಸಂಧಾನದ ನಾಟಕವಾಡಿತು. ನಾಲ್ಕು ದಶಕಗಳಿಗೂ ಹೆಚ್ಚು ಕಾಲದಿಂದ ನೆನೆಗುದಿಗೆ ಬಿದ್ದಿದ್ದ ಭ್ರಷ್ಟಾಚಾರ ವಿರೋಧಿ ಲೋಕಪಾಲ್ ಕಾನೂನನ್ನು ಅಣ್ಣಾ ಸೂಚಿಸಿದ ಸಮಿತಿಯ ಸದಸ್ಯರೊಂದಿಗೆ ಚರ್ಚಿಸಿ ಜಂಟಿಯಾಗಿ ಸಿದ್ಧಪಡಿಸುವ ಭರವಸೆ ನೀಡಿತು. ಆದರೆ ಕೊನೆಗೆ ಸಂಧಾನ ಮುರಿದುಬಿತ್ತೆಂದು ಹೇಳಿ, ಏಕಪಕ್ಷೀಯವಾಗಿ ತಾನೇ ಒಂದು ಸರ್ಕಾರಿ ಮಸೂದೆಯನ್ನು ಸಿದ್ಧಪಡಿಸಿ ಸಂಸತ್ತಿನ ಅನುಮೋದನೆಗೆ ಮಂಡಿಸುವ ಸನ್ನಾಹದಲ್ಲಿ ತೊಡಗಿತು. ಈ ಮಸೂದೆ ತನ್ನ ಆಂದೋಲನದ ಉದ್ದೇಶಕ್ಕೇ ಬಗೆದ ದ್ರೋಹ ಎಂದು ಭಾವಿಸಿದ ಅಣ್ಣಾ ತಂಡ ಭ್ರಷ್ಟಾಚಾರದ ವಿರುದ್ಧ ಸಮಗ್ರವೆಂದು ತಾನು ಭಾವಿಸಿರುವ ಮಸೂದೆಯೊಂದನ್ನು ಸಿದ್ಧಪಡಿಸಿ ಅದನ್ನು ಸಂಸತ್ತಿನ ಮುಂದೆ ಮಂಡಿಸಲು ಪರಿಗಣಿಸುವಂತೆ ಆಗ್ರಹಿಸಿತು. ಇದನ್ನು ಸರ್ಕಾರ ತಿರಸ್ಕರಿಸಿದ್ದರಿಂದಾಗಿ, ಅಣ್ಣಾ ಅಮರಣಾಂತ ಉಪವಾಸ ಸತ್ಯಾಗ್ರಹವನ್ನು ಘೋಷಿಸಿದ್ದಾರೆ.

ಇದನ್ನು ಸರ್ಕಾರ ಮಾತ್ರವಲ್ಲ, ಅಣ್ಣಾ ತಂಡದೊಂದಿಗೆ ಹಲವು ಕಾರಣಗಳಿಂದಾಗಿ ಭಿನ್ನಾಭಿಪ್ರಾಯ ಹೊಂದಿರುವ ಹಲವು ನಾಗರಿಕ ವೇದಿಕೆಗಳು ಮತ್ತು ವ್ಯಕ್ತಿಗಳು 'ಬ್ಲಾಕ್‌ಮೇಲ್' ಎಂದು ಬಣ್ಣಿಸುತ್ತಿವೆ. ಅಣ್ಣಾ ಪ್ರಯತ್ನ ಸಂವಿಧಾನದ ಎಲ್ಲೆಗಳನ್ನು ಮೀರಿದ ಅಧಿಕ ಪ್ರಸಂಗತನ

ಎಂದು ಟೀಕಿಸುತ್ತಾ, ಪ್ರಜಾಪ್ರಭುತ್ವದಲ್ಲಿ ಸಂಸತ್ತಿನದೇ ಪರಮಾಧಿಕಾರ; ಅದಕ್ಕೆ ಚ್ಯುತಿಯಾಗಬಾರದು ಎಂದು ಎಚ್ಚರಿಸುತ್ತಿದ್ದಾರೆ. ಅಣ್ಣಾ ತಮ್ಮ ಹಠಮಾರಿತನದಿಂದ ಪ್ರಜಾಸತ್ತಾತ್ಮಕ ಸಂಪ್ರದಾಯಗಳು ಮತ್ತು ಸಂಸ್ಥೆಗಳನ್ನು ನಾಶ ಮಾಡತೊಡಗಿದ್ದಾರೆ ಎಂದು ವಾದಿಸುತ್ತಿವೆ. ಆದರೆ ಇವುಗಳಲ್ಲಿ ಎಷ್ಟು ನಿಜ? ಅಣ್ಣಾದು ಹಠವೇ? ಹಠವೇ ಆಗಿದ್ದರೆ, ಅದು ಎಷ್ಟು ಸರಿ, ನೋಡೋಣ.

ನಮ್ಮದು ಪ್ರಾತಿನಿಧಿಕ ಪ್ರಜಾಪ್ರಭುತ್ವ. ಆದರೆ ಈ ಪ್ರಾತಿನಿಧ್ಯೀಕರಣದ ಪ್ರಕ್ರಿಯೆ ಸಂಪೂರ್ಣ ಭ್ರಷ್ಟಗೊಂಡಿರುವುದು ಎದ್ದು ಕಾಣುತ್ತಿರುವಾಗ, ಈ ಪ್ರಜಾಪ್ರಭುತ್ವದ ಸಂಪ್ರದಾಯ, ಸಂಸ್ಥೆ, ನಿಯಮಗಳಿಗೆ ನಾವು ಅಕ್ಷರಶಃ ಅರ್ಥದಲ್ಲಿ ವಿಧೇಯತೆ ತೋರುವುದು, ಅವುಗಳ ಮತ್ತಷ್ಟು ಅವನತಿಗೆ ಕಾರಣವಾಗಬಹುದಲ್ಲವೇ? ನಮ್ಮ ಸಂವಿಧಾನದ ಪ್ರಕಾರ ಇಲ್ಲಿ ಜನತೆಯದ್ದೇ ಪರಮಾಧಿಕಾರ. ಜನ ಪ್ರತಿನಿಧಿಗಳೇನಿದ್ದರೂ, ಅದರ ಪ್ರತಿಬಿಂಬ ಮಾತ್ರ. ಹಾಗಾಗಿ, ಪ್ರತಿಬಿಂಬ ಕೆಟ್ಟಿದೆ ಎನ್ನಿಸಿದಾಗ, ಆ ಪ್ರತಿಬಿಂಬವನ್ನು ಸರಿಪಡಿಸುವ ಕೆಲಸ ಮಾಡಬೇಕಲ್ಲವೆ? ಅದಕ್ಕಾಗಿ ಜನತೆ ಮತ್ತು ಜನಪ್ರತಿನಿಧಿಗಳ ನಡುವೆ ಹೊಸ ನೆಲೆಯ ಸಂವಾದದ ವೇದಿಕೆಯೊಂದು ನಿರ್ಮಾಣವಾಗಬೇಕಲ್ಲವೇ? ಅದನ್ನೇ ಅಣ್ಣಾ ಮಾಡಲು ಯತ್ನಿಸುತ್ತಿರುವುದಲ್ಲವೇ? ಅವರು ಜನಾಂದೋಲನದ ಮೂಲಕ ಜನಪ್ರತಿನಿಧಿಗಳ ಮೇಲೆ, ಆ ಮೂಲಕ ಸಂಸತ್ತಿನ ಮೇಲೆ ನೈತಿಕ ಒತ್ತಡ ಹೇರಿ ಅದನ್ನು ಜನಪರ ಮಾಡುವ ಪ್ರಯತ್ನವನ್ನಷ್ಟೇ ಮಾಡುತ್ತಿದ್ದಾರೆ. ನಾಲ್ಕು ದಶಕಗಳ ನಂತರವೂ ಸಮರ್ಥವಾದ ಲೋಕಪಾಲ್ ಮಸೂದೆಯೊಂದನ್ನು ಸಿದ್ಧಪಡಿಸಲಾಗದಷ್ಟು ಜಡಗೊಂಡ ಸಂಸದೀಯ ವ್ಯವಸ್ಥೆಗೆ ಅವರು ಎಚ್ಚೆತ್ತ ಜನತೆಯ ಪರವಾಗಿ ಸವಾಲು ಹಾಕಿದ್ದಾರೆ. ಜನಾಂದೋಲನವನ್ನು ಸಂಘಟಿಸುವ ಮೂಲಕ ಸರ್ಕಾರದ ಮೇಲೆ ಒತ್ತಡ ಹೇರಿ ಅದರಿಂದ ಮಾನ್ಯತೆ ಗಳಿಸಿಕೊಂಡ ಸಮರ್ಥ ನ್ಯಾಯ ಪಂಡಿತರ ಮಾರ್ಗದರ್ಶನದಲ್ಲಿ ಅವರು ಮಸೂದೆಯೊಂದನ್ನು ಸಿದ್ಧಪಡಿಸಿದ್ದಾರೆ. ಆದರೆ, ಅದನ್ನು ತನ್ನದೇ 'ಆಂತರಿಕ' ಕಾರಣಗಳಿಂದಾಗಿ ಈಗ ಕಣ್ಣೆತ್ತಿ ನೋಡಲೂ ನಿರಾಕರಿಸುತ್ತಿರುವ ಸದ್ಯದ ಸರ್ಕಾರದ ನಿಲುವು ತಮ್ಮ ಜನಾಂದೋಲನದ ಮೂಲಕ ವ್ಯಕ್ತವಾದ ಜನತೆಯ ಆಶೋತ್ತರಗಳಿಗೆ ಬಗೆದ ದ್ರೋಹವಾಗಿ ಅವರಿಗೆ ಕಂಡಿದ್ದರೆ ಆಶ್ಚರ್ಯವೇನು? ಇದನ್ನು ಪ್ರತಿಭಟಿಸಿ ಉಪವಾಸ ಕೂರುವುದು ಸಂವಿಧಾನ ವಿರೋಧಿ ಹೇಗಾಗುವುದು?

ಸರ್ಕಾರವೂ ಸೇರಿದಂತೆ ಅಣ್ಣಾ ವಿರೋಧಿಗಳು ಇದಕ್ಕೆ ನೀಡುವ ಕಾರಣವೆಂದರೆ, ಇವರ ಆಂದೋಲನ ಜನತೆಯನ್ನು ಇಡಿಯಾಗಿ ಪ್ರತಿನಿಧಿಸುವುದಿಲ್ಲ ಎಂಬುದು. ಹಾಗಾದರೆ, ಅಣ್ಣಾ ಪ್ರತಿನಿಧಿಸದೇ ಇರುವ ಜನತೆಯನ್ನು ಒಳಗೊಂಡ ಆಂದೋಲನವಾದರೂ ಎಲ್ಲಿದೆ? ಅಥವಾ ಏಕಿಲ್ಲ? ಅದಿಲ್ಲದೆ, ಅಣ್ಣಾ ನಿಲುವನ್ನು ಸರಿಯಲ್ಲವೆಂದು ಭಾವಿಸುವುದಾದರೂ ಹೇಗೆ? ಅಣ್ಣಾ ತಮಗೆ ಇಡೀ ದೇಶದ ಜನತೆಯ ಬೆಂಬಲವಿದೆಯೆಂದು ಸಾಬೀತುಪಡಿಸಲು ನೂರು ಕೋಟಿ ಜನರೂ ಬೀದಿಗಳ ಮೇಲೆ ಕರೆತರಬೇಕೆ? ಸ್ವಾತಂತ್ರ್ಯ ಹೋರಾಟದ ಕಾಲದಲ್ಲೂ ಇದು ಸಾಧ್ಯವಾಗಿರಲಿಲ್ಲ. ಇನ್ನು ಅಣ್ಣಾ ತಂಡ ಸಂಸತ್ತಿನ

ಪರಮಾಧಿಕಾರವನ್ನಾಗಲೀ, ಪ್ರಜಾಪ್ರಭುತ್ವದ ಸಂಸ್ಥೆಗಳನ್ನಾಗಲೀ ಎಲ್ಲಿ ಪ್ರಶ್ನಿಸುತ್ತಿದೆ? ಸರ್ಕಾರ ತನ್ನೊಂದಿಗೆ ಸಂಧಾನ ಮುರಿದು, ಇಂದು ಬೃಹದಾಕಾರವಾಗಿ ಬೆಳೆದಿರುವ ಭ್ರಷ್ಟಾಚಾರವನ್ನು ಸಮರ್ಥ ರೀತಿಯಲ್ಲಿ ನಿಗ್ರಹಿಸಲು ಸಾಧ್ಯವಾಗದ ಮಸೂದೆಯೊಂದನ್ನು ಔಪಚಾರಿಕವೆಂಬಂತೆ ಸಿದ್ಧಪಡಿಸಿರುವುದರಿಂದ, ಅದಕ್ಕೆ ಪರ್ಯಾಯವಾಗಿ ಸಂಸತ್ತಿನ ಮುಂದೆ ಮಂಡಿಸಲು ತನ್ನ ಕರಡು ಮಸೂದೆಯನ್ನು ಪರಿಗಣಿಸಬೇಕೆಂದಷ್ಟೇ ಅದು ಕೇಳುತ್ತಿದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಸರ್ಕಾರಿ ಮಸೂದೆ ಈಗಿರುವ ರೂಪದಲ್ಲಿ ಸಂಸತ್ತಿನ ಮುಂದೆ ಮಂಡಿತವಾಗಬಾರದೆಂದು ಅದು ಸ್ಪಷ್ಟವಾಗಿ ಸೂಚಿಸುತ್ತಿದೆ. ಏಕೆಂದರೆ ಈಗಿರುವ ಸಂಸತ್ತು ಎಲ್ಲ ಸಾಂವಿಧಾನಿಕ ನಿಯಮಗಳನ್ನೂ ಉಲ್ಲಂಘಿಸಿ ಆಯ್ಕೆಯಾಗಿರುವ ಜನಪ್ರತಿನಿಧಿಗಳಿಂದ ಕೂಡಿರುವ ದುರ್ಬಲ ಸಂಸತ್ತು. ಅದನ್ನು ಔಪಚಾರಿಕ ಮತ್ತು ಸುಲಭ ಮಸೂದೆಯ ಮೂಲಕ ಔಪಚಾರಿಕವಾಗಿ ಮತ್ತು ಸುಲಭವಾಗಿ ಮಣಿಸಿ, ವ್ಯವಸ್ಥೆ ತನ್ನ ಹಿತಾಸಕ್ತಿಯನ್ನು ಮತ್ತು ಜನಾಂದೋಲನದ ಮೂಲಕ ವ್ಯಕ್ತವಾಗಿರುವ ಜನತಾ ಶಕ್ತಿಯನ್ನೇ ನಿರ್ಲಕ್ಷಿಸುವ ತನ್ನ ಎಂದಿನ ಚಾಳಿಯನ್ನು ಮುಂದುವರೆಸಿಕೊಂಡು ಹೋಗಬಲ್ಲುದು ಎಂಬ ಆತಂಕ ಅಣ್ಣಾ ತಂಡದ್ದು. ತಮ್ಮ ಮಸೂದೆ ಜನತೆಯ ಸಮ್ಮುಖದಲ್ಲಿ ನಡೆಯುವ ಸಂಸತ್ತಿನ ಅಗ್ನಿ ಪರೀಕ್ಷೆಯಾಗಬಲ್ಲುದು; ಅದರ ಫಲಿತಾಂಶ ತಮ್ಮ ಮುಂದಿನ ಹಂತದ ಹೋರಾಟಕ್ಕೆ ಆಧಾರವಾಗಬಲ್ಲುದು ಎಂದು ಅಣ್ಣಾ ನಂಬಿದಂತೆ ತೋರುತ್ತದೆ.

ಅಣ್ಣಾ ಮಸೂದೆ ಸರ್ಕಾರಿ ಮಸೂದೆಯಿಂದ ಮುಖ್ಯವಾಗಿ ಭಿನ್ನವಾಗಿರುವುದೆಂದರೆ, ಅದು ಪ್ರಧಾನ ಮಂತ್ರಿ ಮತ್ತು ಉನ್ನತ ನ್ಯಾಯಾಂಗವನ್ನು ಲೋಕಪಾಲ ಕಾಯಿದೆಯ ವ್ಯಾಪ್ತಿಗೆ ಸೇರಿಸಿರುವುದು. ಇದಾಗದೆ, ಲೋಕಪಾಲ್ ಪರಿಕಲ್ಪನೆಯ ಮೂಲ ಉದ್ದೇಶವೇ ಈಡೇರದು ಎಂಬುದು ಅಣ್ಣಾ ತಂಡದ ವಾದ. ಆದರೆ ಇದರ ವಿರುದ್ಧ ಅಪಪ್ರಚಾರ ಮಾಡುತ್ತಿರುವ ಸರ್ಕಾರ, ಅಣ್ಣಾ ಮಸೂದೆ ಇದರಿಂದಾಗಿ ಹೇಗೆ ದೋಷಪೂರ್ಣವಾಗಿದೆ, ಇದು ನಮ್ಮ ಸಂವಿಧಾನ ಅಥವಾ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಹೇಗೆ ದುರ್ಬಲಗೊಳಿಸುತ್ತದೆ ಎಂದು ಜನತೆಗೆ ವಿವರಿಸುವ ಯಾವ ಪ್ರಯತ್ನವನ್ನೂ ಮಾಡಿಲ್ಲ. ಇನ್ನು ಅಣ್ಣಾ ತಂಡದ ಮೇಲೆ ಹಠಮಾರಿತನ ಮತ್ತು ಏಕಪಕ್ಷೀಯತೆಯ ಆರೋಪ ಹೊರಿಸುವ ಇತರರಲ್ಲಿ, ಯಾರಾದರೂ ಏಕೆ ತಮ್ಮದೇ ಮಸೂದೆಯ ಕರಡೊಂದನ್ನು ರಾಷ್ಟ್ರದ ಮುಂದಿಟ್ಟು, ಸರ್ಕಾರಕ್ಕೆ, ಜನತೆಗೆ, ಅಣ್ಣಾಗೆ ಉತ್ತರ ನೀಡಲಾಗದೇ ಹೋಗಿದ್ದಾರೆ?

ನಾಗರೀಕ ಸಮಾಜದ ಹೆಸರಿನಲ್ಲಿ ಇನ್ನು ಮುಂದೆ ಇನ್ನು ಯಾರೋ ಜನಸಂಘಟನೆ ಮಾಡಿ ತಮ್ಮ ಕಾರ್ಯಕ್ರಮವನ್ನು ಒಪ್ಪಿಕೊಳ್ಳಬೇಕೆಂದು ಸರ್ಕಾರದ ಮೇಲೆ ಒತ್ತಡ ಹೇರಲಾರಂಭಿಸಿದರೆ ಏನು ಮಾಡುವುದು? ಹಾಗಾಗಿ ಅಣ್ಣಾ ಆಂದೋಲನ ಕೆಟ್ಟ ಸಂಪ್ರದಾಯವೊಂದಕ್ಕೆ ನಾಂದಿ ಹಾಡಿದಂತಾಗುತ್ತದಲ್ಲವೇ? ಎಂಬುದು ಅಣ್ಣಾ ಆಂದೋಲನದ ಬಗೆಗೆ ಎತ್ತಲಾಗುತ್ತಿರುವ ಇನ್ನೊಂದು ತಕರಾರು. ಪ್ರಜಾಪ್ರಭುತ್ವದಲ್ಲಿ ಯಾರೇ ಆಗಲೀ, ಯಾವುದೇ ಹೆಸರಿನಲ್ಲಿ ಜನಸಂಘಟನೆ ಮಾಡಿ ಕಾರ್ಯಕ್ರಮ ವೊಂದನ್ನು

ಮುಂದಿಡುವುದು ಪ್ರಜಾಪ್ರಭುತ್ವದ ಜೀವಂತಿಕೆಯ ಲಕ್ಷಣ. ಅದನ್ನು ಕೆಟ್ಟ ಸಂಪ್ರದಾಯ ಎಂದು ಪರಿಗಣಿಸುವುದು ಸರ್ವಾಧಿಕಾರಿ ಪ್ರವೃತ್ತಿಯ ಲಕ್ಷಣ. ಯಾರೂ ಸುಮ್ಮ ಸುಮ್ಮನೆ, ಪ್ರಾಮಾಣಿಕ ಸಾಮಾಜಿಕ ಬದ್ಧತೆಯಿಲ್ಲದೆ ಕಾರ್ಯಕ್ರಮ ರೂಪಿಸಿ, ಜನಸಂಘಟನೆ ಮಾಡುವ ಕೆಲಸಕ್ಕೆ ಕೈ ಹಾಕುವುದಿಲ್ಲ. ಆದರೆ ಅದನ್ನು ಗಂಭೀರವಾಗಿ ಪರಿಗಣಿಸಬೇಕೋ ಬೇಡವೋ ಎಂಬುದನ್ನು ಸರ್ಕಾರ ಆ ಸಂಘಟನೆಯ ಹಿಂದಿನ ಜನತಾ ಶಕ್ತಿಯ ಸ್ವರೂಪ, ಗಾತ್ರ ಮತ್ತು ಗುಣಾತ್ಮಕತೆಯ ಆಧಾರದ ಮೇಲೆ ನಿರ್ಧರಿಸುವ ವಿವೇಚನೆ ತೋರಬೇಕು. ಇಲ್ಲವಾದರೆ ಮುಂದಿನ ರಾಜಕೀಯ ಪರಿಣಾಮಗಳನ್ನು ಎದುರಿಸಲು ತಯಾರಿರಬೇಕು, ಈಗ ಅಣ್ಣಾ ಆಂದೋಲನದ ವಿಷಯದಲ್ಲಿ ಎದುರಿಸುತ್ತಿರುವಂತೆ! ಇದನ್ನು ನೀವು ಯಾವ ಕಡೆ ಇರುವಿರೋ ಅದಕ್ಕೆ ತಕ್ಕಂತೆ, ಪ್ರಾತಿನಿಧಿಕ ಪ್ರಜಾಪ್ರಭುತ್ವದ ಶಕ್ತಿ ಅಥವಾ ದೌರ್ಬಲ್ಯ ಎಂದು ವ್ಯಾಖ್ಯಾನಿಸಬಹುದು!

ಇನ್ನು ಬ್ಲಾಕ್‌ಮೇಲ್ ಆರೋಪ. ಬ್ಲಾಕ್‌ಮೇಲ್ ಮಾಡಲು ಸಾಧ್ಯವಾಗುವುದು, ಅಸಹಾಯಕ ಮತ್ತು ದುರ್ಬಲರನ್ನು ಮಾತ್ರ. ಲಕ್ಷಾಂತರ ಕೋಟಿ ರೂಪಾಯಿಗಳ ಭ್ರಷ್ಟಾಚಾರದ ಆರೋಪಗಳನ್ನು ಎದುರಿಸುತ್ತಿರುವ ಸದ್ಯದ ಕೇಂದ್ರ ಸರ್ಕಾರ, ಅಷ್ಟಲ್ಲದಿದ್ದರೂ ಸಾಕಷ್ಟು ಭ್ರಷ್ಟವಾಗಿರುವ ವಿರೋಧ ಪಕ್ಷಗಳ ಎದುರಿಗಲ್ಲದಿದ್ದರೂ, ಅಣ್ಣಾ ಆಂದೋಲನದ ಎದುರು ದುರ್ಬಲವಾಗಿದೆ, ಅಸಹಾಯಕವಾಗಿದೆ. ಹಾಗಾಗಿಯೇ ಅದು ಅಣ್ಣಾ ತಂಡವನ್ನು ಕಣ್ಣಲ್ಲಿ ಕಣ್ಣಿಟ್ಟು ಎದುರಿಸಲಾಗದೆ, ಅಡ್ಡದಾರಿ ಹಿಡಿದು ಅಧಿಕಾರ ದುರ್ಬಳಕೆಯ ಅಗ್ಗದ ಮಾರ್ಗಗಳ ಮತ್ತು ಮಾತುಗಳ ಮೂಲಕ ಅವರನ್ನು ಮಣಿಸಲು ಯತ್ನಿಸುತ್ತಿದೆ. ಮೊದಲು ತಾನೇ ಗೌರವಾರ್ಹ ರೀತಿಯಲ್ಲಿ ಸಂಧಾನಕ್ಕೆ ಆಹ್ವಾನಿಸಿದ ಅಣ್ಣಾರನ್ನು ಸರ್ಕಾರ ಈಗ ತನ್ನ ಪಕ್ಷದ ಬಾಯಿಬಡುಕ ವಕ್ತಾರರ ಮೂಲಕ ವೈಯುಕ್ತಿಕ ನೆಲೆಯಲ್ಲಿ ವಾಚಾಮಗೋಚರವಾಗಿ ನಿಂದಿಸುತ್ತಿದೆ. ಅವರ ತಂಡದ ಸಂಪನ್ಮೂಲಗಳ ಬಗ್ಗೆ ಆಧಾರ ರಹಿತ ಆರೋಪಗಳನ್ನು ಮಾಡತೊಡಗಿದೆ. ತನ್ನ ವಿರುದ್ಧ ಪ್ರತಿಭಟನೆ ಹೀಗೆ ಮಾತ್ರ ನಡೆಯಬೇಕೆಂದು ಪ್ರಜಾಪ್ರಭುತ್ವದ ಪಾಠಗಳನ್ನು ಹೇಳುತ್ತಿದೆ! ಸತ್ಯಾಗ್ರಹದ ಬಗ್ಗೆ ಅಲ್ಪ ತಿಳುವಳಿಕೆಯುಳ್ಳ ಮಕ್ಕಳ ಮುಂದೆಯೂ ನಗೆಪಾಟಲಿಗೆ ಕಾರಣವಾಗುವಂತಹ ಷರತ್ತುಗಳನ್ನು ಅವರ ಉಪವಾಸ ಸತ್ಯಾಗ್ರಹದ ರೀತಿ ನೀತಿಗಳ ಮೇಲೆ ಹಾಕಲು ಯತ್ನಿಸಿದೆ! ಈ ಪ್ರಯತ್ನದಲ್ಲಿ ಸೋತಾಗ, ಅದರ ಇಡೀ ಜವಾಬ್ದಾರಿಯನ್ನು ಪೋಲೀಸ್ ವ್ಯವಸ್ಥೆಯ ಮೇಲೆ ಹಾಕಿ, ಮತ್ತಷ್ಟು ನಗೆಪಾಟಲಿಗೆ ಈಡಾಗುತ್ತಿದೆ.

ಇದರ ಪರಿಣಾಮವೆಂದರೆ, ಅಣ್ಣಾ ತಂಡ, ಮತ್ತವರ ಬೆಂಬಲಿಗ ಗುಂಪಿಗೆ ಮತ್ತಷ್ಟು ಬಲ ಬಂದಂತಾಗಿದೆ. ವಿರೋಧ ಪಕ್ಷಗಳೂ ಈ ಸಂದರ್ಭವನ್ನು ಬಳಸಿಕೊಂಡು ಸರ್ಕಾರದ ಮೇಲೆ ಸೇಡು ತೀರಿಸಿಕೊಳ್ಳಲು ಹೊರಟಿವೆ. ಸುವ್ಯವಸ್ಥಿತ ಸಂಘಟನೆಯ ಬಲ ಹೊಂದಿರುವ ಬಿಜೆಪಿಯಂತಹ ಪಕ್ಷ ತನ್ನೆಲ್ಲ ಪರಿವಾರದ ಮಾನವ ಸಂಪನ್ಮೂಲಗಳನ್ನು, ಸಂಘಟನಾ ಜಾಣ್ಮೆಯನ್ನು ಅಣ್ಣಾ ಆಂದೋಲನದ ಹಿಂದೆ ನಿಯೋಜಿಸತೊಡಗಿದೆ. ಜೊತೆಗೆ ಶಂಖ

ಊದುವ ಮತ್ತು ಜಾಗಟೆ ಬಾರಿಸುವವರ ದಂಡೂ ಅಲ್ಲಿ ಸೇರತೊಡಗಿದೆ. ಈ ಮಧ್ಯೆ ನಮ್ಮ ಯಡಿಯೂರಪ್ಪನವರೂ ಅಣ್ಣಾಗೆ ಬೆಂಬಲವಾಗಿ ಧರಣಿ ಬೇರೆ ಕೂರಲಿದ್ದಾರಂತೆ! ಇದೆಲ್ಲದಕ್ಕೆ ಕಿರೀಟವಿಟ್ಟಂತೆ ಬಾಬಾ ರಾಂದೇವ್ ಮತ್ತು ರವಿಶಂಕರ್ ಗುರೂಜಿ ಬೇರೆ ಆಶೀರ್ವಚನ ನೀಡಲು ಧಾವಿಸಿ ಬಂದಿದ್ದಾರೆ. ಇದನ್ನೆಲ್ಲ ನೋಡಿ ಗಾಬರಿಯಾಗತೊಡಗಿರುವ ಇತರ ಪಕ್ಷಗಳು ಅಣ್ಣಾ ಆಂದೋಲನ ಕುರಿತಂತೆ ಸ್ಪಷ್ಟ ನಿಲುವು ತಳೆಯಲಾಗದೆ ಗೊಂದಲಗೊಂಡಿವೆ. ಈ ಗೊಂದಲದಲ್ಲಿ ಭ್ರಷ್ಟಾಚಾರ ವಿರೋಧಿ ಆಂದೋಲನವೇ ತನ್ನ ದೃಷ್ಟಿಕೇಂದ್ರವನ್ನು ಕಳೆದುಕೊಂಡರೆ ಆಶ್ಚರ್ಯವಿಲ್ಲ!

ಏಕೆಂದರೆ ಉನ್ಮತ್ತ ಬೆಂಬಲಿಗರಿಂದ ಅಣ್ಣಾ ಅವರನ್ನು ಜೆಪಿಗೆ ಹೋಲಿಸುವ, ಅವರ ಆಂದೋಲನವನ್ನು ಎರಡನೇ ಸ್ವಾತಂತ್ರ್ಯ ಹೋರಾಟವೆಂದು ಕರೆಯುವ ರಾಜಕಾರಣ ಆರಂಭವಾಗಿದೆ. ಇದು ರಾಜಕಾರಣ ಏಕೆಂದರೆ, ಹಾಗೆಂದು ಕರೆಯುವವರಿಗೆ ಜೆಪಿಯವರ ಅಥವಾ ಸ್ವಾತಂತ್ರ್ಯ ಆಂದೋಲನದ ಪ್ರಾಥಮಿಕ ಪರಿಚಯವೂ ಇರಲು ಸಾಧ್ಯವಿಲ್ಲ! ಜೆಪಿ ಕಳೆದ ಎಪ್ಪತ್ತರ ದಶಕದ ಆರಂಭದಲ್ಲಿ ಇಂದಿರಾ ಸರ್ಕಾರದ ಭ್ರಷ್ಟಾಚಾರದ ವಿರುದ್ಧ ವ್ಯಕ್ತವಾಗತೊಡಗಿದ ಅಶಾಂತಿಗೆ ಧ್ವನಿ ನೀಡಲಾರಂಭಿಸಿದರಾದರೂ, ಅದಕ್ಕೊಂದು ಕಾರ್ಯಾಚರಣೆಯ ರೂಪು ನೀಡಬೇಕಾಗಿ ಬಂದಾಗ, 'ಸಂಪೂರ್ಣ ಕ್ರಾಂತಿ'ಯ ಪರಿಕಲ್ಪನೆಯನ್ನು ಜನತೆಯ ಮುಂದಿಟ್ಟರು. ಇದರ ಹಿಂದೆ ಗಾಂಧೀಜಿಯ ನೆಚ್ಚಿನ ಶಿಷ್ಯರಲ್ಲೊಬ್ಬರಾಗಿ ಕಲಿತ ರಾಜಕೀಯ ಪಾಠಗಳು, ಸಮಾಜವಾದಿ ಆಂದೋಲನದ ನಾಯಕರಾಗಿ ಕಲಿತ ತಾತ್ವಿಕ ವಿವೇಚನೆಯ ಕೌಶಲ್ಯಗಳು ಇದ್ದವು. ಹಾಗಾಗಿಯೇ ಅವರಿಗೆ ಭ್ರಷ್ಟಾಚಾರವೆಂಬುದು ಕೇವಲ ಒಂದು ರೋಗಲಕ್ಷಣವೇ ಹೊರತು ಅದೇ ರೋಗವಲ್ಲ ಎಂಬ ಒಳನೋಟ ಸಾಧ್ಯವಾಯಿತು. ಆ ತಿಳುವಳಿಕೆಯೊಂದಿಗೆ ಅವರು ಭ್ರಷ್ಟಾಚಾರ ವಿರೋಧಿ ಆಂದೋಲನವನ್ನು ರಾಷ್ಟ್ರ ಪುನರ್‌ನಿರ್ಮಾಣದ ಆಂದೋಲನವಾಗಿ ಪರಿವರ್ತಿಸಿದರು.

ಆದರೆ ಅಣ್ಣಾ ಭ್ರಷ್ಟಾಚಾರ ವಿರೋಧೀ ಆಂದೋಲನವನ್ನು ಕೇವಲ ಲೋಕಪಾಲ ಮಸೂದೆಯ ಆಂದೋಲನವನ್ನಾಗಿ ಮಾತ್ರ ಸೀಮಿತಗೊಳಿಸಿ ಬೆಳೆಸುತ್ತಿರುವ ರೀತಿ ನೋಡಿದರೆ, ರಾಷ್ಟ್ರಮಟ್ಟದ ಆಂದೋಲನವೊಂದನ್ನು ನಿರ್ವಹಿಸಬಲ್ಲ ಪ್ರಬುದ್ಧತೆ ಮತ್ತು ಕುಶಲತೆ ಇವರಿಗಿದೆಯೇ ಎಂಬ ಅನುಮಾನವಂತೂ ಉಂಟಾಗುತ್ತದೆ. ಅವರು ಗುಜರಾತ್‌ನ ಮೋದಿ ಸರ್ಕಾರದ ಬಗ್ಗೆ, ಅದೊಂದು ಭ್ರಷ್ಟಾಚಾರ ರಹಿತ ಮಾದರಿ ಸರ್ಕಾರವೆಂಬಂತೆ ಮೆಚ್ಚುಗೆ ವ್ಯಕ್ತಪಡಿಸಿದಾಗ ಭ್ರಷ್ಟಾಚಾರ ಕುರಿತ ಇವರ ಕಲ್ಪನೆ ಎಷ್ಟು ಮುಗ್ಧವಾದದ್ದು, ಸೀಮಿತವಾದದ್ದು ಎಂಬುದರ ಸುಳಿವು ಸಿಕ್ಕಿತಾದರೂ, ಇಂದಿನ ದಿನಗಳಲ್ಲಿ ಅಪರೂಪವೆನಿಸುವ ಅವರ ಸರಳತೆ, ಶ್ರದ್ಧೆ, ಹೋರಾಟದ ಮನೋಭಾವ ಅವರಲ್ಲಿ ಜನತೆಗೆ ನಂಬಿಕೆ ಹುಟ್ಟಿಸಿದವು. ಆದರೆ ಅವರನ್ನು ಗಾಂಧೀವಾದಿಯೆಂದು ಮಾಧ್ಯಮಗಳು ಬಿಂಬಿಸುತ್ತಿರುವುದು ಮಾತ್ರ ಅವುಗಳ ಅಜ್ಞಾನದ ಪರಮಾವಧಿ ಎಂದೇ ಹೇಳಬೇಕು. ಮಾಜಿ ಯೋಧರಾದ ಅವರು ವಿವೇಕಾನಂದರ ಸಾಹಿತ್ಯ ಮತ್ತು ಭಗತ್ ಸಿಂಗ್– ಸುಖದೇವ್‌ರ ತ್ಯಾಗ ಬಲಿದಾನಗಳ ಕಥೆಗಳಿಂದ ಸ್ಫೂರ್ತಿ ಪಡೆದು ಸಮಾಜ ಸುಧಾರಣೆಯ ಮೂಲಕ ತಮ್ಮದೇ ಮಿತಿಗಳಲ್ಲಿ ನವ ಭಾರತ ಕಟ್ಟ ಹೊರಟವರು.

ಈವರೆಗೂ ಅವರ ಕಾರ್ಯಕ್ಷೇತ್ರ ಅವರ ಹಳ್ಳಿ ರಾಳೇಗಾಂವ್ ಸಿದ್ಧಿಯ ಪುನರ್ನಿರ್ಮಾಣಕ್ಕೆ ಮತ್ತು ಸ್ವಲ್ಪ ಮಟ್ಟಿಗೆ ಅದರ ವಿಸ್ತರಣೆಯಾಗಿ, ಮಹಾರಾಷ್ಟ್ರದ ರಾಜಕಾರಣದ ಸ್ವಚ್ಛೀಕರಣಕ್ಕೆ ಸೀಮಿತವಾಗಿತ್ತು. ಅವರು ತಮಗೆ ರಾಷ್ಟ್ರೀಯ ಖ್ಯಾತಿ ತಂದುಕೊಟ್ಟಿರುವ ತಮ್ಮ ಹಳ್ಳಿಯ ಸಾಮಾಜಿಕ– ಆರ್ಥಿಕ– ಸಾಂಸ್ಕೃತಿಕ ಪುನಾರಚನೆಗೆ, ಜನರ ಮನಃಪರಿವರ್ತನೆಗೆ ಹಿಂಸೆಯನ್ನೂ ಬಳಸುತ್ತಾರೆ. ಆದರೆ ಕೊನೆಯ ಅಸ್ತ್ರವಾಗಿ! ಇದನ್ನು ಅಲ್ಲಿಲ್ಲಿ ಓದಿ ಕೇಳಿದ್ದ ನಾನು, ಕೆಲವು ವರ್ಷಗಳ ಹಿಂದೆ ಅಣ್ಣಾ ಹಜಾರೆಯವರು ನಾನಿದ್ದ ಚಿತ್ರದುರ್ಗಕ್ಕೆ ಮುರುಘಾ ಮಠ ನೀಡಿದ ಬಸವಶ್ರೀ ಪ್ರಶಸ್ತಿ ಪಡೆಯಲು ಬಂದಾಗ (ಈ ಪ್ರಶಸ್ತಿಗೆ ಅವರ ಹೆಸರನ್ನು ಸೂಚಿಸಿದವರಲ್ಲಿ ನಾನೂ ಒಬ್ಬನಾಗಿದ್ದುದರಿಂದ, ಮಠದಲ್ಲಿದ್ದ ನನ್ನ ಕೆಲವು ಗೆಳೆಯರು ಅಸ್ವಸ್ಥನಾಗಿದ್ದ ನನ್ನನ್ನು ಭೇಟಿ ಮಾಡಿಸಲು ಅವರನ್ನು ನಮ್ಮ ಮನೆಗೆ ಕರೆತಂದಿದ್ದರು) ಅವರನ್ನು ಕೇಳಿಯೇ ಖಚಿತಪಡಿಸಿಕೊಂಡೆ. ಹಾಗಾಗಿ ಅವರನ್ನು ಗಾಂಧೀವಾದಿಯೆಂದು ಗುರುತಿಸುವುದು ಅಪದ್ಧವಾದೀತು! ಬಹುಶಃ ಅವರು ಮಹಾರಾಷ್ಟ್ರದ ಸಾಮಾನ್ಯ ರೈತನಂತೆ ಖಾದಿ ವಸ್ತ್ರ ಮತ್ತು ಟೋಪಿಧಾರಿಯಾಗಿರುವುದರಿಂದ ಅವರನ್ನು ಇತರರು ಗಾಂಧಿವಾದಿಯೆಂದು ಗುರುತಿಸುತ್ತಿರಬಹುದು!.

ಆದರೀಗ ಅವರ ಆಂದೋಲನ ಅವರನ್ನು ಅನಿವಾರ್ಯವಾಗಿ ಗಾಂಧೀವಾದಿಯನ್ನಾಗಿ ಮಾಡುತ್ತಿರುವಂತೆ ತೋರುತ್ತಿದೆ! ಏಕೆಂದರೆ ಈಗವರು ನಿರ್ವಹಿಸಬೇಕಾದದ್ದು ತಮ್ಮ ಹಳ್ಳಿ ಸಮಸ್ಯೆಯನ್ನಲ್ಲ. ಹಾಗಾಗಿ ಅವರು ತತ್ವಶಃ ಮತ್ತು ವ್ಯಕ್ತಿಶಃ ಗಾಂಧೀವಾದಿಯಾಗದೆ, ತಮ್ಮ ಸೀಮಿತ ಸಂಪನ್ಮೂಲಗಳ ಮೂಲಕ ಬೃಹತ್ ಜನಸ್ತೋಮವನ್ನಾಗಲೀ, ಬೃಹತ್ ವ್ಯವಸ್ಥೆಯನ್ನಾಗಲೀ ನಿರ್ವಹಿಸಲಾಗುವುದಿಲ್ಲ. ಹಾಗಾಗಿಯೇ ಅವರು ಮೊನ್ನೆ ಅಮರಣಾಂತ ಉಪವಾಸ ಸತ್ಯಾಗ್ರಹ ಆರಂಭಿಸುವ ಮುನ್ನ ರಾಜಘಾಟ್‌ನಲ್ಲಿ ವಿಶಾಲವಾಗಿ ಬಿಳಿ ವಸ್ತ್ರ ಹಾಸಿ, ಅದರ ಮಧ್ಯೆ ಮಾಧ್ಯಮಗಳಿಗಾಗಿ ಸುಂದರ ಚಿತ್ರಕ್ಕಾಗಿ ಕೂತಂತೆ ಧ್ಯಾನಕ್ಕೆ ಕೂತು ಜನರ ಗಮನ ಸೆಳೆದು ತಮ್ಮ ಆಂದೋಲನಕ್ಕೊಂದು ಹೊಸ ಅಧ್ಯಾತ್ಮಿಕ ಪ್ರಭೆಯೊಂದನ್ನು ಗಳಿಸಿಕೊಳ್ಳಲು ಯತ್ನಿಸಿದ್ದಾರೆ. (ಹಿಂದೊಮ್ಮೆ ವಿ.ಪಿ.ಸಿಂಗ್ ಅವರಿಗೂ, ಅವರ ಅಭಿಮಾನಿಗಳು ಮತ್ತು ಮಾಧ್ಯಮದವರೂ ಸೇರಿ ಗಾಂಧಿ ವೇಷ ಹಾಕಿಸಿ ಕೂರಿಸಿ ಚಿತ್ರ ತೆಗೆದು ಎಲ್ಲ ಕಡೆ ಪ್ರಚಾರ ಮಾಡಿದ್ದರೆಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು!) ಅವರು ಇದನ್ನು ಯಾವ ತಾತ್ವಿಕ ಸಿದ್ಧತೆಯೊಂದಿಗೆ ಎಷ್ಟು ಮನಃಪೂರ್ವಕವಾಗಿ ಮಾಡಿದರೆಂಬುದು ಮುಂದಿನ ದಿನಗಳ ಅವರ ನಡೆಗಳು ಹೇಳಲಿವೆ. ಏಕೆಂದರೆ ಅವರು ಕೆಲವೇ ದಿನಗಳ ಹಿಂದೆ ಬೆಂಗಳೂರಿನ ಸಭೆಯೊಂದರಲ್ಲಿ ಆಡಿದ ಸ್ವಯಂ ಪ್ರಶಂಸೆಯ ಮಾತುಗಳು ಅವರು ನಿಜವಾಗಿ ಭಾರತದ ಜನಸಾಮಾನ್ಯರ ಹೃದಯದಲ್ಲಿ ಸ್ಥಾನ ಪಡೆಯಲು ಅವರಿನ್ನೂ ಬಹಳ ದೂರ ಕ್ರಮಿಸಬೇಕಿದೆ ಎಂಬುದನ್ನು ಸೂಚಿಸುವಂತಿದ್ದವು.

ಅದೇನೇ ಇರಲಿ, ಅವರು ತಮ್ಮ ಅಭಿಮಾನಿಗಳ ಉತ್ಪ್ರೇಕ್ಷೆಯ ಮಾತುಗಳಿಂದ ತಮ್ಮ ನಿಜ ಗಾತ್ರವನ್ನು ಮೀರಿ ಊದುತ್ತಾ ಹೋಗಿ ಒಂದು ದಿನ ತಮ್ಮ ಶಕ್ತಿಗೆ ಮೀರಿದ

ಸಾಹಸಕ್ಕೆ ಕೈಹಾಕಿ ಅಪ್ರಸ್ತುತವಾಗಿ ಹೋಗಿಬಿಡುವರೋ (ಇತ್ತೀಚೆಗೆ ಅವರ ಬೆಂಬಲಿಗರು ಜನರಾಶಿ ನೋಡಿ ಉನ್ಮತ್ತರಾದಂತೆ, ಅಣ್ಣಾರನ್ನು ದೈವತ್ವಕ್ಕೆ ಏರಿಸುವ ಪ್ರಯತ್ನದಂತ ಕಾಣುವ ಷರತ್ತುಗಳನ್ನು ಸರ್ಕಾರಕ್ಕೆ ಹಾಕುತ್ತಾ ಆಂದೋಲನದ ಪ್ರಜಾಸತ್ತಾತ್ಮಕ ಸ್ವರೂಪಕ್ಕೇ ಧಕ್ಕೆ ತರುವ ಮೂಲಕ ಈ ಪ್ರಕ್ರಿಯೆಯನ್ನು ಆರಂಭಿಸಿದಂತಿದೆ!) ಅಥವಾ ಗಾಂಧಿಯ ನಿಜ ಪ್ರಭಾವದಿಂದ ಒಳಗೇ ಬೆಳೆಯುತ್ತಾ ಹೋಗಿ ಸದ್ಯದ ಮಾಧ್ಯಮ ಬಿಂಬವನ್ನು ಮೀರಿ ನಿಜವಾದ ಜನ ನಾಯಕರಾಗುವರೋ ಎಂಬುದು ಸದ್ಯದ ಸಂದರ್ಭ ಹುಟ್ಟಿಸಿರುವ ಮಹತ್ವದ ಪ್ರಶ್ನೆ. ಅದಕ್ಕೆ ಉತ್ತರ, ಅವರು ಭ್ರಷ್ಟಾಚಾರ ವಿರೋಧಿ ಆಂದೋಲನವನ್ನು, ಈ ರಾಕ್ಷಸ ಭ್ರಷ್ಟಾಚಾರದ ಬೇರುಗಳು ಇಂದಿನ ಯಾವ ಅಮಾನವೀಯ ಮತ್ತು ಅನಾಗರಿಕ ಅಭಿವೃದ್ಧಿ ರಾಜಕಾರಣದ ಆಳಗಳಲ್ಲಿ ಹರಡಿಕೊಂಡಿವೆಯೋ ಆ ಅಭಿವೃದ್ಧಿ ರಾಜಕಾರಣದ ವಿರುದ್ಧದ ಆಂದೋಲನವನ್ನಾಗಿ ವಿಸ್ತರಿಸುವ ಅಗತ್ಯವನ್ನು ಮನಗಾಣಬಲ್ಲಷ್ಟು ಬೆಳೆಯಬಲ್ಲರೇ ಎಂಬುದನ್ನು ಅವಲಂಬಿಸಿದೆ. ಆಗ ಅವರ ಆಂದೋಲನ ಭ್ರಷ್ಟಾಚಾರದ ಬಹು ಬಾಹುಗಳನ್ನು ಗುರುತಿಸಿ ಒಂದು ದೊಡ್ಡ ಮತ್ತು ಸಮಗ್ರ ರಾಜಕೀಯ ಆಂದೋಲನವಾಗಿ ಬೆಳೆದು ತನ್ನ ಸಾರ್ಥಕತೆಯ ನಿಜವಾದ ಅಗ್ನಿ ಪರೀಕ್ಷೆಯನ್ನು ಎದುರಿಸಲು ಸಿದ್ಧವಾಗುತ್ತದೆ.

('ಕೆಂಡ ಸಂಪಿಗೆ' ಅಂತರ್ಜಾಲ ಪತ್ರಿಕೆಯಲ್ಲಿ– ಆಗಸ್ಟ್,೨೦೧೧; ಆನಂತರ 'ಸಂವಾದ'ದ ಸೆಪ್ಟಂಬರ್, ೨೦೧೧ರ ಸಂಚಿಕೆಯಲ್ಲಿ ಪ್ರಕಟಿತ)

ಒಂದು ಪ್ರತಿಕ್ರಿಯೆ

ಪ್ರಿಯ ರಶೀದ್,

'ಕೆಂಡಸಂಪಿಗೆ'ಗಾಗಿ ನಿಮ್ಮ ಕೋರಿಕೆಯ ಮೇರೆಗೆ ಅಣ್ಣಾ ಹಜಾರೆ ಆಂದೋಲನ ಕುರಿತು ನಾನು ಬರೆದ ಲೇಖನದ ಬಗ್ಗೆ ಬಂದಿರುವ ಪ್ರತಿಕ್ರಿಯೆಗಳನ್ನು ಗಮನಿಸಿರುವೆ. ಹೆಸರು ಹಾಕಿಕೊಂಡು ಒಬ್ಬರೋ ಇಬ್ಬರೋ ಬರೆದುದನ್ನು ಬಿಟ್ಟರೆ, ಮಿಕ್ಕವರೆಲ್ಲ ಅನಾಮಿಕರಾಗಿ ಬರೆದಿದ್ದಾರೆ. ಈ ಸಂಪ್ರದಾಯವನ್ನು ಪ್ರೋತ್ಸಾಹಿಸುವುದು ಸರಿಯಲ್ಲವೆಂದೇ ನನ್ನ ಭಾವನೆ. ಹೆಸರು ಹಾಕಿಕೊಳ್ಳುವುದನ್ನು ಕಡ್ಡಾಯ ಮಾಡಿದರೆ ಪ್ರತಿಕ್ರಿಯೆ ಬರೆಯಲು ಯಾರೂ ಮುಂದೆ ಬರುವುದಿಲ್ಲ ಎಂಬ ನಿಮ್ಮ ಅಭಿಪ್ರಾಯ ಅಥವಾ ಅನುಭವದ ಮಾತು, ಇಂತಹ ಪ್ರತಿಕ್ರಿಯೆಗಳ ಹಿಂದೆ ಎಂತಹ ಬೇಜವಾಬ್ದಾರಿತನ ಅಡಗಿರುತ್ತದೆ ಎಂಬುದನ್ನಷ್ಟೆ ಸೂಚಿಸುತ್ತದೆ. ಬೇಜವಾಬ್ದಾರಿತನದಿಂದ ಏನಾದರೂ ಹುಟ್ಟಲು ಸಾಧ್ಯವೇ? ಹಾಗಾದರೆ ನೀವು ಲೇಖಕರ ಹೆಸರಿಲ್ಲದೆ ಬರುವ ಮೂಲ ಲೇಖನಗಳನ್ನೂ ಪ್ರಕಟಿಸಲಾರಂಭಿಸಿ, ಹೆಚ್ಚು 'ಜನ'ರ ಓದನ್ನು ಪಡೆಯಬಹುದಲ್ಲವೇ? ಇಂತಹ ಪ್ರಶ್ನೆಗಳು ನಿಮಗೆ ಇಷ್ಟವಾಗುವುದಿಲ್ಲವೆಂದು ಗೊತ್ತಿದ್ದರೂ, ಬರೆಯಲೇಬೇಕೆನ್ನಿಸಿದ್ದರಿಂದ ಬರೆಯುತ್ತಿರುವೆ.

ಇದನ್ನೆಲ್ಲ ನಿಮಗೆ ಏಕೆ ಬರೆಯಬೇಕಾಯಿತೆಂದರೆ, ಇಲ್ಲಿನ ಬಹುಪಾಲು ಪ್ರತಿಕ್ರಿಯೆಗಳು ನಾವು ಸಾರಾ ಸಗಟಾಗಿ ಬೆಂಬಲಿಸುತ್ತಿರುವ ಅಣ್ಣಾ ಹಜಾರೆ ಆಂದೋಲನವನ್ನು ನೀವೂ ಸಾರಾಸಗಟಾಗಿ ಬೆಂಬಲಿಸುತ್ತಾ ವಾಚಾಮಗೋಚರವಾಗಿ ಹೊಗಳಿ ಬರೆಯಿರಿ, ಇಲ್ಲವಾದರೆ ಬರೆಯದೆ ಬಾಯಿಮುಚ್ಚಿಕೊಂಡು ಸುಮ್ಮನಿರಿ ಎಂದು ಆದೇಶಿಸುವ ಧಾಟಿಯಲ್ಲಿವೆ! ಅಂತರ್ಜಾಲದಲ್ಲಿ ಈ ಹಿಂದೆ ಸಾಕಷ್ಟು ಕಾಲ ಬರೆದ ನನಗೆ, 'ಕೆಂಡ ಸಂಪಿಗೆ'ಯ ಈ ಅನುಭವ ಹೊಸದೇನಲ್ಲ! ಹಾಗಾಗಿಯೇ ನಾನು ನೀವು ಹೇಳಿದಾಗ ಬರೆಯಲು ಹಿಂಜರಿದಿದ್ದು. ಹಿಂಜರಿಕೆಗೆ ಇನ್ನೊಂದು ಮುಖ್ಯ ಕಾರಣ, ಈ ಮಾಧ್ಯಮದ ಓದುಗರಲ್ಲಿ ಬಹುಪಾಲು ಜನ ಬರಹಗಳನ್ನು ವಿವರವಾಗಿ ಅಥವಾ ಸಮಗ್ರವಾಗಿ ಓದುವುದಿಲ್ಲ, ಬಹುಶಃ ಸುಮ್ಮನೆ ಕಣ್ಣಾಡಿಸಿ ನೋಡಿ ತೀರ್ಮಾನ ಕೈಗೊಳ್ಳುವವರು. ಬರಹ ತಮ್ಮ ನಂಬಿಕೆಗಳಿಗೆ ಪೂರ್ಣ ಬದ್ಧವಾಗಿದ್ದರೆ ಪೂರ್ತಿ ಓದಿ ಸಾರಾ ಸಗಟಾಗಿ ಶ್ಲಾಘಿಸಿ ಪ್ರತಿಕ್ರಿಯಿಸುವರು ಮತ್ತು ಅದನ್ನು ಸಹಮನಸ್ಕರಿಗೆ ಕಳಿಸಿ ಪ್ರಚಾರ ಮಾಡುವರು. ಇಲ್ಲದೇ ಹೋದರೆ, ತಮ್ಮ ನಂಬಿಕೆಗಳಿಗೆ ವಿರುದ್ಧವಾಗಿ ಕಂಡ ಭಾಗಗಳನ್ನು ಉಲ್ಲೇಖಿಸಿ ಇಡೀ ಲೇಖನದ ಸಂಘಟಿತ ಅವಹೇಳನ ಶುರು ಮಾಡುವರು. ಈ ಮನೋಭಾವವನ್ನು ಸಾಮಾನ್ಯವಾಗಿ ಏನೆಂದು ಕರೆಯಲಾಗುವುದೆಂದು ನಿಮಗೇ ಗೊತ್ತಿದೆ.

ನನ್ನ ಸದರಿ ಲೇಖನಕ್ಕೂ ಆಗಿರುವುದೂ ಇದೇ! ಇದರಿಂದ ವೈಯುಕ್ತಿಕವಾಗಿ ನನಗೇನೂ ಬೇಸರವಿಲ್ಲವಾದರೂ, ಬುದ್ಧಿವಂತರದೆಂದು ಹೇಳಲಾಗುವ ಈ ಮಾಧ್ಯಮ ಹೀಗೆ ಬಹು– ಅಭಿಪ್ರಾಯಗಳ ಬಹುತ್ವ ತತ್ವ ಸಂಸ್ಕೃತಿಗೇ ವಿರುದ್ಧ ಹೊರಟಿರುವುದರ ಬಗ್ಗೆ ತೀವ್ರ ಬೇಸರವಿದೆ. ಹಿರಿಯ ಗೆಳೆಯ ಕೆ.ವಿ. ತಿರುಮಲೇಶ್ ಅವರು ಹೆಸರು ಹಾಕಿಕೊಂಡು ಪ್ರತಿಕ್ರಿಯೆ ಬರೆದಿರುವುದಕ್ಕಾಗಿ ಅವರಿಗೆ ಧನ್ಯವಾದ ಹೇಳಬಯಸುವೆ. ಆದರೆ ಈ ಮೇಲೆ ವಿವರಿಸಿದಂತಹ ಜನರಂತೆಯೇ, ಅವರೂ ನನ್ನ ಲೇಖನದ ಕೆಲವು ಭಾಗಗಳನ್ನು (ಮೊದಲೆರಡು ಮತ್ತು ಕೊನೆಯೆರಡು ಪ್ಯಾರಾಗಳನ್ನು) ಮಾತ್ರ ಓದಿ ಈ ನಾಗಭೂಷಣ ಮತ್ತೆ ಬಾಯಿ ಬಿಡಬಾರದು, ಹಾಗೆ ಬರೆಯಬೇಕು ಎಂದು ಯಾವುದೋ ಹಳೆಯ ನೆನಪಿನ ಹಠದಲ್ಲಿ ಉದ್ವಿಗ್ನರಾಗಿ ಬರೆದಂತಿದೆ! ಯಾಕೋ ತಿಳಿಯದು!!

ನನ್ನ ಲೇಖನವನ್ನು ಯಾವುದೇ ಪೂರ್ವಾಗ್ರಹವಿಲ್ಲದೆ ಇಡಿಯಾಗಿ ಓದಿದ ಯಾರಿಗಾದರೂ, ನನ್ನ ನಿಲುವು ಅಣ್ಣಾ ಆಂದೋಲನದ ಪರವಾಗಿಯೇ ಇರುವುದು ಸ್ಪಷ್ಟವಾಗುವಂತಿದೆ. ನಿಮಗೆ ತಿಳಿಸಿದಂತೆ ನಾನು ಈ ಲೇಖನವನ್ನು, ಎರಡು ದಿನ ಶಿವಮೊಗ್ಗದಲ್ಲಿ ಅಣ್ಣಾ ಆಂದೋಲನಕ್ಕೆ ಬೆಂಬಲವಾಗಿ ನಡೆದ ಪ್ರತಿಭಟನೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ ಕಾರಣದಿಂದ ಸಮಯವಾಗದೆ, ಮಧ್ಯರಾತ್ರಿ ಕೂತು ಬರೆದದ್ದು. ಲೇಖನವನ್ನು ನಿಮಗೆ ಕಳಿಸಿದ್ದು ಬೆಳಗಿನ ಝಾವ ೨.೩೦ಕ್ಕೆ! ನಾನು ಈ ಲೇಖನದಲ್ಲಿ ಅಣ್ಣಾ ಆಂದೋಲನದ ವಿರುದ್ಧ ಅವರ ವಿರೋಧಿಗಳು ಎತ್ತಿರುವ ಎಲ್ಲ ಪ್ರಶ್ನೆಗಳೂ ಮತ್ತು ಆಕ್ಷೇಪಣೆಗಳೂ ಎಷ್ಟು ಪೊಳ್ಳು ಮತ್ತು ದುರುದ್ದೇಶದಿಂದ ಕೂಡಿದವು ಎಂದು ಸವಿವರವಾಗಿ ನಿರೂಪಿಸುವ ಪ್ರಯತ್ನ

ಮಾಡಿದ್ದೇನೆ. ಆದರೆ ಇವಾವುದೂ ಇವರ ಗಮನಕ್ಕೆ ಬಾರದೆ, ಈ ಆಂದೋಲನ ಮಾಧ್ಯಮಗಳ ಅಬ್ಬರದಿಂದಾಗಿ ತನ್ನ ನಿಜತ್ವದ ಪರಿಧಿಯಾಚೆಗೆ ಉಬ್ಬಿ ಹೋಗುತ್ತಿರುವುದರ ಅಪಾಯದ ಬಗ್ಗೆ ಮತ್ತು ಈ ಆಂದೋಲನ ಲೋಕಪಾಲ ಕಾಯಿದೆಯ ಉದ್ದೇಶದಾಚೆಗೆ ವಿಸ್ತರಿಸಿಕೊಳ್ಳದಿದ್ದರೆ, ಆ ಉದ್ದೇಶವೂ ವಿಫಲವಾಗಬಹುದಾದ ಸಾಧ್ಯತೆ ಬಗ್ಗೆ ಬರೆದಿರುವುದು ಮಾತ್ರ ಇವರ ಗಮನಕ್ಕೆ ಬಂದು, ಅದನ್ನು ಟೀಕೆ, ವಿರೋಧ, ಅವಹೇಳನ, ಖಂಡನೆ, ಅಹಂಕಾರ ಹೀಗೆ ಏನೆಲ್ಲ ಹೆಸರುಗಳಿಂದ ಕರೆದಿರುವುದು, ನನ್ನಲ್ಲಿ ಈ ಬುದ್ಧಿವಂತರೆಂದು ಹೇಳಲಾಗುವ ಇವರ ಗ್ರಹಿಕೆಯ ಶಕ್ತಿ ಮತ್ತು ಕ್ರಮಗಳ ಬಗ್ಗೆಯೇ ಗಾಬರಿ ಹುಟ್ಟಿಸಿದೆ!

ನಾನು ಹಜಾರೆಯವರು ಗಾಂಧಿ ಅಥವಾ ಜೆಪಿಯಾಗಬೇಕು ಎಂದು ಎಲ್ಲಿ ಹೇಳಿರುವೆ? (ಹೇಳಿದಾಕ್ಷಣ ಯಾರಾದರೂ ಆಗಲು ಸಾಧ್ಯವೇ?) ಹಾಗೇ, ಅವರು ವಿವೇಕಾನಂದರಿಂದ ಅಥವಾ ಭಗತ್ ಸಿಂಗರಿಂದ ಸ್ಫೂರ್ತಿ ಪಡೆದದ್ದು ಸರಿಯಲ್ಲ ಎಂದು ಎಲ್ಲಿ ಹೇಳಿರುವೆ? ಅವರು ಪರಿಸ್ಥಿತಿಯ ಒತ್ತಡದಲ್ಲಿ ಗಾಂಧಿವಾದಿಯಾಗಲು ಯತ್ನಿಸುತ್ತಿರುವ ಸೂಚನೆಗಳನ್ನಷ್ಟೇ ನೀಡಿರುವೆ. ನಾನು ಲೋಹಿಯಾ ಅಥವಾ ಸಮಾಜವಾದದ ಹೆಸರನ್ನು ನನ್ನ ಲೇಖನದಲ್ಲಿ ಎಲ್ಲೂ ಪ್ರಸ್ತಾಪಿಸದಿದ್ದರೂ, ಆ ಹೆಸರುಗಳನ್ನು ಎಳೆದು ತಂದು ಇವರು ತಮ್ಮ ಟೀಕೆ ಟಿಪ್ಪಣಿಗಳ ಟೊಳ್ಳುತನವನ್ನು ತುಂಬಿಕೊಳ್ಳಲು ಏಕೆ ಬಳಸುವರು? ನಿಮ್ಮ ಟೀಕೆ–ಟಿಪ್ಪಣಿಗಳು ನಾನು ಈ ಲೇಖನದಲ್ಲಿ ಏನು ಬರೆದಿರುವೆನೋ ಅದನ್ನು ಆಧರಿಸಿರಬೇಕಲ್ಲವೇ? ಚರ್ಚೆ ಪ್ರಾಮಾಣಿಕವಾಗಿ ನಡೆಯಬೇಕೆಂದಿದ್ದರೆ, ಊಹಾಪೋಹಗಳ ಮೇಲೆ, ಪೂರ್ವಾಭಿಪ್ರಾಯಗಳ ಆಧಾರದ ಮೇಲೆ ನಡೆಯದಿರಲಿ. ಆಗ ನಾನು ನನ್ನ ಅಭಿಪ್ರಾಯವನ್ನು ಮರುಪರಿಶೀಲಿಸಿಕೊಳ್ಳಲು ಸಹಾಯವಾಗುತ್ತದೆ.

ಒಬ್ಬರಂತೂ, ನನ್ನ ವ್ಯಕ್ತಿತ್ವವನ್ನೇ ಒಟ್ಟಾರೆ ಅಂದಾಜು ಮಾಡುವ ಜವಾಬ್ದಾರಿ ವಹಿಸಿಕೊಂಡಂತೆ; ಈ ಮನುಷ್ಯ ಯಾವಾಗಲೂ ಹೀಗೇ, ತನ್ನದೇ ಅಳತೆಗೋಲುಗಳಲ್ಲಿ ಎಲ್ಲರನ್ನೂ ಅಳೆದು ಖಂಡಿಸುತ್ತಾನೆ ಎಂದು ಅಲವತ್ತುಕೊಳ್ಳುತ್ತಾ, ನನಗೆ ವಿನಯದ ಕೊರತೆಯಿದೆ ಎಂದು ಸೂಚಿಸಿದ್ದಾರೆ. ಅಲ್ಲಾ, ಇವರೇನು ಬೇರೆಯವರ ಅಳತೆಗೋಲುಗಳಲ್ಲಿ ಎಲ್ಲವನ್ನೂ ಅಳೆಯುತ್ತಾರೆಯೇ? ಇನ್ನೊಬ್ಬರು, ಎಲ್ಲರಿಗೆ ಅರ್ಹತಾ ಪತ್ರ ಕೊಡುವ ಅಧಿಕಾರ ಇವರಿಗೆ ಯಾರು ಕೊಟ್ಟರು ಎಂದು ಘರ್ಜಿಸಿದ್ದಾರೆ! ನನ್ನ ಮಾತುಗಳನ್ನು ಅರ್ಹತಾ ಪತ್ರ ಎಂದು ಇವರು ಭಾವಿಸಿರುವುದರಲ್ಲೇ ಇವರ ಕೀರಲು ಘರ್ಜನೆ ಎಂತಹ ಕೀಳರಿಮೆಯಿಂದ ಮೂಡಿಬಂದದ್ದು ಎಂಬುದು ಗೊತ್ತಾಗುವಂತಿದೆ. ಯಾವುದೇ ಒಂದು ಸಾರ್ವಜನಿಕ ವಿದ್ಯಮಾನದ ಬಗ್ಗೆ ತನಗನ್ನಿಸಿದ್ದನ್ನು ಹೇಳುವ ಅಧಿಕಾರ ಎಲ್ಲರಿಗೂ ಇರುತ್ತದೆ ಎಂಬ ಪ್ರಾಥಮಿಕ ಅರಿವೂ ಇಲ್ಲದವರೊಡನೆ ಎಂತಹ ಸಂವಾದ ಸಾಧ್ಯ?

ನಾನು ಹೊಸ ಮಧ್ಯಮ ವರ್ಗ ಮತ್ತು ಮತ್ತು ಅದರ ಸಂಪರ್ಕ ಮಾಧ್ಯಮವೆನಿಸಿರುವ ಅಂತರ್ಜಾಲವನ್ನು ಟೀಕಿಸುತ್ತಿರುವಾಗಲೇ, ಅದೇ ಮಾಧ್ಯಮವನ್ನು ಬಳಸುತ್ತಿರುವುದರ ಬಗ್ಗೆ ಮತ್ತು ಅಣ್ಣಾ ಹಜಾರೆ ಜೊತೆಯಿರುವ ನನ್ನ ಫೋಟೋವನ್ನು ಪ್ರಕಟಣೆಗೆ ಕಳಿಸಿರುವ

ಬಗ್ಗೆ ಕೆಲವರು ವ್ಯಂಗ್ಯವಾಡಿರುವುದರಲ್ಲೇ ಈ ಇಡೀ ಸಂವಾದ ಎಂತಹ ಬಾಲಿಶ ನೆಲೆಯಿಂದ ಹುಟ್ಟಿದೆ ಎಂಬುದು ಗೊತ್ತಾಗುವಂತಿದೆ. ಅಣ್ಣಾ ಬಗ್ಗೆ ನಾನು ಬರೆದಾಗ, ಅವರ ಬಗ್ಗೆ ಗೌರವ– ಅಭಿಮಾನಗಳಿರುವಾಗ (ಅವರನ್ನು ಬಸವಶ್ರೀ ಪ್ರಶಸ್ತಿಯಿಂದ ಗೌರವಿಸಬೇಕೆಂದು ಸೂಚಿಸಿದವರಲ್ಲಿ ನಾನೂ ಒಬ್ಬನೆಂದು ಹೇಳಿರುವೆನಾದರೂ) ಅವರ ಜೊತೆಯ ಫೋಟೋ ಪ್ರಕಟಣೆ ಲೇಖನಕ್ಕೊಂದು ಹೆಚ್ಚಿನ ವಿಶ್ವಾಸಾರ್ಹತೆ ನೀಡುವುದಲ್ಲವೇ? ಇನ್ನು, ಈ ಸಾರಾಸಗಟುವಾದಿಗಳಿಗೆ ಅಂತರ್ಜಾಲ ಮತ್ತು ಅದನ್ನು ಬಳಸುವವರನ್ನು ಕುರಿತ ಟೀಕೆಯನ್ನು ಯಾವ ನೆಲೆಯಲ್ಲಿ ಅರ್ಥ ಮಾಡಿಕೊಳ್ಳಬೇಕೆಂದು ಹೇಳುವುದಾದರೂ ಹೇಗೆ? ಆಧುನಿಕ ನಾಗರೀಕತೆಯೊಳಗೆ ಇರುವ ಖಂಡನೆಗೆ ಒಳಗಾಗಿರುವುದರಿಂದಲೇ ಹಲವರು ಈ ಆಧುನಿಕ ನಾಗರೀಕತೆಯ ಬಲೆಯಿಂದ ತಪ್ಪಿಸಿಕೊಳ್ಳಲು ಹಂಬಲಿಸುವಂತಾಗಿರುವುದು. ಅದರಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗುವವರೆಗೆ ಅವರು ಆ ಖಂಡನೆಗೆ ಒಳಗಾಗಿರುವುದು ಅನಿವಾರ್ಯ. ಆದರೆ ಆ ಖಂಡನೆಯ ಅರಿವೇ ಇಲ್ಲದವರಿಗೆ ಅಥವಾ ಅರಿವಾಗುವವರೆಗೆ, ಅವರಿಗೆ ಅದೇ ಆರಾಧ್ಯ ದೈವ! ಅವರು ಅದರ ಭಜನೆ ನಡೆಸುತ್ತಲೇ ಇರುತ್ತದೆ. ಆ ಭಜನೆಯ ಬಾಜಾ ಭಜಂತ್ರಿಯ ಅಬ್ಬರದಲ್ಲಿ, ದೂರದ ಬಿರುಗಾಳಿಯ ಸದ್ದಿರಲಿ, ಹತ್ತಿರದ ತಂಗಾಳಿಯ ಸ್ಪರ್ಶವೂ ಅವರಿಗೆ ತಾಗದು!

ಪ್ರಿಯ ರಶೀದ್, ಇದನ್ನು ಒಂದೂ ಶಬ್ದ ಬಿಡದೆ ಅಥವಾ ಸೇರಿಸದೆ ಪ್ರಕಟಿಸಬೇಕೆಂದು ನನ್ನ ಪ್ರೀತಿಪೂರ್ವಕ ಆಗ್ರಹ. ನಿಮ್ಮ ಪ್ರೀತಿಪೂರ್ವಕ ಕೋರಿಕೆಯ ಮೇರೆಗೆ ಹೇಗೆ ನಾನು ಸಕಾಲದಲ್ಲಿ ಲೇಖನ ಬರೆದುಕೊಟ್ಟೆನೋ ಆ ಪ್ರೀತಿಪೂರ್ವಕತೆಯನ್ನು ಹಿಂದಿರುಗಿಸುವುದರ ಪ್ರತೀಕವಾಗಿ ನೀವು ಇದನ್ನು ಸಕಾಲದಲ್ಲಿ ಪ್ರಕಟಿಸಿರಿ. ಎಲ್ಲಿಯವರೆಗೆ ನಿಮ್ಮ ಓದುಗರು ಅವರ ಈ– ಮೇಲ್ ವಿಳಾಸದ ಜೊತೆಗೇ ಹೆಸರು ನಮೂದಿಸಿ ಪ್ರತಿಕ್ರಿಯೆ ಬರೆದರೆ ಮಾತ್ರ ಅವು ಪ್ರಕಟವಾಗುವಂತೆ ನೀವು ವ್ಯವಸ್ಥೆ ಮಾಡುವುದಿಲ್ಲವೋ ಅಲ್ಲಿಯವರೆಗೆ ನಾನು ಮತ್ತೆ ನಿಮಗೆ ಬರೆಯಲಾರೆ. ಮೂಗರ್ಜಿ ಸಂಸ್ಕೃತಿಯನ್ನು ನಾನು ಪ್ರೋತ್ಸಾಹಿಸಲಾರೆ!

ಒಂದು ಪತ್ರ

ಪ್ರಿಯ ದಿನೇಶ್ ಅಮೀನ್‌ಮಟ್ಟು,

ನಿಮ್ಮ ಇಂದಿನ (ದಿನಾಂಕ: ೨೨.೮.೨೦೧೧) ಅಂಕಣ ಓದಿದೆ. ಚೆನ್ನಾಗಿದೆ; ಸಮತುಲಿತವಾಗಿದೆ. ಆದರೆ ನಿಮ್ಮ ಒಂದೆರಡು ವಾದಗಳನ್ನು ಒಪ್ಪಲಾಗುವುದಿಲ್ಲ. ಒಂದು, ಅಣ್ಣಾಗೆ ಬೀದಿಗೆ ಬಂದಿರುವಷ್ಟು ಜನರ ಬೆಂಬಲ ಮಾತ್ರವಿದೆ ಎಂದು ಹೇಳಲಾಗುವುದಿಲ್ಲ. ಬೀದಿಗೆ ಬರುವವರು– ಅವರಲ್ಲಿ ಕೆಲವರು ಯಾವ ಉದ್ದೇಶದಿಂದಲೇ ಬಂದಿರಲಿ– ನಿಜವಾಗಿ ಸಂಬಂಧಪಟ್ಟ ವಿಷಯದ ಬಗೆಗೆ ಕಾಳಜಿ ಇರುವ ಶೇ. ೧೦ರಷ್ಟೂ ಇರಲಾರರು. ಸ್ವಾತಂತ್ರ್ಯ ಆಂದೋಲನದಲ್ಲಾಗಲೀ, ಜೆಪಿ ಚಳುವಳಿಯ ಸಂದರ್ಭದಲ್ಲಾಗಲೀ ಅದರ ಬೆಂಬಲಿಗರೆಲ್ಲರೂ

ಬೀದಿಗೆ ಬಂದಿರಲಾರರು, ಚುನಾವಣಾ ಸಭೆಗೆ ಬಂದವರು ಮಾತ್ರ ಮತ ಹಾಕುವರು ಎಂದು ಹೇಳಲಾಗುತ್ತದೆಯೇ?

ಇನ್ನೊಂದು. ಮಹಾರಾಷ್ಟ್ರ, ಮಧ್ಯ ಪ್ರದೇಶ ಅಥವಾ ಗುಜರಾತ್‌ನಲ್ಲಿ ತಾವು ನಂಬಿದ ಚಳುವಳಿಗಳಿಗಾಗಿ ಪ್ರಾಣ ತೆತ್ತವರ ಬಗ್ಗೆ ಅಣ್ಣಾ ಬೆಂಬಲಿಗರಿಗೇನೂ ತಿರಸ್ಕಾರವಿರಲಾರದು ಅಥವಾ ಅವರನ್ನು ದೇಶಪ್ರೇಮಿಗಳಲ್ಲ ಎಂದು ಭಾವಿಸಿಯೂ ಇರಲಾರರು. ಇವೆರಡೂ ಪರಸ್ಪರ ಸಂಬಂಧ ಪಡದ ವಿಷಯಗಳು; ಅವನ್ನು ಜೋಡಿಸಿ ತೀರ್ಮಾನಗಳಿಗೆ ಬರುವುದು, ಇಡೀ ಲೇಖನದ ಸದುದ್ದೇಶವನ್ನೇ ಅನುಮಾನಾಸ್ಪದಗೊಳಿಸಬಲ್ಲುದು.

ನಿಜ, ಅಣ್ಣಾ ಮಹಾತ್ಮ ಗಾಂಧಿಯೂ ಅಲ್ಲ, ಜೆಪಿಯೂ ಅಲ್ಲ. ಆದರೆ ನಾವಾರೂ ನಮ್ಮದೇ ಆದ ಕಾರಣ ಹಾಗೂ ಮಿತಿಗಳಿಂದಾಗಿ ಕೈಗೆತ್ತಿಕೊಳ್ಳಲಾಗದ ಹೋರಾಟವೊಂದನ್ನು ಅವರು ಅರಂಭಿಸಿದ್ದಾರೆ. ಅದನ್ನು ಸಲ್ಲದ ಕಾರಣಗಳಿಗೆ ಟೀಕಿಸದಿರೋಣ. ಆದರೆ ಅದೇ ಹೊತ್ತಿನಲ್ಲಿ ಅದು ಪಡೆದುಕೊಳ್ಳುತ್ತಿರುವ 'ಅಹಂಕಾರ'ದ ತಿರುವನ್ನೂ ಗಮನಿಸಿ ಎಚ್ಚರಿಸೋಣ. ತಮ್ಮ ಮಸೂದೆಯೇ ಜಾರಿಯಾಗಬೇಕು, ಸಣ್ಣ ಪುಟ್ಟ ಬದಲಾವಣೆಗಳಿಗೂ ಅಣ್ಣಾರ ಅನುಮತಿ ಬೇಕು ಮತ್ತು ಆಗಸ್ಟ್ ಅಂತ್ಯದೊಳಗೇ ಜಾರಿಯಾಗಬೇಕು (ಕಾಲಮಿತಿಯಂತೂ ಇರಲೇಬೇಕು ಎನ್ನುವುದು ಬೇರೆ ವಿಚಾರ) ಎಂಬ ಷರತ್ತಿನ ಮಾತುಗಳ ಮೂಲಕ ಆಂದೋಲನ, ಅದರ ಬೆಂಬಲಿಗರ ಒಂದು ವರ್ಗದ ಸಹಾನುಭೂತಿಯನ್ನು ಕಳೆದುಕೊಳ್ಳುವ ಎಲ್ಲ ಸಾಧ್ಯತೆಗಳಿವೆ. ಹಾಗಾಗಬಾರದು. ಆ ರೀತಿಯಲ್ಲಿ ನಾವು ಅದನ್ನು ವಿಮರ್ಶಿಸಬೇಕು ಎಂದು ಬಯಸುವವನು ನಾನು. ಏಕೆಂದರೆ ಅಣ್ಣಾ ವಿರುದ್ಧ ನಿಂತಿರುವ– ಕಾಂಗ್ರಸ್ಸಿನೊಳಗೆ ಮತ್ತು ಹೊರಗೆ– ಶಕ್ತಿಗಳನ್ನು ನೋಡಿದರೆ ದುಗುಡವಾಗುತ್ತದೆ; ಆತಂಕವಾಗುತ್ತದೆ.

ಮೊನ್ನೆ ರಶೀದರ ಕಾಟ ತಾಳಲಾರದೆ 'ಕೆಂಡಸಂಪಿಗೆ'ಗಾಗಿ ಅಣ್ಣಾ ಆಂದೋಲನ ಕುರಿತೇ ಲೇಖನವೊಂದನ್ನು ಬರೆದೆ. ಎಲ್ಲೋ ಒಂದೆರಡು ನೆಲೆಗಳಲ್ಲಿ ಅದರ ಮಿತಿಗಳನ್ನು ಸೂಚಿಸಿದ ಕಾರಣಕ್ಕೇ ಅದರ ಬಹು ಓದುಗರು ನನ್ನ ಮೇಲೆ ಹೇಗೆ ಮುಗಿಬಿದ್ದರೆಂದರೆ, ನಾನು ನಿಮಗೆ ಬರೆಯಲಾರೆ ಎಂದು ರಶೀದರಿಗೆ ಹೇಳಬೇಕಾಯಿತು. ನೀವು ಇದನ್ನೆಲ್ಲ ಗಮನಿಸಿರುವಿರೋ ಇಲ್ಲವೋ ತಿಳಿಯದು. ನಿಮ್ಮ ಕುತೂಹಲಕ್ಕಾಗಿ ನನ್ನ ಆ ಮೂಲ ಲೇಖನ ಹಾಗೂ ಅದಕ್ಕೆ ಬಂದ ಪ್ರತಿಕ್ರಿಯೆಗಳಿಗೆ ಉತ್ತರವಾಗಿ ನಾನು ರಶೀದ್‌ಗೆ ಬರದ ಪತ್ರದ ಪ್ರತಿಗಳನ್ನು ಕಳಿಸುತ್ತಿರುವೆ. ಓದಿರಿ.

ನಾನು ಈ ಹಿಂದೆ ಕಳಿಸಿದ ನಾನು ಸಂಪಾದಿಸುತ್ತಿರುವ ನವ ಮಾನವ ಮಾಸಿಕದ ಪಿಡಿಎಫ್ ರೂಪವನ್ನು ನೀವು ಗಮನಿಸಿರುವಿರಿ ಎಂದು ಭಾವಿಸುವೆ. ಮುದ್ರಿತ ಪತ್ರಿಕೆ ಬೇಕೆಂದಿದ್ದರೆ ತಿಳಿಸಿ.

ವಂದನೆಗಳೊಂದಿಗೆ,

–ಡಿಎಸ್ಸೆನ್

ಇನ್ನೊಂದು ಪತ್ರ:

ಪ್ರಿಯ ಇಂದೂಧರ್,

'ಸಂವಾದ'ದಲ್ಲಿ ಸಾಕಷ್ಟು ಸಮಯದ ನಂತರ ಸಂಪಾದಕೀಯ ಬರಹವನ್ನು ನೋಡಿ (ನವೆಂಬರ್, ೨೦೧೧) ಸಂತೋಷವಾಯಿತು. ಪತ್ರಿಕೆಯಲ್ಲಿ ಸಂಪಾದಕೀಯವಿಲ್ಲದಿರುವ 'ಅವಲಕ್ಷಣ'ದ ಬಗ್ಗೆ ಅನೇಕ ಬಾರಿ ನಿಮಗೆ ತಿಳಿಸಿದ್ದು ನೆನಪಿರಬೇಕು. ಸಂಪಾದಕೀಯ ಪತ್ರಿಕೆಯೊಂದರ ಬೆನ್ನೆಲುಬು ಇದ್ದಂತೆ. ಪತ್ರಿಕೆ ಅನೇಕ ವಿಭಿನ್ನ ವಿಚಾರಗಳಿಗೆ ವೇದಿಕೆಯಾಗಿದ್ದರೂ, ಅದಕ್ಕೊಂದು ತಾತ್ವಿಕ ನಿಲುವು ಸ್ಪಷ್ಟವಿರುವುದು ಅವಶ್ಯ. ಅದು ಎಲ್ಲ ಕಾಲಕ್ಕೂ ಸ್ಥಿರವಾಗಿರಬೇಕೆಂದೇನೂ ಇಲ್ಲ. ಆದರೆ ಅದು ಪತ್ರಿಕೆಯ ದಿಕ್ಸೂಚಿಯಾಗಿ ಸದಾ ಕ್ರಿಯಾಶೀಲವಾಗಿರಬೇಕು.

'ಸಂವಾದ' ಹತ್ತನೇ ವರ್ಷಕ್ಕೆ ಕಾಲಿಡುತ್ತಿರುವುದು ಕನ್ನಡ ವೈಚಾರಿಕ ಜಗತ್ತಿಗೊಂದು ಸಂಭ್ರಮದ ಸಂದರ್ಭವೇ ಆಗಿದೆ. ಏಕೆಂದರೆ, 'ಸಂವಾದ' ತನ್ನ ಸಂಪಾದಕೀಯ ನೀತಿಯಲ್ಲಿ ಸಾಕಷ್ಟು ಉದಾರವಾಗಿರುವ ಕಾರಣ, ಹಲವು ಹತ್ತು ಬಗೆಯ– ಕೆಲವೊಮ್ಮೆ ಶುದ್ಧ ಬೂಸಾ ಎನ್ನಿಸುವ– ಬರಹಗಳನ್ನು ಪ್ರಕಟಿಸುತ್ತಾ ಕನ್ನಡದ ವೈಚಾರಿಕ ಜಗತ್ತಿನ ವೈವಿಧ್ಯಮಯ ಬಣ್ಣ ಬೆಡಗುಗಳನ್ನು ಅನಾವರಣಗೊಳಿಸುತ್ತಾ ಬಂದಿದೆ. ಕಳೆದ ಒಂಭತ್ತು ವರ್ಷಗಳಲ್ಲಿ ಈ ಪತ್ರಿಕೆ ಶ್ರೇಷ್ಠ ಲೇಖನಗಳಿಗೆ ಮತ್ತು ಚರ್ಚೆಗಳಿಗೆ ವೇದಿಕೆಯಾಗಿ ಕನ್ನಡದ ಬೌದ್ಧಿಕತೆಯ ಬೆಳವಣಿಗೆಗೆ ತನ್ನದೇ ಕೊಡುಗೆ ಸಲ್ಲಿಸಿದೆ. ಅದಕ್ಕಾಗಿ ಈ ಸಂದರ್ಭದಲ್ಲಿ ಈ ಪತ್ರಿಕೆಯನ್ನು ಮತ್ತು ಅದರ ಹಿಂದಿನ ಚೈತನ್ಯವಾಗಿರುವ ನಿಮ್ಮನ್ನೂ ಅಭಿನಂದಿಸಬೇಕಿದೆ.

ಸದರಿ ಸಂಪಾದಕೀಯದಲ್ಲಿ ರಾಷ್ಟ್ರಜೀವನದ ಸದ್ಯದ ಅತ್ಯಂತ ಮುಖ್ಯ ವಿದ್ಯಮಾನವಾಗಿರುವ ಅಣ್ಣಾ ಹಜಾರೆ ಆಂದೋಲನದ ಬಗ್ಗೆ ಪ್ರಸ್ತಾಪ ಮಾಡಿರುವುದು ಉಚಿತವಾಗಿಯೇ ಇದೆ. ಆದರೆ ಅದರ ಬಗ್ಗೆ ಸಾರಾ ಸಗಟಾದ ನಿಷೇಧಾತ್ಮಕ ಮಾತುಗಳನ್ನು ಬರೆದಿರುವುದು ಅಷ್ಟೇ ಅನುಚಿತ ಎನ್ನಿಸುತ್ತದೆ. ನಿಮ್ಮಂತೆ ನನಗೂ ಈ ಆಂದೋಲನದ ಬಗ್ಗೆ ಕೆಲವು ಅನುಮಾನಗಳಿವೆ. ಆದರೆ ವ್ಯವಸ್ಥೆಯ ವಿರುದ್ಧ ಜನಜೀವನದ ಮುಖ್ಯ ವಾಹಿನಿಯಲ್ಲಿ ಪ್ರತಿರೋಧವನ್ನೇ ಕಾಣದ ಈ ಕತ್ತಲೆಯ ಈ ದಿನಗಳಲ್ಲಿ ಅಣ್ಣಾ ಒಂದು ಬೆಳಕಿನ ದೊಂದಿ ಹಚ್ಚಿಟ್ಟಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಅವರ ಆಂದೋಲನದ ವಿರುದ್ಧ ಸಲ್ಲದ ಆರೋಪಗಳನ್ನು ಮಾಡುತ್ತಾ ಆ ಆಂದೋಲನದ ವಿಶ್ವಾಸಾರ್ಹತೆಗೇ ಭಂಗ ತರುವಂತಹ ನಿರ್ಣಾಯಕ ಮಾತುಗಳನ್ನಾಡುವುದು ನಾವು ಬೆಳೆಸಿಕೊಂಡು ಬಂದಿರುವ ಪ್ರಗತಿಪರತೆಯ ಅತಿ ಗರ್ವದ ಪ್ರತೀಕವೆಂದೇ ನಾನು ಭಾವಿಸಿದ್ದೇನೆ.

ಅಣ್ಣಾ, ಕಾಶ್ಮೀರ ಕುರಿತ ಪ್ರಶಾಂತ್ ಭೂಷಣ್ ಅವರ ಹೇಳಿಕೆಯಿಂದ ತಮ್ಮ ಆಂದೋಲನದ ದೃಷ್ಟಿ ಕೇಂದ್ರ ವಿಚಲಿತವಾಯಿತೆಂದು ಭಾವಿಸಿ, ಕಾಶ್ಮೀರ ಸಂಬಂಧವಾಗಿ ಪಾಕಿಸ್ತಾನದೊಡನೆ ಯುದ್ಧ ಸಂಭವಿಸಿದರೆ ತಾವು ಈಗಲೂ ಅದರಲ್ಲಿ ಪಾಲ್ಗೊಳ್ಳಲು ಸಿದ್ಧ

ಎಂದರಷ್ಟೆ. ಇದು ಅಣ್ಣಾರಂತಹ ಯಾವುದೇ ಮಾಜಿ ಯೋಧ ಆಡುವ ಸಹಜ ಮಾತು. ಅವರೇನೂ ಪಾಕಿಸ್ತಾನದೊಡನೆ ಯುದ್ಧಕ್ಕೆ ಕರೆ ಕೊಟ್ಟಿಲ್ಲ! ಆದರೆ ಅಣ್ಣಾ ಅವರ ಮಾತುಗಳನ್ನು ಹಾಗೆ ಪ್ರತಿಬಿಂಬಿಸುವ ಹಾತೊರಿಕೆಯ ಹಿಂದಿನ ಉದ್ದೇಶವಾದರೂ ಏನು ನನಗೆ ಅರ್ಥವಾಗುತ್ತಿಲ್ಲ. ಮುಂದುವರೆದ ನೀವು, ತಮ್ಮ ಊರಿನ ಅಸ್ಪೃಶ್ಯತೆಯನ್ನು ಸಾಮಾಜಿಕ ಸಾಮರಸ್ಯದ ಹೆಸರಿನಲ್ಲಿ ಪೋಷಿಸುತ್ತಿರುವ ವ್ಯಕ್ತಿ ದೇಶಕ್ಕೆ ಆದರ್ಶವಾಗಲು ಹೇಗೆ ಸಾಧ್ಯ ಎಂದು ಕೇಳಿದ್ದೀರಿ. ಅಣ್ಣಾ ದೇಶಕ್ಕೆ ಆದರ್ಶವಾಗಲು ಇನ್ನೂ ಬಹು ದೂರ ಸಾಗಬೇಕಿದೆ ಎಂಬುದು ನಿಜವಾದರೂ, ಅವರ ರಾಳೇಗಾಂವ್ ಸಿದ್ಧಿ ಗ್ರಾಮದಲ್ಲಿ ಅಸ್ಪೃಶ್ಯತೆ ಯಾವ ರೂಪದಲ್ಲಿ ಆಚರಣೆಯಲ್ಲಿದೆ ಎಂಬುದರ ವಿವರ ನೀಡದೆ, ಹೀಗೆ ದುಂಡು ದುಂಡಾಗಿ ಮಾತಾಡುವುದರಿಂದ ಯಾವ ಪ್ರಯೋಜನವೂ ಇಲ್ಲ. ಆ ಗ್ರಾಮದಲ್ಲಿ ಸಾರ್ವಜನಿಕ ಸವಲತ್ತುಗಳು ಮತ್ತು ನಾಗರಿಕ ಹಕ್ಕುಗಳು ಜಾತಿ ಆಧಾರದ ಮೇಲೆ ವಿತರಣೆಯಾಗುತ್ತಿರುವ ಉದಾಹರಣೆಗಳೇನಾದರೂ ನಿಮ್ಮ ಗಮನಕ್ಕೆ ಬಂದಿದ್ದಲ್ಲಿ ಅದರ ಬಗ್ಗೆ ದಯವಿಟ್ಟು ಬರೆಯಿರಿ. ಕರ್ನಾಟಕದಲ್ಲಿ ಸಾಕಷ್ಟು ವರ್ಷಗಳಿಂದ ಸಮಾಜವಾದಿ, ಕಮ್ಯೂನಿಸ್ಟ್, ದಲಿತ, ರೈತ ಇತ್ಯಾದಿ 'ಪ್ರಗತಿಪರ' ಚಳುವಳಿಗಳು ತಮ್ಮೆಲ್ಲ ಸೈದ್ಧಾಂತಿಕ ಸ್ಪಷ್ಟತೆ ಮತ್ತು ತೀವ್ರತೆಗಳೊಂದಿಗೆ ನಡೆಸಿದ ಹೋರಾಟಗಳಿಂದ ಸಾಧ್ಯವಾಗದ್ದನ್ನು ಅಣ್ಣಾ ಹಜಾರೆಯವರ ವೈಯುಕ್ತಿಕ ಸಾಹಸದ ಎರಡು ದಶಕಗಳಲ್ಲಿ ನಿರೀಕ್ಷಿಸುವ ನಾವು ನಮ್ಮ ಒಳಗನ್ನೊಮ್ಮೆ ಕಣ್ಣರಳಿಸಿ ನೋಡಿಕೊಳ್ಳಬೇಕಾಗಿದೆ.

ಇನ್ನು ನೀವು ಭ್ರಷ್ಟಾಚಾರ ಕೇವಲ ಹಣಕಾಸಿನ ವ್ಯವಹಾರವಲ್ಲ. ಅದನ್ನು ಮೀರಿದ ಸೈದ್ಧಾಂತಿಕ ಹಾಗೂ ನೈತಿಕ ಭ್ರಷ್ಟಾಚಾರ ಎಷ್ಟು ಅಪಾಯಕಾರಿ ಎನ್ನುವುದು ಬಹಳ ಜನರಿಗೆ ಅರ್ಥವಾಗಿಲ್ಲ ಎಂದಿದ್ದೀರಿ. ಈ ಮಾತುಗಳಲ್ಲಿ ಹಣಕಾಸಿನ ಭ್ರಷ್ಟಾಚಾರವನ್ನು ಕ್ಷಮಿಸುವ ಧ್ವನಿ ಎದ್ದು ಕಾಣುತ್ತಿದ್ದು, ಅದನ್ನು ಮುಚ್ಚಲು ಭ್ರಷ್ಟಾಚಾರದ ವ್ಯಾಖ್ಯಾನವನ್ನು ಹೀಗೆ ಅಮೂರ್ತವಾಗಿ ವಿಸ್ತರಿಸಲಾಗಿದೆ ಎಂಬ ಅನುಮಾನ ಬರುವಂತಿದ್ದು, ಇದು ನನಗೆ ಹೆಚ್ಚು ನೋವನ್ನುಂಟು ಮಾಡಿದೆ. ಅಣ್ಣಾ ಯಾವುದೋ ಒಂದು ನಿರ್ದಿಷ್ಟ ಕೆಟ್ಟದ್ದರ ವಿರುದ್ಧ ಹೋರಾಟ ಆರಂಭಿಸಿದ್ದಾರೆ. ಅದನ್ನು ಬೆಂಬಲಿಸೋಣ. ಹಾಗೆ ಬೆಂಬಲಿಸುತ್ತಲೇ ಅದನ್ನು ವಿಸ್ತರಿಸುವ ಮಾತನಾಡೋಣ. ಆ ಸಂಬಂಧ ರಚನಾತ್ಮಕವೆನಿಸುವ ಒತ್ತಡವನ್ನೂ ಹೇರೋಣ. ಈಗಾಗಲೇ ಇಂತಹ ಒತ್ತಡಗಳ ಪರಿಣಾಮಗಳನ್ನು ನಾವು ನೋಡುತ್ತಿದ್ದೇವೆ. ಅಣ್ಣಾ ಜನಲೋಕಪಾಲ ಮಸೂದೆ ಹೋರಾಟದ ನಂತರ ಚುನಾವಣಾ ಸುಧಾರಣೆ ಮತ್ತು ಅಧಿಕಾರ ವಿಕೇಂದ್ರೀಕರಣದ ಹೋರಾಟಗಳನ್ನು ಕೈಗೆತ್ತಿಕೊಳ್ಳುವುದಾಗಿ ಹೇಳಿದ್ದಾರೆ. (ಅವರ ಮತ್ತು ಅವರ ಸಂಗಾತಿಗಳ ಮೂಲ ಆಂದೋಲನಗಳ ಹೆಸರೇ ಗ್ರಾಮ ಸ್ವರಾಜ್ಯ ಆಂದೋಲನ ಎಂಬುದನ್ನು ನಾವು ಗಮನಿಸಬೇಕು) ಹಾಗೇ, ತಮ್ಮ ಕೇಂದ್ರ ಸಮಿತಿಯನ್ನು ಪರಿಷ್ಕರಿಸಿ ಸಾಮಾಜಿಕ ವೈವಿಧ್ಯತೆಯನ್ನು ಪ್ರತಿಬಿಂಬಿಸುವ ಹಾಗೆ ಅದನ್ನು ವಿಸ್ತರಿಸುವ ನಿರ್ಧಾರ ಪ್ರಕಟಿಸಿದ್ದಾರೆ. ನಾವು ಇತ್ತೀಚಿನ ದಿನಗಳಲ್ಲಿ ನಮ್ಮ ತಾತ್ವಿಕ ದಾರಿದ್ರ್ಯವನ್ನು ತುಂಬಿಕೊಳ್ಳಲು

ಸೃಷ್ಟಿಸಿಕೊಂಡಿರುವ ಬಿಜೆಪಿ ಭೂತದ ಭಯದಿಂದ ಬಿಡಿಸಿಕೊಂಡು ಯೋಚನೆ ಮಾಡತೊಡಗಿದರೆ ಅಣ್ಣಾ ಚಿತ್ರ ಇದಿದ್ದ ಹಾಗೆ, ಸ್ಪಷ್ಟವಾಗಿ ಕಾಣತೊಡಗುವುದು.

ಒಬ್ಬ ವ್ಯಕ್ತಿ ತನ್ನ ವ್ಯಕ್ತಿತ್ವದ ಮಿತಿಗಳಿಗೆ ತಕ್ಕಂತೆ ಕೆಲಸ ಮಾಡುತ್ತಾನೆ. ಮೊದಲಾಗಿ ಕೆಲವು ಅನಕ್ಷರಸ್ಥ ಮಾಧ್ಯಮಗಳು ಬಿಂಬಿಸಿರುವಂತೆ ಅಣ್ಣಾ ಮೂಲತಃ ಗಾಂಧಿವಾದಿಯೇನೂ ಅಲ್ಲ. ಆತನೋರ್ವ ಕಚ್ಚಾ ಹೋರಾಟದ ಕೆಚ್ಚಿರುವ ಸಾಮಾನ್ಯ ಮನುಷ್ಯ. ಅವರ ಜೀವನ ಚರಿತ್ರೆಯನ್ನೋದಿದರೆ ಇದು ಗೊತ್ತಾಗುತ್ತದೆ. ಅವರ ಮೇಲೆ ವಿವೇಕಾನಂದ, ಭಗತ್ ಸಿಂಗ್, ಸುಭಾಷರ ಸಮ್ಮಿಶ್ರ ಪ್ರಭಾವ ಇದೆ. ಇತ್ತೀಚಿನ ವರ್ಷಗಳಲ್ಲಷ್ಟೇ ಸಹವಾಸ 'ದೋಷ'ದಿಂದಾಗಿ ಅವರು ಗಾಂಧಿಯಿಂದ ಪ್ರಭಾವಿತರಾದವರು. ಹಾಗಾಗಿ ಅವರಿಗಿನ್ನೂ ಗಾಂಧೀಜಿಯ ಅಹಿಂಸಾ ಮೀಮಾಂಸೆಯ ಬಗ್ಗೆ ಇನ್ನೂ ಪೂರ್ಣ ನಂಬಿಕೆಯಿಲ್ಲ! ಹೀಗಿರುವಾಗ ನಾವು ಇನ್ನೂ ಮುಂದುವರೆದು ಅವರು ಅಂಬೇಡ್ಕರ್‌ವಾದಿಯೋ, ಲೋಹಿಯಾವಾದಿಯೋ ಆಗಿರಬೇಕೆಂದು ಬಯಸುವುದು ನಮ್ಮ ಹುಚ್ಚುತನ ಮಾತ್ರವಾದೀತು. ಅವರು ಬೆಳೆಯಬಹುದು. ಬೆಳೆಯದೆಯೂ ಇರಬಹುದು. ಆದರೆ ಅವರು ನಾವಾರೂ ಮಾಡಲಾಗದ ಕೆಲಸವೊಂದನ್ನು ಈಗ ರಾಷ್ಟ್ರ ಮಟ್ಟದಲ್ಲಿ ಕೈಗೆತ್ತಿಕೊಂಡಿದ್ದಾರೆ. ಅವರ ಮತ್ತು ಅದರ ಮಿತಿಗಳಿಗೆ ತಕ್ಕಂತೆ ಅದು ಫಲ ನೀಡಲಿದೆ. ಅವು ಮಿತಿಗಳುಳ್ಳ ಫಲಗಳೇ ಆಗಬಹುದು. ಆದರೆ ದುಷ್ಟ ಫಲಗಳಾಗಲಾರವು. ಈ ಎಚ್ಚರದೊಡನೆ ಅವರ ಆಂದೋಲನವನ್ನು ನಾವು ವಿಮರ್ಶಿಸೋಣ. ಅವರ ಆಂದೋಲನವನ್ನು ವಿಸ್ತರಿಸಲು, ಅಗತ್ಯ ಬಿದ್ದಾಗ ನಮ್ಮ ಯೋಗ್ಯತಾನುಸಾರ ತಿದ್ದಲು, ಪೂರ್ಣಗೊಳಿಸಲು ನಮ್ಮಿಂದೇನಾದರೂ ಸಾಧ್ಯವೇ ಎಂದು ಯೋಚಿಸೋಣ. ಬರಿದೇ ಟೀಕೆ, ಅದೂ ಸಾರಾಸಗಟಾದ ಟೀಕೆ ನಮ್ಮ ಎಡಪಂಥೀಯ ಅಹಂಕಾರದ ಅಭಿವ್ಯಕ್ತಿ ಮಾತ್ರವಾದೀತು ಎಂದು ನಾನು ಭಾವಿಸಿದ್ದೇನೆ.

('ಸಂವಾದ'ಕ್ಕೆ ಬರೆದ; ಆದರೆ ಅದರಲ್ಲಿ ಪ್ರಕಟವಾಗದ ಪತ್ರ. 'ನವ ಮಾನವ ಮಾಸಿಕ'ದ ಜನವರಿ– ೨೦೧೨ರ ಸಂಚಿಕೆಯಲ್ಲಿ ಪ್ರಕಟ)

ಮತ್ತೊಂದು ಪತ್ರ

ಮಾನ್ಯರೇ,

ತನ್ನ ಲೋಕಪಾಲ ಮಸೂದೆಯೇ ಶ್ರೇಷ್ಠ, ಅದನ್ನು ಮಾತ್ರ ಜಾರಿಗೆ ತರಬೇಕೆಂದು ಒತ್ತಾಯಿಸಿ ಸಂಸತ್ತಿನ ಪಾವಿತ್ರ್ಯ ಮತ್ತು ಪರಮಾಧಿಕಾರವನ್ನು ಪ್ರಶ್ನಿಸುವ ಮೂಲಕ ಅಪ್ರಜಾಸತ್ತಾತ್ಮಕವಾಗಿ ವರ್ತಿಸುತ್ತಿದ್ದಾರೆಂದು ಅಣ್ಣಾ ಹಜಾರೆ ಮತ್ತವರ ತಂಡವನ್ನು ಕಾಂಗ್ರೆಸ್ ಮತ್ತವರ 'ಪ್ರಜಾಸತ್ತಾವಾದಿ' ಗೆಳೆಯರು ಈವರೆಗೆ ದೂಷಿಸುತ್ತಿದ್ದರು. ಆದರೆ ಈಗ ಕಾಂಗ್ರೆಸ್

ಮಾಡಿದ್ದಾದರೂ ಏನು? ಅಂಗೀಕಾರವಾದರೆ ತನ್ನ ಮಸೂದೆಯೇ ಅಂಗೀಕಾರವಾಗಬೇಕೆಂಬ ಹಠದಲ್ಲಿ ಲೋಕಪಾಲ ಮಸೂದೆ ಕೊನೆಗೂ ಸಂಸತ್ತಿನ ಈ ಚಳಿಗಾಲದ ಅಧಿವೇಶನದಲ್ಲಿ ಅಂಗೀಕಾರವಾಗದಂತೆ ನೋಡಿಕೊಂಡಿದೆ! ಹಾಗೆ ನೋಡಿಕೊಂಡಿದ್ದಾದರೂ ಹೇಗೆ? ಬಹು ಕಾಲದಿಂದ ರಾಷ್ಟ್ರದ ಕುತೂಹಲವನ್ನು ಕೆರಳಿಸಿದ್ದ ಬಹು ಮಹತ್ವದ ಈ ಮಸೂದೆಯನ್ನು ಕುರಿತ ಚರ್ಚೆ ಮತ್ತು ಅಂಗೀಕಾರಕ್ಕಾಗಿ ಸಂಸತ್ತಿನ ಕೊನೇ ಮೂರು ದಿನಗಳಲ್ಲಿ ಲೋಕಸಭೆ ಮತ್ತು ರಾಜ್ಯಸಭೆಗಳಲ್ಲಿ ತಲಾ ಒಂದು ದಿನ ಮಾತ್ರ ನಿಗದಿ ಮಾಡಿತು. ಇಲ್ಲಿಂದ ಹಿಡಿದು, ರಾಜ್ಯಸಭೆಯ ಚರ್ಚೆಯ ವೇಳೆ ತನ್ನ ಮಸೂದೆ ಅಂಗೀಕಾರವಾಗುವುದಿಲ್ಲವೆಂದು ಅರಿವಾದೊಡನೆ ತನ್ನ ಪುಡಿ 'ಚೇಲಾ' ಪಕ್ಷಗಳ ಮೂಲಕ ಗದ್ದಲವೆಬ್ಬಿಸಿ ಅಧಿವೇಶನವನ್ನು ಅನಿರ್ದಿಷ್ಟಕಾಲದವರೆಗೆ ಮುಂದೂಡಬೇಕಾದ ಪ್ರಸಂಗ ಬರುವವರೆಗೆ ಎಲ್ಲವನ್ನೂ ಪೂರ್ವನಿಯೋಜಿತಗೊಳಿಸಲಾಗಿತ್ತು! ಅಧಿವೇಶನ ಮುಗಿಯುವ ನಾಲ್ಕು ತಾಸುಗಳ ಮುನ್ನವೇ ಬಹುಪಾಲು ಟಿವಿ ವಾಹಿನಿಗಳು, ನಿರ್ದಿಷ್ಟವಾಗಿ ಇಷ್ಟು ಹೊತ್ತಿಗೇ ಇವರೇ ಹೀಗೇ ಗದ್ದಲವೆಬ್ಬಿಸಿ ಅಧಿವೇಶನವನ್ನು ಮುಂದೂಡುವ 'ಮ್ಯಾಚ್ ಫಿಕ್ಸಿಂಗ್' ಆಗಿದೆ ಎಂದು ಪ್ರಸಾರ ಮಾಡತೊಡಗಿದ್ದವು! ಎಲ್ಲಿ ವಿರೋಧ ಪಕ್ಷಗಳ ತಿದ್ದುಪಡಿಗಳು ಅಂಗೀಕಾರವಾಗಿ ಸಿ.ಬಿ.ಐ.ಗೆ ವೃತ್ತಿಪರ ಸ್ವಾತಂತ್ರ್ಯ ಸಿಕ್ಕುವುದೋ, ತನ್ನ ಚುನಾವಣಾ ತಂತ್ರವಾದ ಅಲ್ಪಸಂಖ್ಯಾತರಿಗೆ ಧರ್ಮಾಧಾರಿತ ಮೀಸಲಾತಿ ರದ್ದಾಗುವುದೋ ಎಂಬ ಆತಂಕದಿಂದ ಮಸೂದೆಯ ಮೇಲೆ ಮತದಾನವೇ ಆಗದಂತೆ ನೋಡಿಕೊಂಡು ಸಂಸದೀಯ ಪ್ರಜಾಪ್ರಭುತ್ವವನ್ನೇ ವಿಡಂಬನೆಗೆ ಈಡು ಮಾಡಲಾಯಿತು.

ಅಣ್ಣಾ, ಲೋಕಪಾಲ ಮಸೂದೆಯ ಅಂಗೀಕಾರಕ್ಕೆಂದೇ ಸಂಸತ್ತು ಅಧಿವೇಶನ ನಡೆಸುತ್ತಿರುವ ಹೊತ್ತಿನಲ್ಲಿ ನಿರಶನ ಹೂಡಿದ್ದನ್ನು ಸಂಸತ್ತಿನ ಪರಮಾಧಿಕಾರಕ್ಕೆ ಒಡ್ಡಿರುವ ಬೆದರಿಕೆ ಎಂದೆಲ್ಲ ಹೀಯಾಳಿಸಿದ್ದರು. ಈ ಸ್ವಯಂಘೋಷಿತ ಪ್ರಜಾಸತ್ತಾವಾದಿಗಳು ಸಂಸದೀಯ ಪ್ರಜಾಸತ್ತೆಯ ಮೇಲೆ ನಡೆದ ಈ 'ಅತ್ಯಾಚಾರ'ವನ್ನು ನೋಡಿಯಾದರೂ ಅಣ್ಣಾ ನಿರ್ಧಾರದ ಹಿಂದಿದ್ದ ಮತ್ತು ಈಗ ನಿಜವಾಗಿರುವ ಆತಂಕವನ್ನು ಸಹಾನುಭೂತಿಯಿಂದ ಅರ್ಥ ಮಾಡಿಕೊಳ್ಳುವ ಪ್ರಯತ್ನ ಮಾಡಬೇಕು. ನಿಜ, ಶಾಸನ ನಿರ್ಣಯ ಮಾಡುವಲ್ಲಿ ಒಂದು ಸಂಸ್ಥೆಯಾಗಿ ಸಂಸತ್ತಿನದೇ ಪರಮಾಧಿಕಾರ. ಆದರೆ ಈ ಸದರಿ ಸಂಸತ್ತೇ ತನ್ನ ರಚನೆಯಲ್ಲಿ ಬಹುಪಾಲು ಕುಲಗೆಟ್ಟು ಹೋಗಿರುವಾಗ ಅದರ ಮೇಲೆ ನಿಗಾ ಇಡುವುದು ಮತ್ತು ಅದರ ಮೇಲೆ ನೈತಿಕ ಒತ್ತಡ ಹೇರುವುದು ಪ್ರಜ್ಞಾವಂತ ಜನತೆಯ ಜವಾಬ್ದಾರಿ. ನಿತ್ಯ ಜನ ಜಾಗೃತಿಯೇ ಪ್ರಜಾಪ್ರಭುತ್ವದ ಜೀವಾಳ ಎಂಬುದು ಸುಪ್ರಸಿದ್ಧವಾದ ಮಾತು. ಇದನ್ನು ಮನಗಂಡು ಅಣ್ಣಾ ಈ ನಿರಶನವನ್ನು ಸಂಘಟಿಸಿದ್ದರು ಎಂದು ಕಾಣುತ್ತದೆ. ಇವನ್ನು ವಿಫಲಗೊಳಿಸಲು ಎಲ್ಲ ಪ್ರಯತ್ನಗಳನ್ನೂ ಮಾಡಿದ ಆಳ್ವಿಕೆಯು ಈಗ ಅದರ ಮರೆಯಲ್ಲಿ ತನ್ನ ಸಂಸದೀಯ ದುರ್ವರ್ತನೆಯನ್ನು ಮರೆ ಮಾಚಿಕೊಳ್ಳಲೆತ್ನಿಸುತ್ತಿರುವುದು ನಾಚಿಕೆಗೇಡಿನ

ಸಂಗತಿಯಾಗಿದೆ. ಆದುದರಿಂದ ಈ ವೈಫಲ್ಯವನ್ನು ಕೇವಲ ಅಣ್ಣಾದ್ದು ಮಾತ್ರ ಎಂದು ಬಣ್ಣಿಸುವುದು ರಾಜಕೀಯ ಅವಿವೇಕ ಮಾತ್ರವಾದೀತು.

ಅದೇನೇ ಇರಲಿ, ಇದೆಲ್ಲದರಿಂದ ಎಂದೂ ಪಾಠ ಕಲಿಯದಂತೆ ತೋರುವ ರಾಜಕೀಯ ಪಕ್ಷಗಳಿಗಿಂತ ಮುಖ್ಯವಾಗಿ ಅಣ್ಣಾ ಕಲಿಯಬೇಕಾದ ಎರಡು- ಮೂರು ಪಾಠಗಳಿವೆ. ಒಂದು, ಪದೇ ಪದೇ ಉಪವಾಸದ ಘೋಷಣೆ ಮಾಡುವುದರಿಂದ ಜನಸಾಮಾನ್ಯರ ಕಣ್ಣಿನಲ್ಲಿ ಉಪವಾಸವೆನ್ನುವುದು 'ಸತ್ಯಾಗ್ರಹ'ವಾಗದೆ, ಬೆದರಿಕೆಯಾಗಿ ಕಾಣತೊಡಗುತ್ತದೆ ಎಂಬುದು. ಎರಡು, ಯಾವುದೇ ರಾಜಕೀಯ ಪಕ್ಷ ಅಥವಾ ಪಕ್ಷಗಳ ಬೆಂಬಲ ಮತ್ತು ಸಹಾನುಭೂತಿಯನ್ನು ನೆಚ್ಚಿಕೊಳ್ಳದೇ ರಾಜಕೀಯೇತರವಾಗಿ ತಮ್ಮ ಆಂದೋಲನವನ್ನು ಕಟ್ಟಬೇಕು ಎಂಬುದು. ಮೂರನೇ ಮತ್ತು ಮುಖ್ಯ ಪಾಠವೆಂದರೆ, ಈ ಸಂಸತ್ತು ರೂಪುಗೊಂಡಿರುವುದೇ ಕಡು ಭ್ರಷ್ಟಗೊಂಡ ಚುನಾವಣೆಗಳ ಆಧಾರದ ಮೇಲಾದ್ದರಿಂದ, ಈ ಸಂಸತ್ತಿನೊಡನೆ ಹೇಗೇ, ಎಷ್ಟೇ ಗುದ್ದಾಡಿದರೂ ಭ್ರಷ್ಟಾಚಾರದ ವಿರುದ್ಧ ಪರಿಣಾಮಕಾರಿ ಶಾಸನವನ್ನು ನಿರೀಕ್ಷಿಸಲಾಗದು ಎಂಬುದು.

ಆದುದರಿಂದ ಅಣ್ಣಾ ಆಂದೋಲನ ಬರೀ ಪ್ರತಿಭಟನಾತ್ಮಕವಾಗದೆ, ತನ್ನ ಮೂಲಗುರಿಯಾದ ಗ್ರಾಮ ಸ್ವರಾಜ್ಯದ ರಚನೆಯ ಪ್ರಯತ್ನವಾಗಿ ಸಂಸತ್ತಿನ ಅಧಿಕಾರವನ್ನು ಗ್ರಾಮ ಪಂಚಾಯ್ತಿವರೆಗೆ ವಿಕೇಂದ್ರೀಕರಿಸುವ ಮತ್ತು ಚುನಾವಣಾ ಪದ್ಧತಿಯ ಸುಧಾರಣೆಗಳಿಗಾಗಿ ಜನಾಭಿಪ್ರಾಯ ಸಂಘಟನೆ ಮಾಡುವುದರ ಜೊತೆ ಜೊತೆಗೇ ವ್ಯಕ್ತಿಗತ ಶೀಲ ನಿರ್ಮಾಣದ ರಚನಾತ್ಮಕ ಆಂದೋಲನವೂ ಆಗುವುದರ ಕಡೆ ಹೆಚ್ಚು ಗಮನ ಹರಿಸಿದರೆ ಒಳ್ಳೆಯದು. ಆಗ ಮಾತ್ರ 'ಲೋಕಪಾಲ' ಕುರಿತ ಅದರ ಗಾತ್ರ, ವ್ಯಾಪ್ತಿ, ರಚನೆ, ಅಧಿಕಾರ ಮತ್ತು ಪರಿಣಾಮಶೀಲತೆಯನ್ನು ಕುರಿತ ಎಲ್ಲ ಆತಂಕಗಳೂ ಸಾಕಷ್ಟು ಮಟ್ಟಿಗೆ ಪರಿಹಾರ ಕಂಡುಕೊಂಡಾವು.

('ಪ್ರಜಾವಾಣಿ'ಯ 'ವಾಚಕರ ವಾಣಿ'/'ಸಂಗತ'ಕ್ಕಾಗಿ ಬರೆದ; ಆದರೆ ಸಹಜವಾಗಿಯೇ ಪ್ರಕಟವಾಗದ ಪತ್ರ- ಡಿಸೆಂಬರ್, ೨೦೧೧)

◇◇◇

೩೦. ನಮ್ಮದು ಎಡಕ್ಕೆ ವಾಲುವ ನಾಯಕತ್ವ: ಕೇಜ್ರಿವಾಲ್

ಅಣ್ಣಾ ಹಜಾರೆ ಆಂದೋಲನದ ಬಗ್ಗೆ ಈವರೆಗೆ ವಿವಿಧ ಹಂತಗಳಲ್ಲಿಅನೇಕ ಪ್ರಶ್ನೆಗಳನ್ನು ಎತ್ತಲಾಗಿದೆ. ಆ ಮೂಲಕ ಆ ಅಂದೋಲನದ ವಿಶ್ವಾಸಾರ್ಹತೆಯನ್ನೇ ಪ್ರಶ್ನಿಸಲಾಗಿದೆ; ಪ್ರಶ್ನಿಸಲಾಗುತ್ತಿದೆ. ಅಣ್ಣಾ ಮತ್ತು ಅವರ ಸಹಚರರು ಎಲ್ಲರ ಎಲ್ಲ ಪ್ರಶ್ನೆಗಳಿಗೆ ಉತ್ತರ ಕೊಟ್ಟ ಮೇಲಷ್ಟೇ ತಮ್ಮ ಆಂದೋಲನವನ್ನು ಆರಂಭಿಸಬೇಕಿತ್ತೆಂಬ ವಿಚಿತ್ರ ಆಗ್ರಹ ಈ ಪ್ರಶ್ನೆಗಳ ಹಿಂದಿದೆ. ನವ ಕ್ರಾಂತಿಕಾರಿಗಳ ಆರಾಧ್ಯದೈವವೇ ಆಗಿರುವ ಅರುಂಧತಿ ರಾಯ್ ಇತ್ತೀಚೆಗೆ 'ದಿ ಹಿಂದೂ' ಪತ್ರಿಕೆಯಲ್ಲಿ ಅಣ್ಣಾ ಆಂದೋಲನದ ಮೇಲೆ ಹಲವು ದುರುದ್ದೇಶಪೂರ್ವಕವೆನ್ನಿಸುವ ಆರೋಪಗಳನ್ನು ಮಾಡಿ ಕೆಟ್ಟ ಅಭಿರುಚಿಯ ಲೇಖನವೊಂದನ್ನು ಬರೆದದ್ದನ್ನು ಇಲ್ಲಿ ಮುಖ್ಯವಾಗಿ ನೆನಪಿಸಿಕೊಳ್ಳಬಹುದು.

ಆದರೆ ಒಂದು ಜ್ವಲಂತ ಸಮಸ್ಯೆಯನ್ನು ಮುಂದಿಟ್ಟುಕೊಂಡು ಒಂದು ದೊಡ್ಡ ಆಂದೋಲನವನ್ನು ಸಂಘಟಿಸುವಾಗ ಇತರರ ಪ್ರಶ್ನೆಗಳನ್ನು, ಅನುಮಾನಗಳನ್ನು ಊಹಿಸಿಕೊಂಡು ಆ ಆಂದೋಲನದ ನಾಯಕತ್ವ ಉತ್ತರಗಳನ್ನು ನೀಡುತ್ತಾ ಹೋಗಲಾರದು. ಆದರೆ ಅವನ್ನು ಗಮನಿಸುತ್ತಿರಬೇಕಷ್ಟೆ. ಹಾಗೆ ಗಮನಿಸಿ, ಆ ಎಲ್ಲ ಪ್ರಶ್ನೆ– ಅನುಮಾನಗಳಿಗೆ ಆಂದೋಲನದ ಪರವಾಗಿ ಅದರ ಪ್ರಮುಖ ವಕ್ತಾರ ಅರವಿಂದ ಕೇಜ್ರಿವಾಲ್ ('ಔಟ್‌ಲುಕ್' ಪತ್ರಿಕೆಗಾಗಿ) ನೀಡಿದ ಉತ್ತರಗಳು ಇಲ್ಲಿವೆ. ಈ ಉತ್ತರಗಳನ್ನು ಇತ್ತೀಚೆಗೆ ಸ್ವತಃ ಅಣ್ಣಾ ಹಜಾರೆಯವರು ರಾಷ್ಟ್ರ ಮಟ್ಟದ ಎರಡು ಟಿ.ವಿ. ವಾರ್ತಾವಾಹಿನಿಗಳಿಗೆ ನೀಡಿದ ಸುದೀರ್ಘ ಸಂದರ್ಶನಗಳಲ್ಲಿ ಇಂತಹುದೇ ಅನೇಕ ಪ್ರಶ್ನೆ– ಅನುಮಾನಗಳಿಗೆ ನೀಡಿದ ಉತ್ತರಗಳ ಜೊತೆ ಜೋಡಿಸಿಕೊಂಡು ಅರ್ಥ ಮಾಡಿಕೊಳ್ಳಬಲ್ಲವರಿಗೆ ಅಣ್ಣಾ ಆಂದೋಲನದ ಬಗ್ಗೆ ಅದರ ವಿರೋಧಿಗಳು ಮಾಡುತ್ತಿರುವ ಅಪಪ್ರಚಾರ ಎಷ್ಟು ಆಧಾರರಹಿತ ಮತ್ತು ಅಸಮರ್ಥನೀಯ ಎಂಬುದು ಸ್ಪಷ್ಟವಾದೀತು.

ಅಣ್ಣಾ ಆಂದೋಲನ ಒಂದು ರಾಜಕೀಯ ಚಳುವಳಿಯಾಗಿ ಬೆಳೆಯುವ ಸಾಧ್ಯತೆ ಇದೆಯಾ?

ನಾವು ಒಂದು ರಾಜಕೀಯ ಶಕ್ತಿಯೇ. ಆದರೆ ಪ್ರಜಾಪ್ರಭುತ್ವವೆಂದರೆ ಚುನಾವಣೆ ಮತ್ತು ರಾಜಕೀಯ ಪಕ್ಷಗಳು ಎಂಬರ್ಥದಲ್ಲಲ್ಲ. ಪ್ರಜಾಪ್ರಭುತ್ವವೆಂದರೆ ಮೂಲತಃ ದಿನವಹಿ ಆಡಳಿತದಲ್ಲಿ ಜನತೆಯ ಭಾಗವಹಿಸುವಿಕೆ ಎಂದರ್ಥ. ಮುಂದಿನ ಚುನಾವಣೆಗಳಲ್ಲಿ ನಾವು ಯಾವುದೇ ಪಕ್ಷವನ್ನು ಬೆಂಬಲಿಸುವುದಿಲ್ಲ. ಆದರೆ ನಾವು ಎತ್ತಿರುವ ಪ್ರಶ್ನೆಗಳು ಚುನಾವಣಾಸಾ

ವಿಷಯಗಳನ್ನಾಗಿ ಮಾಡುತ್ತೇವೆ. ಆ ಮೂಲಕ ವ್ಯವಸ್ಥೆಯನ್ನು ಬದಲಾಯಿಸುವ ಪ್ರಯತ್ನ ಮಾಡುತ್ತೇವೆ.

ನಿಮಗೆ ರಾಜಕೀಯ ತತ್ವದ ಒಲವು ಇದೆಯಾ?

ಈ ಆಂದೋಲನದಲ್ಲಿ ಭಾಗವಹಿಸಿದ ಎಲ್ಲರ ಪರವಾಗಿ ನಾನು ಮಾತನಾಡಲಾರೆನಾದರೂ, ನಾಯಕತ್ವದಲ್ಲಿರುವ ಜನರ ಬಗ್ಗೆ ಹೇಳಬಲ್ಲೆ. ಈ ನಾಯಕತ್ವದಲ್ಲಿ ಕೋಮುವಾದಿ ಹಿನ್ನೆಲೆಯ ಯಾರೂ ಇರಲಾರರು. ಇರಲು ಸಾಧ್ಯವೂ ಇಲ್ಲ. ನಮ್ಮ ಸಂಚಾಲಕ ಗುಂಪಿನಲ್ಲಿ ಸುಮಾರು ೨೫ ಜನರಿದ್ದಾರೆ ಅವರಲ್ಲಿ ಬಹುಪಾಲು ಜನ ರಾಜಕೀಯವಾಗಿ ಮಧ್ಯದಿಂದ ಎಡಕ್ಕೆ ವಾಲುವಂತಹವರು.

ಕೆಲವರು ನಿಮ್ಮ ಆಂದೋಲನಚನ್ನು ಆರೆಸ್ಸೆಸ್ ಪಿತೂರಿ ಎಂದು ಹೇಳುವರಲ್ಲ?

ಅದು ನನಗೆ ಗೊತ್ತಿದೆ. ಅರುಣಾ ರಾಯ್ ಗುಂಪಿನ ಒಬ್ಬರು ನನ್ನ ತಂದೆ ಆರೆಸ್ಸೆಸ್‌ನ ಪದಾಧಿಕಾರಿಯಾಗಿದ್ದಾರೆ ಮತ್ತು ಆಡ್ವಾನಿಯವರಿಗೆ ಆಪ್ತರಾಗಿದ್ದಾರೆ ಎಂದು ಲೇಖನವೊಂದನ್ನು ಬರೆದಿದ್ದಾರೆ. ಇದು ಅಸಹ್ಯ... ಶುದ್ಧ ಸುಳ್ಳಿನ ಕಂತೆ! ವಿಹಿಂಪ ಮತ್ತು ಆರೆಸ್ಸೆಸ್, ತಮ್ಮ ಕಾರ್ಯಕರ್ತರ ಸೇವೆ ಬಳಸಿಕೊಂಡು ಅಣ್ಣಾ ನಿರಶನದ ಬೆಂಬಲಕ್ಕೆ ಬಂದಿದ್ದ ಜನರಿಗೆ ಅನ್ನ– ನೀರುಗಳ ಪೂರೈಕೆ ಮಾಡಿದ್ದಾಗಿ ಹೇಳಿಕೊಳ್ಳುತ್ತಿರಬಹುದು. ಈ ಆಂದೋಲನವನ್ನು ಬಳಸಿಕೊಳ್ಳುವ ಕೆಲವು ಶಕ್ತಿಗಳು ಪ್ರಯತ್ನಿಸುತ್ತಿರಬಹುದು; ಅದಕ್ಕೆ ನಮ್ಮ ಸಂಬಂಧವಿಲ್ಲ. ಆದರೆ ಒಂದಂತೂ ಸ್ಪಷ್ಟಪಡಿಸಬಯಸುವೆ. ಕೋಮುವಾದಿ ಶಕ್ತಿಗಳಿಗೆ ಇಲ್ಲಿ ಜಾಗವಿಲ್ಲ.

ಕೆಲವು ದಲಿತ ಮತ್ತು ಹಿಂದುಳಿಇದ ವರ್ಗಗಳ ರಾಜಕಾರಣಿಗಳು ನಿಮ್ಮ ಆಂದೋಲನ ಕೆಳಜಾತಿಗಳಿಂದ ರಾಜಕೀಯ ಶಕ್ತಿಯನ್ನು ಕಸಿದುಕೊಳ್ಳುವ ಪಿತೂರಿಯೇ ಅಗಿದೆ ಎಂದು ಹೇಳುತ್ತಿದ್ದಾರಲ್ಲಾ?

ಸ್ಥಾಪಿತ ವ್ಯವಸ್ಥೆಯ ಅಧಿಕಾರ ಕೇಂದ್ರಗಳು ತಮ್ಮ ಅಧಿಕಾರ ಕಡಿಮೆಯಾಗುತ್ತಾ, ಅದು ಜನತೆಗೆ ವರ್ಗಾವಣೆಯಾಗುತ್ತಿರುವ ಬಗ್ಗೆ ಆತಂಕಿತರಾಗುತ್ತಿರುವುದು ನಮ್ಮ ಪ್ರಕಾರ ಒಳ್ಳೆಯ ಸೂಚನೆಯೇ. ತಮಗೆ ಬೇಕಾದ ಚಪ್ಪಲಿ ತರಿಸಲು ವಿಶೇಷ ವಿಮಾನವೊಂದನ್ನು ಮುಂಬೈಗೆ ಕಳಿಸಿದರೆಂಬ ವರದಿಯನ್ನು ವಿಕಿಲೀಕ್ಸ್ ಬಹಿರಂಗಪಡಿಸಿದ್ದನ್ನು ಇಷ್ಟಪಡದೆ ಮಾಯಾವತಿ, ಅದರ ಮಾಲಿಕ ಅಸ್ಸಾಂಜ್‌ರನ್ನು ದಲಿತ ವಿರೋಧಿ ಎಂದು ಕರೆದರು! ನಿಮ್ಮ ಬಳಿ ಸೂಕ್ತ ಉತ್ತರವಿರದಿದ್ದಲ್ಲಿ ಅಥವಾ ನಿಮ್ಮ ಅಧಿಕಾರ ಕೇಂದ್ರಗಳನ್ನು ಹೊಡೆದುರುಳಿಸಲು ಯತ್ನಿಸಿದಲ್ಲಿ ಅದನ್ನು ದಲಿತ ವಿರೋಧಿ ಎಂದು ಸುಲಭವಾಗಿ ಕರೆದುಬಿಡಬಹುದು.

ಇನ್ನು ನಿಮ್ಮ ಮತ್ತು ಅರುಣಾ ರಾಯ್ ಗುಂಪಿನ ಭಿನ್ನಾಭಿಪ್ರಾಯಗಳ ಬಗ್ಗೆ ಹೇಳುವುದಾದರೆ, ಅದು ಅಹಂಕರಗಳ ಸಂಘರ್ಷದಂತೆ ಕಾಣುತ್ತದಲ್ಲ?

ನಾವು ನಮ್ಮ ಮಸೂದೆಯನ್ನು ನಮ್ಮ ಜಾಲತಾಣದಲ್ಲಿ ಪ್ರಕಟಿಸಿ ಮೂರು ಸಾವಿರ ಪ್ರತಿಸ್ಪಂದನ ಪಡೆದು ಅದರ ಆಧಾರದ ಮೇಲೆ ಈ ಜನಪಾಲ ಮಸೂದೆಯ ಕರಡನ್ನು

ಸಿದ್ಧಪಡಿಸಿದ್ದೇವೆ, ಅರುಣಾಜಿ ಅವರೊಂದಿಗೆ ನಾವೆಷ್ಟು ಬಾರಿ ಸಂವಾದ ನಡೆಸಲು ಯತ್ನಿಸಿದ್ದೇವೆ! ಕುಲದೀಪ ನಯ್ಯಾರ್‌ರ ಮಧ್ಯಸ್ಥಿಕೆಯಲ್ಲಿ ನಡೆದ ಪ್ರಯತ್ನವೂ ವಿಫಲಗೊಂಡಿತು. ಕೇಜ್ರಿವಾಲ್ ಇದ್ದರೆ ತಾನು ಮಾತುಕತೆಗೆ ಸಿದ್ಧವಿಲ್ಲವೆಂದು ಅವರು ಹೇಳುತ್ತಾರೆ. ನಮ್ಮ ತಂಡದ ಇತರರು ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದಾಗ ಅವರು ನಮ್ಮ ಮಸೂದೆಯನ್ನು ಅತ್ಯುತ್ತಮ ಎಂದು ವರ್ಣಿಸಿದರು. ಆದರೆ ಅಣ್ಣಾ ಹಜಾರೆ ನಿರಶನ ಆರಂಭಿಸಿದ ನಂತರ ಅವರ ಆರೋಗ್ಯ ವಿಚಾರಿಸಲು ಬಂದು ಹೋದ ನಂತರ ಅರುಣಾಜಿ ಜನಲೋಕಪಾಲ ಮಸೂದೆಯನ್ನು ಪೆಡಂಭೂತ ಎಂದು ವರ್ಣಿಸುತ್ತಾರೆ ಎಂದರೆ ಏನು ಹೇಳುವುದು? ಅವರ ಗುಂಪು ಎಷ್ಟು ಜನರೊಂದಿಗೆ ಅಥವಾ ಸಂಸ್ಥೆಗಳೊಂದಿಗೆ ಸಮಾಲೋಚಿಸಿ ಮಸೂದೆಯನ್ನು ಸಿದ್ಧಪಡಿಸಿದ್ದಾರೆ ಎಂದು ನಾವು ಕೇಳಬಹುದೇ? ಸರ್ಕಾರದ ಮಸೂದೆ ತಯಾರಾದದ್ದು ಹೇಗೆ? ಐವರು ಮಂತ್ರಿಗಳಿಂದ! ನಮ್ಮ ಮೇಲೆ ಪ್ರಜಾಪ್ರಭುತ್ವ ವಿರೋಧಿ ಅಪಾದನೆ ಹೊರಿಸುವವರು ಎಷ್ಟು ಪ್ರಜಾಪ್ರಭುತ್ವವಾದಿಗಳಾಗಿದ್ದಾರೆ ನೀವೇ ತೀರ್ಮಾನಿಸಿ!

ನಾವೀಗ ಗೆದ್ದಿದ್ದೇವೆ ಎಂದು ಹೇಳಿಕೊಳ್ಳುತ್ತಿಲ್ಲ. ಇನ್ನೂ ಕೆಲಸವಿದೆ. ಸಂಸತ್ತಿನ ಸ್ಥಾಯಿ ಸಮಿತಿಗೆ ನಮ್ಮ ಅಂತಿಮ ಕರಡನ್ನು ಪ್ರಸ್ತುಪಡಿಸುವ ಮುನ್ನ ಮತ್ತೆ ಎಲ್ಲರೊಂದಿಗೆ ಮಾತುಕತೆ ನಡೆಸುವೆವು.

ನಿಮ್ಮ ಮೊದಲ ಎನ್.ಜಿ.ಓ. 'ಪರಿವರ್ತನ್' ಅನುದಾನ ಆಧಾರಿತ ಮಾದರಿಯದು. ನಂತರ ಕಬೀರ್ ಎಂಬ ಇನ್ನೊಂದು ಎನ್.ಜಿ.ಓ. ತಲೆ ಎತ್ತಿ ಫೋರ್ಡ್ ಪ್ರತಿಷ್ಠಾನದಿಂದ ಬೃಹತ್ ಮೊತ್ತದ ಅನುದಾನ ವನ್ನು ಪಡೆಯಲಾರಂಭಿಸಿದೆಯಲ್ಲಾ?

ಕಬೀರ್‌ನ ಸಂಚಾಲಕತ್ವ ಮನೀಶ್ ಸಿಸೋಡಿಯಾದ್ದು. ನಾವಿಬ್ಬರೂ ಆಂದೋಲನದಲ್ಲಿ ನಿಕಟವಾಗಿ ಕೆಲಸ ಮಾಡುವೆವಾದರೂ, ಇವು ಪ್ರತ್ಯೇಕ ಎನ್.ಜಿ.ಓ.ಗಳು. ಆದ್ದರಿಂದ ನಿಮ್ಮ ಪ್ರಶ್ನೆಗೆ ಮನೀಶ್ ಉತ್ತರಿಸಬೇಕು. (**ಮನೀಶ್ ಸಿಸೋಡಿಯಾ:** ನಾನು ಮೊದಲಿಗೆ ಜೀ ವಾರ್ತಾ ವಾಹಿನಿಯಲ್ಲಿ ಕೆಲಸ ಮಾಡುತ್ತಿದ್ದೆ. ನಾನು ಅದನ್ನು ಬಿಟ್ಟ ಮೇಲೆ ಮಾಹಿತಿ ಹಕ್ಕು ಚಳುವಳಿ ಪ್ರಚಾರ ಕಾರ್ಯಕ್ರಮಕ್ಕಾಗಿ ಮತ್ತು ಅದರ ಬಗ್ಗೆ ಸಾಕ್ಷ್ಯಚಿತ್ರಗಳನ್ನು ಮಾಡಲು ಅನುದಾನ ಪಡೆದೆ. ನಮ್ಮ ಸಂಸ್ಥೆ ೨೦೦೫ ಮತ್ತು ೨೦೦೭ರಲ್ಲಿ ಅನುದಾನ ಪಡೆಯಿತು. ಈ ಯೋಜನೆ ೨೦೦೯– ೧೦ಕ್ಕೆ ಮುಗಿದಿದೆ. ಈಗಲೂ ಅನುದಾನ ಮಂಜೂರಾಗಿದೆಯಾದರೂ ನಾವು ಅದನ್ನು ಸ್ವೀಕರಿಸದಿರಲು ನಿರ್ಧರಿಸಿದ್ದೇವೆ)

ಯಾವ ಬಗೆಯ ಅನುದಾನ ಪಡೆಯಬೇಕು ಎಂಬ ಬಗ್ಗೆ ಇನ್ನಷ್ಟು ಸ್ಪಷ್ಟತೆ ಅಗತ್ಯವಿದೆಯೆಂದು ನಿಮಗೆ ಅನ್ನಿಸಿಲ್ಲವೇ? ವಾಣಿಜ್ಯ ಸಂಸ್ಥೆಗಳಿಂದ ಹಣ ಪಡೆಯುವುದರಿಂದ ನೀವು ಅವುಗಳ ಒತ್ತಡಕ್ಕೆ ಒಳಗಾಗುವ ಸಾಧ್ಯತೆಗಳಿವೆಯಲ್ಲವೇ?

ಈ ಪ್ರಶ್ನೆಯನ್ನು ಕೇಳಿದ್ದರಿಂದ ನನಗೆ ಸಂತೋಷವಾಗಿದೆ. ನನಗೆ ದೊರೆತ ಮ್ಯಾಗ್ಸೇ ಪ್ರಶಸ್ತಿಯ ಹಣದಿಂದ ನಾನು ೨೦೦೬ರಲ್ಲಿ ಸಾರ್ವಜನಿಕ ಹಿತಾಸಕ್ತಿ ಸಂಶೋಧನಾ ಪ್ರತಿಷ್ಠಾನವನ್ನು ಆರಂಭಿಸಿದೆ. ಈ ಪ್ರತಿಷ್ಠಾನದಿಂದ ಮಾಹಿತಿ ಹಕ್ಕು ಕಾಯಿದೆ ಆಂದೋಲನಕ್ಕೆ, ರಾಜಕೀಯ ವಿಕೇಂದ್ರೀಕರಣ ಆಂದೋಲನವಾದ 'ಸ್ವರಾಜ್ ಆಂದೋಲನ'ಕ್ಕೆ ಮತ್ತು ಆಡಳಿತ ಸಮಸ್ಯೆಗಳನ್ನು ಕುರಿತ ಸಂಶೋಧನೆಗಳಿಗಾಗಿ ಹಣ ನೀಡಲಾಗಿದೆ. ನಾವು ಮಾಹಿತಿ ಹಕ್ಕು ಕಾಯಿದೆ ಆಂದೋಲನದ ಸಂಬಂಧವಾಗಿ ಎರಡು ಪ್ರಶಸ್ತಿಗಳನ್ನು ಸ್ಥಾಪಿಸಿದ್ದು, ಎರಡು ವರ್ಷಗಳ ಕಾಲ ಇನ್ಫೋಸಿಸ್‌ನ ನಾರಾಯಣ ಮೂರ್ತಿ ಮತ್ತು ರತನ್ ಟಾಟಾ ಪ್ರತಿಷ್ಠಾನಗಳಿಂದ ತಲಾ ೨೫ ಲಕ್ಷ ರೂಪಾಯಿಗಳ ದೇಣಿಗೆ ಪಡೆದಿದ್ದೇವೆ. ಕಾರ್ಪೋರೇಟ್ ಸಂಸ್ಥೆಗಳೊಡನೆಯ ನೇರ ಸಂಪರ್ಕದ ಕಥೆಯೆಂದರೆ ಇಷ್ಟೇ. ಕಳೆದೊಂದು ವರ್ಷದಲ್ಲಿ ಯಾವುದೇ ಯೋಜನಾಧಾರಿತ ದೇಣಿಗೆ ಪಡೆದಿಲ್ಲ. ಬಂದಿರುವುದೆಲ್ಲವೂ ಸಾಮಾನ್ಯ ದೇಣಿಗೆ ಮಾತ್ರ. ಅದರ ಮೂಲಗಳ ಬಗ್ಗೆ ನನಗೆ ತಿಳುವಳಿಕೆ ಇಲ್ಲ.

ಎಷ್ಟು ಹಣ ಸಂದಾಯವಾಗಿದೆ?

ಏಪ್ರಿಲ್‌ನಲ್ಲಿ ೩೨ ಲಕ್ ರೂಪಾಯಿಗಳು. ವಿವರಗಳು ಬೇಕಾದರೆ India Against Corruptionನ ಜಾಲತಾಣದಲ್ಲಿವೆ, ನೋಡಿ ಪರಿಶೀಲಿಸಿ.

ಪೋಸ್ಕೋ, ಜೈತಾಪರ ಮತ್ತು ಇತರ ಭೂ ಚಳುವಳಿಗಳ ಬಗ್ಗೆ ನಿಮಗೆ ನಿರ್ದಿಷ್ಟವೆನ್ನಬಹುದಾದ ಯಾವುದೇ ನಿಲುವು ಇದೆಯಾ?

ಖಂಡಿತವಾಗಿ. ಗ್ರಾಮ ಸಭಾಗಳ ಒಪಿಗೆಯಿಲ್ಲದೆ, ಯಾವುದೇ ಭೂಮಿಯನ್ನು ವಶಪಡಿಸಿಕೊಳ್ಳಲಾಗದು ಎಂಬುದು ನಮ್ಮ ನಿಲುವು. ಸರ್ಕಾರ ಸಮಾಲೋಚನೆಗಳನ್ನಷ್ಟೆ ಮಾಡದೆ, ಪೋಸ್ಕೋದಂತಹ ಪ್ರತಿ ಪ್ರಕರಣದಲ್ಲೂ ಸಮ್ಮತಿಯನ್ನೂ ಪಡೆಯಬೇಕು. ಬಹಳ ಜನ ರೈತರು ಅಧಿಕೃತ ಒಡೆತನವಿಲ್ಲದ ಭೂಮಿಯ ಮೇಲೆ ಅವಲಂಬಿತವಾಗಿರುವುದರಿಂದ, ನಾವು ಶೇಕಡಾ ಎಂಭತ್ತು ಜನ ರೈತರಿಂದ ಸಮ್ಮತಿ ಪಡೆಯುತ್ತೇವೆಂಬ ಸರ್ಕಾರದ ನಿಲುವು ಅಪಾಯಕಾರಿ ಎಂದೇ ನಾವು ಭಾವಿಸಿದ್ದೇವೆ. ಮುಖ್ಯ ತೀರ್ಮಾನ ಗ್ರಾಮಸಭಾದ್ದೇ ಆಗಿರಬೇಕು.

ನಿರಶನದ ನಂತರ ಅಣ್ಣಾ ಹಜಾರೆಯವರನ್ನು 'ಮೆದಾಂತ'ದಂತಹ ಪಂಚತಾರಾ ಆಸ್ಪತ್ರೆಗೆ ಏಕೆ ಕರೆದೊಯ್ಯಲಾಯಿತು?

ಮಧು ಟೆಹ್ರಾನ್ ನಮ್ಮ ಒಳ್ಳೆಯ ಸ್ನೇಹಿತರು. ಕೆಲವು ತಿಂಗಳುಗಳ ಹಿಂದೆ ಅಣ್ಣಾಗೆ ಆರೋಗ್ಯ ಚೆನ್ನಾಗಿಲ್ಲದಿದ್ದಾಗ ಅವರು ಡಾ. ಟ್ರೆಹಾನ್‌ರ ಹೆಸರನ್ನು ಸೂಚಿಸಿದ್ದರು. ಆನಂತರ ಅಣ್ಣಾ ಎರಡು– ಮೂರು ಬಾರಿ ಆ ಆಸ್ಪತ್ರೆಗೆ ಹೋಗಿರಬಹುದು. ಈಗ ನಿರಶನದ ನಂತರದ ವೈದ್ಯಕೀಯ ತಪಾಸಣೆಗೆಗಾಗಿ ಅವರು ಅಲ್ಲಿಗೊಮ್ಮೆ ಹೋಗಿ ಬಂದುದಕ್ಕೆ ಇಷ್ಟೆಲ್ಲ

ಗುಲ್ಲೆಬ್ಬಿಸಲಾಗುತ್ತಿದೆ. ಇದನ್ನು ಒಂದು ಮಟ್ಟಿಗೆ ನಾನು ಅರ್ಥ ಮಾಡಿಕೊಳ್ಳಬಲ್ಲೆ. ಅಣ್ಣಾರಂತಹ ಒಂದು ನಿರ್ದಿಷ್ಟ ಹಿನ್ನೆಲೆಯ ವ್ಯಕ್ತಿ ಮತ್ತು ಅಂತಹ ಆಸ್ತ್ರ– ಇದು ಹೊಂದಿಕೆಯಾಗುವುದಿಲ್ಲ. ಇನ್ನು ಮುಂದೆ ನಾವು ಹೀಗೆ ಮಾಡುವುದಿಲ್ಲ.

ನೀವು ಪ್ರಸ್ತಾಪಿಸುತ್ತಿರುವ ಜನ ಪ್ರತಿನಿಧಿಗಳನ್ನು ಹಿಂದಕ್ಕೆ ಕರೆಸಿಕೊಳ್ಳುವ, ಗ್ರಾಮಸಭಾಗಳ ಮೂಲಕ ಶಾಸನ ರಚನೆ ಇತ್ಯಾದಿ ವಿಚಾರಗಳು ಅವ್ಯವಹಾರಿಕ ಮತ್ತು ಪುರಾತನ ಕಾಲಕ್ಕೆ ಸೇರಿದವು ಅಲ್ಲವೇ?

ಜನ ಪ್ರತಿನಿಧಿಗಳನ್ನು ಹಿಂದಕ್ಕೆ ಕರೆಸಿಕೊಳ್ಳುವ ಹಕ್ಕಿನ ವಿಚಾರ ಪುರಾತನವಾದದ್ದೇನಲ್ಲ ಎಂದು ನಾನು ಭಾವಿಸುವೆ. ಈ ಹಕ್ಕು ಬಹಳಷ್ಟು ರಾಜ್ಯಗಳ ಪಂಚಾಯತ್ ಮತ್ತು ಪುರಸಭೆಗಳ ಹಂತದಲ್ಲಿ ಈಗ ಅಸ್ತಿತ್ವದಲ್ಲಿದೆ. ಅದನ್ನು ರಾಜ್ಯ ಮತ್ತು ಕೇಂದ್ರದ ಹಂತಕ್ಕೆ ತೆಗೆದುಕೊಂಡು ಹೋಗಬೇಕಷ್ಟೆ. ಇನ್ನು ಗ್ರಾಮಸಭಾ ಎನ್ನುವುದು ಅತಿ ಆಧುನಿಕವಾದ ಪರಿಕಲ್ಪನೆಯಾಗಿದೆ. ಅಮೆರಿಕಾದಲ್ಲಿನ ಪುರಭವನ ಸಭೆಗಳ ಬಗ್ಗೆ ನೀವು ಕೇಳಿದ್ದೀರಾ? ಅಲ್ಲಿ ಪಟ್ಟಣದ ಜನತೆ ತಮ್ಮ ಪಟ್ಟಣವನ್ನು ಹೇಗೆ ನಿರ್ವಹಿಸಬೇಕೆಂಬುದರ ಬಗ್ಗೆ ಚರ್ಚಿಸಿ ತೀರ್ಮಾನಿಸುತ್ತಾರೆ.

ಆದರೆ ಇಂತಹ ಬೃಹತ್ ದೇಶದಲ್ಲಿ ಜನತೆ ಎಂದರೆ ಯಾರೆಂಬುದನ್ನು ನಿರ್ಧರಿಸುವವರು ಯಾರು?

ನಾವು ಐದು ವರ್ಷಗಳಿಗೊಮ್ಮೆ ಯಾರನ್ನೋ ಆರಿಸುತ್ತೇವೆ. ಅವರು ನಮ್ಮಲ್ಲಿಗೆ ವಾಪಸ್ ಬಂದು ನಿಮ್ಮ ಅಗತ್ಯಗಳೇನೆಂದು ಕೇಳುವುದಿಲ್ಲ ಮಾತ್ರವಲ್ಲ; ಅವರು ತಮ್ಮ ಪಕ್ಷದ ಹೈಕಮಾಂಡ್‌ನ ಆಜ್ಞೆಯನ್ನು ಪಾಲಿಸಬೇಕಾಗಿರುವುದರಿಂದ ಶಾಸನ ಸಭೆಗಳಲ್ಲಿ ಅವರಿಗೆ ತಮ್ಮದೇ ಆದ ಧ್ವನಿ ಎಂಬುದೂ ಇರುವುದಿಲ್ಲ. ಹಾಗಾಗಿ ನಾವು ಪಕ್ಷದ ಹೈಕಮಾಂಡ್ ಎಂದು ಕರೆಯಲಾಗುವ ಕೆಲವು ಜನರಿಗೆ ನಮ್ಮ ಅಧಿಕಾರವನ್ನು ಹಸ್ತಾಂತರಿಸುತ್ತೇವೆ ಮತ್ತು ಅವರು ದೇಶವನ್ನು ನಡೆಸುತ್ತಾರೆ. ನಾವು ಈ ರೂಪದ ಪ್ರಜಾಪ್ರಭುತ್ವವನ್ನು ಪ್ರಶ್ನಿಸಬಯಸುತ್ತೇವೆ. ಈ ಪ್ರಜಾಪ್ರಭುತ್ವ ನಿಜವಾಗಿ ಪ್ರಾತಿನಿಧಿಕ ಸ್ವರೂಪದ್ದೇ ಅಲ್ಲ.

(ಕನ್ನಡಾನುವಾದ: ಡಿ.ಎಸ್. ನಾಗಭೂಷಣ)

('ನವ ಮಾನವ ಮಾಸಿಕ'– ಅಕ್ಟೋಬರ್, ೨೦೧೧ರ ಸಂಚಿಕೆಯಲ್ಲಿ ಪ್ರಕಟಿತ)

✧✧✧

೩೧. ನಗ್ನತೆ ಹಿಂದೂ ಸಂಸ್ಕೃತಿಯಲ್ಲಿ ಪರಿಶುದ್ಧತೆಗೆ ರೂಪಕ: ಎಂ.ಎಫ್. ಹುಸೇನ್

ಎಂ.ಎಫ್. ಹುಸೇನರೆಂದೇ ಹೆಸರಾದ ಮಕ್ಬೂಲ್ ಫಿದಾ ಹುಸೇನ್ (೧೯೧೫– ೨೦೧೧) ಆಧುನಿಕ ಭಾರತ ಕಂಡ ಅತ್ಯಂತ ಶ್ರೇಷ್ಠ ವರ್ಣಚಿತ್ರ ಕಲಾವಿದರಲ್ಲೊಬ್ಬರು. ಮಹಾರಾಷ್ಟ್ರದ ಭಕ್ತಿ ಕೇಂದ್ರವಾದ ಪಂಡರಾಪುರದ ಬೀದಿಗಳಲ್ಲಿ ಅನಾಥ ಮಗುವಾಗಿ ಬೆಳೆದು, ಮುಂಬೈನಿಲ್ಲಿ ಚಲಚಿತ್ರ ಜಾಹೀರಾತುಗಳ ಭಿತ್ತಿ ಚಿತ್ರಗಳನ್ನು ಬರೆಯುತ್ತಾ ಕಲಾವಿದನಾಗಿ ಮೂಡಿದ ಹುಸೇನ್; ೧೯೭೧ರ ಹೊತ್ತಿಗೆ, ಜಗತ್ತಿನ ಸರ್ವಶ್ರೇಷ್ಠ ಕಲಾವಿದನೆಂದು ಗುರುತಿಸಲ್ಪಟ್ಟ ಪಿಕಾಸೋನೊಂದಿಗೆ ವಿಶ್ವ ಚಿತ್ರ ಪ್ರದರ್ಶನದಲ್ಲಿ ತನ್ನ ಚಿತ್ರಗಳ ಪ್ರದರ್ಶನ ಮಾಡುವ ಅವಕಾಶ ಪಡೆದ ಅಪ್ರತಿಮ ಪ್ರತಿಭಾವಂತ. ಪಿಕಾಸೋನ ಘನಾಕೃತಿಗಳಂತೆ ಈತನ ಕುದುರೆಗಳು, ಜಾಗತಿಕ ಕಲಾ ಪ್ರಪಂಚದಲ್ಲಿ ಬಹುಕಾಲ ನಿಲ್ಲಬಲ್ಲ ಅನನ್ಯ ಕಲಾ ಪ್ರತೀಕಗಳಾಗಿ ಸ್ಥಾಪಿತ ವಾಗಿವೆ. ಈತ ಹಿಂದೂ ದೇವತೆಗಳನ್ನು– ಸರಸ್ವತಿ, ಪಾರ್ವತಿ ಇತ್ಯಾದಿ ಯರನ್ನು– ನಗ್ನ ರೂಪದಲ್ಲಿ ಚಿತ್ರಿಸಿದ ಎಂದು ಕೆಲವು ವರ್ಷಗಳ ಹಿಂದೆ ಹಿಂದೂ ಮೂಲಭೂತವಾದಿಗಳು ಈತನ ಮೇಲೆ ಹಲ್ಲೆ ನಡೆಸಿ ಈತನ ಕೃತಿಗಳನ್ನು ನಾಶ ಮಾಡುವ ಪ್ರಯತ್ನ ಮಾಡಿದರು. ಈತನ ಚಿತ್ರ ಪ್ರದರ್ಶನಗಳ ಮೇಲ ದಾಳಿ ನಡೆಸಿದರು. ಹಲವು ನ್ಯಾಯಾಲಯಗಳಲ್ಲಿ ಅಸಂಬದ್ಧ ಮೊಕದ್ದಮೆಗಳನ್ನು ಹೂಡಿದರು. ಕೊನೆಗೆ ಪ್ರಾಣಾಪಾಯದ ಬೆದರಿಕೆ ಹಾಕಿದರು. ಇದರಿಂದ ಬೇಸತ್ತ ೯೦ ವರ್ಷಗಳ ವೃದ್ಧ ಹುಸೇನ್ ೨೦೦೬ರಲ್ಲಿ ದೇಶ ಬಿಟ್ಟು ಕಟಾರ್‌ನಲ್ಲಿ ಆಶ್ರಯ ಪಡೆದು ತಮ್ಮ ಕಲಾ ಸೇವೆಯನ್ನು ಮುಂದುವರೆಸಿದರು. ೨೦೧೦ರಲ್ಲಿ ಆ ದೇಶದ ಪ್ರಜೆತನ ಪಡದ ಅವರು ೨೦೧೧ರ ಜೂನ್‌ನಲ್ಲಿ ಅನಾರೋಗ್ಯ ಪೀಡಿತರಾಗಿ ಲಂಡನ್‌ನ ಆಸ್ಪತ್ರೆಯಲ್ಲಿ ಅಸು ನೀಗಿದರು. ಇದಕ್ಕೆ ಮುನ್ನ ತೆಹೆಲ್ಕಾ ಪತ್ರಿಕೆಯ ಶೋಮಾ ಚೌಧರಿ ಲಂಡನ್‌ನಲ್ಲಿ ಅವರೊಂದಿಗೆ ನಡೆಸಿದ ಸಂದರ್ಶನ ವೊಂದನ್ನು ಇಲ್ಲಿ ನೀಡುತ್ತಿದ್ದೇವೆ.

ಈ ಅಪೂರ್ವ ಕಲಾವಿದ, ಸಮಾಜವಾದಿ ಚಿಂತಕ ರಾಮಮನೋಹರ ಲೋಹಿಯಾರ ಅಭಿಮಾನಿ ಕೂಡಾ ಹೌದು. ಈ ಕಲಾವಿದನೇ ಹೇಳಿಕೊಂಡಂತೆ ತಾನು ರಾಮಾಯಣದ ಚಿತ್ರಗಳನ್ನು ಬಿಡಿಸಲಾರಂಭಿಸಿದ್ದು, ತನ್ನ ಚಿತ್ರಗಳ ಪೋಷಕರಲ್ಲೊಬ್ಬರಾಗಿದ್ದ ಬದ್ರಿ ವಿಶಾಲ ಪಿಟ್ಟಿಯವರ ಮೂಲಕ ಪರಿಚಯವಾದ ಲೋಹಿಯಾರ ಸೂಚನೆಯ ಮೇರೆಗೆ. ಅವರ 'ನೀವು ಬರೀ ಟಾಟಾ ಬಿರ್ಲಾಗಳಿಗಾಗಿ ಮಾತ್ರ ನಿಮ್ಮ ಕಲೆಯನ್ನು ಮೀಸಲಿರಿಸುತ್ತೀರೋ ಅಥವಾ ನಮ್ಮ ಹಳ್ಳಿಗರಿಗಾಗಿಯೂ ಏನಾದರೂ ರಚಿಸುತ್ತೀರೋ?' ಎಂಬ ಪ್ರಶ್ನೆಯಿಂದ ಕಲಕಲ್ಪಟ್ಟು.. ಕಲಾ ಇತಿಹಾಸಕಾರ್ತಿ ಯಶೋಧರಾ ದಾಲ್ಮಿಯಾಗೆ ನೀಡಿದ ಇನ್ನೊಂದು ಸಂದರ್ಶನದಲ್ಲಿ ಹುಸೇನ್ ತಾವು ಹೇಗೆ ಲೋಹಿಯಾರ ಸೂಚನೆಯನ್ನು ಪಾಲಿಸಿ ಎಂಟು– ಹತ್ತು ವರ್ಷಗಳ ಕಾಲಾವಧಿಯಲ್ಲಿ ಬಿಡಿಸಿದ ರಾಮಾಯಣದ ಬೃಹತ್ ಚಿತ್ರಗಳನ್ನು ಅವರ ಅನಿರೀಕ್ಷಿತ ನಿಧನದ

ನಂತರ ಅವರಿಗೆ ಶ್ರದ್ಧಾಂಜಲಿಯಾಗಿ, ಪಿಟ್ಟಿಯವರ ಸಲಹೆಯ ಮೇರೆಗೆ ಹೇಗೆ ಹೈದರಾಬಾದ್‌ನಿಂದ ೮೦ ಕಿಮೀಗಳ ದೂರದ ಹಳ್ಳಿಯೊಂದಕ್ಕೆ ಎತ್ತಿನ ಗಾಡಿಗಳಲ್ಲಿ ಪ್ರದರ್ಶನ ನೀಡುತ್ತಾ ಸಾಗಿಸಲಾಯಿತು ಮತ್ತು ಬುರ್ರಕಥಾ ಹಾಡುಗಾರಿಕೆಯ ಜೊತೆಗೆ ಅವನ್ನು ಹಳ್ಳಿ ಜನರ ಕಲಾಭಿಜ್ಞತೆಯನ್ನು ಜಾಗೃತಗೊಳಿಸುವ ಪ್ರಯತ್ನದ ಭಾಗವಾಗಿ ಬಳಸಲಾಯಿತು ಎಂಬುದನ್ನು ವಿವರಿಸಿದ್ದಾರೆ. ಈ ಸಂದರ್ಶನದ ಮುಖ್ಯ ಮಾತೆಂದರೆ, 'ಹಳ್ಳಿಯ ಜನ ಬುರ್ರಕಥಾ ಕೇಳುತ್ತಾ, ಆ ಬೃಹತ್ ರಾಮ ಮತ್ತು ಹನುಮಾನರ ವರ್ಣಚಿತ್ರಗಳ ಮುಂದೆ ಕಿಕ್ಕಿರಿದು ಕೂತು ಮೈಮರೆತರು. ಯಾರೊಬ್ಬರೂ, ರಾಮನ ಕಣ್ಣುಗಳೆಲ್ಲಿ, ಈ ಚಿತ್ರವನ್ನು ಹೀಗೇಕೆ ಬಿಡಿಸಿದ್ದೀರಿ ಎಂಬ ಪ್ರಶ್ನೆಗಳನ್ನು ಕೇಳಲಿಲ್ಲ!'

ತೆಹೆಲ್ಕಾದ ಸಂದರ್ಶನದ ಕನ್ನಡಾನುವಾದವನ್ನು ಇಲ್ಲಿದೆ:

ಶೋಮಾ ಚೌಧುರಿ: ಹುಸೇನ್ ಸಾಬ್, ನಿಮ್ಮ ಮೇಲೆ ಮೂಲಭೂತವಾದಿಗಳು ನಡೆಸಿದ ದಾಳಿಯ ಬಗ್ಗೆ ನಿಮಗೇನನ್ನಿಸುತ್ತೆ?

ಹುಸೇನ್: ಇದೆಲ್ಲದರಿಂದ ನಾನೇನೂ ಚಿಂತಿತನಾಗಿಲ್ಲ. ಭಾರತ ಒಂದು ಪ್ರಜಾಪ್ರಭುತ್ವ ದೇಶ. ಪ್ರತಿಯೊಬ್ಬರಿಗೂ ಅಭಿಪ್ರಾಯ ಸ್ವಾತಂತ್ರ್ಯವಿದೆ. ಆದರೆ ಜನ ತಮ್ಮ ಅಭಿಪ್ರಾಯಗಳನ್ನು ಹಿಂಸಾಚಾರದ ಬದಲಾಗಿ ಚರ್ಚೆಯ ಮೂಲಕ ವ್ಯಕ್ತಪಡಿಸಬೇಕೆಂಬುದಷ್ಟೇ ನನ್ನ ಬಯಕೆ. ಮಾಧ್ಯಮ ಮಿತ್ರರು ನನ್ನ ಬಳಿಗೆ ಕಟುವಾದ ಹೇಳಿಕೆಯನ್ನು ನಿರೀಕ್ಷಿಸಿಯೇ– ಬಯಸಿಯೇ ಎಂದೂ ಹೇಳಬಹುದು– ಬರುತ್ತಾರೆ. ಆದರೆ ಭಾರತದ ಬಗ್ಗೆ ನಾನು ಆಶಾವಾದಿಯಾಗಿಯೇ ಇದ್ದೇನೆ. ಇದನ್ನೆಲ್ಲ ನಾನು ಕಾಲದ ಒಂದು ಕ್ಷಣ ಮಾತ್ರ ಎಂದು ಭಾವಿಸುವೆ. ನಮ್ಮ ಕೆಲಸ ೫೦೦೦ ವರ್ಷಗಳಿಂದ ಸಾಕಷ್ಟು ಶಕ್ತಿಯುತವಾಗಿಯೇ ನಡೆಯುತ್ತಾ ಬಂದಿದೆ; ಇದು ಒಂದು ಸಣ್ಣ ಅಡೆ– ತಡೆ ಎಂದೇ ನಾನು ತಿಳಿದಿದ್ದೇನೆ. ಯುವ ಜನಾಂಗ ದೇಶದಲ್ಲಿನ ಸದ್ಯದ ಈ ಮೂಲಭೂತವಾದಿ ಮತ್ತು ಸಂಪ್ರದಾಯವಾದಿ ಮನೋಭಾವದಿಂದ ಬೇಸತ್ತು ಪರಿಸ್ಥಿತಿಯನ್ನು ಬದಲಾಯಿಸುತ್ತದೆ ಎಂಬ ದೃಢ ನಂಬಿಕೆ ನನಗಿದೆ. ನನ್ನ ದೇಶವನ್ನು ಬಿಟ್ಟು ಹೋಗಲು ನಾನು ಬಯಸಲಿಲ್ಲ ಆದರೆ ಅದೇ ವೇಳೆಗೆ ಸಂಪ್ರದಾಯವಾದಿ ಶಕ್ತಿಗಳನ್ನು ಸಮಾಜದಿಂದ ಬೇರ್ಪಡಿಸಿ ಹೊರಹಾಕಬೇಕೆಂದು ಬಯಸಿದವನೂ ನಾನಲ್ಲ. ನಾವೆಲ್ಲ ಒಂದು ದೊಡ್ಡ ಕುಟುಂಬದ ಸದಸ್ಯರು. ಈ ಕುಟುಂಬದ ಒಂದು ಮಗು ಏನನ್ನಾದರೂ ಮುರಿದು ಹಾಕಿದರೆ, ಅದನ್ನು ಮನೆಯಿಂದ ಹೊರ ಹಾಕಲಾಗುವುದಿಲ್ಲ. ಬದಲಿಗೆ ಅದಕ್ಕೆ ಒಂದಿಷ್ಟು ಬುದ್ಧಿ ಹೇಳುತ್ತೇವೆ ಅಲ್ಲವೇ? ಏ ಆಪಸ್ ಕ ಮಾಮಲಾ ಹೈಂ! ನನ್ನ ಕಲೆಯನ್ನು ವಿರೋಧಿಸುವವರಿಗೆ ಅದು ಅರ್ಥವಾಗಿಲ್ಲ ಅಥವಾ ಅವರು ಅದನ್ನು ನೋಡಿಲ್ಲ ಅಷ್ಟೆ!

ಶೋ: ನೀವೇಕೆ ಭಾರತಕ್ಕೆ ಬಂದು ಹೋರಾಟ ಮುಂದುವರೆಸಬಾರದು?

ಹು: ಪರಿಸ್ಥಿತಿ ಹೀಗಿರುವಂತೇ ಇದ್ದರೆ, ನಾನು ವಾಪಸ್ ಬರಲಾರೆ. ನನ್ನನ್ನು ಯಾರೂ ಗಡಿಪಾರು ಮಾಡಿಲ್ಲ. ನನಗೆ ತುಂಬಾ ವಯಸ್ಸಾಗಿ, ದೈಹಿಕ ಹಲ್ಲೆಯನ್ನು

ಎದುರಿಸಲಾರೆನಾದ್ದರಿಂದ ನಾನಾಗಿಯೇ ದೇಶ ಬಿಟ್ಟು ಹೊರಬಂದೆನಷ್ಟೆ. ಇದು ಅಲ್ಲಿ ದಾಖಲಾಗಿರುವ ಬರೀ ಮೊಕದ್ದಮೆಗಳ ಪ್ರಶ್ನೆಯಲ್ಲ. ಅಲ್ಲಿ ಉಂಟು ಮಾಡಲಾಗಿರುವ ವಾತಾವರಣವನ್ನು ನೋಡಿದಾಗ, ಯಾರಾದರೂ ಬೀದಿಯಲ್ಲಿ ನನ್ನನ್ನು ನೂಕಿ, ಹೊಡೆದು ಹಾಕಲು ಯತ್ನಿಸಿದರೆ. ನಾನು ನನ್ನನ್ನು ರಕ್ಷಿಸಿಕೊಳ್ಳಲಾರೆ. ಬಹುಶಃ ನಾನು ಸ್ವದೇಶಕ್ಕೆ ಬರಲು ಏಕೈಕ ಅವಕಾಶವಿರುವುದು ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಾಗ ಎಂದು ಕಾಣುತ್ತದೆ. ಅಥವಾ ಮಾಯಾವತಿ ಬಂದಲ್ಲಿ... ಈ ಸರ್ಕಾರಕ್ಕೆ ಬೆನ್ನೆಲುಬಿಲ್ಲ. ಅವರ ಕೈಗಳನ್ನು ಕಟ್ಟಿ ಹಾಕಲಾಗಿದೆ. ತಾವು ಮಾತನಾಡಿದರೆ ಅಥವಾ ಕ್ರಮ ಕೈಗೊಂಡರೆ ತಮ್ಮ ಮೇಲೆ ತುಷ್ಟೀಕರಣದ ಆರೋಪ ಬಂದುಬಿಡುತ್ತದೆ ಎಂದು ಅವರು ಹೆದರಿದ್ದಾರೆ. ವಿಪರ್ಯಾಸವೆಂದರೆ, ಅಧಿಕಾರವಿಲ್ಲದಿದ್ದಾಗ ಬಿಜೆಪಿ ತನ್ನ ವೋಟ್ ಬ್ಯಾಂಕ್ ನಿರ್ಮಿಸಿಕೊಳ್ಳಲು ಈ ರೀತಿಯ ಭಾವನೆಗಳನ್ನು ಪ್ರಚೋದಿಸುತ್ತದೆ. ಆದರೆ ಅಧಿಕಾರಕ್ಕೆ ಬಂದಲ್ಲಿ, ಗೌರವಾರ್ಹವಾಗಿ ಮತ್ತು ಧರ್ಮನಿರಪೇಕ್ಷವಾಗಿ ಕಾಣಲು ತನ್ನ ಅತಿವಾದಿ ಗುಂಪುಗಳನ್ನು ನಿಯಂತ್ರಿಸುತ್ತದೆ. ಏನು ಮಾಡುವುದು, ಇದು ಭಾರತದ ಇಂದಿನ ವಿಪರ್ಯಾಸ! ವಾಸ್ತವವಾಗಿ ಈ ಗೊಂದಲವನ್ನೆಲ್ಲ ನ್ಯಾಯಾಲಯಗಳು ಪರಿಹರಿಸಬೇಕು. ನನ್ನ ಕಲೆ ಅಶ್ಲೀಲವಾಗಿದೆ ಅಥವಾ ಧಾರ್ಮಿಕ ಭಾವನೆಗಳಿಗೆ ನೋವನ್ನುಂಟು ಮಾಡುತ್ತದೆ ಎಂಬ ಆಪಾದನೆ ನ್ಯಾಯಾಲಯಗಳಲ್ಲಿ ನಿಲ್ಲುವುದಿಲ್ಲ. ಯಾರಾದರೂ ಪ್ರತಿ ಸಾರ್ವಜನಿಕ ಹಿತಾಸಕ್ತಿಯ ಅರ್ಜಿ ಸಲ್ಲಿಸಿದರೆ ಆಗಬಹುದೇನೋ... ನನಗಂತೂ ಆಗುವುದಿಲ್ಲ.

ಶೋ: ನೀವೇಕೆ ನಿಮ್ಮ ಕಲೆ ಬಗ್ಗೆ ಕ್ಷಮೆ ಕೇಳಿದಿರಿ? ನಿಮ್ಮ ಚಿತ್ರಗಳನ್ನು ಹರಿದು ಹಾಕಿದ ಗೂಂಡಾಗಳಿಗಿಂತ ನಿಮಗೆ ಹಿಂದೂ ಮೂರ್ತಿ ವಿದ್ಯೆ ಮತ್ತು ಶಾಸ್ತ್ರಗಳ ಬಗ್ಗೆ ಗೊತ್ತಿದೆಯಲ್ಲವೇ?

ಹು: ಇಲ್ಲ. ನಾನೆಂದೂ ನನ್ನ ಕಲೆಯ ವಿಷಯವಾಗಿ ಕ್ಷಮೆ ಕೇಳಿಲ್ಲ. ಅದರ ಬಗ್ಗೆ ನನಗೆ ಸಂಪೂರ್ಣ ನಂಬಿಕೆ ಇದೆ. ನಾನು ಹೇಳಿದ್ದಿಷ್ಟೆ. ನಾನು ನನ್ನ ಚಿತ್ರಗಳನ್ನು– ದೇವ ದೇವಿಯರದ್ದೂ ಸೇರಿ– ಆಳವಾದ ಪ್ರೀತಿ, ನಂಬಿಕೆ ಮತ್ತು ಸಂಭ್ರಮಾಚರಣೆಗಳೊಂದಿಗೆ ರಚಿಸಿದ್ದೇನೆ. ಹಾಗೆ ಮಾಡುವಾಗ ನಾನು ಯಾರಿಗಾದರೂ ನೋವನ್ನುಂಟು ಮಾಡಿದ್ದರೆ, ಕ್ಷಮಿಸಿಬಿಡಿ. ಇಷ್ಟೇ ನಾನು ಹೇಳಿದ್ದು. ನನ್ನ ಪ್ರಕಾರ ಮಾನವತೆಗಿಂತ ಕಲೆ ಹೆಚ್ಚಿನದೇನಲ್ಲ. ಭಾರತ ಸಂಪೂರ್ಣ ಅರ್ಥದಲ್ಲಿ ಒಂದು ಅನನ್ಯ ದೇಶ. ಉದಾರವಾದಿ, ವೈವಿಧ್ಯಮಯ ದೇಶವಿದು. ಇಂತಹುದು ಜಗತ್ತಿನಲ್ಲಿ ಬೇರಲ್ಲೂ ಇಲ್ಲ. ದೇಶದಲ್ಲಿನ ಸದ್ಯದ ಮನಃಸ್ಥಿತಿ ಕೇವಲ ಒಂದು ಐತಿಹಾಸಿಕ ಪ್ರಕ್ರಿಯೆಯಷ್ಟೆ. ನನಗೆ ಭಾರತವೆಂದರೆ ಬದುಕಿನ ಸಂಭ್ರಮಾಚರಣೆಯ ಒಂದು ಪ್ರತೀಕ. ಈ ಗುಣವನ್ನು ನೀವು ಬೇರೆಲ್ಲಿಯೂ ಕಾಣಲಾರಿರಿ.

ಶೋ: ನಿಮಗೆ ಹಿಂದೂ ಮೂರ್ತಿಶಾಸ್ತ್ರ ಮತ್ತು ಸಂಸ್ಕೃತಿಯ ಪರಿಚಯ ಆರಂಭವಾದದ್ದು ಹೇಗೆ ಎಂಬುದನ್ನು ಕುರಿತು ಒಂದಿಷ್ಟು ಹೇಳಿ.

ಹು: ಪಂಢರಪುರದಲ್ಲಿ ಒಂದು ಮಗುವಾಗಿ, ನಂತರ ಇಂದೂರಿನಲ್ಲಿ ರಾಮಲೀಲಾ ನೋಡಿ ನಾನು ಬೆರಗಾಗಿ ಹೋಗಿದ್ದೆ. ನಾನು ಮತ್ತು ನನ್ನ ಗೆಳೆಯ ಮಂಕೇಶ್ವರ್ ಇದನ್ನು ಯಾವಾಗಲೂ ಅಭಿನಯಿಸಿ ಸಂತೋಷಪಡುತ್ತಿದ್ದೆವು. ರಾಮಾಯಣ ಎಂತಹ ಸಮೃದ್ಧ ಮತ್ತು ಶಕ್ತಿಶಾಲಿ ಕಥೆಯೆಂದರೆ, ಡಾ. ರಾಜಗೋಪಾಲಾಚರಿಯವರು ಹೇಳಿದಂತೆ, ಅದರ ಪುರಾಣ ಇಲ್ಲಿ ವಾಸ್ತವವಾಗಿ ಪರಿವರ್ತಿತವಾಗಿ ಹೋಗಿದೆ. ಅದಿರಲಿ, ನನ್ನ ಜೀವನದಲ್ಲಿ ಆದ ದುರ್ಘಟನೆಗಳಿಂದಾಗಿ ನನಗೆ ೧೯ ವರ್ಷವಾಗಿದ್ದಾಗಲೇ ನಾನು ಅಧ್ಯಾತ್ಮಿಕ ಗ್ರಂಥಗಳನ್ನು ಓದತೊಡಗಿದೆ. ನನ್ನ ತಾಯಿ ಸತ್ತು ನಾನು ಮನೆ ಬಿಡಬೇಕಾಗಿ ಬಂದಾಗ, ೧೪–೧೫ನೇ ವಯಸ್ಸಿನಲ್ಲಿ ನನಗೆ ರಾತ್ರಿ ಭಯಂಕರ ದುಃಸ್ವಪ್ನಗಳು ಕಾಡತೊಡಗಿದ್ದವು. ೧೯ನೇ ವಯಸ್ಸಿನಲ್ಲಿ ಇವೆಲ್ಲ ನಿಂತು ಹೋದವು. ನನಗೆ ಮಹಮ್ಮದ್ ಇಷಾಕ್ ಎಂಬ ಗುರು ಇದ್ದರು. ಅವರೊಂದಿಗೆ ನಾನು ಎರಡು ವರ್ಷಗಳ ಕಾಲ ಪವಿತ್ರ ಗ್ರಂಥಗಳ ಅಧ್ಯಯನದಲ್ಲಿ ತೊಡಗಿದೆ. ಆ ಹೊತ್ತಿಗೆ ಬೈರಾಗಿಯಾಗಿಯಗಿದ್ದ ನನ್ನ ಗೆಳೆಯ ಮಂಕೇಶ್ವರನೊಂದಿಗೆ ನಾನು *ಗೀತಾ*, ಉಪನಿಷತ್ತುಗಳು ಮತ್ತು ಪುರಾಣಗಳನ್ನು ಓದಿ ಚರ್ಚಿಸಿದೆ. ನಂತರ ಆತ ಹಿಮಾಲಯಕ್ಕೆ ಹೋಗಿಬಿಟ್ಟ. ಆನಂತರ ಹಲವಾರು ವರ್ಷಗಳ ಕಾಲ ನಾನು ಈ ಅಧ್ಯಯನ ಮುಂದುವರೆಸಿದೆ. ಇದೆಲ್ಲದರಿಂದಾಗಿ ನಾನು ಸಂಪೂರ್ಣವಾಗಿ ಶಾಂತನಾದೆ. ಆಗಿನಿಂದ ನನಗೆ ಕನಸುಗಳ ಅಥವಾ ದುಃಸ್ವಪ್ನಗಳ ಕಾಟ ಸಂಪೂರ್ಣವಾಗಿ ಇಲ್ಲವಾಗಿದೆ.

ಇದಾದ ಎಷ್ಟೋ ವರ್ಷಗಳ ನಂತರ ೧೯೫೮ರಲ್ಲಿ ಹೈದರಾಬಾದ್‌ನಲ್ಲಿ ಡಾ. ರಾಮಮನೋಹರ ಲೋಹಿಯಾ ಅವರ ಭೇಟಿಯಾಯಿತು. ಅವರು ನನಗೆ ರಾಮಾಯಣವನ್ನು ಚಿತ್ರಿಸಲು ಹೇಳಿದರು. ಆಗ ನನ್ನ ಬಳಿ ಏನೂ ಇರಲಿಲ್ಲ. ಆದರೂ ಎಂಟು ವರ್ಷಗಳ ಕಾಲಾವಧಿಯಲ್ಲಿ ೧೫೦ ಚಿತ್ರಗಳನ್ನು ರಚಿಸಿದೆ. ಅದಕ್ಕಾಗಿ ನಾನು ವಾಲ್ಮೀಕಿ ಮತ್ತು ತುಳಸೀ ರಾಮಾಯಣಗಳನ್ನು (ಮೊದಲನೆಯದು ಹೆಚ್ಚು ಐಂದ್ರಿಯಿಕ ಸೌಂದರ್ಯದಿಂದ ಕೂಡಿದೆ) ಓದಿದೆ ಮತ್ತು ಬನಾರಸ್‌ನಿಂದ ಪಂಡಿತರನ್ನು ಕರೆಸಿ ಅವುಗಳಲ್ಲಿನ ಸೂಕ್ಷ್ಮ ಭಾಗಗಳ ಬಗ್ಗೆ ಚರ್ಚಿಸಿದೆ. ನಾನು ಇದನ್ನೆಲ್ಲ ಮಾಡುತ್ತಿದ್ದಾಗ ಕೆಲವು ಸಂಪ್ರದಾಯವಾದಿ ಮುಸ್ಲಿಮರು, ನೀನೇಕೆ ಮುಸ್ಲಿಂ ವಸ್ತುಗಳ ಬಗ್ಗೆ ಚಿತ್ರ ರಚಿಸಬಾರದು ಎಂದು ಕೇಳಿದರು. ನಾನು ಇಸ್ಲಾಂಗೆ ಅಂತಹ ಸಹನಶೀಲತೆ ಇದೆಯೇ ಎಂದು ಅವರನ್ನು ಕೇಳಿದೆ. ಲಿಪಿಶೈಲಿ ಸ್ವಲ್ಪ ಬದಲಾದರೂ ಅವರು ನನ್ನ ಭಿತ್ತಿಗಳನ್ನು ಹರಿದು ಚೂರು ಮಾಡಿಯಾರು ಎಂದು ಹೇಳಿದೆ.

ನನ್ನ ಜೀವಿತ ಕಾಲದಲ್ಲಿ ನಾನು ನೂರಾರು ಗಣೇಶರನ್ನು ಚಿತ್ರಿಸಿದ್ದೇನೆ– ಓಹ್, ಅದೊಂದು ಅದ್ಭುತ ಮನಮೋಹಕ ರೂಪ! ನಾನು ಯಾವುದೇ ದೊಡ್ಡ ಕೆಲಸ ಆರಂಭ ಮಾಡುವ ಮುನ್ನ ಗಣೇಶನನ್ನು ಚಿತ್ರಿಸಿಯೇ ಮುಂದುವರೆಯುವುದು. ನನಗೆ ಶಿವನ ವಿಗ್ರಹ ವಿನ್ಯಾಸ ಕೂಡಾ ತುಂಬ ಇಷ್ಟ. ಜಗತ್ತಿನ ಅತ್ಯಂತ ಸಂಕೀರ್ಣ ರೂಪಗಳಲ್ಲೊಂದಾದ ನಟರಾಜ,

ಸಾವಿರಾರು ವರ್ಷಗಳ ಕಾಲ ವಿಕಾಸಗೊಳ್ಳುತ್ತಾ ಸೃಷ್ಟಿಯಾದ ಮೂರ್ತಿ. ಅದು ಸರಿ ಸುಮಾರಾಗಿ, ಐನ್‌ಸ್ಟೀನ್‌ನ ಸಮೀಕರಣದಂತೆ ಈ ವಿಶ್ವದ ಮತ್ತು ಭೌತ ವಾಸ್ತವದ ಗುಣಸ್ವರೂಪವನ್ನು ಕುರಿತ ಆಳವಾದ ತಾತ್ವಿಕ ಚಿಂತನೆ ಹಾಗೂ ಗಣಿತೀಯ ಲೆಕ್ಕಾಚಾರಗಳ ಪರಿಣಾಮವೇ ಸರಿ. ನನ್ನ ಮಗಳು ರಾಯಿಸಾ ಮದುವೆಯಾಗಲು ನಿರ್ಧರಿಸಿ, ಅದೊಂದು ಶಾಸ್ತ್ರಾಚಾರವಾಗಬಾರದೆಂದು ಬಯಸಿದಾಗ, ನಾನು ಒಂದು ಕಾರ್ಡ್‌ನಲ್ಲಿ ಅದನ್ನು ಸೂಚಿಸಿ, ಜಗತ್ತಿನಾದ್ಯಂತ ಇದ್ದ ನನ್ನ ಬಂಧುಗಳಿಗೆ ಕಳಿಸಿದೆ. ಆ ಕಾರ್ಡ್ ಮೇಲೆ ನಾನು, ಶಿವ ಪಾರ್ವತಿಯ ತೊಡೆಯ ಮೇಲೆ ಕೂತು ಅವಳ ಸ್ತನವೊಂದರ ಮೇಲೆ ಕೈಇಟ್ಟಿರುವ ಚಿತ್ರವನ್ನು– ವಿಶ್ವದ ಮೊದಲ ಮದುವೆಯನ್ನು– ಚಿತ್ರಿಸಿದ್ದೆ. ನಗ್ನತೆ ಎಂಬುದು ಹಿಂದೂ ಸಂಸ್ಕೃತಿಯಲ್ಲಿ ಪರಿಶುದ್ಧತೆಗೊಂದು ರೂಪಕವಷ್ಟೆ.

ಅಲ್ಲಾ, ನನಗೆ ಇಷ್ಟೊಂದು ನಿಕಟ ಮತ್ತು ಆತ್ಮೀಯವಾಗಿರುವುದನ್ನು ನಾನು ಅವಮಾನಿಸುತ್ತೇನೆಯೇ? ನಾನು, ಪುನರ್ಜನ್ಮವೂ ಸೇರಿದಂತೆ ಹಿಂದೂಗಳೊಂದಿಗೆ ಹಲವು ಸಾಮ್ಯ ನಂಬಿಕೆಗಳನ್ನು ಹೊಂದಿರುವ ಷಿಯಾಗಳ ಒಂದು ಉಪ ಪಂಗಡವಾದ ಸುಲೇಮಾನಿ ಸಮುದಾಯಕ್ಕೆ ಸೇರಿದವನು. ಸಂಸ್ಕತಿಗಳಾಗಿ, ಜುಡಾಯಿಸಂ ಮತ್ತು ಕ್ರಿಶ್ಚಿಯಾನಿಟಿ ಭಾವನಾತ್ಮಕವಾಗಿ ನನಗೆ ದೂರವಾದವುಗಳು. ಆದರೆ ಇದನ್ನೆಲ್ಲ ನನ್ನ ಕಲೆಯನ್ನು ವಿರೋಧಿಸುವವರೊಂದಿಗೆ ಚರ್ಚಿಸುವುದು ಅಸಾಧ್ಯವೇ ಸರಿ. ಅವರೊಂದಿಗೆ ಖಜುರಾಹೋ ಶಿಲ್ಪಗಳ ಬಗ್ಗೆ ಮಾತನಾಡಿ. ಅವನ್ನು ಜನಸಂಖ್ಯೆ ಹೆಚ್ಚಿಸಲು ಕೆತ್ತಲಾಗಿತ್ತು; ಈಗ ಅವು ನಿಷ್ಪ್ರೋಜಕವಾಗಿವೆ ಎನ್ನುತ್ತಾರೆ! (ನಗು) ಹಿಂದೂ ದೇವತೆಗಳ ಐಂದ್ರಿಯಿಕವಾದ, ಜೀವಂತವಾದ, ವಿಕಾಸಶೀಲಲ ಸ್ವಭಾವವನ್ನು ಅರ್ಥ ಮಾಡಿಕೊಳ್ಳಬಲ್ಲವರು ಹಳ್ಳಿಯ ಜನರೇ ಎನಿಸುತ್ತದೆ. ಅವರು ಬಂಡೆಯ ಮೇಲೆ ಒಂದಿಷ್ಟು ಕಿತ್ತಳೆ ಬಣ್ಣ ಬಳಿದು, ಅದನ್ನೇ ಹನುಮಂತ ಎಂದು ಭಾವಿಸಬಲ್ಲರು!

ಶೋ: ನಿಮ್ಮ ಚಿತ್ರಗಳ ಬಗ್ಗೆ ಯಾವ ಪರಿಭಾಷೆಯಲ್ಲಿ ಮಾತನಾಡಬೇಕೆಂದು ಮತ್ತು ನೆನಪಿಸಿಕೊಳ್ಳಬೇಕೆಂದು ನೀವು ಬಯಸುತ್ತೀರಿ?

ಹು: ನಾನೆಂದೂ ಜಾಣ, ನಿಗೂಢ, ಅಮೂರ್ತವಾಗಿರಲು ಬಯಸಲಿಲ್ಲ. ಹೇಳುವುದನ್ನು ಸರಳವಾಗಿ ಹೇಳಬಯಸಿದವನು ನಾನು. ನನ್ನ ಭಿತ್ತಿಗಳುಲ್ಲಿ ಕಥೆಯೊಂದಿರಬೇಕೆಂದು ಬಯಸಿದವನು ನಾನು. ನನ್ನ ಚಿತ್ರಗಳು ಜನರೊಂದಿಗೆ ಮಾತಾಡಬೇಕೆಂದು ಬಯಸಿದವನು ನಾನು. ೧೯೪೭ರಲ್ಲಿ ಮೊದಲ ಬಾರಿಗೆ ನಾನು ಬಾಂಬೆ ಆರ್ಟ್ಸ್ ಸೊಸೈಟಿಯಲ್ಲಿ ನನ್ನ ಚಿತ್ರ ಪ್ರದರ್ಶನ ಮಾಡುವ ಹೊತ್ತಿಗೆ, ಸಾಕಷ್ಟು ಕೆಲಸ ಮಾಡಿ ಅನುಭವ ಗಳಿಸಿದ್ದೆ. ಈ ಪ್ರದರ್ಶನದಲ್ಲಿ ನಾನು ತಂಜಾವೂರು, ಚೋಳ ಮತ್ತು ಗುಪ್ತರ ಕಾಲದ ಅಭಿಜಾತ ರೂಪಗಳನ್ನು ಮತ್ತು ಪಹಾಡ್ ಪರಂಪರೆಯ ಚಿತ್ರಗಳಲ್ಲಿನ ಐಂದ್ರಯಿಕ ಆಕರ್ಷಣೆಯ ವಿವಿಧ ಬಣ್ಣಗಳನ್ನು ನೋಡಿ; ಅಭಿಜಾತ ರೂಪವಿದ್ದರೂ, ಜಾನಪದದ

ಮುಗ್ಧತೆ ಇರುವಂತಹ ಚಿತ್ರಗಳನ್ನು ಬಿಡಿಸಿ ಇಟ್ಟಿದ್ದೆ. ಡಿ'ಸೌಜಾ ಇದನ್ನು ನೋಡಿ, ಇದನ್ನು ಎಲ್ಲಿಂದ ತಂದೆ ಎಂದು ಕೇಳಿದ. ನಾನು ಹೇಳಲಿಲ್ಲ. ಹೋಗಿ ಹುಡುಕು ಎಂದಷ್ಟೇ ಹೇಳಿದೆ. ಕಲಾ ಸಾಧನೆಯ ಹೃದಯ ಸ್ಥಾನದಲ್ಲಿರುವುದು ಇದೇ: ಪರಂಪರೆಯಿಂದ ಅತ್ಯುತ್ತಮವಾದುದನ್ನು ಗುರುತಿಸಿ ಆಯ್ದುಕೊಂಡು ಅದನ್ನು ಕುಶಲಗೊಳಿಸಿಕೊಳ್ಳುವುದು. ಭಾರತದಲ್ಲಿ ಎಂತೆಂತಹ ಪರ್ವಕಾಲಗಳು ಆಗಿ ಹೋಗಿವೆ! ಅವುಗಳ ಹಿಂದೆ ಶತಶತಮಾನಗಳ ವೀಕ್ಷಣೆ ಮತ್ತು ಗುರುತಿಸುವಿಕೆಯ ಕುಶಲತೆ ಇದೆ. ನೀವು ಚಕ್ರವನ್ನು– ನಿಮ್ಮ ವ್ಯಕ್ತಿ ವೈಶಿಷ್ಟ್ಯವನ್ನು– ಪುನರನ್ವೇಷಿಸಲಾರಿರಿ. ನಿಮ್ಮ ಸೃಜನಶೀಲ ಕಣ್ಣು ಇರುವುದು, ಯಾವುದನ್ನು ನೀವು ಗುರುತಿಸಿ ಎತ್ತಿಕೊಳ್ಳುತ್ತೀರಿ ಎಂಬುದರಲ್ಲಿ. ಇನ್ನೊಂದು ಅಂದರೆ, ನಿಮ್ಮದೇ ಲಯ ಮತ್ತು ಸಂಯೋಜನೆಯ ಲೆಕ್ಕಾಚಾರವನ್ನು ಕಂಡುಕೊಳ್ಳುವುದು. ಖಾಲಿ ಭಿತ್ತಿಯ ಮೇಲೆ ಎಲ್ಲಿ ಗೆರೆ ಹಾಕಬೇಕು, ಎಲ್ಲಿ ಬಿಂದು ಇಡಬೇಕು? ಎಷ್ಟು ಹಳದಿ, ಎಷ್ಟು ಕೆಂಪು ಬಳಸಬೇಕು? ನಾನು ೧ ಮಿಮೀ ಕೆಂಪನ್ನು ಬಳಸಿದರೆ, ನೀಲಿ ಅರ್ಧ ಮಿಮೀ ಇರಬೇಕೋ ಅಥವಾ ಇನ್ನೂ ಹೆಚ್ಚಿರಬೇಕೋ ಎಂಬುದನ್ನು. ಕಲಾವಿದನೊಬ್ಬನ ಧ್ವನಿ ಮೂಡುವುದು ಅವನ ಈ ಲೆಕ್ಕಾಚಾರದಲ್ಲಿ, ಈ ಗಣಿತದಲ್ಲಿ. ನಿಮ್ಮದೇ ಶೈಲಿ ಮತ್ತು ಭಾಷೆ ರೂಢಿಸಿಕೊಳ್ಳಬೇಕಾದರೆ ೬೦– ೭೦ ವರ್ಷಗಳ ನಿರಂತರ ದುಡಿಮೆ ಬೇಕಾಗುತ್ತದೆ.

ಶೋ: ನಿಮ್ಮ ರಚನೆಗಳ ಪೈಕಿ ಅತ್ಯಂತ ಮಹತ್ವದ್ದೆಂದು, ಪಿಕಾಸೋನ Guernicaಗೆ ತನ್ನದೇ ರೀತಿಯಲ್ಲಿ ಸಮನಾಗಿ ನಿಲ್ಲುವಂತಹದ್ದು ಎಂದು ನೀವು ಯಾವುದನ್ನು ಗುರುತಿಸುತ್ತೀರಿ?

ಹು: 'Between the Spider and the Lamp' (೧೯೫೬). ನನಗೆ ಅದರ ಗುಂಪು ಸಂಯೋಜನೆಯ ಹಿಂದಿನ ರಚನಾ ಕೌಶಲ್ಯದ ಬಗ್ಗೆ ಬಹಳ ಖುಷಿ ಇದೆ – ಆ ಐದು ಜನ ಏನು ಮಾತಾಡುತ್ತಿದ್ದಾರೆ ಎಂಬುದರ ಬಗ್ಗೆ ಅಲ್ಲಿ ಒಂದು ರೀತಿಯ ನಿಗೂಢತೆ ಸೃಷ್ಟಿಯಾಗಿದೆ. ಬಹುಶಃ ತಮಗೇ ಗೊತ್ತಿಲ್ಲದ ಕಥೆಗಳ ಬಗ್ಗೆ. ಆ ಹೆಂಗಸು ಸೂಕ್ಷ್ಮವಾದ ದಾರದ ಮೇಲೆ ಜೇಡವನ್ನು ಹಿಡಿದಿರುವ ಕುಶಲತೆಯ ಬಗೆಯಲ್ಲೇ ಒಂದು ವಿಶಿಷ್ಟ ಭಾವವಿದೆ. ಒಂದು ಭಯ. ನಾನು ಅಪರೂಪಕ್ಕಷ್ಟೇ ಕಣ್ಣುಗಳನ್ನು ಬಿಡಿಸುವುದು. ಕಣ್ಣುಗಳನ್ನು ಬಿಡಿಸುವುದರಿಂದ ವ್ಯಕ್ತಿಯೊಬ್ಬನ ಚಹರೆಗಳನ್ನು ಗುರುತಿಸಿ ಅವನನ್ನು ವ್ಯಾಖ್ಯಾನಿಸುವ ಕೆಲಸವಾಗಿಬಿಡುವುದರಿಂದ, ನಾನು ನನ್ನ ಕೃತಿಗಳಲ್ಲಿ ಸಾಮಾನ್ಯವಾಗಿ ಕಣ್ಣುಗಳನ್ನು ಬಳಸುವುದಿಲ್ಲ. ಬದಲಿಗೆ ನಾನು ದೇಹವನ್ನು ಭಾವಪೂರ್ಣ ಅಭಿವ್ಯಕ್ತಿಯನ್ನಾಗಿ ಮಾಡಲು ಇಷ್ಟಪಡುತ್ತೇನೆ. ಕೈಗಳ ಭಾವಾಭಿವ್ಯಕ್ತಿಯನ್ನು ಅರಿಯಲು ನಾನು ರೋಡಿನ್‌ನ ಶಿಲ್ಪಗಳನ್ನು– ಉದಾಹರಣೆಗೆ, 'Men of Calais'– ಅಧ್ಯಯನ ಮಾಡಿದೆ. ಅವಕ್ಕೆ ಅಭಿಜಾತ ಮುದ್ರೆಗಳ ಜ್ಞಾನ ಪ್ರದಾನ ಮಾಡಿದೆ! ಭಾರತದಲ್ಲಿನ ಸಂಸ್ಕೃತಿ ಮತ್ತು ಪರಂಪರೆಯ ಬಗ್ಗೆ ಎಷ್ಟೊಂದು ಮಾತನಾಡಲಾಗುತ್ತದೆ. ಆದರೆ ಸ್ವಾತಂತ್ರ್ಯಾನಂತರದ ಈ ೬೦ ವರ್ಷಗಳ ನಂತರವೂ

ನಮ್ಮ ಕಲಾ ವಿದ್ಯಾರ್ಥಿಗಳು ದೇಹ ರೂಪವನ್ನು ಗ್ರೀಕ್ ಕಲೆಯ ಮೂಲಕವೇ ಕಲಿಯುತ್ತಿದ್ದಾರೆ. ಡಾ.ಕುಮಾರಸ್ವಾಮಿಯವರ ಹೆಸರು ಎಲ್ಲೂ ಕಾಣುವುದಿಲ್ಲ! ಕಾಲೇಜುಗಳಲ್ಲಿ ಷೇಕ್ಸ್‌ಪಿಯರ್, ಕೀಟ್ಸ್ ಬಗ್ಗೆ ಹೇಳಿಕೊಡಲಾಗುತ್ತದೆ, ಕಾಳಿದಾಸನ ಪ್ರಸ್ತಾಪವನ್ನೇ ಮಾಡುವುದಿಲ್ಲ! ಹೀಗಾಗಿಯೇ ಭಾರತದಲ್ಲಿ ಪೆಹಚಾನ್ ಎಂಬುದರ, ಭಾರತೀಯ ಅಂದರೇನು ಎಂಬುದರ ಅರಿವಿನ ಸುಳಿವೇ ಇಲ್ಲ. ಇಲ್ಲಿ ಪರಿಸ್ಥಿತಿ ಎಷ್ಟು ಮೂರ್ಖತನದಿಂದ ಕೂಡಿದೆ ಎಂದರೆ, ಕೆಲವು ವರ್ಷಗಳ ಹಿಂದೆ ನನ್ನ ಜೊತೆಗೆ ಸುಬ್ಬುಲಕ್ಷ್ಮಿ, ಜೆಆರ್‌ಡಿ ಟಾಟಾ ಮತ್ತು ಮದರ್ ತೆರೇಸಾ ಅವರನ್ನು ಬನಾರಸ್ ಹಿಂದೂ ವಿಶ್ವವಿದ್ಯಾಲಯದವರು ಸನ್ಮಾನಿಸಿದಾಗ ನಮಗೆ ಧರಿಸಲು ಕೆಂಪು ಟೋಪಿ ಮತ್ತು ನಿಲುವಂಗಿಗಳನ್ನು ನೀಡಲಾಯಿತು! (ನಗು) ಇದು ಹಿಂದೂ ಸಂಸ್ಕೃತಿ ಅಧ್ಯಯನ ಪೀಠದ ಪರಿಸ್ಥಿತಿ! ಭಾರತೀಯ ಸಂಸ್ಕೃತಿಯ ವಾರಸುದಾರಿಕೆಯ ಶೈಲಿ! ಇದಕ್ಕಿಂತ ಅಶ್ಲೀಲವಾದದ್ದು ಜಗತ್ತಿನಲ್ಲಿ ಬೇರಾವುದಾದರೂ ಇದೆಯಾ? ಇದು ದುರ್ವತನೆ! ಇನ್ನೇನು ತಾನೇ ಹೇಳಬಲ್ಲೆ?

(ಕನ್ನಡಾನುವಾದ: ಡಿ.ಎಸ್. ನಾಗಭೂಷಣ)

('ನವ ಮಾನವ ಮಾಸಿಕ'ದ ಸೆಪ್ಟಂಬರ್– ೨೦೧೧ರ ಸಂಚಿಕೆಯಲ್ಲಿ ಪ್ರಕಟ)

✧✧✧

೩೨.ಕೆಲವು ಸಂಪಾದಕೀಯ ಬರಹಗಳು

(ಇವು ನಾನು ೨೦೧೧ರ ಆಗಸ್ಟ್‌ನಲ್ಲಿ ಪ್ರಕಟಿಸಲಾರಂಭಿಸಿದ 'ನವ ಮಾನವ ಮಾಸಿಕ' ಪತ್ರಿಕೆಗಾಗಿ ಈವರೆಗೆ– ಅಂದರೆ ೨೦೧೨ ಮಾರ್ಚ್ ಸಂಚಿಕೆಯವರೆಗೆ– ಬರೆದ 'ಸಂಪಾದಕನ ಟಿಪ್ಪಣಿಗಳು'.)

೧. 'ಮಾನವ'ನ ಪುನರುಜ್ಜೀವನ ಏಕೆ?

ಪ್ರಿಯ ಓದುಗರೇ,

ಸಮಾಜವಾದ ಎಂಬ ಶಬ್ದವೇ ನಮ್ಮ ರಾಜಕೀಯ ಚರ್ಚೆಗಳಿಂದ ಬಹಿಷ್ಕೃತವಾಗುತ್ತಿರುವ ದಿನಗಳಲ್ಲಿ ನಾವು 'ಮಾನವ' ಪತ್ರಿಕೆಯನ್ನು ಪುನಾರಂಭಿಸುವ ಸಾಹಸಕ್ಕೆ ಕೈಹಾಕಿದ್ದೇವೆ. ಈ 'ಮಾನವ' ಎಪ್ಪತ್ತರ ದಶಕದಲ್ಲಿ ಕ್ರಿಯಾಶೀಲವಾಗಿದ್ದ ಸಮಾಜವಾದಿ ಚಳುವಳಿಯ, ವಿಶೇಷವಾಗಿ ಸಮಾಜವಾದಿ ಯುವಜನ ಸಭಾದ ಮುಖವಾಣಿಯಾಗಿತ್ತು. ಹಾಗೆ ಮುಖವಾಣಿ ಎಂದರೆ ತಪ್ಪಾಗುತ್ತದೇನೋ. ಲೋಹಿಯಾ ಅವರು ಇಂಗ್ಲಿಷ್‌ನಲ್ಲಿ ಆರಂಭಿಸಿದ್ದ 'Mankind'ನಂತೆ ಈ ಪತ್ರಿಕೆಯೂ ಮಾನವನ ಪೂರ್ಣತೆಯ ಅನ್ವೇಷಣೆಯ ಪ್ರಯತ್ನದಲ್ಲಿ, ವೈವಿಧ್ಯಮಯ ಆಸಕ್ತಿಗಳ ಬಗೆಗಿನ ಲೇಖನ– ವರದಿ– ವಿಶ್ಲೇಷಣೆಗಳನ್ನು ಒಳಗೊಂಡಿರುತ್ತಿತ್ತು. ಜೆಪಿ ಚಳುವಳಿಯ ಅಂತಿಮ ಪರಿಣಾಮವಾಗಿ ಸಮಾಜವಾದಿ ಚಳುವಳಿ ಹಿನ್ನೆಲೆಗೆ ಸರಿಯುತ್ತಿದ್ದಂತೆ, ಈ ಪತ್ರಿಕೆಯೂ ಕಣ್ಮರೆಯಾಯಿತು. ಆದರೆ ಎಪ್ಪತ್ತರ ದಶಕದ ಕೊನೆಯ ಹೊತ್ತಿಗೆ ನಾವು ಕೆಲವು ಗೆಳೆಯರು– ನಾನು, ನೆಲಮನೆ ದೇವೇಗೌಡ, ದೇವನೂರ ಮಹದೇವ ಮುಂತಾದವರು– ಈ ಪತ್ರಿಕೆಯನ್ನು ಪುನಃಶ್ಚೇತನಗೊಳಿಸುವ ಪ್ರಯತ್ನ ಮಾಡಿದ್ದೆವು. ನಾನೇ ಅದರ ಸಂಪಾದಕನಾಗಿದ್ದೆ. ಹೆಚ್ಚೂಕಡಿಮೆ ಒಂದು ವರ್ಷ ನಡೆದ ಈ ಮಾಸಿಕವನ್ನು 'ಲಂಕೇಶ್ ಪತ್ರಿಕೆ' ಆರಂಭವಾಗುತ್ತಿದ್ದಂತೆ, ಅದೇ ಸಮಾಜವಾದಿ ರಾಜಕಾರಣದ ವೈಚಾರಿಕ ವೇದಿಕೆಯಾಗಲಿದೆ ಎಂಬ ನಂಬಿಕೆಯಲ್ಲಿ ನಿಲ್ಲಿಸಲಾಯಿತು!

ಈಗ ಕಾಲ ಬದಲಾಗಿದೆ. ಸಮಾಜವಾದದ ಪರಿಕಲ್ಪನೆ ಅನೇಕ ಗೊಂದಲಗಳಿಗೆ ಸಿಕ್ಕಿ ಅನುಮಾನಸ್ಪದವೆನಿಸಿ, ಹಿನ್ನೆಲೆಗೆ ಸರಿದಿದೆ. ಇಂತಹ ಸಂದರ್ಭದಲ್ಲಿ 'ಮಾನವ'ದ ಪುನರುಜ್ಜೀವನ ಏಕೆ ಎಂಬ ಪ್ರಶ್ನೆ ಏಳಬಹುದು. ಆದರೆ ಸಮಾಜವಾದವನ್ನು ಹೀಗಳೆದು–

ಆದಕ್ಕೆ ಲೋಹಿಯೋತ್ತರ ಸಮಾಜವಾದ ಮತ್ತು ಸಮಾಜವಾದಿಗಳ ಜಡತೆಯೂ ಆಸ್ಪದ ನೀಡಿತು ಎಂಬುದು ನಿಜವಾದರೂ– ಬಂದ ಮುಕ್ತ ಮಾರುಕಟ್ಟೆ ಆರ್ಥಿಕತೆ, ಕಳೆದ ಇಪ್ಪತ್ತು ವರ್ಷಗಳ ತನ್ನ ಆಟಾಟೋಪದಲ್ಲಿ ಸೃಷ್ಟಿಸಿರುವ ಜೀವನ ಕ್ರಮವನ್ನು ನೋಡಿದರೆ, ಕಾಲ ಮತ್ತೆ ಬದಲಾಗುವ; ಅಷ್ಟೇ ಅಲ್ಲ, ಬದಲಾಗಲೇ ಬೇಕಾದ ಅನಿವಾರ್ಯತೆ ಸನ್ನಿಹಿತವಾದಂತೆ ಕಾಣುತ್ತದೆ.

ಈ ಮುಕ್ತ ಮಾರುಕಟ್ಟೆ ನೀತಿ, ದೇಶ ಕನಸಿನಲ್ಲಿಯೂ ನಿರೀಕ್ಷಿಸದಿದ್ದಂತಹ ಪ್ರಮಾಣ ಮತ್ತು ವೇಗದಲ್ಲಿ ಸಂಪತ್ತನ್ನು ಸೃಷ್ಟಿಸಿದೆಯಾದರೂ, ಅದರ ಗುಣಾತ್ಮಕತೆಯ ಪರಿಣಾಮಗಳನ್ನು ನಾವಿಂದು ಗಾಬರಿಯಿಂದ ನೋಡುವಂತಾಗಿದೆ. ಬಡತನ ನೀಗುವ ಅದರ ಘೋಷಿತ ಗುರಿ, ಎಂದೂ ಮುಗಿಯಲಾರದ ಬಡತನದ ಕಲ್ಪನೆಯನ್ನು ಬಡವ– ಶ್ರೀಮಂತರೆನ್ನದೆ ಜನಸಾಮಾನ್ಯರಲ್ಲಿ ಬಿತ್ತಿ ತನ್ನ ಆಟ ಮುಂದುವರೆಸಿದೆ. ಈ ಆಟ ಅದು ಸೃಷ್ಟಿಸುತ್ತಿರುವ ಸಂಪತ್ತಿನ ಪ್ರಮಾಣದಷ್ಟೇ ಅಸಮಾನತೆ, ದಾಹ ಮತ್ತು ಇವುಗಳ ಫಲವಾಗಿ ವೈವಿಧ್ಯಮಯ ಭ್ರಷ್ಟಾಚಾರ, ಹಿಂಸಾಚಾರ, ಆತ್ಮಹತ್ಯೆಗಳ ಸರಣಿಯನ್ನೇ ಸೃಷ್ಟಿಸಿ ಅಂತಿಮವಾಗಿ ಇಲ್ಲಿನ ಬದುಕಿನ ಆಧ್ಯಾತ್ಮಿಕತೆಯನ್ನೂ ವಿಕ್ಷಿಪ್ತಗೊಳಿಸಿಬಿಟ್ಟಿದೆ. ಈ ದೇಶ ತನ್ನ ಪಾರಂಪರಿಕ ವಿವೇಕದ ಮೂಲಕ ಕಂಡುಕೊಂಡಿದ್ದ ಮಿತಿಗಳುಳ್ಳ ಬದುಕಿನ ಮೂಲ ನಂಬಿಕೆ, ಮೌಲ್ಯ ಮತ್ತು ಆದ್ಯತೆಗಳನ್ನೇ ಬುಡಮೇಲುಗೊಳಿಸಿದೆ. ಆಧುನಿಕತೆ ಕಟ್ಟಿಕೊಟ್ಟ ಹೊಸ ಸಮಾನತೆಯ ಮತ್ತು ಘನತೆಯ ಕನಸು ಇಂದು ದುಃಸ್ವಪ್ನವಾಗಿ ಪರಿವರ್ತಿತವಾಗಿದೆ.

ಇದಕ್ಕೇನು ಉತ್ತರ? Back to basics ಎಂಬುದೇ ಉತ್ತರ! ಈ ಸರಕು ಕೇಂದ್ರಿತ ಆರ್ಥಿಕತೆಗೆ ಆದಷ್ಟು ಬೇಗ ವಿದಾಯ ಹೇಳಿ, ಮನುಷ್ಯ ಕೇಂದ್ರಿತ ಆರ್ಥಿಕತೆಗೆ ಮರಳುವುದೊಂದೇ ಉತ್ತರ. ಅಂದರೆ. ವಿಶ್ವಾಸಾರ್ಹತೆ ಕಳೆದುಕೊಂಡಿರುವ ಹಳೆಯ ಸಮಾಜವಾದದ ಮೂಲಾಧಾರಗಳನ್ನು ಪುನಾರಚಿಸಿ, ಕಾಲದ ಹೊಸ ಸವಾಲುಗಳನ್ನು ಎದುರಿಸಲು ಸಜ್ಜಾದ ಹೊಸ ಸಮಾಜವಾದದ ಅನ್ವೇಷಣೆಯನ್ನು ನಾವಿಂದು ಮಾಡಬೇಕಿದೆ. ಅದಕ್ಕೊಂದು ಪುಟ್ಟ ವೇದಿಕೆ ಒದಗಿಸುವ ಪ್ರಯತ್ನವಾಗಿ ಈ 'ಮಾನವ'ದ ಪುನರುಜ್ಜೀವನಕ್ಕೆ ನಾವು ಕೆಲವು ಗೆಳೆಯರು ಕೈ ಹಾಕಿದ್ದೇವೆ. ಹಳೆಯ ಸಮಾಜವಾದಿ ಗೆಳೆಯ ರಾಜಶೇಖರ ಕೋಟ ನಮ್ಮ ಬೆಂಬಲಕ್ಕೆ ನಿಂತಿದ್ದಾರೆ. ಹಾಗೇ ಹಲವು ಎಳೆಯ ಉತ್ಸಾಹಿ ಗೆಳೆಯರೂ ನಮ್ಮೊಂದಿಗೆ ಕೈಜೋಡಿಸಲು ಮುಂದಾಗಿದ್ದಾರೆ. ನೀವೂ ಕೈಜೋಡಿಸುವಂತಾದರೆ, ನಿಮ್ಮ ಕೈಲಾದ ಹಣಕಾಸು ಮತ್ತು ವಿಚಾರ– ಚರ್ಚೆಗಳ ರೂಪದ ನೆರವು ನೀಡುವುದಾದರೆ, ನಮ್ಮ ಈ ಪ್ರಯತ್ನ ಸಾರ್ಥಕವಾದೀತು.

ಈ ಸಂಚಿಕೆಯನ್ನು, ಮಾಡಬೇಕೆನಿಸಿದ್ದನ್ನು ಕೂಡಲೇ ಮಾಡಿಬಿಡುವ ಈ ಸಂಪಾದಕನ (ಸುಟ್ಟರೂ ಹೋಗದ)ಹುಟ್ಟು ಗುಣಕ್ಕನುಸಾರವಾಗಿ, ಒಂದು ವಾರದಲ್ಲಿ ಸಿದ್ಧಪಡಿಸಲಾಗಿದೆ. ಇದಕ್ಕೆ ಪೂರಕವಾಗಿ, ಎಷ್ಟೋ ವರ್ಷಗಳ ನಂತರ ಶಿವಮೊಗ್ಗದಲ್ಲಿ ಆಯೋಜಿಸಲಾಗಿದ್ದ 'ಜಾತಿ ವಿರೋಧಿ ಸಮ್ಮೇಳನ'ದ ನಡಾವಳಿಯೂ ನೆರವಿಗೆ ಬಂದು,

ಈ ಅವಸರದಲ್ಲಿಯೂ ನಮ್ಮ ಘೋಷಿತ ಉದ್ದೇಶ ಸ್ವಲ್ಪಮಟ್ಟಿಗಾದರೂ ಈಡೇರಿದೆಯೆಂದು ಭಾವಿಸುವೆ. ಜೊತೆಗೆ ಇನ್ನಷ್ಟು ವಿಷಯ ವೈವಿಧ್ಯ ನಿಮ್ಮ ಸಹಕಾರದಿಂದ ಮುಂದಿನ ಸಂಚಿಕೆಗಳಲ್ಲಿ ಕಾಣಿಸಿಕೊಳ್ಳುವುದು ಎಂದು ಆಶಿಸುವೆ.

ಈ ಸಂಚಿಕೆಯಲ್ಲಿ ಚಿಂತನೆಗೆ ಮತ್ತು ಚರ್ಚೆಗೆ ಸಾಕಷ್ಟು ಆಹಾರವಿದೆ. ವಿಶೇಷವಾಗಿ ಸಾಮಾಜಿಕ ನ್ಯಾಯದ ಕಲ್ಪನೆ ಮತ್ತು ಭ್ರಷ್ಟಾಚಾರ ವಿರೋಧಿ ಆಂದೋಲನದ ಸ್ವರೂಪದ ಬಗ್ಗೆ. ನಿಮ್ಮ ಟೀಕೆ– ಟಿಪ್ಪಣಿ– ಸಲಹೆ– ಸೂಚನೆಗಳನ್ನು ಎದುರು ನೋಡುತ್ತೇನೆ.

(ಆಗಸ್ಟ್– ೨೦೧೧ರ ಸಂಚಿಕೆಗಾಗಿ)

೨. ಸೈದ್ಧಾಂತಿಕ ಶ್ರೇಷ್ಠತೆಯ ಅಹಂಕಾರ ಬೇಡ!

ಸದ್ಯದ ಅಣ್ಣಾ ಹಜಾರೆ ಆಂದೋಲನ ಏನನ್ನೇ ಸಾಧಿಸಲಿ, ಬಿಡಲಿ; ಅದು ಒಂದು ಸತ್ಯವನ್ನಂತೂ ದೇಶದ ಮುಂದೆ ತೆರೆದಿಟ್ಟಿದೆ. ಈ ದೇಶದ ಆತ್ಮಸಾಕ್ಷಿಯನ್ನು ಈಗಲೂ ಒಬ್ಬ ಹಳ್ಳಿಗ, ಅದೂ ಸಾಮಾನ್ಯ ಹಳ್ಳಿಗನೊಬ್ಬ ಮಾತ್ರ ಜಾಗೃತಗೊಳಿಸಬಲ್ಲ ಎಂಬುದೇ ಆ ಸತ್ಯ. ಈ ದೇಶ ಅಭಿರುಚಿ ಮತ್ತು ಆದ್ಯತೆಗಳಲ್ಲಿ ಪಾಶ್ಚಿಮಾತ್ಯ ನಾಗರೀಕತೆಯ ಮೌಲ್ಯಗಳನ್ನು ಒಪ್ಪಿಕೊಳ್ಳುತ್ತಾ ಶರವೇಗದಲ್ಲಿ ಬದಲಾಗುತ್ತಿದೆ ಎಂಬ ವ್ಯಾಪಕ ಆತಂಕದ ನಡುವೆಯೂ, ಅದರ ಆತ್ಮ ಇನ್ನೂ ಭಾರತದ ಹಳ್ಳಿಗಾಡಿನ ಹಿರಿಯನೊಬ್ಬನ ಮನದಾಳದ ಮಾತುಗಳನ್ನು– ಅವೆಷ್ಟೇ ಅಸ್ಪಷ್ಟ ಮತ್ತು ಅವಿಷದವಾಗಿದ್ದರೂ– ಕೇಳುವಷ್ಟು ಸೂಕ್ಷ್ಮತೆಯನ್ನು ಉಳಿಸಿಕೊಂಡಿದೆ ಎಂಬುದು ಇಂದು ಭವಿಷ್ಯದ ಬಗ್ಗೆ ಸ್ವಲ್ಪವಾದರೂ ಭರವಸೆ ಹುಟ್ಟಿಸುವ ಸಂಗತಿಯಾಗಿದೆ.

ಜೆಪಿಯವರೊಂದಿಗೇ ದೇಶ ತನ್ನ ರಾಷ್ಟ್ರೀಯ ಹೋರಾಟದ ಪರಂಪರೆಯೊಂದಿಗೆ ಕೊನೆಯ ಕೊಂಡಿ ಕಳಚಿಕೊಂಡಿರಬಹುದು ಎನ್ನಿಸುತ್ತಿರುವ ಹೊತ್ತಿನಲ್ಲೇ ಈ ಅಣ್ಣಾ ರಾಷ್ಟ್ರ ವೇದಿಕೆ ಹತ್ತಿದ್ದಾರೆ. ತಾತ್ವಿಕ ಪರಿಭಾಷೆಯ ನೆಲೆಯಲ್ಲಿ ಗಾಂಧಿವಾದಿ ಎಂದೆನಿಸದಿದ್ದರೂ, ಗಾಂಧಿ ಸಮಾಧಿ ಮುಂದೆ ಧ್ಯಾನಕ್ಕೆ ಕೂತು ಶಕ್ತಿ ಸಂಚಯ ಮಾಡಿಕೊಂಡು ಭ್ರಷ್ಟ ವ್ಯವಸ್ಥೆಯ ವಿರುದ್ಧ ದೊಡ್ಡ ಸವಾಲೆಸೆಯಲು ಅಣಿಯಾದ ಈ ಅಣ್ಣಾ, ಆನಂತರ ಮಾತನಾಡತೊಡಗಿದ ಭಾಷೆ ನಿಜ ಗಾಂಧಿವಾದಿಗಳಲ್ಲಿ ಹೊಸ ಹುರುಪು ಹುಟ್ಟಿಸುವಂತಿದೆ. ಗಾಂಧಿಗಿಂತ ಸ್ವಲ್ಪ ಹೆಚ್ಚು ಮೈ ಮುಚ್ಚಿಕೊಂಡಿರುವ ಅಣ್ಣಾ, ಗಾಂಧಿಗಿಂತ ಹೆಚ್ಚು ಬಾಯಿ ಬಿಚ್ಚುತ್ತಾ ಸ್ವಲ್ಪ ಆತುರಗಾರರಂತೆ ಕಾಣುತ್ತಾರೆ; ಹಾಗೇ ಹಠಮಾರಿಯಾಗಿ ಕೂಡ. ಇದಕ್ಕೆ ಇವರು ಗಾಂಧಿಯಂತೆ ಒಳಗಿನ ಅಗ್ನಿದಿವ್ಯದ ಮೂಲಕ ತಮ್ಮ ವ್ಯಕ್ತಿತ್ವವನ್ನು ಕಟ್ಟಿಕೊಂಡವರಲ್ಲ. ಹೊರಗಿನ ಶಕ್ತಿಗಳಿಂದ ಪ್ರಭಾವಿತರಾಗಿ ಒಳಗಿನ ಬೆಂಕಿ ಹತ್ತಿಸಿಕೊಂಡವರು. ಆದರೆ ಈ ಮಿತಿಗಳ ನಡುವೆಯೇ, ಮನಮೋಹನ ಸಿಂಗ್– ರಾಹುಲ್ ಗಾಂಧಿ– ಗಡ್ಕರಿ– ಮಾಯಾವತಿ–

ಕರುಣಾನಿಧಿ- ಯಡಿಯುರಪ್ಪನವರು ಒಟ್ಟಾಗಿ ಸೇರಿ ಸೃಷ್ಟಿಸಿರುವ ಹೊಸ ವಸಾಹತುಶಾಹಿ ರಾಜಕಾರಣದ ವಿರುದ್ಧ ಹೋರಾಡಲು ಈ ಗಾಂಧಿಯಾದರೂ ಸಿಕ್ಕರಲ್ಲ ಎಂದು ನಾವು ಸಮಾಧಾನದ ನಿಟ್ಟುಸಿರು ಬಿಡುವಂತೆ ಮಾಡಿರುವವರು.

ಅಣ್ಣಾ ಗಾಂಧಿಯಲ್ಲದಿರಬಹುದು; ಆದರೆ ಇಂದಿನ ಸಂಕೀರ್ಣ ಸಂದರ್ಭದಲ್ಲಿ- ರಾಷ್ಟ್ರ ಪ್ರಗತಿಯ ಹಾದಿಯಲ್ಲಿದೆ ಎಂದು ವ್ಯವಸ್ಥೆ ಎಲ್ಲರನ್ನೂ ನಂಬಿಸುತ್ತಿರುವಾಗ- ರಾಷ್ಟ್ರ ಅವನತಿಯ ಹಾದಿಯಲ್ಲಿದೆ ಎಂದು ಎಚ್ಚರಿಸಬಲ್ಲ ವಿವೇಕ ಮತ್ತು ಸ್ಥೈರ್ಯಗಳನ್ನು ಪ್ರದರ್ಶಿಸಿರುವ ಮೂಲಕ ಅವರು ಗಾಂಧಿಯನ್ನು ಮತ್ತೆ ರಾಷ್ಟ್ರಜೀವನದ ಮುಖ್ಯ ವೇದಿಕಗೆ ತಂದಿರುವರು. ಜೊತೆಗೆ, ಗಾಂಧಿ ಮಾರ್ಗವೊಂದೇ ಈ ದಾರಿಯಿಂದ ನಮ್ಮನ್ನು ಪಾರು ಮಾಡಬಹುದೆಂಬುದನ್ನು ಬಹು ತಾತ್ವಿಕ ಸ್ಪಷ್ಟತೆಯೊಂದಿಗಲ್ಲದಿದ್ದರೂ, ಭಾವನಾತ್ಮಕ ನೆಲೆಯಲ್ಲಿ ಅರಿತು ರಾಷ್ಟ್ರೀಯ ವೇದಿಕೆಯನ್ನು ಹತ್ತಿರುವರು. ಅವರು ತಮ್ಮ ಹಳ್ಳಿ ರಾಳೇಗಾಂವ್ ಸಿದ್ಧಿ ಮತ್ತು ಅದರ ಸುತ್ತಮುತ್ತಲ ಹಳ್ಳಿಗಾಡಿನಲ್ಲಿ ಮಾಡಿರುವ ಪರಿವರ್ತನೆಯ ಕೆಲಸದಿಂದ ಪಡೆದ ಅನುಭವ ಮತ್ತು ಭವಿಷ್ಯ ಕುರಿತ ಭರವಸೆಯ ಸ್ಫೂರ್ತಿಯೊಂದಿಗೇ ಅವರು ಇಂದು ಈ ವೇದಿಕೆಯಿಂದ ರಾಷ್ಟ್ರ ಪುರ್ನನಿರ್ಮಾಣದ ಮಾತುಗಳನ್ನಾಡುವ ಧೈರ್ಯ ತೋರಿರುವುದು.

ಇದು ಬಲಪಂಥೀಯರೆದುರು ಜನಸಂಘಟನೆಯ ವಿಷಯದಲ್ಲಿ ಸಂಪೂರ್ಣ ಸೋತಿರುವ ಎಡಪಂಥೀಯರೆಂದು ತಮ್ಮನ್ನು ಕರೆದುಕೊಳ್ಳುವವರು ಆಳವಾಗಿ ಯೋಚಿಸಬೇಕಾದ ಸಂದರ್ಭ. ಅಣ್ಣಾ ಇಂದು ಭ್ರಷ್ಟಾಚಾರದ ವಿರುದ್ಧ ಹಾಕಿರುವ ಮತ್ತು ದೇಶದ ತುಂಬಾ ಅನುರಣಿಸುತ್ತಿರುವ ಕೂಗು ಗ್ರಾಮ ಭಾರತ, ರೈತ ಭಾರತದ ಒಡಲಾಳದ ಕೂಗು ಎಂಬುದನ್ನು ಮುಖ್ಯವಾಗಿ ಗಮನಿಸಬೇಕು. ಹಾಗಾಗಿ ಅದರ ಹಿಂದೆ ಕೇವಲ ಲಂಚ- ಶುರುವತ್ತುಗಳಿಗೆ ಸೀಮಿತವಾದ ಭ್ರಷ್ಟಾಚಾರದ ವಿರುದ್ಧ ಮಾತ್ರವಾದ ಆಕ್ರೋಶ ಇರಲಾರದು. ಇದನ್ನು ಬುದ್ಧಿವಂತರೆಂದು ಕರೆದುಕೊಳ್ಳುವ ಎಡಪಂಥೀಯರು ಅರ್ಥ ಮಾಡಿಕೊಂಡು ಅದನ್ನು ವಿವರಿಸಿ ಹೇಳುವ ಮತ್ತು ಅ ಮೂಲಕ ಈ ಆಂದೋಲನಕ್ಕೆ ಹೊಸ ವಿಸ್ತರಣೆ ನೀಡಿ ಅದನ್ನು ಅದರ ತಾರ್ಕಿಕ ಅಂತ್ಯಕ್ಕೆ ಮುಟ್ಟಿಸುವ ಹೊಣೆ ಹೊರಬೇಕು. ಇಂದಿನ ಅಭಿವೃದ್ಧಿ ರಾಜಕಾರಣ ಹರಿಸಿರುವ ಹಡಬೆ ಹಣ ಹುಟ್ಟು ಹಾಕಿರುವ ವೈವಿಧ್ಯಮಯ ಹಿಂಸೆಗೆ ಕೊನೆ ಹಾಡುವ ಪ್ರಯತ್ನಕ್ಕೆ ಮುಂದಾಗಬೇಕು. ಇದರ ಬದಲಿಗೆ, ಅವರ ಹಿಂದೆ ಅಂತಹ ಜನ ಇದ್ದಾರೆ, ಇಂತಹ ಜನ ಇದ್ದಾರೆ ಎಂದು ಆರೋಪಿಸುತ್ತಾ ಇವರು ಹೊಣೆರಹಿತ ಪ್ರತಿಕ್ರಿಯೆ ನೀಡುತ್ತಿರುವುದು ವಿಷಾದಕರ.

ತಮ್ಮ ಸೈದ್ಧಾಂತಿಕ ಶ್ರೇಷ್ಠತೆಯ ಅಹಂಕಾರದಿಂದ ಎಡಪಂಥೀಯರು, ಸಮಾಜವಾದಿಗಳು ಮತ್ತು ಪ್ರಗತಿಪರರೆನಿಸಿಕೊಂಡವರು ಇತಿಹಾಸದುದ್ದಕ್ಕೂ ಇಂತಹ ತಪ್ಪುಗಳನ್ನು ಮಾಡುತ್ತಲೇ ಬಂದಿದ್ದಾರೆ. ಅದರ ಪರಿಣಾಮವಾಗಿ ಅವರು ರಾಷ್ಟ್ರ ರಾಜಕಾರಣದ ಪರಿಧಿಯಲ್ಲೇ ಉಳಿದು ಸಿನಿಕತೆಗೆ ಈಡಾಗಿ ಜನರಿಂದ ದೂರವಾಗಿ ಹೋಗಿದ್ದಾರೆ. ಆದುದರಿಂದ ಈಗಲಾದರೂ ಇವರು ತಮ್ಮ ಹೊಣೆಯರಿತು; ಬರೀ ಬುದ್ಧಿವಂತಿಕೆಯ ಮಾತಿನ ರಾಜಕಾರಣ ಮಾಡದೆ, ಅಣ್ಣಾ ಹಿಂದೆ ಎಲ್ಲ ತರದ

ಜನರಿರುವುದನ್ನು ಒಂದು ಅವಕಾಶವೆಂದೇ ಪರಿಗಣಿಸಿ, ತಮ್ಮ ವಿಚಾರ- ವ್ಯವಹಾರಗಳಿಂದ ಅವರನ್ನು ಗೆಲ್ಲುವ ಶ್ರಮದ ರಾಜಕಾರಣ ಮಾಡುವತ್ತ ಮನಸ್ಸು ಕೊಡಲಿ. ಅಣ್ಣಾ ಮತ್ತು ಅವರ ಆಂದೋಲನದಲ್ಲಿ ಅನೇಕ ದೋಷ ಮತ್ತು ಮಿತಿಗಳಿಲ್ಲದಿಲ್ಲ. ಆ ದೋಷ ಮತ್ತು ಮಿತಿಗಳೇ ಅವರೊಂದಿಗೆ ಕೈಜೋಡಿಸಬೇಕಾದುದಕ್ಕೆ ಕಾರಣಗಳಾಗಬೇಕು. ಈ ರಚನಾತ್ಮಕ ದೃಷ್ಟಿಕೋನವನ್ನು ಅಳವಡಿಸಿಕೊಳ್ಳದ ಹೊರತು ಇವರಿಗೆ ಜನರ ಹೃದಯದೊಳಕ್ಕೆ ಪ್ರವೇಶವಿಲ್ಲ.

(ಸೆಪ್ಟಂಬರ್- ೨೦೧೧ರ ಸಂಚಿಕೆಗಾಗಿ)

೩. ಇದು ಹಿಂಸೆಯ 'ಅಭಿವೃದ್ಧಿ'...

೨ಜಿ ಹಗರಣದ ತನಿಖೆ ಮುಂದುವರೆದಂತೆ ಅದು ಪ್ರಸಕ್ತ ಸರ್ಕಾರದ ಹಿರಿಯ ತಲೆಗಳನ್ನೆಲ್ಲ ಸುತ್ತುವರೆಯುತ್ತಿರುವಂತೆ ಕಾಣುತ್ತಿದೆ. ಈಗಾಗಲೇ ಸೆರೆಮನೆಯಲ್ಲಿರುವ ಮಾಜಿ ಟೆಲಿಕಾಂ ಮಂತ್ರಿ ಎ. ರಾಜಾ ಪ್ರಧಾನ ಮಂತ್ರಿ ಮತ್ತು ಈ ಹಿಂದಿನ ಹಣಕಾಸು ಮಂತ್ರಿ ಹಾಗೂ ಸದ್ಯದ ಗೃಹ ಮಂತ್ರಿ ಪಿ. ಚಿದಂಬರಂ ಅವರನ್ನೂ ಸಾಕ್ಷಿಗಳನ್ನಾಗಿ ನ್ಯಾಯಾಲಯದ ಕಟಕಟೆಗೆ ಕರೆಯಬೇಕೆಂದು ವಿಚಾರಣಾ ಸಂದರ್ಭದಲ್ಲಿ ಆಗ್ರಹಿಸಿದ್ದಾರೆ. ಈಗ ಅದಕ್ಕೆ ಪೂರಕವಾಗಿ, ಸದ್ಯದ ಹಣಕಾಸು ಮಂತ್ರಿ ಪ್ರಣವ್ ಮುಖರ್ಜಿ ಅವರು ಆಗ ಹಣಕಾಸು ಮಂತ್ರಿಯಾಗಿದ್ದ ಚಿದಂಬರಂ ೨ಜಿ ತರಂಗಾಂತರ ಮಾರಾಟ ದರಗಳ ವಿಷಯದಲ್ಲಿ ಸೂಕ್ತ ನಿರ್ಧಾರ ಕೈಗೊಂಡಂತಿಲ್ಲವೆಂದು ಸೂಚಿಸಿ ಪ್ರಧಾನ ಮಂತ್ರಿಯವರಿಗೆ ಬರದಿರುವ ಟಿಪ್ಪಣಿಯೊಂದು ಬಹಿರಂಗಗೊಂಡು ಅವರ ರಾಜೀನಾಮೆ ಅನಿವಾರ್ಯವೆಂಬ ಪರಿಸ್ಥಿತಿ ನಿರ್ಮಾಣವಾಗಿದೆ. ಆ ಮೂಲಕ ಇಡೀ ಸರ್ಕಾರದ ನೈತಿಕ ಬುಡವೇ ಅಲ್ಲಾಡಿ ಹೋಗುವಂತಾಗಿದೆ.

ಹಾಗೆ ನೋಡಿದರೆ, ಇಡೀ ೨ಜಿ ಹಗರಣ ಹೊಸ ಕಾಲದ 'ಅಭಿವೃದ್ಧಿ'ಯ ಸ್ವರೂಪದ ಬಗ್ಗೆ ನಮಗೆ ಅನೇಕ ಹೊಳಹುಗಳನ್ನು ನೀಡಬಲ್ಲುದಾಗಿದೆ. ಸಂಬಂಧಪಟ್ಟ ಎಲ್ಲ ಸಚಿವರು, ಅಧಿಕಾರಿಗಳಿರಲಿ; ಈ ಹಗರಣದ ತನಿಖೆ ನಡೆಸುತ್ತಿರುವ ಪೋಲೀಸರು ಮತ್ತು ವಿಚಾರಣೆ ನಡೆಸುತ್ತಿರುವ ನ್ಯಾಯಾಧೀಶರುಗಳಿಗೂ ಈ 'ಅಭಿವೃದ್ಧಿ ಕಾರ್ಯಕ್ರಮ'ವು ತನ್ನ ತಾಂತ್ರಿಕ ಜಟಿಲತೆಗಳು ಮತ್ತು ಅದು ಸೃಷ್ಟಿಸಿರುವ ಆಡಳಿತದ ಚಕ್ರವ್ಯೂಹದಿಂದಾಗಿ ಸುಲಭವಾಗಿ, ಸರಳವಾಗಿ ಮತ್ತು ನೇರವಾಗಿ ನಿರ್ವಹಿಸಲಾಗದ ವಿದ್ಯಮಾನವಾಗಿಬಿಟ್ಟಿದೆ! ಹಾಗಾಗಿಯೇ ಈ ವ್ಯವಹಾರದಲ್ಲಿ ಸರ್ಕಾರಕ್ಕೆ ಲಕ್ಷ ಕೋಟಿ ರೂಪಾಯಿಗಳ ನಷ್ಟ ಉಂಟಾಗಿದೆ ಎಂದು ಮಹಾಲೇಖಪಾಲರ ವರದಿ ಹೇಳುತ್ತಿದ್ದರೂ, ತಮ್ಮ ಉಭಯ ವಾದ ಪ್ರಾವೀಣ್ಯದಿಂದಾಗಿ ಖ್ಯಾತ ವಕೀಲರೆನಿಸಿರುವ ಸಚಿವ ಕಪಿಲ್ ಸಿಬ್ಬಲ್ ಇದರಲ್ಲಿ ಒಂದು ಪೈಸೆಯೂ ನಷ್ಟವಾಗಿಲ್ಲ ಎಂದು ವಾದಿಸಬಲ್ಲ ಲೆಕ್ಕ ಹಾಕಿ ತೋರಿಸಲು ಸಾಧ್ಯವಾಗಿರುವುದು!

ಭ್ರಷ್ಟಾಚಾರವೆಂಬುದು ಆಡಳಿತ ಮತ್ತು ಅಭಿವೃದ್ಧಿ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಹಿಂದೆಯೂ ಇತ್ತು. ಆದರೆ ಅದು ಸಮಾಜದಿಂದ 'ಕೆಟ್ಟದು' ಎಂದೇ ಪರಿಗಣಿತವಾಗಿ, ನೈತಿಕವಾಗಿ ಮತ್ತು ಕಾನೂನಾತ್ಮಕವಾಗಿ ಎದುರಿಸಲು ಸಾಧವೆನ್ನಿಸುವಷ್ಟರಮಟ್ಟಿಗೆ ಇತ್ತು. ಆದರೆ ಇಂದು ಅದು ಮನುಷ್ಯರನ್ನೇ ಇಡಿಯಾಗಿ ತಿಂದುಹಾಕುವಷ್ಟು ಮತ್ತು ಆ ಮೂಲಕ ಎಲ್ಲ ಕಾನೂನುಗಳ ಹಿಂದಿರುವ ವೈಯುಕ್ತಿಕ ಮತ್ತು ಸಾಮಾಜಿಕ ನೀತಿ ಸಂಹಿತೆಯನ್ನೇ ಬುಡಮೇಲು ಮಾಡುವಷ್ಟು ಪ್ರಮಾಣದಲ್ಲಿ ಬೆಳೆದು ನಿಂತಿದೆ. ಇದರ ಹಿಂದಿರುವುದು ನಮ್ಮ 'ಅಭಿವೃದ್ಧಿ' ಕಲ್ಪನೆಯ ಸ್ವರೂಪ ಮತ್ತು ಉದ್ದೇಶಗಳನ್ನೇ ಪಲ್ಲಟಗೊಳಿಸಿರುವ ಮುಕ್ತ ಮಾರುಕಟ್ಟೆ ನೀತಿ ಆಧಾರಿತವಾದ ಜಾಗತೀಕರಣ ಕಾರ್ಯಕ್ರಮ. ಹೊಸ 'ಅಭಿವೃದ್ಧಿ' ಇದ್ದಕ್ಕಿದ್ದಂತೆ ಈ ದೇಶದ ಸಾಮೂಹಿಕವಾಗಿ ಜನತೆಯ ಮತ್ತು ವೈಯುಕ್ತಿಕವಾಗಿ ಪ್ರತಿ ಭಾರತೀಯ ಪ್ರಜೆಯ 'ಸಾಂಸ್ಕೃತಿಕ ಅಸ್ಮಿತೆ'ಯ ಆಧಾರಗಳನ್ನೇ ಅಲುಗಾಡಿಸತೊಡಗುವಷ್ಟು ಅಪಾರ ಪ್ರಮಾಣದ ಹಣವನ್ನು ಈ ದೇಶದೊಳಕ್ಕೆ ಹರಿಸಿದೆ. ನವೋದಿತ ಭಾರತದ ಸಾಮಾನ್ಯ ಪ್ರಜೆಯ ನ್ಯಾಯಯುತ ಆಸೆ– ಆಕಾಂಕ್ಷೆಗಳು ಈಗ ಹೊಸ ಅಭಿವೃದ್ಧಿ ಮಾದರಿಯ ಪ್ರಭಾವದಲ್ಲಿ ನ್ಯಾಯಾನ್ಯಾಯದ ಪ್ರಶ್ನೆಯನ್ನೇ ಅಪ್ರಸ್ತುತಗೊಳಿಸಿ ಎಂದೂ ತೀರದ 'ದಾಹ'ವಾಗಿ ಮಾರ್ಪಟ್ಟು, ರಾಷ್ಟ್ರದ 'ಶೀಲ'ವನ್ನೇ ಪ್ರಶ್ನಾರ್ಹಗೊಳಿಸಿದೆ.

ಹಾಗಾಗಿಯೇ ಇಂದು ಭ್ರಷ್ಟಾಚಾರದ ವಿರುದ್ಧ ನೈತಿಕ ನೆಲೆಯ ಗೊಣಗಾಟಕ್ಕೆ ಮಾತ್ರ ಅವಕಾಶವಿದೆಯೇ ಹೊರತು, ಯಾರಾದರೂ ಈ ಸಂಬಂಧ ದೊಡ್ಡ ಧ್ವನಿ ಎತ್ತಿದೊಡನೆ ಅವರ ವಿಶ್ವಾಸಾರ್ಹತೆಯನ್ನೇ ಹಾಳು ಮಾಡುವ ಪ್ರಯತ್ನ ಮಾಡಲಾಗುತ್ತದೆ ಅಥವಾ ಇತ್ತೀಚಿನ ಕೆಲವು ಮಾಹಿತಿ ಚಳುವಳಿಕಾರರ ಕೊಲೆಗಳು ಸಾಬೀತುಪಡಿಸುವಂತೆ ಅವರ ಹುಟ್ಟಡಗಿಸಲಾಗುತ್ತದೆ. ಹಾಗೇ ಇಂದು ಭ್ರಷ್ಟಾಚಾರದ ವಿರುದ್ಧ ಧ್ವನಿ ಎತ್ತಲು ಎಂತಹ ಪರಿಪೂರ್ಣ ಪರಿಶುದ್ಧತೆಯ ಮಾನದಂಡಗಳನ್ನು ಈ ಸಮಾಜ ನಿರ್ಮಾಣ ಮಾಡತೊಡಗಿದೆ ಎಂದರೆ ಮೊನ್ನೆ ನ್ಯಾ|| ಶಿವರಾಜಪಾಟೀಲರು ತಮ್ಮ ಪತ್ನಿಯ ಒಂದು ಜುಜುಬಿ ನಿವೇಶನ ಖರೀದಿ ಸಂಬಂಧವಾಗಿ ಲೋಕಾಯುಕ್ತ ಸ್ಥಾನಕ್ಕೆ ರಾಜೀನಾಮೆ ನೀಡಬೇಕಾದ ಸಂದರ್ಭವೇ ಇದಕ್ಕೆ ಸಾಕ್ಷಿಯಾಗಿದೆ. ಕಾಸಿಗಾಗಿ ಸುದ್ದಿ ಮಾರಿಕೊಂಡ ಮಾಧ್ಯಮದವರೇ ಮತ್ತು ಅವರ ಹಿಂದಿನ ಉದ್ಯಮಪತಿಗಳೇ ಇಂದು ಭ್ರಷ್ಟಾಚಾರ ವಿರೋಧಿ ಆಂದೋಲನದ ಕಾರ್ಯಕರ್ತರೂ, ಪ್ರಾಯೋಜಕರೂ ಆಗಿಬಿಟ್ಟಿದ್ದಾರೆ!

ಇಂತಹ ಸಾಮಾಜಿಕ ವಿಕ್ಷಿಪ್ತತೆಯ ವಾತಾವರಣದಲ್ಲಿ ಸಹಜವಾಗಿಯೇ, ಕಳೆದ ಇಪ್ಪತ್ತು ವರ್ಷಗಳಲ್ಲಿ ದೇಶಾದ್ಯಂತ ನಡೆದಿರುವ ಲಕ್ಷಾಂತರ ಜನ ರೈತರ ಆತ್ಮಹತ್ಯೆಗೂ, ದಿನ ದಿನವೂ ಹೊಸ ರೂಪ ತಾಳುತ್ತಿರುವ ಹಿಂಸಾಚಾರಗಳಿಗೂ, ಹೊಸ ಹೊಸ ನೆಲೆಯ ಆತ್ಮಹತ್ಯೆಗಳಿಗೂ, ಪೋಲೀಸರ ಅಮಾನುಷವೆನ್ನಿಸುವ ಕಾರ್ಯಾಚರಣೆಯನ್ನೂ ಲೆಕ್ಕಿಸದೆ ಗ್ರಾಮೀಣ ಜನತೆ ದೇಶಾದ್ಯಂತ ನಡೆಸುತ್ತಿರುವ ಭೂಸ್ವಾಧೀನ ಮತ್ತು ಅಣುವಿದ್ಯುತ್ ವಿರೋಧಿ ಚಳುವಳಿಗಳಿಗೂ, ಹೊಸ ಅಭಿವೃದ್ಧಿ ರಾಜಕಾರಣಕ್ಕೂ ಏನಾದರೂ ಸಂಬಂಧವಿದೆಯೇ ಎಂಬುದರ ಪರಿಶೀಲನೆಯ ಗಂಭೀರ ಪ್ರಯತ್ನವೇ ಆರಂಭವಾಗಿಲ್ಲ. ಹಾಗಾಗಿಯೇ ನಾವು ಹಳೆಯ ಷೇರು ಹಗರಣ, ಬ್ಯಾಂಕ್

ಹಗರಣ, ಯು.ಟಿ.ಐ. ಹಗರಣಗಳನ್ನೆಲ್ಲ ಸುಲಭವಾಗಿ ಮರೆತು ಈಗ ೨ಜಿ ಹಗರಣ, ಕಾಮನ್‌ವೆಲ್ತ್ ಕ್ರೀಡಾ ಹಗರಣಗಳನ್ನು ಮಾಧ್ಯಮಗಳ ಮುಖೇನ ದಿನ ನಿತ್ಯದ ರೋಚಕ ಸುದ್ದಿಗಳಂತೆ ಚರ್ಚಿಸಿ ದಣಿದು ಹೊಸ ಹೊಸ ಮನರಂಜನಾ ಮತ್ತು ಹುಸಿ ಅಧ್ಯಾತ್ಮಿಕ ಕೇಂದ್ರಗಳತ್ತ ಧಾವಿಸುತ್ತಿದ್ದೇವೆಯೇ ಹೊರತು, ಇವೆಲ್ಲ ನಮ್ಮನ್ನು ಮನುಷ್ಯರಾಗಿ ಎಲ್ಲಿಗೆ ಕರೆದುತಂದು ನಿಲ್ಲಿಸಿವೆ ಎಂಬುದರ ಬಗೆಗಿನ ಆತ್ಮಶೋಧನೆಯನ್ನು ಆರಂಭಿಸಲಾಗಿಲ್ಲ.

ಇಂತಹ ಅಭಿವೃದ್ಧಿ ಮೂಲತಃ, ಅದರ ಸ್ವಯಂಚಾಲನಾ ಗುಣದಿಂದಾಗಿಯೇ, ಹಿಂಸೆಯ ಅಭಿವೃದ್ಧಿಯೇ ಆಗಿದೆ. ಇದು ಒಳಗಣ ಮತ್ತು ಹೊರಗಣ ಹಿಂಸೆ ಎರಡಕ್ಕೂ ಸಂಬಂಧಿಸಿದ್ದು ಎಂಬುದರ ಅರಿವೇ ನಮಗಾಗಿಲ್ಲ. ಹಾಗಾಗಿಯೇ ನಮ್ಮ ನವೋದಿತ ಮಧ್ಯಮ ವರ್ಗ ಮತ್ತು ಅದರ ಜೊತೆಗಾರನಾಗಿಬಿಟ್ಟಿರುವ ನಮ್ಮ ಬುದ್ಧಿಜೀವಿ ವರ್ಗ ಈ ಅಭಿವೃದ್ಧಿಯ ಎಲ್ಲ ಫಲಗಳನ್ನೂ ಮುಗುಮ್ಮಾಗಿ ಸ್ವೀಕರಿಸಿ ಸವಿಯುತ್ತಿರುವಾಗಲೇ ಅದರ ವಿರುದ್ಧ ಗುಟುರುಹಾಕುವ ಆತ್ಮದ್ರೋಹಿತನವನ್ನೂ ಪ್ರದರ್ಶಿಸುತ್ತಿವೆ. ಹಲವು ಬಾರಿ ಈ ಗುಟುರುಗಳು ಈ ಅಭಿವೃದ್ಧಿ ಫಲಗಳ ಅಜೀರ್ಣದಿಂದ ಉಂಟಾದ ಕಮರು ತೇಗುಗಳಂತೆಯೂ ಕೇಳಿಸುವುದುಂಟು!

(ಅಕ್ಟೋಬರ್– ೨೦೧೧ರ ಸಂಚಿಕೆಗಾಗಿ)

೪. ಇದು ಪ್ರಜಾಪ್ರಭುತ್ವದ ಅಗ್ನಿ ಪರೀಕ್ಷೆಯ ಕಾಲ!

ಅಂತೂ ಯಡಿಯೂರಪ್ಪ ಜೈಲು ಸೇರಿದ್ದಾರೆ. ಈ ಸಂಚಿಕೆ ನಿಮ್ಮ ಕೈ ಸೇರುವ ಹೊತ್ತಿಗೆ ಅವರು ಜಾಮೀನಿನ ಮೇಲೆ ಬಿಡುಗಡೆಯಾಗಿರಲೂಬಹುದು. ಆದರೆ ಕರ್ನಾಟಕದಲ್ಲಿ ಮುಖ್ಯಮಂತ್ರಿಯೊಬ್ಬರು ಸ್ವಲಾಭಕ್ಕಾಗಿ ಅಧಿಕಾರ ದುರುಪಯೋಗ ಮತ್ತು ಸ್ವಜನ ಪಕ್ಷಪಾತಗಳ ಪ್ರಬಲ ಆರೋಪಗ:ಳನ್ನು ಹೊತ್ತು ಜೈಲು ಅನುಭವಿಸಬೇಕಾದ ದಾಖಲೆಯನ್ನು ನಿರ್ಮಿಸಿರುವುದು, ತಾನು ಇತರ ಪಕ್ಷಗಳಿಗಿಂತ ಭಿನ್ನ ಎಂದು ಹೇಳಿ ಜನತೆಯನ್ನು ನಂಬಿಸಿದ ಪಕ್ಷವೊಂದರ ನಾಯಕ ಎನ್ನುವುವದು ಇಂದಿನ ರಾಜಕಾರಣದ ದೊಡ್ಡ ವ್ಯಂಗ್ಯವೇ ಆಗಿದೆ. ಹಾಗೇ, ದಿನ ಬೆಳಗಾದರೆ ಕಂಡ ಕಂಡ ದೇವರುಗಳಿಗೆ ಕೈಮುಗಿದು; ಕಂಡ ಕಂಡ ಧರ್ಮಗುರುಗಳ ಕಾಲಿಗೆರಗಿ ಅವರ ಪಾಲಿಗೆ ಕೊಡುಗೈ ದಾನಿಯೆನಿಸಿದ್ದ ಈ ನಾಯಕ ಜೈಲು ಕಾಣುವ ಮೂಲಕ ಇಂದಿನ ರಾಜಕಾರಣ ಜನಸಾಮಾನ್ಯರು ತಮ್ಮ ಮುಗ್ಧತೆಯಲ್ಲಿ ನಂಬಿರುವ ದೇವರು– ಧರ್ಮಗಳನ್ನೂ ಹೇಗೆ ನುಂಗಿ ನೊಣೆಯಲು ಸಿದ್ಧವಾಗಿದೆ ಎಂಬುದರ ಸ್ಪಷ್ಟ ಸೂಚನೆಯೂ ಆಗಿದೆ.

ಯಡಿಯೂರಪ್ಪನವರ ಮೇಲಿನ ಆರೋಪಗಳು ಇನ್ನೂ ಸಾಬೀತಾಗಿಲ್ಲ ಎಂದು ಅವರ ಬೆಂಬಲಿಗರು ಹೇಳುತ್ತಿದ್ದಾರೆ. ಆದರೆ, ಮಾದರಿಗಾಗಿ, ಶಿವಮೊಗ್ಗ ಮತ್ತು ಶಿಕಾರಿಪುರಗಳಿಗೆ ಭೇಟಿ ನೀಡಿ ಅವರ ಕುಟುಂಬದದವರು ಕಳೆದ ಮೂರು ವರ್ಷಗಳಲ್ಲಿ

ಬೇರೆ ಬೇರೆ ಉದ್ದೇಶಗಳಿಗಾಗಿ ಎಕರೆಗಟ್ಟಲೆ ಪ್ರದೇಶದಲ್ಲಿ ನಿರ್ಮಿಸಿರುವ ಮತ್ತು ನಿರ್ಮಿಸುತ್ತಿರುವ ಭವ್ಯ ಕಟ್ಟಡಗಳ ಗಾತ್ರ, ವೈಭವಗಳನ್ನು ನೋಡಿದರೇ ಅವರ ಮೇಲಿನ ಆರೋಪಗಳು ಸಾಮಾನ್ಯ ನೋಟಕ್ಕೇ ಸಾಬೀತಾಗುವಷ್ಟು ಕಣ್ಣುಕುಕ್ಕುವಂತಿವೆ ಎಂಬುದು ಯಾರಿಗಾದರೂ ಗೊತ್ತಾಗುತ್ತದೆ. ಈಗ ಯಡಿಯೂರಪ್ಪನವರೊಂದಿಗೆ ವಿಚಾರಣೆ ಎದುರಿಸುತ್ತಿರುವ ಅವರ ಮಗ ರಾಘವೇಂದ್ರ ಹಿಂದೊಮ್ಮೆ ಈ ಬಗ್ಗೆ ಮಾತನಾಡುತ್ತಾ, 'ನಾವೇನೂ ಸನ್ಯಾಸಿಗಳಲ್ಲ. ನಾವು ಬ್ಯುಸಿನೆಸ್ ಮಾಡುತ್ತೇವೆ' ಎಂದು ಹೇಳಿದ್ದರು. ಈಗ 'ಬ್ಯುಸಿನೆಸ್' ಎಂದರೆ ಮತ್ತೇನಲ್ಲ ದಗಾಖೋರತನವೇ, ಜನತೆ ಇಟ್ಟ ನಂಬಿಕೆಗೆ ಮಾಡಲಾಗುವ ಮಹಾ ದ್ರೋಹವೇ?' ಎಂದು ಜನತೆ ಅವರನ್ನು ಕೇಳುವಂತಾಗಿದೆ.

ಯಡಿಯೂರಪ್ಪನವರಿಗಿಂತ ಮುಂಚೆ, ಅವರ ಜೊತೆಯಲ್ಲಿ ಜೈಲು ಸೇರಿದ ಮತ್ತು ಆನಂತರ ಈಗ ಜೈಲು ಸೇರುವ ಸರತಿ ಸಾಲಿನಲ್ಲಿರುವ ರಾಜಕಾರಣಿಗಳ ಚಹರೆ ನೋಡಿದರೇ, ರಾಜಕಾರವೆಂಬುದು ಹೇಗೆ ಇಂದು ಕೇವಲ ಇಂತಹ 'ಬ್ಯುಸಿನೆಸ್' ವ್ಯವಹಾರಗಳ ಮುಖವಾಡವಾಗಿ ಹೋಗಿದೆ ಎಂಬುದರ ಸ್ಪಷ್ಟ ಸೂಚನೆ ಸಿಗುತ್ತದೆ. ಹಾಗಾಗಿಯೇ ಕಣ್ಣಿಗೆ ಕಾಣುವ ರಾಜಕಾರಣದಲ್ಲಿ ಇವರ ಸಂಬಂಧಗಳು ಹೇಗೇ ಇರಲಿ, ಕಣ್ಣಿಗೆ ಕಾಣದ ಬ್ಯುಸಿನೆಸ್ ವಿಷಯದಲ್ಲಿ ಇವರೆಲ್ಲ ಆಪ್ತ ಮಿತ್ರರೇ ಆಗಿದ್ದಾರೆ. ಉದಾಹರಣೆಗೆ ಗಣಿ ವ್ಯವಹಾರದಲ್ಲಿ ಆರೋಪಿಯಾಗಿರುವ ಧರ್ಮಸಿಂಗ್ ಅವರನ್ನು ಇಡಿ ವ್ಯವಸ್ಥೆ ಒಂದಾಗಿ ರಕ್ಷಿಸುತ್ತಿರುವ ವೈಖರಿ ನೋಡಿರಿ. ಬಿಜೆಪಿ ವಿರುದ್ಧ ಗಂಟಲು ಹರಿಯುವಂತೆ ಅಬ್ಬರಿಸುವ ಕಾಂಗ್ರೆಸ್ ನಾಯಕರು ಈ ಬಗ್ಗೆಯಾಗಲೀ, ಇನ್ನೋರ್ವ ಗಣಿ ಅಕ್ರಮ ಆರೋಪಿ ಅನಿಲ್ ಲಾಡ್ ಬಗ್ಗೆಯಾಗಲೀ ಮಗುಮ್ಮಾಗಿರುವ ಮರ್ಮವನ್ನರಿಯಿರಿ. ಯಡಿಯೂರಪ್ಪನವರೆಂದರೆ ಆಜನ್ಮ ಶತ್ರುವೆಂಬಂತೆ ಉರಿದು ಬಿದ್ದು ಅವರ ವಿರುದ್ಧ ದಾಖಲೆಗಳ ಸರಮಾಲೆಯನ್ನೇ ಬಿಡುಗಡೆ ಮಾಡಿದ ಕುಮಾರಸ್ವಾಮಿಯವರು ಈಗ ಅವರ ಬಗ್ಗೆ ವ್ಯಕ್ತಪಡಿಸುತ್ತಿರುವ ಸಹಾನುಭೂತಿಯ ವೈಖರಿಯನ್ನು ಗಮನಿಸಿರಿ! ಹಾಗೇ ಈಗ ಇವರು ಮಾಜಿ ಲೋಕಾಯುಕ್ತ ನ್ಯಾ॥ ಸಂತೋಷ್ ಹೆಗ್ಡೆ ವಿರುದ್ಧ ದಾಖಲೆ ಬಿಡುಗಡೆ ಮಾಡುವುದಾಗಿ ಹೆದರಿಸುತ್ತಿರುವ ಪರಿ ನೋಡಿರಿ! ಇನ್ನು ನ್ಯಾಯಾಂಗದ ಮುಂದೆ ತನಿಖೆಗೆ ಬಂದಿರುವ ಪ್ರಕರಣಗಳನ್ನು ರಾಜಕೀಯ ಪಿತೂರಿಯೆಂದು ಬಣ್ಣಿಸುತ್ತಿರುವ ರಾಜಕಾರಣಿಗಳ ದಂಡಿನ ಹುನ್ನಾರವೇನೆಂದು ಅರಿಯಿರಿ! ಇವರೆಲ್ಲರ ವಕ್ತಾರ ರೇಣುಕಾಚಾರ್ಯ ಎಂಬ ಅನುಮಾನಾಸ್ಪದ ಆಸಾಮಿ ಎಂಬುದರಿಂದಲೇ ಇಂದು ಯಡಿಯೂರಪ್ಪ ಪ್ರತಿನಿಧಿಸುತ್ತಿರುವ ರಾಜಕಾರಣದ ಮಟ್ಟ ಯಾವುದು ಎಂಬುದು ಗೊತ್ತಾಗುತ್ತದೆ. ಇದು ಯಡಿಯೂರಪ್ಪನವರ ಭ್ರಷ್ಟಾಚಾರಕ್ಕಿಂತ ಹೆಚ್ಚು ಅಪಾಯಕಾರಿ ಬೆಳವಣಿಗೆಯಾಗಿದೆ.

ಈಶ್ವರಪ್ಪನವರ ಪ್ರಕಾರ ದ್ವಿಪತ್ನಿತ್ವ ಅಂತಹ ಅಪರಾಧವೇನಲ್ಲವಂತೆ! ಅಂತಹ ಎಂದರೆ ಎಂತಹ ಎಂಬುದನ್ನು ಮಾತ್ರ ಅವರು ಹೇಳಿಲ್ಲ! ಅವರ ಪ್ರಕಾರ ಇರಬಹುದು! ಆದರೆ ಆ ಮೂಲಕ ತಾವು ಜನರ ಕಣ್ಣಲ್ಲಿ ಸಾರ್ವಜನಿಕ ಜೀವನದ ಪರಿಶುದ್ಧತೆಯ ದೃಷ್ಟಿಯಿಂದ ರೂಪಿಸಲಾಗಿರುವ ಕಾನೂನಿನ ಪಾವಿತ್ರ್ಯವನ್ನೇ ಅನುಮಾನಾಸ್ಪದಗೊಳಿಸುತ್ತಿದ್ದೇನೆ ಎಂಬ

ಅರಿವನ್ನೇ ಅವರು– ಅದೂ ಭಾರತೀಯ ಕುಟುಂಬ ವ್ಯವಸ್ಥೆಯ ಪಾವಿತ್ರ್ಯವನ್ನು ಆರಾಧಿಸುವುದಾಗಿ ಹೇಳಿಕೊಳ್ಳುವ ಪಕ್ಷವೊಂದರ ಅಧ್ಯಕ್ಷರಾಗಿ– ಕಳೆದುಕೊಂಡಿರುವುದಾದರೂ ಏಕೆ? ಎಲ್ಲರ ಉದ್ದೇಶ ಒಂದೇ. ಜನತೆಯ ಪರವಾಗಿ ತಮ್ಮ ವಿರುದ್ಧ ಸಕ್ರಿಯವಾಗಿರುವ ನ್ಯಾಯಾಂಗದ ವಿಶ್ವಾಸಾರ್ಹತೆಯನ್ನೇ, ಅದರ ಬಗೆಗಿನ ಗೌರವವನ್ನೇ ನಿಧಾನವಾಗಿ ನಾಶ ಮಾಡುವುದು. ಆನಂತರ ಇವರನ್ನು ಕೇಳುವವರೇ ಯಾರೂ ಇಲ್ಲವಾಗಿ, ಪ್ರಜಾಪ್ರಭುತ್ವ ವೆಂಬುದು ಮುಂಡಾಮೋಚಿಕೊಂಡು ಹೋಗಿರುತ್ತದೆ. ಬಹುಶಃ ಇವರ ಗುರಿ ಅದೇ ಆಗಿರಬಹುದು. ಇನ್ನೂ ಸ್ಪಷ್ಟವಾಗಿ ಹೇಳುವುದಾದರೆ, ಎಲ್ಲ ಸಮಾಜ ವಿರೋಧಿ ಶಕ್ತಿಗಳ ಪರವಾಗಿ ಹಡಬೆ ಹಣದ ಹೊಳೆಯನ್ನೇ ಹರಿಸುತ್ತಿರುವ ಮುಕ್ತ ಮಾರುಕಟ್ಟೆ ಆರ್ಥಿಕತೆ ಆಧಾರಿತ ಪ್ರಜಾಪ್ರಭುತ್ವದ ಗುರಿಯೂ ಇದೇ ಆಗಿರಬಹುದು: ಉಳ್ಳವರ 'ಪ್ರಜಾಪ್ರಭುತ್ವ' ಸ್ಥಾಪಿಸುವುದು! ಕೇಂದ್ರ ಮಟ್ಟದಲ್ಲಿ ನಡೆದಿರುವ ಹಗರಣಗಳು, ಆ ಸಂಬಂದ ಜೈಲು ಸೇರಿರುವ ಉನ್ನತ ಮಟ್ಟದ ರಾಜಕಾರಣಿಗಳು ಹಾಗೂ ಅಧಿಕಾರಿಗಳ ಪರವಾಗಿ ಮಂಡಿಸ ಲಾಗುತ್ತಿರುವ ವಾದಗಳನ್ನು ಮತ್ತು ಆ ಬಗ್ಗೆ ಕೇಂದ್ರ ಸರ್ಕಾರ ತಳೆಯುತ್ತಿರುವ ನಿಲುವುಗಳನ್ನು ನೋಡಿದರೆ ಈ ಆತಂಕ ಇನ್ನಷ್ಟು ಹೆಚ್ಚಾಗುತ್ತದೆ. ಅಣ್ಣಾ ಹಜಾರೆ ತಂಡದ ಸದಸ್ಯರ ವಿರುದ್ಧ ಆರಂಭಿಸಿರುವ ಪ್ರತ್ಯಕ್ಷ ದೈಹಿಕ ದಾಳಿ ಮತ್ತು ಪರೋಕ್ಷ ಮಾನಸಿಕ ದಾಳಿಯಾದರೂ ಏನನ್ನು ಸೂಚಿಸುತ್ತದೆ? ಯಾರಾದರೂ ನನ್ನ ಸುದ್ದಿಗೆ ಬಂದೀರಿ ಎಚ್ಚರಿಕೆ! ಎಂದು ವ್ಯವಸ್ಥೆ ಹೇಳುತ್ತಿದೆ!!

ಇದು ಪ್ರಜಾಪ್ರಭುತ್ವದ ಅಗ್ನಿಪರೀಕ್ಷೆಯ ಕಾಲ. ಇರಾಕ್‌ನಿಂದ ಹಿಡಿದು ಈಜಿಪ್ಟ್, ಟುನೀಸಿಯಾ, ಈಗ ಲಿಬ್ಯಾದವರೆಗೆ ಅನೇಕ ಮುಸ್ಲಿಂ ರಾಷ್ಟ್ರಗಳಲ್ಲಿನ ಸರ್ವಾಧಿಕಾರಿ ವ್ಯವಸ್ಥೆಗಳ ವಿರುದ್ಧ ಅಮೆರಿಕಾದ ಪ್ರಾಯೋಜಕತ್ವದಲ್ಲಿ ಯಶಸ್ವಿಯಾಗಿ ನಡೆದಿರುವ ಪ್ರಜಾಪ್ರಭುತ್ವ ಚಳುವಳಿ, ಈಗ ಅಮೆರಿಕಾದಲ್ಲೇ ಹೊಸ ಅರಿವನ್ನು ಪಡೆದಂತೆ, ಮುಕ್ತ ಮಾರುಕಟ್ಟೆ ಆರ್ಥಿಕ ನೀತಿಯ ವಿರುದ್ಧ ಸಮರ ಸಾರಿದೆ! ಮುಕ್ತ ಮಾರುಕಟ್ಟೆ ನೀತಿಯ ಹೆಸರಿನಲ್ಲಿ ತಮ್ಮ ದೇಶದ ಬ್ಯಾಂಕುಗಳು ಮತ್ತು ಇತರೆ ಹಣಕಾಸು ಸಂಸ್ಥೆಗಳು ನಡೆಸಿದ ಹಗಲು ದರೋಡೆ ತಮ್ಮ ಪಾಲಿನ ಬದುಕನ್ನು ಈಗ ಹೇಗೆ ದುಸ್ತರಗೊಳಿಸಿವೆ ಎಂಬುದನ್ನು ಕೊನೆಗೂ ಮನವರಿಕೆ ಮಾಡಿಕೊಂಡಿರುವ ಅಮೆರಿಕಾದ ಜನತೆ, ಈ ಬ್ಯಾಂಕುಗಳು ಮತ್ತು ಸಂಸ್ಥೆಗಳಿರುವ ವಾಲ್ ಸ್ಟ್ರೀಟ್‌ಗೆ ಮುತ್ತಿಗೆ ಹಾಕಿದೆ. ಕಪಟಾಚಾರಕ್ಕೆ ಇನ್ನೊಂದು ಹೆಸರಿನಂತಾಗಿಬಿಟ್ಟಿರುವ ಬಂಡವಾಳಶಾಹಿಗೆ ಪರ್ಯಾಯವಿದೆ ಎಂದು ಹೇಳತೊಡಗಿದೆ. ಹೊಸ ನೈತಿಕತೆಯ ಮಾತನಾಡತೊಡಗಿದೆ. ಅಮೆರಿಕಾದಂತೆಯೇ ಆರ್ಥಿಕ ಹಿಂಜರಿತದಿಂದ ತತ್ತರಿಸಿರುವ ಯೂರೋಪ್ ಕೂಡಾ ಈಗ ಈ ಚಳುವಳಿಯತ್ತ ಕಣ್ಣರಳಿಸಿ ನೋಡತೊಡಗಿದೆ. ಕಳೆದ ಮುವ್ವತ್ತು ವರ್ಷಗಳಲ್ಲಿ ಜಾಗತೀಕರಣದ ಹೆಸರಿನಲ್ಲಿ ಜಗತ್ತಿನಾದ್ಯಂತ ವಿಕೃತವಾಗುತ್ತಾ ಹೋದ ಪ್ರಜಾಪ್ರಭುತ್ವದ ಕಲ್ಪನೆ ಈ ಚಳುವಳಿಯಿಂದಲಾದರೂ ತನ್ನ ಮೂಲ ಭಾವನೆಯತ್ತ ಹೊರಳಬಲ್ಲದೇನೂ ಕಾದು ನೋಡಬೇಕಿದೆ.

(ನವೆಂಬರ್– ೨೦೧೧ರ ಸಂಚಿಕೆಗಾಗಿ)

೫. ಭ್ರಷ್ಟ ರಾಜಕಾರಣದ ಜೊತೆಗಾರನಾದ ಮಾಧ್ಯಮ ಲೋಕ!

ಕರ್ನಾಟಕದ ರಾಜಕಾರಣ ಅಧೋಗತಿ ತಲುಪಿದೆ. ಬಳ್ಳಾರಿ ಗ್ರಾಮಾಂತರ ಕ್ಷೇತ್ರದ ಉಪಚುನಾವಣೆಯ ಸಂದರ್ಭದಲ್ಲಿ ಇದು ಎದ್ದು ಕಂಡಿದೆ. ಲೋಕಾಯುಕ್ತ ವರದಿಯ ಪರಿಣಾಮವಾಗಿ ಸಂಪುಟದಿಂದ ತನ್ನ ಇತರ ಗೆಣೆಕಾರರೊಂದಿಗೆ ಹೊರಹಾಕಲ್ಪಟ್ಟ ಶ್ರೀರಾಮುಲು ಮತ್ತೆ ಸಂಪುಟ ಸೇರಲು ಎಲ್ಲ ಸಾಧ್ಯ ಕಸರತ್ತು ಮಾಡಿ, ಕೊನೆಯ ಅಸ್ತ್ರವಾಗಿ ತನ್ನ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದಾಗ ಅದನ್ನು ಬಹುಕಾಲ ಅಂಗೀಕರಿಸದೆ ನಮ್ಮ ವಿಧಾನಸಭಾಧ್ಯಕ್ಷರು ತೋರಿದ ವರ್ತನೆ ನಮ್ಮ ಪ್ರಜಾಪ್ರಭುತ್ವದ ಗರ್ಭಗುಡಿಯಲ್ಲೇ ಎಲ್ಲೋ ಬಿರುಕು ಮೂಡಿರುವ ಆತಂಕವನ್ನು ಸೃಷ್ಟಿಸಿದೆ. ಇನ್ನು ಅನಿವಾರ್ಯವೆಂಬಂತೆ ಆ ರಾಜೀನಾಮೆಯನ್ನು ವಿಧಾನಸಭಾಧ್ಯಕ್ಷರು ಅಂಗೀಕರಿಸಬೇಕಾಗಿ ಬಂದ ಪರಿಣಾಮವಾಗಿ ಉಂಟಾದ ಈ ಉಪಚುನಾವಣೆಯಲ್ಲಿ ಬಿಜೆಪಿ ತನ್ನ ಪಕ್ಷದ ಟಿಕೆಟ್ಟನ್ನು ಅದೇ ಶ್ರೀರಾಮುಲುಗೆ ನೀಡಲು ಕೊನೆವರೆಗೆ ದುಂಬಾಲು ಬಿದ್ದ ರೀತಿ ಮತ್ತು ತನ್ನ ಈ ಪ್ರಯತ್ನ ವಿಫಲವಾದ ನಂತರ ಚುನಾವಣಾ ಪ್ರಚಾರ ಸಂದರ್ಭದಲ್ಲಿ ಮತ್ತೆ ಅದೇ ಶ್ರೀರಾಮುಲು ವಿರುದ್ಧ ಮಾಡಿದ ಆರೋಪಗಳನ್ನು ಗಮನಿಸಿದಾಗ ಈ ಪಕ್ಷ ಮುಟ್ಟಿರುವ ನಿರ್ಲಜ್ಜೆ ಮತ್ತು ಆತ್ಮವಂಚನೆಯ ಮಟ್ಟವನ್ನು ಕಂಡು ಯಾರಿಗಾದರೂ ಗಾಬರಿಯಾಗುತ್ತದೆ.

ಬಳ್ಳಾರಿಯಲ್ಲಿ ಅಭಿವೃದ್ಧಿ ಆಗಿಲ್ಲವಂತೆ! ಶ್ರೀರಾಮುಲುದು ಗೂಂಡಾಗಿರಿ ಸಂಸ್ಕೃತಿಯಂತೆ! ಇದೆಲ್ಲ ಈ ಪಕ್ಷಕ್ಕೆ ಈಗ ಅರಿವಾಗಿದೆಯೇ? ಪಕ್ಷಕ್ಕೆ ಕೈಕೊಟ್ಟ ಶ್ರೀರಾಮುಲು ಮಾಡಿದ್ದು ಮಾತೃದ್ರೋಹವಂತೆ! ಸ್ವತಃ ತಾನು 'ಆಪರೇಷನ್ ಕಮಲ'ದ ಮೂಲಕ ಎಷ್ಟು ಜನರಿಂದ ಇಂತಹ ಮಾತೃದ್ರೋಹ ಮಾಡಿಸಿರುವೆ ಎಂಬುದು ಈ ಪಕ್ಷಕ್ಕೇನಾದರೂ ನೆನಪಿದೆಯಾ? ಇನ್ನು ಈ ಚುನಾವಣೆಯಲ್ಲಿ ಶ್ರೀರಾಮುಲು ಪರ ನಿಂತ ತಮ್ಮ ಪಕ್ಷದ ಶಾಸಕರು ಮತ್ತು ಸಂಸದರನ್ನು ಕೊನೆ ಘಳಿಗೆಯವರೆಗೆ ಕಾದು ಪಕ್ಷದಿಂದ ಅಮಾನತು ಮಾಡಿರುವ ಬಿಜೆಪಿ ತನ್ನ ಅಧಿಕಾರವನ್ನು ಉಳಿಸಿಕೊಳ್ಳಲು ಮತ್ತೆ ಮಾತೃದ್ರೋಹದ ರಾಜಕಾರಣಕ್ಕೇ ಕೈಹಾಕದೆ ಬೇರೆ ಮಾರ್ಗವಿಲ್ಲದಂತೆ ತೋರುತ್ತಿದೆ. ಬಿಜೆಪಿ ತಾನು ಮಾಡಿದ ಮಾಡಿದ ಪಾಪ ತನ್ನನ್ನೇ ಸುತ್ತುವರೆಯುತ್ತಿರುವ ಈ ವಿದ್ಯಮಾನದ ನಂತರವಾದರೂ ನೈತಿಕತೆಯ ಪರಿಭಾಷೆಯಲ್ಲಿ ಮಾತನಾಡುವುದನ್ನು ನಿಲ್ಲಿಸಿದರೆ ಒಳ್ಳೆಯದು!

ಇನ್ನು ಶ್ರೀರಾಮುಲು ತಮ್ಮ ಮೇಲಿನ ಅಕ್ರಮ ಗಣಿಗಾರಿಕೆಯ ಭ್ರಷ್ಟಾಚಾರದ ಕಳಂಕವನ್ನು ಈ ಮರುಚುನಾವಣೆಯಲ್ಲಿ ಗೆಲ್ಲುವ ಮೂಲಕ ತೊಡೆದುಕೊಳ್ಳಲು ಯತ್ನಿಸುತ್ತಿರುವ ಪರಿಯೇ ಪ್ರಜಾಪ್ರಭುತ್ವದ ಬಹಿರಂಗ ಅಣಕದಂತಿದೆ. ನಮ್ಮ ಸಂವಿಧಾನದ ಪ್ರಕಾರ ಭ್ರಷ್ಟಾಚಾರದ ಆಪಾದನೆಯನ್ನು ಎದುರಿಸಬೇಕಾದದ್ದು ನ್ಯಾಯಾಂಗದ ನೆಲೆಯಲ್ಲಿ. ಆದರೆ ನ್ಯಾಯಾಂಗವನ್ನೇ ಹೀಗೆ ಒತ್ತರಿಸಿ ಹಾಕಲು ಯತ್ನಿಸುವ ಮೂಲಕ ಒಂದು ಅಪಾಯಕಾರಿ ಸಂಪ್ರದಾಯವನ್ನು ಶುರು ಮಾಡಲು ಹೊರಟಿರುವ ಶ್ರೀರಾಮುಲುವನ್ನು ಈ ನೆಲೆಯಲ್ಲಿ

ಪ್ರಶ್ನಿಸಿ ಎದುರಿಸಲು ಯಾವ ಪಕ್ಷವೂ ಮುಂದಾಗದಿರುವುದು ನಮ್ಮೆಲ್ಲ ರಾಜಕೀಯ ಪಕ್ಷಗಳ ತಾತ್ವಿಕ ದಿವಾಳಿತನವನ್ನು ತೋರುತ್ತದೆ. ಜೆಡಿಎಸ್ ಎಂಬ ಪಕ್ಷವಂತೂ ತನಗೆ ಯಾವ ತತ್ವ- ಸಿದ್ಧಾಂತವೂ ಇಲ್ಲ, ಸಮಯ ಸಾಧಕತನವೇ ತನ್ನ ಕಾರ್ಯಕ್ರಮವೆಂಬುದನ್ನು ಈ ಚುನಾವಣೆಯಲ್ಲಿ ಮತ್ತೊಮ್ಮೆ ದೃಢಪಡಿಸಿದೆ. ಅದು ಜಾತಿ ಲೆಕ್ಕಾಚಾರ ಮಾಡಿ, ರಾಜ್ಯ ರಾಜಕಾರಣದ ಖಳನಾಯಕ ಯಾರೆಂದು ತಾನು ಈವರೆಗೆ ಬೊಬ್ಬರಿದಿತ್ತೋ ಆ ರೆಡ್ಡಿ ಸೋದರರ ಬಲಗೈ ಬಂಟ ಶ್ರೀರಾಮುಲುವನ್ನು ತನ್ನೆಡೆಗೆ ಸೆಳೆಯುವ ವಿಫಲ ಪ್ರಯತ್ನ ಮಾಡಿ ಕೊನೆಗೆ ಅವರನ್ನು ಬೆಂಬಲಿಸುವ ನಿರ್ಧಾರ ಪ್ರಕಟಿಸಿದೆ! ಇನ್ನು ಕಾಂಗ್ರೆಸ್ ಅಕ್ರಮ ಗಣಿಗಾರಿಕೆಯಿಂದ ಕಳಂಕಿತರಾದ ಶ್ರೀರಾಮುಲು ವಿರುದ್ಧ ಪ್ರಚಾರ ಮಾಡಲು ಅದೇ ಅಕ್ರಮ ಗಣಿಗಾರಿಕೆಯ ಕಳಂಕ ಹೊತ್ತ ಅನಿಲ್ ಲಾಡ್ ಎಂಬ ಸಂಶಯಾಸ್ಪದ ಆಸಾಮಿಯನ್ನು ಮುಂದಿಟ್ಟುಕೊಂಡು ಹೊರಟು ಲೋಕಾಯುಕ್ತ ವರದಿ ಕುರಿತ ತನ್ನ ನಿಜ ನಿಲುವೇನೆಂಬುದನ್ನು ಪರೋಕ್ಷವಾಗಿ ಸೂಚಿಸಿದೆ. ಹಾಗೇ ಅದು ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು ತಮ್ಮ ನಾಯಕರ ಮಾನ ಉಳಿಸಿಕೊಳ್ಳಲು ಈಗ ಸಾರ್ವತ್ರಿಕವಾಗಿ ಲೋಕಾಯುಕ್ತದ ವಿರುದ್ಧ ಮತ್ತು ನಿರ್ದಿಷ್ಟವಾಗಿ ನ್ಯಾ. ಸಂತೋಷ್ ಹೆಗ್ಡೆಯವರ ವಿರುದ್ಧ ಆರಂಭಿಸಿರುವ ಅಪಪ್ರಚಾರವನ್ನು ಒಮ್ಮನದಿಂದ ಮತ್ತು ಸಮರ್ಥವಾಗಿ ಎದುರಿಸಲು ವಿಫಲವಾಗಿರುವುದು ಎದ್ದು ಕಾಣುತ್ತಿದೆ.

ಹೀಗೆ ರಾಜ್ಯದ ಇಡೀ ರಾಜಕೀಯ ಕುಲವೇ ಒಂದಲ್ಲ ಒಂದು ರೀತಿಯಲ್ಲಿ ಭ್ರಷ್ಟಾಚಾರದ ವಿರುದ್ಧ ಲೋಕಾಯುಕ್ತ ಸಂಸ್ಥೆ ತನ್ನ ದಿಟ್ಟ ಮತ್ತು ಪ್ರಾಮಾಣಿಕ ಕಾರ್ಯಾಚರಣೆಯ ಮೂಲಕ ಆರಂಭಿಸಿರುವ ಕಾನೂನಾತ್ಮಕ ಸಮರದ ವಿಶ್ವಾಸಾರ್ಹತೆಯನ್ನೇ ಹಾಳು ಮಾಡಲು ಯತ್ನಿಸುತ್ತಿರುವಾಗ, ಇದರ ವಿರುದ್ಧ ದನಿಯೆತ್ತಬೇಕಾದ ನಮ್ಮ ಮಾಧ್ಯಮದ ಒಂದು ಭಾಗ ಭ್ರಷ್ಟ ರಾಜಕಾರಣಿಗಳ ಜೊತೆ ಕೈಜೋಡಿಸಲು ಹವಣಿಸುತ್ತಿರುವ ರೀತಿ ಆಘಾತಕಾರಿಯಾಗಿದೆ. ಕನ್ನಡದ ದಿನಪತ್ರಿಕೆಯೊಂದು ಇದರ ಸಿಬ್ಬಂದಿಯೊಬ್ಬರು ಈ ಹಿಂದೆ ಲೋಕಾಯುಕ್ತದ ಮಾಜಿ ಅಧಿಕಾರಿಯೊಬ್ಬರೊಡನೆ ಲೋಕಾಭಿರಾಮವಾಗಿ ನಡೆಸಿದ್ದ ಮಾತುಕತೆಯನ್ನೇ ಈಗ ಲೋಕಾಯುಕ್ತ ಸಂಸ್ಥೆಯೇ ಭ್ರಷ್ಟಾಚಾರದಿಂದ ತುಂಬಿದೆ ಎಂಬ ಶೀರ್ಷಿಕೆಯಲ್ಲಿ ಪ್ರಕಟಿಸುವ ಮೂಲಕ ಜನತೆಗೆ ದ್ರೋಹ ಬಗೆದಿದೆ. ಈ ಪತ್ರಿಕೆಯ ಸಂಪಾದಕ ತಾನು ಈ ಮೊದಲು ಸಂಪಾದಕನಾಗಿದ್ದ ಪತ್ರಿಕೆಯನ್ನೂ ಹೀಗೇ ರಾಜ್ಯ ರಾಜಕಾರಣದಲ್ಲಿ ತನ್ನ ವೈಯುಕ್ತಿಕ ಹಿತಾಸಕ್ತಿಗಳಿಗನುಗುಣವಾಗಿ ಸಕ್ರಿಯ ಪಾತ್ರಧಾರಿಯನ್ನಾಗಿ ಮಾಡುತ್ತಾ ಬಂದಿದ್ದನೆಂದೂ, ಆ ಕಾರಣದಿಂದಾಗಿ ಮತ್ತು ಈತನ ಮೇಲಿದ್ದ ಸ್ವಜನ ಪಕ್ಷಪಾತ ಹಾಗೂ ಭ್ರಷ್ಟಾಚಾರಗಳ ಆರೋಪಗಳ ತನಿಖೆ ನಡೆಸಿ ಅದರ ಪ್ರಕಾಶಕರು ಈತನನ್ನು ಅಲ್ಲಿಂದ ಹೊರದೂಡಿದರೆಂದೂ ಹೇಳಲಾಗುತ್ತಿದೆ. ಈ ಸಂಪಾದಕ ಅಕ್ರಮ ಗಣಿಗಾರಿಕೆ ಲೂಟಿಯಷ್ಟೇ ಅಲ್ಲ, ಕುಪ್ರಸಿದ್ಧ 'ಸುದ್ದಿಗಾಗಿ ಕಾಸು' ಕಾರ್ಯಕ್ರಮದ ಫಲಾನುಭವಿ ಕೂಡ ಎಂಬ ಸುದ್ದಿಯೂ ಪ್ರಚಲಿತದಲ್ಲಿದೆ..

ಒಂದೆಡೆ ಸಾರ್ವಜನಿಕ ಜೀವನದ ಬಗ್ಗೆ ಸದಾ ನೀತಿ ಪಾಠ ಹೇಳುತ್ತಾ, ಇನ್ನೊಂದೆಡೆ ಮಾಧ್ಯಮದ ಸ್ವಾತಂತ್ರ್ಯದ ಹೆಸರಿನಲ್ಲಿ ತನ್ನ ಮೇಲೆ ಯಾವ ಬಾಹ್ಯ ನಿಯಂತ್ರಣವೂ ಇರಬಾರದೆಂದು ವಾದಿಸುತ್ತಾ ಪತ್ರಿಕಾ ಮಂಡಳಿಯ ಅಧ್ಯಕ್ಷ ಕಟ್ಜು ಅವರ ವಿರುದ್ಧ ಸಮರ ಸಾರಿರುವ ನಮ್ಮ ಮಾಧ್ಯಮ ಮಿತ್ರರು ಈ ಪ್ರಕರಣದ ತ್ವರಿತ ತನಿಖೆಗಾಗಿ ಏಕೆ ಆಗ್ರಹಿಸುತ್ತಿಲ್ಲವೋ ತಿಳಿಯದಾಗಿದೆ. ಈ ಎಲ್ಲ ಹಿನ್ನೆಲೆಯಲ್ಲಿ, ರಾಜಕಾರಣಿಗಳಂತೆಯೇ ಪತ್ರಕರ್ತರೂ ಸ್ವಯಂಪ್ರೇರಿತರಾಗಿ ಪ್ರತಿ ವರ್ಷ ತಮ್ಮ ಆಸ್ತಿಯನ್ನು ಬಹಿರಂಗವಾಗಿ ಘೋಷಿಸಿಕೊಳ್ಳಬೇಕೆಂದು ಖ್ಯಾತ ಪತ್ರಕರ್ತರೊಬ್ಬರು ನೀಡಿದ್ದ ಸಲಹೆಯನ್ನು ಪತ್ರಕರ್ತರ ಸಮುದಾಯ ಗಂಭೀರವಾಗಿ ಪರಿಗಣಿಸುವ ಕಾಲ ಈಗ ಒದಗಿ ಬಂದಿದೆ ಎನಿಸುತ್ತದೆ. ಸಾಂವಿಧಾನಿಕ ಆಡಳಿತ ಮುರಿದು ಬಿದ್ದು ಪ್ರಜಾಪ್ರಭುತ್ವವೆಂಬುದು ಲೂಟಿಕೋರರ ಪ್ರಭುತ್ವವಾಗಿ ಮಾರ್ಪಾಡಾಗುತ್ತಿರುವ ಇವೊತ್ತಿನ ಆತಂಕಕಾರಿ ಪರಿಸ್ಥಿತಿಯಲ್ಲಿ ಭ್ರಷ್ಟ ರಾಜಕಾರಣಿಗಳ ಜೊತೆ ಭ್ರಷ್ಟ ಮಾಧ್ಯಮವೂ ಸೇರಿಕೊಂಡರೆ ಗತಿ ಏನು? ಜವಾಬ್ದಾರಿಯುತ ಮಾಧ್ಯಮ ಮಿತ್ರರು ಮತ್ತು ಜನತೆ ಯೋಚಿಸಬೇಕು.

(ಡಿಸೆಂಬರ್– ೨೦೧೨ರ ಸಂಚಿಕೆಗಾಗಿ)

೬. ಇದು ಸಾಮಾಜಿಕ ನ್ಯಾಯವಲ್ಲ!

ಭಾರತದ ಅತ್ಯಂತ ಹಿರಿಯ ಪಕ್ಷವೆನಿಸಿರುವ, ಹಾಗಾಗಿ ಅತ್ಯಂತ ಪ್ರಬುದ್ಧ ಪಕ್ಷವೂ ಆಗಿರಬೇಕಾದ ಕಾಂಗ್ರೆಸ್ ಪಕ್ಷ ದಿನೇ ದಿನೇ ಅತಿ ಕ್ಷುದ್ರ ಮತ್ತು ಸಂಕುಚಿತ'ಬುದ್ಧಿಯ ಪಕ್ಷವಾಗಿ ಪರಿವರ್ತಿವಾಗುತ್ತಿರುವುದನ್ನು ರಾಷ್ಟ್ರದ ಪ್ರಜ್ಞಾವಂತ ಜನತೆ ವಿಷಾದದಿಂದ ಗಮನಿಸುತ್ತಿದೆ, ಇತ್ತೀಚೆಗೆ ಅದರ ನೇತೃತ್ವದ ಸರ್ಕಾರ ಸಂಸತ್ತಿನಲ್ಲಿ ಮಂಡಿಸಿದ ಲೋಕಪಾಲ ಮಸೂದೆಗೆ ಸಂಬಂಧಪಟ್ಟಂತೆ ಅಲ್ಪ ಸಂಖ್ಯಾತರಿಗೆಂದು (ಅಂದರೆ ವಾಸ್ತವವಾಗಿ ಮುಸ್ಲಿಮರಿಗೆ) ಶೇ. ೪.೫ರಷ್ಟು ಮೀಸಲಾತಿಯನ್ನು ಸೂಚಿಸುವ ಮೂಲಕ ಈ ಮಸೂದೆಯ ಭವಿಷ್ಯವನ್ನೇ ಡೋಲಾಯಮಾನಗೊಳಿಸಿದ್ದೆ. ಈ ಮಸೂದೆಯ ಬಗ್ಗೆ, ಮುಖ್ಯವಾಗಿ ಸಿ.ಬಿ.ಐ. ಸಂಸ್ಥೆಗೆ ಯಾವ ಸ್ವರೂಪದ ಸ್ವಾಯತ್ತತೆ ನೀಡಬೇಕೆಂಬ ಹಾಗೂ ಇನ್ನಿತರ ಕೆಲವು ಅಂಶಗಳ ಬಗ್ಗೆ ಬಹುಪಾಲು ವಿರೋಧ ಪಕ್ಷಗಳಲ್ಲದೆ, ಆಡಳಿತ ಪಕ್ಷದ ಕೆಲ ಸದಸ್ಯರೂ ಮತ್ತು ಅದರ ಕೆಲ ಮಿತ್ರ ಪಕ್ಷಗಳೂ ಭಿನ್ನಾಭಿಪ್ರಾಯ ವ್ಯಕ್ತಪಡಿಸಿದ್ದು, ಆ ಕಾರಣಗಳಿಂದಾಗಿಯೇ ಮಸೂದೆಯ ಅನುಮೋದನೆ ಸಂಕಷ್ಟಕ್ಕೀಡಾಗಿರುವ ಸಂದರ್ಭದಲ್ಲಿ, ಕೊನೇ ಘಳಿಗೆಯಲ್ಲಿ– ಮೊದಲು ಸೂಚಿಸಿ, ನಂತರ ಹಿಂಪಡೆದು; ನಂತರ ಐದು ರಾಜ್ಯಗಳಲ್ಲಿನ ಚುನಾವಣೆಗಳ ಅಧಿಕೃತ ಘೋಷಣೆಯ ಕೆಲವೇ ದಿನಗಳ ಮುನ್ನ ತರಾತುರಿಯಲ್ಲಿ– ಈ ಮೀಸಲಾತಿಯನ್ನು ತಿದ್ದುಪಡಿಯಾಗಿ ಸೂಚಿಸುವ ಮೂಲಕ ಕಾಂಗ್ರೆಸ್ ಪಕ್ಷ ತನ್ನ ರಾಜಕೀಯ ಘನತೆಯನ್ನು ಸಂಪೂರ್ಣ ಹಾಳು ಮಾಡಿಕೊಂಡಿದೆ.

ಪತ್ರಿಕೆಯ ಈ ಸಂಚಿಕೆ ನಿಮ್ಮ ಕೈ ಸೇರುವ ಹೊತ್ತಿಗೆ ಲೋಕಪಾಲ ಮಸೂದೆಯ ಭವಿಷ್ಯ ನಿರ್ಧಾರವಾಗಿರಬಹುದು. ಒಂದು ಪಕ್ಷ ಅದು ಸಂಸತ್ತಿನಿಂದ ಅನುಮೋದಿತವಾಗಿದ್ದರೂ, ಅದರಲ್ಲಿ ಈ ಮೀಸಲಾತಿಯ ಸೂಚನೆ ಇದ್ದಲ್ಲಿ ಅದಕ್ಕೆ ನ್ಯಾಯಾಂಗದ ರಾಜ್ಯಾಂಗೀಯ ಮುದ್ರೆ ದೊರಕುವುದು ಕಷ್ಟವೇ ಎಂದು ಸಂವಿಧಾನ ತಜ್ಞರನೇಕರು ಹೇಳುತ್ತಿದ್ದಾರೆ. ಕಾರಣ, ಮತೀಯ ಅಲ್ಪಸಂಖ್ಯಾತತೆಯ ಆಧಾರದ ಮೇಲೆ ಯಾವುದೇ ಮೀಸಲಾತಿಗೆ ರಾಜ್ಯಾಂಗದಲ್ಲಿ ಅವಕಾಶವಿಲ್ಲ. ಅಷ್ಟೇ ಅಲ್ಲ, ಲೋಕಪಾಲದಲ್ಲಿ ಇತರೆ ಹಿಂದುಳಿದ ವರ್ಗಗಳಿಗೂ ಸೂಚಿಸಲಾಗಿರುವ ಮೀಸಲಾತಿಯ ರಾಜ್ಯಾಂಗ ಬದ್ಧತೆಯ ಬಗೆಗೂ ಅನುಮಾನಗಳಿವೆ. ಏಕೆಂದರೆ, ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ಈ ವರ್ಗಗಳಿಗೆ ಸಾಮಾಜಿಕ ಮತ್ತು ಶೈಕಣಿಕ ಉನ್ನತಿಗೆ ವಿಶೇಷ ಅವಕಾಶಗಳನ್ನು ನೀಡುವ ಮೂಲಕ ಅವಕಾಶಗಳ ಸಮಾನತೆಯನ್ನು ಸಾಧಿಸುವುದು ಮೀಸಲಾತಿಯ ಉದ್ದೇಶ. ಆದರೆ ಲೋಕಪಾಲದಲ್ಲಿನ ಮೀಸಲಾತಿಗೂ, ಈ ಉದ್ದೇಶಕ್ಕೂ ಏನು ಸಂಬಂಧವೋ ತಿಳಿಯದಾಗಿದೆ! ಭ್ರಷ್ಟಾಚಾರ ನಿರ್ಮೂಲನೆಯ ಭಾಗವಾಗಿ ನಡೆಯುವ ಈ ಕಾನೂನಾಧಾರಿತ ನ್ಯಾಯಾನ್ಯಾಯ ಪರಿಶೀಲನಾ ವ್ಯವಸ್ಥೆಯಲ್ಲೂ ಜಾತಿ ಪರಿಗಣನೆಗೆ ಅವಕಾಶವಿದೆ ಎಂದು ಭಾವಿಸುವುದಾದರೆ ನಾವು ಎಂದೂ ಸಾಮಾಜಿಕ ನ್ಯಾಯದ ಗುರಿ ಮುಟ್ಟಲಾಗುವುದಿಲ್ಲ ಎಂದು ಹೇಳಲೇಬೇಕಾಗುತ್ತದೆ. ಯಾವ ಪದ್ಧತಿಯ ಕಾರಣ, ಸಹಜ ಸಾಮಾಜಿಕ ನ್ಯಾಯಕ್ಕೆ ಧಕ್ಕೆ ಒದಗಿದೆಯೋ ಆ ಜಾತಿ ಪದ್ಧತಿಯನ್ನು ಎಲ್ಲ ಕ್ಷೇತ್ರಗಳಿಗೂ ಆಧಾರ ಮಾಡಿಕೊಂಡು ನಾವು ಹೀಗೆ ಮುಂದುವರೆಯುವುದಾದರೆ, ನಮ್ಮ ಸಾಮಾಜಿಕ ನ್ಯಾಯ ಆಂದೋಲನದ ಉದ್ದೇಶವೇ ಅನುಮಾನಾಸ್ಪದವೆನಿಸುತ್ತದೆ. ಮೀಸಲಾತಿಯನ್ನು ಯಾವ ಉದ್ದೇಶಕ್ಕಾಗಿ ರೂಪಿಸಲಾಯಿತೋ ಆ ಉದ್ದೇಶವನ್ನೇ ಅಸಂಗತಗೊಳಿಸುವ ಅವಿವೇಕವಿದು. ಅವಪ್ರಗತಿಯ ಹೆಜ್ಜೆಯಿದು.

ಅಲ್ಪ ಸಂಖ್ಯಾತರಿಗೆ, ಅಂದರೆ ಮುಖ್ಯವಾಗಿ ಮುಸ್ಲಿಮರಿಗೆ ಅವರ ಸಾಮಾಜಿಕ-ಶೈಕ್ಷಣಿಕ ಹಿಂದುಳಿದಿರುವಿಕೆಯ ಆಧಾರದ ಮೇಲೆ ಮೀಸಲಾತಿ ನೀಡಬಾರದೆಂದು ಯಾರೂ ಹೇಳುತ್ತಿಲ್ಲ. ಮೂರ್ನಾಲ್ಕು ರಾಜ್ಯಗಳಲ್ಲಿ ಅವರಿಗೆ ಈ ಆಧಾರದ ಮೇಲೆ ಈಗಾಗಲೇ ಈ ಸೌಲಭ್ಯವನ್ನು ನೀಡಲಾಗಿದೆ. ರಂಗನಾಥ ಮಿಶ್ರ ಸಮಿತಿ ಮತ್ತು ಇತ್ತೀಚಿನ ಸಚಾರ್ ಸಮಿತಿಯ ವರದಿಗಳು ಇದರ ರಾಷ್ಟ್ರೀಯ ಅನ್ವಯದ ಅಗತ್ಯವನ್ನು ಒತ್ತಿ ಹೇಳಿವೆ. ಆದರೆ ಮುಸ್ಲಿಮರ ಬರೀ ಹಿಂದುಳಿದಿರುವಿಕೆಯಲ್ಲ, ದಾರುಣ ಪರಿಸ್ಥಿತಿಯನ್ನು ತಮ್ಮ ಸಮೀಕ್ಷಾ ವರದಿಯಲ್ಲಿ ಕಣ್ಣಿಗೆ ಕಟ್ಟಿದಂತೆ ನಿರೂಪಿಸಿರುವ ಸ್ವತಃ ನ್ಯಾ॥ ಸಚಾರ್ ಅವರೇ ತಮ್ಮ ಆಯೋಗದ ಶಿಫಾರ್ಸುಗಳನ್ನು ಜಾರಿಗೆ ತರಲು ಸದರಿ ಸರ್ಕಾರ ಸಾಂವಿಧಾನಿಕ ರಾಜಮಾರ್ಗದ ಬದಲು ಲೋಕಪಾಲದ ಮರೆಯಲ್ಲಿ ಅನುಮಾನಾಸ್ಪದ ಮಾರ್ಗ ಹಿಡಿದಿರುವುದರ ಉದ್ದೇಶದ ಬಗ್ಗೆಯೇ ಶಂಕೆ ವ್ಯಕ್ತಪಡಿಸಿದ್ದಾರೆ.

ಇದು ಮುಖ್ಯವಾಗಿ ಉತ್ತರ ಪ್ರದೇಶ ಚುನಾವಣೆಗಳ ಮೇಲೆ ಕಣ್ಣಿಟ್ಟು ಇತರ ಪಕ್ಷಗಳನ್ನು ಇಕ್ಕಟ್ಟಿಗೆ ಸಿಲುಕಿಸುವ ರಾಜಕೀಯ ಕುತಂತ್ರವಲ್ಲದೆ ಮತ್ತೇನಲ್ಲ. ರಾಷ್ಟ್ರ ಕಟ್ಟುವ ಸಂಕಲ್ಪದೊಡನೆ

ಸ್ಥಾಪಿಸಲ್ಪಟ್ಟ ಈ ಪಕ್ಷ ಕ್ರಮೇಣ ಸಂಪೂರ್ಣ ಅವನತಿಯ ಹಾದಿ ಹಿಡಿದು ಈಗ ತನ್ನ ಮತ್ತು ತನ್ನ ಅನುವಂಶೀಯ ನಾಯಕತ್ವದ ಉಳಿವಿಗಾಗಿ ರಾಷ್ಟ್ರವನ್ನು ಶಾಶ್ವತವಾಗಿ ಜಾತಿ-ಮತಗಳ ಆಧಾರದ ಮೇಲೆ ಒಡೆದಿಡಲು ಹೊರಟಿರುವುದು ಒಂದು ದೊಡ್ಡ ವಿಪರ್ಯಾಸ ಮಾತ್ರವಲ್ಲ, ದುರಂತವೇ ಸರಿ. ಇದರ ಹಿಂದೆ ರಾಷ್ಟ್ರದ ಜನತೆ ಇತ್ತೀಚಿನ ವರ್ಷಗಳಲ್ಲಿ ಅಣ್ಣಾ ಹಜಾರೆ ನೇತೃತ್ವದಲ್ಲಿ ಅನಿರೀಕ್ಷಿತವೆನ್ನಿಸುವ ಅದ್ಭುತ ರೀತಿಯಲ್ಲಿ ಸಂಘಟಿತಗೊಂಡು, ಸಂಸತ್ತಿನ ಮುಂದೆ ಮಂಡಿಸಲ್ಪಡುವಂತೆ ಮಾಡಿದ ಲೋಕಪಾಲ ಮಸೂದೆಯನ್ನು ಸದ್ಯಕ್ಕಾದರೂ ಕಾನೂನಾಗದಂತೆ ತಡೆಯುವ ಉದ್ದೇಶವಿದ್ದರೂ ಆಶ್ಚರ್ಯವಿಲ್ಲ.

ಆದರೆ ಅಣ್ಣಾ ಮತ್ತು ಅವರ ಹಿಂದಿರುವ ವಿಶಾಲ ಜನತೆಯ ಸಂಕಲ್ಪ ಶಕ್ತಿ ಈ ಉದ್ದೇಶವನ್ನು ವಿಫಲಗೊಳಿಸಲು ಸಿದ್ಧವಾಗಿರುವಂತೆ ತೋರುತ್ತದೆ. ಆದರೆ ಅಣ್ಣಾ ಈ ನಿರ್ಣಾಯಕ ಸಮಯದಲ್ಲಿ ಸ್ವಲ್ಪ ಸಾವಧಾನದಿಂದ ವರ್ತಿಸಬೇಕು. ಗಾಂಧಿಯಾಗದೆ, ಗಾಂಧಿಯಂತೆ ವರ್ತಿಸಲು ಹೋಗಬಾರದು. ಬರೀ ಪ್ರತಿಭಟನೆಯಿಂದಾಗಲೀ ಅಥವಾ ಎಷ್ಟೇ ಸಶಕ್ತ ಲೋಕಪಾಲ ರಚನೆಯಿಂದಾಗಲೀ ಭ್ರಷ್ಟಾಚಾರವನ್ನು ಅದರೆಲ್ಲ ರೂಪ ಮತ್ತು ಪರಿಣಾಮಗಳಲ್ಲಿ ತೊಲಗಿಸಲಾಗದು ಎಂಬುದನ್ನು ಅವರು ಅರಿಯಬೇಕು. ಹಾಗಾಗಿ ಅವರು ನಿಜವಾಗಿ ಗಾಂಧಿ ಅನುಯಾಯಿ ಆಗಿದ್ದಲ್ಲಿ, ಆಗಬೇಕಿದ್ದಲ್ಲಿ, ಗಾಂಧೀಜಿಯಂತೆ ಪ್ರತಿಭಟನೆಯ ಜೊತೆಗೇ ಜನತೆಯ ವೈಯುಕ್ತಿಕ ಶೀಲ ಪರಿವರ್ತನೆಯ ರಚನಾತ್ಮಕ ಕೆಲಸಗಳ ಆಂದೋಲನವನ್ನೂ ಆರಂಭಿಸಬೇಕು. ರಾಜಕೀಯ ಪರಿಭಾಷೆಯಲ್ಲಿ ಮಾತನಾಡುವುದನ್ನು ನಿಲ್ಲಿಸಿ, ರಾಷ್ಟ್ರ ಪುನರ್ನಿರ್ಮಾಣದ ಸಂಕಲ್ಪ ಶಕ್ತಿಯ ಪ್ರತೀಕ ಮಾತ್ರವಾಗಿ ತಮ್ಮನ್ನು ತಾವು ಪ್ರಸ್ತುತಗೊಳಿಸಿಕೊಳ್ಳಬೇಕು ತಮ್ಮ ಹೋರಾಟದ ದಿಕ್ಕು ದೆಸೆಗಳು ದೇಶವನ್ನು ರಾಜಕೀಯವಾಗಿ ಬೆಂಕಿಯಿಂದ ಬಾಣಲೆಗೆ ಒಡ್ಡೀತು ಎಂಬ ಎಚ್ಚರ ವಹಿಸಬೇಕು. ಹಾಗೇ ತಮ್ಮ ಸಹಚರರೊಂದಿಗೊಡಗೂಡಿ ತಮ್ಮನ್ನು ತಾವೇ ಸದಾ ಅಳೆದುಕೊಳ್ಳುತ್ತಾ ರಾಷ್ಟ್ರದ ಜನತೆಯ ಹೆಜ್ಜೆ ಜೊತೆಗೆ ಹೆಜ್ಜೆ ಹಾಕುವ ವಿನಯವನ್ನೂ ಪ್ರದರ್ಶಿಸಬೇಕು.

ಅಣ್ಣಾ ಮತ್ತು ಅವರ ತಂಡದಿಂದ ರಾಷ್ಟ್ರ ಇದನ್ನು ಈಗ ನಿರೀಕ್ಷಿಸುತ್ತಿದೆ.

ಓದುಗರೆಲ್ಲರಿಗೂ ಹೊಸ ವರ್ಷದ ಶುಭಾಶಯಗಳು!

(ಜನವರಿ- ೨೦೧೨ರ ಸಂಚಿಕೆಗಾಗಿ)

೭. ನಮ್ಮ ಆತ್ಮದ್ರೋಹಿ ಸೆಕ್ಯುಲರ್ ರಾಜಕಾರಣ...

ನಮ್ಮದು ಸಂವಿಧಾನದ ಪ್ರಕಾರ 'ಸೆಕ್ಯುಲರ್' ದೇಶ. ಆದರೆ 'ಸೆಕ್ಯುಲರ್' ಅಂದರೆ ನಿಜವಾಗಿ ಏನರ್ಥ ಎಂದು ಯಾರೂ ಈವರೆಗೆ ನಿಖರವಾಗಿ ಹೇಳಲಾಗಿಲ್ಲ. ಹಾಗೇ ಸಂವಿಧಾನ ಜಾರಿಯಾಗಿರುವ ಈ ಅರವತ್ತು ವರ್ಷಗಳ ಸಾರ್ವಜನಿಕ ಜೀವನವಾಗಲೀ,

ರಾಜಕಾರಣವಾಗಲೀ ಇದರ ಬಗ್ಗೆ ಸ್ಪಷ್ಟನೆಯ ಬದಲಾಗಿ ಗೊಂದಲವನ್ನುಂಟು ಮಾಡಿರುವುದೇ ಹೆಚ್ಚು. ಈ 'ಸೆಕ್ಯುಲರ್' ಎಂಬ ಶಬ್ದಕ್ಕೆ ಭಾರತೀಯ ಭಾಷೆಗಳಲ್ಲಿ ಸರ್ವಸಾಮಾನ್ಯ ಸಮಾನಾರ್ಥಕ ಶಬ್ದವೊಂದು ಇನ್ನೂ ಚಲಾವಣೆಗೆ ಬಂದಿಲ್ಲ ಎಂಬುದು ಈ ಕುರಿತ ಎಲ್ಲ ಗೊಂದಲವನ್ನು ಹೇಳುತ್ತದೇನೋ! ಆದರೆ ಕಳೆದ ೨೦ ವರ್ಷಗಳಲ್ಲಿ– ರಾಮಜನ್ಮಭೂಮಿ ರಾಜಕಾರಣ ಆರಂಭವಾದಾಗಿನಿಂದ ಈ ಸೆಕ್ಯುಲರಿಸಂ ಎಂಬುದೇ ನಮ್ಮ ರಾಜಕಾರಣವನ್ನೂ, ಎಲ್ಲ ರಾಜಕೀಯ ಸಂಕಥನಗಳನ್ನೂ ನಿರ್ದೇಶಿಸುವ ದೊಡ್ಡ ಶಕ್ತಿಯಾಗಿಬಿಟ್ಟರುವುದು ಮಾತ್ರ ಒಂದು ದೊಡ್ಡ ವಿಪರ್ಯಾಸವಾಗಿದೆ! ಆದರೆ ನಿರ್ದಿಷ್ಟ ಪ್ರಕರಣಗಳಿಗೆ ಬಂದಾಗ ಮಾತ್ರ ಪ್ರತಿ ರಾಜಕೀಯ ಪಕ್ಷವೂ, ಅಭಿಪ್ರಾಯ ಗುಂಪುಗಳೂ ಪ್ರತಿ ಪ್ರಕರಣದ ಸಂದರ್ಭದಲ್ಲೂ ತದ್ವಿರುದ್ಧ ನಿಲುವುಗಳನ್ನು ತಳೆಯುತ್ತ ಬಂದು ರಾಜಕಾರಣವನ್ನೂ, ಸಾರ್ವಜನಿಕ ಜೀವನವನ್ನೂ ರಾಡಿ ಎಬ್ಬಿಸಿಬಿಟ್ಟವೆ. ಸಲ್ಮಾನ್ ರಶ್ದಿ, ಷಾ ಬಾನು, 'ವಾಟರ್' ಸಿನಿಮಾ ಚಿತ್ರೀಕರಣ, ಬಾಬ್ರಿ ಮಸೀದಿ, ತಸ್ಲಿಮಾ ನಸ್ರೀನ್, ಎಂ.ಎಫ್.ಹುಸೇನ್, ಶಿವಾಜಿ ಇತಿಹಾಸದ ಪುಸ್ತಕ, ರಾಮಾನುಜನ್‌ರ ಬಹುರಾಮಾಯಣಗಳ ಪುಸ್ತಕ ಹೀಗೆ ಹಲವು ಹತ್ತು ಪ್ರಕರಣಗಳನ್ನು ಹೇಳುತ್ತಾ ಹೋಗಬಹುದು.

ಈಗ ರಶ್ದಿ ಪ್ರಕರಣ ಜೈಪುರ ಸಾಹಿತ್ಯೋತ್ಸವದ ಸಂದರ್ಭದಲ್ಲಿ ಮತ್ತೆ 'ಜೀವ' ಪಡೆದುಕೊಂಡಿದೆ. ೨೧ನೇ ಶತಮಾನದ ಪ್ರಗತಿಪರ ರಾಜಕಾರಣದ ಹರಿಕಾರ ಎಂದು ಬಿಂಬಿಸಲಾದ ರಾಜೀವ್ ಗಾಂಧಿ ಎಂಬ ಪ್ರಧಾನಿಯು ರಶ್ದಿಯ ಪುಸ್ತಕವನ್ನು ನಿಷೇಧಿಸಿದ್ದರಿಂದ ಹಿಡಿದು ಈಗ ಜಾಗತೀರಣದ ಹರಿಕಾರರೆಂದು ಹೇಳಿಕೊಳ್ಳುವ ಮನಮೋಹನ ಸಿಂಗ್ ಎಂಬ ಪ್ರಧಾನ ಮಂತ್ರಿಯ ಸರ್ಕಾರ ಅದೇ ರಶ್ದಿ ಈ ಸಾಹಿತ್ಯೋತ್ಸವಕ್ಕೆ ಬರದಂತೆ 'ಏರ್ಪಾಡು' ಮಾಡಿರುವವರೆಗೆ ನಮ್ಮ ಆತ್ಮದ್ರೋಹಿ ಸೆಕ್ಯುಲರ್ ರಾಜಕಾರಣದ ಆಧುನಿಕ ಇತಿಹಾಸ ಹಬ್ಬಿದೆ. ಸದ್ಯ ಇದರ ಹಿನ್ನೆಲೆಯಲ್ಲಿರುವುದು ಐದು ರಾಜ್ಯಗಳಲ್ಲಿ ನಡೆಯುತ್ತಿರುವ ಚುನಾವಣೆಗಳು ಎಂಬುದನ್ನು ಬಿಡಿಸಿ ಹೇಳಬೇಕಿಲ್ಲ. ಹಾಗಾಗಿಯೇ, ಹುಸಿ ಸೆಕ್ಯುಲರ್, ನಿಜ ಸೆಕ್ಯುಲರ್, ಪ್ರಗತಿಪರ, ಎಡಪಂಥೀಯ, ಕ್ರಾಂತಿಕಾರಿ ಎಂದೆಲ್ಲ ಕರೆದುಕೊಳ್ಳುವ ಯಾವ ಪಕ್ಷವೂ ಇದರ ಬಗ್ಗೆ ಸ್ಪಷ್ಟವಾಗಿ ಮಾತನ್ನಾಡುವ 'ದುಸ್ಸಾಹಸ'ವನ್ನೇ ಮಾಡುತ್ತಿಲ್ಲ. ಇದು ಸಮಕಾಲೀನ ರಾಜಕಾರಣದ ಸಾಂಸ್ಕೃತಿಕ ದಿವಾಳಿಕೋರತನದ ಪ್ರತೀಕವಷ್ಟೆ. ಇಂತಹ ರಾಜಕಾರಣ ರಾಷ್ಟವನ್ನು ಜಾಗತಿಕ ಶಕ್ತಿಯಾಗಿ ಕಟ್ಟಹೊರಟಿದೆ ಎಂದರೆ ಆ ರಾಷ್ಟ್ರಕ್ಕೆ, ಅದರ ಜನತೆಗೆ ಏನೋ ಒಂದು ದೊಡ್ಡ ದುರಂತ ಕಾದಿದೆ ಎಂದೇ ಅರ್ಥ. ಇದೆಲ್ಲದರ ಮಧ್ಯೆಯೇ ಜೈಪುರ ಸಾಹಿತ್ಯೋತ್ಸವದಲ್ಲಿ ನಾಲ್ಕು ಜನ ಲೇಖಕರಾದರೂ, ಪ್ರಭುತ್ವದ ಆತ್ಮದ್ರೋಹವನ್ನು ಪ್ರತಿಭಟಿಸುವ ದ್ಯೋತಕವಾಗಿ ರಶ್ದಿಯವರ ನಿಷೇಧಿತ ಪುಸ್ತಕದಿಂದ ಕೆಲವು ಭಾಗಗಳನ್ನು ಓದುವ ಸಾಹಸ ಮಾಡಿರುವುದು ವ್ಯವಸ್ಥೆಯಲ್ಲಿ ಎಲ್ಲವೂ ಕೆಟ್ಟಿಲ್ಲ ಎಂಬ ಭರವಸೆಯನ್ನು ಹುಟ್ಟಿಸುವಂತಿದೆ.

ಸೆಕ್ಯಲರಿಸಂ ವಿಷಯದಲ್ಲಿ ಈಗ ಎದ್ದು ಕಾಣುತ್ತಿರುವ ಇನ್ನೊಂದು ದೊಡ್ಡ ಮತ್ತು ಭಯಾನಕ ವಿದ್ಯಮಾನವೆಂದರೆ, ಜಾತಿ ಪದ್ಧತಿ ಪಡೆದುಕೊಳ್ಳುತ್ತಿರುವ ಹೊಸ ಮಾನ್ಯತೆ

ಮತ್ತು 'ಅಧಿಕೃತ'ವೆನ್ನಿಸುವ ಮನ್ನಣೆ. ನಮ್ಮ ರಾಜಕಾರಣ ಜಾತಿ ಕೇಂದ್ರಿತವಾಗಿ ಎಷ್ಟೋ ದಿನಗಳಾಗಿವೆ. ಆದರೆ ಇದನ್ನು ಇಷ್ಟು ಕಾಲ ಖಂಡಿಸುತ್ತಾ, ವಿರೋಧಿಸುತ್ತಾ ಬಂದ ಗುಂಪುಗಳೂ ಈಗ ಯಾವುದೇ ಎಗ್ಗಿಲ್ಲದೆ ಜಾತಿಯನ್ನು ಅಪ್ಪುತ್ತಿರುವ ದೃಶ್ಯಗಳು ಜಿಗುಪ್ಸೆ ಹುಟ್ಟಿಸುವಂತಿವೆ. ನಮ್ಮ ದೇಶದ, ಸಮಾಜದ ಅವನತಿಯ ಇತಿಹಾಸದ ಹಿಂದೆ ಜಾತಿ ಪದ್ಧತಿಯ ವಾಸ್ತವ ದುರಂತವಿದೆ ಎಂದು ವಿಶ್ಲೇಷಿಸಿದ್ದ ಸಮಾಜವಾದಿ ಚಿಂತಕ ಲೋಹಿಯಾ, ತಮ್ಮ ಸಮಾಜವಾದಿ ರಾಜಕಾರಣದ ಅವಿಭಾಜ್ಯ ಅಂಗವಾಗಿ ಜಾತಿ ವಿರೋಧಿ ಮತ್ತು ವಿನಾಶದ ದೊಡ್ಡ ಆಂದೋಲವನ್ನೇ ಆರಂಭಿಸಿದ್ದರು. ಇದರಿಂದ ಆಳವಾದ ಪ್ರಭಾವಕ್ಕೆ ಒಳಗಾಗಿದ್ದ ನಮ್ಮ ಮುಖ್ಯ ಲೇಖಕರಲ್ಲೊಬ್ಬರಾದ ತೇಜಸ್ವಿ, ನಮ್ಮ ಜನ ಜಾತಿ ಕುರಿತ ಪ್ರಸ್ತಾಪ ಮಾಡುತ್ತಿದ್ದಂತೆ ವಿದ್ಯುತಂತಿ ಮುಟ್ಟಿದವರಂತೆ ಹೌಹಾರುವವುದರ ಹಿಂದೆ ಜಾತಿ ಎನ್ನುವುದು ಹೇಗೆ ನಮ್ಮ ಮನಸ್ಸಿನ ಮರ್ಮ ಸ್ಥಾನದಲ್ಲಿ ನೆಲೆಗೊಂಡು ನಮ್ಮ ಸಾಮಾಜಿಕ ವರ್ತನೆ, ಅಭಿವ್ಯಕ್ತಿ ಹಾಗೂ ಲೌಕಿಕು ಆಯ್ಕೆಗಳನ್ನು ನಿರ್ಧರಿಸುತ್ತದೆ ಎಂಬುದನ್ನು ವಿವರಿಸಿದ್ದರು. ಹಾಗಾಗಿ ನಿಜವಾಗಿ ಜಾತ್ಯತೀತನಾಗದ ಲೇಖಕ, ಚಿಂತಕ, ಶಿಕ್ಷಕ, ಬುದ್ಧಿಜೀವಿ ಆಧುನಿಕ ಅರ್ಥದಲ್ಲಿ, ಅಂದರೆ ಸಮಾನತೆಯ ನೆಲೆಯಲ್ಲಿ, ಸಮಾಜ ವಿರೋಧಿಯೇ ಆಗಿರುತ್ತಾನೆ ಎಂದು ಹೇಳಬಹುದು.

ಆದರೆ ಇಂದು ನಮ್ಮ ಲೇಖಕರು, ಬುದ್ಧಿಜೀವಿಗಳು ಮತ್ತು ಇತ್ತೀಚೆಗೆ ಅವರನ್ನು 'ತಯಾರಿಸುವ' ಗುತ್ತೇದಾರಿ ಸ್ವಾಮ್ಯವನ್ನು ಪಡೆದಿರುವ ಶಾಲಾ ಕಾಲೇಜುಗಳು ಮತ್ತು ವಿಶ್ವವಿದ್ಯಾನಿಲಯಗಳು ಎಷ್ಟು ಜಾತಿ ರೋಗಗ್ರಸ್ತವಾಗಿವೆಯೆಂದರೆ, ಜಾಗತೀಕರಣದ ಹಡಬೆ ಹಣ, ಅದು ಈ ಶ್ರೇಣಿಗಳಲ್ಲಿ ಸೃಷ್ಟಿಸಿರುವ ಬೃಹತ್ ಪ್ರಮಾಣದ ಸಂಬಳ ಸವಲತ್ತುಗಳು, ಸಂಪಾದನೆಯ ಅಪಾರ ಮತ್ತು ವೈವಿಧ್ಯಮಯ ಅವಕಾಶಗಳು ಎಲ್ಲ ಸಾಮಾಜಿಕ ಸೂಕ್ಷ್ಮಗಳನ್ನೂ ಮೊಂಡುಗೊಳಿಸಿಬಿಟ್ಟು, ಸಾಹಿತ್ಯ ಸಂಸ್ಕೃತಿಗಳು ಕೇವಲ ಪ್ರದರ್ಶಕ ಕಲೆಗಳಾಗಿ ಮಾರ್ಪಟ್ಟಿವೆ. ಅವಕ್ಕೂ ನಿಜ ಜೀವನಕ್ಕೂ ಸಾವಯವ ಸಂಬಂಧದ ಅಗತ್ಯವಿಲ್ಲದಂತಾಗಿದೆ. ಹಾಗಾಗಿಯೇ ಇಂದು ಒಂದೇ ಜಾತಿಯ– ಉಪಜಾತಿಯ ಲೇಖಕರು ಸಾರ್ವಜನಿಕವಾಗಿ ಮತ್ತು ವೇದಿಕೆಗಳ ಮೇಲೆ ಹಲವು ಸಂಘಟಿತ ರೂಪಗಳಲ್ಲಿ ಸಾಂಸ್ಕೃತಿಕ ಚಟುವಟಿಕೆಗಳ ಹೆಸರಿನಲ್ಲಿಯೇ ಒಟ್ಟಾಗಿ ಕಾಣಿಸಿಕೊಳ್ಳಲು ಕೊಂಚವೂ ನಾಚಿಕೆಪಡದಂತಹ 'ಮುಕ್ತ', 'ಉದಾರವಾದಿ', 'ಖಾಸಗಿ' ಸಂದರ್ಭಗಳನ್ನು ಮತ್ತೆ ಮತ್ತೆ ನೋಡುತ್ತಿದ್ದೇವೆ. ಹಾಗೇ ಪುಸ್ತಕ ಪ್ರಕಾಶಕರೂ, ಮಾರಾಟಗಾರರೂ ತಮ್ಮದೇ ಜಾತಿಯ ಲೇಖಕರನ್ನು ಪೋಷಿಸಿ, ಪ್ರೋತ್ಸಾಹಿಸುವ 'ದಿಟ್ಟತನ' ತೋರುತ್ತಿದ್ದಾರೆ. ಇದು ಹಿಂದಿನಂತೆ ಯವುದೇ ಒಂದು ನಿರ್ದಿಷ್ಟ ಜಾತಿ ಅಥವಾ ಜಾತಿಗಳಿಗೆ ಸಂಬಂಧಿಸಿದ ವಿದ್ಯಮಾನವಾಗಿಲ್ಲ ಎಂಬುದು ಭವಿಷ್ಯದ ಭೀಕರತೆಯನ್ನು ಹೇಳುತ್ತದೆ. ಜಾತಿ ವ್ಯವಸ್ಥೆ ಎಂಬುದೇ ಒಂದು ವಸಾಹತುಶಾಹಿ ಕಲ್ಪನೆಯಾಗಿದ್ದು, ಅದರಲ್ಲಿನ ಶ್ರೇಣೀಕರಣ, ಶೋಷಣೆ ಎಂಬುದೇ ಒಂದು ಹಸಿಸುಳ್ಳು ಎಂದು ಪ್ರತಿಪಾದಿಸುವ ಬೃಹತ್ ಪ್ರಮಾಣದ ವಿದೇಶಿ ಹಣದಿಂದ ಪ್ರಾಯೋಜಿತವಾದ ಅಧ್ಯಯನವೊಂದು ನಮ್ಮ ವಿಶ್ವದ್ಯಾಲಯಗಳಲ್ಲೇ

ಅದೂ ಸಂಸ್ಕೃತಿ ಅಧ್ಯಯನದ ಹೆಸರಲ್ಲಿ ಆರಂಭವಾಗಿದೆ. ಅದರಿಂದ ನಮ್ಮ 'ಪ್ರತಿಭಾವಂತ'ರೆನಿಸಿಕೊಂಡ ಹಲವು ವಿದ್ವಾಂಸರು 'ಆಕರ್ಷಿತ'ರಾಗಿ ಅತ್ತ 'ಗುಳೆ' ಹೋಗಲಾರಂಭಿಸಿದ್ದಾರೆಂದ ಮೇಲೆ ಇನ್ನೇನು ಹೇಳುವುದು?

ನವ ಮಾವವ ಮಾಸಿಕದ ಈ ಸಂಚಿಕೆ ಈ ಸಮಕಾಲೀನ ವಿದ್ಯಾಮಾನವನ್ನು ಇದಕ್ಕೆ ಸಂಬಂಧಿಸಿದ ಇತ್ತೀಚಿನ ಹಲವು ಬೆಳವಣಿಗೆಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸುವ ಪ್ರಯತ್ನ ಮಾಡಿದೆ. ನಮ್ಮ ಈ ಪ್ರಯತ್ನದ ಬಗ್ಗೆ ದಯವಿಟ್ಟು ಬರೆಯಿರಿ.

(ಫೆಬ್ರುವರಿ– ೨೦೧೨ರ ಸಂಚಿಕೆಗಾಗಿ)

೮. ಭ್ರಷ್ಟಾಚಾರವೂ, ಮೌಢ್ಯ– ಅವೈಚಾರಿಕತೆಗಳೂ....

'ಅತ್ತ ದರಿ ಇತ್ತ ಪುಲಿ'. ಇದು ರಾಷ್ಟ್ರ ಮತ್ತು ರಾಜ್ಯದ ಜನತೆ ಈಗ ರಾಜಕೀಯ ಆಯ್ಕೆಯ ವಿಷಯದಲ್ಲಿ ಎದುರಿಸುತ್ತಿರುವ ದೊಡ್ಡ ಸಂಕಟವಾಗಿದೆ. ಅತ್ತ ಕೇಂದ್ರ ಸರ್ಕಾರ ಸಾವಿರಾರು ಕೋಟಿ ರೂಪಾಯಿಗಳ ಬೊಕ್ಕಸದ ಹಣವನ್ನು ಖಾಸಗಿ ವ್ಯಕ್ತಿ ಮತ್ತು ಸಂಸ್ಥೆಗಳು ಲೂಟಿ ಮಾಡಲು ಅವಕಾಶ ಮಾಡಿಕೊಟ್ಟ ಹಲವು ಭ್ರಷ್ಟಾಚಾರದ ಹಗರಣಗಳ ಸರಮಾಲೆಯನ್ನು ತನ್ನ ಕುತ್ತಿಗೆಗೆ ಹಾಕಿಕೊಂಡಿರುವುದು ದಿನೇ ದಿನೇ ನ್ಯಾಯಾಲಯಗಳಲ್ಲಿನ ವಿಚಾರಣೆಗಳ ಸಂದರ್ಭದಲ್ಲಿ ಬೆಳಕಿಗೆ ಬರುತ್ತಿದೆ. ಅಣ್ಣಾ ಹಜಾರೆಯವರ ನೇತೃತ್ವದ ಭ್ರಷ್ಟಾಚಾರ ವಿರೋಧಿ ಆಂದೋಲನವನ್ನು ಸಂವಿಧಾನ ವಿರೋಧಿಯೆಂದು ಬೊಬ್ಬೆ ಹಾಕುತ್ತಾ, ಅದು ಸಂಸತ್ತಿನ ಪರಮಾಧಿಕಾರವನ್ನು ಪ್ರಶ್ನಿಸುತ್ತಿದೆ ಎಂದು ವಾದಿಸತ್ತಾ ಮತ್ತು ತನ್ನ ತಾನು ಭ್ರಷ್ಟಾಚಾರ ವಿರೋಧಿ ಬದ್ಧತೆಯನ್ನು ಪದೇ ಪದೇ ಘೋಷಿಸಿಕೊಂಡಿದ್ದ ಈ ಸರ್ಕಾರ ಕೊನೆಗೆ ಲೋಕಪಾಲ ಮಸೂದೆಗೆ ಮಾಡಿದ್ದಾದರೂ ಏನು? ಸಂಸತ್ತನ್ನೇ ವಂಚಿಸುವ ಹುನ್ನಾರ ರೂಪಿಸಿ ಮಸೂದೆ ಸದ್ಯಕ್ಕೆ ಸಂಸತ್ತಿನಿಂದ ಅನುಮೋದಿತವಾಗದಂತೆ ನೋಡಿಕೊಂಡದ್ದು!

ಇದಕ್ಕಾಗಿ ಕಾಂಗ್ರೆಸ್ ಪಕ್ಷವೊಂದನ್ನೇ ದೂರುವ ಕಾರಣವಿಲ್ಲ. ಏಕೆಂದರೆ ಈಗ ನಾಲ್ಕು ರಾಜ್ಯಗಳಲ್ಲಿ ನಡೆಯುತ್ತಿರುವ ಚುನಾವಣೆಗಳಿಗಾಗಿ ವಿವಿಧ ಪಕ್ಷಗಳು ಟಿಕೆಟ್ ಹಂಚಿರುವ ರೀತಿ ಭ್ರಷ್ಟಚಾರದ ವಿರುದ್ಧ ಇವು ಘೋಷಿಸುವ ಬದ್ಧತೆ ಬರೀ ಭಾಷಣ ಬೊಗಳೆ ಎಂಬುದನ್ನು ಸಾಬೀತುಪಡಿಸುತ್ತದೆ. ಪ್ರತಿಯೊಂದು ಪಕ್ಷದಲ್ಲೂ ಅಪರಾಧ ಹಿನ್ನೆಲೆಯುಳ್ಳವರು ಟಿಕೆಟ್ ಪಡೆದಿರುವ ಪ್ರಮಾಣ ಕನಿಷ್ಠ ಶೇ.೩೦ರಷ್ಟಿದೆ! ಎಲ್ಲ ಪಕ್ಷಗಳಲ್ಲೂ, ಕೆಲವು ಬೆರಳೆಣಿಕೆಯ ಅಪವಾದಗಳ ಹೊರತಾಗಿ, ಪ್ರತಿ ಅಭ್ಯರ್ಥಿಯ ಸರಾಸರಿ ಕನಿಷ್ಠ ವಾರ್ಷಿಕ ಆದಾಯ ಒಂದು ಕೋಟಿ ರೂಪಾಯಿಗಳು! ಇದು, ಭ್ರಷ್ಟಚಾರ ವಿರೋಧಿ ರಾಜಕಾರಣವೂ ಸೇರಿದಂತೆ, ಇಡಿಯಾಗಿ ಭ್ರಷ್ಟರ ರಾಜಕಾರಣ. ಇದರ ಮಧ್ಯೆ ಅಣ್ಣಾ ಹಜಾರೆ ಸದ್ಯಕ್ಕಾದರೂ ಕಾಣೆಯಾಗಿರುವುದು ಸಹಜವೇ ಸರಿ.

ಇನ್ನು ಇತ್ತ ನಮ್ಮ ರಾಜ್ಯದಲ್ಲಿನ ಬಿಜೆಪಿ ಸರ್ಕಾರ ಈಗಾಗಲೇ ಬಹಿರಂಗೊಂಡಿರುವ ಅದರ ವೈವಿಧ್ಯಮಯ ವ್ಯಾವಹಾರಿಕ ಭ್ರಷ್ಟಾಚಾರದ ಪ್ರಕರಣಗಳು ವಿಚಾರಣೆಯ ಹಂತದಲ್ಲಿರುವಾಗಲೇ, ಮೂಲಭೂತವಾಗಿ ಆ ಪಕ್ಷದ ಚಾಲೂ- ಚಹರೆಗಳನ್ನೇ ಜನಸಾಮಾನ್ಯರೂ ಪ್ರಶ್ನಿಸುವಂತಹ ಮತ್ತು ಈ ಸರ್ಕಾರ ಭ್ರಷ್ಟವಷ್ಟೇ ಅಲ್ಲ, ದುಷ್ಟವೂ ಹೌದೆಂಬುದನ್ನು ಸೂಚಿಸುವ ಪ್ರಕರಣಗಳು ಒಂದಾದರಮೇಲೊಂದರಂತೆ ನಡೆಯುತ್ತಲೇ ಇವೆ. ಸರ್ವೋಚ್ಚ ನ್ಯಾಯಾಲಯದ 'ಛೀಮಾರಿ'ಯ ನಂತರವೂ ವಿಧಾನಸಭಾಧ್ಯಕ್ಷರು ತಮ್ಮ ಮೂಲ ಪಕ್ಷನಿಷ್ಠೆಯನ್ನು ಮೆರೆಯುತ್ತಾ, ಸರ್ಕಾರವನ್ನು ರಕ್ಷಿಸುವ ಪ್ರಯತ್ನಗಳನ್ನು ಮುಂದುವರೆಸಿದ್ದಾರೆ. ಇದರಿಂದ ಉತ್ತೇಜಿತಗೊಂಡಂತಿರುವ ಸರ್ಕಾರ ತನ್ನ ಗುಪ್ತ ಕಾರ್ಯಕ್ರಮ ಸೂಚಿಯನ್ನು ಬಹಿರಂಗವಾಗಿಯೇ ಜಾರಿಗೆ ತರಲು ಆರಂಭಿಸಿದೆ. ಬಹುಪಾಲು ಧಾರ್ಮಿಕ ಮಠಗಳನ್ನು ಬೃಹತ್ ಸರ್ಕಾರಿ ದೇಣಿಗೆಗಳ ಮೂಲಕ ಪಥಭ್ರಷ್ಟಗೊಳಿಸಿರುವ ಈ ಸರ್ಕಾರ ಈಗ ಪಠ್ಯಪುಸ್ತಕಗಳ ಕೋಮುವಾದಿಕರಣದ ಪ್ರಯತ್ನಗಳ ಮೂಲಕ ನಮ್ಮ ಮಕ್ಕಳ ಮನಸ್ಸನ್ನೇ ಭ್ರಷ್ಟಗೊಳಿಸುವ ಪ್ರಯತ್ನಕ್ಕೆ ಕೈಹಾಕಿದೆ.

ರಾಜ್ಯದಲ್ಲಿನ ಇಂತಹ ಭ್ರಷ್ಟ ಮತ್ತು ದುಷ್ಟ ರಾಜಕೀಯ ವಾತಾವಾರಣದ ಕಾರಣದಿಂದ ಸ್ಫೂರ್ತಿಪಡೆದಂತೆ ಸಾರ್ವಜನಕ ಜೀವನದಲ್ಲಿ ಮೌಢ್ಯಾಚರಣೆಗಳ ಪ್ರಕರಣಗಳು ಜಿಗುಪ್ಸೆ ಹುಟ್ಟಿಸುವ ಮಟ್ಟ ಮುಟ್ಟಿದೆ. ಸಾಮೂಹಿಕ ಪ್ರಾಣಿಬಲಿ ಮಹಾನಗರಗಳ ರಸ್ತೆಗಳು ರಕ್ತದಿಂದ ತೊಯ್ಯುವಷ್ಟು ಮಟ್ಟದಲ್ಲಿ, ಎಗ್ಗಿಲ್ಲದೆ ನಡೆದಿದೆ. ಧರ್ಮ ಸಂಸ್ಕೃತಿಗಳ ಹೆಸರಿನಲ್ಲಿ ಹೊಸ ಹೊಸ ಹಬ್ಬಗಳು, ವ್ರತಗಳು, ಹರಕೆಗಳು, ಸಂಕಷ್ಠಿಗಳು ಹುಟ್ಟಿಕೊಂಡು ಪುರೋಹಿತಶಾಹಿ ಮತ್ತೆ ಕೊಬ್ಬತೊಡಗಿದೆ. ರಾಜ್ಯದ ಇತಿಹಾಸದಲ್ಲೇ ಕೇಳದ, ಅಂತರ್ಜಾತಿ ವಿವಾಹ ಸಂಬಂಧಿಯಾದ 'ಮರ್ಯಾದಾ ಹತ್ಯೆ ಈಗ ವರದಿಯಾಗತೊಡಗಿದೆ. ಮರೆಯಾಗಿದ್ದ 'ನರಬಲಿ' ಮತ್ತೆ ಕಾಣಿಸಿಕೊಂಡಿದೆ. ಈ ಎರಡೂ ಪ್ರಕರಣಗಳಲ್ಲಿ 'ಬಲಿ'ಯಾದವರು ದಲಿತ ಸಮುದಾಯಕ್ಕೆ ಸೇರಿದವರು ಎಂಬ ಸಂಗತಿ ಈ ಬೆಳವಣಿಗೆಯ ಇನ್ನೊಂದು ಕ್ರೂರ ಮುಖವನ್ನು ತೋರಿಸುವಂತಿದೆ. ಈ ಹಿನ್ನೆಲೆಯಲ್ಲಿ ರಾಜಕೀಯ ನಾಯಕತ್ವದ ಪೈಪೋಟಿಯಲ್ಲಿ ಈಗ ರಾಜ್ಯಾದ್ಯಂತ ಮೊಳಗುತ್ತಿರುವ ಜಾತಿ ಐಕ್ಯತೆಯ ಕೂಗು- ಅದೂ ಪ್ರಬಲ ಜಾತಿಗಳ ಕಡೆಯಿಂದ- ಪ್ರಜಾಪ್ರಭುತ್ವ ಕ್ರಮೇಣ ಜಾತಿಪ್ರಭುತ್ವವಾಗಿ ಮನ್ನಣೆ ಪಡೆಯುವ ದುರಂತದ ಸೂಚನೆ ನೀಡುವಂತಿದೆ.

ಇದು ಕೈಬೆರಳೆಣಿಕೆಯಷ್ಟು ಜನರ ಹೊರತಾಗಿ ಇನ್ನಾರಲ್ಲೂ ತಲ್ಲಣ ಉಂಟುಮಾಡದಿರುವದು, ಒಂದು ಸಣ್ಣ ರಾಜಕೀಯ ಹೋಗಲಿ, ಸಾಮಾಜಿಕ ಸಂಚಲನವನ್ನೂ ಉಂಟು ಮಾಡದಿರುವುದು ಜಾಗತೀಕರಣದ 'ಸುಖ- ಸಂಭ್ರಮಗಳು' ನಮಗೆ- ನಮ್ಮ ಸಮಾಜಕ್ಕೆ- ನಿಜವಾಗಿ ಮಾಡಿರುವುದು ಏನು; ಅದು ನಮ್ಮ ಒಳಪ್ರಪಂಚವನ್ನೇ ಹೇಗೆ ಗೆದ್ದಲು ಹಿಡಿಸಿದೆ ಎಂಬುದನ್ನು ಸ್ಪಷ್ಟವಾಗಿ ಸಾರುತ್ತಿದೆ. ಒಳಪ್ರಪಂಚವನ್ನು- ಅಂತರಂಗವನ್ನು- ಕಳೆದುಕೊಂಡ ಸಮಾಜಕ್ಕೆ ಕಳೆದುಕೊಳ್ಳಲು ಉಳಿಯುವುದಾರೂ ಏನು?

ಇದರಿಂದ ಹೊರದಾರಿ ಇಲ್ಲವೇ? ಇದೆಲ್ಲ ಕೆಟ್ಟದು ಎನ್ನಿಸಬಲ್ಲ ಮನಸ್ಸಿಗೆ ಹೊರದಾರಿ ಕಾಣಲೇಬೇಕು. ಆದರೆ ಅದಕ್ಕೆ ಒಳ್ಳೆಯದು ಎಂದರೆ ಏನು, ಯಾವುದು ಎಂಬುದರ ಬಗ್ಗೆ ಸ್ಪಷ್ಟ ಕಲ್ಪನೆಯಷ್ಟೇ ಅಲ್ಲ, ಅದರ ಬಗ್ಗೆ ಆಳವಾದ ಬದ್ಧತೆಯೂ ಬೇಕು. ಇವೆರಡನ್ನೂ ಆಯ್ದು ಕೆಲವರಲ್ಲಾದರೂ ರೂಢಿಸಬಲ್ಲ ಒಂದು ದೊಡ್ಡ ಪರಂಪರೆ ನಮ್ಮ ಹಿಂದಿದೆ. ಹೊರದಾರಿಯ ಹೊಸ ಕಾಣ್ಕೆಗಾಗಿ ನಾವು ಬಹುಶಃ ಅದರಿಂದಲೇ ಸ್ಫೂರ್ತಿ ಪಡೆಯಬೇಕಾದೀತು. ಅಂತಹ ಪರಂಪರೆಗೆ ಸೇರಿದ ಸಮಾಜವಾದಿ ಚಿಂತಕ ಮತ್ತು ಹೋರಾಟಗಾರ ರಾಮಮನೋಹರ ಲೋಹಿಯಾ ಅವರ ಹುಟ್ಟುಹಬ್ಬ ಇಂತಹ ಸ್ಫೂರ್ತಿಗೆ ಒಂದು ಸಂದರ್ಭವಾದೀತು. ಮಾರ್ಚ್ ೨೩ ಅವರ ೧೦೨ನೇ ಹುಟ್ಟುಹಬ್ಬ. ಹಾಗಾಗಿಯೇ ಈ ಸಂಚಿಕೆ ಅವರ ನೆನಪಿಗೆ ಸಮರ್ಪಿತವಾಗಿದೆ.

ಅದರೆ ಈ ಸಂದರ್ಭದಲ್ಲಿ ರಾಜ್ಯದ ಹಿರಿಯ ಸಮಾಜವಾದಿ ಚಿಂತಕರೆನಸಿಕೊಂಡಿರುವ ಬಾಪು ಹೆದ್ದೂರಶೆಟ್ಟಿಯವರು ಲೋಹಿಯಾ ಬಗ್ಗೆ ಬರೆದು ಪ್ರಕಟಿಸಿರುವ ಅವಹೇಳನಕಾರಿ ಪುಸ್ತಕ ನವ ಮಾನವ ಮಾಸಿಕದ ಬಳಗಕ್ಕೆ ತೀವ್ರ ಜಿಗುಪ್ಸೆಯನ್ನುಂಟು ಮಾಡಿದೆ ಎಂದೇ ಹೇಳಬೇಕು. ಅವರು ತಮ್ಮ ಕುತರ್ಕ ಮತ್ತು ಕುತ್ಸಿತ ಶೈಲಿಯ ಈ ಬರಹದ ಮೂಲಕ ಲೋಹಿಯಾರನ್ನು ಕಳೆದ ಶತಮಾನ ಕಂಡ ಒಂದು ಅದ್ಭುತ ಸೃಜನಶೀಲ ಮನಸ್ಸು ಎಂದು ಗುರುತಿಸಿ ಗೌರವಿಸಿದ ಈ ರಾಜ್ಯದ ಮಾತ್ರವಲ್ಲ, ಈ ರಾಷ್ಟ್ರದ ಅತ್ಯುತ್ತಮ ಮನಸ್ಸುಗಳನ್ನು ಅಪಮಾನಿಸಿದ್ದಾರಷ್ಟೇ ಅಲ್ಲ, ಆಘಾತಗೊಳಿಸಿದ್ದಾರೆ ಕೂಡ. ಹಾಗೇ ಯಾವ ಪರೋಕ್ಷ ಉದ್ದೇಶದಿಂದ ಅವರು ಈ ಪುಸ್ತಕ ಬರೆದಿರಬಹುದೋ ಆ ಸಮಾಜವಾದಿ ಆಂದೋಲನದ ಪುನರುಜ್ಜೀವನದ ಪ್ರಯತ್ನಕ್ಕೆ ಮಾರಕವೆನಸುವ ಆಘಾತ ಉಂಟುಮಾಡಿದ್ದಾರೆ. ಈ ಬಗ್ಗೆ ರಾಜಾರಾಂ ತೋಳ್ಪಾಡಿಯವರು ಈ ಸಂಚಿಕೆಯಲ್ಲಿ ಬರೆದಿದ್ದಾರೆ. ನಿಮಗೆ ಅಗತ್ಯವೆನಸಿದರೆ ಈ ಚರ್ಚೆ ಮುಂದಿನ ಸಂಚಿಕೆಗಳಲ್ಲೂ ಮುಂದುವರೆಯಲಿದೆ.

(ಮಾರ್ಚ್- ೨೦೧೨ರ ಸಂಚಿಕೆಗಾಗಿ)

◇◇◇

೩೩. ಇನ್ನಿಲ್ಲ ನಮ್ಮ ಶಿವತೀರ್ಥನ್....

ನಮ್ಮೆಲ್ಲರ ಗೆಳೆಯ ಕೆ.ನ. ಶಿವತೀರ್ಥನ್ ಇನ್ನಿಲ್ಲ ಎಂಬ ಸುದ್ದಿ ನಮ್ಮೆಲ್ಲರನ್ನೂ ಥಣ್ಣಗೆ ಬಂದು ತಾಕಿದೆ ಹೀಗೆ ಥಣ್ಣಗೆ ಬಂದು ತಾಕಲು ಕಾರಣ, ಕಳೆದ ಐದಾರು ವರ್ಷಗಳಿಂದ ಪಾರ್ಶ್ವವಾಯು ಪೀಡಿತರಾಗಿ ಮಾತು ಕಳೆದುಕೊಂಡು ಮೈಸೂರಿನಲ್ಲಿ ತಮ್ಮ ಪತ್ನಿ ಡಾ. ನಿರ್ಮಲಾ ಅವರ ಚಿಕಿತಾಲ್ಸಯದ ಮೂರನೇ ಮಹಡಿಯಲ್ಲಿ ಮಲಗಿದ್ದಲ್ಲೇ ಮಲಗಿ ನವೆದು ಹೋಗಿದ್ದರು. ಭೇಟಿಯಾಗಲು ಬಂದ ಗೆಳೆಯರನ್ನು ಕಂಡು ಕಣ್ಣೀರು ಸುರಿಸುತ್ತಾ, ಸ್ಲೇಟಿನ ಮೇಲೆ ಎಡಗೈಯಿಂದ ಕಷ್ಟಪಟ್ಟು ತಮ್ಮ ಮಾತು ಬರೆದು ತೋರಿಸುವಂತಾಗಿದ್ದ ಈ ಗೆಳೆಯ, ಕೊನೆಗೆ ಯಾರನ್ನೂ ಗುರುತಿಸಲಾಗದ ಸ್ಥಿತಿ ತಲುಪಿ ನೋಡಲು ಹೋದವರಿಗೆ ಇನ್ನು ಇದು ಈ ಲೋಕದ ಪದಾರ್ಥವಲ್ಲ ಎಂಬಂತಾಗಿದ್ದರು. ಅಷ್ಟು ದೀರ್ಘಕಾಲ ಆ ಸ್ಥಿತಿಯಲ್ಲಿದ್ದ ಅವರನ್ನು ಉಪಚರಿಸಿ ನೋಡಿಕೊಳ್ಳುವ ಸರ್ವ ವ್ಯವಸ್ಥೆಗಳನ್ನೂ ಮಾಡಿದ್ದ ಡಾ. ನಿರ್ಮಲಾರನ್ನು ಈ ಸಂದರ್ಭದಲ್ಲಿ ನೆನೆಯಲೇಬೇಕು.

ಸಮಾಜವಾದಿ ಗೆಳೆಯರು ಯಾವುದೇ ಕಾರಣಕ್ಕೆ, ಎಲ್ಲಿಯೇ ನೆರೆದರೂ, ಅಲ್ಲಿ ಹೇಗೋ ಹಾಜರಾಗಿ, ಅತಿ ಗಂಭೀರ ಸಂದರ್ಭದಲ್ಲೂ ತಮ್ಮ ಮಾತಿನ ಪಲುಕುಗಳ ಮೂಲಕವೇ ಗಮನ ಸೆಳೆಯುತ್ತಿದ್ದ ಶಿವತೀರ್ಥನ್, ನಿಷ್ಕಾರಣವಾದ ಸ್ನೇಹಶೀಲತೆಗೆ ಇನ್ನೊಂದು ಹೆಸರಿನಂತಿದ್ದರು. ದೊಡ್ಡವರೆನಿಸಿಕೊಂಡವರ ಗುಂಪಿನ ಮಧ್ಯೆ–ಅವರು ಲಂಕೇಶ್ ಇರಲಿ, ತೇಜಸ್ವಿ ಇರಲಿ, ರಾಜಕಾರಣಿ ಸಿದ್ಧರಾಮಯ್ಯನವರಿರಲಿ–ಹೇಗೋ ನುಸುಳಿ ಅಲ್ಲಿ ತಮಾಷೆ ಮಾಡುತ್ತಲೇ ಅಥವಾ ತಮಾಷೆಗೊಳಗಾಗುತ್ತಲೇ ಇರುತ್ತಾ, ಆ ತಮಾಷೆಯ ಹಿಂದೆ ಅವರು ತಮಗಾಗಿ ಗಂಭೀರವಾದ ಏನನ್ನೋ ಹುಡುಕಿಕೊಳ್ಳುವ ತವಕದಲ್ಲಿರುವಂತಿದ್ದರು. ಮೈಸೂರಿನ ಗೆಳೆಯರಿಂದ ಸದಾ 'ಕವಿ' ಎಂದು ಸಂಬೋಧಿಸಲ್ಪಡುತ್ತಿದ್ದರೂ ಅವರು ಒಂದೇ ಒಂದು ಒಳ್ಳೆಯ ಕವಿತೆ ಎಂಬುದನ್ನು ಬರೆದಿಲ್ಲ ಎಂಬುದು ಬೇರೆ ವಿಷಯ. ಹಾಗಾಗಿಯೇ ಏನೋ ಅವರು ಬರೆದ ಒಂದೇ ಒಂದು ಸುಮಾರಾದ ಕವಿತೆ ಎನ್ನಬಹುದಾದ 'ಗೆಂಡಗಯ್ಯ'ನನ್ನು ಅವರ ಸಾಹಿತ್ಯ ಗೆಳೆಯರು ಇನ್ನಿಲ್ಲದಂತೆ ಹಾಡಿ ಹೊಗಳಿ ಅದರ ಬಗ್ಗೆ ಒಂದು ವಿಮರ್ಶೆಯ ಸಂಪುಟವನ್ನೇ ಹೊರತಂದು ಅವರ ಸ್ನೇಹದ ಋಣ ಸಂದಾಯ ಮಾಡಿದರೆಂದು ಕಾಣುತ್ತದೆ. ಅವರು

ಸಿಕ್ಕಾಗಲೆಲ್ಲ ನಾನು, 'ಛೇ, ನಿಮ್ಮ ಜೀವಮಾನದಲ್ಲಿ ಒಂದು ಸುಮಾರಾದ ಒಳ್ಳೆಯ ಕವಿತೆ ಬರೆಯಲೂ ನೀವು ನಮ್ಮ ಜಾತಿ ಮೂಲಕ್ಕೇ ಹೋಗಬೇಕಾಯಿತಲ್ಲ!' ಎಂದು ಹಾಸ್ಯ ಮಾಡಿದರೆ, ಅವರು 'ಅದು ನೀವೇ ಕಲಿಸಿದ ಸಮಾಜವಾದದ ಪಾಠ ಅಲ್ಲವೇನ್ರಪ್ಪಾ!' ಎಂದು ನನಗೇ ತಿರುಮಂತ್ರ ಹಾಕಿ ಮುಗಿಲು ಹರಿಯುವಂತೆ ನಗಾಡುತ್ತಿದ್ದರು!

ಮೊದಮೊದಲು ಕುವೆಂಪು ಪ್ರಭಾವದಲ್ಲಿ 'ಧ್ಯಾನ' ಮಾಡಿ ಸ್ಫೂರ್ತಿ ಪಡೆದೇ 'ಪರಮಾರ್ಥಿಕ' ಕಾವ್ಯ ಬರೆಯುತ್ತಾ ಆಲನಹಳ್ಳಿ ಕೃಷ್ಣನ ಕಾವ್ಯಗುರುವೂ ಆಗಿದ್ದ ಶಿವತೀರ್ಥನ್, ಕ್ರಮೇಣ ಕೃಷ್ಣನಿಂದಲೇ ಕಾವ್ಯ ಪಾಠ ಹೇಳಿಸಿಕೊಳ್ಳುವ ಸಂದರ್ಭ ಸೃಷ್ಟಿಯಾದ ಪರಿಣಾಮವಾಗಿ; ನವ್ಯರ ಪ್ರಭಾವದಲ್ಲಿ 'ತೀರ್ಥ'ದಿಂದ ಕಾವ್ಯ ಸ್ಫೂರ್ತಿ ಪಡೆದು ಲೌಕಿಕ ಕಾವ್ಯ ಬರೆಯಲಾರಂಭಿಸಿದರು. ಈ ರೂಪಾಂತರದ ಕಥೆಯನ್ನು ಕೃಷ್ಣ–ಶಿವತೀರ್ಥನ್‌ರ ಸದಾ ಧೃತ್‌ತೀನ್ ತಾಳ್‌ನಲ್ಲಿಯೇ ನಡೆಯುತ್ತಿದ್ದ ಜುಗಲ್‌ಬಂದಿ ಗೋಷ್ಠಿಯಲ್ಲೇ ಕೂತು ಕೇಳಬೇಕಿತ್ತು! ಕೃಷ್ಣ ಹೋದ ನಂತರ ಜೊತೆಗಾರನನ್ನು ಕಳೆದುಕೊಂಡಂತೆ ಶಿವತೀರ್ಥನ್, ಇನ್ನೊಬ್ಬ ಅಂತಹ ಜೊತೆಗಾರನಿಗಾಗಿ ಎಲ್ಲೆಲ್ಲೋ ಅಲೆದು, ಏನೇನೋ ಆಗಿ, ಕೊನೆಗೆ ತನ್ನ ಹಳೆಯ ಮತ್ತು ಮೂಲ ಜೊತೆಗಾರನಿರುವಲ್ಲಿಗೇ ಹೋಗಿಬಿಟ್ಟಿದ್ದಾರೆ. ಆದರೆ ಅವರ ಅಟ್ಟಹಾಸದ ನಗೆ ಸದಾ ನಮ್ಮ ಕಿವಿಗಳಲ್ಲಿ– ವಿಷಾದದೊಂದಿಗೇ ಆದರೂ–ಅನುರಣಿಸುತ್ತಿರುತ್ತದೆ.

('ನವ ಮಾನವ ಮಾಸಿಕ'ದ ಅಕ್ಟೋಬರ್, ೨೦೧೧ರ ಸಂವಚಿಕೆಯಲ್ಲಿ ಪ್ರಕಟ)

✧✧✧

೩೪. ಮೂರು ಪುಸ್ತಕ ವಿಮರ್ಶೆಗಳು:

೧. ಆಡಾಡುತ್ತಲೇ ಮಹಾ ಪರಿವರ್ತನೆ ಸಾಧಿಸಿದವರ ಕಥೆ!

ಕಾಡತೊರೆಯ ಜಾಡು (ಕಡಿದಾಳು ಶಾಮಣ್ಣನವರ ಬದುಕು- ಹೋರಾಟಗಳ ಕಥನ) ಸಂಗ್ರಹ ಮತ್ತು ಕೃತಿ ರೂಪ: **ಅಕ್ಷತಾ ಕೆ. ಪ್ರ: ಅಭಿನವ, ಬೆಂಗಳೂರು ಪುಟ:** ೩೦೦ ಬೆಲೆ: **ರೂ.** ೧೫೦/-

ಇದು ಹಿರಿಯ ಸಮಾಜವಾದಿ ಹಾಗೂ ರೈತ ಮುಖಂಡ ಕಡಿದಾಳು ಶಾಮಣ್ಣನವರ ಬದುಕು ಹೋರಾಟಗಳ ಕಥನ. ಒಂದು ರೀತಿಯಲ್ಲಿ ಅವರ ಆತ್ಮಕಥನವೆಂದರೂ ನಡೆದೀತು. ಈ ಪುಸ್ತಕದಲ್ಲಿ ಶಾಮಣ್ಣ ತಮ್ಮ ಕಥೆಯನ್ನು ಬಾಲ್ಯದಿಂದ ಈವರೆಗಿನ ನೆನಪುಗಳ ಆಧಾರದ ಮೇಲೆ, ಅವುಗಳಿಂದ ಹೆಕ್ಕಿದ ಸ್ವಾರಸ್ಯಕರ ಮತ್ತು ಕೆಲವೆಡೆ ಹೃದಯಂಗಮವೆನ್ನಿಸುವ ಪ್ರಸಂಗಗಳನ್ನು ನಿರೂಪಿಸುತ್ತಾ, ಒಂದು ಪಕ್ಕದಿಂದ ನೋಡಿದರೆ ಕಳೆದ ಅರುವತ್ತು ವರ್ಷಗಳ ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯಂತೆಯೂ ಕಾಣುವ ವಿಶಿಷ್ಟ ಕಥನವೊಂದನ್ನು ನಮ್ಮ ಮುಂದಿಟ್ಟಿದ್ದಾರೆ. ಇದು ವೈಯುಕ್ತಿಕ ಮತ್ತು ಸಾಮಾಜಿಕ ನೆಲೆಗಳೆರಡರಲ್ಲೂ ತುಯ್ದಾಡುತ್ತಾ ಸೃಜನ ಮತ್ತು ಸೃಜನೇತರ ಗಳೆಂಬ ವಿಂಗಡಣೆಗಳನ್ನು ಒಡೆದು ನಿಲ್ಲುವ ಹೊಸದೊಂದು ಸೊಬಗಿನ ಇತಿಹಾಸ ಕಥನವೂ ಆಗಿದೆ.

ಎಲ್ಲ ಘನ ಸಮಾಜವಾದಿಗಳಂತೆಯೇ, ಶಾಮಣ್ಣ ಸಾಹಿತ್ಯ, ಸಂಗೀತ, ಕಲೆ, ಕೃಷಿ, ಶಿಕಾರಿ, ಅಲೆದಾಟ, ಸಮಾಜ ಸುಧಾರಣೆ, ಚಳುವಳಿ, ರಾಜಕಾರಣ ಹೀಗೆ ಬದುಕಿನ ಆಸಕ್ತಿ ಮತ್ತು ಕುತೂಹಲಗಳ ಎಲ್ಲ ಕ್ಷೇತ್ರಗಳಿಂದಲೂ ಸಾರ ಪಡೆದು ಒಂದು ಆವೃತ ಜೀವನ ದೃಷ್ಟಿಕೋನವನ್ನು ರೂಪಿಸಿಕೊಂಡ ಪರಿ ಈ ಕೃತಿಯಲ್ಲಿ ಎಷ್ಟು ವರ್ಣರಂಜಿತವಾಗಿ ನಿರೂಪಿತವಾಗಿದೆ ಎಂದರೆ, ಇದು ಲೌಕಿಕ- ಪಾರಮಾರ್ಥಿಕಗಳ ನಡುವಣ ಬೇಧವನ್ನೇ ಅಳಿಸಿಹಾಕಿಬಿಡುತ್ತದೆ! ಈ ಅರ್ಥದಲ್ಲಿ ಈ ಕೃತಿ ಲೋಹಿಯಾ ರಾಜಕಾರಣದ ತಾತ್ವಿಕತೆಯನ್ನು ಅದರ ಪಾರಿಭಾಷಿಕ ಹುದಲಿನಿಂದ ಹೊರತೆಗೆದು ಜೀವಂತ ಜೀವನ ವಿವರಗಳ ಮೂಲಕವೇ ಅದನ್ನು ಸಾಮಾನ್ಯರಿಗೂ ಪ್ರಸ್ತುಪಡಿಸುವ ಪ್ರಯತ್ನ ಮಾಡುತ್ತದೆ ಎಂದು ಹೇಳಬಹುದು. ಶಾಮಣ್ಣನವರ ಮುಖದ ಮೇಲೆ ಸದಾ ಕಂಡೂ ಕಾಣದಂತೆ ಮಿನುಗುವ ತುಂಟ ನಗೆ ಈ

ಪುಸ್ತಕದುದ್ದಕ್ಕೂ ಹಾದು ಹೋಗಿದ್ದು, ಮೂರು ನೂರು ಪುಟಗಳನ್ನು ಆಯಾಸವಿಲ್ಲದಂತೆ– ಒಮ್ಮೊಮ್ಮೆ ಬಿದ್ದು ಬಿದ್ದು ನಗುವಂತೆ ಮಾಡಿಯೂ– ಓದಿಸಿಕೊಂಡು ಹೋಗುತ್ತದೆ.

ಈ ಕೃತಿಯನ್ನು ಓದುತ್ತಿದ್ದಂತೆ 'ಆಡಾಡುತ್ತಾ ಆಯುಷ್ಯ' ಎಂಬ ಗಾದೆಗೆ ಸಮನಾಂತರವಾಗಿ 'ಆಡಾಡುತ್ತಾ ಪರಿವರ್ತನೆ' ಕೂಡ ಎಂಬ ಹೊಸ ಅರಿವು ಹುಟ್ಟಿಸುವ ಘಟನಾವಳಿಗಳು ನಿಮ್ಮ ಕಣ್ಮುಂದೆ ಹಾದು ಹೋಗುತ್ತವೆ. ಶಾಮಣ್ಣ ತಮ್ಮ ಸಮಾಜವಾದಿ ಗೆಳೆಯರಾದ ತೇಜಸ್ವಿ, ಎಂಡಿಎನ್, ಸುಂದರೇಶ್, ಶ್ರೀರಾಂ, ಲಂಕೇಶ್, ರಾಮದಾಸ್ ಮುಂತಾದವರೊಂದಿಗೆ ಮೇಲ್ನೋಟಕ್ಕೆ ಹುಡುಗಾಟದಂತೆ ಕಾಣುವ ಚಟುವಟಿಕೆಗಳ ಮೂಲಕವೇ ಕರ್ನಾಟಕದ ಜನರ ಮಾನಸಿಕತೆಯಲ್ಲಿ ಎಂತಹ ನಿರ್ಣಾಯಕ ಸ್ಥಿತ್ಯಂತರಗಳಿಗೆ ಕಾರಣರಾಗಿದ್ದಾರೆ ಎಂದು ಆಶ್ಚರ್ಯವಾಗುತ್ತದೆ. ಇದೆಲ್ಲದರ ಹಿಂದೆ, ಒಂದೆಡೆ ಕುವೆಂಪು ಮತ್ತೊಂದೆಡೆ ಗೋಪಾಲಗೌಡರು ಇದ್ದಾರೆಂಬುದನ್ನೂ ಇಲ್ಲಿ ದಾಖಲಿಸಬೇಕು. ಕರ್ನಾಟಕದಲ್ಲಿ ಸಮಾಜವಾದಿ ರಾಜಕಾರಣ ಸಂಪೂರ್ಣ ವಿಫಲವಾಗಿದೆ ಎನ್ನುವವರಿಗೆ ನಿಜವಾಗಿ ರಾಜಕಾರಣವೆಂದರೇನು ಎಂಬುದು ಗೊತ್ತಿಲ್ಲ ಎಂಬುದನ್ನು ಈ ಕೃತಿ ಸಾರಿ ಹೇಳುತ್ತದೆ.

ಅಕ್ಷತಾ, ಶಾಮಣ್ಣನವರ ಈ ಕಥನವನ್ನು ಅವರು ಹೇಳಿದ ಭಾಷೆಯಲ್ಲೇ, ಅದರ ಸರಳ ಸೌಂದರ್ಯ ಮತ್ತು ಸೊಗಡು– ಸುಭಗತೆಗಳು ಭಂಗಗೊಳ್ಳದಂತೆ ನಿರೂಪಿಸಿ, ಈ ಪುಸ್ತಕದ ಯಶಸ್ಸಿಗೆ ತಾವೂ ಕಾರಣರಾಗಿದ್ದಾರೆ. ಅಪಾರ ಅವರ ಮುಖಪುಟ ವಿನ್ಯಾಸ ಈ ಕೃತಿಯ ಸೊಬಗನ್ನು ಹೆಚ್ಚಿಸಿದೆ.

('ನವ ಮಾನವ ಮಾಸಿಕ', ಸೆಪ್ಟಂಬರ್– ೨೦೧೧ರಲ್ಲಿ ಪ್ರಕಟ)

೨. ಸಮಾಜವಾದಿ ಚಿಂತನೆಗೆ ಹೊಸ ಆಯಾಮ ಮತ್ತು ತೀವ್ರತೆ

ಪ್ರತಿಚಿಂತನೆ ಲೇ: **ಕಿಷನ್ ಪಟ್ನಾಯಕ್** ಕನ್ನಡಕ್ಕೆ: **ಹಸನ್ ನಯೀಂ ಸುರಕೋಡ**
ಪ್ರ: **ಲೋಹಿಯಾ ಪ್ರಕಾಶನ, ಬಳ್ಳಾರಿ** ಪು: **೩೭೨** ಬೆಲೆ: **ರೂ. ೧೫೦/-**

'ಲೋಹಿಯಾರನ್ನು, ಅವರ ಜೀವಿತ ಕಾಲದಲ್ಲಿ ವಿಶ್ವವಿದ್ಯಾಲಯಗಳ ಆವರಣದೊಳಕ್ಕೆ ಪ್ರವೇಶಿಸದಂತೆ ನೋಡಿಕೊಂಡ ನಮ್ಮ ಅಧ್ಯಾಪಕ– ಬುದ್ಧಿಜೀವಿಗಳ ವ್ಯೂಹ ಒಂದು ನೀಚರ ವ್ಯೂಹ' ಎಂದು ತೇಜಸ್ವಿ ಬರೆದಿದ್ದಾರೆ. ಈ ಮಾತು ನನಗೆ ಮತ್ತೆ ಮತ್ತೆ ನೆನಪಿಗೆ ಬರುತ್ತಿದ್ದುದು, ಲೋಹಿಯಾರ ನಿಜ ತಾತ್ವಿಕ ವಾರಸುದಾರರೆನಿಸಿರುವ ಮತ್ತು ಕರ್ನಾಟಕದ ಅಳಿದುಳಿದ ಸಮಾಜವಾದಿಗಳ ಆಪ್ತ ಒಡನಾಡಿಯೆನಿಸಿ ತಮ್ಮ ನಿಧನ ಕಾಲದವರೆಗೂ ರಾಜ್ಯಕ್ಕೆ ವರ್ಷದಲ್ಲಿ ಹಲವು ಸಲ ಬಂದು ಹೋಗುತ್ತಿದ್ದ ಕಿಷನ್ ಪಟ್ನಾಯಕರನ್ನು ನೋಡಿದಾಗ. ಕಾಲ ಬದಲಾಗಿಲ್ಲ. ಅವರನ್ನು, ಅವರ ವಿಚಾರಗಳನ್ನು

ನಮ್ಮ ವಿಶ್ವವಿದ್ಯಾಲಯಗಳ ಬುದ್ಧಿಜೀವಿಗಳು ತಮ್ಮ ವಿದ್ಯಾರ್ಥಿ ಸಮುದಾಯಕ್ಕಾಗಲೀ, ಸಂಶೋಧಕ ಸಮೂಹಕ್ಕಾಗಲೀ ಪರಿಚಯಿಸುವ ಆಸಕ್ತಿ ತೋರಲಿಲ್ಲ. ಈ ವಿಶ್ವವಿದ್ಯಾಲಯಗಳಲ್ಲಿ ಇಂತಹ ವಿಸ್ತರಣಾ ಕೆಲಸಗಳಿಗೆಂದೇ ಸ್ಥಾಪಿಸಲಾಗಿರುವ ಹಲವು ಅಧ್ಯಯನ ಪೀಠಗಳಿದ್ದರೂ! ಕಿಶನ್ ಪಟ್ನಾಯಕರ ಆಯ್ದ ಹಿಂದಿ ಲೇಖನಗಳ ಕನ್ನಡ ಅನುವಾದ ಸಂಗ್ರಹ 'ಪ್ರತಿಚಿಂತನೆ'ಯನ್ನು ಪಟ್ಟಾಗಿ ಕೂತು ಮತ್ತೊಮ್ಮೆ ಓದತೊಡಗಿದ ಸಮಯದಲ್ಲಿ ಈ ಎಲ್ಲ ಆಲೋಚನೆಗಳು ನನ್ನ ಮನಸ್ಸಿನಲ್ಲಿ ಹಾದು ಹೋದವು. ಲೋಹಿಯಾ, ಗಾಂಧಿ ನಂತರ ಭಾರತ ಕಂಡ ಅತ್ಯಂತ ಉಜ್ವಲ ಚಿಂತಕ ಎಂದು ಬಲ್ಲವರು ಹೇಳುವುದುಂಟು. ಬಹುಶಃ ಕಿಷನ್, ಲೋಹಿಯಾ ನಂತರದ ಬಹು ಮುಖ್ಯ ಚಿಂತಕರಲ್ಲೊಬ್ಬರು ಎಂಬ ಭಾವನೆ ಈ ಪುಸ್ತಕವನ್ನು ಓದಿದ ಯಾರಲ್ಲಾದರೂ ಮೂಡಿದರೆ ಆಶ್ಚರ್ಯವಿಲ್ಲ.

ಕಳೆದ ಮುವ್ವತ್ತು ವರ್ಷಗಳಲ್ಲಿ ಕಿಷನ್ ಬರೆದ ಸುಮಾರು ೪೫ ಲೇಖನಗಳನ್ನು ಹಸನ್ ನಯೀಂ ಸುರಕೋಡರು ಇಲ್ಲಿ ಕನ್ನಡಕ್ಕೆ ಅನುವಾದಿಸಿ ನೀಡಿದ್ದಾರೆ. ಲೋಹಿಯಾ ಪ್ರಕಾಶನದ ಚನ್ನಬಸವಣ್ಣ ಇದನ್ನು ಪ್ರಕಟಿಸಿದ್ದಾರೆ. ಈ ಇಬ್ಬರನ್ನೂ ಕನ್ನಡ ವಿಚಾರವಂತ ಜನತೆ ಹೃತ್ಪೂರ್ವಕವಾಗಿ ಅಭಿನಂದಿಸಬೇಕಿದೆ. ಏಕೆಂದರೆ, ಕನ್ನಡ ವಿಚಾರಲೋಕಕ್ಕೆ ಸಮಾಜವಾದಿ ರಾಜಕೀಯ ಚಿಂತನೆಯ ವಿವಿಧ ಮಗ್ಗಲುಗಳು ಹೊಸದೇನಲ್ಲವಾದರೂ, ಇಲ್ಲಿನ ಲೇಖನಗಳಲ್ಲಿ ಅವುಗಳಿಗೆ ಒದಗಿರುವ ಹೊಸ ಆಯಾಮ ಮತ್ತು ತೀವ್ರತೆಗಳು ಬೆರಗನ್ನುಂಟುಮಾಡುವಂತಹವು. 'ವಿಕಲ್ಪಹೀನ್ ನಹೀಂ ದುನಿಯಾ' ಎಂಬ ಮೂಲ ಹಿಂದಿ ಲೇಖನಗಳ ಸಂಗ್ರಹದ ಶೀರ್ಷಿಕೆಯೇ ಸೂಚಿಸುವಂತೆ, ಕಿಷನ್ ಈ ಲೇಖನಗಳಲ್ಲಿ ಆಧುನಿಕ ನಾಗರೀಕತೆಯನ್ನು ಗಾಂಧಿ, ಮಾರ್ಕ್ಸ್ ಮತ್ತು ಲೋಹಿಯಾ ಅವರ ವಿಚಾರಗಳ ನೆಲೆಯಿಂದ ನೋಡುತ್ತಲೇ, ವಿವರಗಳಲ್ಲಿ ಇಂದಿಗೆ ಅನ್ವಯಿಸಿದಂತೆ ಅವುಗಳ ಮಿತಿಗಳನ್ನೂ ಗುರುತಿಸಿ ವಿಸ್ತರಿಸುವಲ್ಲಿ ತೋರುವ ಪ್ರತಿಭೆ ಉಜ್ವಲವೆನಿಸುವಂತಿದೆ. ವಿಶೇಷವಾಗಿ ಗಾಂಧೀಜಿಯನ್ನು ವಿಮರ್ಶೆಗೆ ಗುರಿ ಮಾಡುವ ಅವರ ವಿಶಿಷ್ಟ ಶೈಲಿ. ಇದಕ್ಕೊಂದು ಸಣ್ಣ ಉದಾಹರಣೆ, ಕುತೂಹಲಕಾರಿ ಶೀರ್ಷಿಕೆಯ 'ಗಾಂಧಿಯ ಡಂಭಾಚಾರ' ಎಂಬ ಲೇಖನ.

ಮುಖ್ಯವಾಗಿ 'ನಾಗರೀಕತೆಯ ಬಿಕ್ಕಟ್ಟು', 'ಗಾಂಧಿಯ ಮರ್ಮ', 'ಬುದ್ಧಿಜೀವಿ, ಪತ್ರಿಕೋದ್ಯಮ ಹಾಗೂ ಪ್ರತಿಕ್ರಾಂತಿ' ಮತ್ತು 'ಜಾತ್ಯತೀತತೆ ಹಾಗೂ ಅದರ ಸೋಗು' ಎಂಬ ನಾಲ್ಕು ವಿಭಾಗಗಳಲ್ಲಿ ವಿಂಗಡಿತವಾಗಿರುವ ಇಲ್ಲಿನ ಲೇಖನಗಳಲ್ಲಿ ಕಿಷನ್ ತಮ್ಮ ಗುರು ಲೋಹಿಯಾ ಮತ್ತು ಅವರ ಗುರು ಗಾಂಧಿಯವರ ಚಿಂತನೆಗಳನ್ನು ಅಪ್ರಸ್ತುತಗೊಳಿಸುವಂತಹ ರಾಜಕೀಯ ವಾತಾವರಣ ನಿರ್ಮಾಣವಾದ ಬಗೆ ಮತ್ತು ಈ ಇಂತಹ ಸಂದರ್ಭದಲ್ಲಿ ಸಮಾಜವಾದಿಗಳೆನಿಸಿಕೊಂಡವರು ಕಂಡುಕೊಳ್ಳಬೇಕಾದ ಆಲೋಚನೆಗಳ ಹೊಸ ದಿಕ್ಕುಗಳನ್ನು ಕುರಿತು ಅಪೂರ್ವವೆನಿಸುವ ಒಳನೋಟಗಳೊಂದಿಗೆ ಬರೆಯುತ್ತಾರೆ. ನಮ್ಮ ಪ್ರಸಿದ್ಧ ವಿದ್ವಾಂಸರು ತಮ್ಮ ವರ್ಣ ಮತ್ತು ವರ್ಗ ಹಿನ್ನೆಲೆಗಳೇ ಕಾರಣವಾಗಿ ಈವರೆಗೆ ಹೆಚ್ಚು ಗಮನ ನೀಡದಿದ್ದ ಚರಿತ್ರೆಯ ಹಲವು ಸಂಗತಿಗಳನ್ನು, ವಿವರಗಳನ್ನು ಮುನ್ನೆಲೆಗೆ ತಂದುಕೊಂಡು

ಅವರು ಈ ಲೇಖನಗಳನ್ನು ಎಷ್ಟು ತೀಕ್ಷ್ಣವಾಗಿ ಬರೆದಿದ್ದಾರೆಂದರೆ, ಓದುವ ನಾವು ನಮ್ಮ ಬೌದ್ಧಿಕ ಒಳಗನ್ನು ಒಮ್ಮೆ ಮುಟ್ಟಿ ನೋಡಿಕೊಳ್ಳುವಂತಾಗುತ್ತದೆ. 'ಗಾಂಧಿಯ ಭಾರತ ಬಿಟ್ಟು ತೊಲಗಿ ಆಂದೋಲನ' ಎಂಬ ಲೇಖನ ಇದಕ್ಕೊಂದು ಉದಾಹರಣೆ.

'ನಾವು ಸಮರ್ಥಿಸುವಂತಹ ಸಾಮಾಜಿಕ ಬದಲಾವಣೆ ಹಾಗೂ ನಾವು ಪ್ರೋತ್ಸಾಹಿಸುವಂತಹ ನೀತಿಗಳನ್ನು ಕಡೆಗೂ ಪರೀಕ್ಷಿಸಬೇಕಾದರೆ, ಇವುಗಳಿಂದ ನೈತಿಕತೆ ವೃದ್ಧಿಸುತ್ತದೆಯೇ, ಅಸಮಾನತೆಗಳು ತಗ್ಗುತ್ತವೆಯೇ ಎನ್ನುವುದೇ ಒರೆಗಲ್ಲು' ಎಂಬ ಸ್ಪಷ್ಟ ಮತ್ತು ದೃಢನಂಬಿಕೆಯಿಂದ ಜಾಗತೀಕರಣಕ್ಕೆ ಪರ್ಯಾಯವಾಗಿ ಹೊಸ ಹದದ ರಾಜಕೀಯ ಚಿಂತನೆಯನ್ನು ಅನ್ವೇಷಿಸ ಹೊರಟಂತಿರುವ ಕಿಷನ್, ಇದಕ್ಕೆ ಅಗತ್ಯವಾದ ಗಂಭೀರ ಚರ್ಚೆಗಳ ವಾತಾವರಣವನ್ನೇ ತಮ್ಮ ರೋಚಕ 'ಮಾತಿನ ಪ್ರದರ್ಶನ'ಗಳ ಮೂಲಕ ಇಲ್ಲವಾಗಿಸುತ್ತಿರುವ ನವ ಮಾಧ್ಯಮಗಳು ಮತ್ತು ಅವುಗಳನ್ನು ಪೋಷಿಸುತ್ತಿರುವ ನವ ಬುದ್ಧಿಜೀವಿಗಳ ನಡುವಣ ರಾಜಕೀಯ ಜಾಲವನ್ನು ತಮ್ಮ ಲೇಖನಗಳಲ್ಲಿ ಸೂಕ್ಷ್ಮ ಪರಿಶೀಲನೆಗೆ ಒಡ್ಡುತ್ತಾರೆ. ಆ ಮೂಲಕ ಜಾಗತೀಕರಣದ ಶಕ್ತಿಗಳು ಹುಟ್ಟಿಹಾಕಿರುವ ಹೊಸ ಬೌದ್ಧಿಕತೆಯ ಹುಸಿತನವನ್ನೂ ಬಯಲುಗೊಳಿಸುತ್ತಾರೆ.

ಹೀಗೆ ಒಟ್ಟಾರೆ ಓರ್ವ ಶ್ರೇಷ್ಠ ಸಮಾಜವಾದಿಯೊಬ್ಬನ ಆವೃತ ಜೀವನ ದೃಷ್ಟಿಯನ್ನು ಅದರೆಲ್ಲ ತಾತ್ವಿಕ ಸೌಂದರ್ಯದೊಂದಿಗೆ ಅನಾವರಣಗೊಳಿಸುವ ಈ ಪುಸ್ತಕದ ಅನುವಾದ ಅಲ್ಲಲ್ಲಿ ತೊಂದರೆ ಕೊಡುವುದೂ ನಿಜ. ಆದರೆ ಇದು ಪುಸ್ತಕದ ಒಟ್ಟಾರೆ ಬೌದ್ಧಿಕ ಘನತೆಯನ್ನು ಅರಿಯುವಲ್ಲಿ ಅಡ್ಡಿಯಾಗಲಾರದು. ಈ ಪುಸ್ತಕ ಹೊರಬಂದು ಎರಡು ವರ್ಷಗಳಾದರೂ ಈ ಪುಸ್ತಕದ ಬಗ್ಗೆ ಕನ್ನಡ ಬೌದ್ಧಿಕ ಲೋಕದಲ್ಲಿ ಎಲ್ಲೂ ಸೊಲ್ಲೇ ಇಲ್ಲ ಎಂಬುದು ಏನನ್ನು ಸೂಚಿಸುತ್ತದೆ ಎಂಬ ಪ್ರಶ್ನೆಯನ್ನು ಇಲ್ಲಿ ಕೇಳುವುದು ಅಪ್ರಸ್ತುತವಾಗಲಾರದು.

('ನವ ಮಾನವ ಮಾಸಿಕ', ನವೆಂಬರ್– ೨೦೧೧ರಲ್ಲಿ ಪ್ರಕಟ)

೩. ವಿಶಿಷ್ಟ ಸಾಂಸ್ಕೃತಿಕ– ರಾಜಕೀಯ ನೋಟದ ಅಂಕಣ ಬರಹಗಳು

ಹುಡುಕಾಟ ಲೇ. **ಎನ್.ಎಸ್.ಶಂಕರ್** ಪ್ರ: **ಪ್ರೆಸ್ ಕ್ಲಬ್ ಪ್ರಕಾಶನ,** ಬೆಂಗಳೂರು ಪು: **೩೩೦+vi** ಬೆಲೆ: **ರೂ. ೨೦೦/–**

ಎನ್.ಎಸ್. ಶಂಕರ್ ನಮ್ಮ ತಲೆಮಾರಿನ ಬಹುಮುಖ ಪ್ರತಿಭೆಗಳಲೊಬ್ಬರು. ಆದರೆ ಇತರ ಇಂತಹ ಬಹುಪಾಲು ಪ್ರತಿಭೆಗಳಂತೆ ಸಾರ್ವಜನಿಕವಾಗಿ ಗದ್ದಲ ಮಾಡದೆ ಸದಾ ಸಾರ್ವಜನಿಕ ಜೀವನದ ಹಿನ್ನೆಲೆಯಲ್ಲಿದ್ದುಕೊಂಡೇ ಅದಕ್ಕೆ ತಮ್ಮ ಪ್ರತಿಭೆ, ಜಾಣ್ಮೆ ಹಾಗೂ ವಿವೇಕಗಳ ಕೊಡುಗೆ ನೀಡುತ್ತಿರುವವರು. ಅವರ 'ಹುಡುಕಾಟ' ಎಂಬ ಈ ಅಂಕಣ

ಬರಹಗಳ ಸಂಕಲನವನ್ನು ಅವರು ಸಮಕಾಲೀನ ಬರಹಗಳು ಎಂದು ಕರೆದುಕೊಂಡಿದ್ದಾರೆ. ಅದಕ್ಕೆ ತಕ್ಕಂತೆ ಇಲ್ಲಿನ ಸುಮಾರು ನಲವತ್ತೈದು ಬರಹಗಳು ಕಳೆದ ಐದು ವರ್ಷಗಳಲ್ಲಿನ ಸಾರ್ವಜನಿಕ ವಿದ್ಯಾಮಾನಗಳಿಗೆ ಬರೆದ ವ್ಯಾಖ್ಯಾನಗಳಂತಿವೆ.

ಶಂಕರ್ ಅವರ ಬಹುಮುಖ ಆಸಕ್ತಿಗಳಿಗೆ ತಕ್ಕಂತೆ ಈ ಬರಹಗಳು ರಾಜಕಾರಣ, ಸಾಹಿತ್ಯ, ಸಿನಿಮಾ, ಚಳುವಳಿ, ತಾತ್ವಿಕ ದರ್ಶನ ಇತ್ಯಾದಿ ಕ್ಷೇತ್ರಗಳಲ್ಲಿ ಹರಡಿಕೊಂಡಿವೆ. ತಾವು ಮೆಚ್ಚಿ ತಮ್ಮ ನೋಟದ ತಾತ್ವಿಕತೆಯಾಗಿ ಒಪ್ಪಿಕೊಂಡಂತೆ ಕಾಣುವ ಲೋಹಿಯಾ ತತ್ವಚಿಂತನೆಯ ಬೆಳಕಲ್ಲಿ ಅವರು ತಮ್ಮ ಸುತ್ತಲಿನ ವಿದ್ಯಮಾನಗಳನ್ನು ಗ್ರಹಿಸಿ ವಿಶ್ಲೇಷಣೆಗಳಿಗೆ ಒಡ್ಡುತ್ತಾರೆ. ಲೋಹಿಯಾ ಎಂದ ಮೇಲೆ ಅಲ್ಲಿ ಗಾಂಧಿ ಮತ್ತು ಅಂಬೇಡ್ಕರ್ ಇರಲೇಬೇಕಲ್ಲ! ಎಷ್ಟಾದರೂ ಶಂಕರ್ ಸ್ವಾತಂತ್ರ್ಯ ಹೋರಾಟಗಾರನೊಬ್ಬನ ಮಗ ಹಾಗೂ ಕರ್ನಾಟಕ ಕಂಡ ಎರಡು ಮಹತ್ವದ ಚಳುವಳಿಗಳೆನಿಸಿದ ದಲಿತ ಮತ್ತು ರೈತ ಚಳುವಳಿಗಳ ಒಡನಾಡಿ. ಹಾಗಾಗಿ ಇಲ್ಲಿನ ಬಹಳಷ್ಟು ಬರಹಗಳಿಗೆ ತುರ್ತು, ತೀವ್ರತೆ ಮತ್ತು ಜೀವಂತಿಕೆಗಳು ತಾವಾಗಿ ಒದಗಿ ಬಂದಿವೆ.

ಭೈರಪ್ಪನವರ 'ಅನಾವರಣ' ಹಾಗೂ ದಲಿತ– ರೈತ ಚಳುವಳಿಗಳ 'ಅವಸಾನ' ಕುರಿತ ಬರಹಗಳನ್ನು ಬಿಟ್ಟರೆ ಇಲ್ಲಿರುವ ಬಹುಪಾಲು ಬರಹಗಳು 'ಉಷಾಕಿರಣ' ಎಂಬ ವಾರಪತ್ರಿಕೆಗೆ ಬರೆದ ಕಿರು ಅಂಕಣಗಳು; ಒಂದೆರಡು, ಧಾರಾವಾಹಿಗಳಾಗಿ ಸ್ವಲ್ಪ ಅತಿಯೆನಿಸುವಷ್ಟು ಉದ್ದವಿದ್ದರೂ. ಹಾಗಾಗಿ ಇಲ್ಲಿ 'ತಲಸ್ಪರ್ಶಿ' ಎನ್ನಬಹುದಾದ ವಿಶ್ಲೇಷಣೆಗಳು ಕಡಿಮೆ. ಆದರೆ ಒಂದು ವಿದ್ಯಮಾನದ ಕೇಂದ್ರವನ್ನು ತಮ್ಮದೇ ವಿಶಿಷ್ಟ ಸಾಂಸ್ಕೃತಿಕ– ರಾಜಕೀಯ ನೋಟದ ಮೂಲಕ ಹಿಡಿದಿಡುವ ಪ್ರತಿಭೆಯನ್ನು ಈ ಎಲ್ಲ ಅಂಕಣಗಳಲ್ಲಿಯೂ ಕಾಣಬಹುದು. 'ಗೋರಿ ಸೀಳುವ ತವಕ', 'ಪರ್ಯಾಯ ರಾಜಕಾರಣ', 'ತತ್ವದ ಪರದೆಗಳು', 'ಬಂದೂಕಿನ ಭಾಷೆ', 'ತಲಪರಿಗೆ', 'ಕೂಚಂಭಟ್ಟರ ಪುರಾಣ', 'ಗಾಂಧಿಯೋ ಅಂಬೇಡ್ಕರರೋ?', 'ರಾಜ್ ಕೊಟ್ಟದ್ದೇನು?' ಇತ್ಯಾದಿಗಳು ಈ ಪ್ರತಿಭೆಗೆ ಸಾಕ್ಷಿಯಂತಿವೆ. ಹಾಗೇ ಇಂದಿರಾ, ಅರಸು ಮತ್ತು ಎರಡು ಚುನಾವಣೆಗಳನ್ನು ಕುರಿತ ವಿಶ್ಲೇಷಣೆಗಳು, ಬೆಂಗಳೂರಿನ ಐ.ಟಿ. ಉದ್ಯಮ ಹಾಗೂ ಹೆಗಡೆ ರಾಜಕಾರಣ ಕುರಿತ ಬರಹಗಳು, ಲೋಹಿಯಾವಾದಿ ಸಾಮಾಜಿಕ ನ್ಯಾಯದ ರಾಜಕಾರಣ ಇನ್ನೂ ಕೆಲವರಲ್ಲಾದರೂ ತನ್ನ ಸಮತೋಲನವನ್ನು ಉಳಿಸಿಕೊಂಡಿರುವುದರ ಬಗ್ಗೆ ಭರವಸೆ ನೀಡುತ್ತದೆ.

'ಸಾವಿನ ಹೊಸ್ತಿಲಲ್ಲಿ', 'ನಿಶ್ಶಬ್ದದ ಭೀತಿ', 'ಒಡೆದುಬಿದ್ದ ಕೊಳಲ ನಾದ...' ಮತ್ತು ಮಾಂಟೋ ಕುರಿತ ಬರಹ ಶಂಕರ್ ಅವರ ತೀವ್ರ ಸಂವೇದನೆಯ ಸೂಕ್ಷ್ಮಗಳು ಭಾಷೆಯಲ್ಲಿ ಒಡಮೂಡುವ ಪರಿ ಅವರನ್ನೊಬ್ಬ ಸೃಜನಶೀಲ ಲೇಖಕನ್ನಾಗಿಯೂ ಪ್ರಸ್ತುಪಡಿಸುವಂತಿವೆ. ನಮ್ಮ ವಿಶಿಷ್ಟ ಸಿನಿಮಾ ನಿರ್ದೇಶಕರೂ ಆದ ಶಂಕರ್ ಇಲ್ಲಿ ಸಿನಿಮಾ ಲೋಕ ಮತ್ತು ಪುಸ್ತಕಗಳನ್ನು ಕುರಿತು ಬರೆದಿರುವ ಬರಹಗಳು ಅವರ ಸಾಂಸ್ಕೃತಿಕ ಪ್ರಜ್ಞೆಯ ಸಮಗ್ರತೆಯನ್ನು ಪರಿಚಯ ಮಾಡಿಕೊಡುವಂತಿವೆ. ಆದರೆ ದಲಿತ– ರೈತ ಚಳುವಳಿ ಕುರಿತ ಮಹತ್ವಾಕಾಂಕೆಯ

ಬರಹ ಅದರ ಮಹತ್ವಾಕಾಂಕ್ಷೆಯ ಭಾರದಿಂದಲೇ ನಲುಗಿದಂತಿದೆ. ಅಲ್ಲಿ ಇನ್ನೂ ಆಳವಾದ ಚಾರಿತ್ರಿಕ ನೋಟ ಮತ್ತು ಅಗತ್ಯ ಸಹಾನುಭೂತಿಯ ಕೊರತೆ ಕಾಣುತ್ತದೆ.

ಪ್ರತಿ ವಾರ ಓದುಗರ ಕುತೂಹಲ ಉಳಿಸಿಕೊಂಡು ಬರೆಯುವುದು ಪ್ರಯಾಸದ ಕೆಲಸವೇ ಸರಿ. ಆ ಪ್ರಯಾಸ ಇಲ್ಲಿ ಕೆಲವು ಲೇಖನಗಳಲ್ಲೂ ಕಾಣಸಿಗುತ್ತದೆ. ಉದಾ: 'ಆ ಕಮಲ್ ಎಲ್ಲಿ?, 'ಒಂದು ತಾರ್ಕಿಕ ಕಥೆ' ಇತ್ಯಾದಿ.., ಅಲ್ಲದೆ ಕುತೂಹಲ ಉಳಿಸಿಕೊಳ್ಳಲು, ಹೇಳಬೇಕಾದುದನ್ನು ಆಕರ್ಷಕವಾಗಿ ಕಥನ ರೂಪದಲ್ಲಿ ಹೇಳುವ ಜನಪ್ರಿಯ ಪತ್ರಿಕಾ ಬರಹದ ನಾಟಕೀಯ ಶೈಲಿ ಇಲ್ಲಿ ಹಲವೆಡೆ ವಿಷಯದ ಗಹನತೆ ಮತ್ತು ಪರಿಣಾಮಶೀಲತೆಯನ್ನು ಭಂಗಗೊಳಿಸಿವೆ ಎಂದೂ ಅನ್ನಿಸದಿರದು.

('ನವ ಮಾನವ ಮಾಸಿಕ', ಫೆಬ್ರುವರಿ– ೨೦೧೨ರಲ್ಲಿ ಪ್ರಕಟ)

✧✧✧

೩೫. ನಾನೊಂದು ಕಣ್ಣಿನ ಚಿಕಿತ್ಸೆ ಮಾಡಿಸಿಕೊಂಡೆ...:

ನನ್ನ ಕಣ್ಣಿನ ಶಸ್ತ್ರ ಚಿಕಿತ್ಸಕರಿಗೊಂದು ಪತ್ರ!

ದಿನಾಂಕ: ೧೮.೪.೨೦೧೧

ಪ್ರಿಯ ಡಾ॥ ______ ಅವರಲ್ಲಿ,

ವಂದನೆಗಳು. ನನ್ನ ನೆನಪಿದೆ ಎಂದು ಭಾವಿಸುತ್ತೇನೆ. ನೀವು ೨.೩.೨೦೧೧ರಂದು ತಮ್ಮ '– ಕಣ್ಣಿನ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ'ದಲ್ಲಿ ನನ್ನ ಬಲಗಣ್ಣಿನ ಶಸ್ತ್ರ ಚಿಕಿತ್ಸೆ ಮಾಡಿದಿರಿ. ಬಹು ಕಾಲದ ಸಕ್ಕರೆ ಕಾಯಿಲೆಯಿಂದ ಉಂಟಾದ *ರೆಟಿನೋಪತಿ* ಮತ್ತು ಅದಕ್ಕಾಗಿ ಶಿವಮೊಗ್ಗದ ಪ್ರಸಿದ್ಧ ನೇತ್ರ ತಜ್ಞರೊಬ್ಬರು ಎರಡು ಬಾರಿ ಮಾಡಿದ *ಲೇಸರ್* ಚಿಕಿತ್ಸೆಯ ನಂತರ ಕಂಡುಬಂದಿದ್ದ ತೀವ್ರ ದೃಷ್ಟಿದೋಷಕ್ಕಾಗಿ ನೀವು ಈ ವಿಶೇಷ ಶಸ್ತ್ರಚಿಕಿತ್ಸೆ ಮಾಡಿದಿರಿ. ಆದರೆ ಅದು ೮.೪.೨೦೧೧ ರಂದು ನಡೆಸಿದ ಪರೀಕ್ಷೆಯ ನಂತರ ನೀವೇ ಹೇಳಿದಂತೆ ಫಲ ನೀಡಿಲ್ಲ. ಅಂದರೆ, ಶಿವಮೊಗ್ಗದ ನೇತ್ರ ತಜ್ಞರು *ಲೇಸರ್* ಚಿಕಿತ್ಸೆ ನಡೆಸುವ ಮುನ್ನ ಸಾಕಷ್ಟು ಪ್ರಮಾಣದಲ್ಲಿಯೇ ಇದ್ದ ದೃಷ್ಟಿ ಸ್ಪಷ್ಟತೆಯೂ ಈಗ ನನಗೆ ಮರಳಿ ಬಂದಿಲ್ಲ. ಇದಕ್ಕೆ, ನನ್ನ ಅಕ್ಷಿಪಟಲಕ್ಕೆ ಅಗತ್ಯ ರಕ್ತ ಪೂರೈಕೆ ಆಗುತ್ತಿಲ್ಲದಿರುವುದೇ ಕಾರಣ ಎಂದು ನೀವು ಸ್ಪಷ್ಟನೆ ನೀಡಿರುವಿರಿ.

ನೀವು ನಮ್ಮ ನಡುವಿನ ಕೆಲವೇ ಅತ್ಯುತ್ತಮ ಹಾಗೂ ವಿಶೇಷ ತಾಂತ್ರಿಕ ಪರಿಣತಿಯುಳ್ಳ ನೇತ್ರ ತಜ್ಞರೆಂದು ಹೇಳಿದ ನನ್ನ ಹತ್ತಿರದ ಬಂಧು ಡಾ॥ ಸಿ.ಆರ್. ಚಂದ್ರಶೇಖರ್ ಅವರ ಸಲಹೆಯ ಮೇರೆಗೆ, ಅವರೊಂದಿಗೇ ನಿಮ್ಮ ಬಳಿ ಬಂದೆವು. ನೀವೂ ತಮ್ಮ ಹವಾ ನಿಯಂತ್ರಿತ ಪರೀಕ್ಷಾ ಕೊಠಡಿಯಲ್ಲಿ (ನಂತರದ ಪರೀಕ್ಷೆಗಳಿಗೆ ಬಂದಾಗ ಏಕೋ ಈ ಹವಾ ನಿಯಂತ್ರಣ ವ್ಯವಸ್ಥೆ ಕೆಲಸ ಮಾಡುತ್ತಿರಲಿಲ್ಲ!) ಸಾಕಷ್ಟು ಆಸ್ಥೆಯಿಂದ ನನ್ನ ಕಣ್ಣುಗಳನ್ನು ಹಲವು ರೀತಿಯ ಪರೀಕ್ಷೆಗಳಿಗೆ ಒಳಪಡಿಸಿ, ಈ ವಿಶೇಷ ಶಸ್ತ್ರ ಚಿಕಿತ್ಸೆಯ ಅಗತ್ಯ ಹೇಳಿದಿರಿ. ಹಾಗೇ ಶೇ.೮೫ರಷ್ಟು ಪ್ರಕರಣಗಳಲ್ಲಿ ಇದು ಯಶಸ್ವಿಯಾಗಿರುವುದಾಗಿಯೂ ತಿಳಿಸಿದಿರಿ. ನೀವು ಮಾರನೇ ದಿನವೇ ಶಸ್ತ್ರಚಿಕಿತ್ಸೆ ಮಾಡುವುದಾಗಿ ಹೇಳಿದರೂ, ನಾನು ಅದಕ್ಕೆ ಸಿದ್ಧನಾಗಿ ಬಂದಿರಲಿಲ್ಲವಾದ್ದರಿಂದ ಶಸ್ತ್ರಚಿಕಿತ್ಸೆಯನ್ನು ಒಂದು ವಾರ ಮುಂದೂಡಲು ಕೋರಿದೆ.

ನಿಮ್ಮನ್ನು ಭೇಟಿ ಮಾಡಿದ ನಂತರ ನನ್ನನ್ನು ಕರೆದೊಯ್ದು ನಿಮ್ಮ ಆಸ್ಪತ್ರೆಯ 'ಸಲಹಾ' ವಿಭಾಗದವರು 'ಎಲ್ಲ' ಲೆಕ್ಕ ಹಾಕಿ ಈ ಶಸ್ತ್ರಚಿಕಿತ್ಸೆಯ ಒಟ್ಟು ಖರ್ಚು ಅರವತ್ತು

ಸಾವಿರ ರೂಪಾಯಿಗಳೆಂದು ಹೇಳಿದಾಗ ನಾನು ಗಾಬರಿಗೊಂಡೆ. ಶೇ. ೧೫ರ ವೈಫಲ್ಯದ ಸಾಧ್ಯತೆಯೂ ಇರುವ ಈ ಶಸ್ತ್ರಚಿಕಿತ್ಸೆಯ ಮೇಲೆ ನಿವೃತ್ತ ಸರ್ಕಾರಿ ನೌಕರನಾದ ನಾನು ಅಷ್ಟೊಂದು ದೊಡ್ಡ ಮೊತ್ತದ ಹಣವನ್ನು ಖರ್ಚು ಮಾಡುವುದು ಸಾಧುವೇ ಎಂಬ ಬಗ್ಗೆ ನಿಮ್ಮೊಂದಿಗೆ ಮಾತಾಡಿ ಇನ್ನಷ್ಟು ವಿವರ ಪಡೆಯಲು ಕೂಡಲೇ ಯತ್ನಿಸಿದೆ. ಆದರೆ ನೀವು 'ಬ್ಯುಸಿ'ಯಾಗಿರುವುದರಿಂದ ಮಾತಾಡಲು ಸದ್ಯಕ್ಕೆ ಸಾಧ್ಯವಿಲ್ಲವೆಂದು ನಿಮ್ಮ 'ಸಲಹಾ' ವಿಭಾಗದ ಸಹಾಯಕರು ತಿಳಿಸಿದರು! ನಂತರ ಡಾ॥ ಸಿ.ಆರ್. ಚಂದ್ರಶೇಖರ್, ನಿಮ್ಮ ಶಸ್ತ್ರಚಿಕಿತ್ಸಾ ಪರಿಣತಿಯ ಬಗ್ಗೆ ಒಳ್ಳೆಯ ಮಾತುಗಳನ್ನಾಡಿ ಅಳುಕುವ ಅಗತ್ಯವಿಲ್ಲ ಎಂದು ಹೇಳಿದಾಗ, ಓದು- ಬರಹಗಳನ್ನೇ ಬದುಕಿನ ಮುಖ್ಯ ಚಟುವಟಿಕೆಗಳನ್ನಾಗಿ ಹೊಂದಿರುವ ನಾನು ಆದದ್ದು ಆಗಲಿ ಎಂದು ಶಸ್ತ್ರಚಿಕಿತ್ಸೆಗೆ ನಿರ್ಧರಿಸಿದೆ.

ಶಸ್ತ್ರ ಚಿಕಿತ್ಸೆ ೨ರಂದು 'ಯಶಸ್ವಿ'ಯಾಗಿ ನಡೆದು, ಒಂದರೆಡು ದಿನಗಳ ನಿಮ್ಮ ಸಿಬ್ಬಂದಿಯ ಚಿಕಿತ್ಸೋತ್ತರ ಉಪಚಾರಗಳ ನಂತರ ನಿಮ್ಮ ಗೈರು ಹಾಜರಿಯಲ್ಲಿ ಆಸ್ಪತ್ರೆಯ ಇತರ ವೈದ್ಯರು ನನ್ನನ್ನು ಪರೀಕ್ಷಿಸಿ ನನಗೆ ಕಪ್ಪು ಕನ್ನಡಕ ಹಾಕಿ ಊರಿಗೆ ಕಳಿಸಿ ಮತ್ತೆ ನಿಗದಿತ ದಿನಾಂಕದಂದು ಬರಲು ತಿಳಿಸಿದರು. ಅದರಂತೆ ೮.೪.೨೦೧೧ರಂದು ಬಂದಾಗ ನೀವು ಪರೀಕ್ಷೆ ಮಾಡಿ ಖಚಿತಪಡಿಸಿದಂತೆ ನಮ್ಮ ಮತ್ತು ನಿಮ್ಮ ನಿರೀಕ್ಷೆಗೆ ವಿರುದ್ಧವಾಗಿ ಶಸ್ತ್ರಚಿಕಿತ್ಸೆ ತನ್ನ ಪರಿಣಾಮವನ್ನು ತೋರುವಲ್ಲಿ ವಿಫಲವಾಗಿದೆ. ಅಂದು ನೀವು ಅದನ್ನು ಹೇಳಿದಾಗ ನನಗೆ ಮತ್ತು ನನ್ನ ಪತ್ನಿಗೆ ಆದ ಆಘಾತ, ನಿರಾಸೆ ಮತ್ತು ಬೇಸರವನ್ನು ನಾವು ತೋರ್ಪಡಿಸದಿದ್ದಲ್ಲಿ, ಅದಕ್ಕೆ ಕಾರಣ; ನಿಮ್ಮ ಬಗ್ಗೆ ನಾವು ಬೆಳೆಸಿಕೊಂಡಿದ್ದ ವಿಶ್ವಾಸ ಮತ್ತು ಗೌರವ ಮಾತ್ರ. ನೀವು ಅಂದು ನಮಗಾದ ಈ ಆಘಾತ, ನಿರಾಸೆ ಮತ್ತು ಬೇಸರಗಳನ್ನು ಅರ್ಥ ಮಾಡಿಕೊಂಡವರಂತೆ, ನನ್ನ ಎಡಗಣ್ಣಿನ ದೃಷ್ಟಿ ರಕ್ಷಣೆಯ ಬಗ್ಗೆ ಕಾಳಜಿ ತೋರಿದಿರಿ, ಒಳ್ಳೆಯ ಕನ್ನಡಕ ನೀಡುವ ಮಾತಾಡಿದಿರಿ. ನನ್ನ ಪತ್ನಿಯ ಆತಂಕ, ಅಸಮಧಾನಗಳ ನಡುವೆಯೂ ನೀವು ಲೇಸರ್ ಚಿಕಿತ್ಸೆಯ ಸಲಹೇಡಿದಿರಿ. ನಾನು ಒಪ್ಪಿದ ನಂತರ ಎಡಗಣ್ಣಿಗೆ ನೀವೇ ಲೇಸರ್ ಮಾಡಿದಿರಿ. ಸಂತೋಷ. ಅದಕ್ಕಾಗಿ ನಾವು ನಿಮಗೆ ಕೃತಜ್ಞರು.

ಆದರೆ, ಈ ಎಲ್ಲ ಅನುಭವದ ನಂತರ ಸಮಾಜದ ಓರ್ವ ಹಿರಿಯ ಮತ್ತು ಪ್ರಜ್ಞಾವಂತ ಪ್ರಜೆಯಾಗಿ ನನ್ನಲ್ಲಿ ಕೆಲವು ಪ್ರಶ್ನೆಗಳು, ಸಂದೇಹಗಳು ಹಾಗೇ ಉಳಿದು ಹೋಗಿವೆ. ಈ ಪ್ರಶ್ನೆ- ಸಂದೇಹಗಳು ಸಮಂಜಸವೆಂದು ಕಂಡರೆ ವೈದ್ಯಕೀಯ ವೃತ್ತಿಯ ಮೂಲಕ ಪರೋಕ್ಷವಾಗಿಯಾದರೂ ಸಮಾಜ ಸೇವೆಯಲ್ಲಿ ತೊಡಗಿರುವ ನೀವೂ ಈ ಬಗ್ಗೆ ಅಗತ್ಯ ವಿಚಾರ ಮಾಡಬೇಕೆಂಬುದು ನನ್ನ ಕೋರಿಕೆ:

೧. ಶೇ.೮೦- ೮೫ರಷ್ಟು ಮಾತ್ರ (ನಿಜವಾಗಿ ಅದೆಷ್ಟು ಎಂಬುದು ನಮಗೆ ತಿಳಿಯದಾದರೂ!) ಸಫಲತೆಯ ಸಾಧ್ಯತೆಯಿರುವ ಚಿಕಿತ್ಸೆಯನ್ನು (ವೈದ್ಯ)ವಿಜ್ಞಾನದ ಹೆಸರಲ್ಲಿ ಸಾರ್ವತ್ರಿಕವಾಗಿ ಶಿಫಾರ್ಸು ಮಾಡುವುದು ಎಷ್ಟು ಸಾಧು?

೨. ಭಾರತದಂತಹ ಸಾಮಾನ್ಯ ಆರ್ಥಿಕತೆಯ ದೇಶದಲ್ಲಿ ಒಬ್ಬ ರೋಗಿಯಿಂದ ಅರವತ್ತು ಸಾವಿರ ರೂಪಾಯಿಗಳನ್ನು ಖರ್ಚು ಮಾಡಿಸಲು ಮುಂದಾಗುವ ವೈದ್ಯಕೀಯ

ವಿಜ್ಞಾನ, ತಾನು ಆವಿಷ್ಕರಿಸಿರುವ ತಂತ್ರಜ್ಞಾನ ಪೂರ್ಣ ವಿಶ್ವಾಸಾರ್ಹ ಎಂಬುದನ್ನು ಮೊದಲು ಖಚಿತಗೊಳಿಸಿಕೊಳ್ಳಬೇಕಲ್ಲವೇ?

೩. ಇಷ್ಟು ಅತ್ಯಾಧುನಿಕ ಸಾಧನ– ಸಲಕರಣೆ ಹಾಗೂ ತಂತ್ರ– ಕೌಶಲ್ಯಗಳನ್ನು ಸಾಧಿಸಿಕೊಂಡಿರುವ ಈ ಕ್ಷೇತ್ರ ತಾನು ಸಂದೇಹಕ್ಕೆಡೆಯಿಲ್ಲದಂತೆ ಕಾರ್ಯ ನಿರ್ವಹಿಸಲು ಬೇಕಾದ ಜ್ಞಾನ– ತಂತ್ರಜ್ಞಾನವನ್ನೇಕೆ ಪಡೆಯದಾಗಿದೆ? ಉದಾಹರಣೆಗೆ, ನನಗೆ ಮಾಡಿದ ಶಸ್ತ್ರಚಿಕಿತ್ಸೆಯನ್ನು ಮಾಡುವ ಮುನ್ನವೇ, ನನ್ನ ಅಕ್ಷಿಪಟಲಕ್ಕೆ ಅಗತ್ಯ ರಕ್ತ ಪೂರೈಕೆ ಆಗುತ್ತಿದೆ ಎಂದು ಖಚಿತಪಡಿಸಿಕೊಳ್ಳುವ ಜ್ಞಾನ– ತಂತ್ರಜ್ಞಾನವನ್ನೇಕೆ ಪಡೆದಿಲ್ಲ? ಹಾಗೆ ಪಡೆಯದೆ, ಸಾಮಾನ್ಯ ಪ್ರಜೆಯೊಬ್ಬನನ್ನು ಅವನ ಅಸಹಾಯಕ ಸ್ಥಿತಿಯಲ್ಲಿ, ತುಂಬಾ ದೊಡ್ಡ ಪ್ರಮಾಣದಲ್ಲಿ (ಕ್ಷಮಿಸಿ, ನಿಮಗೆ ದೊಡ್ಡ ಪ್ರಮಾಣ ಅನ್ನಿಸದಿರಬಹುದು) ಹಣ ಖರ್ಚು ಮಾಡಲು ಪ್ರೇರೇಪಿಸುವುದು ವೃತ್ತಿ ಸಂಹಿತೆಯ ದೃಷ್ಟಿಯಿಂದಲಾದರೂ ಸರಿ ಎನ್ನಿಸುವುದೇ? ಹೀಗೆ, ಆಧುನಿಕ ವೈದ್ಯಕೀಯ ಕ್ಷೇತ್ರವು, ಶೇ. ೮೦ರ ಯಶಸ್ಸಿನ ಹೆಸರಿನಲ್ಲಿ ನಡೆಸಿರುವುದು ಒಂದರ್ಥದಲ್ಲಿ ಜೂಜಾಟವೇ ಆಗಿದೆಯಲ್ಲವೇ?

೪. ಸ್ವಲ್ಪ ದುಬಾರಿಯೆನ್ನಿಸುವ ಮತ್ತು ಖಚಿತ ಯಶಸ್ಸಿನ ಸಾಧ್ಯತೆ ಇರದ ಚಿಕಿತ್ಸೆಯನ್ನು ಸಲಹೆ ಮಾಡುವ ಸಂದರ್ಭಗಳಲ್ಲಾದರೂ, ರೋಗಿಯ ಎಲ್ಲ ಸಾಧ್ಯ ಪ್ರಶ್ನೆಗಳಿಗೆ ಉತ್ತರ ಕೊಡುವ ವ್ಯವಧಾನ ವೈದ್ಯರಿಗಿರುವಂತಹ ವ್ಯವಸ್ಥೆ ಆಸ್ಪತ್ರೆಗಳಲ್ಲಿರಬೇಕಲ್ಲವೇ? ಸದಾ 'ಬ್ಯುಸಿ'ಯಾಗಿರುವ ವೈದ್ಯರು ಮತ್ತು ಕಟ್ಟುನಿಟ್ಟಾಗಿ ವಿವಿಧ 'ವಿಭಾಗ'ಗಳಲ್ಲಿ ಒಡೆದುಹೋಗಿರುವ ಸೇವಾ ವ್ಯವಸ್ಥೆ, ರೋಗಿಗೆ ಕಿರಿಕಿರಿಯೆನ್ನಿಸುವ ವಾತಾವರಣವನ್ನು ನಿರ್ಮಿಸುವುದಿಲ್ಲವೇ? ಇಂದು ವೈದ್ಯಕೀಯ ಕ್ಷೇತ್ರ ವಿಪುಲವಾಗಿ ಮತ್ತು ಸ್ಪರ್ಧಾತ್ಮಕವಾಗಿ ಬೆಳೆದು ಅದರ ನಿರ್ವಹಣೆಗೆ ಸಾಕಷ್ಟು ಹಣ ಬೇಕಾಗಿದೆ, ನಿಜ. ಆದರೆ ತನ್ನನ್ನು 'ಸೇವೆ'ಯೆಂದೂ ಕರೆದುಕೊಳ್ಳುವ ಅದು, ಲಾಭವೊಂದನ್ನೇ ಉದ್ದೇಶವಾಗುಳ್ಳ ಕಾರ್ಪೋರೇಟ್ ಸಂಸ್ಥೆಗಳ ಆಡಳಿತ ಶೈಲಿಯನ್ನು ಅನುಕರಿಸಬಾರದಲ್ಲವೇ?

೫. ಶಸ್ತ್ರಚಿಕಿತ್ಸೆಯಿಂದ ಪ್ರಯೋಜನವಾಗದ, ದೃಷ್ಟಿಯೇ ಮಂಕಾಗಿರುವ ನನ್ನ ಕಣ್ಣಿಗೆ ಹದಿನೆಂಟು ಸಾವಿರ ರೂಪಾಯಿಗಳ ಬೆಲೆಯ 'ಮಸೂರ'ವನ್ನು ಅಳವಾಡಿಸಲಾಗಿದೆಯಲ್ಲ, ಇದು ಹಾಸ್ಯಾಸ್ಪದವೆನ್ನಿಸುವುದಿಲ್ಲವೇ? ಇದು ಇಂದಿನ ವೈದ್ಯಕೀಯ ಚಿಕಿತ್ಸಾ ಪದ್ಧತಿಯ ಅಸಂಬದ್ಧತೆಯನ್ನು ತೋರಿಸುವುದಲ್ಲವೇ? ೮.೪.೨೦೧೧ರಂದು ನೀವು ನನ್ನ ಕಣ್ಣನ್ನು ಪರೀಕ್ಷಿಸಿ. 'Operation is perfect. But vision will not improve.' ಎಂದಾಗ ನನಗೆ ಅಳುವುದೋ ನಗುವುದೋ ಗೊತ್ತಾಗದೆ ಸುಮ್ಮನೆ ವಿಷಣ್ಣನಾಗಿ ಕೂತುಬಿಟ್ಟೆ. 'Operation success; but patient dead' ಎಂಬುದು ಬರೀ ಜನಪ್ರಿಯ ನಗೆಹನಿ ಎಂದು ಭಾವಿಸಿದ್ದ ನನಗೆ, ಅದು ನನ್ನ ಪಾಲಿಗೇ ವಾಸ್ತವ ನಿಜವೂ ಆಗಬಹುದು, ಅದೂ ಅಂತಾರಾಷ್ಟ್ರೀಯ ಪದವಿಗಳ ಸರಮಾಲೆಯನ್ನೇ ಹೊದಿರುವ ಪರಿಣತ ವೈದ್ಯರ ಮೂಲಕ ಎಂಬುದು ನಿಧಾನವಾಗಿ ಅರಿವಾಗತೊಡಗಿದಾಗ ದಿಗ್ಮೂಢನಾಗಿ ಕೂರುವುದರ ಹೊರತಾಗಿ, ನಾನು ಇನ್ನೇನು ಮಾಡಬಲ್ಲೆನಾಗಿದ್ದೆನು?

ನಾನು ಈ ಪ್ರಶ್ನೆಗಳನ್ನು ಖಂಡಿತ ನಿಮ್ಮ ವೈದ್ಯಕೀಯ ಪರಿಣಿತಿ, ಪ್ರಾಮಾಣಿಕತೆ ಮತ್ತು ಸದುದ್ದೇಶಗಳನ್ನು ಸಂದೇಹಿಸಿ ನಿಮ್ಮ ಮುಂದೆ ಇಡುತ್ತಿಲ್ಲ ಎಂಬುದನ್ನು ನೀವು ಅರ್ಥ ಮಾಡಿಕೊಂಡಿರುವಿರಿ ಎಂದು ಭಾವಿಸುವೆ. ಇಂದಿನ ವೈದ್ಯಕೀಯ ಕ್ಷೇತ್ರದ, ಉದ್ಯಮದ ಒಬ್ಬ ಗಣ್ಯ ವ್ಯಕ್ತಿಯಾಗಿ ನೀವು ಈ ಬಗ್ಗೆಯೆಲ್ಲಾ ಆಲೋಚಿಸವುದು ಅಗತ್ಯವೆಂಬ ಕಳಕಳಿಯಿಂದ ಮಾತ್ರ ಸಾಮಾನ್ಯ ಆರ್ಥಿಕ ಹಿನ್ನೆಲೆಯ ರೋಗಿಗಳ ಪರವಾಗಿ ಈ ದೀರ್ಘ ಪತ್ರ ಬರೆದಿರುವೆ. ಇದೆಲ್ಲ ಅನಗತ್ಯ ಎನ್ನಿಸಿದರೆ ಈ ಪತ್ರವನ್ನು ನಿರ್ಲಕ್ಷಿಸಲು ನೀವು ಹೇಗೂ ಸ್ವತಂತ್ರರು.

ವಂದನೆಗಳೊಂದಿಗೆ,

ವಿಶ್ವಾಸದ

(ಡಿ.ಎಸ್..ನಾಗಭೂಷಣ)

ನಂತರ ಬರೆದದ್ದು: ಈ ಮೇಲಿನ ಪತ್ರ ಬರೆದ ನಂತರ ವೈದ್ಯರನ್ನು ಅವರೇ ಆರಂಭಿಸಿದ್ದ ಇನ್ನೊಂದು ಕಣ್ಣಿನ ಲೇಸರ್ ಚಿಕಿತ್ಸೆಗಾಗಿ ಮೊದಲೇ ಅನುಮತಿ ಪಡೆದಿದ್ದ ಸಮಯಕ್ಕ ಭೇಟಿ ಮಾಡಲು ಯತ್ನಿಸಿದಾಗ, ಅವರು ಶಿವಮೊಗ್ಗದಿಂದ ಹೋಗಿದ್ದ ನನ್ನನ್ನು ನಾನು ಪದೇ ಪದೇ ಕೇಳಿಕೊಂಡರೂ ಚಿಕಿತ್ಸೆಯ ನಂತರ ನಾನು ವಾಪಸ್ ಹೋಗಲು ಟಿಕೆಟ್ ತೆಗೆಸಿದ್ದ ರೈಲು ಬೆಂಗಳೂರು ಬಿಟ್ಟು ಹೊರಡುವ ಸಮಯದವರೆಗೂ (ಅವರ ಎಲ್ಲ 'ಗಿರಾಕಿ'ಗಳೂ ಹೋಗುವವರೆಗೆ!) ಕಾಯಿಸಿ, ಸವಿ ಮಾತಾಡಿ; ಮತ್ತೆ ನಿಗದಿತ ಶುಲ್ಕ ಪಡೆದು ಲೇಸರ್ ಮಾಡಿ ಕಳಿಸಿದರು! ನನ್ನ ಪತ್ರ ಅವರನ್ನು ಒಂಚೂರೂ ಪುನರಾಲೋಚನೆಗೆ ಹಚ್ಚಿದಂತೆ ಕಾಣಲಿಲ್ಲ. ಹಾಗೇ ನನ್ನ ಕಣ್ಣಿನ ದೃಷ್ಟಿ ಸುಧಾರಿಸಲೂ ಇಲ್ಲ.

ಈ ಅತ್ಯಾಧುನಿಕ ಆಸ್ಪತ್ರೆ ನಾನು ನೀಡಿದ ೬೦ ಸಾವಿರ ರೂಪಾಯಿಗಳಿಗೆ ನೀಡಿದ್ದು ಒಂದು ತೆಳು ಮಸಕು ಹಳದಿ ಕಾಗದದಲ್ಲಿನ ಬಿಲ್. ಶಸ್ತ್ರ ಚಿಕಿತ್ಸೆಯ ವರದಿ ಮೂರು ಸಾಲುಗಳೂ ಇಲ್ಲ! ಇದೆಲ್ಲ ಯಾವುದಕ್ಕಾಗಿ ಮುನ್ನೆಚ್ಚರಿಕೆ ಎಂದು ಹೇಳಬೇಕಿಲ್ಲ. ಅಷ್ಟೇ ಅಲ್ಲ, ಈ ಆಸ್ಪತ್ರೆಯಲ್ಲಿ ನಿಗದಿತ ಶುಲ್ಕ ನೀಡಿ ಮಾಡಿಸಿಕೊಂಡ ಚಿಕಿತ್ಸಾಪೂರ್ವ ಪರೀಕ್ಷೆಗಳ ವರದಿಗಳನ್ನು ನೀವು ಅಲ್ಲಿಯೇ ಚಿಕಿತ್ಸೆ ಮಾಡಿಸಿಕೊಳ್ಳದಿದ್ದರೆ ನಿಮಗೆ ನೀಡುವುದಿಲ್ಲ!

ಇದೆಲ್ಲ ಆದ ನಂತರ ನಾಟಿ ಔಷಧಿ ತಜ್ಞರೊಬ್ಬರಿಂದ ಕೇವಲ ನೂರು ರೂಪಾಯಿಗಳ ಲೆಕ್ಕದಲ್ಲಿ ಪಡೆದ ಚಿಕಿತ್ಸೆಯಿಂದಾಗಿ ದೃಷ್ಟಿ ದೈನಂದಿನ ವ್ಯವಹಾರ ಸುಗಮವಾಗಿ ನಡೆಯುವಷ್ಟು ಸುಧಾರಿಸಿದೆ! ಆದರೆ ನನ್ನ ಪತ್ರಕ್ಕೆ ಉತ್ತರ ಕೊಡುವುದಾಗಿ ಹೇಳಿದ್ದ ಪರಿಣತ ವೈದ್ಯರು ಒಂದು ಸಾಲನ್ನೂ ಈವರೆಗೆ ಬರೆದಿಲ್ಲ. ಅವರಿಗೆ ತಮ್ಮ ವಿದ್ಯೆ ಬಗ್ಗೆ ಅಷ್ಟು ಅಚಲ ನಂಬಿಕೆ!

(ನವ ಮಾನವ ಮಾಸಿಕದ ಮಾರ್ಚ್ ೯– ೨೦೧೨ರ ಸಂಚಿಕೆಯಲ್ಲಿ 'ಅಭಿವೃದ್ಧಿ ಮೀಮಾಂಸೆ' ಶೀರ್ಷಿಕೆಯಡಿ ಪ್ರಕಟ)

◇◇◇

ಅನುಬಂಧ

೩೭. ಕಡಿದಾಳು ಶಾಮಣ್ಣನವರಿಗೊಂದು ಪತ್ರ

೨೫.೬.೧೯೮೭
ಮಂಗಳೂರು

ಪ್ರೀತಿಯ ಶಾಮಣ್ಣನವರಲ್ಲಿ,

ವಂದನೆಗಳು. ನಿಮ್ಮ ಪತ್ರ ತಲುಪಿತು. ನಾವು ಕಳೆದ ಹದಿನೈದು ದಿನಗಳಿಂದ ಊರಲ್ಲಿರಲಿಲ್ಲ. ಮೈಸೂರು– ಬೆಂಗಳೂರು ಕಡೆ ಹೋಗಿದ್ದೆವು. ನಿನ್ನೆ ವಾಪಸ್ಸಾದೆವು.

ಆಗುಂಬೆ ಶಿಬಿರದ ಬಗ್ಗೆ 'ಮುಂಗಾರು' ಪತ್ರಿಕೆಯಲ್ಲಿ ವರದಿಗಳನ್ನು ಓದಿದೆ. ರೈತ ಸಂಘ ಈವರೆಗಿನ ಆಘಾತಗಳಿಂದ ಕಿಂಚಿತ್ತೂ ಪಾಠ ಕಲಿತಂತೆ ತೋರುತ್ತಿಲ್ಲ. ತನಗೇನು ಬೇಕು, ತನ್ನ ದಾರಿ ಯಾವುದು ಎಂಬ ಸ್ಪಷ್ಟ ಕಲ್ಪನೆಯೇ ಸಂಘಕ್ಕೆ ಇದ್ದಂತೆ ತೋರುವುದಿಲ್ಲ. ಇಲ್ಲದಿದ್ದರೆ ಪೋಲಂಕಿಯಂತಹವರಿಗೆ ಅಲ್ಲೇನು ಕೆಲಸ?* ಶಿಬಿರದಲ್ಲಿ ಪೋಲಂಕಿಯವರು ಆಡಿದರೆಂದು ವರದಿಯಾಗಿರುವ ಮಾತುಗಳನ್ನು ತಿಳಿದು ಜಿಗುಪ್ಸೆಯಾಯಿತು. ಎಂ.ಡಿ. ನಂಜುಂಡಸ್ವಾಮಿಯವರ ಭೋಳೇತನ ಇನ್ನೂ ಕಿಂಚಿತ್ತೂ ಕಡಿಮೆಯಾಗಿಲ್ಲವೆಂದು ತಿಳಿದು ಖೇದವೆನಿಸಿತು. ಇದು ಹೀಗೇ ಮುಂದುವರೆದರೆ ರೈತ ಚಳುವಳಿ ಕೂಡ ಸಮಾಜವಾದಿ ಚಳುವಳಿ ಕಂಡ ಗತಿಯನ್ನೇ ಕಂಡೀತು. ಎಲ್ಲರನ್ನೂ ಒಳಗೊಳ್ಳುವ, ಎಲ್ಲರ ವಿಚಾರಗಳನ್ನೂ ಸಹಾನುಭೂತಿಯಿಂದ ಪರಿಶೀಲಿಸುವ, ಭಿನ್ನಮತ ಕಂಡಾಗ ಸಭ್ಯತೆಯಿಂದ ಪ್ರತಿಕ್ರಿಯಿಸುವ ಹಾಗೂ ಯಾರನ್ನೂ ದ್ವೇಷಿಸದ ಮತ್ತು ತಾನು ಪಾಲಿಸಲಾಗದ್ದನ್ನು ಇತರರಿಗೆ ಉಪದೇಶಿಸದ ಕೆಲವು ಪ್ರಾಥಮಿಕ ಪಾಠಗಳನ್ನು ನಾವು ಕಲಿತುಕೊಳ್ಳದಿದ್ದರೆ ಏನೂ ಮಾಡಲಾಗುವುದಿಲ್ಲ. ಕೇವಲ ನಮ್ಮ ತಿಕ್ಕಲುತನಗಳಿಗಾಗಿ, ತೀಟೆಗಳಿಗಾಗಿ ಸಂಘಟನೆಗಳನ್ನು ಕಟ್ಟದಂತಾಗುತ್ತದೆ. ಅದರ ಪರಿಣಾಮಗಳನ್ನು ಹೇಳುವ ಅಗತ್ಯವಿಲ್ಲ.

ಪ್ರಾದೇಶಿಕ ಪಕ್ಷದ ಬಗ್ಗೆ ಮೈಸೂರಿನಲ್ಲೂ ಗುಸುಗುಸು ಕೇಳಿದೆ. ದೇವನೂರ ಮಹಾದೇವ ಹಾಗೂ ಮಂಜುನಾಥ ದತ್ತ ತೇಜಸ್ವಿಯವರನ್ನು ಕಂಡು ಚರ್ಚಿಸಿ ಬಂದರಂತೆ.

* ಇದು ದಿ. ಪೋಲಂಕಿ ರಾಮಮೂರ್ತಿಯವರು ರೈತಸಂಘ ಆಗುಂಬೆಯಲ್ಲಿ ಆಯೋಜಿಸಿದ್ದ ಅಧ್ಯಯನ ಶಿಬಿರದಲ್ಲಿ ರೈತರು ಕುಡಗೋಲು– ಮಚ್ಚುಗಳನ್ನು ಹಿಡಿದು ಹೋರಾಟಕ್ಕೆ ಸಿದ್ಧರಾಗಬೇಕೆಂದು ಕರೆ ಕೊಟ್ಟಿದ್ದ ಸಂಬಂಧವಾಗಿ ಬರೆದ ಮಾತು– ಡಿಎಸ್ಸೆನ್

ಪರಿಣಾಮ ಸ್ಪಷ್ಟವಾಗಿಲ್ಲ. ಸಮಾಜವಾದಿ ಪಕ್ಷ ಕಟ್ಟಿದಂತೆ ಹೊಸ ಪ್ರಾದೇಶಿಕ ಪಕ್ಷವನ್ನು ಕಟ್ಟಿ ಹೊರಟರೆ ಮತ್ತೊಂದು ಬಾರಿ ಹತಾಶೆಯನ್ನು ಎದುರಿಸಬೇಕಾದೀತೆಂಬುದು ನನ್ನ ಭಾವನೆ. ನಾವು ಬದಲಾವಣೆ ಹೊಂದದೆ ಸಮಾಜದಲ್ಲಿ ಬದಲಾವಣೆ ತರುವುದು ಸಾಧ್ಯವೇ ಇಲ್ಲ ಎಂಬುದನ್ನು ನಾನು ನಿಮಗೆ ತಿಳಿಸಬೇಕಿಲ್ಲವಷ್ಟೆ! ಭೇಟಿಯಾದಾಗ ಈ ಬಗ್ಗೆ ಇನ್ನಷ್ಟು ಮಾತನಾಡಬಹುದು. ಶಿವಮೊಗ್ಗದ ಕಡೆ ಬಂದಾಗ ಖಂಡಿತ ನಿಮ್ಮ ಊರಿಗೆ ಬರುವೆವು.

ನಿಮ್ಮ

ಡಿ.ಎಸ್. ನಾಗಭೂಷಣ

(ಕೆ. ಅಕ್ಷತಾ ಅವರು ಸಂಪಾದಿಸಿರುವ 'ಆ ದಶಕ' ಎಂಬ ಪುಸ್ತಕದಲ್ಲಿ ಪ್ರಕಟ)

✧✧✧

೩೭. 'ಇದು ರೈತರಿಗೆ ಕೊನೆಯ ಅವಕಾಶ!':

ಶಾಮಣ್ಣನವರೊಂದಿಗೆ ಒಂದು ಮಾತುಕತೆ

ರೈತ ಸಂಘದಲ್ಲಿ ಪ್ರೊ. ಎಂ.ಡಿ. ನಂಜುಂಡಸ್ವಾಮಿಯವರು ಮುನಿಯಂತಿದ್ದರೆ, ಕಡಿದಾಳು ಶಾಮಣ್ಣ ಕೊಂಚ ಸಂತನಂತೆ ಕಾಣುವ ಮನುಷ್ಯ. ಇಂದಿನ ರೈತಸಂಘಕ್ಕೆ ಜನ್ಮ ಕೊಟ್ಟ ಸಣ್ಣ ಬೆಳೆಗಾರರ ಸಂಘದ ದಿನಗಳಿಂದ ಇಂದಿನವರೆಗೆ ರೈತಸಂಘದ ಎಲ್ಲ ಏಳು-ಬೀಳುಗಳೊಂದಿಗೆ ತಮ್ಮನ್ನು ಗುರುತಿಸಿಕೊಂಡು ಬಂದಿರುವ ಶಾಮಣ್ಣ, ಮೂಲತಃ ಸಮಾಜವಾದಿ ಕುಟುಂಬಕ್ಕೆ ಸೇರಿದವರು. ಮಲೆನಾಡಿನ ಪ್ರತಿಷ್ಠಿತ ಒಕ್ಕಲಿಗ ಕುಟುಂಬಗಳೆಲ್ಲವೂ ಕಾಂಗ್ರೆಸ್ಸಿನ ರಾಜವೈಭೋಗದೊಂದಿಗೆ ಗುರುತಿಸಿಕೊಂಡಿದ್ದ ಕಾಲದಲ್ಲಿ ಅಂತಹ ಪ್ರತಿಷ್ಠಿತ ಕುಟುಂಬವೊಂದಕ್ಕೆ ಸೇರಿದ ಶಾಮಣ್ಣ ಅಂತಹ ಪ್ರತಿಷ್ಠೆಯ ವಿರುದ್ಧ ಆಂದೋಲನ ಆರಂಭಿಸಿದ ಗೋಪಾಲಗೌಡರಿಂದ ಆಕರ್ಷಿತರಾದರು.

ಅವರೊಂದಿಗೆ ಕಿರಿಯ ಗೆಳೆಯನಾಗಿ ಮಲೆನಾಡಿನಲ್ಲಿ ಸಮಾಜವಾದಿ ಪಕ್ಷ ಕಟ್ಟಿದರು. ಗೋಪಾಲಗೌಡರ ನಿಧನಾನಂತರ ೧೯೭೨ರ ಚುನಾವಣೆಯಲ್ಲಿ ಬಲಿಷ್ಠ ಒಕ್ಕಲಿಗರ ಪ್ರಾಬಲ್ಯವಿರುವ ತೀರ್ಥಹಳ್ಳಿ ಕ್ಷೇತ್ರದಿಂದ, ಕೆಳ ಮತ್ತು ಅಲ್ಪಸಂಖ್ಯಾತ ಜಾತಿಗೆ ಸೇರಿದ ಮತ್ತು ಬಸ್ ನಿಲ್ದಾಣದ ಕೂಲಿಕಾರನ ಮಗನೊಬ್ಬನ (ಕೋಣಂದೂರು ಲಿಂಗಪ್ಪ) ಉಮೇದುವಾರಿಕೆಗೆ ಬೆಂಬಲವಾಗಿ ನಿಂತ ಶಾಮಣ್ಣ ತಮ್ಮದೇ ವಿಶಿಷ್ಟವಾದ ಪ್ರಚಾರ ವೈಖರಿಯ ಮೂಲಕ ಅತ್ಯಂತ ಕಡಿಮೆ ಬಜೆಟ್‌ನಲ್ಲಿ ಆತನನ್ನು ಗೆಲ್ಲಿಸಿದ್ದು ಕರ್ನಾಟಕದಲ್ಲಿನ ಸಮಾಜವಾದಿ ಆಂದೋಲನದ ಮತ್ತು ಚುನಾವಣಾ ಇತಿಹಾಸದ ಒಂದು ಮನನೀಯ ಮತ್ತು ರೋಮಾಂಚಕ ಅಧ್ಯಾಯ. ಹವ್ಯಾಸಿ ಛಾಯಾಚಿತ್ರ ಗ್ರಾಹಕ ಹಾಗೂ ಸರೋದ್ ವಾದಕರೂ ಆದ ಶಾಮಣ್ಣ ಈಗ ಅಪರೂಪವಾಗುತ್ತಿರುವ ಸಮಾಜವಾದಿ ಸಾಂಸ್ಕೃತಿಕ ಸದಭಿರುಚಿಯ ಪ್ರತೀಕದಂತಿದ್ದಾರೆ.

ಭದ್ರಾವತಿಯ ಸಮೀಪದ ಭಗವತಿಕೆರೆ ಎಂಬ ಕುಗ್ರಾಮದಲ್ಲಿ ನಗರವಾಸಿಗಳಿಗೆ ಚಿತ್ರವಿಚಿತ್ರವೆನ್ನಿಸುವ ತಳಿಗಳ ಗಿಡಮರಗಳಿಂದ ತುಂಬಿದ ತೋಟವೊಂದನ್ನು ಮಾಡಿಕೊಂಡು ಆ ತೋಟದ ಮಧ್ಯೆ ಸುಂದರವಾದ ಮನೆಯೊಂದನ್ನು ಕಟ್ಟಿಕೊಂಡು ತಮ್ಮ ಪತ್ನಿ ಶ್ರೀದೇವಿ ಮತ್ತು ಲಾಜವಂತಿ ಹಾಗೂ ಉಲೂಪಿ ಎಂಬ ಇಬ್ಬರು ಹೆಣ್ಣು ಮಕ್ಕಳೊಂದಿಗೆ ವಾಸಿಸುತ್ತಿರುವ ಶಾಮಣ್ಣನವರನ್ನು ನಾನು 'ಸುದ್ದಿ ಸಂಗಾತಿ' ವಾರಪತ್ರಿಕೆಗಾಗಿ ಮೂರನೇ ರಾಜಕೀಯ ಶಕ್ತಿಯ ಸಂಘಟನೆಯ ಸಾಧ್ಯತೆ ಕುರಿತು ಮಾನಾಡಿಸಲು ಹೋದಾಗ ಅವರು ಸಮಾಜವಾದಿ ಆಂದೋಲನ ಹಾಗೂ ರೈತಸಂಘದ ಉಚ್ಛ್ರಾಯ ದಿನಗಳನ್ನು ನೆನಪು ಮಾಡಿಕೊಂಡು.

ಸ್ಥಲ್ಲಿ ಭಾವಪರವಶರೇ ಆದರು. ರೈತ ಸಂಘದ ಮೂರನೇ ಶಕ್ತಿಯ ನಿರ್ಮಾಣದಲ್ಲಿ ಮುಕ್ತ ಮನಸ್ಸಿನಿಂದ ಪಾಲ್ಗೊಳ್ಳದಿದ್ದರೆ, ಅದು ತನ್ನ ಗೋರಿಯನ್ನು ತಾನೇ ತೋಡಿಕೊಂಡಂತೆ ಎಂಬ ನಿರ್ಣಾಯಕ ಮಾತಿನೊಂದಿಗೆ ನಮ್ಮ ಕುತೂಹಲ ಕೆರಳಿಸಿದರು.

ನಾನು: ನಿಮಗೆ ಹಾಗೆನ್ನಿಸೋಕೆ ಕಾರಣ ಏನು?

ಶಾಮಣ್ಣ: ಈ ಚುನಾವಣೆಯಲ್ಲಿ ರೈತರ ಹಿತ ಕಾಪಾಡುವಂತಹ ಒಂದು ಗುಂಪು ಗೆಲ್ಲದೇ ಹೋಗಿ ಇನ್ಯಾರಾದರೂ ಅಧಿಕಾರಕ್ಕೆ ಬಂದರೆ ರೈತರ ಮನೆಗಳು ಮುಳುಗಿ ಹೋದವು ಅಂತಲೇ ಇಟ್ಟುಕೊಳ್ಳಿ. ಬೇರೆ ಪಕ್ಷಗಳಿಗೆ ಈವರೆಗೆ ನಮ್ಮ ಬಗ್ಗೆ ದಾಕ್ಷಿಣ್ಯವಾದರೂ ಇತ್ತು. ಈಗ ನಾವು ರಾಜಕೀಯಕ್ಕೆ ಇಳಿತೀವೀಂತ ಘೋಷಿಸಿ ಸವಾಲು ಹಾಕಿರುವಾಗ ಅವು ದಾಕ್ಷಿಣ್ಯ ವಿಲ್ಲದೆ ನಮ್ಮ ಮೇಲೆ ಮುಗಿಬೀಳೋದು ಗ್ಯಾರಂಟಿ. ಈ ಅವಕಾಶಕ್ಕಾಗಿಯೇ ಅಧಿಕಾರಶಾಹಿ ಸಹ ಕಾದು ಕೂತಿದೆ. ಮನ್ನಾ ಮಾಡದ ಸಾಲಗಳ ಹೊರೆ ಅಸಲು– ಬಡ್ಡಿ ಸೇರಿ ಇವೊತ್ತು ರೈತನ ಬೆನ್ನುಮೂಳೆ ಮುರಿಯುವ ಕ್ಷಣ ಸನ್ನಿಹಿತವಾಗ್ತಿದೆ. ಕಂದಾಯ ಕೂಡಾ ಕೊಡಬಾರದು ಅನ್ನೋ ಚಳುವಳಿಯನ್ನು ರೈತಸಂಘ ಮಾಡಿದ್ದರಿಂದ ಅಭಿವೃದ್ಧಿ ಸಾಲಗಳೂ ಸಿಗದೆ ರೈತ ಇವೊತ್ತು ಇರೋ ನೆಲವನ್ನು ಉಳಿಸಿಕೊಳ್ಳೋ ಸ್ಥಿತಿಯಲ್ಲಿ ಇಲ್ಲ. ಅವನು ಕಂಗಾಲಾಗಿದ್ದಾನೆ.

ಪ್ರಶ್ನೆ: ಇದೆಲ್ಲವನ್ನೂ ಗಮನಿಸಿ ತಾನೇ ರೈತಸಂಘ ರಾಜಕೀಯ ಅಧಿಕಾರಕ್ಕಾಗಿ 'ಕನ್ನಡ ದೇಶ' ಎಂಬ ಪಕ್ಷವನ್ನು ಸ್ಥಾಪಿಸಿಕೊಂಡಿರೋದು?

ಶಾಮಣ್ಣ: ರೈತಸಂಘವೊಂದರಿಂದಲೇ ರಾಜಕೀಯ ಅಧಿಕಾರ ಪಡೆಯೋದು ಅಸಾಧ್ಯ. ಮೊನ್ನೆ ರೇಡಿಯೋದಲ್ಲಿ ಕನ್ನಡ ದೇಶದ ಅಧ್ಯಕ್ಷರ ಹೇಳಿಕೆ ಕೇಳಿ ನಾನು ಗಾಬರಿಯಾದೆ. ವಿಧಾನ ಸಭೆಯ ೨೨೪ ಸ್ಥಾನಗಳಿಗೂ ಸ್ಪರ್ಧಿಸ್ತೇವೆ ಅಂತ ಅವರು ಹೇಳಿದ್ದಾರೆ! ಇದು ಹುಚ್ಚಾಟ ಅಷ್ಟೆ. ಎಲ್ಲಿದ್ದಾರೆ ಉಮೇದುವಾರರು? ನಮ್ಮ ಸಂಘದ ಸಂಘಟನೆ ಇರೋದೇ ಮುಖ್ಯವಾಗಿ ನಾಲ್ಕು ಜಿಲ್ಲೆಗಳಲ್ಲಿ. ಬೆಳಗಾಂ, ಶಿವಮೊಗ್ಗ, ಹಾಸನ ಮತ್ತು ಮಂಡ್ಯ. ನಾಯಕತ್ವದ ಆತುರದ ಕ್ರಮದಿಂದ ಹಾಸನ ಕೂಡಾ ಬಹುಪಾಲು ಕೈಬಿಟ್ಟು ಹೋಗಿದೆ. ಇಂತಹ ಸ್ಥಿತಿಯಲ್ಲಿ ನಾವು ಸ್ವಂತ ಶಕ್ತಿ ಮೇಲೆ ರಾಜಕೀಯ ಮಾಡ್ತೀವಿ ಅನ್ನೋದೇ ಭ್ರಮೆ.

ಪ್ರಶ್ನೆ: ಇದಕ್ಕೆ ನೀವು ಸೂಚಿಸೋ ಪರಿಹಾರವೇನು?

ಶಾಮಣ್ಣ: ಪರಿಹಾರ ಈಗಾಗಲೇ ನಮ್ಮ ಮುಂದಿದೆ. ಅದನ್ನು ನಾವು ಕಾರ್ಯಗತ ಮಾಡಬೇಕಾಗಿದೆಯಷ್ಟೆ. ಕರ್ನಾಟಕದ ಎಲ್ಲ ವಿಚಾರವಂತ ಪ್ರಗತಿಪರ ಶಕ್ತಿಗಳು ಒಂದು ರಾಜಕೀಯ ವೇದಿಕೆ ಮೇಲೆ ಬಂದು ಪರಿಸ್ಥಿತಿಯನ್ನು ನಿಭಾಯಿಸಬೇಕು ಅನ್ನುವ ಒಂದು ಆಲೋಚನೆ ಬಹಳ ಹಿಂದೇನೇ ಕೆಲವರ ಮನಸ್ಸಿಗೆ ಬಂದು ಈ ದಿಸೆಯಲ್ಲಿ ಸಾಕಷ್ಟು ಕೆಲಸವೂ ಆಗಿದೆ. ಈಗ ನಮ್ಮ ಕೆಲಸ ಅದನ್ನು ಒಂದು ಕಾರ್ಯಶೀಲ ಹಂತಕ್ಕೆ ತರಬೇಕಾಗಿರುವುದು.

ಪ್ರಶ್ನೆ: ಅಂದರೆ ನೀವು ಹೇಳ್ತಾ ಇರೋದು ರೈತಸಂಘ, ದಲಿತ ಸಂಘರ್ಷ ಸಮಿತಿ ಮತ್ತು ಪ್ರಗತಿರಂಗ ಒಟ್ಟಾಗಿ ಇಂದಿನ ವ್ಯವಸ್ಥೆಗೆ ರಾಜಕೀಯ ಸವಾಲು ಎಸೀಬೇಕು ಅನ್ನುವ ಅಭಿಪ್ರಾಯಕ್ಕೆ ಮನ್ನಣೆ ಕೊಡಬೇಕು ಅಂತ ತಾನೇ?

ಶಾಮಣ್ಣ: ಈ ಮೂರು ಮಾತ್ರವಲ್ಲ. ಹೊಸ ತರಹದ ರಾಜಕೀಯ ಸಂಸ್ಕೃತಿ ಬೆಳಸುವ ಬಯಕೆಯನ್ನು ಪ್ರತ್ಯಕ್ಷವಾಗಿಯಾಗಲೀ, ಪರೋಕ್ಷವಾಗಿಯಾಗಲೀ ವ್ಯಕ್ತಪಡಿಸ್ತಿರೋ ಎಲ್ಲ ಜನರ ಮತ್ತು ಸಂಘ, ಸಂಸ್ಥೆ, ಗುಂಪುಗಳ ಜೊತೆ ನಾವು ಸೇರಬೇಕಾಗಿದೆ. ಭಾಷಾ ಚಳುವಳಿಕಾರರಿದ್ದಾರೆ, ಪರಿಸರವಾದಿಗಳಿದ್ದಾರೆ, ಸಣ್ಣ ಪುಟ್ಟ ಹಳ್ಳಿಗಳಲ್ಲಿ ಚೆನ್ನಾಗಿ ಕೆಲಸ ಮಾಡ್ತಿರೋ ಯುವಕ– ಯುವತಿ ಮಂಡಳಿಗಳಿವೆ. ಇವೆಲ್ಲವುಗಳ ಜೊತೆ ನಮ್ಮ ಮಾತುಕತೆ ನಡೀಬೇಕು. ಅಷ್ಟೇ ಅಲ್ಲ, ಕುವೆಂಪು, ಶಿವರಾಮ ಕಾರಂತ, ನಿಜಲಿಂಗಪ್ಪ ಇವರಂತಹ ಹಿರಿಯ ಗಣ್ಯರ ಸಲಹೆ– ಸೂಚನೆಗಳನ್ನೂ ಪಡೆಯಬೇಕು.

ಪ್ರಶ್ನೆ: ಆದರೆ ಈಗ ಇರೋ ಗೊಂದಲದ ಪರಿಸ್ಥಿತಿಯಲ್ಲಿ, ಅವಿಶ್ವಾಸದ ವಾತಾವರಣದಲ್ಲಿ ಇದು ಸಾಧ್ಯ ಅನ್ನಿಸುತ್ತಾ?

ಶಾಮಣ್ಣ: ಇದು ಸಾಧ್ಯ ಆಗಬೇಕು; ಸಾದ್ಯ ಮಾಡಬೇಕು. ಇದು ರೈತರಿಗೆ ಕೊನೇ ಅವಕಾಶ.

ಪ್ರಶ್ನೆ: ಆದರೆ ಈ ವಿಷಯದಲ್ಲಿ ರೈತಸಂಘವೇ ಕಾಲು ಎಳೀತಿದೆಯಲ್ಲಾ? ಹಿರಿಯಣ್ಣನ ತರ ಆಡ್ತಾ, ಅವರು ಬರೋದಾದ್ರೆ ನಾವಿರೋಲ್ಲ ಅನ್ನೋ ತರ ಕೊಸರಾಡ್ತಾ ಇದೆಯಲ್ಲ?

ಶಾಮಣ್ಣ: ಅದನ್ನು ಮಾಡ್ತಿರೋದು ರೈತಸಂಘ ಅಲ್ಲ. ರೈತ ನಾಯಕರು. ಹಳ್ಳಿಯಲ್ಲಿಯ ಸಾಮಾನ್ಯ ರೈತರಿಗೆ ಅರ್ಥವಾಗುವಂತಹ ವಿಷಯ ಇವರಿಗ್ಯಾಕೆ ಅರ್ಥವಾಗೊಲ್ಲವೋ ನಂಗರ್ಥವಾಗ್ತಿಲ್ಲ. ಒಂಟಿಯಾಗಿ ನಾವೇನೂ ಮಾಡಲಾರೆವು ಅನ್ನೋದು ಈ ಭಗವತಿಕೆರೆ ಎಂಬ ಕುಗ್ರಾಮದ ರೈತನಿಗೆ ಅರ್ಥವಾಗಿದೆ. ಆತ ಬಂದು ನನಗೆ ಹೇಳ್ತಾನೆ, 'ಏನಾದ್ರೂ ಮಾಡಿ ಎಲ್ರನ್ನೂ ಒಟ್ಟಿಗೆ ತಂದು ನಮ್ಮ ಮನೆಗಳನ್ನು ಉಳಿಸೋ ಕೆಲಸ ಮಾಡಿ' ಅಂತ. ಆದರೆ ಕನ್ನಡ ದೇಶ ದ ನಾಯಕರಿಗೆ ಈ ಸರಳ ಸತ್ಯ ಅರ್ಥವಾಗ್ದೇ ಇರೋದು ನಮ್ಮ ದುರಾದೃಷ್ಟ ಅಷ್ಟೇ...

ಪ್ರಶ್ನೆ: ಆದರೆ ರೈತ ಸಂಘದ ಅಧ್ಯಕ್ಷ ರುದ್ರಪ್ಪನವರೇ ಎಲ್ರೂ ಒಟ್ಟಾಗಿ ಹೋರಾಡಬೇಕೂಂತ ಅಭಿಪ್ರಾಯ ವ್ಯಕ್ತಪಡಿಸಿದ್ದಾರಲ್ಲಾ?

ಶಾಮಣ್ಣ: ರೈತಸಂಘದ ಅಧ್ಯಕ್ಷರಿಗೆ ಅರ್ಥವಾಗಿರೋದು ಕನ್ನಡ ದೇಶ ದ ಅಧ್ಯಕ್ಷರಿಗೆ ಅರ್ಥವಾಗಿಲ್ಲ ಅನ್ನೋದೇ ಇಲ್ಲಿನ ಸಮಸ್ಯೆ.

ಪ್ರಶ್ನೆ: ಅಂದ್ರೆ ಪ್ರೊ. ನಂಜುಂಡಸ್ವಾಮಿಯವರಿಗೆ?

ಶಾಮಣ್ಣ: ಮತ್ತು ಅವರಿಗೆ ಬೆಂಬಲವಾಗಿ ನಿಂತಿರೋ ನಾಲ್ಕೈದು ರೈತನಾಯಕರಿಗೆ. ಇವರು ಯಾರನ್ನೂ ಕೇಳದೆ ಕನ್ನಡ ದೇಶ ವನ್ನು ರೈತರ ಮೇಲೆ ಹೇರಿದರು– ಹಿಂದೆ ಪಾರ್ಲಿಮೆಂಟಿಗೆ ನಿಲ್ಲಬೇಕು ಅನ್ನೋ ನಿರ್ಧಾರವನ್ನು ಹೇರಿದ ಹಾಗೆ. ಕನ್ನಡ ದೇಶದಲ್ಲಿ ದಲಿತಸಂಘ, ಭಾಷಾ ಚಳುವಳಿಕಾರರು, ರಾಜ್ ಅಭಿಮಾನಿ ಸಂಘದವರು ಎಲ್ರೂ

ಇರ್ತಾರೇಂತ ಹೇಳಿದ್ರು. ಈಗ ನೋಡಿದ್ರೆ, ಯಾರೂ ಇಲ್ಲ! ಅವರೆಲ್ಲ ಇದ್ದಾರೆ ಅನ್ನೋ ರೀತಿಯಲ್ಲಿ ಪ್ರಣಾಳಿಕೆ ಬೇರೆ ಬರೆದು ಪ್ರಕಟಿಸಿದ್ದಾರೆ.

ಪ್ರಶ್ನೆ: ಈ ಬಗ್ಗೆ ರೈತಸಂಘ ಏಕೆ ಸೊಲ್ಲೆತ್ತಿಲ್ಲ?

ಶಾಮಣ್ಣ: ನಾನೂ ಸೇರಿದಂತೆ ಹಲವಾರು ಜನ ಈ ಬಗ್ಗೆ ಸೊಲ್ಲೆತ್ತಿದ್ದಾರೆ. ಪ್ರತಿಭಟನೆ ಸೂಚಿಸಿದ್ದಾರೆ. ಹಾಸನ ಜಿಲ್ಲಾ ಶಾಖೆ ಯಾಕೆ ನಮ್ಮ ಕೈಬಿಟ್ಟು ಹೋಯ್ತು ಅನ್ನೋದೂ ನಿಮಗೆ ಗೊತ್ತಿದೆ. ಆದರೆ ರೈತಸಂಘದ ಒಂದು ಸಮಸ್ಯೆ ಅಂದರೆ, ಅದು ಆರಂಭದಿಂದ ಬೇಡಿಕೆಗಳ ಭಾವಾವೇಶದ ಮೇಲೆ ಬೆಳೆದು ನಿಂತಿರೋ ಸಂಘಟನೆ. ಅದಕ್ಕೆ ಶಿಸ್ತುಬದ್ಧವಾದ ಬೆಳವಣಿಗೆ ಇಲ್ಲ. ಆದ್ದರಿಂದ ನಮ್ಮಂಥಹವರ ಪ್ರತಿಭಟನೆಯನ್ನು ಅಡಗಿಸೋ ಶಕ್ತಿ ಕೆಲವರ ಕೈಗೆ ಬಂದಿದೆ. ಏನೋ ಕೇಳಿದ್ರೆ ಏನೋ ಹೇಳಿ ನಮ್ಮ ಬಾಯಿ ಮುಚ್ಚಿಸ್ತಾರೆ. ಪ್ರೊ. ನಂಜುಂಡ ಸ್ವಾಮಿಯವರು ಸಂಘಟನೆಯಲ್ಲಿ ತಮಗೊರೋ ಪ್ರಾಧಾನ್ಯವನ್ನು ಅಪಾರ್ಥ ಮಾಡಿಕೊಮಡು ನಿರ್ಧಾರಗಳನ್ನು ಹೇರ್ರೋಕೆ ಪ್ರಯತ್ನಿಸುತ್ತಾರೆ. ನಾವು ಕೂಡಾ ಹೋರಾಟ ಮಾಡಿ ಕಟ್ಟಿರೋ ಸಂಘಟನೆಯನ್ನು ನಮ್ಮ ಕೈಯಿಂದಲೇ ಕೆಡವಬಾರದು ಅನ್ನೋ ಭಾವನೆಯಿಂದ ಸಹಿಸೋ ಸ್ಥಿತಿಗೆ ಈಡಾಗಿದ್ದೀವಿ.

ಪ್ರಶ್ನೆ: ನಂಜುಂಡಸ್ವಾಮಿಯವರು ಎತ್ತಿರೋ ಪ್ರಶ್ನೆ ಅಂದರೆ, ಪ್ರಗತಿರಂಗ ಒಂದು ಶಕ್ತಿನೇ ಅಲ್ಲ; ಅದು ರೈತಸಂಘದ ವಿರುದ್ಧ ಕೆಲಸ ಮಾಡಿದೆ; ಅದರ ಜೊತೆಗೆ ಸೇರೋದು ಹೇಗೆ ಅನ್ನೋದು.

ಶಾಮಣ್ಣ: ನೋಡಿ, ಮೊದಲಿಗೆ ಯಾವುದೇ ಗುಂಪನ್ನು ಅದೊಂದು ಶಕ್ತಿನೇ ಅಲ್ಲ ಅಂತ ತಿರಸ್ಕರಿಸೋದು ನನ್ನ ಪ್ರಕಾರ ತಪ್ಪು. ಪ್ರಗತಿರಂಗದ ವಿಷಯಕ್ಕೆ ಬಂದರೆ ಅದು ನಮ್ಮಷ್ಟು ಸಂಘಟನೆ ಮಾಡದೇ ಇರಬಹುದು. ಆದ್ರೆ ಆ ಗುಂಪಿನಲ್ಲಿ ಇರೋ ಪ್ರತಿಭಾವಂತರು, ಬುದ್ಧಿಜೀವಿಗಳು, ಉತ್ಸಾಹಿ ಯುವಜನರ ಸಾಧ್ಯತೆಗಳು ಇವೆಯಲ್ಲಾ, ಅದನ್ನ ತಿರಸ್ಕರಿಸೋದ್ರಿಂದ ನಮ್ಮಗಳಿಗೇ ನಷ್ಟ. ರೈತಸಂಘಕ್ಕೆ ಇಲ್ಲದೇ ಇರೋ ವಿಶಾಲ ತಾತ್ವಿಕ ನೆಲಗಟ್ಟನ್ನು ರೂಪಿಸಿಕೊಳ್ಳೋಕೆ ಅವರ ನೆರವು ಬೇಕಿದೆ. ಇನ್ನು ಪ್ರಗತಿರಂಗ, ರೈತಸಂಘದ ವಿರುದ್ಧ ಕೆಲಸ ಮಾಡಿದೆ ಅನ್ನೋ ವಿಷಯ. ಇದಕ್ಕೆ ನನಗೆ ತಿಳಿದಿರೋ ಹಾಗೆ ಯಾವ ಆಧಾರವೂ ಇಲ್ಲ. ಪ್ರಗತಿರಂಗದ ನಾಯಕರಲ್ಲೊಬ್ಬರಾದ ಲಂಕೇಶರ ಪತ್ರಿಕೆ ರೈತಸಂಘದ ಬಗ್ಗೆ ಟೀಕೆ ಮಾಡಿರಬಹುದು. ಆದ್ರೆ ಲಂಕೇಶ್ ಅದೇ ಟೀಕೆಯನ್ನು ಇವೊತ್ತು ಮಾಡ್ತಾರೆ ಅಂತ ನನಗನ್ನಿಸೋಲ್ಲ. ಅಲ್ಲದೆ ಪ್ರಗತಿರಂಗ ಅಂದ್ರೆ ಲಂಕೇಶ್ ಅಂತ ಭಾವಿಸೋದೇ ತಪ್ಪು. ಮೊದಲಾಗಿ ನಾವೇನು ಮಾಡೋದಕ್ಕೆ ಹೊರಟಿದ್ದೀವಿ, ಅದು ಯಶಸ್ವಿಯಾಗಬೇಕಾದ್ರೆ ನಾವು ಯಾವ ಮನೋಭಾವ ಬೆಳಸ್ಕೋಬೇಕು ಅನ್ನೋದು ನಮಗೆ ಸ್ಪಷ್ಟವಾಗಬೇಕು. ಆಮೇಲೆ ಮಿಕ್ಕಿದ್ದೆಲ್ಲ ಸುಲಭವಾಗುತ್ತೆ.

ಪ್ರಶ್ನೆ: ಆದರೆ ಸಮಸ್ಯೆ ಅಷ್ಟು ಸುಲಭ ಅಲ್ಲ ಅಂತ ಅನ್ನಿಸುತ್ತೆ. ಉದಾಹರಣೆಗೆ ಹಳ್ಳಿಗಳಲ್ಲಿ ಬಹುಪಾಲು ಎದುರು ಬದುರು ನಿಂತಿರೋ ರೈತರು ಮತ್ತು ದಲಿತರು ಒಟ್ಟಾಗಿ ಕೆಲಸ ಮಾಡೋ ಸಾಧ್ಯತೆಯನ್ನೇ ತಗೊಳ್ಳಿ.

ಶಾಮಣ್ಣ: ಪರಸ್ಪರ ತಿಳುವಳಿಕೆ ಇದ್ದರೆ ಅಂತಹ ತಿಳುವಳಿಕೆ ಮೂಡಿಸೋ ನಾಯಕತ್ವ ಇದ್ದರೆ ಯಾಕಾಗೊಲ್ಲ? ಹಾಸನ ಜಿಲ್ಲೆಯಲ್ಲಿ ರೈತಸಂಘ, ದಲಿತ ಸಂಘರ್ಷ ಸಮಿತಿ ಒಟ್ಟಿಗೆ ಕೆಲಸ ಮಾಡ್ತಾ ಇರೋ ಇತಿಹಾಸನೇ ಇದೆಯಲ್ಲ? ಅಲ್ಲದೆ ಈಗ ರಾಜ್ಯ ಮಟ್ಟದಲ್ಲಿ ಇವೆರಡೂ ಸಂಘಗಳು ಒಟ್ಟಿಗೆ ಕೆಲಸ ಮಾಡಬೇಕು ಅನ್ನೋ ಅಭಿಪ್ರಾಯ ಮೂಡ್ತಿರೋದ್ರ ಹಿನ್ನೆಲೆ ಏನೂ? ದಲಿತರ ಪರವಾಗಿ ರೈತರು ಕೆಲಸ ಮಾಡೋ ಸ್ಥಿತಿ ಇದೆಯಲ್ಲಾ, ಆ ಆನಂದದ ಸ್ಥಿತಿ, ಅದೇ ಅಲ್ವೇ ಎಲ್ಲವನ್ನೂ ನಿರ್ಣಯ ಮಾಡೋ ಸ್ಥಿತಿ. ರೈತರು ಸಿದ್ಧರಾಗಬೇಕು; ಸಿದ್ಧ ಮಾಡಬೇಕು. ಅದೇ ಮೂರನೇ ಶಕ್ತಿಯ ನಿಜವಾದ ವಿಜಯ.

ಪ್ರಶ್ನೆ: ಅದು ಸಾಧ್ಯವಾಗಬೇಕು ನಿಜ. ಆದ್ರೆ ಅದು ಬಹುದೂರದ ಕನಸಿನಂತೆ ನಮಗೆ ಕಾಣಿಸುತ್ತೆ. ಆದ್ರೆ ಮೊದಲಾಗಿ ರೈತಸಂಘ ಅಥವಾ ಕನ್ನಡ ದೇಶದ ನಾಯಕತ್ವ ಮೊದಲ ದಿಟ್ಟ ಹೆಜ್ಜೆ ಇಡಬೇಕಲ್ಲ!

ಶಾಮಣ್ಣ: ಇಡಬೇಕೂಂತ ಹೇಳ್ತಿದೀವಿ. ಒತ್ತಡ ತರ್ತೀವಿ. ಒಪ್ಪಿದರೆ ಅದಕ್ಕಿಂತ ಬೇರೆ ಸಂತೋಷ ನಮಗಿಲ್ಲ. ಒಪ್ಪದಿದ್ದರೆ ನಮ್ಮ ಪಾಡು ನಮ್ಮದು, ನಾಯಕರ ಪಾಡು ನಾಯಕರದ್ದು.

ಪ್ರಶ್ನೆ: ಆದ್ರೆ ಇದರಿಂದ ರೈತಸಂಘ ಒಡೆಯೋದಿಲ್ವೇ?

ಶಾಮಣ್ಣ: ಒಡೆಯೋಲ್ಲ. ನಾಶವಾಗುತ್ತೆ ಅಥವಾ ಇನ್ನೊಂದು ಅರ್ಥದಲ್ಲಿ ಬೆಳೆಯುತ್ತೆ. ಅಲ್ಲಿ ಉಳಿಯೋದು ಕೊನೆಗೆ ಹಠಮಾರಿಗಳಾದ ನಾಲ್ಕೈದು ನಾಯಕರು ಮಾತ್ರ... ಒಂದು ಗುರಿ ಇಟ್ಕೊಂಡು ಸಂಘ ಮಾಡಿದ್ವಿ, ಆದ್ರೆ ಆ ಗುರಿ ಕಡೆಗೆ ಹೆಜ್ಜೆ ಹಾಕೋದಕ್ಕೆ ಸಂಘ ಅಡ್ಡಿ ಬರೋದಾದ್ರೆ ಆ ಸಂಘವಾದ್ರೂ ಯಾಕೆ ಬೇಕು?

ಪ್ರಶ್ನೆ: ನಮ್ಮೆಲ್ಲರ ಪ್ರಯತ್ನಗಳು ಈ ಕಹಿ ಪ್ರಸಂಗ ಬರದಂತೆ ನೋಡಿಕೊಳ್ತವೇಂತ ಆಶಿಸೋಣ. ಆದ್ರೆ ಇದೆಲ್ಲವೂ ಸಾಧ್ಯ ಆದ್ರೂ ಕೂಡಾ ಮೂರನೇ ಶಕ್ತಿ ಅಧಿಕಾರ ರಾಜಕಾರಣದಲ್ಲಿ ನಿರ್ಣಾಯಕ ಶಕ್ತಿ ಆಗೋಕ್ಕೆ ಸಾಧ್ಯ ಅನ್ನಿಸುತ್ತಾ?

ಶಾಮಣ್ಣ: ಇಲ್ಲಿ ಎರಡು ವಿಷಯಗಳಿವೆ. ಒಂದು, ಶಾಸನ ಸಭೆಯಲ್ಲಿ ಜನ ವಿರೋಧಿ ನಿರ್ಧಾರಗಳನ್ನು ತಡೆಯುವಂತಹ ಶಕ್ತಿಯಾದರೆ ಮಾತ್ರ ಸಾಕೆ ಅನ್ನೋದು. ಇನ್ನೊಂದು ಜನಪರ ನಿರ್ಧಾರಗಳನ್ನು ರೂಪಿಸೋ ಕೆಲಸದಲ್ಲೂ ನಾವು ಭಾಗಿಯಾಗುವ ಆಸೆ ಈಗಲೇ ಇಟ್ಕೋಬೇಕೇ ಅನ್ನೋದು. ಮೂರನೇ ಶಕ್ತಿ ಜಂಟಿಯಾಗಿ ಮೊದಲನೇ ಪಾತ್ರ ವಹಿಸಬಹುದು. ಎರಡನೇ ಸಾಧ್ಯತೆ ಬಗ್ಗೆ ಯೋಚಿಸೋದಾದ್ರೆ ನಮ್ಮ ಗುರಿ ಮತ್ತು ಆಸೆಗಳಿಗೆ ಹತ್ತಿರವಾಗಿರೋ ಮತ್ತು ಸಹನೀಯವಾದ ಚಾರಿತ್ರ್ಯ ಉಳ್ಳವರ ಒಂದು ರಾಜಕೀಯ ಪಕ್ಷದ ಜೊತೆ ಹೊಂದಾಣಿಕೆ ಮಾಡಿಕೊಳ್ಳಬೇಕು.

ಪ್ರಶ್ನೆ: ಅಂಥ ಪಕ್ಷ ಯಾವುದಿದೆ ಅಂತೀರಿ ಇವೊತ್ತು ಕರ್ನಾಟಕದಲ್ಲಿ?

ಶಾಮಣ್ಣ: ನಾವು ಇರೋದ್ರಲ್ಲೇ ಆರಿಸಿಕೊಳ್ಳಬೇಕಾಗಿದೆ. ಆರಿಸಿಕೊಳ್ಳೋದಾದ್ರೆ ದೇವೇಗೌಡ್ರ ಜನತಾ ಪಕ್ಷವನ್ನು ಆರಿಸಿಕೊಳ್ಳಬೇಕಾಗ್ತದೆ. ಯಾಕೇಂದ್ರೆ, ದೊಡ್ಡ ದೊಡ್ಡ

ಆಮಿಷಗಳಿಗೂ ಬಗ್ಗದ, ಭ್ರಷ್ಟ ನಾಯಕತ್ವವನ್ನು ಹಠದಿಂದ ಎದುರಿಸಿದ ಇಪ್ಪತ್ತೇಳು ಶಾಸಕರನ್ನು ಉಳಿಸಿಕೊಂಡ ಪಕ್ಷ ಅದು. ಅಲ್ಲದೆ, ಆ ಪಕ್ಷದ ಒತ್ತು ಇರೋದು ಗ್ರಾಮಾಂತರ ಅಭಿವೃದ್ಧಿ ಮೇಲೆ. ಜತೆಗೆ ಅದು ತಾನು ರಾಷ್ಟ್ರೀಯ ರಾಜಕಾರಣದ ಉಸಾಬರಿಗೆ ಹೋಗದೆ ರಾಜ್ಯದ ಹಿತಾಸಕ್ತಿಗೆ ಸೀಮಿತವಾಗೋ ಆಶಯ ಹೊದಿರೋ ಪಕ್ಷ.

ಪ್ರಶ್ನೆ: ಆದ್ರೂ ಅದು ವೃತ್ತಿ ರಾಜಕಾರಣದಲ್ಲಿ ಪಳಗಿರೋ ಪಕ್ಷ....

ಶಾಮಣ್ಣ: ನಿಜ. ಆದ್ರೆ ನಾನು ಮೊದಲೇ ಹೇಳಿದ ಎರಡನೇ ಸಾಧ್ಯತೆ ಬಗ್ಗೆ ಯೋಚಿಸೋದಾದ್ರೆ ಬೇರೆ ಯಾವ ದಿಕ್ಕೂ ಕಾಣ್ತಾ ಇಲ್ಲ. ಅವರೊಂದಿಗೆ ಮಾತುಕತೆ ಆಡಿ, ಸಮ್ಮತ ಅನ್ನಿಸೋದಾದ್ರೆ ಮುಂದುವರೆಯಬಹುದು ಅಷ್ಟೆ.

ಸಂದರ್ಶನ ಮುಗಿದ ಮೇಲೆ ಶಾಮಣ್ಣ ಮನೆಯ ಮೂಲೆಯಲ್ಲಿ ಶಾಲು ಹೊದ್ದು ಮಲಗಿದ್ದ ಸರೋದ್ ವಾದ್ಯವನ್ನು ಎತ್ತಿಕೊಂಡು ಶೃತಿ ಮಾಡಿದರು. ಧೃತ್ ತೀನ್ ತಾಳ್‌ದಲ್ಲಿ ಒಂದು ಚೀಸನ್ನು ನುಡಿಸಿದರು. ಆ ಹೊತ್ತಿಗೆ ಅವರ ಪತ್ನಿ ನಮಗೆ ನಾವು ಅವರೆಗೆ ಹೆಸರೇ ಕೇಳದಿದ್ದ ಬೆಣ್ಣೆ ಹಣ್ಣಿನ ಹಸಿಪಾಕ ತಂದಿಟ್ಟರು. ನಮ್ಮೊಂದಿಗೆ ಬಂದಿದ್ದ 'ಸಂಗಾತಿ'ಯ ಗೆಳೆಯರೊಬ್ಬರಿಗೆ ಹಿತ್ತಲಲ್ಲಿ ನೆಡಿ ಎಂದು ರಾತ್ರಿ ಅರಳುವ ಬ್ರಹ್ಮಪುಷ್ಪ ಗಿಡದ ಎಲೆಯೊಂದನ್ನು ಕೊಟ್ಟರು.

ಬೆಣ್ಣೆ ಹಣ್ಣಿನ ಪಾಕವನ್ನು ಸವಿಯುತ್ತಾ ನಾವು ಶಾಮಣ್ಣ ದಂಪತಿಗಳಿಂದ ಬೀಳ್ಕೊಂಡೆವು. ಪಾಕ ಸವಿಯಾಗಿದ್ದರೂ, ಎಲ್ಲೋ ಒಂದು ಎಳೆ ಒಗರು ನಮ್ಮ ನಾಲಗೆಯಲ್ಲಿ ಉಳಿದಿತ್ತು. ಕೈಯಲ್ಲಿ ಬ್ರಹ್ಮಪುಷ್ಪದ ಎಲೆ ಹಿಡಿದುಕೊಂಡು ಮನಸ್ಸಿನಲ್ಲಿ ಆ ಒಗರಿನ ಮೂಲದ ಬಗ್ಗೆಯೇ ಯೋಚಿಸುತ್ತಾ ನಾವು ಭಗವತಿಕೆರೆಯಿಂದ ನಡೆದವು.

('ಸುದ್ದಿ ಸಂಗಾತಿ'ಯ ೧೯೮೯ರ ಜುಲೈ ೨೩ರ ಸಂಚಿಕೆಯಲ್ಲಿ ಪ್ರಕಟ. ಹಾಗೇ ಕೆ. ಅಕ್ಷತಾ ಸಂಪದಿಸಿರುವ 'ಆ ದಶಕ' ಎಂಬ ಪುಸ್ತಕದಲ್ಲೂ ಸೇರಿದೆ. ಶಾಮಣ್ಣನವರ ಪ್ರಕಾರ, ಅವರನ್ನು ಅಶಿಸ್ತಿನ ಕಾರಣದ ಮೇಲೆ ರೈತಸಂಘದ ರಾಜ್ಯ ಸಮಿತಿಯಿಂದ ಉಚ್ಚಾಟಿಸಲ್ಪಟ್ಟಿದ್ದಕ್ಕೆ ಈ ಮಾತುಕತೆಯೇ ಆಧಾರ!)

೩೮. ರೈತ ಚಳುವಳಿ: ತಾಯಿ ಬೇರಿಲ್ಲದ ಆಶೆಯ ಹೂ

'ಬ್ರಿಟೀಷರು ಸುಲಿಗೆ ಮಾಡಿ ಬಿಟ್ಟಲ್ಲಿಂದ ನಮ್ಮವರು ಆರಂಭಿಸಿದರು. ಪ್ರತಿ ವರುಷ ಒಂದೊಂದೇ ತೆರಿಗೆಗಳನ್ನು ಹಾಕುತ್ತಾ ಒಂದು ದಿನ ರಾತ್ರೋರಾತ್ರಿ ಅವನಿಗೆ ಕೊಡುವ ಗೊಬ್ಬರ, ಬೀಜ, ಔಷಧಿಗಳ ಬೆಲೆ ಡಬಲ್ಲು ಮಾಡಿದರು. ಅವನ ಮೈಮೇಲಿನ ಅಂಗಿಯನ್ನೂ ಕಸಿದುಕೊಂಡು, ಲಂಗೋಟಿಯನ್ನು ಮಾತ್ರ ಬಿಟ್ಟಿದ್ದಾರೆ. ಈ ವರ್ಷ ಅದನ್ನೂ ಕಸಿದುಕೊಂಡರೆ ಉಪಕಾರವಾಗುವುದು. ಅವನು ನಂಗಾ ಆದ ಮೇಲೆ ಕಸಿದುಕೊಳ್ಳುವುದಾದರೂ ಏನು?'

ಕಳೆದ ಎರಡೂವರೆ– ಮೂರು ವರ್ಷಗಳಿಂದ ಕರ್ನಾಟಕದ ನೆಲದಲ್ಲಿ ಬಿರುಗಾಳಿ ಯಂತೆ ಎದ್ದಿರುವ ರೈತ ಬಂಡಾಯದ ಹಿನ್ನೆಲೆಯನ್ನು ಬೆಳಗಾವಿ ಜಿಲ್ಲೆಯಲ್ಲಿ ರೈತ ಸಂಘಟನೆ ಮಾಡುತ್ತಿರುವ ಕುಂದರನಾಡ ಪಾಟೀಲರು ಬರೆದಿರುವ 'ಹಾಳಾದ ರೈತ, ಬೋಳಾದ ನಾಡು (ರೈತ ಶೋಷಣೆಯ ಸಮೀಕ್ಷೆ)' ಎಂಬ ಕಿರುಪುಸ್ತಕದಲ್ಲಿನ ಮೇಲಿನ ಸಾಲುಗಳು ಸೂಕ್ಷ್ಮವಾಗಿ ಹೇಳುತ್ತವೆ. ಎರಡೂವರೆ ವರ್ಷಗಳ ಹಿಂದೆ ಘಟಪ್ರಭ– ಮಲಪ್ರಭ ಅಚ್ಚುಕಟ್ಟು ಪ್ರದೇಶದಲ್ಲಿ ನೀರಾವರಿ ಕರದ ವಿರುದ್ಧ ಒಮ್ಮೆಗೇ ಸ್ಫೋಟಗೊಂಡ ರೈತನ ರೊಚ್ಚು ಹಲವಾರು ಅವತಾರಗಳಲ್ಲಿ ಅಭಿವ್ಯಕ್ತಗೊಂಡು ಸದ್ಯಕ್ಕೆ ಕರ್ನಾಟಕ ರಾಜ್ಯ ರೈತಸಂಘದ ಆಶ್ರಯದಲ್ಲಿ ರೈತ ಚಳುವಳಿಯಾಗಿ ಒಂದು ಸ್ಪಷ್ಟ ರೂಪ ಪಡೆದಂತಿದೆ. ಅದೀಗ ರಾಜ್ಯದ ನಾಲ್ಕಾರು ಜಿಲ್ಲೆಗಳಲ್ಲಾದರೂ ಭದ್ರವಾಗಿ ಬೇರುಬಿಟ್ಟಿದೆ. ಇದರಿಂದಾಗಿ ರೈತನ ಮೈಮೇಲಿನ ಲಂಗೋಟಿ ಯಾದರೂ ಉಳಿದಿದೆ. ಈ ಕಾರಣದಿಂದಲೇ, ರಾಜಕೀಯ ಪೂರ್ವಾಗ್ರಹಗಳಿಗೆ ಒಳಗಾದ ಕೆಲವು ಮೂಲೆಗಳ ಹೊರತಾಗಿ ಎಲ್ಲ ಪ್ರಗತಿಪರ ವಲಯಗಳಿಂದ ರೈತ ಚಳುವಳಿಗೆ ವಿಶಾಲ ತಳಹದಿಯ ಸಹಾನುಭೂತಿ ದೊರಕಿದೆ.

ಈ ಮಧ್ಯೆ ಕರ್ನಾಟಕದಲ್ಲಿ ಅಂತರ್‌ಪಿಶಾಚಿಯಂತಷ್ಟೇ ಸುಳಿದಾಡುತ್ತಿದ್ದ ಜನತಾ ಪಕ್ಷವೆಂಬ ಅಷ್ಟಕಸುಬಿ ರಾಜಕೀಯ ಸಂಘಟನೆಯೊಂದು ರೈತ ಚಳುವಳಿಯ ಆವೇಶದಲ್ಲಿ ಆಡಳಿತಕ್ಕೆ ಹಾರಿಬಂದು (ಕಾಂಗ್ರೆಸ್ಸಿನ ಗೂಂಡೂರಾಯರ ಆಡಳಿತ ಕೊನೆಗೊಳ್ಳುವಲ್ಲಿ ರೈತ ಚಳುವಳಿ ಪ್ರಮುಖ ಪಾತ್ರ ವಹಿಸಿತ್ತೆಂಬುದನ್ನು ಇಲ್ಲಿ ನೆನೆಯಬೇಕು) ತನಗೆ ಒಡಲೆಂಬುದನ್ನು ನಿರ್ಮಿಸಿದ ಕೈಗಳಲ್ಲಿ ಒಂದಾದ ರೈತ ಚಳುವಳಿಯ ಬುಡಕ್ಕೇ ಕೈಹಾಕಿರುವ ವಿಪರ್ಯಾಸವನ್ನೂ ನಾವಿಂದು ಕಾಣುತ್ತಿದ್ದೇವೆ. ಅದೇನೇ ಇರಲಿ, ಸದ್ಯಕ್ಕಂತೂ ರೈತ ಚಳುವಳಿಯ ಗಂಡುಮೆಟ್ಟಿನ ನೆಲವೆಂದು ಹೇಳಲಾಗುವ ಶಿವಮೊಗ್ಗ ಮತ್ತು ಹಾಸನ ಜಿಲ್ಲೆಗಳಲ್ಲಿ ನಿಷ್ಕ್ರಿಯತೆ ಎಂದಲ್ಲದಿದ್ದರೂ, ಮೌನವೆಂದು ಕರೆಯಬಹುದಾದ ಸ್ತಬ್ಧತೆ ಆವರಿಸಿದೆ. 'ಕಟ್ಟುವ' ಮನಸ್ಸಿಗಿಂತ 'ಕಾದು ನೋಡುವ' ಮನಸ್ಸೇ ಎದ್ದು ಕಾಣುತ್ತಿದ್ದಂತಿದೆ. ಈ ಹಿನ್ನೆಲೆಯಲ್ಲಿ ರೈತ ಚಳುವಳಿಯ ಚೌಕಟ್ಟು, ನೆಲೆಗಟ್ಟು ಮತ್ತು ಗುರಿಗಳ ಬಗ್ಗೆ ದೊಡ್ಡ ಜಿಜ್ಞಾಸೆ ನಡೆದಿದೆ. ಈ ಎಲ್ಲ ಜಿಜ್ಞಾಸೆಯೂ ರೈತ ಚಳುವಳಿಯ ಒಡಲೊಳಗಿನ ಬೆಂಕಿಯ ರಚನಾತ್ಮಕ ಸಾಧ್ಯತೆಗಳ ಬಗ್ಗೆ ಆಸೆ ಇಟ್ಟುಕೊಂಡೇ ನಡೆದಿರುವಂತಹದು.

ಎರಡೂವರೆ ವರ್ಷಗಳ ಹಿಂದೆ ರೈತ ಚಳುವಳಿ ಕರ್ನಾಟಕ ರೈತಸಂಘದ ಹೆಸರಿನಡಿ ಒಂದು ಸಂಘಟನೆಯಾಗಿ ಬೆಳೆಯತೊಡಗಿದಾಗ ಅದು ನಮ್ಮ ಸುತ್ತಮುತ್ತಲಿನ ಎಲ್ಲವನ್ನೂ ಕಲುಷಿತಗೊಳಿಸುತ್ತಿರುವ ಭ್ರಷ್ಟ ವ್ಯವಸ್ಥೆಯ ವಿರುದ್ಧ ಮೊಳೆಯತೊಡಗಿದ್ದ ಒಂದು ಪ್ರಚಂಡ ಬಿರುಗಾಳಿಯ ಸೂಚನೆಯಾಗಿ, ಒಂದು ಆಶಾಕಿರಣವಾಗಿ ಕಂಡಿತ್ತು. ಬೆಳೆಯಬಲ್ಲ ಯಾವುದೇ ಸಂಘಟನೆ ತೋರಬಹುದಾದ ಇದರ ಶಿಸ್ತು, ಸಂಯಮ ಮತ್ತು ಮಿಗಿಲಾದ ಕೆಚ್ಚು, ನಾಡಿನ ಉದ್ದಗಲಕ್ಕೂ ಆಸೆಯೇ ಬತ್ತಿಹೋಗಿದ್ದ ಹಲವಾರು ಎದೆಗಳಲ್ಲಿ ಭರವಸೆಯ ಕಿಚ್ಚು ಹೊತ್ತಿಸಿತು. ಹರಾಜಿಗಿಟ್ಟಂತಿದ್ದ ಹಳ್ಳಿಗಾಡಿನ ಲಂಗೋಟಿ ರೈತನ ಮಾನ ಮರ್ಯಾದೆ ಇದ್ದಕ್ಕಿದ್ದಂತೆ ದಂ ಎಳೆದುಕೊಂಡು ಮುಷ್ಠಿ ಬಿಗಿ ಹಿಡಿದು ನಿಂತಾಗ ಸಮಾಜದಲ್ಲಿ ಹೊಸ ಸಂಚಲನ ಉಂಟಾದಂತಾಗಿ ಸಾಮಾಜಿಕರು ಅದರತ್ತ ಕುತೂಹಲದಿಂದ ನೋಡತೊಡಗಿದರು.

ಆದರೆ ರೈತ ಚಳುವಳಿಯ ಕನಸು ಎರಡೂವರೆ ವರ್ಷಗಳ ನಂತರವೂ ಕನಸಾಗಿಯೇ ಉಳಿದು, ಆ ಕನಸೀಗ ಸಂಘಟನೆಯಲ್ಲಿ ಬಿರುಕು ಮೂಡಿಸುವಂತಹ ಹತಾಶೆಯಲ್ಲಿ ಇನ್ನಷ್ಟು ಬೆಳೆಯತೊಡಗಿರುವುದು ನಿಜವಾಗಿಯೂ ಕಲವಳಕಾರಿಯೆನಿಸುವ ಸಂಗತಿಯಾಗಿದೆ. ಈ ಕನಸನ್ನು ಹುಟ್ಟು ಹಾಕಿದ ಕರ್ನಾಟಕ ರಾಜ್ಯ ರೈತಸಂಘವು ಈಗ ಬರೀ ಬೆಲೆ ಬೇಡಿಕೆ ಮತ್ತು ಸಾಲ ಮನ್ನಾ ಸಂಘವಾಗಿ ಪರಿವರ್ತಿತವಾಗಿ, ಆ ರೂಪದಲ್ಲೇ ವಿಜೃಂಭಿಸುತ್ತಿರುವುದು ನಮ್ಮೆಲ್ಲರ ಈ ಕಳವಳಕ್ಕೆ ಕಾರಣವಾಗಿದೆ. ರೈತ ಸಂಘ ಪ್ರಕಟಿಸಿರುವ 'ರೈತ ಚಳುವಳಿ ಏಕೆ?' ಎಂಬ ಸಂಘಟನೆಯ ಪ್ರಣಾಳಿಕೆಯಂತಿರುವ ಕಿರುಪುಸ್ತಕದಲ್ಲೇನೂ ಸರ್ವಾಂಗೀಣ ಅಥವಾ ಮೂಲಭೂತ ಬದಲಾವಣೆಯ ತೋರಿಕೆಗಳೇನೂ ಇಲ್ಲ, ನಿಜ. ಅದೊಂದು ನಿರ್ದಿಷ್ಟ ಬೇಡಿಕೆಗಳ ತಾರ್ಕಿಕ ಮಂಡನೆ, ಸೋದಾಹರಣ ವಿವರಣೆ ಮತ್ತು ಈ ಬೇಡಿಕೆಗಳ ಈಡೇರಿಕೆಗಾಗಿ ನಡೆಸಬೇಕಾದ ಹೋರಾಟಕ್ಕೆ ಅಗತ್ಯವಾದ ಮಾರ್ಗಸೂಚಿಗಳನ್ನೊಳಗೊಂಡ ಒಂದು ತರಹದ ವ್ಯಾವಹಾರಿಕ ಕೈಪಿಡಿಯಂತಿದೆ.

ಆದರೆ ನಿಜವಾಗಿಯೂ ಈ ಕೈಪಿಡಿಯೇ ಈ ಚಳುವಳಿಯ ಬೇರು ಬಿಳಲುಗಳನ್ನು ನಿರ್ಧರಿಸುವ ದಾಖಲೆಯೇ? ರೈತ ಚಳುವಳಿ ಆರಂಭವಾದ ಹಿನ್ನೆಲೆ ಮತ್ತು ಅದು ತನ್ನ ಒಡಲಲ್ಲಿಟ್ಟುಕೊಂಡಿರುವ ಬೆಂಕಿಯ ಕಾವನ್ನು ಬಲ್ಲವರ್ಯಾರೂ ಇದನ್ನು ನಂಬಲಾರರು. ಹೋಗಲಿ, ಈ ದಾಖಲೆಯಲ್ಲಿರುವ ೧೯ ಬೇಡಿಕೆಗಳಾದರೂ ಬರೀ ಬೇಡಿಕೆಗಳೇ? ಅವನ್ನು ಒಂದೊಂದಾಗಿ ಸರಿಯಾದ ಆದ್ಯತೆಯಲ್ಲಿಟ್ಟು ಒಂದಕ್ಕೊಂದು ತಾರ್ಕಿಕ ಕೊಂಡಿ ಹಾಕಿ ಅವನ್ನು ನಮ್ಮ ಹಳ್ಳಿಗಾಡಿನ ಬ್ರಾಹ್ಮಣರ, ಲಿಂಗಾಯ್ತರ, ಒಕ್ಕಲಿಗರ, ಕುರುಬರ, ನೇಯ್ಗೆಯವರ, ಬೇಡರ, ಉಪ್ಪಾರರ, ಕಮ್ಮಾ– ಕುಂಬಾರರ, ಕೊರಮ– ಕೊರಚ ಹೊಲೆ– ಮಾದಿಗರ ಕೇರಿಗಳ ಧೂಳಿನಲ್ಲಿ, ಈ ಹಳ್ಳಿಗಾಡನ್ನು ಅವುಚಿಕೊಂಡು ಅವನ್ನು ಪೊರೆಯುತ್ತಿರುವ ಹೊಲ ಗದ್ದೆ ತೋಟಗಳ ಮಣ್ಣಲ್ಲಿ ಹೆಜ್ಜೆ ಹಾಕಿಸಿಕೊಂಡು ಬಂದರೆ, ಅದೊಂದು ಅಲ್ಲೋಲಕಲ್ಲೋಲ ಸ್ಥಿತಿ ತಲುಪಿರುವ ನಮ್ಮ ಗ್ರಾಮೀಣ ಬದುಕು ಆರಂಭಿಸಲೆತ್ನಿಸುತ್ತಿರುವ ವಿಜಯ ಯಾತ್ರೆಯ ಕನಸಿನಂತಿದ್ದೀತು! ಹೌದು, ಇದು ಇನ್ನೂ ಕನಸೇ. ಇದೇ, ಅದರ ಮುನ್ನೋಟದಲ್ಲಿನ ಈ ಸ್ಥಗಿತತೆಯೇ, ರೈತ ಚಳುವಳಿ ಎದುರಿಸುತ್ತಿರುವ ಇಂದಿನ ನಿಜವಾದ ದುರಂತವಾಗಿದೆ.

ಈ ದುರಂತ ರೈತ ನಾಯಕರ ಕಣ್ಣಿಗೇಕೆ ಕಾಣುತ್ತಿಲ್ಲ; ಅರ್ಥವಾಗುತ್ತಿಲ್ಲ? ನಮ್ಮ ರೈತ ನಾಯಕರು ಇದನ್ನು ಅರ್ಥ ಮಾಡಿಕೊಳ್ಳಲಾಗದಷ್ಟು ಪೆದ್ದರು ಎಂದು ನಂಬುವುದು ಕಷ್ಟ. ರೈತ ಸಂಘದ ಸಂಚಾಲಕರಾದ ಸಮಾಜವಾದಿ ಹಿನ್ನೆಲೆಯ ಪ್ರೊ. ಎಂ.ಡಿ. ನಂಜುಂಡಸ್ವಾಮಿಯವರಿಗೆ ಇದು ಅರ್ಥವಾಗದ ಸಂಗತಿ ಎಂದರೆ ನಂಬುವುದಾದರೂ ಹೇಗೆ? ಸಾಲ ಮನ್ನಾ ಮಾಡಿಸಿಕೊಂಡು ಮತ್ತು 'ವೈಜ್ಞಾನಿಕ'ವೆಂದು ಹೇಳಲಾಗುವ ಬೆಳೆ ಬೆಲೆ ಪಡೆದುಕೊಂಡ ದಿನವೇ ರೈತರ ಸುದಿನಗಳು ಆರಂಭವಾದವು; ಹಳ್ಳಿಗಾಡಿನಲ್ಲಿ ಸುಭಿಕ್ಷೆ– ಶಾಂತಿಯ ಯುಗ ತೆರೆದುಕೊಂಡಿತೆಂದು ಇವರೆಲ್ಲ ನಂಬಿದ್ದಾರೋ ಹೇಗೆ? ರೈತನನ್ನು ಭೂಹೀನ ಕೂಲಿಕಾರನಿಂದ ಬೇರೆ ಇಟ್ಟು; ರೈತ ಮತ್ತು ಭೂಹೀನ ಕೂಲಿಕಾರರಿಬ್ಬರನ್ನೂ ಹಳ್ಳಿಯ ಆರ್ಥಿಕ– ಸಾಂಸ್ಕೃತಿಕ ಚೌಕಟ್ಟಿನಿಂದ ಹೊರಗಿಟ್ಟು; ಹಳ್ಳಿಯನ್ನು ಇಡೀ ಸಮಾಜದ– ಬಹು ಸಂಕೀರ್ಣಮಯವಾಗಿ ತೋರುವ– ಅನೇಕಾನೇಕ ಚೈತನ್ಯಗಳ ನರನಾಡಿಗಳಿಂದ ದೂರವಿಟ್ಟು ಪ್ರಯೋಗ ಮಾಡಿ ನೋಡುವ ಹುಚ್ಚುತನಕ್ಕೇನಾದರೂ ರೈತ ಚಳುವಳಿ ಒಳಗಾಗಿದೆಯೇ? ರೈತ ಚಳುವಳಿಯನ್ನು ಶ್ರೀಮಂತ ರೈತರ, ಮೇಲ್ಜಾತಿ ಭೂಮಾಲಿಕರ, ಕೇವಲ ಚಳುವಳಿಕೋರರ, ಹತಾಶ ಸಿದ್ಧಾಂತ ಶೂರರ ಹಾವಳಿ ಎಂದು ತಳ್ಳಿ ಹಾಕುವ ಸಿನಿಕರದ್ದಲ್ಲ ಈ ಪ್ರಶ್ನೆಗಳು. ರೈತ ಚಳುವಳಿ ತನ್ನ ಬೆಲೆ– ಸಾಲ ಬೇಡಿಕೆಗಳನ್ನು ಅರಗಿಸಿಕೊಂಡು ಹಳ್ಳಿಗಾಡಿನ ಇಡೀ ಬದುಕನ್ನು ಎಲ್ಲ ನರಮಾನರ ನೆಮ್ಮದಿಗಾಗಿ ಪುನರ್ವಿನ್ಯಾಸಗೊಳಿಸುವ ಸಾಧನವಾಗಿ ರೂಪುಗೊಳ್ಳಬೇಕಾದ ಮಾಧ್ಯಮ ಎಂಬ ಸದ್ಭಾವನೆ ಉಳ್ಳವರು ಎತ್ತುವ ಪ್ರಶ್ನೆಗಳು ಇವು.

ರೈತ ಸಂಘವು ವ್ಯವಸಾಯವನ್ನು ಒಂದು ಕೈಗಾರಿಕೆಯೆಂದು ಘೋಷಿಸಿ, ನಮ್ಮ ಅರ್ಥವ್ಯವಸ್ಥೆಯನ್ನೂ ಜೊತೆ ಜೊತೆಗೆ ನಮ್ಮ ಮನುಷ್ಯಗುಣವನ್ನೂ ಹೀರಿ ಹಿಪ್ಪೆ ಮಾಡುತ್ತಿರುವ

ಕೈಗಾರಿಕಾ ಕ್ಷೇತ್ರಕ್ಕೆ ಕೊಡುವ ಎಲ್ಲ ಸವಲತ್ತುಗಳನ್ನೂ ತನಗೂ ಕೊಡಬೇಕೆಂದು ಆಗ್ರಹಿಸುತ್ತಿರುವ ಸಂಗತಿ ಅದರ ಭವಿಷ್ಯದ ಬಗ್ಗೆ ಆಸೆ ಇಟ್ಟುಕೊಡಿರುವ ಯಾರನ್ನಾದರೂ ಅಲುಗಾಡಿಸುತ್ತದೆ. 'ವೈಜ್ಞಾನಿಕತೆ' ಎಂಬ ದೆವ್ವವನ್ನು ಮೈಮೇಲೆ ಎಳೆದುಕೊಂಡಿರುವ ರೈತಸಂಘ, ವಿವಿಧ ಬೆಳೆಗಳಿಗೆ 'ವೈಜ್ಞಾನಿಕ'ವಾಗಿ ಬೆಲೆ ಅಂದಾಜು ಮಾಡಿರುವ ರೀತಿ ಯಾವುದೇ ಬಂಡವಾಳವಾದಿಯನ್ನೂ ನಾಚಿಸುವಂತಿದೆ. ಈ 'ವೈಜ್ಞಾನಿಕ' ಅಂದಾಜಿನ ಆಧಾರದ ಮೇಲೆಯೇ ಬೆಲೆ ಮೋಸ, ಮಾರುಕಟ್ಟೆ ಮೋಸಗಳನ್ನು ಲೆಕ್ಕ ಹಾಕಿ, 'ರೈತನ ಸಾಲ ಚುಕ್ತಾ' ಎಂಬ ವಾದವನ್ನು ರೂಪಿಸಿರುವುದು ಎಂಬುದನ್ನು ಗಮನಿಸಿದಾಗ ರೈತ ಚಳುವಳಿ ಕಾಣುತ್ತಿರುವ ಕನಸಿನ ಬಗ್ಗೆ ಭಯ ಮೂಡತೊಡಗುತ್ತದೆ.

ರೈತ ಚಳುವಳಿಯನ್ನು, ಹಳ್ಳಿಗಳನ್ನು ಎಂದೋ ನರಕಕ್ಕೆ ತಳ್ಳಿರುವ ಊಳಿಗಮಾನ್ಯಶಾಹಿ ಭೂಮಾಲೀಕರ ಮತ್ತು ಹಳ್ಳಿಯಲ್ಲೊಂದು ಮತ್ತು ಪಟ್ಟಣದಲ್ಲೊಂದು ಕಾಲಿಟ್ಟುಕೊಂಡು ಹಳ್ಳಿಗಳ ಉಸಿರನ್ನೇ ಅಡಗಿಸತೊಡಗಿರುವ ತಲೆಹಿಡುಕ ರೈತ ಪುಢಾರಿಗಳ ಚಳುವಳಿಯೆಂದು ತಿರಸ್ಕರಿಸಬಹುದಿತ್ತು. ಆದರೆ ಈ ರೈತ ಚಳುವಳಿಯ ನಾಯಕಗಣವನ್ನೊಮ್ಮೆ ನೋಡಿ: ಅಧ್ಯಕ್ಷರಾದಂಥ, ಪ್ರೀತಿ ಸುರಿಸುವ ತಾತನಂತಿರುವ ಎಚ್.ಎಸ್. ರುದ್ರಪ್ಪ ಹಳೇ ಕಾಂಗ್ರೆಸ್ ಧುರೀಣರಾದರೂ, ಎಂಜಲು ಕಾಸು– ಆಸ್ತಿಯೆಂದರೆ ಮಾರು ದೂರವೇ ಉಳಿಯುವ ಪೈಕಿಯೆಂದು ಹೆಸರಾದವರು. ಇನ್ನು ಕಾರ್ಯದರ್ಶಿಗಳಾದಂಥ ಮಾಜಿ ಸೊಗಸುಗಾರ ಪುಟ್ಟಸ್ವಾಮಿ ಎಂಬ ಪ್ರೀತಿಯ ಬಿರುದಿಗೆ ಪಾತ್ರರಾದ ಮತ್ತು ಸೌಜನ್ಯ– ಉಪಚಾರಗಳಿಗೆ ಮತ್ತೊಂದು ಹೆಸರಿನಂತಿರುವ ಎನ್.ಡಿ. ಸುಂದರೇಶ್, ಎಲ್ಲೆಲ್ಲೂ ನಗೆ ಚೆಲ್ಲುತ್ತಾ ತಾವು ಮಾತ್ರ ಗಂಭೀರವದನರಾಗಿ ಪರದಾಡುವ ಗಡ್ಡದ ಕಡಿದಾಳು ಶಾಮಣ್ಣ ಮತ್ತು ಸಂಚಾಲಕರಾದ ಸುಪ್ರಸಿದ್ಧ ತ್ರಿಕಾಲ ಬ್ರಹ್ಮದ್ವೇಷಿ ಪ್ರೊ. ಎಂ.ಡಿ. ನಂಜುಂಡಸ್ವಾಮಿ ಸಮಾಜವಾದಿ ಗರಡಿಯಲ್ಲಿ ಸಾಕಷ್ಟು ಕಾಲ ಕಸರತ್ತು ಮಾಡಿದವರು. ಹಾಸನದ ದತ್ತ, ವೆಂಕಟೇಶ ಮೂರ್ತಿ, ಶಿವಪ್ರಸಾದ್, ಆರೇಹಳ್ಳಿ ರಾಜೇಗೌಡ, 'ಮಚ್ಚು' ವಾಸು, ವಿಶ್ವನಾಥ್, ಹನುಮಂತೇಗೌಡ, ವಿಜಯಕುಮಾರ್, ಪಾಂಡುರಂಗ ವಿಟ್ಠಲ, ಶಿವಮೊಗ್ಗದ ಗಂಗಾಧರ್, ತೀರ್ಥಹಳ್ಳಿಯ ಕೂಡ್ಲು ವೆಂಕಟೇಶ್ ಮುಂತಾದವರೆಲ್ಲ ಸಹಜ ಪ್ರೀತಿ ಮಾತ್ರ ಮನುಷ್ಯನನ್ನು ಆಳುವಂತಾಗಬೇಕೆಂದು ನಂಬಿರುವ ಕನಸಿಗರು.

ಇಂತಹ, ಯಾವ ಸಂಘಟನೆಯಾದರೂ ಕರುಬುವಂತಹ ಅನುಭವದ, ಆರೋಗ್ಯಪೂರ್ಣವಾದ ಯೌವ್ವನದ ನಾಯಕತ್ವ ಹೊಂದಿಯೂ, ರೈತ ಚಳುವಳಿಯೇಕೆ ದಡ್ಡ ಧಾಂಡಿಗನಂತೆ ವರ್ತಿಸುತ್ತಿದೆ? ಶಿವಪ್ರಸಾದ್ ಏಕೆ ಸಂಘದಿಂದ ದೂರವಾದರು? ರೈತರನ್ನು ತಿಗಣೆಗಳಂತೆ ಹೊಸಕಿ ಹಾಕುತ್ತಿರುವ ಪ್ರಸಕ್ತ ವ್ಯವಸ್ಥೆಯ ಮೂಲ ಸ್ರೋತದಂತಿರುವ ಬಂಡವಾಳಶಾಹಿ ಕೈಗಾರಿಕೆಯ ಮತ್ತೊಂದು ಅವತಾರವಾಗಲೆಣಿಸುವ ರೈತ ಚಳುವಳಿಗೆ ವಿವೇಕವೆಂಬುದೇನಾದರೂ ಇದೆಯೇ? ಇವರು ತಮ್ಮ 'ವೈಜ್ಞಾನಿಕ' ಬೆಲೆ ಲೆಕ್ಕಾಚಾರಗಳ ವೈಭವದ ಮಧ್ಯೆ ಮೈಮರೆತಂತೆ ಕೈಹಾಕುತ್ತಿರುವುದು ಯಾವ ಸಂಸ್ಕೃತಿಯ ಯಾರ ಹೆಗಲ

ಮೇಲೆ ಎಂಬುದರ ಪರಿವೆಯೇನಾದರೂ ಈ ನಾಯಕ ಶಿಖಾಮಣಿಗಳಿಗಿದೆಯೇ? ಯಾರೆಂದರವರು, ಹ್ಯಾಗೆಂದರೆ ಹಾಗೆ ದೋಚಲು ಆಸ್ಪದವಿರುವ ಇಂದಿನ ಅರ್ಥವ್ಯವಸ್ಥೆಯಲ್ಲಿ 'ವೈಜ್ಞಾನಿಕ' ಲೆಕ್ಕಾಚಾರವೆಂಬುದೇ– ವೈಜ್ಞಾನಿಕ ಎಂಬುದರಲ್ಲಿ ಆವರಣ ಸಹಿತವಾದ ಗ್ರಹಿಕೆ ಎಂಬುದೇನದರೂ ಇದ್ದಲ್ಲಿ– ಅವೈಜ್ಞಾನಿಕ ಎಂಬ ಸಂಗತಿ ಪ್ರಖರ ಲೋಹಿಯಾವಾದಿ ಎಂದು ನಂಬಲಾಗಿರುವ ಪ್ರೊ. ಎಂ.ಡಿ. ನಂಜುಂಡಸ್ವಾಮಿಯಂತಹವರಿಗಾದರೂ ಏಕೆ ಹೊಳೆಯುವುದಿಲ್ಲ? ಸಮಾಜವಾದಿಗಳೆನಿಸಿಕೊಂಡವರು ರಾತ್ರೋರಾತ್ರಿ ಬರೀ ರೈತನಾಯಕರಾಗಿ ಕುಬ್ಜರಾಗಿಬಿಡುವ ಧಾವಂತದ ಪರಿಣಾಮವೇ ಇದಿರಬೇಕು.

ಈಗ ದುಡಿಯುವ ರೈತನಿಗೆ ದುಡಿಮೆಗೆ ತಕ್ಕ ಪ್ರತಿಫಲವಿಲ್ಲ. ಇದಕ್ಕೆ ಯಾರದ್ದೂ ದುಸರಾ ಮಾತೇ ಇಲ್ಲ. ಹಾಗಾದರೆ ರೈತನ ದುಡಿಮೆಯ ಫಲವೆಲ್ಲ ಎಲ್ಲಿ ಹಂಚಿ ಹೋಗುತ್ತಿದೆ? ಯಾರು ಆತನನ್ನು ಲೂಟಿ ಮಾಡುತ್ತಿರುವವರು? ರೈತ ಚಳುವಳಿಗೆ ಆತ್ಮಸಾಕ್ಷಿ ಎಂಬುದೇನಾದರೂ ಇದ್ದರೆ ಅದು ಈ ಪ್ರಶ್ನೆಯನ್ನು ಹಳ್ಳಿಯ ಭೂಮಾಲೀಕರ ಕೊಟ್ಟಿಗೆಯಲ್ಲಿ ಮಲಗುವ ಜೀತದಾಳು, ಜಗುಲಿಯಾಚೆ ನಿಂತು ಕೂಲಿ ಕೇಳುವ ಭೂರಹಿತರಾದ ದಲಿತ ಕೃಷಿ ಕಾರ್ಮಿಕರು, ಬಂಜರು ಭೂಮಿ ಕೆರೆದು ಆಕಾಶ ನೋಡುವ ಲಂಗೋಟಿ ರೈತ, ಬೆಳೆದಿದ್ದನ್ನು ಆರು ತಿಂಗಳು ಉಂಡು ಇನ್ನಾರು ತಿಂಗಳು ಕೂಲಿಗಾಗಿ ಅಲೆಯುವ ನಾಮಮಾತ್ರನಾದ ರೈತ– ಇವರಿಂದ ಶುರು ಮಾಡಿ, ಗ್ರಾಮ ಪಂಚಾಯ್ತಿ, ತಾಲ್ಲೂಕು ಬೋರ್ಡು, ಸಹಕಾರಿ ಬ್ಯಾಂಕುಗಳು, ಭೂ ಅಡಮಾನ ಬ್ಯಾಂಕುಗಳು, ರೆಗ್ಯುಲೇಟೆಡ್ ಮಾರ್ಕೆಟ್ ಸಂಸ್ಥೆಗಳು ಮುಂತಾದವುನ್ನೆಲ್ಲ ಸೂರೆ ಮಾಡಿ. ಮುಳುಗಿಸಿ ಹಳ್ಳಿ– ಪಟ್ಟಣಗಳ ನಡುವೆ ಪುಢಾರಿತನ ಮಾಡಿಕೊಂಡು ಹಲವು ಹನ್ನೊಂದು ಕುಟುಂಬಗಳನ್ನು ನೆಲಸಮ ಮಾಡಿ ಹಳ್ಳಿ ಮತ್ತು ಪಟ್ಟಣಗಳೆರೆಡರದ್ದೂ ಮಜಾ ಉಡಾಯಿಸುತ್ತಿರುವ ನವ ಪಾಳೇಗಾರರನ್ನೂ ವಿಚಾರಿಸಿಕೊಂಡು; ವರ್ತಕರು, ಸಂಪೂರ್ಣ ಪಟ್ಟಣವಾಸಿಗಳಾದ ಸರ್ಕಾರಿ ನೌಕರರು, ಅಧಿಕಾರಿಗಳು, ರಾಜಕಾರಣಿಗಳು, ಕೈಗಾರಿಕೋದ್ಯಮಿಗಳು, ಕಾರ್ಖಾನೆ ಕಾರ್ಮಿಕರು– ಇವರವರೆಗೆ ಎಲ್ಲರನ್ನೂ ಕೇಳಿಕೊಂಡು ಬರಲಿ. ನಂತರ ಎಲ್ಲ ಉತ್ತರಗಳನ್ನೂ ವಿಶ್ಲೇಷಿಸಲಿ. ಆಗ ಅವರಿಗೇ ಗೊತ್ತಾಗುತ್ತದೆ, ಹಲವಾರು ಹಂತಗಳಲ್ಲಿ, ಹಲವಾರು ತರಹಗಳಲ್ಲಿ ಒಬ್ಬರನ್ನೊಬ್ಬರು ಲೂಟಿ ಮಾಡಿಕೊಂಡು ಬದುಕುತ್ತಿರುವ ವ್ಯವಸ್ಥೆ ಇದೆಂದು. ಹಾಗೇ, ಈ ವಿಶ್ಲೇಷಣೆಯಲ್ಲಿ ಅಪರಾಧಿಗಳ ಸ್ಥಾನದಲ್ಲಿ ಕೈಗಾರಿಕೋದ್ಯಮಿಗಳ, ಅಧಿಕಾರಿಗಳ, ರಾಜಕಾರಣಿಗಳ ಜೊತೆ ಜೊತೆಯಲ್ಲಿ ರೈತ ಚಳುವಳಿ ಒಂದೇ ಮಾತಿನಲ್ಲಿ ಸಾರಾ ಸಗಟಾಗಿ ರೈತ ಎಂದು ಕರೆಯುತ್ತಿರುವವರ ಪೈಕಿ ಅನೇಕರು ನಿಲ್ಲಬೇಕಾಗುತ್ತದೆ ಎಂದು! ಒಬ್ಬರನ್ನೊಬ್ಬರು ಲೂಟಿ ಹೊಡೆಯುತ್ತಾ ಕೊನೆಗೆ ಈಗ ರೈತನ ಲಂಗೋಟಿಯನ್ನೂ ಕಿತ್ತುಕೊಳ್ಳಲು ಉದ್ಯುಕ್ತರಾಗಿರುವ ಈ ಶುದ್ಧ ಹಲಾಲ್‌ಟೋಪಿ ವ್ಯವಸ್ಥೆಗೆ ಜಾತಿಯ ಹೆಸರಿನಲ್ಲಿ, ರಾಜಕೀಯ ಅಧಿಕಾರದ ಹೆಸರಿನಲ್ಲಿ ರೈತರೂ ನೀರೆರೆದು ಪೋಷಿಸಿದ್ದಾರೆ ಎಂದು. ಪರಿಸ್ಥಿತಿ ಹೀಗಿರುವಾಗ

೧೯ ವೇದಿಕೆಗಳ ಸಿಂಹಾಸನದ ಮೇಲೆ ಕೂತು ಸಾಲ ಮನ್ನಾ, ವೈಜ್ಞಾನಿಕ ಬೆಲೆ ಎಂಬೆರೆಡೇ ವರಗಳಿಗಾಗಿ ತಪಸ್ಸು ನಡೆಸುತ್ತಿರುವ ರೈತ ಚಳುವಳಿ ಯಾರಿಗೆ ಶಾಪವಾಗಬೇಕೆಂದಿದೆ?

ರೈತ ಚಳುವಳಿ ಈಗ ಕೊಂಚ ಆತ್ಮ ವಿಮರ್ಶೆ ಮಾಡಿಕೊಳ್ಳಬೇಕಿದೆ. ಬಾಳ್ಳುಪೇಟೆ ಪ್ಲಾಂಟರುಗಳು ಮತ್ತು ದಲಿತ ಕೂಲಿಕಾರರ ನಡುವಣ 'ಘರ್ಷಣೆ'ಯಲ್ಲಿ ತನ್ನನ್ನು ಕಮಕ್-ಕಿಮಕ್ ಎನ್ನದಂತೆ ಕೂರಿಸಿದ ಶಕ್ತಿ ಯಾವುದು ಎನ್ನುವುದರ ಬಗ್ಗೆ ಅದು ಆಲೋಚಿಸಬೇಕಿದೆ. ಕಲ್ಲೂರಿನ ಪುಂಡಾಟಿಕೆ, 'ದಾರಿ ದೀಪ' ಪುಟ್ಟರಾಮುವಿನ ಮೇಲೆ ಹಲ್ಲೆ - ಇವುಗಳ ಹಿನ್ನೆಯಲ್ಲಿರುವ ಸೂಕ್ಷ್ಮಗಳು ಯಾವ ನೆಲೆಗೆ ಸೇರಿದವು ಎಂಬುದನ್ನು ವಿಶ್ಲೇಷಿಸಬೇಕಿದೆ. ಅನುಕೂಲಸ್ಥ ರೈತನೊಬ್ಬನ ಮನೆ ಜಫ್ತಿ ಆಗುವವರೆಗೂ ಜಫ್ತಿ ಕಾರ್ಯಾಚರಣೆಯನ್ನು ಕ್ರಿಯಾತ್ಮಕವಾಗಿ ವಿರೋಧಿಸದೇ ಇದ್ದ ತಾಳ್ಮೆ ಯಾವುದು ಎಂಬುದನ್ನು ಗುರುತಿಸಬೇಕಾಗಿದೆ. ಬಡ್ಡಿ ಮನ್ನಾದ ಆಸೆ ತೋರಿಸಿದೊಡನೆ ನೂರು ಕೋಟಿ ರೂಪಾಯಿಗಳಿಗೂ ಹೆಚ್ಚಿನ ಸಾಲ ಸರ್ಕಾರಕ್ಕೆ ಮರುಪಾವತಿಯಾದದ್ದರ ವಿವರ ಮತ್ತು ರಹಸ್ಯವನ್ನು ಭೇದಿಸಬೇಕಿದೆ. ಭೂಸುಧರಣೆ ಕಾಯಿದೆ ಜಾರಿಯಾದ ಮೇಲೆ ಭಾರಿ ಭೂಮಾಲೀಕರು ಇಲ್ಲವಾಗಿದ್ದಾರೆ ಎಂಬ ಬುರುಡೆಯನ್ನೂ, ರೈತರ ಕಷ್ಟ ರೈತರಿಗೆ ಮಾತ್ರ ಗೊತ್ತು ಎಂಬ ಭೋಳೆಯನ್ನೂ, 'ವೈಜ್ಞಾನಿಕ' ಬೆಲೆಗಳ ಲೆಕ್ಕಾಚಾರಗಳ ಭಾಷಣಗಳಲ್ಲಿ 'ಒಬ್ಬನಿಗೆ ಒಂದು ದಿನಕ್ಕೆ ೧೦ ರೂ. ಕೂಲಿ' ಎಂದು ಹೇಳುವ ಹಸಿ ಕ್ರೌರ್ಯವನ್ನೂ, ಹರಿಜನ ಭೂ ಪರಭಾರೆ ಪ್ರಕರಣಗಳಲ್ಲಿ ನ್ಯಾಯಕ್ಕಾಗಿ ಸರ್ವೋಚ್ಚ ನ್ಯಾಯಾಲಯದ ಮೆಟ್ಟಿಲು ಹತ್ತುವುದಾಗಿ ಹೇಳುವ ಅವಿವೇಕವನ್ನೂ ಕೂಡಲೇ ನಿಲ್ಲಿಸಬೇಕಗಿದೆ. ಎಲ್ಲಕ್ಕಿಂತ ಮೊದಲಿಗೆ, ಇಂದಿನ ರೈತ ನಾಯಕರಲ್ಲಿ ಎಷ್ಟು ಜನ ನಿಜವಾಗಿ ತಮ್ಮ ಹೊಲ- ಗದ್ದೆ ತೋಟಗಳಲ್ಲಿ ರೈತರಾಗಿ ಕೆಲಸ ಮಾಡಿದ್ದಾರೆ/ಮಾಡುತ್ತಿದ್ದಾರೆ ಎಂಬುದನ್ನೂ ಬಹಿರಂಗಪಡಿಸಬೇಕಿದೆ.

ಹಳ್ಳಿಗಳು ಇಂದು ಭೂಕಂಪನಗಳ ಮೆಲೆ ಕುಂತಿದೆ. ಜಾತಿದ್ವೇಷಗಳ ದಳ್ಳುರಿಯಲ್ಲಿ ಕುದಿಯುತ್ತಿವೆ; ಭೂವಿವಾದಗಳ ಕುರುಕ್ಷೇತ್ರ ನಡೆದೇ ಇದೆ. ಒಮ್ಮೆಗೇ ದುಃಖದ ಮಾತುಗಳಲ್ಲಿ ಹೇಳುವುದಾದರೆ, ಹಳ್ಳಿಗಳು ಒಡೆದು ಚೂರಾಗಿವೆ, ಆತ್ಮವಿಲ್ಲದ ದೇಹದ ಚೂರುಗಳಂತೆ. ರೈತನ ಅಂದರೆ ಹಳ್ಳಿಯ ಪುನರುಜ್ಜೀವನದ ಯಾವುದೇ ಕೆಲಸ ಮೊದಲು ಇಲ್ಲಿಂದ ಆರಂಭವಾಗಬೇಕಿದೆ. ಹಳ್ಳಿಯನ್ನು ಒಂದುಗೂಡಿಸಿ ಅದಕ್ಕೊಂದು ಆತ್ಮ ಕೊಡುವ ಕೆಲಸವಿದು. ರೈತ ಚಳುವಳಿ ಈ ಎರಡೂವರೆ ವರ್ಷಗಳಲ್ಲಿ ನಡೆಸಿರುವ ಚಟುವಟಿಕೆಗಳನ್ನು ಒಟ್ಟಾರೆ ಗಮನಿಸಿದರೆ ಹಳ್ಳಿಯ ಈ ಅಂತರಪಿಶಾಚಿತನವನ್ನು ಗುರುತಿಸಿದೆ ಎಂದು ಹೇಳುವುದು ಕಷ್ಟ. ನಾಲ್ಕಾರು ರೈತ ಮುಖಂಡರ ಜೊತೆ ಮೊಕ್ತಾ ಮಾತನಾಡಿದಾಗಲೇನೋ ಚರ್ಚೆ ಈ ಕಡೆ ಹೊರಳುವುದುಂಟು. ಈ ಚರ್ಚೆಯ ಒಟ್ಟು ಆಶಯ ಈ ಆತ್ಮದ ಕಡೆಯೇ ಬೊಟ್ಟು ಮಾಡುವುದೂ ಉಂಟು. ಆದರೆ ಅಷ್ಟೇ, ಅಷ್ಟೇ. ನಂಗಾ (ಬೆತ್ತಲೆ) ಆಗಿಬಿಡಲಿರುವ ಲಂಗೋಟಿ ರೈತನನ್ನು ನೆನಪಿಸಿದೊಡನೆ, 'ಇದೆಲ್ಲಾ ರೈತ ಚಳುವಳಿಯನ್ನು ಒಡೆಯುವ ಕುತಂತ್ರ!' ಎಂಬ ಭರ್ತ್ಸನೆಯ ಟೀಕೆಯನ್ನು ಕೆಲವು ವಲಯಗಳಲ್ಲಿ ಎದುರಿಸಬೇಕಾಗಿದೆ. ಆದರೆ ಈ ಭರ್ತ್ಸನೆ,

ಅದರ ಹಿಂದಿನ ಅಹಂಕಾರ ಅವರನ್ನಲ್ಲ, ಇಡೀ ಚಳುವಳಿಯನ್ನು ಎಲ್ಲಿಗೆ ಕೊಂಡೊಯ್ಯಬಲ್ಲುದು ಎಂಬುದನ್ನು ಅಗತ್ಯ ವ್ಯವಧಾನದೊಂದಿಗೆ ಪರ್ಯಾಲೋಚಿಸಬೇಕಿದೆ.

ತಾಯಿ ಬೇರಿಲ್ಲದೆ ಅರಳಿ ನಿಂತಿರುವ ಆಸೆಯ ಹೂವಿನಂತಿರುವ ರೈತ ಚಳುವಳಿ ತಾನು ನಿಂತಿರುವ ನೆಲದ ಸಾರವನ್ನು ತನ್ನೆಡೆಗೆ ಯಾರು ಹರಿಸಬಲ್ಲರು ಎಂಬುದನ್ನು ಹುಡುಕಿ ನೋಡಬೇಕು. ನಾಡಿನ ಉದ್ದಗಲಕ್ಕಲ್ಲದಿದ್ದರೂ ಅಲ್ಲಲ್ಲಿ ಹಳ್ಳಿ ಬದುಕಿಗೆ ತನ್ನ ನೋವನ್ನೆಲ್ಲ ಪ್ರೇಮವಾಗಿ ಪರಿವರ್ತಿಸಿಕೊಂಡು ಉಸಿರು ತುಂಬುವ ಕೆಲಸ ಮಾಡುತ್ತಿರುವ ದಲಿತ ಸಂಘರ್ಷ ಸಮಿತಿಯ ಜೊತೆಗೂಡಬೇಕು. ಬಿದರೆ ಕಾವಲಿನ ಪ್ರಯೋಗ ಈ ಸಂಯುಕ್ತ ಜವಾಬ್ದಾರಿಯೆಡೆಗೆ ಸ್ಫೂರ್ತಿಯಾಗಬೇಕು. ಹಳ್ಳಿಗಳಿಗೆ ವಿಷ ಉಣಿಸುತ್ತಿರುವ ಜಾತಿ ವ್ಯವಸ್ಥೆಯನ್ನು ನಿರ್ಮೂಲನ ಮಾಡಲು ದಲಿತರ ನೋವು, ರೈತ ಚಳುವಳಿಯ ಕಿಚ್ಚು ಮಿಲನವಾಗಿ ಹೊಸ ಮಾರ್ದವತೆಯೊಂದು ಸಂಘಟಿತವಾಗಬೇಕು. ಭೂಸಂಬಂಧಗಳ ತಗಾದೆಗಳ ಬಗ್ಗೆ ರೈತ ಚಳುವಳಿ ದಸಂಸದ ಪ್ರತಿನಿಧಿಗಳು ಹಳ್ಳಿಗಳಲ್ಲಿ ಜೊತೆಯಾಗಿ ಕೂತು ಕೇಳಿ ಒಂದು ನಿರ್ಣಯಕ್ಕೆ ಬರುವಂತಾಗಬೇಕು. ಇಬ್ಬರ ಘೋಷಿತ ಕನಸು ಒಂದೇ ಆಗಿರುವಾಗ ಇಬ್ಬರೂ ಜೊತೆಯಲ್ಲಿ ಯಾಕೆ ಹೆಜ್ಜೆ ಹಾಕಬಾರದು?

ಇದಕ್ಕೆ ಪೂರ್ವಭಾವಿಯಾಗಿ ದಲಿತ ಚಳುವಳಿ ಮತ್ತು ರೈತ ಚಳುವಳಿಗಳೆರಡೂ ತಂತಮ್ಮ ಧೋರಣೆ– ಕಾರ್ಯಕ್ರಮಗಳನ್ನು ಪುನರ್ರೂಪಿಸಿಕೊಳ್ಳಬೇಕಿದೆ. ಇದಕ್ಕಾಗಿ ವಿಶಾಲ ತಳಹದಿಯ ಸಂಯುಕ್ತ ಸಂಘಟನೆಯೊಂದನ್ನು ಕಟ್ಟಿಕೊಳ್ಳಬೇಕಿದೆ. ಸುಮ್ಮನೆ ಪರಸ್ಪರ ದೂಷಿಸುವುದನ್ನು ನಿಲ್ಲಿಸಿ, ಯಾವುದಕ್ಕೆ ಯಾರು ಹೊಣೆ, ಯಾರ ಸುಲಿಗೆ ಯಾರಿಂದ ಮತ್ತು ಏಕೆ ಆಗುತ್ತಿದೆ, ಯಾರ ಕನಸು ಯಾರಿಂದ ಮತ್ತು ಯಾವುದರಿಂದ ಭಗ್ನಗೊಳ್ಳುತ್ತಿದೆ ಇತ್ಯಾದಿ ಅಡಿಪಾಯದ ಪ್ರಶ್ನೆಗಳನ್ನು ಭೋಳೆ ಮಾತುಗಳಲ್ಲಿ ಹರಿಯಬಿಡದೆ ಕೂಲಂಕುಶವಾಗಿ ಸಮೀಕ್ಷೆ, ಅಧ್ಯಯನ ಮತ್ತು ಸಮೀಪೀಕರಣ ತತ್ವದ ಆಶಯದೊಂದಿಗೆ ಚರ್ಚಿಸಬೇಕಾಗಿದೆ. ಆ ಮೂಲಕ ಯಾವ ಭ್ರಷ್ಟ ವ್ಯವಸ್ಥೆಯಿಂದ ರೈತ ಮತ್ತು ದಲಿತರಿಬ್ಬರೂ ಬೀದಿ ಪಾಲಾಗುತ್ತಿರುವರೋ ಆ ಭ್ರಷ್ಟ ವ್ಯವಸ್ಥೆಯ ವಿರುದ್ಧ ಸಮರ ಸಾರಬೇಕಾಗಿದೆ.

ಇಲ್ಲದೇ ಹೋದಲ್ಲಿ ರೈತನನ್ನು ಮುಳುಗಿಸಿರುವ ಭ್ರಷ್ಟ ವ್ಯವಸ್ಥೆಯ ವ್ಯವಸ್ಥಾಪಕನಂತಿರುವ ಸರ್ಕಾರದೊಂದಿಗೆ ಒಂದಾದರಮೇಲೊಂದರಂತೆ ನಿಲ್ಲದೆ ನಡೆಯುತ್ತಿರುವ ಮಾತುಕತೆಗಳೆಂಬ ಚಿಲ್ಲರೆ ವ್ಯಾಪಾರ ಕುದುರಿಸುತ್ತಾ ಕೊಳೆತು ನಾರತೊಡಗುತ್ತದೆ ನಮ್ಮೆಲ್ಲರ ಕನಸಿನ ರೈತ ಚಳುವಳಿ.

✧✧✧

(೧೯೮೩ರ ನವೆಂಬರ್‌ನಲ್ಲಿ 'ಪಂಚಮ' ಪತ್ರಿಕೆ ಹೊರತಂದ ದಲಿತ+ರೈತ ಸಂಚಿಕೆಗಾಗಿ ಬರೆದ ಲೇಖನ)

೩೯. ಕೃಷ್ಣಪ್ಪ ಯೋಚಿಸತೊಡಗಿದರು...

ಬಿ. ಕೃಷ್ಣಪ್ಪನವರನ್ನು ಯಾವ ಅಭಿಪ್ರಾಯಕ್ಕೆ ಬೇಕಾದರೂ ಬಗ್ಗಿಸಬಹುದು ಅನ್ನುವ ಪ್ರತೀತಿ ಇದೆ. ಸಂಸದೀಯ ಪ್ರಜಾಪ್ರಭುತ್ವ, ಗಾಂಧಿ ಮಾರ್ಗ, ಹಿಂದೆ– ಅಹಿಂಸೆ ಇತ್ಯಾದಿ ವಿಷಯಗಳು ಬಂದಾಗ ನಾನೂ ಪರೀಕ್ಷಿಸಿ ನೋಡಿದ್ದೇನೆ. ನೋಡಲು ಘನ ಗಂಭೀರ ಕಬ್ಬಿಣದ ಸ್ತಂಭದಂತೆ ಕಾಣುವ ಇವರು ಚರ್ಚೆ ವಾಲಿದತ್ತ ತಾವೂ ವಾಲುತ್ತಾ ಹೋಗುವ ಪರಿಯನ್ನು ಕಂಡು ಬೆರಗಾಗಿದ್ದೇನೆ. ಬುಡ ಭದ್ರವಿಲ್ಲದ ಎಂತೆಂತಹ ಸೌಧಗಳೋ ಕುಸಿದು ಬೀಳುತ್ತಿರುವಾಗ ಈ ಕಬ್ಬಿಣದ ಸ್ತಂಭ ವಾಲಾಡುವುದರಲ್ಲಿ ಬೆರೆಗೇನಿದೆ ಎಂದು ಸಮಾಧಾನವನ್ನೂ ಪಟ್ಟಿದ್ದೇನೆ. ಆದರೆ ಮರುಕ್ಷಣದಲ್ಲೇ ಇವರು ರಾಜ್ಯ ದಲಿತ ಚಳುವಳಿಯ ಅಗ್ರ ನಾಯಕರೂ ಹೌದು ಎಂಬುದು ನೆನಪಾಗಿ ಆತಂಕವನ್ನೂ ಅನುಭವಿಸಿದ್ದೇನೆ.

ದಲಿತ ಸಂಘರ್ಷ ಸಮಿತಿಯ ಆಧಾರ ಸ್ತಂಭಗಳಲ್ಲಿ ಒಬ್ಬರಾದ ಕೃಷ್ಣಪ್ಪನವರ ಈ ವಾಲಾಟ ಬುಡವನ್ನು ಪರೀಕ್ಷಿಸಿ; ಭದ್ರ ಮಾಡಿಕೊಳ್ಳುವ ಹೋರಾಟದ ಭಾಗವೇ ಆಗಿದೆ ಎಂಬುದು ಅವರನ್ನು ಹತ್ತಿರದಿಂದ ಬಲ್ಲವರಿಗೆಲ್ಲ ಗೊತ್ತು. ನಮ್ಮ ಸುತ್ತಲಿನ ಅಧ್ವಾನಗಳ ಮಧ್ಯೆ ಯಾರು ತಾನೇ ಗೊಂದಲಕ್ಕೊಳಗಾಗುವುದಿಲ್ಲ? ಕೃಷ್ಣಪ್ಪ ಸಮೂಹದ ಮನುಷ್ಯ. ಮಾತು ಯಾವ ಮೂಲೆಯಿಂದ ಬಂದರೂ ಕೇಳುತ್ತಾರೆ; ಅದರಲ್ಲಿ ಸ್ವಲ್ಪ ಸತ್ಯ ಕಂಡರೂ ತಲೆದೂಗುತ್ತಾರೆ. ಮಧ್ಯೆ ಇದ್ದಕ್ಕಿದ್ದಂತೆ ಮೊನ್ನೆ ಯಾರದ್ದೋ ಭೂವಿವಾದವನ್ನೋ, ಹಳ್ಳಿಯ ಜಾತಿ ಗಲಾಟೆಯನ್ನೋ ಪರಿಹರಿಸಲು ಹೋಗಿ ತಮಗುಂಟಾದ ಅನುಭವವನ್ನು ಅದಕ್ಕೆ ತಾಳೆ ಹಾಕಿ ಯೋಚಿಸಿ ಜೋರಾಗಿ ತಲೆ ಅಲ್ಲಾಡಿಸುತ್ತಾರೆ; ಮುಖ ಉಜ್ಜಿಕೊಂಡು ಭಾವುಕರಾಗುತ್ತಾರೆ; ಉಯ್ಯಾಲೆಯಾಗುತ್ತಾರೆ.

ಈ ದೃಷ್ಟಿಯಿಂದ ಕೃಷ್ಣಪ್ಪ ಅಚುಂಬಿತ ಶೂದ್ರ; ಬ್ರಾಹ್ಮಣಕನ್ಯೆಯನ್ನು ಮದುವೆಯಾಗಿದ್ದರೂ. ಸದ್ಯ, ಬ್ರಾಹ್ಮಣ್ಯದ ಚುಂಬನ ಇನ್ನೂ ಆಗಿಲ್ಲ! ಕೃಷ್ಣಪ್ಪನವರ ಕ್ರಿಯಾಶೀಲತೆ, ಭಾವುಕತೆ, ತೆರೆದ ಮನಸ್ಸು ತಾತ್ಕಾಣಿಕ ಕಂಪನಗಳನ್ನು ಮೀರಿ ಅವರಲ್ಲಿ ಎಂತಹ ನೆಲೆಗಟ್ಟಿನ ನಿರ್ಮಾಣದಲ್ಲಿ ತೊಡಗುವುದೋ ಕಾದು ನೋಡಬೇಕು. ಈ ಕುತೂಹಲವನ್ನು ಎದೆಯೊಳಗಿಟ್ಟುಕೊಂಡು ನಾನು ಅವರನ್ನು ರೈತ ಚಳುವಳಿಯ ಬಗ್ಗೆ ಮಾತನಾಡಿಸಿದೆ.

ರೈತ ಸಂಘ ಒಂದು ಶಕ್ತಿಯೆನಿಸಿಕೊಂಡಿದೆ ಎಂಬುದನ್ನು ಒಪ್ಪಿಕೊಂಡ ಕೃಷ್ಣಪ್ಪನವರು, ಇಂತಹುದೇ ಇನ್ನೊಂದು ಶಕ್ತಿಯಾಗಿ ಬೆಳೆಯುತ್ತಿರುವ ದಲಿತ ಸಂಘರ್ಷ ಸಮಿತಿ ರೈತಸಂಘದೊಡನೆ ಹೆಗಲಿಗೆ ಹೆಗಲು ಕೊಟ್ಟು ಕೆಲಸ ಮಾಡಬಹುದಾದ ಸಾಧ್ಯತೆಯ ಕಡೆ ಬೊಟ್ಟು ಮಾಡುತ್ತಿದ್ದಂತೆಯೇ 'ನಿಮಗೆಲ್ಲೋ ಭ್ರಾಂತು!' ಎನ್ನುವಂತೆ ನನ್ನನ್ನೇ ದಿಟ್ಟಿಸಿ ನೋಡಿದರು.

ಎಲ್ಲದಕ್ಕೂ ಕೃಷ್ಣಪ್ಪನವರು ಮೊದಲು ಪ್ರತಿಕ್ರಿಯಿಸುವುದೇ ಹೀಗೆ ಎಂದು ಬಲ್ಲ ನಾನು, 'ಯಾಕೆ, ದಲಿತ ಸಂಘರ್ಷ ಸಮಿತಿ ಏಕಾಂಗಿಯಾಗಿ ಬದಲಾವಣೆ ತರಬಲ್ಲುದು ಎಂಬ ನಂಬಿಕೆ ಅಥವಾ ವಿಸ್ವಾಸವೇ ನಿಮ್ಮದು?' ಎಂಬ ಪ್ರಶ್ನೆ ಎಸೆದೆ.

ಕೃಷ್ಣಪ್ಪ ಯೋಚಿಸತೊಡಗಿದರು. ಜೊತೆಗೆ ಎಂದಿನಂತೆ ನಿಧಾನವಾಗಿ ಮಾತುಗಳನ್ನು ಆಡತೊಡಗಿದರು: 'ಹಾಗೇನಲ್ಲ. ವಿಶಾಲ ತಳಹದಿಯ ಹೋರಾಟವೇ ನಮ್ಮ ಗುರಿ. ಹಾಗಿಲ್ಲದಿದ್ದರೆ ಏನೂ ಮಾಡಲಾಗುವುದಿಲ್ಲ ಎಂಬುದು ನಮಗೆ ಗೊತ್ತಿದೆ. ದಸಂಸ ಈಗಿರುವ ದಲಿತರ ತಳಹದಿಯನ್ನು ವಿಸ್ತರಿಸಿಕೊಂಡು ಎಲ್ಲ ಪ್ರಗತಿಪರರ, ಬಡವರ ಹೋರಾಟದ ವೇದಿಕೆಯಾಗುವ ಆಸೆ ಇಟ್ಟುಕೊಂಡಿದೆ.'

'ಬರೀ ಆಸೆನೋ ಅಥವಾ ಆ ದಿಕ್ಕಿನೊಳಗೆ ಏನಾದ್ರೂ ಕೆಲಸ ಆಗ್ತಿದೆಯೋ?'

ಕೃಷ್ಣಪ್ಪ ಉತ್ಸಾಹದಿಂದ, ಎಲ್ಲ ಬಡವರೂ ಒಟ್ಟಿಗೆ ನೆಮ್ಮದಿಯಿಂದ ಬದುಕುತ್ತಿರುವ ಬಿದರೆ ಕಾವಲಿನ ಉದಾಹರಣೆ ಕೊಟ್ಟರು. (ದಸಂಸದ ನೇತೃತ್ವದ ಭೂಚಳುವಳಿಯ ಪರಿಣಾಮವಾಗಿ ಸರ್ವಜಾತಿಗಳಿಗೂ ಪಾಲು ದೊರಕಲು ಸಾಧ್ಯವಾದ) ಭೂವಿತರಣೆಯ ಈ ಯಶಸ್ವಿ ಪ್ರಯೋಗದಲ್ಲಿ ಹಾಸನ ಜಿಲ್ಲೆ ರೈತಸಂಘದ ಪೂರಕ ಪಾತ್ರದ ಬಗ್ಗೆ ಪ್ರಸ್ತಾಪಿಸಿದಾಗ, ಇದರಲ್ಲಿ ಯಶಸ್ಸಿನ ಹೆಚ್ಚು ಪಾಲು ದಲಿತ ಸಂಘದ್ದೇ ಎಂದು ಸೂಚಿಸಲು ಅವರು ಮರೆಯಲಿಲ್ಲ. ನಂತರ ಕ್ಯಾಸಿನಕೆರೆ, ಕಾಳನಕಟ್ಟೆ, ದೇವಲಾಪುರ ಮುಂತಾದ ಊರುಗಳಲ್ಲಿ ಸಾಗುವಳಿ ಚೀಟಿಗಾಗಿ ದಲಿತ ಸಂಘ ನಡೆಸುತ್ತಿರುವ ಹೋರಾಟಗಳನ್ನು ಸೂಕ್ಷ್ಮವಾಗಿ ವಿವರಿಸಿದರು. ಇವುಗಳಲ್ಲಿ ಎಲ್ಲ ಜಾತಿಗಳ ಬಡವರೂ ಪಾಲ್ಗೊಂಡಿದ್ದಾರೆ ಎಂದು ಸೂಚಿಸಿದರು.

'ಮತ್ತೆ ರೈತ ಚಳುವಳಿ ಬಗ್ಗೆ ನಿಮ್ಮ ಆಕ್ಷೇಪಣೆ ಏನು? ಅದರಲ್ಲಿ ಬಡಬಗ್ಗರು ಪಾಲ್ಗೊಂಡಿಲ್ಲವೆಂದೇ? ರೈತ ಚಳುವಳಿ ಬರೀ ಉಳ್ಳವರ ಚಳುವಳಿ ಅನ್ನುವುದು ನಿಮ್ಮ ಅಭಿಪ್ರಾಯವೇ?', ನಾನು ಮತ್ತೊಂದು ಪ್ರಶ್ನೆಯ ಬೀಜ ಹಾಕಿದೆ.

ಕೃಷ್ಣಪ್ಪ ಮತ್ತೆ ಯೋಚಿಸತೊಡಗಿದರು. ಜೊತೆಯಲ್ಲೇ ತಮ್ಮ ಡೈರಿಯ ಹಾಳೆಗಳನ್ನು ಅತ್ತಿಂದಿತ್ತ ತಿರುವಿ ಹಾಕುತ್ತಾ ಮಾತು ಮುಂದುವರೆಸಿದರು: 'ರೈತ ಚಳುವಳಿಗೇನೂ ನಮ್ಮ ವಿರೋಧವಿಲ್ಲ. ಅವರದ್ದೂ ಹೋರಾಟವೇ. ಇರೋ ವ್ಯವಸ್ಥೆಯನ್ನು ಪ್ರಶ್ನಿಸೋ ಯಾವುದೇ ಹೋರಾಟಕ್ಕೆ ನಮ್ಮ ಬೆಂಬಲ ಇದ್ದೇ ಇದೆ. ಮದಿಸಿದ ಆನೆಗಳಂತೆ ಓಡಾಡುತ್ತಿದ್ದ ಅಧಿಕಾರಶಾಹಿಯನ್ನು ಈ ಚಳುವಳಿ ಮಟ್ಟ ಹಾಕಿದೆ. ಇದೇನೂ ಸಣ್ಣ ಸಾಧನೆಯಲ್ಲ.'

ನಂತರ ತಮ್ಮ ಡೈರಿಯಿಂದ ಶಿವಮೊಗ್ಗ ಜಿಲ್ಲೆಯ ಭೂ ಒಡೆತನ ಹಾಗೂ ಸಾಲಗಳ ಸ್ವರೂಪವನ್ನು ಪರಿಚಯಿಸುವ ಅಂಕಿ ಅಂಶಗಳನ್ನು ನಮ್ಮ ಮುಂದಿಟ್ಟ ಕೃಷ್ಣಪ್ಪ, ರೈತ ಚಳುವಳಿಯಿಂದ ಪ್ರಯೋಜನವಾಗುವುದು ಭಾರಿ ಭೂ ಒಡೆಯರಿಗೆ ಮಾತ್ರ ಎಂದು ವಾದಿಸಿದರು. 'ವೈಜ್ಞಾನಿಕ ಬೆಲೆ, ವೈಜ್ಞಾನಿಕ ಬೆಲೆ ಅಂತಾರೆ. ಇದರ ಲಾಭ ಪಡೆಯೋರು ಮನೆಯಲ್ಲಿ ತಿಂದು ಮಿಕ್ಕಿದ್ದನ್ನ ಮಾರುವ ಸ್ಥಿತಿಯಲ್ಲಿರುವ ದೊಡ್ಡ ರೈತರು ಮಾತ್ರ. ಬಡ ರೈತರಿಗೇನು ಸಿಗುತ್ತೆ ಇದರಿಂದ?' ಎಂದು ಅವರು ಖಾರವಾಗುತ್ತಾ ದನಿಯನ್ನೂ ಏರಿಸುತ್ತಾ ಹೋದರು.

ಕಾಪಿಳಿಸಿ, ಮಾತುಕತೆ ಮುಂದುವರೆಸಲು ನಾನು ಮತ್ತೊಂದು ಕಾಳು ಎಸೆಯಲೇಬೇಕಾಗಿತ್ತು: 'ಹಾಗಾದ್ರೆ ರೈತ ಚಳುವಳಿಗೆ ಇಷ್ಟೆಲ್ಲ ವ್ಯಾಪಕ ಜನ ಬೆಂಬಲ ಯಾಕಿದೆ? ಜೈಲಿಗೆ ಹೋದೋರಿ, ಗುಂಡಿಗೆ ಬಲಿಯದೋರು ಎಲ್ಲ ಬಡರೈತರೇ ಅಲ್ವಾ?'

ಕೃಷ್ಣಪ್ಪ ಮುಖ ಉಜ್ಜಿಕೊಂಡರು. ನಾನು ಹೊಸದೇನನ್ನೂ ಹೇಳಿರಲಿಲ್ಲ. ಸತ್ಯವನ್ನು ಮುಟ್ಟಿನೋಡಿದವರಂತೆ ಅವರು ತಣ್ಣಗೆ ಹೇಳತೊಡಗಿದರು; ನಾನು ಕೇಳತೊಡಗಿದೆ: 'ರೈತ ಚಳುವಳಿಯಲ್ಲಿ ಬಡ ರೈತರೇ ಹೆಚ್ಚಿಗಿರೋದು. ಇದು ಸಹಜ ಕೂಡಾ. ಯಾಕೇಂದ್ರೆ ಜಾಸ್ತಿ ಒತ್ತಡ ಇರೋದು ಅವರ ಮೇಲೇ. ಬಹಳ ಬಡವರು ಭಾಗವಹಿಸಿರೋ ಈ ಚಳುವಳಿಯನ್ನು ನಿಜವಾಗಿ ಬಡವರ ಚಳುವಳಿ ಮಾಡೋದಾದ್ರೆ ಅದಕ್ಕಿಂತ ದೊಡ್ಡ ಸಾಧನೆ ಸದ್ಯಕ್ಕೆ ಇನ್ನೊಂದಿರಲಾರದು. ಆದ್ರೆ ಅದರ ನಾಯಕತ್ವ ನೋಡಿ ನಾಗಭೂಷಣ್, ಎಲ್ಲ ಮೇಲ್ಜಾತಿಯವರದ್ದು.... ಅವರ ಈವರೆಗಿನ ಹೋರಾಟವೆಲ್ಲ ದೊಡ್ಡ ರೈತರ ಅನುಕೂಲಗಳಿಗೆ ಮಾತ್ರ ಸೀಮಿತವಾಗಿದೆ. ಮಿಕ್ಕ ಮಾತುಗಳೆಲ್ಲ ಕಣ್ಣೊರೆಸೋದಕ್ಕೆ ಮಾತ್ರ'

ರೈತ ಚಳುವಳಿಯ ಈವರೆಗಿನ ಆಟವನ್ನು ಕಂಡವರಾರೂ ಕೃಷ್ಣಪ್ಪನವರ ಈ ಮಾತುಗಳನ್ನು ಅಲ್ಲಗೆಳೆಯುವಂತಿಲ್ಲ. ಆದರೆ ರೈತ ಸಂಘದ ಬಗ್ಗೆ ಇನ್ನೂ ಆಸೆ ಇಟ್ಟುಕೊಂಡಿರುವ ಜನ ಇದ್ದಾರೆ. ಅದನ್ನೇ ನಾನು ಹೇಳಿದೆ: 'ಎಲ್ಲ ದೊಡ್ಡ ಚಳುವಳಿಗಳ ಗೋಳೂ ಇದೇ ಅಲ್ಲವಾ? ಸ್ವಾತಂತ್ರ್ಯ ಚಳುವಳಿ ಬಗ್ಗೇನೂ ಇದೇ ತರ ಟೀಕೆ ಇತ್ತು. ಆದ್ರೆ ಹಾಗಂತ ಅದನ್ನು ದೂರದಿಂದ ನೋಡ್ತಾನೇ ವಿಶ್ಲೇಷಿಸೋಕಿಂತ ಹತ್ತಿರ ಹತ್ತಿರ ಯಾಕೆ ಹೋಗಬಾರದು? ಇದನ್ನೆಲ್ಲ ಅವರಿಗೆ ಯಾಕೆ ಹೇಳಬಾರದು? ಎಲ್ಲ ಬಡವರ ವೇದಿಕೆಯಾಗೋ ಆಸೆ ಹೊತ್ತಿರುವ ಸಂಘಟನೆಯ ಸಂಚಾಲಕರಾಗಿರುವ ನೀವು ಇದರ ಬಗ್ಗೆ ಆಳವಾಗಿ, ಆಪ್ತವಾಗಿ ಯೋಚಿಸಬೇಕಲ್ವಾ? ಇದು ನಿಮ್ಮ ಜವಾಬ್ದಾರಿ ಕೂಡ... ಗ್ರಾಮೀಣ ಸಂಘಟನೆಯ ಮತಾಡೋ ನೀವು ಎಣ್ಣೆ ಬಂದಾಗ ಕಣ್ಮುಚ್ಚಿಕೊಂಡರು ಅನ್ನೋ ಹಾಗಾಗಬಾರದು...'

ಸಂಚಾಲಕರು ಕೊಂಚ ವಿಚಲಿತರಾದಂತೆ ಕಂಡರು. ಆದರೆ ಒಮ್ಮೆ ಸತ್ಯವನ್ನು ಮುಟ್ಟಿನೋಡಿದುದರ ಪ್ರಭಾವದಿಂದಲೋ ಏನೋ ಒಮ್ಮೆಗೇ ನುಡಿದರು: 'ಸಮಾನ ಆಸಕ್ತಿಗಳಿದ್ರೆ ಹತ್ತಿರ ಹತ್ತಿರ ಬರಬಹುದು.'

'ಅಂದ್ರೆ?'

'ನಮ್ಮ ಹೋರಾಟ ಮತ್ತು ಅವರ ಹೋರಾಟ ಸರಿ ಸುಮಾರಾಗಾದ್ರೂ ಒಂದೇ ದಿಕ್ಕಿನಲ್ಲಿ ಆಗೋ ಹಾಗಿದ್ರೆ ದೂರ ಯಾಕೆ ಹೋಗಬೇಕು? ದೂರ ಹೋಗೋದ್ರಿಂದ ಏನೂ ಪ್ರಯೋಜನವಿಲ್ಲ.'

'ಅಂದ್ರೆ?'

ಅವರು ಜಾತಿ ನಿರ್ಮೂಲನ, ಅಸ್ಪೃಶ್ಯತೆ ಮತ್ತು ಜೀತ ನಿರ್ಮೂಲನ ಕಾರ್ಯಕ್ರಮ ಗಳನ್ನ ಗಂಭೀರವಾಗಿ ಆರಂಭಿಸಲಿ. ಭೂಸಂಬಂಧಗಳ ವಿಮರ್ಶೆಗೆ ತೊಡಗಲಿ. ಅವುಗಳಿಗಾಗಿ ಹೋರಾಟ ಹೂಡಲಿ!'

'ಅಲ್ಲಾ ಕೃಷ್ಣಪ್ನೋರೇ, ದೂರ ಇದ್ಕೊಂಡು ಶರತ್ತುಗಳನ್ನು ಹಾಕೋದ್ರಿಂದ ಏನು ಪ್ರಯೋಜನ? ಇಲ್ಲಿ ಷರತ್ತುಗಳ ಪ್ರಶ್ನೆಯೇ ಇರಬಾರದು. ಸಾಧ್ಯತೆಗಳನ್ನು ನೋಡಬೇಕು ಅಂತ ನನಗನ್ನಿಸ್ತದೆ. ಈ ಬಗ್ಗೆ ಮಾತುಕತೆ ಯಾಕೆ ಶುರು ಮಾಡ್ಬಾರ್ದು?' ನಾನೂ ನನಗನ್ನಿಸಿದ್ದನ್ನು ಅವರ ಮುಂದಿಟ್ಟೆ. ಜೊತೆಗೆ ಅವರೂ ತಿಳಿದಿದ್ದ ಹಾಸನ ಜಿಲ್ಲ ರೈತಸಂಘ ಹಾಗೂ ದಲಿತ ಸಂಘರ್ಷ ಸಮಿತಿ ನಡುವಣ ಸುಮಧುರ ಸಂಬಂಧಗಳನ್ನು ಪ್ರಸ್ತಾಪ ಮಾಡಿದೆ.

ಕೃಷ್ಣಪ್ಪ ಯೋಚಿಸತೊಡಗಿದರು. ಸಂದರ್ಶನದ ಆರಂಭದಲ್ಲಿ 'ನಿಮಗೆಲ್ಲೋ ಭ್ರಾಂತು!' ಎನ್ನುವಂತೆ ನನ್ನನ್ನು ದಿಟ್ಟಿಸಿ ನೋಡಿದ್ದ ಕೃಷ್ಣಪ್ಪ ಇವರಲ್ಲ ಎಂದು ಖಚಿತಪಡಿಸಿಕೊಂಡು, ಯೋಚನೆ ಮಾಡಲು ಅವರೊಬ್ಬರನ್ನೇ ಬಿಟ್ಟು ಬಂದೆ.

(೧೯೮೯ರ ನವೆಂಬರ್‌ನಲ್ಲಿ 'ಪಂಚಮ' ಪತ್ರಿಕೆ ಹೊರತಂದ ದಲಿತ+ರೈತ ಸಂಚಿಕೆಗಾಗಿ ಮಾಡಿದ ಸಂದರ್ಶನ)

✧✧✧

೪೦. ನಕ್ಸಲೀಯ ಹುಡುಗ ಲೋಹಿಯಾವಾದಿಯಾದ (ಒಂದು ಹಳೆಯ) ಕಥೆ....

ಭಾರತದ ವಿದ್ವದ್ವಲಯದಲ್ಲಿ ಸುಪರಿಚಿತವಾದ 'ಎಕಾನಮಿಕ್ ಎಂಡ್ ಪೊಲಿಟಿಕಲ್ ವೀಕ್ಲಿ' ೨೦೧೦ರ ಅಕ್ಟೋಬರ್ ೨ರ ಸಂಚಿಕೆಯಲ್ಲಿ ಸಮಾಜವಾದಿ ಚಿಂತಕ ಹಾಗೂ ರಾಜಕಾರಣಿ ಡಾ. ರಾಮಮನೋಹರ ಲೋಹಿಯಾ ಕುರಿತಂತೆ (ಬಹುಶಃ ಅವರ ಶತಮಾನೋತ್ಸವ ಸಂದರ್ಭದಲ್ಲಿ) ಹಲವು ವಿಶೇಷ ಲೇಖನಗಳನ್ನೊಳಗೊಂಡ ವಿಭಾಗವೊಂದನ್ನು ಪ್ರಕಟಿಸಿದೆ. ಈ ವಿಶೇಷ ಪುಟಗಳ ಸಂಪಾದಕರು ಯೋಗೇಂದ್ರ ಯಾದವ್. ಇವರು ಲೋಹಿಯೋತ್ತರ ತಲೆಮಾರಿಗೆ ಸೇರಿದ ಸಮಾಜವಾದಿ ಚಿಂತಕರು. ಅವರು ಸಂಪಾದಕರ ಟಿಪ್ಪಣಿಗಳ ರೂಪದಲ್ಲಿರುವ ಒಂದು ಲೇಖನದಲ್ಲಿ, ಲೋಹಿಯಾ ಅವರ ಜೀವಿತ ಕಾಲದಲ್ಲಿ ಮಾತ್ರವಲ್ಲದೆ, ಅವರು ನಿಧನರಾದ ಹಲವು ವರ್ಷಗಳ ನಂತರವೂ ಹೇಗೆ ನಮ್ಮ ವಿದ್ವವಲಯದ ಅವಜ್ಞೆಗೆ ಗುರಿಯಾಗಿದ್ದರು ಮತ್ತು ಏಕೆ ಎಂಬುದನ್ನು ಉದಾಹರಣೆಗಳೊಂದಿಗೆ ವಿವರಿಸಿದ್ದಾರೆ. ಹಾಗೇ, ಮುಕ್ತ ಮಾರುಕಟ್ಟೆಯ ಜಾಗತೀಕರಣದ ರಾಜಕಾರಣ ಆರಂಭವಾದ ನಂತರ, ಅದನ್ನು ಈ ವಿದ್ವದ್ವಲಯ ನಂಬಿದ್ದ ಸಿದ್ಧಾಂತಗಳು ಮತ್ತು ಕಾರ್ಯಕ್ರಮಗಳು ಅದನ್ನು ವಿವರಿಸಲು ಮತ್ತು ಎದುರಿಸಲು ಅಪೂರ್ಣವೆನ್ನಿಸಿ ವಿಫಲವಾಗುತ್ತಿರುವಾಗ, ಲೋಹಿಯಾ ಶತಮಾನೋತ್ಸವ ಹುಟ್ಟಿಸಿದ ಉತ್ಸಾಹವೇ ಒಂದು ನೆಪವಾದಂತೆ ಈಗ ಹೇಗೆ ಲೋಹಿಯಾ ವಿಚಾರ ಮತ್ತು ಕಾರ್ಯಕ್ರಮಗಳ ಬಗ್ಗೆ ದೇಶದ ರಾಜಕೀಯ ಮತ್ತು ಆರ್ಥಿಕ ಚಿಂತಕರು ಮತ್ತು ತಾತ್ವಿಕರು ಆಸಕ್ತಿ ತಳೆದು ಅವುಗಳ ಮರು ಓದಿಗೆ, ಮರುಪರಿಶೀಲನೆಗೆ ತೊಡಗಿದ್ದಾರೆ ಎಂಬುದನ್ನೂ ಯಾದವ್ ಸಂಕ್ಷಿಪ್ತವಾಗಿ ನಿರೂಪಿಸಿದ್ದಾರೆ.

ಅಷ್ಟೇ ಅಲ್ಲ, ರಾಜಕೀಯ ಮತ್ತು ಆರ್ಥಿಕ ಚಿಂತಕರಲ್ಲದೆ, ಆಧುನಿಕೋತ್ತರವಾದಿ ಸಂಸ್ಕೃತಿ ಚಿಂತಕರಾದ ಸೈದ್, ಫ್ಯುಕೋ ಮುಂತಾದ ವಿದ್ವಾಂಸರ ಇತ್ತೀಚಿನ ಚಿಂತನೆಗಳ ಬೀಜ ರೂಪಗಳು ಲೋಹಿಯಾರ ಜಾಗತಿಕ ರಾಜಕಾರಣ ಕುರಿತ ಚಿಂತನೆಗಳಲ್ಲೇ ಇದ್ದುದನ್ನು ಗುರುತಿಸಲಾರಂಭಿಸಿದ್ದಾರೆ ಎಂಬ ಸೂಚನೆಯನ್ನೂ ಯೋಗೇಂದ್ರ ಯಾದವ್ ನೀಡಿದ್ದಾರೆ. ಉದಾಹರಣೆಗೆ ಖ್ಯಾತ ಸಂಸ್ಕೃತಿ ಚಿಂತಕ ರುಸ್ತುಂ ಭರೂಚ ಮತ್ತು ಜಗದ್ವಿಖ್ಯಾತ ಚಿತ್ರ ಕಲಾವಿದ ಎಂ.ಎಫ್. ಹುಸೇನ್ ಲೋಹಿಯಾರ ಚಿಂತನೆ ಮತ್ತು ರಾಜಕಾರಣಗಳಲ್ಲಿ ಕಂಡ ಅಪರೂಪದ ಮತ್ತು ಅನನ್ಯ ಸಾಂಸ್ಕೃತಿಕ ಒಳನೋಟಗಳನ್ನು ಕುರಿತ ಬರಹಗಳು ಈಗ

ಮತ್ತೆ ಕಾಣಿಸತೊಡಗಿವೆ ಎಂಬುದನ್ನೂ ಯಾದವ್ ನಮ್ಮ ಗಮನಕ್ಕೆ ತಂದಿದ್ದಾರೆ. ಒಟ್ಟಿನಲ್ಲಿ ನೆಹರೂ ರಾಜಕಾರಣದ ವಿವಶತೆ ಮತ್ತು ಮಾರ್ಕ್ಸ್‌ವಾದಿ ಚಿಂತನೆಗಳ ಕ್ರಾಂತಿಕಾರಕತೆಯ ವಿಜೃಂಭಣೆಯ ಆ ದಿನಗಳಲ್ಲಿ ಲೋಹಿಯಾರ ಕಟು ನೆಹ್ರೂ ವಿರೋಧಿ ರಾಜಕಾರಣವನ್ನೇ ನೆಪವಾಗಿಟ್ಟುಕೊಂಡು ಅವರ ವ್ಯಕ್ತಿತ್ವದ ಬೇರೆ ಆಯಾಮಗಳನ್ನೂ, ಸೃಜನಶೀಲ ಬೌದ್ಧಿಕ ಕೊಡುಗೆಗಳನ್ನು ನಿರ್ಲಕ್ಷಿಸಿದ್ದ ನಮ್ಮ ಬುದ್ಧಿಜೀವಿ ವರ್ಗದ ಮುಖ್ಯ ವಾಹಿನಿ ಈಗಲಾದರೂ ಈ ಬಗ್ಗೆ ಗಮನ ಹರಿಸಿರುವುದು ಸಂತೋಷದ ವಿಷಯ.

ಹಾಗೆ ನೋಡಿದರೆ, ಈ ವಿದ್ವದ್ವಲಯದ ಎಡಪಂಥೀಯ ಚಿಂತಕರಿಗಿಂತ ಮೊದಲೇ, ಮಾವೋವಾದಿಗಳೂ ಸೇರಿದಂತೆ ಹಲವು ಜನಪರ ಹೋರಾಟಗಳ ಗುಂಪುಗಳು ಲೋಹಿಯಾ ವಿಚಾರಗಳಲ್ಲಿ ಆಸಕ್ತಿ ತಾಳಿದ್ದವು ಎಂಬುದನ್ನೂ ನಾವು ಗಮನಿಸಬೇಕು. ಉದಾಹರಣೆಗೆ, ನೇಪಾಳದ ಮಾವೋವಾದಿ ನಾಯಕ ಪ್ರಚಂಡ ಇತ್ತೀಚೆಗೆ ಲೋಹಿಯಾರಿಂದಲೂ ನಾವು ಕಲಿಯುವುದು ಬಹಳವಿದೆ ಎಂದು ಹೇಳಿರುವುದನ್ನು ಪತ್ರಿಕೆಗಳಲ್ಲಿ ಓದಿದ್ದೇವೆ. ಇದರೆಂದೇನೂ ಯಾರೂ ಆಶ್ಚರ್ಯಪಡಬೇಕಿಲ್ಲ. ಏಕೆಂದರೆ, ಆಕಸ್ಮಿಕವಾಗಿಯಾದರೂ ಲೋಹಿಯಾ ವಿಚಾರಗಳ ಸಂಪರ್ಕಕ್ಕೆ ಬಂದ ಮಾರ್ಕ್ಸ್‌ವಾದಿ 'ಕ್ರಾಂತಿಕಾರಿ'ಗಳು ಲೋಹಿಯಾ ಸಮಾಜ ವಾದದೆಡೆಗೆ ಹೆಜ್ಜೆ ಹಾಕಿದ ಹಲವು ಉದಾಹರಣೆಗಳನ್ನು ನಾವು ಬಹು ಹಿಂದಿನಿಂದ ನೋಡುತ್ತಾ ಬರುತ್ತಿದ್ದೇವೆ. ಅಂತಹ ಒಂದು ಉದಾಹರಣೆಯನ್ನು ಇಲ್ಲಿ ಪ್ರಸ್ತುತಪಡಿಸಲಾಗುತ್ತಿದೆ.

ಇದು ನಾನು ಮುವ್ವತ್ತು ವರ್ಷಗಳ ಹಿಂದೆ ಸ್ವಲ್ಪ ಕಾಲ ಸಂಪಾದಿಸಿದ ಸಮಾಜವಾದಿ ಮಾಸ ಪತ್ರಿಕೆ 'ಮಾನವ'ದ ೧೯೭೭ರ ನವೆಂಬರ್ ಸಂಚಿಕೆಯಿಂದ ಆಯ್ದ ಸಂದರ್ಶನ. ನಾನು ಆಗ 'ಲೋಹಿಯಾ ವಿಚಾರ ಮಂಚ'ದ ಸಭೆಯೊಂದಕ್ಕಾಗಿ ಹೈದರಾಬಾದ್‌ಗೆ ಹೋಗಿದ್ದಾಗ ಕರ್ನಾಟಕದಿಂದ ಬಂದಿದ್ದ ಪ್ರತಿನಿಧಿಗಳ ಆತಿಥ್ಯಕ್ಕಾಗಿ ಸಂಘಟಕರಿಂದ ನೇಮಕವಾಗಿದ್ದ ಇಂದ್ರಾ ರೆಡ್ಡಿ ಎಂಬ ಯುವಕನೊಡನೆ ನಡೆಸಿದ ಸಂದರ್ಶನವಿದು. ಮುಂದೆ ಈ ಯುವಕ ಆಂಧ್ರದ ಆಗಿನ ಹಲವು ಸಮಾಜವಾದಿಗಳಂತೆಯೇ, ಎನ್.ಟಿ. ರಾಮರಾವ್ ಆರಂಭಿಸಿದ 'ತೆಲುಗು ದೇಸಂ' ಪಕ್ಷ ಸೇರಿ ಅಲ್ಲಿ ದೊಡ್ಡ ನಾಯಕನಾಗಿ ಬೆಳೆದ. ವಿವಿಧ ಖಾತೆಗಳ ಸಚಿವನಾಗಿ ದಕ್ಷತೆಯಿಂದ ಜನಪರವಾದ ಕೆಲಸ ಮಾಡಿದನೆಂದೂ, ಆನಂತರ ಅಕಾಲಿಕ ಮರಣಕ್ಕೆ ತುತ್ತಾದನೆಂದೂ, ಆತನ ಪತ್ನಿ ಈಗ ಆಂಧ್ರದ ಗೃಹಮಂತ್ರಿಯೆಂದೂ ಕೇಳಿರುವೆ. ಅದೇನೇ ಇರಲಿ, ಇಂದ್ರಾರೆಡ್ಡಿಯೊಂದಿಗೆ ನಾನು ನಡೆಸಿದ ಆ ಸಂದರ್ಶನದ ಪೂರ್ಣ ಪಾಠ ಇಂತಿದೆ:

ಇಂದ್ರಾ ರೆಡ್ಡಿ ಎಂಬ ಹೆಸರು ಆಂಧ್ರದ ಯುವಜನತೆಯ ಬಂಡಾಯದ ಸಂಕೇತ. ಇಪ್ಪತ್ತನಾಲ್ಕು– ಇಪ್ಪತ್ತೈದರ ಈ ತರುಣ ಈಗ ಹೈದರಾಬಾದ್‌ನಲ್ಲಿ ಪ್ರೊ॥ ಕೇಶವರಾವ್ ಜಾಧವ್ ನೇತೃತ್ವದಲ್ಲಿ (ಇಂದಿರಾ ಗಾಂಧಿ ಮೇಡಕ್‌ನಿಂದ ಚುನಾವಣೆಗೆ ನಿಂತಾಗ ಅವರೆದುರು ವಿರೋಧ ಪಕ್ಷಗಳ ಸಾಮಾನ್ಯ ಅಭ್ಯರ್ಥಿಯಾಗಿ ನಿಂತವರು) ಲೋಹಿಯಾ ವಿಚಾರ ವೇದಿಕೆಯ ಅಡಿಯಲ್ಲಿ ಯುವಜನರ ಸಂಘಟನೆಯಲ್ಲಿ ತೊಡಗಿದ್ದಾರೆ. ನಕ್ಸಲೀಯ ಚಳುವಳಿಯಿಂದ ಆಕರ್ಷಿತರಾಗಿ

ಆಂಧ್ರದಲ್ಲಿ ಆ ಚಳುವಳಿಯ ಪ್ರಮುಖ ಶಕ್ತಿಗಳಲ್ಲಿ ಒಬ್ಬರಾಗಿ ಹೋರಾಡಿ ತುರ್ತು ಪರಿಸ್ಥಿತಿ ಅವಧಿಯಲ್ಲಿ ಪೊಲೀಸರ ಕೈಗೆ ಸಿಕ್ಕಿ ಚಿತ್ರಹಿಂಸೆ ಅನುಭವಿಸಿದ ಈ ದಿಟ್ಟ ಯುವಕ ಈಗ ಹೇಳುತ್ತಾನೆ: 'ಈ ದೇಶವನ್ನು ಸಮರ್ಪಕವಾಗಿ ಅರ್ಥ ಮಾಡಿಕೊಂಡವರು ಲೋಹಿಯಾ ಒಬ್ಬರೇ ಎಂದು ನನಗನ್ನಿಸುತ್ತಿದೆ ಈಗ'. 'ಮಾನವ' ಇತ್ತೀಚೆಗೆ ಹೈದರಾಬಾದ್‌ನಲ್ಲಿ ಇಂದ್ರಾ ರೆಡ್ಡಿಯವರನ್ನು ಮಾತನಾಡಿಸಿತು. ಈ ಮಾತುಕತೆಯ ಆಯ್ದ ಭಾಗಗಳನ್ನು ಇಲ್ಲಿ ನೀಡಲಾಗಿದೆ:

ಮಾನವ: ನೀವು ನಕ್ಸಲೀಯ ಚಳವಳಿಗೆ ಧುಮುಕಿದ್ದು ಹೇಗೆ?

ಇಂದ್ರಾ ರೆಡ್ಡಿ: ನನ್ನ ಶಾಲಾ ದಿನಗಳಲ್ಲಿ ನಡೆದ ಪರಿಶಿಷ್ಟರ ಹಾಸ್ಟೆಲುಗಳಲ್ಲಿ ಕಂಡುಬರುವ ಅನ್ಯಾಯಗಳ ವಿರುದ್ಧದ ಮುಷ್ಕರವೊಂದರಲ್ಲಿ ನಾನು ಭಾಗವಹಿಸುವುದರೊಂದಿಗೆ ನನ್ನ ಈ ಚಟುವಟಿಕೆಗಳು ಆರಂಭವಾದವು. ಜತೆಗೆ ನನ್ನ ಗೆಳೆಯನೊಬ್ಬ ನಕ್ಸಲೀಯ ಗುಂಪುಗಳಲ್ಲಿ ಒಂದಾಗಿದ್ದ ಚಂದ್ರಪುಲ್ಲಾ ರೆಡ್ಡಿ ಗುಂಪಿನ 'ಕೆಂಪು ವೈಭವ' ಎಂಬ ಪುಸ್ತಕವೊಂದನ್ನು ಓದಲೆಂದು ಕೊಟ್ಟ. ಈ ಪುಸ್ತಕ ನನ್ನನ್ನು ಈ ಚಟುವಟಿಕೆಗಳಲ್ಲಿ ಮುಂದುವರೆಯಲು ಪ್ರೇರೇಪಿಸಿತು ಜೊತೆಗೆ ನಮ್ಮ ಮುಷ್ಕರ ಯಶಸ್ವಿಯಾಗಿ, ಹರಿಜನ ಗಿರಿಜನ ವಿದ್ಯಾರ್ಥಿಗಳಿಗೆ ಸೌಲಭ್ಯಗಳು ಹೆಚ್ಚಾದ ಅಂಶವೂ ಇದಕ್ಕೆ ಉತ್ತೇಜನ ನೀಡಿತು.

ಮಾ: ನೀವು ನಕ್ಸಲೀಯ ಚಳುವಳಿಯಲ್ಲಿ ಪಾಲ್ಗೊಂಡಿದ್ದಾಗ, ಈ ಚಳವಳಿಯ ಯಶಸ್ಸಿನ ಬಗ್ಗೆ ಸಂಪೂರ್ಣ ಭರವಸೆ ಇತ್ತಾ?

ಇಂ: ಇದರ ಹಿಂದೆ ನಕ್ಸಲೀಯ ಶಕ್ತಿಗಳಿವೆಯೆಂದು ಕ್ರಮೇಣ ಗೊತ್ತಾಗ ತೊಡಗಿತಷ್ಟೆ ನಕ್ಸಲೀಯ ನಾಯಕರು ಸೈದ್ಧಾಂತಿಕ ಶಿಕ್ಷಣದ ಅಂಗವಾಗಿ ಬೋಧಿಸುತ್ತಿದ್ದ ದ್ವಂದ್ವಮಾನ ಭೌತವಾದ, ಮಾನವ ಚರಿತ್ರೆಯ ನಿರೂಪಣೆ, ರಷ್ಯನ್ ಮತ್ತು ಚೀನಾ ಕ್ರಾಂತಿಯ ಪಾಠಗಳು – ಇವೆಲ್ಲ ನನ್ನನ್ನು ರೋಮಾಂಚನಗೊಳಿಸುತ್ತಿದ್ದವು. ಆದ್ದರಿಂದ ಆಗ ಏನೋ ದೊಡ್ಡ ಕೆಲಸ ಮಾಡಬೇಕು, ಸಾಧಿಸಬೇಕು ಎಂಬ ಉತ್ಸಾಹ ಇದ್ದಿತು ಎಂದು ಮಾತ್ರ ಹೇಳಬಲ್ಲೆ. ಯಶಸ್ಸಿನ ಬಗ್ಗೆ ನಾನೆಂದೂ ಯೋಚನೆ ಮಾಡಿದ ಹಾಗೆ ನೆನಪಿಲ್ಲ.

ಮಾ: ಈ ಚಳವಳಿಯ ಬಗ್ಗೆ ನಿಮ್ಮ ಭ್ರಮನಿರಸನ ಎಂದು ಆರಂಭವಾಯಿತು?

ಇಂ: ಭ್ರಮನಿರಸನ ಎಂದೇನೂ ಹೇಳಲಾರೆ. ಈ ಚಳುವಳಿ ಚಂದ್ರಪುಲ್ಲಾ ರೆಡ್ಡಿ ಗುಂಪು, ನಾಗಿರೆಡ್ಡಿ ಗುಂಪು, ಚಾರು ಮಜುಂದಾರ್ ಗುಂಪು, ಲಿನ್ ಪಿಯಾವೋ ಗುಂಪು ಹೀಗೆ ಹತ್ತಾರು ಗುಂಪುಗಳಾಗಿ ಒಡೆಯಲಾರಂಭಿಸಿದ್ದು ನನ್ನನ್ನು ಕಂಗೆಡಿಸಿತು. ಇದೆಲ್ಲ ಮೂಲತಃ ಕೆಲವರ ಬೌದ್ಧಿಕ ತೀಟೆ ಮಾತ್ರವೇನೋ ಎಂಬ ಅನುಮಾನ ಎದ್ದಿತು. ಶ್ರೀಕಾಕುಲಂ ದಂಗೆ ಇದಕ್ಕೊಂದು ಸಾಕ್ಷಿ. ಪೊಲೀಸರ ಬೇಟೆಗೆ ಸಿಕ್ಕಿದವರು ನಾಯಕರನ್ನು ನಂಬಿ ಬಂಡೆದ್ದ ಬಡ ರೈತ ಕಾರ್ಮಿಕರು, ಹೆಂಗಸರು ಮತ್ತು ಮಕ್ಕಳು ಮಾತ್ರ, ಪೊಲೀಸರು ತಮ್ಮ ಬಂದೂಕಿನ ತುದಿಯಿಂದ ಬಸುರಿಯರ ಹೊಟ್ಟೆ ಸೀಳಿದ ಚಿತ್ರ ಇನ್ನೂ ನನ್ನ ಕಣ್ಮುಂದೆ ಕುಣಿಯುತ್ತಿದೆ. ಆಗ ಈ ನಾಯಕರು ಅರಣ್ಯಗಳಿಂದ ಕಣ್ಮರೆಯಾಗಿಬಿಟ್ಟರು. ಇಂತಹ ಘಟನೆಗಳು ಯಾರನ್ನು ತಾನೆ ಅಲುಗಾಡಿಸುವುದಿಲ್ಲ?

ಮಾ: ನೀವು ಲೋಹಿಯಾ ವಿಚಾರಗಳ ಹತ್ತಿರ ಬಂದದ್ದು ಹೇಗೆ?

ಇಂ: ತುರ್ತು ಪರಿಸ್ಥಿತಿಯಲ್ಲಿ ನನ್ನನ್ನು ಚಿತ್ರಹಿಂಸೆಗೆ ಒಳಪಡಿಸಿ ನನ್ನಿಂದೇನೂ ರಹಸ್ಯ ಮಾಹಿತಿ ಪಡೆಯಲಾಗದ ಪೊಲೀಸರು ಕೊನೆಗೆ ಇತರ ರಾಜಕೀಯ ಬಂದಿಗಳ ಜತೆ ನನ್ನನ್ನು ದೂಡಿದರು. ಅಲ್ಲಿ ಲೋಹಿಯಾವಾದಿ ಸತ್ಯನಾರಾಯಣ ರೆಡ್ಡಿ ಅವರ ಪರಿಚಯವಾಯಿತು. ಅವರು ಅಲ್ಲಿನ ರಾಜಕೀಯ ಬಂದಿಗಳಿಗೆ ಲೋಹಿಯಾ ಸಿದ್ಧಾಂತಗಳ ಬಗ್ಗೆ ಪ್ರಾಥಮಿಕ ಪಾಠಗಳನ್ನು ಮಾಡುತ್ತಿದ್ದರು. ಲೋಹಿಯಾ ಅವರ 'ಇತಿಹಾಸ ಚಕ್ರ'ದ ಕಲ್ಪನೆ ನನ್ನನ್ನು ಯೋಚನೆಗೆ ಹಚ್ಚಿತು. ನಾನು ಹಿಂದೆ ಕಲಿತ ಮಾರ್ಕ್ಸ್‌ವಾದಿ ಪಾಠಗಳನ್ನೂ, ಇದನ್ನೂ ತೂಗಿ ನೋಡತೊಡಗಿದೆ. ಲೋಹಿಯಾ ವಸ್ತುಸ್ಥಿತಿಗೆ ಹತ್ತಿರವಾಗಿದ್ದರು. ರಷ್ಯಾದಲ್ಲಿ ಲೆನಿನ್ ಮಾರ್ಗದರ್ಶನದಲ್ಲಿ ಕಮ್ಯೂನಿಸಂ ಹೊಸ ರೂಪ ಪಡೆದಂತೆ, ಇಂಡಿಯಾದ ಸಂದರ್ಭಕ್ಕೆ ತಕ್ಕಂತೆ ಕಮ್ಯೂನಿಸಂ ಲೋಹಿಯಾ ಚಿಂತನೆಯಲ್ಲಿ ಹೊಸ ರೂಪ ಪಡೆದಿದೆ. ನಿಜವಾದ ಅರ್ಥದಲ್ಲಿ ಲೋಹಿಯಾ ಒಬ್ಬರೇ ಇಂಡಿಯಾದ ಕಮ್ಯೂನಿಸ್ಟ್ ನಾಯಕ ಎಂಬ ಭಾವ ಅವರನ್ನು ಓದುತ್ತಾ ಹೋದಂತೆಲ್ಲ ನನ್ನಲ್ಲಿ ಮೂಡತೊಡಗಿತು.

ಮಾ: ಕಮ್ಯೂನಿಸ್ಟ್ ಚಳುವಳಿ ಇಲ್ಲಿ ಯಶಸ್ವಿಯಾಗುವುದಿಲ್ಲವೇ?

ಇಂ: ಇದು ಈ ಚಳುವಳಿ ಮುಂದೆ ಕಲಿಯಬಹುದಾದ ಪಾಠಗಳನ್ನು ಅವಲಂಬಿಸಿದೆ. ಜಾತಿಯ ವಾಸ್ತವವನ್ನು, ಅಧಿಕಾರ ವಿಕೇಂದ್ರೀಕರಣದ ಅಗತ್ಯವನ್ನು, ಸೈದ್ಧಾಂತಿಕ ರಾಷ್ಟ್ರೀಯತೆಯನ್ನು ಒಪ್ಪಿಕೊಳ್ಳದ ಹೊರತು, ಕಮ್ಯೂನಿಸ್ಟ್ ಚಳುವಳಿ ಈ ದೇಶದಲ್ಲಿ ಯಶಸ್ವಿಯಾಗಲಾರದು. ಈ ಚಳುವಳಿಗೆ ಮೂಲಭೂತ ಬದಲಾವಣೆಗಳಲ್ಲಿ ನಂಬಿಕೆ ಇದ್ದರೆ, ಅದು ತಾನೆದುರಿಸುವ ಸನ್ನಿವೇಶಗಳಿಂದ ಪಾಠ ಕಲಿಯುತ್ತಾ ಹೋಗುತ್ತದೆ. ಆಗ ಸಹಜವಾಗಿ ಅದು ಲೋಹಿಯಾ ರಾಜಕೀಯ ಪ್ರಣಾಳಿಕೆಯ ಹತ್ತಿರ ಬರತೊಡಗುತ್ತದೆ. ಆದರೆ ಈ ಚಳುವಳಿಯ ನಾಯಕರು ಅದಕ್ಕೆ ಅವಕಾಶ ಕೊಡುವರಾ ಎಂಬುದು ಮುಖ್ಯ ಪ್ರಶ್ನೆ. ಆದರೆ ಆ ನಾಯಕರೆಲ್ಲಾ ಸಿದ್ಧಾಂತಗಳಲ್ಲಿ ಮುಳುಗಿ ಹೋಗಿದ್ದಾರೆ.

(ಸಂದರ್ಶನ: ಡಿಎಸ್ಸೆನ್)

(ನವ ಮಾನವ ಮಾಸಿಕದ ಆಗಸ್ಟ್ – ೨೦೧೨ರ ಸಂಚಿಕೆಯಲ್ಲಿ ಪ್ರಕಟ)

✧✧✧

ಇದೇ ಲೇಖಕರ ಇತರ ಕೃತಿಗಳು:

ಗಮನ (ಸಾಹಿತ್ಯ ವಿಮರ್ಶೆ– ವಿಚಾರ)

ಅನೇಕ (ಸಾಹಿತ್ಯ ವಿಮರ್ಶೆ– ವಿಚಾರ)

ಕುವೆಂಪು ಸಾಹಿತ್ಯ ದರ್ಶನ (ಕುವೆಂಪು ಸಾಹಿತ್ಯ ವಿಮರ್ಶೆ)

ಈ ಭೂಮಿಯಿಂದ ಆ ಆಕಾಶದವರೆಗೆ (ಸಾಹಿತ್ಯ ವಿಮರ್ಶೆ– ವಿಚಾರ)

ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ (ವ್ಯಕ್ತಿ ಹಾಗೂ ಸಾಹಿತ್ಯ ಪರಿಚಯ)

ಒಂದು ಅಪೂರ್ಣ ಕ್ರಾಂತಿಯ ಕಥೆ (ಜಯಪ್ರಕಾಶ ನಾರಾಯಣರ ಬದುಕು ಮತ್ತು ಹೋರಾಟ)

ಲೋಹಿಯಾ ಸಮಾಜವಾದ ದರ್ಶನ (ಸಮಾಜವಾದ ಪರಿಚಯ, ವಿಶ್ಲೇಷಣೆ)

ಮರಳಿ ಬರಲಿದೆ ಸಮಾಜವಾದ! (ಸಮಾಜವಾದಿ ಚಿಂತನೆಗಳು)

ಬೇರು ಬಿಳಲು (ಸಾಹಿತ್ಯ ಮತ್ತು ಸಮಾಜವಾದಿ ಸಂಕಥನಗಳು– ೧)

ಇದು ಭಾರತ! ಇದು ಭಾರತ!! (ಸಮಾಜವಾದಿ ಸಂಕಥನಗಳು– ೨)

ವಸಿಷ್ಠರು ಮತ್ತು ವಾಲ್ಮೀಕಿಯರು (ಸಮಾಜವಾದಿ ಸಂಕಥಣಗಳು– ೩)

ಇಲ್ಲಿ ಯಾವುದೂ ಅಮುಖ್ಯವಲ್ಲ (ಸಾಹಿತ್ಯ ಮತ್ತು ಸಮಾಜವಾದಿ ಸಂಕಥನಗಳು– ೪)

ಕನ್ನಡ– ಕರ್ನಾಟಕ: ಸಂಕಥನಗಳು (ಕನ್ನಡ ನಾಡು ನುಡಿ ಚಿಂತನೆಗಳು)

ರೈತ ಭಾರತ: ಅವಸಾನದ ಅಂಚಿನಲ್ಲಿ (ರೈತರ ಆತ್ಮಹತ್ಯೆ ವಿಶ್ಲೇಷಣೆ)

ಒಂದನೇ ತರಗತಿಯಿಂದ ಇಂಗ್ಲಿಷ್ ಏಕೆ ಬೇಡ (ಭಾಷಾ ನೀತಿ ಜಿಜ್ಞಾಸೆ)

ಲೋಹಿಯಾ ಕೈಪಿಡಿ, ಲೋಹಿಯಾ ವಾಣಿ, ಜೆಪಿ ಕೈಪಿಡಿ

ಸಂಪಾದನೆ

ಲೋಹಿಯಾ: ವ್ಯಕ್ತಿ– ವಿಚಾರ– ವಿಮರ್ಶೆ

ಕುವೆಂಪು: ಒಂದು ಪುನರನ್ವೇಷಣೆ (ಶತಮಾನೋತ್ಸವ ಸಂಪುಟ)

ಒಲವು (ಅಂತರ್ಜಾತಿ ವಿವಾಹಿತರ ಮೊದಲ ಸಮಾವೇಶದ ಸ್ಮರಣ ಸಂಪುಟ)

ಆ ಗಣರಾಜ್ಯ ಈ ಕರ್ನಾಟಕ (ಸುವರ್ಣ ಕರ್ನಾಟಕ ಸಂಪುಟ)

ಸಹ ಸಂಪಾದನೆ:

ಸಾಹಿತ್ಯ ಸಂವಾದ (ಸಾಹಿತ್ಯ ದ್ವೈಮಾಸಿಕ)

ಕಾಡಿನ ಹುಡುಗ ಕೃಷ್ಣ (ಶ್ರೀಕೃಷ್ಣ ಆಲನಹಳ್ಳಿ ನೆನಪಿನ ಸಂಪುಟ)

ಮಾಸ್ತಿ ಸಾಹಿತ್ಯ: ಸಮಗ್ರ ದರ್ಶನ (ಮಾಸ್ತಿ ಶತಮಾನೋತ್ಸವ ಸಂಪುಟ)

ಹಣತೆ (ಡಾ. ಜಿ. ಎಸ್ ಶಿವರುದ್ರಪ್ಪ ಅಭಿನಂದನ ಗ್ರಂಥ)

ಅನುವಾದ

ಜೆಪಿ ಸೆರೆಮನೆ ದಿನಚರಿ

ಗೀತಾಂಜಲಿ ಪುಸ್ತಕ ಪ್ರಕಾಶನ

ಕಂದಾಯ ಭವನ, ನೂರಡಿ ರಸ್ತೆ, ರಾಜೇಂದ್ರನಗರ, ಶಿವಮೊಗ್ಗ - ೫೭೭ ೨೦೧

ಮತ್ತು

ದೊಣೆಹಳ್ಳಿ, ಜಗಳೂರು ತಾಲ್ಲೂಕು, ದಾವಣಗೆರೆ ಜಿಲ್ಲೆ -೫೭೭೫೨೮.

ಮೊ : ೯೪೪೯೮೮೭೩೯೦

---

* ಗುರುದೇವರ ಕಥೆಗಳು (ಮಕ್ಕಳಿಗಾಗಿ ಕಥಾ ಸಂಕಲನ)/ ಡಾ. ನಾ.ಡಿಸೋಜ ೩೦/-
* ಹಾ! ಸವಿಗನ್ನಡ (ಚಿಂತನ ಬರಹಗಳು) ಡಾ. ನಾ.ಡಿಸೋಜ ೩೦/-
* ವಿವೇಕ ವಿವೇಚನೆ (ಚಿಂತನ ಬರಹಗಳು) ಡಾ. ನಾ. ಡಿಸೋಜ ೪೫/-
* ನುಡಿಗನ್ನಡಿ (ಚಿಂತನ ಬರಹಗಳು), ಸಿ.ಟಿ. ಶೈಲಾ ಜಯಕುಮಾರ ೭೫/-
* ನಿಮ್ಮ ಕನಸಿನ ರಹಸ್ಯ (ವೈಜ್ಞಾನಿಕ ದೃಷ್ಟಿಕೋನದ ಬರಹಗಳು) ತಡಸೂರು ಉಮೇಶ್ ೭೫/-
* ನಾವು ಸಂತೋಷವಾಗಿರುವುದು ಹೇಗೆ ? (ವ್ಯಕ್ತಿತ್ವ ವಿಕಾಸದ ಲೇಖನಗಳು) ಎನ್.ಬಿ. ವೀರನಗೌಡ ೧೨೦/-
* ಎಷ್ಟು ಬಣ್ಣದ ಇರುಳು (ಕವನ ಸಂಕಲನ)/ ಮುದ್ದು ತೀರ್ಥಹಳ್ಳಿ ೧೦೦/-
* ಒಂದು ಚಂದ್ರನ ತುಂಡು (ಲಘು ಬರಹಗಳು)/ ಮುದ್ದು ತೀರ್ಥಹಳ್ಳಿ ೯೦/-
* ಮಿಲಿನಿಯಮ್ ಕನ್ನಡ ಸಾಮಾನ್ಯ ಅಧ್ಯಯನ ಕೋಶ/ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ೨೦೦/-
* ಗ್ರಹಿಕೆ (ಮಹಿಳಾ ದೃಷ್ಟಿಕೋನದ ಲೇಖನಗಳು)/ ಡಾ. ಈ. ಯರ್ರೀಸ್ವಾಮಿ ೧೫೦/-
* ಲಿಂಗ ವ್ಯವಸ್ಥೆ ಸಂಕಥನ/ಪ್ರೇಮ ಅಪಚಂದ (ಮಹಿಳಾ ದೃಷ್ಟಿಕೋನದ ಲೇಖನಗಳು) ೧೦೦/-
* ಮಹಿಳೆ ಮತ್ತು ಜಾತಿಶ್ರೇಣೀಕರಣ : ಅಂಬೇಡ್ಕರ್ ದೃಷ್ಟಿಕೋನ/ಡಾ. ಈ. ಯರ್ರೀಸ್ವಾಮಿ ೧೫೦/-
* ಸೊಗಡು (ಸಂಸ್ಕೃತಿ ಚಿಂತನೆ)/ ಡಾ. ಈ. ಯರ್ರೀಸ್ವಾಮಿ ೧೦೦/-
* ಹಾಸ್ಯಲಹರಿ (ಹಾಸ್ಯ) ೩೦/-
* ದೇವರಾಜ ಅರಸು ಮತ್ತು ಕರ್ನಾಟಕದ ರಾಜಕಾರಣ (ವ್ಯಕ್ತಿ ಚಿತ್ರಣ) ಡಾ. ಹಣಮಂತರಾಯ ದೊಡ್ಡಮನಿ ೧೯೦/-
* ಕುಮಾರರಾಮ (ವ್ಯಕ್ತಿ ಚಿತ್ರಣ) ಷಣ್ಮುಖಪ್ಪ ೮೦/-
* ಹಿರಿಯರ ಹಾದಿ/ (ಅಂಕಣ ಬರಹಗಳು) ಪ್ರೊ. ಎಂ.ಎನ್. ಸುಂದರರಾಜ್ ೧೪೦/-
* ನೀಲನಕ್ಷೆ : ಕನ್ನಡ ವಿಮರ್ಶೆ : ಇಟ್ಟ ಹೆಜ್ಜೆ ತೊಟ್ಟ ರೂಪ : ಡಾ. ಕೇಶವಶರ್ಮ ಕೆ. ೨೮೦/-
* ಕಂಡದ್ದು - ಕಾಡಿದ್ದು: ಸಮಾಜವಾದಿ ಸಂಕಥನಗಳು -೫/ಡಿ.ಎಸ್. ನಾಗಭೂಷಣ ೨೪೦/-
* ಕುವೆಂಪು ಸಾಹಿತ್ಯದರ್ಶನ / ಡಿ.ಎಸ್. ನಾಗಭೂಷಣ ೯೫/-
* ಕುವೆಂಪು ಪುನರಾನ್ವೇಷಣೆ/ ಡಿ.ಎಸ್. ನಾಗಭೂಷಣ ೨೪೦/-
* ಲೋಹಿಯಾ ಕೈಪಿಡಿ/ ಡಿ.ಎಸ್. ನಾಗಭೂಷಣ ೨೫/-
* ಲೋಹಿಯಾ ವಾಣಿ/ ಡಿ.ಎಸ್. ನಾಗಭೂಷಣ ೨೫/-
* ಜೆ.ಪಿ. ಕೈಪಿಡಿ/ ಡಿ.ಎಸ್. ನಾಗಭೂಷಣ ೨೫/-
* ಭಾರತೀಯ ಷೋಡಶ ಸಂಸ್ಕಾರಗಳು (ವೈಜ್ಞಾನಿಕ ದೃಷ್ಟಿಕೋನ) ಡಾ. ಶ್ರೀ ಷ.ಬ್ರ. ಮರುಳಸಿದ್ಧ ಪಂಡಿತಾರಾಧ್ಯ ಶಿವಾಚಾರ್ಯರು, ವೀರಾಪುರ ೧೦೦/-
* ನೂರೊಂದು ಮುತ್ತು ರತ್ನಗಳು (ವ್ಯಕ್ತಿ ಚಿತ್ರಣಗಳು) ಜಿ.ಬಿ. ರುದ್ರಪ್ಪ ೧೫೦/-
* ಶಾಂತಿನಾಥ ದೇಸಾಯಿಯವರ ಸಾಹಿತ್ಯದಲ್ಲಿ ಆಧುನಿಕ ಮಹಿಳಾ ಪ್ರಜ್ಞೆ/ರೇಖಾ ಬಿ. ೧೪೦/-
* ಕಾಯಕಯೋಗಿ ಸರ್.ಎಂ.ವಿಶ್ವೇಶ್ವರಯ್ಯ /ಡಾ. ಪ್ರದೀಪ್‌ಕುಮಾರ್ ಹೆಬ್ರಿ ೧೦೦/-
* ವಚನಸಂಪದ/ಬಸವಣ್ಣನವರ ವಚನಗಳು/ಜಿ.ಬಿ.ಟಿ.ಗೀತಾವಿಶ್ವನಾಥ್ ೩೦/-
* ಗ್ರೀನ್ ರೂಮಿನಲ್ಲಿ/ಕವನಸಂಕಲನ/ದೀಪಿ ಭದ್ರಾವತಿ ೫೦/-
* ಮೀನಂಬುಳ/ವಿಮರ್ಶಾ ಲೇಖನಗಳು/ಕೆ.ಆರ್.ಕೃಷ್ಣಯ್ಯ ೧೫೦/-
* ಪ್ರೇಮಜಾಲ/ಕಾದಂಬರಿ/ಬಿ.ಎಲ್.ವೇಣು ೧೧೦/-
* ಪುಟ್ಟಜ್ಜಿ ಪುಟ್ಟಜ್ಜಿ ಕತೆ ಹೇಳು/ ಮಕ್ಕಳ ಕಥೆಗಳು/ಡಾ.ನಾ.ಡಿಸೋಜ ೪೫/-
* ಮಲೆನಾಡಿಗ/ಡಾ.ನಾ.ಡಿ.ಸೋಜಅಭಿನಂದನಾ ಗ್ರಂಥ ೨೫೦/-
* ಹಾರುವ ಹಕ್ಕಿಗೆ ಹಸಿರೆಲೆ ತೋರಣ/ಸಮಗ್ರ ಮಕ್ಕಳ ಕಿರು ಕಾದಂಬರಿಗಳು/ ಡಾ.ನಾ.ಡಿಸೋಜ ೬೦೦/-
* ಮಧುರಾಲಾಪ/ಶರ್ಮ/ಗೀತಗೋವಿಂದ ಅನುವಾದ ೫೦/-
* ಕನ್ನಡ ವ್ಯಾಕರಣ ಸಿಂಚನ/ ಶಿವಲಿಂಗೇಗೌಡ ೧೨೦/-
* ಮಹಿಳೆ, ಮಾಧ್ಯಮ, ಮಾರುಕಟ್ಟೆ/ಮಹಿಳಾ ವಿಮರ್ಶಾ ಲೇಖನಗಳು/ ವಿಜಯ್‌ಕುಮಾರ್ ಹೆಚ್. ೫೦/-
* ಆರೋಗ್ಯ ಸಂರಕ್ಷಣ (ಆಯುರ್ವೇದ ಚಿಕಿತ್ಸಾ ಮಾರ್ಗದರ್ಶಿ) ಡಾ॥ ಚೇತನ್‌ಕುಮಾರ್ ೧೨೦/-



ಡಿ.ಎಸ್. ನಾಗಭೂಷಣ ನಮ್ಮ ನಡುವೆ ಕ್ರಿಯಾಶೀಲರಾಗಿರುವ argumentative Indian! ಆ ಮಾತಿಗೆ ಈಗ ಮತ್ತೊಂದು ಪುರಾವೆ- ಪ್ರಸ್ತುತ 'ಕಂಡದ್ದು ಕಾಡಿದ್ದು'

ನಾಡಿನ ಎಲ್ಲ ಪ್ರಮುಖ ವಾಗ್ವಾದಗಳಿಗೆ ಸದಾ ಎಚ್ಚೆತ್ತಿರುವ ನಾಗಭೂಷಣ ಕಾಲ ಕಾಲಕ್ಕೆ ಸಮಾಜ, ರಾಜಕೀಯ, ಸಂಸ್ಕೃತಿ, ಸಾಹಿತ್ಯಗಳ ಮುಖ್ಯ ಬಿಕ್ಕಟ್ಟು, ವಾಗ್ವಾದಗಳಿಗೆ ಪ್ರತಿಕ್ರಿಯಿಸುತ್ತ ಖಚಿತವಾದ ನಿರ್ಣಾಯಕ ನಿಲುವುಗಳನ್ನು ಮಂಡಿಸುತ್ತಾ ಬಂದಿದ್ದಾರೆ.

ತಮ್ಮ 'ನಿತ್ಯ ಜೀವಂತ'–ಅವರದೇ ಮಾತಿನಲ್ಲಿ–ನಿರಂತರ ಪುನರ್ರೂಪಿತಗೊಳ್ಳುವ–ಲೋಹಿಯಾ ಸಮಾಜವಾದಿ 'ಅಂಜನ'ದಂಥ ನೋಟ ಕ್ರಮದಿಂದಾಗಿ ಡಿಎಸ್ಸೆನ್ ಇತರರು ಕಾಣದ್ದನ್ನು ಕಾಣಬಲ್ಲರು. ಉದಾಹರಣೆಗೆ–ಅವರು ತೇಜಸ್ವಿ ಸಾಹಿತ್ಯ ಮೀಮಾಂಸೆ ಕುರಿತು ಆಡುವ ಮಾತುಗಳು('೨೦೧೦–೧೧ರ ದಶಕದ ಸಾಹಿತ್ಯ ವಿಮರ್ಶೆ') ಅಥವಾ 'ದೇಶಕಾಲ' ಕುರಿತ ಸುದೀರ್ಘ ಚರ್ಚೆಯಲ್ಲಿ ಕಾಣುವ ಕಠೋರ ನಿಷ್ಪಕ್ಷಪಾತದ ಸಮಗ್ರ ನಿಲುವು...

ಡಿಎಸ್ಸೆನ್ ಯಾರನ್ನೊ ಮೆಚ್ಚಿಸಲೋ ಅಥವಾ ಬಹು ಜನಾಭಿಪ್ರಾಯದ ನೆರಳಿನಲ್ಲಿ ತಮ್ಮ ಚಿಂತನೆ ರೂಪಿಸಿಕೊಳ್ಳುವವರಲ್ಲ ಎಂಬುದಕ್ಕೆ ಇಲ್ಲಿನ ಬಹುಪಾಲು ಲೇಖನಗಳು ಸಾಕ್ಷಿಯಾಗಿವೆ. ನಿದರ್ಶನವಾಗಿ, ಅಣ್ಣಾ ಹಜಾರೆ ಆಂದೋಲನ ಕುರಿತ ಬರಹಗಳು, ದಲಿತ ರೈತ ಚಳುವಳಗಳನ್ನು ಕುರಿತ ಚಿಂತನೆ- ಮುಂತಾದ ಲೇಖನಗಳನ್ನು ಗಮನಿಸಬಹುದು.

ಇಷ್ಟು ಹೇಳಿಯೂ ನಾಗಭೂಷಣರನ್ನು ಬಣ್ಣಿಸದಂತಾಗಲಿಲ್ಲ. ಯಾಕೆಂದರೆ ಅವರದು ಕತ್ತಿಯಂಚಿನ ಸಮತೋಲನದ, ನೋಟ–ಗ್ರಹಿಕೆಗಳ ಸಮಗ್ರತೆಯ ದಿಗ್ದರ್ಶಕ ಚಿಂತನೆ. ಈ ಕೃತಿಯೂ ಅವರ ಇಂತಹ ಚಿಂತನೆಗೊಂದು ಮಾದರಿ.

■ ಎನ್.ಎಸ್. ಶಂಕರ್

ಗೀತಾಂಜಲಿ ಪುಸ್ತಕ ಪ್ರಕಾಶನ
ಕಂದಾಯ ಭವನ, ೧೦೦ ಅಡಿ ರಸ್ತೆ,
ರಾಜೇಂದ್ರನಗರ, ಶಿವಮೊಗ್ಗ
ದೂ. ೯೪೪೯೮ ೮೬೩೯೦
gbtmohan@gmail.com

ISBN: 978-93-81876-27-5
9 789381 876275

₹220/-